ಆಯ್ದ ಸಾಹಿತ್ಯ ಪಠ್ಯಗಳ ಪಾತ್ರ ಕೇಂದ್ರಿತ ಮನೋವಿಶ್ಲೇಷಣಾತ್ಮಕ ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಕಲ್ಪನ ಎಚ್.ಕೆ.

ಮಾರ್ಗದರ್ಶಕರು

ಡಾ. ಬಿ.ಎಂ. ಪುಟ್ಟಯ್ಯ

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೮

ಆಯ್ದ ಸಾಹಿತ್ಯ ಪಠ್ಯಗಳ ಪಾತ್ರ ಕೇಂದ್ರಿತ ಮನೋವಿಶ್ಲೇಷಣಾತ್ಮಕ ಅಧ್ಯಯನ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧಕರು
ಕಲ್ಪನ ಎಚ್.ಕೆ.

ಮಾರ್ಗದರ್ಶಕರು
ಡಾ. ಬಿ.ಎಂ. ಪುಟ್ಟಯ್ಯ
ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೮

ಮಾರ್ಗದರ್ಶಕರ ದೃಢೀಕರಣ ಪತ್ರ

ಶ್ರೀಮತಿ ಕಲ್ಪನ ಎಚ್.ಕೆ. ಅವರು **ಆಯ್ದ ಸಾಹಿತ್ಯ ಪಠ್ಯಗಳ ಪಾತ್ರಕೇಂದ್ರಿತ ಮನೋವಿಶ್ಲೇಷಣಾತ್ಮಕ ಅಧ್ಯಯನ** ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಅವರ ಸ್ವಂತ ಪರಿಶ್ರಮದ ಫಲವಾಗಿದ್ದು ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 08-02-2018
ಸ್ಥಳ : ವಿದ್ಯಾರಣ್ಯ

ಡಾ. ಬಿ.ಎಂ. ಪುಟ್ಟಯ್ಯ
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಶೋಧಕರ ಘೋಷಣಾ ಪತ್ರ

ಆಯ್ದ ಸಾಹಿತ್ಯ ಪಠ್ಯಗಳ ಪಾತ್ರಕೇಂದ್ರಿತ ಮನೋವಿಶ್ಲೇಷಣಾತ್ಮಕ ಅಧ್ಯಯನ ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ **ಡಾ. ಬಿ.ಎಂ. ಪುಟ್ಟಯ್ಯ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ನನ್ನ ಸ್ವಂತ ಪರಿಶ್ರಮದ ಫಲವಾಗಿದ್ದು ಈ ಮೊದಲು ಇದನ್ನು ಇನ್ನಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Kalpana

ದಿನಾಂಕ : 8.02.18.

ಸ್ಥಳ : ವಿದ್ಯಾರಣ್ಯ

ಕಲ್ಪನ ಎಚ್.ಕೆ.
ಸಂಶೋಧಕ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ : ಒಂದು

ಅಧ್ಯಯನ ಉದ್ದೇಶ, ವ್ಯಾಪ್ತಿ ಮತ್ತು ವೈಧಾನಿಕತೆ

ಪ್ರಸ್ತಾವನೆ

ಕನ್ನಡ ಸಾಹಿತ್ಯವನ್ನು ಹಲವು ಉದ್ದೇಶಗಳಿಗೆ, ಹಲವು ಕಾರಣಗಳಿಗೆ ವಿವಿಧ ಜ್ಞಾನಶಿಸ್ತುಗಳ ಮೂಲಕ ಅಧ್ಯಯನ ಮಾಡಲಾಗಿದೆ. ಔಪಚಾರಿಕ ಮತ್ತು ಅನೌಪಚಾರಿಕವಾಗಿ ವಿವಿಧ ದೃಷ್ಟಿಕೋನಗಳ ಮೂಲಕ ಅಧ್ಯಯನ ಮಾಡುತ್ತಾ ಬರಲಾಗಿದೆ. ಸಾಹಿತ್ಯವನ್ನು ವಿವಿಧ ಸಾಹಿತ್ಯಕ ದೃಷ್ಟಿಕೋನಗಳ ಮೂಲಕ ಅಧ್ಯಯನ ಮಾಡಲಾಗಿದೆ. ಜೊತೆಗೆ ಸಮಾಜಶಾಸ್ತ್ರೀಯ ನೆಲೆಗಳಲ್ಲೂ ಅಧ್ಯಯನ ಮಾಡಲಾಗಿದೆ. ಆಯಾ ಕಾಲದ ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕ ಒತ್ತಡಗಳು ಮತ್ತು ಅಧ್ಯಯನಕಾರರ ಆಸಕ್ತಿ, ಹಿತಾಸಕ್ತಿ, ಆಯ್ಕೆ ಹಾಗೂ ಧೋರಣೆಗಳು ಇಂತಹ ವಿಭಿನ್ನ ಬಗೆಯ ಅಧ್ಯಯನಗಳನ್ನು ರೂಪಿಸಿವೆ, ರೂಪಿಸುತ್ತಿವೆ. ಶೈಕ್ಷಣಿಕ ತರಗತಿಗಳಲ್ಲಿ ಸಾಹಿತ್ಯದ ಬಗೆಗೆ ಒಂದು ಬಗೆಯ ಪಾಠಪ್ರವಚನ ನಡೆಯುತ್ತದೆ. ಸಮೂಹ ಮಾಧ್ಯಮಗಳು ಮತ್ತೊಂದು ಬಗೆಯಲ್ಲಿ ಸಾಹಿತ್ಯವನ್ನು ಪರಿಭಾವಿಸುತ್ತವೆ. ಸಾಹಿತ್ಯವನ್ನು ರಚನೆ ಮಾಡಿದ ಬರಹಗಾರರು, ಬರಹಗಾರರ ಗುಂಪುಗಳು, ಹೋರಾಟಗಾರರು ಮತ್ತೊಂದು ಬಗೆಯಲ್ಲಿ ಸಾಹಿತ್ಯವನ್ನು ಪರಿಭಾವಿಸುತ್ತವೆ. ಸಾಹಿತ್ಯವನ್ನು ಸಾಮೂಹಿಕವಾಗಿ ಸೃಷ್ಟಿ ಮಾಡುವ ಹಲವು ಸಮುದಾಯಗಳು ಬೇರೊಂದು ಬಗೆಯಲ್ಲಿ ಸಾಹಿತ್ಯದೊಂದಿಗೆ ಬೆರೆಯುತ್ತವೆ. ಶೈಕ್ಷಣಿಕ ತರಗತಿಗಳಲ್ಲಿ ಸಾಹಿತ್ಯದ ಸಾರಾಂಶ ಮತ್ತು ಕಥನದ ಮುಖ್ಯಾಂಶಗಳನ್ನು ಹೇಳಿಕೊಡಲಾಗುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಮತ್ತು ಔಪಚಾರಿಕ ಪರೀಕ್ಷೆಗಳಲ್ಲಿ ಸಾಹಿತ್ಯವನ್ನು ಸಾಮಾನ್ಯ ಮಾಹಿತಿಗಳ ಮಟ್ಟಕ್ಕೆ ಇಳಿಸಲಾಗಿದೆ.

ಸಾಹಿತ್ಯವನ್ನು ಔಪಚಾರಿಕವಾಗಿ ವಿಮರ್ಶೆ ಮಾಡುವವರು, ಅಧ್ಯಯನ ಹಾಗೂ ಸಂಶೋಧನೆ ಮಾಡುವವರು ಸಾಹಿತ್ಯದ ಅರ್ಥ, ವಿನ್ಯಾಸ, ಆಶಯ, ರೂಪ ಮುಂತಾದುವುಗಳನ್ನು ಆಧರಿಸಿ ಕೆಲಸ ಮಾಡುತ್ತಾರೆ. ಸಾಹಿತ್ಯವನ್ನು ಅಧ್ಯಯನ ಮಾಡುವುದರ ಮೂಲಕ ಕೆಲವರು ಇದರ

ಅರ್ಥದ ನೆಲೆಗಳನ್ನು ಶೋಧಿಸುವವರಿದ್ದಾರೆ. ಮತ್ತೆ ಕೆಲವರು ಮೊದಲೇ ತಮ್ಮ ಪೂರ್ವ ಅರ್ಥಗಳನ್ನು ಇಟ್ಟುಕೊಂಡು ಸಾಹಿತ್ಯವನ್ನು ಪ್ರವೇಶ ಮಾಡುವವರಿದ್ದಾರೆ. ಇದರ ಹಾಗೆಯೇ ಸೈದ್ಧಾಂತಿಕ ಪ್ರಧಾನ ಮತ್ತು ವ್ಯಾಖ್ಯಾನ ಪ್ರಧಾನ ಅಧ್ಯಯನಗಳೂ ನಡೆದಿವೆ. ಇಲ್ಲಿಯೂ ಕೂಡ ಕೆಲವರು ಮೊದಲೇ ತಮ್ಮ ಪೂರ್ವ ಸಿದ್ಧಾಂತಗಳನ್ನು ಇಟ್ಟುಕೊಂಡು ಸಾಹಿತ್ಯವನ್ನು ಪ್ರವೇಶ ಮಾಡುವವರಿದ್ದಾರೆ. ಮತ್ತೆ ಕೆಲವರು ಸಾಹಿತ್ಯವನ್ನು ಅಧ್ಯಯನ ಮಾಡುವುದರ ಮೂಲಕ ಹಲವು ಸಿದ್ಧಾಂತಗಳನ್ನು ಸಾಹಿತ್ಯ ಅಧ್ಯಯನದ ಮೂಲಕ ಸೃಜಿಸುವವರು ಇದ್ದಾರೆ. ಈ ವಿನ್ಯಾಸ ಏನೇ ಇದ್ದರೂ ಕನ್ನಡ ಸಾಹಿತ್ಯದ ಅಧ್ಯಯನವು ಹಲವು ಸಿದ್ಧಾಂತಗಳನ್ನು, ವಿವಿಧ ಜ್ಞಾನಶಿಸ್ತುಗಳನ್ನು ಕನ್ನಡದ ಅಕಾಡೆಮಿಕ್ ವಲಯಕ್ಕೆ ಪರಿಚಯಿಸಿದೆ. ಉಲ್ಲೇಖ ಮಾಡುವುದಾದರೆ, ಮಾರ್ಕ್ಸ್‌ವಾದ, ಸ್ತ್ರೀವಾದ ಮುಂತಾದ ಸಿದ್ಧಾಂತಗಳನ್ನು ಇದು ಪರಿಚಯಿಸಿದೆ. ಭಾಷಾಶಾಸ್ತ್ರ, ಮನಶಾಸ್ತ್ರ, ಕಲಾ ಮೀಮಾಂಸೆ ಮುಂತಾದುವನ್ನು ಇದು ಪರಿಚಯಿಸಿದೆ. ಹಾಗೆಯೇ ರಾಷ್ಟ್ರೀಯತೆ, ದೇಸಿಯತೆ, ಸ್ಥಳೀಯತೆ, ಗ್ರಾಮ್ಯ, ಜನಪದ, ದಲಿತ ಪ್ರಶ್ನೆ, ಮಹಿಳಾ ಪ್ರಶ್ನೆ, ಜಾತಿಯ ಪ್ರಶ್ನೆ, ಯಜಮಾನಿಕೆ, ಪ್ರತಿರೋಧ, ಪ್ರತಿಭಟನೆ ಇವೇ ಮುಂತಾದ ಹತ್ತು ಹಲವು ಪರಿಕಲ್ಪನೆಗಳನ್ನು ಇದು ಪರಿಚಯಿಸಿದೆ.

ಸಾಹಿತ್ಯ ಕೃತಿಗಳನ್ನು ಬೇರೆ ಬೇರೆ ಮಾಧ್ಯಮಗಳಿಗೆ ಪಲ್ಲಟ ಮಾಡಲಾಗುತ್ತದೆ. ಅಂದರೆ ಒಂದು ಕವಿತೆಯನ್ನು ಓದುವುದು ಒಂದು ಬಗೆ; ಅದನ್ನು ಸಂಗೀತದೊಂದಿಗೆ ಹಾಡುವುದು ಮತ್ತೊಂದು ಬಗೆ; ಅದೇ ಕವಿತೆಯನ್ನು ಆಧರಿಸಿ ಚಿತ್ರ ಬರೆಯುವುದು ಮಗದೊಂದು ಬಗೆ; ಮತ್ತೆ ಅದೇ ಕವಿತೆಯನ್ನು ಆಧರಿಸಿ ನೃತ್ಯ ಮಾಡುವುದು ಇನ್ನೊಂದು ಬಗೆ. ಹೀಗೆ ಸಾಹಿತ್ಯದ ಪ್ರತಿಯೊಂದು ಪ್ರಕಾರಗಳನ್ನೂ ಕೂಡ ಬೇರೆ ಬೇರೆ ಮಾಧ್ಯಮಗಳಿಗೆ ಪಲ್ಲಟ ಮಾಡಲಾಗುತ್ತದೆ. ಕವಿತೆಯು ಹಾಡಾಗುತ್ತದೆ, ನೃತ್ಯವಾಗುತ್ತದೆ. ಒಂದು ಕಥೆ ಚಿತ್ರವಾಗುತ್ತದೆ, ನಾಟಕ ಆಗುತ್ತದೆ. ಸಿನಿಮಾ ಆಗುತ್ತದೆ. ಹೀಗೆ ಇದರ ಪಲ್ಲಟ, ಪರಿವರ್ತನೆ ಮತ್ತು ಬೆಳವಣಿಗೆ ನಿರಂತರವಾಗಿ ನಡೆಯುತ್ತದೆ. ಸಾಹಿತ್ಯವನ್ನು ಬದಲು ಮಾಡುವ ಈ ಕೆಲಸವನ್ನು ಅಧ್ಯಯನ ಎಂದು ಕರೆಯಲಾಗದಿದ್ದರೂ, ಸಾಹಿತ್ಯವನ್ನು ಅಧ್ಯಯನ ಮಾಡಲು ಬೇಕಾಗುವ ಸೂಕ್ಷ್ಮಗಳು ಇಲ್ಲಿಯೂ ಕೂಡ ಬೇಕಾಗುತ್ತವೆ. ಅಂದರೆ ಒಂದು ಕಡೆ ಸಾಹಿತ್ಯದ ಅಧ್ಯಯನ ಮತ್ತೊಂದು ಕಡೆ ಸಾಹಿತ್ಯದ ಪಲ್ಲಟ. ಇವನ್ನು ಭಾಷಿಕ ಸಂಸ್ಕೃತಿಯು ತನ್ನ ಅಗತ್ಯಗಳಿಗೆ ತಕ್ಕಂತೆ ನಿರಂತರವಾಗಿ ಮಾಡುತ್ತಾ ಬರುತ್ತಿದೆ.

ಸಾಹಿತ್ಯ ಕೃತಿಗಳು ಅಧ್ಯಯನಕ್ಕೆ ವಿಸ್ತೃತವಾಗಿ ತೆರೆದುಕೊಳ್ಳುತ್ತವೆ. ಸಾಹಿತ್ಯ ಕೃತಿಗಳನ್ನು ಸಾಹಿತ್ಯಿಕ ದೃಷ್ಟಿಯಿಂದ ಅಧ್ಯಯನ ಮಾಡುವುದು ಒಂದು ಬಗೆಯಾದರೆ, ಇತರೆ ಜ್ಞಾನಶಿಸ್ತುಗಳ ಮೂಲಕ ಅಧ್ಯಯನ ಮಾಡುವುದು ಮತ್ತೊಂದು ಬಗೆ. ಸಾಹಿತ್ಯ ಕೃತಿಗಳಿಗೆ ವಿವಿಧ ಜ್ಞಾನಶಿಸ್ತುಗಳಿಗೆ

ತೆರೆದುಕೊಳ್ಳುವ ಸೃಜನಶೀಲ ಸಾಮರ್ಥ್ಯಗಳಿವೆ. ನಾವು ಯಾವ ಜ್ಞಾನಶಿಸ್ತಿನ ಮೂಲಕ ಅಧ್ಯಯನ ಮಾಡುತ್ತೇವೆ ಎಂಬುದು ಬಹಳ ಮುಖ್ಯ. ಇದನ್ನು ಆಧರಿಸಿ ಸಾಹಿತ್ಯ ಕೃತಿಗಳು ವಿಸ್ತರಿಸುತ್ತಾ, ವಿಕಾಸಗೊಳ್ಳುತ್ತಾ, ವಿವಿಧ ಆಯಾಮಗಳಲ್ಲಿ ಅನಾವರಣ ಆಗುತ್ತಾ, ಮರುರೂಪು ಪಡೆಯುತ್ತಾ ಹೋಗುತ್ತವೆ.

ಸಾಹಿತ್ಯವನ್ನು ಬೇರೆ ಬೇರೆ ಜ್ಞಾನಶಿಸ್ತುಗಳ ಮೂಲಕ ಅಧ್ಯಯನ ಮಾಡಲಾಗುತ್ತಿದೆ. ಅವುಗಳೆಂದರೆ, ಭಾಷಿಕ ನೆಲೆ, ಸಾಂಸ್ಕೃತಿಕ ನೆಲೆ, ಜಾನಪದೀಯ ನೆಲೆ, ಅನ್ಯಶಿಸ್ತೀಯ ನೆಲೆ, ಬಹುಶಿಸ್ತೀಯ ನೆಲೆ, ಮಹಿಳಾ ದೃಷ್ಟಿಕೋನ, ದಲಿತ ದೃಷ್ಟಿಕೋನ, ಪ್ರಾದೇಶಿಕ ನೆಲೆ, ಮಾರ್ಕ್ಸ್‌ವಾದ, ಸ್ತ್ರೀವಾದ, ಆಧುನಿಕೋತ್ತರವಾದ ಇತ್ಯಾದಿ. ಇದೇ ರೀತಿಯಲ್ಲಿ ಸಾಹಿತ್ಯವನ್ನು ಹಲವು ಪರಿಕಲ್ಪನೆಗಳ ಮೂಲಕ ಅಧ್ಯಯನ ಮಾಡುವುದಿದೆ. ರಾಷ್ಟ್ರೀಯತೆ, ಸ್ಥಳೀಯತೆ, ಪ್ರಾದೇಶಿಕತೆ, ಜನಾಂಗೀಯತೆ, ಸೌಹಾರ್ದತೆ, ಸಾಮರಸ್ಯ, ಸಾಮಾಜಿಕ ನ್ಯಾಯ, ಪ್ರಭುತ್ವ, ನೋವು, ಹಿಂಸೆ, ಗ್ರಾಮ್ಯ, ಆಧುನಿಕತೆ, ಯಜಮಾನಿಕೆ, ಪ್ರತಿಭಟನೆ, ಪ್ರತಿರೋಧ ಈ ಮುಂತಾದ ಪರಿಕಲ್ಪನೆಗಳನ್ನು ಆಧರಿಸಿ ಅಧ್ಯಯನ ಮಾಡುವುದಿದೆ.

ಸಾಹಿತ್ಯವನ್ನು ಮನಃಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ಮಾಡಬಹುದು. ಕನ್ನಡದಲ್ಲಿ ಈ ಬಗೆಯ ಬಿಡಿ ಅಧ್ಯಯನಗಳು ನಡೆದಿವೆ. ಸಾಹಿತ್ಯಕ್ಕೂ ಮತ್ತು ಮನಃಶಾಸ್ತ್ರಕ್ಕೂ ಇರುವ ಸಂಬಂಧಗಳು ಏನು ಎಂಬ ಬಗೆಗೆ ಚರ್ಚೆಗಳು ನಡೆದಿವೆ. ಸಾಹಿತಿಯು ತಾನು ಮನಃಶಾಸ್ತ್ರದ ಬಗ್ಗೆ ಅಧ್ಯಯನ ಮಾಡಿರುತ್ತಾನೆ; ಹಾಗಾಗಿ ಆತ ರಚನೆ ಮಾಡಿರುವ ಸಾಹಿತ್ಯ ಕೃತಿಗಳಲ್ಲಿ ಮನಃಶಾಸ್ತ್ರೀಯ ಅಂಶಗಳು ಸಹಜವಾಗಿ ಬರುತ್ತವೆ. ಆದ್ದರಿಂದ ಸಾಹಿತ್ಯ ಕೃತಿಯನ್ನು ಅಧ್ಯಯನ ಮಾಡಬೇಕಾದರೆ ಆ ಕೃತಿಕಾರ ಏನನ್ನು ಅಧ್ಯಯನ ಮಾಡಿದ್ದಾನೆ ಎಂಬುದನ್ನು ತಿಳಿದುಕೊಳ್ಳಬೇಕು ಎಂಬ ಚರ್ಚೆಗಳು ನಡೆದಿವೆ. ಆದರೆ ಇದು ಒಂದು ರೀತಿಯಲ್ಲಿ ನಿಜ; ಮತ್ತೊಂದು ರೀತಿಯಲ್ಲಿ ನಿಜ ಅಲ್ಲದೆಯೂ ಇರಬಹುದು. ಈ ಎರಡಕ್ಕೂ ಉದಾಹರಣೆ ಕೊಡಬಹುದು. ಆಧುನಿಕ ಕಾಲದ ಕೆಲವು ಸಾಹಿತಿಗಳು ಮನಃಶಾಸ್ತ್ರವನ್ನು ಅಧ್ಯಯನ ಮಾಡಿದವರಿದ್ದಾರೆ. ಹಾಗೆ ಅವರು ಅಧ್ಯಯನ ಮಾಡಿರುವ ಕಾರಣದಿಂದ ಅವರು ರಚನೆ ಮಾಡಿರುವ ಕೃತಿಗಳಲ್ಲಿ ಮನಃಶಾಸ್ತ್ರದ ವಿಚಾರಗಳು ಬರುತ್ತವೆ. ತ್ರಿವೇಣಿ ಮುಂತಾದವರನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು. ಇನ್ನು ಮನಃಶಾಸ್ತ್ರವನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡದಿದ್ದರೂ ಮನಃಶಾಸ್ತ್ರೀಯ ನೆಲೆಯ ಅಂಶಗಳನ್ನು ತಾವು ರಚನೆ ಮಾಡಿರುವ ಕೃತಿಗಳಲ್ಲಿ ತರುವುದಿದೆ. ಉದಾಹರಣೆಗೆ,

ಚಿಂತಿ ಮಾಡಲು ಬ್ಯಾಡ ಛಿ ಹುಚ್ಚಿ ಹಡೆದವ್ವ
ಚಿಂತ್ಯಾಗ ಕಾಯ ಇಳಿತಾದ – ಪಾಂಡವರು
ಅಂತವರಿಗೂ ಉಂಟು ವನವಾಸ

ನಮ್ಮ ಜನಪದ ನಿರಕ್ಷರಿಗಳು ರಚನೆ ಮಾಡಿರುವ ತ್ರಿಪದಿ ನಮ್ಮನ್ನು ದಂಗು ಬಡಿಸುವಂತಿದೆ. ಚಿಂತೆ ಮಾಡಿದರೆ ಕಾಯ, ದೇಹ ಸೊರಗುತ್ತದೆ ಎಂಬುದು ಅವರ ಸಾಮಾನ್ಯ ಅನುಭವ ಆಗಿರಬಹುದು. ಆದರೆ ಆಧುನಿಕ ಮನಃಶಾಸ್ತ್ರವು ಇದನ್ನು ಅಲ್ಲಗಳೆಯಲಾರದು. ಜನಪದರು ತಾವು ರಚನೆ ಮಾಡುವಾಗ ಮನಃಶಾಸ್ತ್ರವನ್ನು ಒಂದು ಶಾಸ್ತ್ರವಾಗಿ ಓದಿದ್ದರೊ, ಗೊತ್ತಿಲ್ಲ. ಆದರೆ ಅವರು ರಚನೆ ಮಾಡಿರುವ ಮೇಲಿನ ತ್ರಿಪದಿಯನ್ನು ಮನಃಶಾಸ್ತ್ರೀಯ ದೃಷ್ಟಿಯಿಂದ ಅಧ್ಯಯನ ಮಾಡಬಹುದು. ಇದೇ ರೀತಿಯಲ್ಲಿ ೧೩ನೇ ಶತಮಾನದ ಜನ್ನನು ರಚನೆ ಮಾಡಿರುವ "ಯಶೋಧರ ಚರಿತ" ಕೂಡ ಇದೇ ರೀತಿಯ ಅಧ್ಯಯನಕ್ಕೆ ಒಳಗಾಗಿದೆ. ಜನ್ನ ಆಧುನಿಕ ಪೂರ್ವದವನು. ಅವನು ಶಾಸ್ತ್ರೀಯವಾಗಿ ಮನಃಶಾಸ್ತ್ರವನ್ನು ಅಧ್ಯಯನ ಮಾಡಿದವನಲ್ಲ. ಆದರೆ ಅವನು ರಚನೆ ಮಾಡಿರುವ ಆ ಕೃತಿಯನ್ನು ಅಥವಾ ಅದರ ಪಾತ್ರಗಳನ್ನು ಆಧುನಿಕ ಮನಃಶಾಸ್ತ್ರದ ನೆರವಿನಿಂದ ಅಧ್ಯಯನ ಮಾಡಬಹುದು. ಯಶೋಧರ ಚರಿತ ಮಾತ್ರವಲ್ಲ; ಆಧುನಿಕ ಪೂರ್ವದ ಅನೇಕ ಮಹತ್ವದ ಕೃತಿಗಳನ್ನು, ಮಹತ್ವದ ಸನ್ನಿವೇಶಗಳನ್ನು ಹಾಗೂ ಮುಖ್ಯ ಪಾತ್ರಗಳನ್ನು ಈ ನೆಲೆಯಲ್ಲಿ ಅಧ್ಯಯನ ಮಾಡಬಹುದು. "ಪದ್ಮಪತ್ರದ ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ" ಎಂಬ ಮಹತ್ವದ ಸಾಲು ನಾಗಚಂದ್ರನ "ರಾಮಚರಿತ ಪುರಾಣ"ದಲ್ಲಿ ಬರುತ್ತದೆ. ಸೀತೆಯನ್ನು ನೋಡಿದಾಗ, ರಾವಣನ ಮನಸ್ಸಿನಲ್ಲಾದ ಚಂಚಲತೆಯನ್ನು ಇದು ಸೂಚಿಸುತ್ತಿದೆ. ಹಾಗಿದ್ದರೆ ಆಧುನಿಕ ಪೂರ್ವದ ಕವಿ ನಾಗಚಂದ್ರ ಮನಃಶಾಸ್ತ್ರವನ್ನು ಶಾಸ್ತ್ರೀಯವಾಗಿ ಓದಿದ್ದನೆ? ಇದಕ್ಕೆ ಉತ್ತರಿಸುವುದು ಕಷ್ಟ ಅಥವಾ ಇಲ್ಲ ಎಂದೇ ಹೇಳಬೇಕಾಗುತ್ತದೆ. ಆದರೆ ಮನಃಶಾಸ್ತ್ರದ ತಿಳುವಳಿಕೆಯನ್ನು ಬಳಸಿಕೊಂಡು ಆ ಇಡೀ ಸನ್ನಿವೇಶವನ್ನು ಶಕ್ತಿಶಾಲಿಯಾಗಿ ವಿಶ್ಲೇಷಣೆ ಮಾಡಬಹುದು. ಬಹುಶಃ ಸಾಹಿತ್ಯ ಕೃತಿಗಳ ಅಧ್ಯಯನದಲ್ಲಿ ಸಾಮಾನ್ಯವಾಗಿ ನಡೆಯುವುದು ಇದೇ ಎಂದು ಹೇಳಬಹುದು.

ಹಾಗಿದ್ದರೆ ಇದು ಹೇಗೆ ಎಂದು ಕೇಳಿದರೆ, ಸಾಹಿತ್ಯ ಕೃತಿಯಲ್ಲಿ ವಿವಿಧ ಜ್ಞಾನಶಿಸ್ತುಗಳು ಅತ್ಯಂತ ಸುಪ್ತವಾಗಿ ಮತ್ತು ಧ್ವನಿಯುಕ್ತವಾಗಿ ಅಡಗಿರುತ್ತವೆ. ಅದು ಅರ್ಥಿಕತೆ ಇರಬಹುದು, ರಾಜಕೀಯ ಇರಬಹುದು, ಸಾಮಾಜಿಕ ಅಂಶಗಳಿರಬಹುದು, ಮನಃಶಾಸ್ತ್ರೀಯ ಅಂಶಗಳಿರಬಹುದು, ಧಾರ್ಮಿಕ ಅಂಶಗಳಿರಬಹುದು. ಇವೆಲ್ಲ ವಾಚ್ಯವಾಗಿ ಮತ್ತು ಸಿದ್ಧಮಾದರಿಯಲ್ಲಿ ಯಾವುದೇ ಸಾಹಿತ್ಯ ಕೃತಿಯಲ್ಲಿ ನಮೂದಾಗಿರುವುದಿಲ್ಲ. ಆದರೆ ಅಧ್ಯಯನ ಮಾಡುವವರು ತಾವು ಯಾವ ಆಸಕ್ತಿಯಿಂದ ಮತ್ತು ಯಾವ ಧೋರಣೆಯಿಂದ ಅಧ್ಯಯನ ಮಾಡುತ್ತಾರೊ ಅದಕ್ಕೆ ಅನುಗುಣವಾಗಿ ಅಂತಹ ಜ್ಞಾನಶಿಸ್ತಿನ ನೆಲೆಗಳು ಸಾಹಿತ್ಯ ಕೃತಿಯಲ್ಲಿ ಕಾಣಿಸುತ್ತವೆ.

ಈ ದೃಷ್ಟಿಯಿಂದ ಕನ್ನಡ ಸಾಹಿತ್ಯದ ಅಧ್ಯಯನಗಳು ಕಾಲದಿಂದ ಕಾಲಕ್ಕೆ, ತಲೆಮಾರಿನಿಂದ ತಲೆಮಾರಿಗೆ ಒಂದು ಧೋರಣೆಯಿಂದ ಮತ್ತೊಂದು ಧೋರಣೆಗೆ ಬದಲಾಗುತ್ತಾ ಬಂದಿವೆ.

ಇದರಿಂದ ಸಾಹಿತ್ಯ ಅಧ್ಯಯನವು ಅತ್ಯಂತ ವಿಸ್ತಾರವಾಗಿ ಬೆಳೆದಿದೆ. ಜೊತೆಗೆ ಅಧ್ಯಯನ ಮಾಡಲು ಬಳಸಿದ ಶಾಸ್ತ್ರಗಳು ಹಾಗೂ ಪರಿಕಲ್ಪನೆಗಳು ಅಷ್ಟೇ ವಿಶಾಲವಾಗಿ ಬೆಳೆದಿವೆ. ಮಾರ್ಕ್ಸ್‌ವಾದ, ಸ್ತ್ರೀವಾದ ಮತ್ತು ಮನಃಶಾಸ್ತ್ರಗಳು ಸಾಹಿತ್ಯ ವಿಮರ್ಶೆಯ ಫಲವಾಗಿ ಕನ್ನಡದಲ್ಲಿ ಕಾಣಿಸಿಕೊಂಡಿವೆ. ಇವುಗಳ ಮೂಲಕ ಒಂದು ಕಡೆ ಸಾಹಿತ್ಯವನ್ನು ಅಧ್ಯಯನ ಮಾಡಿದರೆ ಮತ್ತೊಂದು ಕಡೆ ಸಮಾಜವನ್ನೂ ಮತ್ತು ಸಂಸ್ಕೃತಿಯನ್ನೂ ಅಧ್ಯಯನ ಮಾಡಲಾಗುತ್ತಿದೆ. ಕನ್ನಡದಲ್ಲಿ ಇದು ಒಂದು ಸ್ವತಂತ್ರ ಶಿಸ್ತಾಗಿ ಬಂದುದು ಒಂದು ಭಾಗವಾದರೆ; ಈ ಶಿಸ್ತು ಸಾಹಿತ್ಯ ಅಧ್ಯಯನದ ಭಾಗವಾಗಿ ಬಂದುದು ಮತ್ತೊಂದು ನೆಲೆ. ಈ ದೃಷ್ಟಿಯಿಂದ ಪ್ರಸ್ತುತ ಅಧ್ಯಯನವು ಸಾಹಿತ್ಯ ಕೃತಿಗಳನ್ನು ಮನಃಶಾಸ್ತ್ರೀಯ ದೃಷ್ಟಿಕೋನದಲ್ಲಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ.

ಅಧ್ಯಯನದ ಉದ್ದೇಶ

ಸಾಹಿತ್ಯವನ್ನು ಇತರೆ ಜ್ಞಾನಶಿಸ್ತುಗಳ ಮೂಲಕ ಅಧ್ಯಯನ ಮಾಡುವ ಪರಂಪರೆಯೊಂದು ಈಗಾಗಲೇ ಕನ್ನಡದಲ್ಲಿ ಬೆಳೆದುಬಂದಿದೆ. ಹಾಗೆಯೇ ಆಯಾ ಜ್ಞಾನಶಿಸ್ತುಗಳು ತಮ್ಮ ಮೂಲ ತತ್ವಗಳಿಗನುಗುಣವಾಗಿ ಅಧ್ಯಯನಗಳನ್ನು ಕೈಗೊಂಡಿವೆ. ಸಾಹಿತ್ಯ ಅಧ್ಯಯನಗಳಲ್ಲಿ ಸಾಂಪ್ರದಾಯಿಕ ದೃಷ್ಟಿಕೋನಗಳು ಈಗಾಗಲೇ ಚಾಲ್ತಿಯಲ್ಲಿದ್ದು ಈ ಬಗೆಯ ಸಂಪ್ರದಾಯದಿಂದಾಚೆ ಇದನ್ನು ಮುರಿಯುವ ಮೂಲಕ ಹೊಸ ದೃಷ್ಟಿಕೋನದೊಂದಿಗೆ ಅಧ್ಯಯನ ಮಾಡುವುದು. ವ್ಯಕ್ತಿ ಮತ್ತು ಸಮಾಜಗಳಲ್ಲಿನ ಸಂಬಂಧಗಳ ಬಗ್ಗೆ ಈಗಾಗಲೇ ನೋಡುವ ದೃಷ್ಟಿಕೋನ ಒಂದು ಬಗೆಯಲ್ಲಿದೆ. ಸಾಮಾನ್ಯವಾಗಿ ಇದೊಂದು ವೈಯಕ್ತಿಕ ಹಿನ್ನೆಲೆ, ಪುರುಷ ಸಂತೃಪ್ತಿಯಿಂದ ಕೂಡಿರುವ ದೃಷ್ಟಿಕೋನದಿಂದ ಮಾತ್ರ ಪಾತ್ರ, ಘಟನೆ, ಸಂದರ್ಭಗಳನ್ನು ನೋಡಲಾಗುತ್ತಿದೆ. ಕೇವಲ ಬಾಹ್ಯ ವರ್ತನೆಯ ಮೇಲೆ ಸಾಮಾನ್ಯೀಕರಣಕ್ಕೆ ಬರಲಾಗುತ್ತಿದೆ. ಆದರೆ ಮನಃಶಾಸ್ತ್ರೀಯ ನೆಲೆಯಲ್ಲಿ ಇದೊಂದು ಅಪರಿಪೂರ್ಣ ಮತ್ತು ಮಿತಿಯುಳ್ಳ ಅಧ್ಯಯನವಾಗಿದೆ.

ಮನಃಶಾಸ್ತ್ರವು ಆಧುನಿಕ ವಿಜ್ಞಾನದ ಒಂದು ಬಹಳ ಮುಖ್ಯವಾದ ಜ್ಞಾನಶಾಖೆ. ಇದನ್ನು ಸಾಮಾಜಿಕ ಮಾನವರ ವರ್ತನೆಗಳನ್ನು, ಭಾವನೆಗಳನ್ನು, ಅವರ ಮಾನಸಿಕ ಸ್ಥಿತಿಗಳನ್ನು ಅಧ್ಯಯನ ಮಾಡಲು ಪ್ರಯೋಗಿಸಲಾಗುತ್ತದೆ. ಜೊತೆಗೆ ಮಾನವರ ಅಭಿವ್ಯಕ್ತಿಗಳಾದ ಕಲೆ, ಸಾಹಿತ್ಯ, ಮಾಧ್ಯಮ ಮುಂತಾದವನ್ನು ಅಧ್ಯಯನ ಮಾಡಲು ಪ್ರಯೋಗಿಸಲಾಗುತ್ತದೆ. ಈ ಶತಮಾನದಲ್ಲಿ ಮನೋವಿಜ್ಞಾನವು ಕಲಿಕೆ, ತರಬೇತಿ, ಉಪಯೋಗ, ವ್ಯಾಪ್ತಿ ಎಲ್ಲದರಲ್ಲೂ ಸಾಕಷ್ಟು ಬೆಳವಣಿಗೆಯಾಗಿದೆ. ಮನೋವಿಜ್ಞಾನವು ಅನ್ವಯವಾಗದ ಕ್ಷೇತ್ರವೆ ಇಲ್ಲ ಎನ್ನುವಷ್ಟರಮಟ್ಟಿಗೆ ಇದರ ವ್ಯಾಪ್ತಿ ವಿಸ್ತರಿಸಿದೆ. ಬಾಹ್ಯಕಾಶ ಸಂಶೋಧನೆ, ಮನೋರೋಗಿಗಳ ಸೇವೆ, ಶೈಕ್ಷಣಿಕ ಮುನ್ನಡೆ, ಜಾಹಿರಾತು ಮತ್ತು ಮಾರುಕಟ್ಟೆಗೆ ಪೂರಕವಾದ ಮಾಹಿತಿ, ಔದ್ಯೋಗಿಕ ಉತ್ಪಾದನೆಗೆ,

ಮೆದುಳಿನ ರಚನೆ ಮತ್ತು ಕಾರ್ಯದ ಅರಿವಿಗೆ, ವ್ಯಕ್ತಿತ್ವ ವಿಕಸನ ತರಬೇತಿಗೆ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಮನೋವಿಜ್ಞಾನ ಬಳಕೆಯಾಗುತ್ತಿದೆ. ಎಲ್ಲೆಲ್ಲಿ ಮಾನವರಿಗೆ ಸಂಬಂಧಿಸಿದ ವಿಷಯವಿದೆಯೋ ಅಲ್ಲಿ, ಸಮಸ್ಯೆಗಳು ಎಲ್ಲಿಯೋ ಅಲ್ಲಿ, ಮಾನವರ ನಡುವೆ ಪರಸ್ಪರ ಸಾಮಾಜಿಕ ಸಂಬಂಧಗಳು ಕಂಡುಬರುತ್ತವೆಯೋ ಅಲ್ಲಿ, ಮಾನವರ ನಡುವಿನ ಸಂಬಂಧಗಳಲ್ಲಿ ಬಿರುಕು, ಅಸಹಜತೆ, ಅಸಹಕಾರಗಳು ಕಾಣುತ್ತವೋ ಅಲ್ಲಿ ಮನೋವಿಜ್ಞಾನದ ಪ್ರಸ್ತುತತೆ ಕಾಣುತ್ತದೆ. ಯಾವ ಸಂದರ್ಭಗಳಲ್ಲಿ ಮಾನವರನ್ನು ಅವರ ಬಾಹ್ಯ ನಡವಳಿಕೆಗಳು ಹಾಗೂ ವರ್ತನೆಗಳ ಮೂಲಕ ಮಾತ್ರ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲವೋ ಅಂತಹ ಸಂದರ್ಭಗಳಲ್ಲಿ ಮನಃಶಾಸ್ತ್ರದ ನೆರವು ಅಗತ್ಯವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಕುಟುಂಬ, ಇನ್ನಿತರೆ ವಿವಿಧ ಸಂಸ್ಥೆಗಳು ಇಲ್ಲೆಲ್ಲ ಮಾನಸಿಕ ಒತ್ತಡಗಳು ಹೆಚ್ಚಾಗುತ್ತಿದ್ದು, ಅದರ ಪರಿಣಾಮವಾಗಿ ಮನಸ್ಸಿಗೆ ಸಂಬಂಧಿಸಿದ ಹಲವು ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ಹಾಗಾಗಿ ಇವುಗಳ ಪರಿಹಾರಕ್ಕಾಗಿ ಕೌನ್ಸಿಲಿಂಗ್, (ಆಪ್ತ ಸಮಾಲೋಚನಾ ಕೇಂದ್ರ), ಮನೋಚಿಕಿತ್ಸಾ ಕೇಂದ್ರಗಳು ಹೆಚ್ಚಾಗುತ್ತಿವೆ. ಇಲ್ಲೆಲ್ಲ ಆಧುನಿಕ ಮನಃಶಾಸ್ತ್ರವು ಅತ್ಯಂತ ಸೂಕ್ಷ್ಮವಾಗಿ ಕೆಲಸ ಮಾಡುತ್ತಿದೆ. ಇಲ್ಲಿ ಈ ಜ್ಞಾನಶಿಸ್ತು ಮಾನವರ ಮುಖ್ಯ ಸಮಸ್ಯೆಗೆ ಕಾರಣವನ್ನು ಹುಡುಕುತ್ತಿದೆ ಮತ್ತು ಅದಕ್ಕೆ ಸೂಕ್ತವಾದ ಪರಿಹಾರವಾಗಿ ಕೆಲಸ ಮಾಡುತ್ತಿದೆ. ದಿನೇ ದಿನೇ ಇದರ ಅಗತ್ಯಗಳು ಹೆಚ್ಚಾಗುತ್ತಿವೆ. ಈ ಆಯಾಮದ ಬೆಳಕಿನಲ್ಲಿಯೂ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಅಧ್ಯಯನ ಮಾಡಬಹುದು. ಅಂದರೆ ಆಧುನಿಕ ಸಂದರ್ಭದಲ್ಲಿ ಮನಃಶಾಸ್ತ್ರವು ಒಂದು ಸಾಮಾಜಿಕ ಅಗತ್ಯವಾಗಿ ಮಾರ್ಪಟ್ಟಿದೆ. ಆದರೆ ಇದು ಘೋಷಿತ ರೂಪದಲ್ಲಿ ಇಲ್ಲ. ಅಂದರೆ ಮನಃಶಾಸ್ತ್ರವು ಕೇವಲ ಸಾಹಿತ್ಯ ಅಧ್ಯಯನಕ್ಕೆ ಮಾತ್ರ ಸೀಮಿತವಾಗಿಲ್ಲ ಎಂದು ಹೇಳಿದಂತೆ ಆಯಿತು. ಆದರೆ ಪ್ರಸ್ತುತ ಅಧ್ಯಯನವು ಮನಃಶಾಸ್ತ್ರದ ನೆರವಿನಿಂದ ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡುವುದಾಗಿದೆ. ಪ್ರಸ್ತುತ ಅಧ್ಯಯನದ ಉದ್ದೇಶಗಳನ್ನು ಈ ಮುಂದಿನಂತೆ ಕಲ್ಪಿಸಿಕೊಳ್ಳಲಾಗಿದೆ.

ಒಂದು: ಸಾಹಿತ್ಯ ಕೃತಿಗಳ ಕೆಲವು ಪಾತ್ರಗಳನ್ನು ಕೇಂದ್ರೀಕರಿಸಿ ಮನಃಶಾಸ್ತ್ರೀಯ ನೆಲೆಯಲ್ಲಿ ಚರ್ಚೆ ಮಾಡುವುದು.

ಎರಡು: ಸಾಹಿತ್ಯ ಕೃತಿಗಳ ಪಾತ್ರಗಳ ಮಾನಸಿಕ ಬೆಳವಣಿಗೆಯನ್ನು ಗುರುತಿಸುವುದು ಮತ್ತು ಆ ಬಗ್ಗೆ ಮನಃಶಾಸ್ತ್ರೀಯ ನೆಲೆಯಲ್ಲಿ ಚರ್ಚೆ ಮಾಡುವುದು.

ಮೂರು: ಸಾಹಿತ್ಯ ಕೃತಿಗಳ ಪಾತ್ರಗಳ ಬೆಳವಣಿಗೆ ಮತ್ತು ಕಥಾ ಬೆಳವಣಿಗೆಯ ನಡುವಿನ ಸಂಬಂಧವನ್ನು ಕುರಿತು ಮನಃಶಾಸ್ತ್ರೀಯ ನೆಲೆಯಲ್ಲಿ ಚರ್ಚೆ ಮಾಡುವುದು.

ನಾಲ್ಕು: ಸಾಹಿತ್ಯ ಕೃತಿಗಳ ಪಾತ್ರಗಳ ತುಡಿತಗಳು, ಆ ಪಾತ್ರಗಳ ಬೆಳವಣಿಗೆ ಮತ್ತು ಬೇರೊಂದು ಪಾತ್ರದೊಂದಿಗೆ ಅದಕ್ಕಿರುವ ಸಂಬಂಧವನ್ನು ಕುರಿತು ಮನಃಶಾಸ್ತ್ರೀಯ ನೆಲೆಯಲ್ಲಿ ಚರ್ಚಿಸುವುದು.

ಐದು: ಪಾತ್ರಗಳ ಬೆಳವಣಿಗೆಯ ಹಂತದಲ್ಲಿ ಕಾರ್ಯ ಕಾರಣ ಸಂಬಂಧಗಳನ್ನು ಕುರಿತು ಮನಃಶಾಸ್ತ್ರೀಯ ನೆಲೆಯಲ್ಲಿ ಚರ್ಚಿಸುವುದು.

ಅಧ್ಯಯನದ ವ್ಯಾಪ್ತಿ

ಯಶೋಧರ ಚರಿತ (ಕಾವ್ಯ), ಹಳದಿಮೀನು (ಕಾದಂಬರಿ), ಹಯವದನ (ನಾಟಕ), ಮುಖಾಮುಖಿ (ಕಥೆ) ಈ ಪಠ್ಯಗಳು ಪ್ರಸ್ತುತ ಅಧ್ಯಯನದ ಮೂಲ ಆಕರಗಳು. ಆದರೆ ಇಡೀ ಪಠ್ಯಗಳನ್ನೇ ಮನಃಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನಕ್ಕೆ ಒಳಗುಮಾಡುವುದಿಲ್ಲ. ಬದಲಿಗೆ ಕೆಲವು ಮುಖ್ಯ ಪಾತ್ರಗಳನ್ನು ಮಾತ್ರವೇ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗುವುದು.

ಈ ಕೃತಿಗಳನ್ನು ಕುರಿತಾದ ಮನಃಶಾಸ್ತ್ರೀಯ ದೃಷ್ಟಿಕೋನದಲ್ಲಿ ನಡೆದಿರುವ ಅಧ್ಯಯನಗಳು ಕಡಿಮೆ ಅಥವಾ ಇಲ್ಲವೆಂದೇ ಹೇಳಬಹುದು. ಆದರೆ ಬೇರೆ ಬೇರೆ ದೃಷ್ಟಿಕೋನದಲ್ಲಿ ನಡೆದಿರುವ ಅಧ್ಯಯನಗಳು ಪ್ರಸ್ತುತ ಅಧ್ಯಯನಕ್ಕೆ ಪೂರಕ ಆಕರಗಳಾಗಿರುತ್ತವೆ. ಕನ್ನಡ ಸಾಹಿತ್ಯವನ್ನು ಕುರಿತು ಮನಃಶಾಸ್ತ್ರೀಯ ನೆಲೆಯಲ್ಲಿ ನಡೆಸಿರುವ ಅಧ್ಯಯನಗಳನ್ನು ಸಮೀಕ್ಷೆ ಮಾಡಲಾಗುವುದು.

ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನವು ಮನಃಶಾಸ್ತ್ರೀಯ ದೃಷ್ಟಿಕೋನವನ್ನು ತನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದೆ. ಮನಃಶಾಸ್ತ್ರವು ಮಾನವರ ಪ್ರತಿಯೊಂದು ಭಾವನಾತ್ಮಕ ಮತ್ತು ಮಾನಸಿಕ ವರ್ತನೆಗಳು ಹಾಗೂ ಕ್ರಿಯೆಗಳ ಹಿಂದೆ ಇರುವ ನಿರ್ದಿಷ್ಟ ಕಾರಣವನ್ನು ಗುರುತಿಸುತ್ತದೆ. ಕಣ್ಣಿಗೆ ಕಾಣುವ ಒಂದು ಕ್ರಿಯೆಯ ಹಿಂದೆ ಯಾವುದೋ ಸುಲಭವಾಗಿ ಗೋಚರಿಸದ ಒಂದು ಕಾರಣ ಅಥವಾ ಅನೇಕ ಕಾರಣಗಳು ಇರುವ ಸಾಧ್ಯತೆ ಇರುತ್ತದೆ. ಈ ರೀತಿಯ ಅನೇಕ ಅಂಶಗಳಿಗೆ ವರ್ತನೆಯ ಆಧಾರದ ಮೇಲೆ ಕಾರಣ ಹುಡುಕಲಾಗುತ್ತದೆ. ಆದ್ದರಿಂದ ಈ ರೀತಿಯ ವರ್ತನೆಗಳಿಗೆ ಮೂಲಭೂತವಾದ ಒಂದು ಮುಖ್ಯ ಕಾರಣ ಇರುವುದನ್ನು ಮನಃಶಾಸ್ತ್ರವು ಗುರುತಿಸುತ್ತದೆ. ಅಧ್ಯಯನಕ್ಕೆ ಆಯ್ಕೆಮಾಡಿಕೊಂಡಿರುವ ಸಾಹಿತ್ಯ ಪಠ್ಯಗಳ ಓದಿನ ಮೂಲಕ ಮುಖ್ಯ ಪಾತ್ರಗಳನ್ನು ಮತ್ತು ಕೆಲವು ಮುಖ್ಯ ಸನ್ನಿವೇಶಗಳನ್ನು ಆಯ್ಕೆಮಾಡಿಕೊಳ್ಳಲಾಗುವುದು. ಹಾಗೆ ಆಯ್ಕೆಮಾಡಿಕೊಂಡ ಪಾತ್ರಗಳನ್ನು ಹಾಗೂ ಸನ್ನಿವೇಶಗಳನ್ನು ಮನಃಶಾಸ್ತ್ರೀಯ ದೃಷ್ಟಿಕೋನದಲ್ಲಿ ವಿಶ್ಲೇಷಣೆ ಮಾಡಲಾಗುವುದು. ಈ ವಿಶ್ಲೇಷಣೆಯು ಕೇವಲ ಪಾತ್ರಗಳ ಸ್ವತಂತ್ರ ವಿಶ್ಲೇಷಣೆಯಲ್ಲಿ ಮಾತ್ರ ವಿರಮಿಸುವುದಿಲ್ಲ. ಬದಲಿಗೆ ಪಾತ್ರಗಳ ಬೆಳವಣಿಗೆ ಮತ್ತು ಕಥಾಭಿತ್ತಿಯ ಬೆಳವಣಿಗೆಗಳ ನಡುವಿನ ಸಂಬಂಧಗಳನ್ನು ಅರಿಯುವ ಪ್ರಯತ್ನದಲ್ಲಿ ತೊಡಗುತ್ತದೆ. ಈ ಮೂಲಕ ಇಡಿಯಾಗಿ ಸಾಹಿತ್ಯ ಪಠ್ಯವನ್ನು ಅಧ್ಯಯನ ಮಾಡುವ ಸ್ವರೂಪವನ್ನು ತಾಳುತ್ತದೆ.

ಈ ಅಧ್ಯಯನವು ಸಾಹಿತ್ಯ ಕೃತಿಗಳಲ್ಲಿ ಆಯ್ಕೆಮಾಡಿಕೊಂಡಿರುವ ಸ್ತ್ರೀ ಮತ್ತು ಪುರುಷ ಪಾತ್ರಗಳ ಅಧ್ಯಯನಕ್ಕೆ ಸಮಾನ ಆದ್ಯತೆಯನ್ನು ನೀಡುತ್ತದೆ. ಜೊತೆಗೆ ಇತರೆ ಪಾತ್ರಗಳು ಸನ್ನಿವೇಶಗಳು, ಘಟನೆಗಳೂ ಕೂಡಾ ಅಧ್ಯಯನದಲ್ಲಿ ಬರುತ್ತವೆ.

ಇದುವರೆಗೆ ನಡೆದಿರುವ ಅಧ್ಯಯನ

ಸಾಹಿತ್ಯವನ್ನು ಕುರಿತು ಕನ್ನಡದಲ್ಲಿ ಕೆಲವೇ ಕೆಲವು ಮನಃಶಾಸ್ತ್ರೀಯ ದೃಷ್ಟಿಕೋನದ ಅಧ್ಯಯನಗಳು ನಡೆದಿವೆ. ಕೆ.ಎಲ್. ಗೋಪಾಲ ಕೃಷ್ಣಯ್ಯ, ಬಿ. ಕೃಷ್ಣಮೂರ್ತಿ ಮುಂತಾದವರು ದೃಷ್ಟಿಕೋನದಲ್ಲಿ ಕೆಲವು ಬರವಣಿಗೆ ಮಾಡಿದ್ದಾರೆ. ಇವುಗಳ ಜೊತೆಯಲ್ಲಿ ಯು.ಆರ್. ಅನಂತಮೂರ್ತಿಯವರ 'ಸಂಸ್ಕಾರ'ದ ಕುರಿತು ಎರಿಕ್‌ಸನ್ ಅವರ ಬರವಣಿಗೆಗಳು ನವ್ಯ ಸಾಹಿತ್ಯದ ಕುರಿತಾಗಿ ಬಂದ ವಿಮರ್ಶೆಗಳಲ್ಲಿ ಸ್ವಲ್ಪ ಮಟ್ಟಿಗೆ ಮನಃಶಾಸ್ತ್ರೀಯ ದೃಷ್ಟಿಕೋನದ ಬರವಣಿಗೆಯನ್ನು ಕಾಣಬಹುದಾಗಿದೆ. ಇವುಗಳಲ್ಲದೇ ಯಶವಂತ ಚಿತ್ತಾಲರ ಅಧ್ಯಯನಗಳು, ಟಿ. ಪಿ. ಅಶೋಕ್, ಸಿ.ಪಿ.ಕೆ., ಗೌರೀಶ್ ಕಾಯ್ಕಿಣಿ ಅವರ ಬರವಣಿಗೆಗಳು ಈ ಕುರಿತು ಬಂದಿರುವ ಬರವಣಿಗೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಸಮೀಕ್ಷೆ ಮಾಡಲಾಗುವುದು.

ಅಧ್ಯಾಯ : ಎರಡು

ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಎರಡು

ಇದುವರೆಗೆ ನಡೆದಿರುವ ಅಧ್ಯಯನದ ಸಮೀಕ್ಷೆ

೧. ಸಾಹಿತ್ಯ ಮತ್ತು ಮನೋವಿಜ್ಞಾನ–ಅನುವಾದ : ಸಿ.ಪಿ. ಕೃಷ್ಣಕುಮಾರ್

"ಸಾಹಿತ್ಯ ಮತ್ತು ಮನೋವಿಜ್ಞಾನ" ಎಂಬ ಈ ಕೃತಿಯಲ್ಲಿ ನಾಲ್ಕು ಪ್ರಬಂಧ ಅನುವಾದಗೊಂಡು ಅಳವಡಿಸಲ್ಪಟ್ಟಿವೆ. ಇದರ ಅನುವಾದಕರು. ಸಿ.ಪಿ. ಕೃಷ್ಣಕುಮಾರ್ ಅವರು.

* ಮನೋವಿಜ್ಞಾನ ಮತ್ತು ಸಾಹಿತ್ಯ: ಸಿ.ಜಿ. ಯೂಂಗ್
* ಫ್ರಾಯ್ಡ್ ಮತ್ತು ಯೂಂಗ್/ ಸಿ.ಜಿ. ಯೂಂಗ್
* ಕವಿಯ ವ್ಯಕ್ತಿತ್ವ: ಹರ್ಬರ್ಟ್ ರೀಡ್
* ಸ್ಫೂರ್ತಿ ಮತ್ತು ಪ್ರತಿಭೆ: ಜೆ.ಎನ್.ಎಂ. ಟೈರೆಲ್

ಮೊದಲ ಎರಡು ಪ್ರಬಂಧಗಳು ಯೂಂಗ್‌ನ Modern man search of a soul ಎಂಬ ಗ್ರಂಥದಿಂದ ಎತ್ತಿಕೊಂಡವು. ಮೂರನೆಯ ಪ್ರಬಂಧ ಹರ್ಬರ್ಟ್‌ರೀಡ್‌ನ Collected Essays in literary Criticism ಎಂಬ ಗ್ರಂಥದ್ದು. ನಾಲ್ಕನೆಯದಕ್ಕೆ ಜಿ.ಎನ್.ಎಂ. ಟೈರೆಲ್‌ನ The personality of man' ಮೂಲ.

ಮೊದಲನೆಯ ಪ್ರಬಂಧದಲ್ಲಿ ಯೂಂಗ್ ಸಮಷ್ಟಿ ಪ್ರಜ್ಞೆ ಮುಂತಾದ ಮುಖ್ಯ ವಿಚಾರಗಳನ್ನು ಮಂಡಿಸಿ, ಎರಡನೆಯದರಲ್ಲಿ ತನಗೂ, ಫ್ರಾಯ್ಡ್‌ನಿಗೂ ದೃಷ್ಟಿಕೋನದಲ್ಲಿ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಿದ್ದಾನೆ. ಅಲ್ಲಿ ಫ್ರಾಯ್ಡ್‌ನ ಅನೇಕ ವಿಚಾರಗಳು ಪ್ರಕಟವಾಗಿವೆ. ಮೂರನೆಯ ಪ್ರಬಂಧದಲ್ಲಿ ಖ್ಯಾತ ವಿಮರ್ಶಕನಾದ ಹರ್ಬರ್ಟ್‌ರೀಡ್ ಫ್ರಾಯ್ಡ್‌ನ ತತ್ವಗಳನ್ನೇ ವಿಶೇಷವಾಗಿ ಆಶ್ರಯಿಸಿ ಕವಿಯ ವ್ಯಕ್ತಿತ್ವವನ್ನು ವಿವೇಚಿಸಿದ್ದಾನೆ. ಅವನ ಹೇಳಿಕೆಗಳು, ವ್ಯಕ್ತಿತ್ವಕ್ಕೂ ಮತ್ತು ಸ್ವಭಾವಕ್ಕೂ ಅವನು ಬೇಧ ಕಲ್ಪಿಸುವ ರೀತಿ ಚರ್ಚಾಸ್ಪದವಾಗಿದ್ದರೂ ಕುತೂಹಲಕರವಾಗಿದೆ.

ನಾಲ್ಕನೆಯ ಪ್ರಬಂಧದ ಕರ್ತೃವೂ ಒಬ್ಬ ಮನಶಾಸ್ತ್ರಜ್ಞನೆ. ಅದರಲ್ಲಿ ಸ್ಫೂರ್ತಿ, ಪ್ರತಿಭೆಗಳ ಸ್ವರೂಪವನ್ನು ಸ್ವಾರಸ್ಯಪೂರ್ಣವಾದ ನಿದರ್ಶನಗಳ ಮೂಲಕ ಸ್ಥೂಲವಾಗಿ ನಿರೂಪಿಸಲಾಗಿದೆ.

ಒಟ್ಟಾರೆ ಇಲ್ಲಿನ ಮನೋವಿಜ್ಞಾನ ಮತ್ತು ಸಾಹಿತ್ಯ ಅಧ್ಯಯನವು ಒಂದು ಕಲಾಕೃತಿಗೆ ಸಂಬಂಧಿಸಿದಂತೆ ಸಂಕೀರ್ಣ ಮನೋವ್ಯಾಪಾರಗಳ ಒಂದು ಉತ್ಪನ್ನದೊಡನೆ ಸಂಬಂಧ ಹೊಂದಿರುತ್ತದೆ. ಆದರೆ ಅದು ಉದ್ದೇಶಪೂರ್ವಕವಾಗಿ ಮತ್ತು ಪ್ರಜ್ಞಾಪೂರ್ವಕವಾಗಿ ರೂಪಿತವಾದ ಉತ್ಪನ್ನವೆಂದು ಹೇಳುತ್ತದೆ. ಹಾಗೆಯೇ ಇಲ್ಲಿ ಸಾಹಿತ್ಯವನ್ನು ಮೂರ್ತವಾದ ವೈಜ್ಞಾನಿಕ ವಿವರಣೆಗೆ ಪ್ರಯತ್ನಿಸಲಾಗಿದೆ. ಹಾಗೆಯೇ ಜೀವಂತವಾದ ಮತ್ತು ಸೃಜನಶೀಲವಾದ ಮಾನವ ಚೇತನವನ್ನು ಒಂದು ವಿಶಿಷ್ಟ ವ್ಯಕ್ತಿತ್ವವಾಗಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಒಂದು ಶಾಸ್ತ್ರದಲ್ಲಿ ನಾವು ನಿರೀಕ್ಷಿಸುವ ಕಠಿಣವಾದ ಹೈತುಕ (Casual) ಸಂಬಂಧಗಳನ್ನು ಸ್ಥಾಪಿಸಲು ಮನೋವಿಜ್ಞಾನದ ಸದ್ಯದ ಬೆಳವಣಿಗೆಯ ಸ್ಥಿತಿ ನಮಗೆ ಅವಕಾಶವೀಯುವುದಿಲ್ಲ. ನಾವು ಹೇತು (Casual) ವಿಚಾರದೊಡನೆ ವಿಶ್ವಾಸಪೂರ್ವಕವಾಗಿ ಕೆಲಸಮಾಡುವುದು ಸಾಧ್ಯವಾಗುವುದು ಮನೋದೈಹಿಕ ಪ್ರವೃತ್ತಿಗಳ ಹಾಗೂ ಪ್ರತೀ ವರ್ತನೆಗಳ ಸಂಕೀರ್ಣತೆಯ ಒಂದು ಘಟ್ಟದಲ್ಲಿ ಮನೋವಿಜ್ಞಾನಿ ಮನಸ್ಸಿನಲ್ಲಿ ಆಶ್ಚರ್ಯಕರ ಜಟಿಲತೆಯಲ್ಲಿ ಘಟನೆಗಳ ದೂರ ವ್ಯಾಪ್ತಿಯುಳ್ಳ ವರ್ಣನೆಗಳಿಂದ ಹಾಗೂ ಹಾಸುಹೊಕ್ಕುಗಳ ಸ್ಪಷ್ಟ ಚಿತ್ರಣದಿಂದ ಸಂತೃಪ್ತನಾಗಿರಬೇಕು. ಹೀಗೆ ಮಾಡುವಲ್ಲಿ ಅವನು ಮಾನಸಿಕ ಕ್ರಿಯೆಯನ್ನು ಪ್ರತ್ಯೇಕವಾಗಿ ಅವಶ್ಯಕವೆಂದು ಹೆಸರಿಸುವುದರಿಂದ ದೂರವಿರಬೇಕು. ವಸ್ತುಸ್ಥಿತಿ ಹೀಗಿಲ್ಲದಿದ್ದಲ್ಲಿ ಮತ್ತು ಒಂದು ಕಲಾಕೃತಿಯಲ್ಲಿನ ಹಾಗೂ ಕಲಾಸೃಜನ ಕ್ರಿಯೆಯಲ್ಲಿನ ಹೈತುಕ ಸಂಬಂಧಗಳನ್ನು ಅನಾವರಣಗೊಳಿಸುವುದಿಲ್ಲ. ಮನೋವಿಜ್ಞಾನಿ ಅವಲಂಬನಯೋಗ್ಯ ನಾಗಿದ್ದಲ್ಲಿ ಅವನು ಕಲೆಯ ಅಧ್ಯಯನಕ್ಕೆ ನೆಲೆಯನ್ನು ಉಳಿಸಿದ. ಅದನ್ನು ತನ್ನ ಸ್ವಂತ ವಿಜ್ಞಾನದ ಒಂದು ವಿಶೇಷ ಶಾಖೆಯ ಮಟ್ಟಕ್ಕೆ ಇಳಿಸಿಬಿಡುತ್ತಾನೆ. ಮನೋವಿಜ್ಞಾನಿ ಜಟಿಲ ಮನೋಘಟನೆಗಳಲ್ಲಿ ಹೈತುಕ ಸಂಬಂಧಗಳನ್ನು ಪರಿಶೀಲಿಸುವ ಮತ್ತು ಸ್ಥಾಪಿಸುವ ತನ್ನ ಹಕ್ಕನ್ನು ಎಂದೂ ಬಿಟ್ಟುಕೊಡದಿರಬಹುದು. ಹಾಗೆ ಮಾಡಿದ್ದಲ್ಲಿ ಮನೋವಿಜ್ಞಾನಕ್ಕೆ ಅಸ್ತಿತ್ವದ ಹಕ್ಕನ್ನೇ ನಿರಾಕರಿಸಿದಂತಾಗುತ್ತದೆ. ಆದರೂ ಅವನು ಈ ಹಕ್ಕನ್ನು ಅದರ ಅತ್ಯಂತ ಪೂರ್ಣಾರ್ಥದಲ್ಲಿ ಎಂದೂ ಮಂಡಿಸಲಾರ. ಏಕೆಂದರೆ ಕಲೆಯಲ್ಲಿ ತನ್ನ ಸ್ಪಷ್ಟತಮ ಅಭಿವ್ಯಕ್ತಿಯನ್ನು ಪಡೆಯುವ ಬದುಕಿನ ಸೃಜನಶೀಲ ಮುಖ ತರ್ಕಬದ್ಧ ಸೂತ್ರೀಕರಣದ ಎಲ್ಲಾ ಪ್ರಯತ್ನಗಳನ್ನು ವಿಫಲಗೊಳಿಸುತ್ತದೆ. ಪ್ರಚೋದನೆಗುಂಟಾದ ಯಾವುದೇ ಪ್ರತಿಕ್ರಿಯೆಯನ್ನು ಹೈತುಕವಾಗಿ (Casual) ವಿವರಿಸಬಹುದು. ಆದರೆ ಕೇವಲ ಪ್ರತಿಕ್ರಿಯೆಗೆ ಸಂಪೂರ್ಣ ವಿರುದ್ಧವಾಗಿರುವ ಸೃಜನಕ್ರಿಯೆ ಮಾನವ ಪರಿಗ್ರಹಣದಿಂದ ಎಂದೆಂದಿಗೂ ತಪ್ಪಿಸಿಕೊಳ್ಳುತ್ತದೆ. ಅದರ ಅಭಿವ್ಯಕ್ತಿಗಳಲ್ಲಿ ಅದನ್ನು ವಿವರಿಸಬಹುದಷ್ಟೆ ಅದನ್ನು ಅಸ್ಪಷ್ಟವಾಗಿ ಅರಿಯುವುದು ಹಕ್ಕು. ಆದರೆ ಪೂರ್ಣವಾಗಿ ಗ್ರಹಿಸುವುದು ಸಾಧ್ಯವಿಲ್ಲ. ಇದುವರೆಗೂ ಸಾಹಿತ್ಯ ಪಠ್ಯಗಳಲ್ಲಿನ ಸ್ತ್ರೀ ಪಾತ್ರಕ್ಕೆ ಲೇಖನಗಳು ಬರಹಗಳು ವಿಮರ್ಶೆಗಳು ಕನ್ನಡದಲ್ಲಿ ಹಾಗೇ ಉಳಿದ ಭಾಷೆಗಳಲ್ಲಿ ಸಾಕಷ್ಟು ಬಂದಿವೆ. ಈ ನಿಟ್ಟಿನಲ್ಲಿ ಕೆಲವನ್ನು ಹೆಸರಿಸುವುದಾದರೆ ಮರಾಠಿ ಮೂಲದ ಇರಾವತಿ ಕರ್ವೆ ಅವರ "ಯುಗಾಂತ"

ಕೃತಿಯಲ್ಲಿ ಗಾಂಧಾರಿ, ಕುಂತಿ, ದ್ರೌಪದಿಯ ಪಾತ್ರವನ್ನು ಭಿನ್ನವಾಗಿ ಚರ್ಚಿಸಲಾಗಿದೆ. ಅದು ಆಧುನಿಕ ಸ್ತ್ರೀವಾದಿ ಚಿಂತನೆಯ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ. ಡಾ.ಇಂದಿರಾಜೈಪ್ರಕಾಶ್ ಅವರ ಸ್ತ್ರೀವಾದಿ ಮನೋವಿಜ್ಞಾನ ಕೃತಿಯ ಮಹಿಳೆಯರ ಮನೋವಲಯದ ಸ್ಥಿತಿಗತಿಗಳನ್ನು ಸ್ತ್ರೀವಾದಿ ನೆಲೆಯಲ್ಲಿ ವಿಶ್ಲೇಷಿಸುತ್ತದೆ. ಆದರೆ ಇಲ್ಲಿ ಯಾವುದೇ ಮನೋವಿಶ್ಲೇಷಣೆಯ ಅಧ್ಯಯನ ಸಾಧ್ಯವಾಗಿಲ್ಲ. ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾನಿಲಯದ ಡಾ. ಮಣಿಮಾಲಿನಿ ವಿ.ಕೆ. ಅವರು ವ್ಯಾಸಭಾರತದ ಹಿನ್ನೆಲೆಯೊಂದಿಗೆ ಕನ್ನಡದ ಪರ್ವ ಮರಾಠಿಯ "ಮೃತ್ಯುಂಜಯ" ಮತ್ತು ಒರಿಯಾದ "ಯಾಜ್ಞಸೇನಿ" ಕಾದಂಬರಿಗಳಲ್ಲಿ ದ್ರೌಪದಿಯ ತೌಲನಿಕ ವಿವೇಚನೆಯನ್ನು ಮಾಡಿದ್ದಾರೆ. ಡಾ. ಕೆ.ವೈ. ಶಿವಕುಮಾರ್ ಸಂಪಾದಿಸಿದ ಜನ್ನನ ಕಾವ್ಯಗಳಲ್ಲಿ ಪಾತ್ರ ಚಿತ್ರಣ ಮತ್ತು ರಸ ನಿರೂಪಣೆ ಇದು ಕೂಡಾ ಪಾತ್ರಗಳನ್ನು ಕುರಿತ ವಿಮರ್ಶೆಯೇ ಆಗಿದೆ. ಇನ್ನು ಶಿವರಾಮ ಕಾರಂತರ ಕಾದಂಬರಿಗಳಲ್ಲಿ "ಮೈ ಮನಗಳ ಸುಳಿ"ಯಲ್ಲಿ ಪಾತ್ರಗಳ ಮನೋವಿಶ್ಲೇಷಣೆ, ಬಸವರಾಜ ಕಟ್ಟೀಮನಿ ಕೃತಿಯಲ್ಲಿ ಸ್ತ್ರೀ ಮನೋವಿಶ್ಲೇಷಣೆ, ನವ್ಯ ಕಾವ್ಯಗಳಲ್ಲಿ ಮನೋವಿಶ್ಲೇಷಣೆ, ಎಚ್.ಎಸ್. ರಾಘವೇಂದ್ರರಾವ್ ಅವರ ವಿಶ್ಲೇಷಣೆ ಮತ್ತು ನಿಲುವು ಕೃತಿಗಳು ಯಶವಂತ ಚಿತ್ತಾಲರ ಬರವಣಿಗೆಗಳು, ಬಿ. ಕೃಷ್ಣಮೂರ್ತಿಯವರ ಸಾಹಿತ್ಯ ಮತ್ತು ಮನೋವಿಜ್ಞಾನದ ಬರವಣಿಗೆಗಳು, ಎಚ್. ಶಶಿಕಲಾ ಅವರ ಕೃತಿ ನಮ್ಮ ದೃಷ್ಟಿಯನ್ನು ಹರಿಸುವಲ್ಲಿ ಮಾರ್ಗದರ್ಶನ ನೀಡುತ್ತವೆ. ಇಷ್ಟಾಗಿಯೂ ಇವು ಯಾವುವೂ ಮನಃಶಾಸ್ತ್ರೀಯ ದೃಷ್ಟಿಕೋನದ ವಿಶ್ಲೇಷಣೆಗಳು ಎನಿಸುವುದಿಲ್ಲ.

ಒಟ್ಟಾರೆ ಎಲ್ಲಾ ದೃಷ್ಟಿಕೋನಗಳಲ್ಲಿ ವರ್ತನೆಗಳು ಮತ್ತು ಪ್ರಚೋದನೆಗೆ ಉಂಟಾಗುವ ಪ್ರತಿಕ್ರಿಯೆಯನ್ನು ವಿವರಿಸುವ ಕಾರ್ಯವನ್ನು ಮಾಡಿವೆ. ಆದರೆ ಕೇವಲ ಪ್ರತಿಕ್ರಿಯೆಗೆ ಸಂಪೂರ್ಣ ವಿರುದ್ಧವಾಗಿರುವ ಸೃಜನಕ್ರಿಯೆ ಮಾನವ ಪರಿಗ್ರಹಣದಿಂದ ಎಂದೆಂದಿಗೂ ತಪ್ಪಿಸಿಕೊಳ್ಳುತ್ತದೆ. ಆದರೆ ಆಭಿವ್ಯಕ್ತಿಗಳಲ್ಲಿ ಅದನ್ನು ವಿವರಿಸಲಾಗಿದೆಯಷ್ಟೆ. ಅದನ್ನು ಅಸ್ಪಷ್ಟವಾಗಿ ಅರಿಯುವುದು ಪಕ್ಕಾ. ಆದರೆ ಪೂರ್ಣವಾಗಿ ಗ್ರಹಿಸುವುದು ಸಾಧ್ಯವಿಲ್ಲ. ಮನೋವಿಜ್ಞಾನ ಮತ್ತು ಸಾಹಿತ್ಯದ ಅಧ್ಯಯನ ಯಾವಾಗಲೂ ಸಹಾಯಕ್ಕಾಗಿ ಒಂದನ್ನೊಂದು ಆಶ್ರಯಿಸಬೇಕಾಗುತ್ತದೆ. ಆದರೆ ಒಂದು ಮತ್ತೊಂದನ್ನು ಆಕ್ರಮಿಸಿಕೊಳ್ಳುವುದಿಲ್ಲ. ಮನೋಘಟನೆಗಳು ನಿಷ್ಪತ್ತಿಯ ಸಾಧ್ಯತೆಗಳು ಎಂಬುದು ಮನೋವಿಜ್ಞಾನದ ಒಂದು ಮುಖ್ಯ ತತ್ವ

ಈಗಾಗಲೇ ಸಾಹಿತ್ಯ ಕೃತಿಗಳಲ್ಲಿ ಪಾತ್ರಗಳ ಮನೋವೈಜ್ಞಾನಿಕ ವ್ಯಾಖ್ಯಾನದ ಕೊರತೆ ಯಿದೆಯೋ ಆ ಕಾರಣದಿಂದ ಆ ಕೃತಿಗಳ ಪಾತ್ರಗಳ ವಿಶ್ಲೇಷಣೆ ವಿವರಣೆಗಳಿಗೆ ಅವಕಾಶಗಳನ್ನು ಒದಗಿಸುತ್ತವೆಯೋ ಅಥವಾ ತಮ್ಮ ನಿರೂಪಣೆಯ ಕ್ರಮದಿಂದ ಅವುಗಳನ್ನು ಆಮಂತ್ರಿಸುತ್ತಿವೆಯೋ ಅವೇ ಮನೋವಿಜ್ಞಾನಿ ಪಾಲಿನ ಸವಾಲು ಎಂಬುದು ಈ ಎಲ್ಲಾ ಸಮೀಕ್ಷೆಗಳಿಂದ ಅರಿವಿಗೆ ಬಂದಿದೆ.

೨. ಸಾಹಿತ್ಯ ಸಂವಾದ: ಕೆ.ಎಲ್. ಗೋಪಾಲ ಕೃಷ್ಣಯ್ಯ

ಕೆ.ಎಲ್. ಗೋಪಾಲ ಕೃಷ್ಣಯ್ಯನವರ "ಸಾಹಿತ್ಯ ಸಂವಾದ" ವಿಮರ್ಶಾ ಸಾಹಿತ್ಯಕ್ಕೆ ಬಹು ಮೌಲಿಕವಾದ ಕೊಡುಗೆ ನೀಡಿದೆ. ಇದನ್ನು ಓದುವಾಗ ತಾನಾಗಿಯೇ ಎದ್ದು ಕಾಣುವ ಕೆಲವು ಅಂಶಗಳುಂಟು. ಮೊದಲನೆಯದು ಭಾರತೀಯ ಕಾವ್ಯ ಮೀಮಾಂಸೆ ಪಾಶ್ಚಾತ್ಯ ಕಾವ್ಯ ಮೀಮಾಂಸೆ ಇಂದಿನ ಮಿಮರ್ಶೆ ಬೇಡುವ ಹಲವು ಕ್ಷೇತ್ರಗಳ ಪರಿಚಯ ಅಧ್ಯಯನ ಮಾಡಲು ಹೊರಡುವವರಿಗೆ ಭಾಷಾಶಾಸ್ತ್ರ, ಮಾನವಶಾಸ್ತ್ರ, ಮಾನವ ಸಮಾಜಶಾಸ್ತ್ರ ಇಂತಹ ಕ್ಷೇತ್ರಗಳನ್ನು ಪ್ರವೇಶಿಸುತ್ತಾ ಹೋಗುವುದು ಒಂದು ಸವಾಲು ಆಗುತ್ತದೆ. ಕೆಲವೊಮ್ಮೆ ಗಾಬರಿಗೊಳಿಸುವ ಅನುಭವವು ಆಗುತ್ತದೆ. ಕೆ.ಎಲ್. ಗೋಪಾಲ ಕೃಷ್ಣಯ್ಯನವರು ಈ ಎಲ್ಲಾ ಹಿನ್ನೆಲೆಯನ್ನು ಅಂತರಶಾಸ್ತ್ರೀಯ ಶಿಸ್ತಿನ ರೀತಿಯನ್ನು ವಶ ಮಾಡಿಕೊಂಡು ಬರೆಯುತ್ತಾರೆ. ಆಧುನಿಕ ವಿಮರ್ಶೆಯ ಅಧ್ಯಯನ ಮಾಡಿ ಅದರ ಪರಿಚಯ ಮಾಡಿಕೊಂಡು ಅಧ್ಯಯನಶೀಲರಿಗೂ ತುಂಬಾ ಉಪಯುಕ್ತವಾದ ಕೃತಿಯನ್ನು ಇವರು ನೀಡಿದ್ದಾರೆ.

ಪ್ರತೀಕವಾದ ಮತ್ತು ಪುರಾಣ, ಮಿಥ್, ಪ್ರತೀಕ ಮತ್ತು ಸಾಹಿತ್ಯ ವಿಮರ್ಶೆ ಲೇಖನಗಳು ಕೆ.ಎಲ್. ಗೋಪಾಲ ಕೃಷ್ಣನವರು ವಿಶೇಷವಾಗಿ ಅಧ್ಯಯನ ಮಾಡಿರುವ ಕ್ಷೇತ್ರಗಳನ್ನು ತುಂಬಾ ಸ್ಪಷ್ಟವಾಗಿ ಪರಿಚಯ ಮಾಡಿಕೊಡುವ ಬರಹಗಳು. ಪ್ರತೀಕಗಳಿಗೂ, ಮಿಥ್‌ಗಳಿಗೂ ಇರುವ ನಂಟು ಸ್ವಯಂ ವೇದ್ಯ. ಒಂದು ಜೀವಿ ತನ್ನ ವರ್ಗದ ಇತರರೊಂದಿಗೆ ಸಂವಹನ ಮಾಡಲು ಬಳಸುವ ಸಾಧನ ಎನ್ನುವ ವಿಶಾಲವಾದ ಅರ್ಥದಲ್ಲಿ ಹಲವು ಪ್ರಾಣಿ ವರ್ಗಗಳಿಗೆ 'ಭಾಷೆ' ಇದೆ ಎಂದು ಹೇಳಬಹುದಾದರೂ, ಅದು ಸಹಜ ಪ್ರವೃತ್ತಿಯಾಗಿ ಬಾರದೆ ಕಲಿಕೆಯಿಂದ ಬಂದ ಅಭಿವ್ಯಕ್ತಿಯ ಹೊಸ ಹೊಸ ಅಸಂಖ್ಯಾತ ಘಟಕಗಳನ್ನು ಸೃಷ್ಟಿ ಮಾಡುವ ಸಾಧ್ಯತೆಯನ್ನು ಪಡೆದ ಮಾಧ್ಯಮ ಎನ್ನುವ ಅರ್ಥದಲ್ಲಿ ಭಾಷೆ ಮನುಷ್ಯನ ವಿಶಿಷ್ಟ ಸೃಷ್ಟಿ. ಭಾಷೆಯನ್ನು ರೂಪಿಸಿ ವ್ಯಕ್ತಿಯ ಮತ್ತು ಸಮುದಾಯದ ಬದುಕುಗಳನ್ನು ಕ್ರಾಂತಿಗೊಳಿಸಿದ ಮಾನವನೇ ಭಾಷೆಯ ಮಿತಿಗಳನ್ನು ಕಂಡುಕೊಂಡ. ಕೆಎಲ್. ಗೋಪಾಲ ಕೃಷ್ಣಯ್ಯನವರು ಗುರುತಿಸಿರುವಂತೆ ಪ್ರತೀಕಗಳು ಸೃಷ್ಟಿಸಿದ ಮಾನವ ವರ್ಗದ ವೈಶಿಷ್ಟ್ಯ ಪುರಾಣಗಳು ಮಾನವನು ಬದುಕಿನ ಅನುಭವಗಳನ್ನು ಗ್ರಹಿಸಿ ವ್ಯವಸ್ಥೆಗೊಳಿಸಿಕೊಳ್ಳುವ ಪ್ರಯತ್ನದಲ್ಲಿ ತನ್ನ ಪ್ರತಿಕ್ರಿಯೆಯಾಗಿ ಸೃಷ್ಟಿಸಿದ ರಚನೆಗಳು. ಪುರಾಣಗಳಲ್ಲಿಯೇ ಪ್ರತೀಕಗಳು ಅಡಕವಾಗಿವೆ. ಭಾಷೆ, ಪುರಾಣ, ಮಾನವ ಸಮಾಜ, ಚರಿತ್ರೆ, ಮನಃಶಾಸ್ತ್ರ ಇವುಗಳ ಅಧ್ಯಯನಗಳು ಪರಸ್ಪರ ಬೆಳಕು ಚೆಲ್ಲುತ್ತವೆ. ಸಾಹಿತ್ಯ ವಿಶ್ಲೇಷಣೆಯಲ್ಲಿ ಮನಃಶಾಸ್ತ್ರ ಸಾಹಿತ್ಯ ಮತ್ತು ಇತರ ಜ್ಞಾನಶಾಖೆಗಳು ಪುರಾಣ, ಮಿಥ್, ಪ್ರತೀಕ ಮತ್ತು ಸಾಹಿತ್ಯ ವಿಮರ್ಶೆ ಉಲ್ಲೇಖನಗಳು ಈ ಹಲವು ಅಧ್ಯಯನಗಳು ಪರಸ್ಪರ ಸಂಬಂಧವನ್ನು ಸೈದ್ಧಾಂತಿಕವಾಗಿ ವಿಶ್ಲೇಷಿಸಿವೆ. ಈ ಎಲ್ಲಾ ವಿಶ್ಲೇಷಣೆಗಳಲ್ಲಿ ವಿವೇಚನೆಯ

ನಿಲುವನ್ನೆ ತಳೆಯುತ್ತಾರೆ. ಸಾಹಿತ್ಯದ ಅಧ್ಯಯನದಲ್ಲಿ ಇತರ ಶಿಸ್ತುಗಳ ಬಳಕೆ ಎಷ್ಟು ಲಾಭಕರ ಎನ್ನುವುದೊಂದು ಕ್ಲಿಷ್ಟ ಪ್ರಶ್ನೆ. ಪ್ರತಿಯೊಂದು ಶಾಸ್ತ್ರವು ಮನುಷ್ಯನನ್ನು ಒಂದು ಪಕ್ಕದಿಂದ ಕಾಣುವಾಗ ಅವನ ಸಮಗ್ರ ವ್ಯಕ್ತಿತ್ವವನ್ನು ಅವನ ಬದುಕಿನ ಸಂದರ್ಭದಲ್ಲಿ ಸಾಕ್ಷಾತ್ಕರಿಸಿಕೊಳ್ಳುವ ಸಾಹಿತ್ಯ ಕೃತಿಗೆ ಯಾವುದೇ ಶಾಸ್ತ್ರದ ಜ್ಞಾನವನ್ನು ಒಯ್ಯುವುದರಿಂದ ಪ್ರಯೋಜನ ಎಷ್ಟು ಎಂಬ ಪ್ರಶ್ನೆ ಇದೆ. ಹ್ಯಾಮ್ಲೆಟ್ ತನ್ನ ಚಿಕ್ಕಪ್ಪನನ್ನು ಕೊಲ್ಲುವುದೇಕೆ ಎಂಬ ಪ್ರಶ್ನೆಗೆ ಆಧುನಿಕ ಮನಃಶಾಸ್ತ್ರದ ಉತ್ತರ ೩೫೦ ವರ್ಷಗಳ ನಂತರ ಬಂದಿತು. ಈ ೩೫೦ ವರ್ಷಗಳ ಅವಧಿಯಲ್ಲಿ ಈ ನಾಟಕವನ್ನು ಓದುಗರು, ಪ್ರೇಕ್ಷಕರು ಗ್ರಹಿಸುತ್ತಿರಲಿಲ್ಲ. ಈಗಲಾದರೂ ಈ ವಿವರಣೆ ಕೃತಿಯ ನಮ್ಮ ಅನುಭವದ ಮೇಲೆ ಎಷ್ಟು ಪ್ರಭಾವ ಬೀರಿದೆ? ಹುಚ್ಚಿನ ಹೊಸ್ತಿಲಿನಲ್ಲಿರುವ ಅಥವಾ ಹುಚ್ಚಿಗೆ ತುತ್ತಾದ ಮನಸ್ಸುಗಳ ವ್ಯಾಪಾರಗಳನ್ನು ಶೇಕ್ಸ್‌ಪಿಯರ್ ಚಿತ್ರಿಸಿರುವುದು ಎಷ್ಟು ಸಮರ್ಪಕವಾಗಿದೆ ಎಂದು ಮನಃಶಾಸ್ತ್ರಜ್ಞರು ವಿವರಿಸುತ್ತಾ ಬಂದಿದ್ದಾರೆ. ದೋಸ್ತವಸ್ಕಿ ನಥಾನಿಯಲ್, ಹಾತಾರ್ನ್, ಡಿಕೆನ್ಸ್, ಕಾಫ್ಕಾ ಮೊದಲಾದವರ ಕೃತಿಗಳನ್ನು ಕುರಿತು ವಿಪುಲವಾಗಿ ಮನಃಶಾಸ್ತ್ರೀಯ ಅಧ್ಯಯನಗಳು ಬಂದಿವೆ. ನಮ್ಮಲ್ಲಿ ಕುವೆಂಪು ಅವರ 'ಮನಃಶಾಸ್ತ್ರೀಯ ಹೊಳಹುಗಳು' ವಿಶ್ಲೇಷಣೆಯಾಗಿದೆ. ಇವೆಲ್ಲಾ ಒಂದು ಅಂಶವನ್ನು ಸ್ಪಷ್ಟಪಡಿಸಿವೆ. ಮನಃಶಾಸ್ತ್ರ ಒಂದು ಅಧ್ಯಯನವಾಗುವ ಮುನ್ನವೇ ಸೃಜನಾತ್ಮಕ ಪ್ರತಿಭೆ ಮನುಷ್ಯನ ಸ್ವಭಾವವನ್ನು ಆಳವಾಗಿ ಒಳಹೊಕ್ಕು ಅದರ ವೈಚಿತ್ರ್ಯ, ವೈಪರೀತ್ಯಗಳನ್ನು ಕಂಡಿತ್ತು. ಇಂದೂ ಈ ಪ್ರತಿಭೆ ಹೀಗೆ ಕೆಲಸ ಮಾಡುತ್ತಿದೆ. ಆದರೆ ಇತರ ಶಿಸ್ತುಗಳ ವಿವರಣೆಗಳಿಂದ ಸಾಹಿತ್ಯದ ಅಧ್ಯಯನಕ್ಕೆ ಎಷ್ಟು ಪ್ರಯೋಜನವಾಗಿದೆ? ಪ್ರಾಚೀನ ಗ್ರೀಸ್‌ನ ಮೊದಲ ನಾಟಕಕಾರನಾದ ಈಸ್ಕಿಲಸ್‌ನ ನಾಟಕಗಳನ್ನು ಒಂದು ಸಮುದಾಯವು ನಾಗರಿಕತೆಯನ್ನು ಸಾಧಿಸುವ ಪ್ರಕ್ರಿಯೆಯ ಕಿಡಿಗಳನ್ನಾಗಿ ಅಧ್ಯಯನ ಮಾಡಿರುವುದುಂಟು. ಆದ್ದರಿಂದ ಆ ನಾಟಕಗಳು ನೀಡುವ ಅನುಭವಕ್ಕೆ ಹೊಸ ಆಯಾಮ ಬಂದಿದೆಯೆ? ಸಾಹಿತ್ಯ ಅಧ್ಯಯನವು ಇತಿಹಾಸ, ಸಮಾಜಶಾಸ್ತ್ರ, ಮಾನವ ಸಮಾಜಶಾಸ್ತ್ರ, ಮನಃಶಾಸ್ತ್ರ ಮೊದಲಾದ ಶಿಸ್ತುಗಳಗೆ ನೆರವಾದಂತೆ ಇತರ ಶಿಸ್ತುಗಳು ಸಾಹಿತ್ಯ ಅಧ್ಯಯನ ಮತ್ತು ವಿಮರ್ಶೆಗಳಿಗೆ ನೆರವಾಗುತ್ತವೆಯೇ? "ಸಾಹಿತ್ಯ ವಿಶ್ಲೇಷಣೆಯಲ್ಲಿ ಮನಃಶಾಸ್ತ್ರ" ಲೇಖನವು ಈ ಪ್ರಶ್ನೆಗೆ ನೇರವಾದ ಉತ್ತರವನ್ನು ನೀಡಿಲ್ಲ. ಪ್ರಾರಂಭದಲ್ಲೇ ಲೇಖಕರು, ಸಾಹಿತ್ಯ ಹಾಗೂ ಮನಃಶಾಸ್ತ್ರಗಳ ಸಂಬಂಧದ ವಿಸ್ತಾರ ಚರ್ಚೆಗೆ ಕೈ ಹಾಕಿದೆ ಎಂದು ಹೇಳಿರುವುದನ್ನು ಗಮನಿಸಬಹುದು. ಆದರೆ ಸಾಹಿತ್ಯ ಮತ್ತು ಇತರ ಜ್ಞಾನ ಶಾಖೆಗಳು ಲೇಖನದಲ್ಲಿ ಕೆ.ಎಲ್. ಗೋಪಾಲಕೃಷ್ಣಯ್ಯನವರು ಇದನ್ನು ವಿವೇಚಿಸಿದ್ದಾರೆ. ಏಕೆಂದರೆ ಈ ಲೇಖನದ ಸಾಕಷ್ಟು ಭಾಗವು ಮನಃಶಾಸ್ತ್ರಕ್ಕೆ ಮೀಸಲಾಗಿರುವುದು ಇಂದು ಜ್ಞಾನದ ವಿವಿಧ ಶಾಖೆಗಳು ಒಂದರೊಡನೊಂದು ಹೆಣೆದುಕೊಂಡಿರುವುದನ್ನು ಮನದಟ್ಟು ಮಾಡಿಕೊಡುತ್ತದೆ. ಈ ಕೃತಿಯಲ್ಲಿ

ಆಗಾಗ ಹೆಸರಿಸುವ ಒಬ್ಬ ವಿಮರ್ಶಕ ನಾಥ್ರಾಪ್ ಫ್ರೈ. ಮಿಥ್ ಮತ್ತು ಸಾಹಿತ್ಯ ವಿಮರ್ಶೆಗಿರುವ ಸಂಬಂಧವನ್ನು ಹೀಗೆ ಸಂಗ್ರಹವಾಗಿ ಹೇಳಲಾಗಿದೆ. ಒಟ್ಟು ಸಂಗ್ರಹದಲ್ಲಿ ಕೆ.ಎಲ್. ಗೋಪಾಲ ಕೃಷ್ಣಯ್ಯ ಅವರು ಯೂಂಗ್‌ನ ಕೆಲವು ಪರಿಕಲ್ಪನೆಗಳನ್ನು, ವಿಮರ್ಶೆಯನ್ನು ಮತ್ತೆ ಮತ್ತೆ ಪ್ರಸ್ತಾಪಿಸುತ್ತಾರೆ. ಹಾಗೆಯೇ ಈ ಲೇಖನಗಳಲ್ಲಿ ಅವು ಅನೇಕ ಬಾರಿ ಪುನರಾವೃತ್ತಿಯಾಗಿವೆ. ಪಾಶ್ಚಾತ್ಯ ಸಾಹಿತ್ಯ ಯೂಂಗ್‌ನ ಚಿಂತನೆಗೆ ಕೊಟ್ಟ ಪ್ರಾಧಾನ್ಯತೆ ತುಸು ಹೆಚ್ಚಾಯಿತು ಎನ್ನಬಹುದು. ಆದರೆ ಮಿಸ್ ಬಾಡ್‌ಕಿನ್, ನಾಥ್ರಾಪ್ ಪ್ರೈ ಮೊದಲಾದ ಪ್ರಥಮ ಪಂಕ್ತಿಯ ವಿಮರ್ಶಕರ ವಿಮರ್ಶೆಯನ್ನು ಯೂಂಗ್ ರಚಿಸಿದ ಅಸ್ತಿಭಾರವು ಸಾಧ್ಯಮಾಡಿಕೊಂಡಿತು. ಕೆ.ಎಲ್. ಗೋಪಾಲ ಕೃಷ್ಣಯ್ಯನವರು ಪಾಶ್ಚಾತ್ಯ ವಿಮರ್ಶೆಯ ಒಂದು ಮುಖ್ಯ ಪಂಥವನ್ನು ವಿವರವಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಅದರ ಉಪಯುಕ್ತತೆಯನ್ನು ಹಲವು ಕನ್ನಡ ಕೃತಿಗಳ ವಿಶ್ಲೇಷಣೆಯ ಮೂಲಕ ತೋರಿಸಿಕೊಟ್ಟಿದ್ದಾರೆ. ಪ್ರತೀಕಗಳ ಅಧ್ಯಯನ ಇಂದು ಸಾಹಿತ್ಯದ ಅಧ್ಯಯನದ ಮುಖ್ಯ ಭಾಗಗಳಲ್ಲಿ ಒಂದಾಗಿದೆ. ಕೆ.ಎಲ್ ಗೋಪಾಲ ಕೃಷ್ಣಯ್ಯ ಅವರ ಈ ಸಂಕಲನ ಸಾಹಿತ್ಯ ಕೃತಿಗಳ ಮನಶಾಸ್ತ್ರ ಸ್ವರೂಪವನ್ನು ಕುರಿತು ಯೋಚಿಸಲು ಅಗತ್ಯವಾದ ತಿಳುವಳಿಕೆಯನ್ನು, ಪ್ರಚೋದನೆಯನ್ನು ಕೊಡುತ್ತದೆ.

ವಿವಿಧ ಲೇಖಕರು, ಸಂಪಾದಕರು ಜಿ.ಎಸ್. ಶಿವರುದ್ರಪ್ಪ : ಸಾಹಿತ್ಯ ಮತ್ತು ಮನೋವಿಜ್ಞಾನ

ಟಿ.ಪಿ.ಅಶೋಕ್

ಈ ಲೇಖನವು ಜಗತ್ತಿನ ಮೂರು ಅತ್ಯಂತ ಶೇಷ್ಠ ಕೃತಿಗಳೆಂದೆನಿಸಿದ, ಈಡಿಪಸ್ ಹ್ಯಾಮ್ಲೆಟ್ ಮತ್ತು ಬ್ರದರ್ಸ್ ಕರಮ್‌ಜೊವ್ ಕೃತಿಗಳ ವಸ್ತುಗಳನ್ನಾಧರಿಸಿ ಸಿಗ್ಮಂಡ್ ಫ್ರಾಯ್ಡ್ ತನ್ನ ಮನೋ ವಿಶ್ಲೇಷಣಾ ಸಿದ್ಧಾಂತವನ್ನು ಅನ್ವಯಿಸಿ ಹೇಳಿರುವ ಬಗ್ಗೆ ಚರ್ಚಿಸುತ್ತದೆ. ಫ್ರಾಯ್ಡ್ ನಂಬಿಕೆಯಂತೆ ಮನುಷ್ಯ ಮಟ್ಟದಲ್ಲಿ ಕೆಲವು ಲೈಂಗಿಕ ಪ್ರವೃತ್ತಿಗಳು ಸುಪ್ತಪ್ರಜ್ಞೆಯಲ್ಲಿ ಬೇರುಬಿಟ್ಟಿರುವುದು. ಆ ಕಾರಣದಿಂದಲೇ ಅವನ ಅನೇಕ ಪ್ರಕ್ರಿಯೆಗಳಲ್ಲಿ ಈ ಪ್ರವೃತ್ತಿಗಳ ಪ್ರಭಾವವನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಕೆಲ ಸಾಹಿತ್ಯ ಕೃತಿಗಳನ್ನು ಫ್ರಾಯ್ಡ್ ಅವಲೋಕಿಸಿರುವ ರೀತಿ ಸಾಹಿತ್ಯ ವಿಮರ್ಶೆಯ ದೃಷ್ಟಿಯಿಂದ ಹೇಗೆ ಕುತೂಹಲಕಾರಿಯಾಗಿ ಕಾಣುತ್ತದೆ ಎಂಬುದನ್ನು ಈ ಲೇಖನವು ಚರ್ಚಿಸಿದೆ.

ಇಲ್ಲಿ ಈಡಿಪಸ್ ತನ್ನ ತಂದೆಯನ್ನು ಕೊಂದು ತಾಯಿಯನ್ನು ಮದುವೆಯಾಗಿ ಆಕೆಯಿಂದ ಮಕ್ಕಳನ್ನು ಪಡೆಯುತ್ತಾನೆ. ಈಡಿಪಸ್‌ನ ಸುಪ್ತ ಮನಸ್ಸಿನ ಆಕಾಂಕ್ಷೆಗಳು ಭವಿಷ್ಯವಾಣಿಯ ಅನಿವಾರ್ಯ ಮೂರ್ತೀಕರಣದಲ್ಲಿ ನಿಜವಾಗುವುದು ಫ್ರಾಯ್ಡ್‌ನ ಮನೋವಿಶ್ಲೇಷಣಾತ್ಮಕ ಸಿದ್ಧಾಂತವನ್ನು ಎತ್ತಿ ತೋರಿಸುತ್ತದೆ ಎಂಬುದಾಗಿ ಈ ಲೇಖನವು ಚರ್ಚಿಸುತ್ತದೆ. ಈಡಿಪಸ್ ಪಾಪಗಳನ್ನು ಅರಿವಿಲ್ಲದೇ ಮಾಡಿದುದು ವಿಧಿಯ ಕೈವಾಡ, ದೈವೇಚ್ಛೆ. ಹೀಗೆ ತನ್ನ ಘೋಷಿತ ಧೋರಣೆಗಳನ್ನು ಮನುಷ್ಯನ ಮೂಲಭೂತ ಪ್ರವೃತ್ತಿಗಳ ಮೂಲಕ ಹೊರಹಾಕುತ್ತಾನಾದರೂ

ಇದನ್ನು ಒಂದು ಇತ್ಯಾತ್ಮಕ ಅಂಶವಾಗಿ ಫ್ರಾಯ್ಡ್ ಒಪ್ಪಿಕೊಳ್ಳುವುದಿಲ್ಲ. ಈಡಿಪಸ್‌ನ ಕ್ರಿಯೆಗಳ ಶೋಧನೆ ಮನೋವಿಶ್ಲೇಷಣೆಯ ರೀತಿಯನ್ನು ಹೋಲುವುದೆಂದು ಈಡಿಪಸ್‌ನ ಕನಸಿನ ವಿಶ್ಲೇಷಣೆ ಮಾಡುತ್ತಾ ಫ್ರಾಯ್ಡ್ ಅಭಿಪ್ರಾಯ ಪಡುತ್ತಾನೆ. ಇಲ್ಲಿ ಬರುವ ಭವಿಷ್ಯವಾಣಿ ಈಡಿಪಸ್‌ನ ಸುಪ್ತ ಮನಸ್ಸಿನ ಆಕಾಂಕ್ಷೆಗಳನ್ನು ಬೇರೆ ರೀತಿಯಲ್ಲೇ ನಮ್ಮ ಮುಂದಿಡುತ್ತಾರೆ. ಇಲ್ಲಿ ಫ್ರಾಯ್ಡ್ ಮನುಷ್ಯ ತನ್ನ ಸುಪ್ತ ಪ್ರಜ್ಞೆಯಲ್ಲಿ ಅದುಮಿಟ್ಟು ಅದನ್ನು ಗೆದ್ದಿರುವೆನೆಂಬ ಸಂತೋಷದಲ್ಲಿ ಇದ್ದಾಗಲೂ ಪಾಪ ಪ್ರಜ್ಞೆಯ ಮೂಲಕ ಅವುಗಳ ಜವಾಬ್ದಾರಿಯನ್ನು ಹೊರಲೇಬೇಕಾಗುತ್ತದೆ. ಹೀಗೆ ಫ್ರಾಯ್ಡನ ಮನೋವಿಶ್ಲೇಷಣೆಯಲ್ಲಿ ಎರಡು ಪ್ರಮುಖ ಅಂಶಗಳನ್ನು ಗುರುತಿಸಬಹುದಾಗಿದೆ. ನಾಟಕದ ಧೋರಣೆ, ಪರಿಣಾಮಗಳನ್ನು ಕುರಿತಂತೆ ಓದುಗರನ್ನು ಮತ್ತೊಂದು ಹೊಸ ಸಾಧ್ಯತೆಯತ್ತ ಫ್ರಾಯ್ಡ್ ಆಹ್ವಾನಿಸುತ್ತಿದ್ದಾನೆ ಮತ್ತು ಈ ಪರಿಣಾಮಕ್ಕೂ ಪರಿಣಾಮವನ್ನುಂಟು ಮಾಡುವ ನಾಟಕದ ರಚನೆಗೂ ಇರುವ ಸಂಬಂಧಗಳನ್ನೂ ಫ್ರಾಯ್ಡ್ ಗುರುತಿಸುತ್ತಿದ್ದಾನೆ.

ಒಟ್ಟಾರೆ ಈ ಲೇಖನವು ಮನಃಶಾಸ್ತ್ರೀಯ ಅಧ್ಯಯನದ ದೃಷ್ಟಿಕೋನದಲ್ಲಿ ನೋಡುವವರಿಗೆ ಕೇವಲ ಫ್ರಾಯ್ಡ್‌ನ ಮನೋವಿಶ್ಲೇಷಣೆಯ ಮೂಲಕವೇ ದಾರಿ ತೋರುವ ಪ್ರಯತ್ನ ಮಾಡುತ್ತಿದ್ದಾರೆ. ಇದು ಸಾಹಿತ್ಯವನ್ನು ಮನಃಶಾಸ್ತ್ರೀಯ ದೃಷ್ಟಿಕೊನದಲ್ಲಿ ನೋಡಲು ಸಹಾಯಕವಾಗುತ್ತದೆ.

೩. ಸಾಹಿತ್ಯ ಸಮೀಕ್ಷೆ: ಸಮಗ್ರ ಸಾಹಿತ್ಯ: ಸಂಪುಟ–೨ : ವಿಚಾರ ಸಾಹಿತ್ಯ ಮನೋವಿಜ್ಞಾನ-ರೂಪುರೇಷೆಗಳು

ಗೌರೀಶ ಕಾಯ್ಕಿಣಿ ಅವರ ಸಮಗ್ರ ಸಾಹಿತ್ಯ ಸಂಪುಟ ೨ರಲ್ಲಿನ ವಿಚಾರ ಸಾಹಿತ್ಯ: ಮನೋವೈಜ್ಞಾನಿಕ ಬರಹಗಳು, ಗೌರೀಶರ ನಾಲ್ಕು ಪುಸ್ತಕಗಳು ಹಾಗೂ ಲೇಖನ ಮಾಲೆಯೊಂದರ ಕೆಲವು ಭಾಗಗಳನ್ನು ಒಳಗೊಂಡಿದೆ. ಮನೋವಿಜ್ಞಾನ: ರೂಪುರೇಷೆ (ಇದು ಗೌರೀಶರ ಮೊಟ್ಟ ಮೊದಲ ಪ್ರಕಟಿತ ಗ್ರಂಥ, ೧೯೪೨), ಜೀವನ ವಿಜ್ಞಾನ (೧೯೪೩ರಲ್ಲಿ ಮೊದಲು ಪ್ರಕಟವಾದಾಗ ಇದರ ಹೆಸರು 'ಬಾಳಿನ ಗುಟ್ಟು' ಎಂದಿತ್ತು), ಗಂಡು–ಹೆಣ್ಣು ಹಾಗೂ ಪ್ರೀತಿ ನಲವತ್ತರ ದಶಕದಲ್ಲಿ ಬಂದ ಮನೋವೈಜ್ಞಾನಿಕ ಕೃತಿಗಳಾಗಿವೆ. 'ಗ್ರೀಕ್ ದಾರ್ಶನಿಕರು ಮೂಲತಃ 'ಆರಾಧನೆ' ಮಾಸಿಕದಲ್ಲಿ ೧೯೬೫ರಲ್ಲಿ ಬಂದ 'ಪಾಶ್ಚಾತ್ಯ ದರ್ಶನ ವಿಚಾರ' ಲೇಖನ ಮಾಲೆಯ ಭಾಗವಾಗಿದೆ. ಬಹುಶಃ ಈ ಮನೋವೈಜ್ಞಾನಿಕ ಕೃತಿಗಳ ಜೊತೆಯಲ್ಲಿ ಪಾಶ್ಚಾತ್ಯ ತತ್ವಶಾಸ್ತ್ರಜ್ಞರನ್ನು ಪರಿಚಯಿಸುವ ಸಮಗ್ರ ಲೇಖನ ಮಾಲೆಗಳನ್ನು ಕಾಣಬಹುದು. ಇದಲ್ಲದೆ ಗೌರೀಶರು 'ಮಾನವ ಜೀವನದ ದಶಾಂತರಗಳು', 'ಸಾಹಿತ್ಯ ಮತ್ತು ಮನೋವಿಜ್ಞಾನ', 'ಕೀಳರಿಮೆ' ಎಂಬ ಲೇಖನಗಳನ್ನು ಬರೆದಿದ್ದಾರೆ.

ಪ್ರಸ್ತುತ ಸಂಪುಟದಲ್ಲಿರುವ ಮನೋವೈಜ್ಞಾನಿಕ ಬರಹಗಳು ಇಂದು ಜೀವನ ಮತ್ತು ಜ್ಞಾನ ಇವುಗಳ ನಡುವೆ ಅಂತರವು ಅಗಲವಾಗುತ್ತಾ ಹೋಗಿರುವುದನ್ನು ಕುರಿತ ಕಳಕಳಿಯನ್ನು

ಹೊಂದಿವೆ. ಸುಶಿಕ್ಷಿತರಲ್ಲೂ ಸಹಿತ ವಿಚಾರವಂತರು ಕಡಿಮೆ ಎನ್ನುವುದು ಅವರಿಗೆ ಒಪ್ಪಿಗೆಯಾಗದ ಬೆಳವಣಿಗೆ. ಹೊಸ ಬದುಕು ಬಾಳಲು ಹೋಗುತ್ತಿರುವ ಹಳೆಯ ಜನಾಂಗ ಮನೋದಾಸ್ಯದಿಂದ ಬಿಡುಗಡೆಗೊಳ್ಳಬೇಕು ಹಾಗೂ ಸುಶಿಕ್ಷಿತರ ವೈಚಾರಿಕ ಪಾತಳಿಯು ಹೆಚ್ಚುವಂತೆ, ಅಶಿಕ್ಷಿತರಿಗೂ ವೈಚಾರಿಕ ಸಂಸ್ಕಾರ ಸಾಗುವಂತೆ ವಿಚಾರ ಸಾಹಿತ್ಯವನ್ನು ಆದಷ್ಟು ಜನಪ್ರಿಯಗೊಳಿಸುವುದು ಮಾತ್ರವೇ ಮನೋದಾಸ್ಯವನ್ನು ತೊಡೆಯಬಲ್ಲ ಮದ್ದಾಗಬಲ್ಲದು ಎಂಬುದು ಅವರ ಸ್ಪಷ್ಟ ಅಭಿಪ್ರಾಯ. ಅಂತೆಯೇ ಈ ಸಂಪುಟದಲ್ಲಿರುವ ಎಲ್ಲಾ ಕೃತಿಗಳೂ ಸಾಮಾನ್ಯ ಓದುಗನನ್ನು ಲಕ್ಷ್ಯದಲ್ಲಿರಿಸಿಕೊಂಡ ಶೈಕ್ಷಣಿಕ ಉದ್ದೇಶದ ಬರಹಗಳಾಗಿವೆ.

ಮನೋವಿಜ್ಞಾನ: ರೂಪುರೇಷೆ (೧೯೪೨) ಈ ಪುಸ್ತಕದ 'ಮನೋವಿಜ್ಞಾನ ವಿಕಾಸ' ಎಂಬ ಮೊದಲ ಅಧ್ಯಾಯವು ಪ್ಲೇಟೋ, ಅರಿಸ್ಟಾಟಲ್‌ರಿಂದ ಹಿಡಿದು ೧೯ನೇ ಶತಮಾನದ ಉತ್ತರಾರ್ಧದಲ್ಲಿ ಮನೋವಿಜ್ಞಾನವು ಒಂದು ಪ್ರತ್ಯೇಕ ಜ್ಞಾನಶಾಖೆಯಾಗಿ ರೂಪುಗೊಳ್ಳುವವರೆಗಿನ ಸುದೀರ್ಘ ಅವಧಿಯಲ್ಲಿ ಪಾಶ್ಚಾತ್ಯ ತತ್ವಜ್ಞಾನಿಗಳು, ಚಿಂತಕರು ಮನಸ್ಸನ್ನು ಕುರಿತು ಮಾಡಿರುವ ಚರ್ಚೆ ಹಾಗೂ ವಿಮರ್ಶೆಯ ಸ್ಥೂಲ ಪರಿಚಯವನ್ನು ಮಾಡಿಕೊಡುತ್ತದೆ. ಮುಂದಿನ ಅಧ್ಯಾಯಗಳಲ್ಲಿ ಮನೋವಿಜ್ಞಾನದ ವಿವಿಧ ಶಾಖೆಗಳಾದ Behaviourism (ವರ್ತನಾವಾದಿ ಮನೋವಿಜ್ಞಾನ), Hormic times (ಹೇತುತ್ವವಾದಿ ಮನೋವಿಜ್ಞಾನ), Neogentics (ಬುದ್ಧಿಸ್ವರೂಪ ಮನೋವಿಜ್ಞಾನ) ಹಾಗೂ Gestalt Psychology (ಗೆಸ್ಟಾಲ್ಟ್ ಮನೋವಿಜ್ಞಾನ). ಇವುಗಳ ಪ್ರಮುಖ ಸಿದ್ಧಾಂತಗಳ ಹಾಗೂ ಶಿಕ್ಷಣ, ವೈದ್ಯಕೀಯ, ಅಪರಾಧಶಾಸ್ತ್ರ ಮೊದಲಾದ ಕ್ಷೇತ್ರಗಳಲ್ಲಿ ಈ ಸಿದ್ಧಾಂತಗಳು ಹೇಗೆ ಬಳಕೆಯಾಗಿವೆ ಎಂಬುದರ ಪರಿಚಯವಿದೆ. ಕೊನೆಯ ಅಧ್ಯಾಯದಲ್ಲಿ ಮನೋವಿಶ್ಲೇಷಣೆ ಶಾಸ್ತ್ರ (Psychoanalysis and Analytical Psychology) ರೂಪುರೇಷೆಯನ್ನು ಚರ್ಚಿಸಲಾಗಿದೆ.

ಇಲ್ಲಿ ಈ ಬರಹಗಳಲ್ಲಿ ಆಧುನಿಕ ಓದುಗರಲ್ಲಿ ಕುತೂಹಲ ಮೂಡಿಸುವ ಸಂಗತಿ ಎಂದರೆ ವ್ಯಕ್ತಿಗಳ ನಡುವೆ ಹಾಗೂ ಸಮುದಾಯಗಳ ನಡುವೆ ಇರುವ ಭಿನ್ನತೆಗಳನ್ನು ಗುರುತಿಸಿ ವಿಶ್ಲೇಷಿಸುವ (Differential Psychology)ಯಲ್ಲಿ ಒಂದು ಕಿರುಧಾರೆಯಾಗಿರುವ ಸ್ಪಿಯರ್‌ಮನ್‌ನ ನಿಯೋಜೆನೆಟಿಕ್ ಸಿದ್ಧಾಂತಕ್ಕೆ ಪ್ರತ್ಯೇಕ ಪ್ರಸ್ಥಾನದ ಗೌರವವನ್ನು ಗೌರೀಶರು ನೀಡಿರುವುದು. ವಿಚಾರವಾದಿಯಾಗಿ ಹಾಗೂ ಶಿಕ್ಷಕರಾಗಿ ಬುದ್ಧಿಯ ಸ್ವರೂಪ ಹಾಗೂ ಬುದ್ಧಿಪರೀಕ್ಷಾ ಪದ್ಧತಿಗಳಲ್ಲಿ ಅವರಿಗಿರುವ ವಿಶೇಷ ಆಸಕ್ತಿಯು ಇದಕ್ಕೆ ಕಾರಣವಾಗಿರಬಹುದಾಗಿದೆ.

ಫ್ರಾಯ್ಡ್‌ನ ಮನೋವಿಶ್ಲೇಷಣಾ ಸಿದ್ಧಾಂತವನ್ನು ಸಮಗ್ರವಾಗಿ ಒಪ್ಪದೇ ಅವನಿಂದ ಬೇರೆಯಾದ ಆಲ್‌ಫ್ರೆಡ್ ಆ್ಯಡ್ಲರ್‌ನ ಕೀಳರಿಮೆಯ ತತ್ವ (Inferirority Complex)ವನ್ನು ವಿಸ್ತಾರವಾಗಿ ಪರಿಚಯಿಸುವ ಪ್ರಯತ್ನ ವ್ಯಕ್ತಿ ಮನೋವಿಜ್ಞಾನ (೧೯೪೩) ಕೃತಿಯಲ್ಲಿ ಮಾಡಲಾಗಿದೆ. ಈ

ಪುಸ್ತಕಗಳು ಬಹುಶಃ ಕನ್ನಡದಲ್ಲಿ ಮನಃಶಾಸ್ತ್ರದ ಪಠ್ಯಪುಸ್ತಕ ರಚನೆಯ ಆರಂಭಿಕ ಯತ್ನಗಳು. ಹೀಗಾಗಿ ಇಲ್ಲಿ ಗೌರೀಶರು ಕನ್ನಡದಲ್ಲಿ ಮನಃಶಾಸ್ತ್ರದ ಪಾರಿಭಾಷಿಕ ಪದಗಳನ್ನು ಹೊಸತಾಗಿ ಟಂಕಿಸುವ ಸಂಕೀರ್ಣ ಪರಿಕಲ್ಪನೆಗಳನ್ನು ಅನುವಾದಿಸುವ ಸಮಸ್ಯೆಯನ್ನು ಎದುರಿಸಿದ್ದಾರೆ. ಇದರಲ್ಲಿ ಅವರು ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದರು ಎಂಬುದನ್ನು ಆ ಶಾಸ್ತ್ರದಲ್ಲಿ ಪರಿಣಿತರಾದವರು ಚರ್ಚಿಸಬಹುದಾಗಿದೆ. ಮನೋವೈಜ್ಞಾನಿಕ ಶಬ್ದಕೋಶ ರಚನೆಗಂತೂ ಕೃತಿಗಳು ಅಪರೂಪದ ಆಕರ ಗ್ರಂಥಗಳಾಗಬಲ್ಲವು.

ಈ ಬರಹವು ಈ ಕೆಳಕಂಡ ವಿಷಯಗಳನ್ನು ಸ್ಥೂಲವಾಗಿ ಚರ್ಚಿಸಿದೆ.

ಮನೋವಿಜ್ಞಾನವು ಶಾಸ್ತ್ರವೇ?

ಮನೋವಿಜ್ಞಾನದ ಪ್ರಾಚೀನತೆ.

ಮನೋವಿಜ್ಞಾನವೂ, ಗ್ರೀಕ್ ದಾರ್ಶನಿಕ ಪ್ಲೇಟೊ, ಅರಿಸ್ಟಾಟಲರು.

ಮನೋವಿಜ್ಞಾನದ ಸಂಶೋಧನ ಪದ್ಧತಿ.

ಮಧ್ಯಯುಗವೂ, ಪುನರುಜ್ಜೀವನ ಕಾಲವೂ

ಹಬ್ಸ್‌ನೂ, ಡೆಕ್ಕಾರ್ಟೆಯೂ

ಮನೋವಿಜ್ಞಾನವೂ, ಜರ್ಮನ್ ದಾರ್ಶನಿಕರೂ (ಸಂವೇದನಾತ್ಮಕ ದ್ರವ್ಯವಿಚಾರ).

ಮನೋವಿಜ್ಞಾನದ ಮೇಲೆ ಶರೀರಶಾಸ್ತ್ರ ಮತ್ತು ಉತ್ಕ್ರಾಂತಿವಾದಗಳ ಪರಿಣಾಮ.

ಲಾಕ್ ಮತ್ತು ಹ್ಯೂಮ್

ಪ್ರಾಯೋಗಿಕ ಮನೋವಿಜ್ಞಾನವೂ, ವಿಲಿಯಂ ಜೇಮ್ಸ್‌ನ ಪ್ರಭಾವವೂ.

ಪರಾವರ್ತನ ಕ್ರಿಯೆಯೂ, ವರ್ತನವಾದವೂ.

ಮನೋವಿಜ್ಞಾನದ ಪ್ರತಿಕ್ರಿಯೆಯ ಮಾದರಿಗಳು.

ವರ್ತನವಾದಿ ಮನೋವಿಜ್ಞಾನವೂ ಮತ್ತು ಹೇತುತ್ವವಾದೀ ಸಂಪ್ರದಾಯವೂ.

ಪ್ರಚೋದನೆ ಪ್ರತಿಕ್ರಿಯೆಗಳ ಕಟ್ಟಡವೂ, ನಿಸ್ಸಂಕೇತೀಕರಣವೂ.

ವರ್ತನವಾದಿಗಳಿಗೂ ಇತರ ಮನೋವಿಜ್ಞಾನಿಗಳಿಗೂ ಇರುವ ಮುಖ್ಯ ಮತಭೇದ.

ಮ್ಯಾಕ್‌ಡುಗಲ್‌ನ ಮೂಲ ಪ್ರವೃತ್ತಿಗಳು.

ಹೇತುವಾದ ಮತ್ತು ವರ್ತನಾವಾದಗಳ ತುಲನೆ.

ವ್ಯಕ್ತಿಯ ಮನೋವ್ಯಾಪರಕ್ಕೆ ಸಾಮಾಜಿಕ ತಡೆಗಳು.

ಬುದ್ಧಿಯ ಸ್ವರೂಪ, ಜ್ಞಾನಮೂಲದ ಮೂರು ನಿಯಮಗಳು.

ಬುದ್ಧಿ ಎಂದರೇನು? ಮತ್ತು ಬುದ್ಧಿ ಪರೀಕ್ಷೆಯ ಪದ್ಧತಿಗಳು.

ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಬುದ್ಧಿಪರೀಕ್ಷೆಗಳ ಉಪಯೋಗ.

ಗೆಸ್ಟಾಲ್ಟ್ ಮನೋವಿಜ್ಞಾನ (ರೂಪಕ ಮನೋವಿಜ್ಞಾನ).

ಶಿಕ್ಷಣ ಕ್ಷೇತ್ರದಲ್ಲಿ ಮನೋವಿಜ್ಞಾನ.

ವೈದ್ಯಕೀಯ ಕ್ಷೇತ್ರದಲ್ಲಿ ಮನೋವಿಜ್ಞಾನ.

ಅಪರಾಧಗಳನ್ನು ತಿದ್ದುವ ಕ್ಷೇತ್ರದಲ್ಲಿ.

ಮನೋವಿಶ್ಲೇಷಣಾ ಶಾಸ್ತ್ರ.

ಮನೋವಿಶ್ಲೇಷಣೆ, ಮನಸ್ಸಿನ ರಚನೆ, ಚಟಗಳನ್ನು ಬಿಡಿಸುವಲ್ಲಿ ಮನೋವಿಜ್ಞಾನ.

ಯೂಡಿಪಸ್ (ಮನೊಗಂಡ)

ಮನೋವಿಶ್ಲೇಷಣಾತಂತ್ರದ ಪೂರ್ವಕಥೆ.

ಸ್ವಪ್ನ ಮೀಮಾಂಸೆ, ಕನಸಿನಕಟ್ಟು

ವಿಸ್ಮೃತಿ ಮೀಮಾಂಸೆ

ಯೂಂಗ್‌ನ ತತ್ವಗಳು

ಈ ಎಲ್ಲಾ ಚರ್ಚೆಗಳಲ್ಲಿ ಮನೋವಿಜ್ಞಾನದ ವಿವಿಧ ಶಾಖೆಗಳು ಮತ್ತು ಅವುಗಳ ಕುರಿತಾದ ಶಾಸ್ತ್ರೀಯ ತಳಹದಿಯನ್ನು ಕುರಿತು ಚರ್ಚಿಸಿದ್ದಾರೆ. ಮನೋವಿಜ್ಞಾನದ ಪ್ರತಿಯೊಂದು ವಿಭಾಗವೂ ಮನಸ್ಸಿನ ಕುರಿತೇ ಚರ್ಚಿಸುತ್ತದೆ, ವಿಶ್ಲೇಷಿಸುತ್ತದೆ. ಆದರೂ ವರ್ತನವಾದಿಗಳು ವಹಿಸುವ ಕೇವಲ ಶರೀರ ಪ್ರಧಾನವಾದ ಆತ್ಯಂತಿಕ ಭೂಮಿಕೆಯನ್ನು ಕೆಲವೇ ಮನೋವಿಜ್ಞಾನಿಗಳು ಮಾನ್ಯ ಮಾಡುವರು. ಮಾನವನ ಆಂತರಿಕ ಸ್ವಯಂ ಪ್ರೇರಣೆಯ ಕುರಿತು ಇನ್ನೂ ಚೆನ್ನಾಗಿ ಮನವರಿಕೆ, ಅರಿವು ಆಗಿರದಿದ್ದರೂ ಅಂತಹ ಒಂದು ಶಕ್ತಿಯುಂಟೆಂದು ಆಧುನಿಕ ಮನೋವಿಜ್ಞಾನಿಗಳು ಒಪ್ಪಿಕೊಳ್ಳುವುದನ್ನು ಕುರಿತು ಇಲ್ಲಿ ಹೇಳುತ್ತಾರೆ. ಹೀಗೆ ಹೇಳುತ್ತಾ ಗೌರೀಶರು ಮನೋವಿಜ್ಞಾನದ ವಿಕಾಸದ ದಾರಿಯುದ್ದಕ್ಕೂ ಹಿಂದಿನ ವಾದಗಳು ಮತ್ತೆ ಮತ್ತೆ ಹೊಸ ರೂಪತಾಳಿ ಗೋಚರವಾಗುತ್ತಿರುವುದು ಏಕೆ ಎಂದು ಪ್ರಶ್ನಿಸುತ್ತಾರೆ. ಪ್ಲೇಟೋ, ಅರಿಸ್ಟಾಟಲ್, ಲಾಕ್, ಡೆಕಾರ್ಟೆ, ಡಾರ್ವಿನ್, ವಿಲಿಯಂ ಜೇಮ್ಸ್, ಪಾವ್‌ಲೋವ್, ಕೋಹ್ಲರ್ ಹೀಗೆ ಅನೇಕರ ವಿಚಾರಧಾರೆಗಳು ಕಾಲಕಾಲಕ್ಕೆ ಹೊಸ ಹೊಸ ಮಾದರಿಯಾಗಿ ಅಥವಾ ಧಾರೆಯಾಗಿ ಹರಿದುಬರುತ್ತಿರುವುದು ಸ್ಪಷ್ಟವಾಗಿ ಚಿತ್ರಿಸಲಾಗಿದೆ. ತತ್ವಜ್ಞಾನದಲ್ಲಿಯ ಪ್ರವೃತ್ತಿ–ನಿವೃತ್ತಿ ಮಾರ್ಗಗಳಂತೆ ಮನೋವಿಜ್ಞಾನದಲ್ಲಿಯೂ ಎರಡು ವಿಚಾರಧಾರೆಗಳು ಹರಿದು ಬಂದುದನ್ನು ಕುರಿತು ಹೇಳುತ್ತಾರೆ. ಆಗಾಗ ಅವೆರಡರ ನಡುವೆ ನಡೆಯುವ ತಿಕ್ಕಾಟಗಳು ಮೊದಲಿಗಿಂತ ಮುಂದುವರಿದ ಪಾತಳಿಯಲ್ಲಿ

ನಡೆಯುತ್ತಾ ಸಾಗಿರುವುದು ನಮಗೆ ತಿಳಿದುಬರುತ್ತದೆ. ಮನೋವಿಜ್ಞಾನವು ಕೂಡಾ ಅನೇಕ ದ್ವಂದ್ವಗಳು, ತಿಕ್ಕಾಟಗಳ ಮೂಲಕವೇ ಹೊಸ ಹೊಸ ತರಹದ ದೃಷ್ಟಿಕೋನಗಳನ್ನು ನೀಡುತ್ತದೆ ಎಂಬುದನ್ನು ಅನೇಕ ಆಯಾಮಗಳಲ್ಲಿ ಚರ್ಚಿಸಲಾಗಿದೆ.

ಮನೋವಿಶ್ಲೇಷಣೆಯನ್ನು ಕುರಿತು ಈ ಲೇಖನದಲ್ಲಿ ಗೌರೀಶರು ಅತ್ಯಂತ ಸ್ಥೂಲವಾಗಿ ಹಾಗೂ ಮನಃಶಾಸ್ತ್ರದ ಜ್ಞಾನವಿಲ್ಲದವರೂ ಸ್ವಲ್ಪಮಟ್ಟಿಗೆ ಅರ್ಥೈಸಿಕೊಳ್ಳುವಂತೆ ವಿವೇಚಿಸಿದ್ದಾರೆ. ಇವರು ಮನೋವಿಶ್ಲೇಷಣೆಯನ್ನು ಮೂರು ವಿಧವಾಗಿ ವಿವೇಚಿಸಿದ್ದಾರೆ. ಮೊದಲು ಮನೋವಿಶ್ಲೇಷಣೆ ಎಂದರೆ ವಿಶಿಷ್ಟ ಮಜ್ಜಾ–ತಂತು–ವಿಕಾರಗಳಿಂದ ಉಂಟಾಗುವ ವ್ಯಾಧಿಗಳ ಒಂದು ಗುಂಪಿಗಾಗಿ ಇರುವ ಒಂದು ಚಿಕಿತ್ಸಾ ಕ್ರಮ, ಉಪಚಾರ ಪದ್ಧತಿ. ಇವುಗಳಿಗೆ ವೈದ್ಯಕೀಯ ಪರಿಭಾಷೆಯಲ್ಲಿ Transference Neuroses (ಚಲನ ಮನೋವಿಕೃತಿ)ಗಳೆಂದು ಹೆಸರು. ಈ ಮನೋವಿಕೃತಿಗಳು ಮೂರು ಬಗೆಯಾಗಿವೆ. ಚಿಂತಾಕ್ರಾಂತಿ, ಉನ್ಮಾದ, ರೂಪಾಂತರಿತ ಉನ್ಮಾದ ಮತ್ತು ಸ್ಮೃತಿಬಾಧಾ ವಿಕೃತಿ (Anxiety-hysteria, conversion hysteria and obessional Neuroses) ಇದು ಮನೋವಿಶ್ಲೇಷಣದ ಮೂಲದ ಮತ್ತು ಪರಿಮಿತವಾದ ಅರ್ಥ.

ಎರಡನೆಯ ಅರ್ಥದಲ್ಲಿ ಮನೋವಿಶ್ಲೇಷಣವೆಂದರೆ ಮನಸ್ಸಿನ ಸ್ವರೂಪ–ಸ್ವಭಾವಗಳನ್ನು ಪರಿಶೀಲಿಸುವ ಸಲುವಾಗಿ ವಿನಿಯೋಗಿಸಲ್ಪಡುವ ಒಂದು ವಿಚಾರಣಾ ಪದ್ಧತಿ. ವಿಶೇಷವಾಗಿ ಮನಸ್ಸಿನ ಒಳಸ್ತರಗಳನ್ನು ಅತ್ಯಂತ ಆಳದ ಅಂತಃರ್ಮರ್ಮವನ್ನು ಅರಿತುಕೊಳ್ಳುವ ಒಂದು ವಿಧಾನ.

ಮೂರನೆಯ ಅರ್ಥದಲ್ಲಿ ಮನೋವಿಶ್ಲೇಷಣೆಯು ಒಂದು ಸ್ವತಂತ್ರ ವೈಜ್ಞಾನಿಕ ಸಿದ್ಧಾಂತ. ಮನಸ್ಸಿನ ಸ್ವರೂಪ, ಸ್ವಭಾವಗಳ ಕುರಿತು ಸಿಗ್ಮಂಡ್ ಫ್ರಾಯ್ಡ್ ತನ್ನ ಧೀರ್ಘ ಕಾಲದ ವೈದ್ಯಕೀಯ ಅಭ್ಯಾಸದ ಫಲವಾಗಿ ಆತನು ನಿರೀಕ್ಷಿಸಿದ ಮಾನಸಿಕ ಸಮಸ್ಯೆಗಳ ಮತ್ತು ನಿರ್ಣಯದ ಸಿದ್ಧಾಂತಗಳ ವಿಶದವಾದ ವ್ಯಾಖ್ಯಾನ. ಈ ಅರ್ಥದಲ್ಲಿ ನೋಡುವುದಾದರೆ 'ಅಜಾಗ್ರತ ಮನೋವಿಜ್ಞಾನ ಅಥವಾ ಅಂತರ್ಮನೋವಿಜ್ಞಾನ ಎಂಬರ್ಥವನ್ನು ಮನೋವಿಶ್ಲೇಷಣೆಗೆ ನೀಡಬಹುದು ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಹಾಗೆಯೇ ಇತ್ತೀಚಿನ ಸಂಶೋಧನೆಗಳನ್ನು ಅವಲೋಕಿಸಿ ಮೇಲೆ ಕೊಟ್ಟ ಮೂರು ಅರ್ಥಗಳೊಡನೆ ನಾಲ್ಕನೆಯ ವ್ಯಾಖ್ಯೆಯೊಂದನ್ನು ಇದರ ಜೊತೆಗೆ ಸೇರಿಸಿದ್ದಾರೆ. ಅದೆಂದರೆ ಎಷ್ಟೋ ಸಾಮಾಜಿಕ ಆಚಾರ, ರೂಢಿಗಳ ಮೂಲವನ್ನು, ವರ್ತನೆಯ ವಿವರವನ್ನು ವಿಶದಪಡಿಸುವ ಸಲುವಾಗಿ ಮನೋವಿಶ್ಲೇಷಣೆಯ ತಂತ್ರವನ್ನು ಬಳಸಿ ಅಧ್ಯಯನ ನಡೆದಿರುವಂತಹದ್ದು. ಹಿಂದುಳಿದ ಜನಾಂಗಗಳಲ್ಲಿ ಕಂಡುಬರುವ ಪ್ರಾಣಿ ಪಕ್ಷಿಗಳ ಪ್ರತೀಕಗಳನ್ನೂ, ಕುಲದೇವತೆಗಳಂತೆ ಬಣಕ್ಕೊಂದು ಇರುವ ಚಿನ್ಹೆಗಳನ್ನು, ಆ ಸಮಾಜದಲ್ಲಿ ನಡೆದು ಬಂದ ನಿಷೇಧ–ನಿರ್ಬಂಧಗಳನ್ನು ಫ್ರಾಯ್ಡ್‌ನೇ ಅಭ್ಯಸಿಸಿ ಬರೆದಿರುವುದು. ಆತನ

ಅನುಯಾಯಿಗಳು ಜಾನಪದ ಸಾಹಿತ್ಯ, ಪುರಾಣಗಳ ಅಧ್ಯಯನ, ಸ್ಥಳ ಮಹಾತ್ಮೆ, ವ್ಯಕ್ತಿ ಮಹಾತ್ಮೆಯ ಗಾದೆಗಳು ಮತ್ತು ವಾಙ್ಞಯ ಇವೆಲ್ಲಾ ಕ್ಷೇತ್ರಗಳಲ್ಲಿ ವಿಸ್ತೃತವಾದ ಅಧ್ಯಯನವನ್ನು ನಡೆಸಿರುತ್ತಾರೆ. ಆದ್ದರಿಂದಲೇ ಅನೇಕ ಜನರು ಮನೋವಿಶ್ಲೇಷಣೆಯನ್ನು ಒಂದು ಸಿದ್ಧಾಂತ ಎಂಬುದನ್ನು ಒಪ್ಪುತ್ತಾರೆ. ಇದು ಒಂದು ಬಗೆಯ ತಂತ್ರ (Technique) ಕಾರ್ಯಪದ್ಧತಿ. ಹಾಗಿದ್ದರೂ ಸಹ, ವಿಜ್ಞಾನ ದೃಷ್ಟಿಯಿಂದ ಮನೋವಿಶ್ಲೇಷಣದ ವೈಶಿಷ್ಟ್ಯವು ಅದರ ಕಾರ್ಯಪದ್ಧತಿಯಲ್ಲಿದೆಯೇ ವಿನಃ ಅದನ್ನೊಳಗೊಂಡ ವಿಷಯದ ಸ್ವರೂಪದಲ್ಲಿಲ್ಲ ಎಂಬುದು ಫ್ರಾಯ್ಡ್‌ನ ಖಚಿತ ಅಭಿಪ್ರಾಯ. ಆದರೂ ಅನೇಕ ಮನೋವಿಜ್ಞಾನಿಗಳೂ, ಚಿಕಿತ್ಸಕರೂ ತಮ್ಮ ಕೇವಲ ನರಮಂಡಲದ ವಿಕಾರಗಳಿಗಷ್ಟೇ ಅನ್ವಯಿಸುವ ಉಪಚಾರ ಅಥವಾ ಚಿಕಿತ್ಸಾ ತಂತ್ರವಾಗಿ ಬಳಸಿದ್ದರೆ ಇದಕ್ಕೆ ಇಷ್ಟೊಂದು ಮಹತ್ವ ಉಂಟಾಗುತ್ತಿರಲಿಲ್ಲ ಎಂಬುದಾಗಿ ಅದಕ್ಕೆ ಗೌರೀಶ ಕಾಯ್ಕಿಣಿ ಅವರು ಕಾರಣಗಳನ್ನು ವಿವರಿಸುತ್ತಾರೆ.

ಮನೋವಿಶ್ಲೇಷಣೆಯನ್ನು ಕುರಿತು ಚರ್ಚಿಸುವ ಗೌರೀಶ ಕಾಯ್ಕಿಣಿಯವರು ಮನಸ್ಸಿನ ರಚನೆ, ಮನಸ್ಸಿನ ಸ್ವರೂಪ, ಇದ್ (Id), ಇಗೋ (Ego), ಸೂಪರ್ ಇಗೋ (Super Ego)ಗಳ ಕುರಿತು ಫ್ರಾಯ್ಡ್‌ನ ಅಭಿಪ್ರಾಯವನ್ನು ಸಮರ್ಥಿಸುತ್ತಾರೆ. ಹಾಗೆಯೇ ಅಜಾಗೃತ ಮನೋಸ್ತರದ ವಿಚಾರ, ಶೈಶವ ಲೈಂಗಿಕತೆ, ಆತ್ಮ ಕಾಮಾವಸ್ಥೆ (Auto-erotism), ಸ್ವ-ರತಿ, (Anal-sadistic) ಈಡಿಪಸ್ ಕಾಂಪ್ಲೆಕ್ಸ್ ಫ್ರಾಯ್ಡ್‌ನ ಹಿನ್ನೆಲೆ ಈ ಎಲ್ಲವನ್ನೂ ಅತ್ಯಂತ ಸರಳ ರೀತಿಯಲ್ಲಿ ಚರ್ಚಿಸಿದ್ದಾರೆ.

ಗೌರೀಶರು ತಮ್ಮ ವಿಚಾರ ಸಾಹಿತ್ಯ, ಮನೋವೈಜ್ಞಾನಿಕ ಬರಹಗಳಲ್ಲಿ ಗಂಡು-ಹೆಣ್ಣು, ಪ್ರೀತಿ ಪ್ರಬಂಧಗಳನ್ನು ಭಾರತೀಯ ಸಮಾಜದ ಸ್ಥಿತಿಗತಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

ಈ ಪ್ರಬಂಧಗಳಲ್ಲಿ ಗೌರೀಶರು ಮೊದಲು ಪುರುಷ ನಿರ್ಮಿತ ಸ್ತ್ರೀ ವಾಙ್ಮಯದ ವಿಶ್ವಾಸನೀಯತೆಯ ಪ್ರಶ್ನೆಯನ್ನು ಎತ್ತಿಕೊಳ್ಳುತ್ತಾರೆ. ಗಂಡಸು ಹೆಂಗಸಿನ ಕುರಿತು ಬರೆಯುವಾಗ ಆ ಬರವಣಿಗೆ ಹೆಚ್ಚಾಗಿ ಆತ್ಮಪರವಾಗಿರುತ್ತದೆ. ಹಾಗೂ ಅದರಲ್ಲಿ ತನ್ನನ್ನು ತಾನು ಸಮರ್ಥಿಸಿಕೊಳ್ಳುವ ದಾಟಿಯು ಸೇರಿರುತ್ತದೆ. ಮೇಲಾಗಿ ಗಂಡಿಗೆ ಹೆಣ್ಣಿನ ಕುರಿತು ತೀವ್ರ ದ್ವಂದ್ವ ಭಾವನೆಗಳಿವೆ. ಒಮ್ಮೆ ದಾಸಿ, ಒಮ್ಮೆ ದೇವಿ, ನರಕದ ಹೆದ್ದಾರಿ, ಸ್ವರ್ಗದ ಸುಂದರಿ, ಭೋಗ ವ್ಯಕ್ತಿ, ತ್ಯಾಗಮೂರ್ತಿ ಹೀಗೆಲ್ಲ ತಿಳುವಳಿಕೆಯ ತೂಗಾಟದಲ್ಲಿ ಸಿಲುಕಿದ್ದಾನೆ. ಈ ಕಾರಣಗಳಿಂದಾಗಿ ಪುರುಷ ನಿರ್ಮಿತ ಸ್ತ್ರೀ ವಾಙ್ಞಯವನ್ನು ವಿಮರ್ಶಾತ್ಮಕವಾಗಿ ನೋಡುವುದು ಅಗತ್ಯವೆಂದು ಗೌರೀಶ ಕಾಯ್ಕಿಣಿಯವರು ಪ್ರತಿಪಾದಿಸುತ್ತಾರೆ. ನಂತರ ಅವರು ಗಂಡು-ಹೆಣ್ಣುಗಳ ವ್ಯತ್ಯಾಸಗಳನ್ನು ಜೀವಶಾಸ್ತ್ರೀಯ, ಮನಃಶಾಸ್ತ್ರೀಯ ಹಾಗೂ ಸಾಮಾಜಿಕ ದೃಷ್ಟಿಕೋನಗಳಿಂದ ವಿಶ್ಲೇಷಿಸಿ ಹೀಗೆ ತೀರ್ಮಾನಿಸುತ್ತಾರೆ. ಗೌರೀಶ ಕಾಯ್ಕಿಣಿಯವರ ಪ್ರಕಾರ

ಆಧುನಿಕತೆ ಹಾಗೂ ಔದ್ಯೋಗಿಕ ಕ್ರಾಂತಿ ಮಾತ್ರವೇ ಸ್ತ್ರೀಯರಿಗೆ ಪುರುಷರ ಅಧೀನ ಸ್ಥಿತಿಯಿಂದ ಬಿಡುಗಡೆಯನ್ನು ತಂದುಕೊಡಲು ಸಾಧ್ಯ. ಆಧುನಿಕತೆಯ ಪ್ರವೇಶದೊಂದಿಗೆ ಲಿಂಗಬೇಧದಿಂದ ಬಂದ ಮಾನಸಿಕ, ನೈತಿಕ ತಾರತಮ್ಯ ಕಾಣದಾಗುತ್ತದೆ ಹಾಗೂ ಅಂತಹ ವ್ಯತ್ಯಾಸಗಳು ಒಂದು ಪಾಲು ಪ್ರಕೃತಿ, ಮೂರು ಪಾಲು ಸಂಸ್ಕೃತಿಯಿಂದಾಗಿದ್ದ ಮೂಲಕ ಉತ್ತರೋತ್ತರ ಹೊಸ ಸಮಾಜದಲ್ಲಿ ಹೆಣ್ಣು-ಗಂಡಿನ ಗುಣಶೀಲಗಳಲ್ಲಿ ಸಮಾನತೆಯು ಬರುವುದು ಎಂಬ ನಿರೀಕ್ಷೆ ಗೌರೀಶ ಕಾಯ್ಕಿಣಿ ಅವರದು.

ಆದರೆ ಆಧುನಿಕ ಔದ್ಯೋಗಿಕ ಜೀವನದಲ್ಲಿ ಹೆಣ್ಣು ಸ್ವಾತಂತ್ರ್ಯದ ಜೊತೆಗೆ ಹಳೆಯ ದಾಸ್ಯದ ತೊಡಕುಗಳಿಂದ ಹೆಚ್ಚಿನ ಜಿಡುಕಿನ 'ಕಂಗೆಡಿಸುವ ಕೂಟ ಪ್ರಶ್ನೆ'ಗಳನ್ನು ಬಿಡಿಸಿಕೊಳ್ಳ ಬೇಕಾಗುತ್ತದೆ ಎಂದು ಗೌರೀಶ ಕಾಯ್ಕಿಣಿಯವರು ಅಭಿಪ್ರಾಯಪಡುತ್ತಾರೆ. ಅವರ ಪ್ರಕಾರ ಇಂತಹ ಒಂದು ಮುಖ್ಯ ಕೂಟ ಪ್ರಶ್ನೆ ಹೆಣ್ಣು ಗಂಡನ್ನು ಹೆಚ್ಚು ಹೆಚ್ಚಾಗಿ ಅನುಕರಿಸ ತೊಡಗುವುದರಿಂದ ಹುಟ್ಟುತ್ತದೆ. ಅನುಕರಣ ಒಂದು ಬಗೆಯ ಕನಿಷ್ಠ ಬಗೆಯ ಸ್ತುತಿ. ಕನಿಷ್ಠರು ಶ್ರೇಷ್ಠರಿಗೆ ಮಾಡಿ ತೋರಿಸುವ ಸ್ತುತಿ. ಹೀಗಾಗಿ ಹೆಣ್ಣು ತನ್ನ ಸ್ತ್ರೀತ್ವದ ಪೂರ್ಣ ಅರಿವಿನಲ್ಲಿ ಅನುಕರಣೆಯ ಹವ್ಯಾಸವನ್ನು ಬಿಟ್ಟು ಸ್ವತಂತ್ರ ವ್ಯಕ್ತಿತ್ವವನ್ನು ರೂಢಿಸಿಕೊಳ್ಳಬೇಕು ಎಂಬುದನ್ನು ಗೌರೀಶ ಕಾಯ್ಕಿಣಿಯವರು ಸಾಂಪ್ರದಾಯಿಕ ಕಾವ್ಯ ಪ್ರತಿಮೆಯನ್ನು ಮುರಿದು ಹೊಸ ಬಗೆಯಲ್ಲಿ ವಿವೇಚಿಸಿದ್ದಾರೆ.

ಪ್ರಾಣಿಗಳಲ್ಲಿ ಹಾಗೂ ಮನುಷ್ಯರಲ್ಲಿ ಸ್ತ್ರೀ-ಪುರುಷ ದೇಹ ರಚನೆಯ ಸ್ವರೂಪದ ಹಾಗೂ ಪ್ರೀತಿಯ ವಿಕಾಸದ ವರ್ತನೆಯನ್ನು ಜೀವಶಾಸ್ತ್ರ ಹಾಗೂ ಮನಃಶಾಸ್ತ್ರದ ನೆರವಿನಿಂದ ವ್ಯಾಖ್ಯಾನಿಸಿದ್ದಾರೆ. ಜೊತೆಗೆ ಹೆಣ್ಣನ್ನು ಪಾಲಿಸುವ ಕ್ರಮ, ಅವಳಿಗೆ ನೀಡುವ ಶಿಕ್ಷಣವು ಅವಳ ಮೇಲಿನ ಸಮಾಜದ ಕಟ್ಟುಪಾಡುಗಳು ಇವೆಲ್ಲ ಹೇಗೆ ಅವಳು ತನ್ನ ಪರಾಧೀನ ಸ್ಥಿತಿಯನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ ಎಂಬುದನ್ನೂ, ಹೆಣ್ಣಿನ ಮೇಲಿನ ತನ್ನ ಯಜಮಾನಿಕೆಯನ್ನು ಶಾಶ್ವತವಾಗಿಸಿಕೊಳ್ಳಲು ಪುರುಷಕೇಂದ್ರಿತ ವ್ಯವಸ್ಥೆ ಹೇಗೆ ಸ್ತ್ರೀ ಸಹಜ ಲಕ್ಷಣಗಳನ್ನು ರಾಜಕೀಯಗೊಳಿಸಿದೆ ಎಂಬುದನ್ನು ಗೌರೀಶ ಕಾಯ್ಕಿಣಿಯವರು ಚರ್ಚಿಸಿದ್ದಾರೆ.

ಸ್ತ್ರೀ-ಪುರುಷ ಭಿನ್ನತೆಯು ಜೀವಶಾಸ್ತ್ರೀಯ ನಿರ್ಧಾರಿತವಾದರೂ ಅವರಲ್ಲಿರುವ ಅಸಮಾನತೆಯು ಆರ್ಥಿಕ ಹಾಗೂ ಸಾಮಾಜಿಕ ಸಂಗತಿಗಳಿಂದಲೇ ನಿರ್ಧಾರಿತವಾಗುತ್ತದೆ. ಇದು ಕುಟುಂಬದ ಮೇಲಾಗುವ ಪರಿಣಾಮ, ಮಾನಸಿಕ ಹಿನ್ನೆಲೆಯಿಂದ ಮಾತ್ರವೇ ಅರ್ಥವಾಗಿಸಿಕೊಳ್ಳಬೇಕಾಗುತ್ತದೆ ಎಂಬುದಾಗಿಯೇ ಅವರು ವಾದಿಸುತ್ತಾರೆ.

ಒಟ್ಟಾರೆ ಗೌರೀಶ ಕಾಯ್ಕಿಣಿಯವರ ಮನೋವೈಜ್ಞಾನಿಕ ಬರಹಗಳಲ್ಲಿ ನಮಗೆ ಮುಖ್ಯವಾಗುವುದು ಮನಃಶಾಸ್ತ್ರವು ಒಂದು ಪ್ರತ್ಯೇಕ ಜ್ಞಾನಶಾಖೆಯಾಗಿ ರೂಪುಗೊಳ್ಳುವವರೆಗಿನ

ದೀರ್ಘ ಅವಧಿಯಲ್ಲಿ ಪಾಶ್ಚಾತ್ಯ ತತ್ವಜ್ಞಾನಿಗಳು, ಚಿಂತಕರು ಮನಸ್ಸು ಹಾಗೂ ಅದನ್ನು ಕುರಿತು ಮಾಡಿರುವ ಚರ್ಚೆ ಹಾಗೂ ವಿಮರ್ಶೆಯ ಸ್ಥೂಲ ಪರಿಚಯ ಮಾಡಿಕೊಳ್ಳುವುದರಲ್ಲಿ. ಹಾಗೆಯೇ ಮನಃಶಾಸ್ತ್ರದ ಪ್ರಮುಖ ಸಿದ್ಧಾಂತಗಳು ಹಾಗೂ ಶಿಕ್ಷಣ, ವೈದ್ಯಕೀಯ, ಅಪರಾಧ ಮೊದಲಾದ ಕ್ಷೇತ್ರಗಳಲ್ಲಿ ಈ ಸಿದ್ಧಾಂತಗಳು ಹೇಗೆ ಬಳಕೆಯಾಗಿವೆ ಎಂಬುದರ ಪರಿಚಯವು ಇಲ್ಲಿ ಸಿಗುತ್ತದೆ. ಹಾಗೆಯೇ ಮನಃಶಾಸ್ತ್ರದ ಜ್ಞಾನವಿಲ್ಲದವರಿಗೂ ಲಲಿತ ಪ್ರಬಂಧದ ಮಾಧುರ್ಯ ಹಾಗೂ ಸರಳ ಶೈಲಿಯ ನಿರೂಪಣೆ ಅರ್ಥವಾಗುವಂತಹದ್ದಾಗಿದೆ.

ಜನ್ನ ಮತ್ತು ಆಧುನಿಕ ಮನಃಶಾಸ್ತ್ರ: K.E. Radha Krishna

ಈ ಲೇಖನವು ಮನುಷ್ಯ-ಮನುಷ್ಯರ ಸಂಬಂಧಗಳ ಮೂಲದ್ರವ್ಯ ಗಂಡು ಹೆಣ್ಣಿನ ಸಂಬಂಧ ಸಾಮಾನ್ಯರ ದೃಷ್ಟಿಕೋನದಲ್ಲಿ ಕೇವಲ ಶಾರೀರಿಕ ಭಾವನೆಗಳು, ಪ್ರೋಕ್ರಿಯೇಶನ್‌ಗಳು. ಆಧುನಿಕ ಕಾಲಘಟ್ಟದಲ್ಲಿ ಕೌಟುಂಬಿಕ ನೆಲೆಗಳಲ್ಲಿನ ಸಂಬಂಧಗಳು ಇಂದು ಯಾಂತ್ರಿಕವಾಗುತ್ತಿವೆ. ಹಾಗೆಯೇ ಸಂಬಂಧಗಳು ಅರ್ಥ ಕಳೆದುಕೊಳ್ಳುತ್ತಿವೆ ಎಂದು ಹೇಳುತ್ತಿರುವಾಗಲೇ ಹೀಗೆ ಸಂಕೀರ್ಣಗೊಳ್ಳುತ್ತಿರುವ ಸಂಬಂಧಗಳನ್ನು ಕುರಿತು ಆಧುನಿಕ ದೃಷ್ಟಿಕೋನದಲ್ಲಿ ಚರ್ಚಿಸುವ ಅಗತ್ಯತೆಯು ಹೆಚ್ಚಾಗಿದೆ. ಈ ನೆಲೆಯಿಂದ ಈ ಕಾಲ ಘಟ್ಟದಲ್ಲಿ ಜನ್ನ ಪ್ರಸ್ತುತ ಎನ್ನಿಸುತ್ತಾನೆ.

ಜನ್ನ ಮನುಷ್ಯ ಸಂಬಂಧಗಳ ಬಗ್ಗೆ ಮನಸ್ಸಿನ ಸೂಕ್ಷ್ಮತೆಯ ಬಗೆಗೆ ಆಗಲೇ ಚಿತ್ರಿಸಿದ್ದಾನೆ. ಗ್ರೀಕ್ ಕಾವ್ಯಗಳಲ್ಲಿ ಕಾಣಬಹುದಾದ ಆತಂಕ (Anxiety) Neurosis, Complex, ವಿರೋಧಾಭಾಸ ರಚನೆ, ಸಂವಿಧಾನಾತ್ಮಕ ಚೌಕಟ್ಟಿನಲ್ಲಿ ನೋಡಬಹುದಾದದ್ದು. ಇಂತಹ ಅಂಶಗಳನ್ನು ಯಶೋಧರ ಚರಿತೆಯಲ್ಲಿ ನೋಡಬಹುದಾಗಿದೆ.

ಯಶೋಧರ ಮತ್ತು ಅಮೃತಮತಿಯ ಸಂಬಂಧ

ಇದು ವಿಲಕ್ಷಣವಾದ ಮತ್ತು ಸಂಪ್ರದಾಯ ವಿರೋಧಿಯಾದ ಸಂಬಂಧವಾಗಿ ಕಾಣುತ್ತದೆ. ಮನಸ್ಸನ್ನು ಗುಹೆ ಎಂದು ಮನಃಶಾಸ್ತ್ರದಲ್ಲಿ ಪರಿಭಾವಿಸಲಾಗುತ್ತದೆ. ಮನಸ್ಸಿನಷ್ಟು ಗೂಢವಾದುದು, ಸಂಕೀರ್ಣವಾದದು ಯಾವುದೂ ಇಲ್ಲ. ತನಗೆ ಒಲಿದು ಬಂದವಳಲ್ಲ ತಾನು ಒಲಿಸಿಕೊಂಡವಳು ಎಂಬಲ್ಲಿ ವಿಶ್ಲೇಷಣೆ ಅಗತ್ಯ

* ಕಲೆ ತಾನು ಯಾವುದನ್ನು ಹೇಳಲಿಲ್ಲವೋ ಅದನ್ನು ಹೇಳುತ್ತದೆ
* ಜನ್ಮಜನ್ಮಾಂತರಗಳಲ್ಲಿ ಚಂದ್ರಮತಿ ಮತ್ತು ಯಶೋಧರರ ಸಂಬಂಧಗಳು ಸಂಕೇತಗಳಾಗಿ ಕಾಣುತ್ತವೆ.
* ಪ್ರಾಣಿಗಳಲ್ಲಿ ಶರೀರ ಮಾಂಸೀಕೃತ ಭಾವನೆಗಳಾಗಿ ಮಾತ್ರ ಕಂಡು ಬರುತ್ತದೆ. ಆದರೆ, ಮನುಷ್ಯರಲ್ಲಿ ಶರೀರ ಕೇವಲ ಮಾಂಸದ ಮುದ್ದೆಯಲ್ಲ. ಭಾವನೆಗಳು ಇಲ್ಲಿ ಹೆಚ್ಚು ಪ್ರಭಾವವನ್ನು ಹೊಂದಿರುತ್ತವೆ.

* ಅರಸನೆಂಬ ಪಾತಕಿಯ ತೊಡೆಯಲ್ಲಿದ್ದ. ನೀನು ಬಿಟ್ಟರೆ ಉಳಿದವರೆಲ್ಲ ಸಹೋದರರಿಗೆ ಸಮ–ಎಂಬಲ್ಲಿಯು ಮನೋವಿಶ್ಲೇಷಣೆಯ ಸಾಧ್ಯತೆಗಳು ಹೆಚ್ಚಾಗಿವೆ.
* ವೈಯುಕ್ತಿಕ, ಶಾರೀರಿಕ ದಾಹ ವರ್ಸಸ್ ಕಟ್ಟುಪಾಡುಗಳು.
* ಕಾಮ ಸೃಷ್ಟಿಯ ಮೂಲ
* ಕಾಮ ನಮ್ಮ ಇಂದ್ರೀಯ ವಾಸನೆಗಳ ಮೂಲಕ ಸೃಷ್ಟಿಯಾಗುವುದು. ಆದರೆ, ಅಮೃತಮತಿಗೆ ಶ್ರವಣೇಂದ್ರೀಯದ ಮೂಲಕ ಕಾಮ ಹುಟ್ಟುತ್ತದೆ. ಇದನ್ನು ಏರಿಕ್ ಫಾಮ್, ಫ್ರಾಯ್ಡ್, ಲಿಬಿಡೊ (Primary Motive of life) ಎನ್ನುತ್ತಾರೆ. ಇದಕ್ಕೆ ಮೂಲ ಕಾರಣ ಮನುಷ್ಯನಿಗೂ ಮತ್ತು ಮನಸ್ಸಿಗೂ ಸದಾ ಕಾಲ ಸಂಘರ್ಷಗಳು ನಡೆಯುತ್ತಿರುತ್ತವೆ.

ಏರಿಕ್ ಫ್ರಾಮ್ ಅವರು ತಮ್ಮ Fear of Freedom ಎಂಬ ಕೃತಿಯಲ್ಲಿ ಮನುಷ್ಯ ಮತ್ತು ಮನಸ್ಸು ಸದಾ ಕಾಲ ಸಂಘರ್ಷಕ್ಕೆ ಒಳಪಡುವುದರ ಹಿಂದಿನ ಅಂಶವನ್ನು ವಿಶ್ಲೇಷಿಸಿದ್ದಾರೆ. ಮನಸ್ಸು ಸ್ವಾತಂತ್ರ್ಯ ಎಂಬ ಕಟ್ಟುಪಾಡೊಂದರ ಜೊತೆ ತಾದ್ಯಾತ್ಮ ಹೊಂದುವುದನ್ನು, ಮಿಲನ ಹೊಂದುವುದನ್ನು ಮನಸ್ಸು ಒಪ್ಪುವುದಿಲ್ಲ. ಫಿಯರ್ ಆಫ್ ಫ್ರೀಡಂ ಮತ್ತು ಲಿಬಿಡೊ ನೆಲೆಯಲ್ಲಿ ಈ ಕಾವ್ಯವನ್ನು ನೋಡಬೇಕು.

ಯಶೋಧರ ಮತ್ತು ಅಮೃತಮತಿ ಸಾಮಾಜಿಕ ಕಟ್ಟುಪಾಡುಗಳ ಸುಳಿಯಲ್ಲಿ ಸಿಲುಕಿ ಸಾಮಾಜಿಕ ಕಟ್ಟುಪಾಡುಗಳಿಗೆ ಒಳಗಾಗಿರುತ್ತಾರೆ. ಯಶೋಧರ ಮತ್ತು ಅಮೃತಮತಿಯರದ್ದು ಒಲ್ಲದ ಮನಸ್ಸುಗಳ ದಾಂಪತ್ಯ. ಅಮೃತಮತಿ ಯಶೋಧರನ ಪ್ರಿಯಳು. ಆದರೆ, ಯಶೋಧರ ಅಮೃತಮತಿಗೆ ಪ್ರಿಯನಲ್ಲ.

ಬಿನದಕೆ ಪಾಡುತ್ತಿರೆ;
ನುಣ್ದನಿ ನಿದ್ರೆಗೆ;
ಕತಕ ಬೀಜಂ;
ಆಯ್ತು ಎನೆ;
ಮೃಗಲೋಚನೆ ತಿಳಿದು;
ಆಲಿಸಿ ಮುಟ್ಟಿದ; ಮನಮಂ;
ತೊಟ್ಟನೆ;
ಪಸಾಯದಾನಂ ಗೊಟ್ಟಳ್.

ಅಮೃತಮತಿ ಹಾಡಿಗೆ ಮಾತ್ರ ಮನಸ್ಸು ಕೊಟ್ಟದ್ದಲ್ಲ. ಅದು ತನ್ನ ಒಳದನಿಗೆ ಮನಸ್ಸು ಕೊಟ್ಟದ್ದು. ಅರಸನೆಂಬ ಪ್ರಭುತ್ವದ ವಿರುದ್ಧದ ಆಕೆಯ ಮನಸ್ಸು ಸಿಡಿದೆದ್ದ ಪ್ರಸಂಗವು ಇದಾಗಿದೆ. Breck (ಬ್ರೆಕ್) ಹೇಳುವಂತೆ Men have no faces they have only masks. ಅಮೃತಮತಿ ತನ್ನ ಮುಖವಾಡವನ್ನು ಕಿತ್ತೆಸೆದು ಕುರೂಪಿಯ ಜೊತೆ ಸಂವಹನ ನಡೆಸುತ್ತಾಳೆ.

ನಮ್ಮ ಮನಸ್ಸಿಗೆ ನಾವೇ ವಂಚಿಸಿಕೊಂಡು ಬದುಕಿದಾಗ ಎಂಬರ್ಥದಲ್ಲಿ ಧೂಮಪ್ರಭೆ ಎಂಬ ನರಕದಲ್ಲಿ ಬೀಳುತ್ತಾಳೆ. ಮನುಷ್ಯ Split Personality ಹೊಂದಿರುತ್ತಾರೆ ಎಂಬುದಕ್ಕೆ ಅಮೃತಮತಿಯೇ ಉದಾಹರಣೆಯಾಗುತ್ತಾಳೆ.

ಅಮೃತಮತಿಯೆಂಬ;
ಪಾತಕಿಯ ಮಾಯೆ;
ಬನಂ ಆಯ್ತು;
ಚಂದ್ರಮತಿ ಮಾತೆಯ;
ಮಾತು ಎಮಗೆ;
ಬಲೆಯಾಯ್ತು;
ಹಿಂಸನಂ ಅಮೋಘಂ;
ಶರಂ ಆಯ್ತು ಕೆಡೆದುದು;
ಆತ್ಮ ಕುರಂಗಂ.

ಇಲ್ಲಿ ಕಂಡುಬಂದಂತೆ ಹಲವು ಸಂಬಂಧಗಳು ಉಗುರು ಬೆಚ್ಚಗಿನ, ಹೊರನೋಟದ ಸಂಬಂಧಗಳು. ಆದರೆ, ಅಲ್ಲಿ ಒಳನೋಟಗಳು ಕಾಣುವುದಿಲ್ಲ. ಅನಿವಾರ್ಯದ ಅನುಸಂಧಾನ ಸಂಬಂಧಗಳನ್ನು ಈ ಕಾವ್ಯದಲ್ಲಿ ಕಾಣುತ್ತೇವೆ. ಮಾತಿನಲ್ಲಿ ಅಭಿವ್ಯಕ್ತವಾಗುವ ಹಿಂಸೆ ಒಂದು ಸ್ವರೂಪ ಪಡೆಯುತ್ತದೆ. ಮಾತಿನಲ್ಲಿ ಅಭಿವ್ಯಕ್ತವಾಗದ ಹಿಂಸೆಯ ಸ್ವರೂಪ ಯಶೋಧರನದು.

ಈ ಕೃತಿಯ ಪಾತ್ರಗಳು ನಿಗೂಢ ಮನಸ್ಸಿನ ಲೋಕವನ್ನು ಕಾಮದ ಮೂಲಕ, ಶೃಂಗಾರದ ಮೂಲಕ, ಕಾಮಶೃಂಗಾರದ ಮೂಲಕ ಸೃಷ್ಟಿಯಾಗಿವೆ. ಅವತಾರವೊಂದನ್ನು ಕಳಚಿ ಮತ್ತೊಂದು ರೂಪ ತಾಳುವುದು. ಆಧುನಿಕ ಸಂಬಂಧಗಳು ಮನುಷ್ಯ–ಮನುಷ್ಯ ಸಂಬಂಧಗಳ ವಿಶ್ಲೇಷಣೆಗಳನ್ನು ಈ ಸಂದರ್ಭದಲ್ಲಿ ಮಾಡಬೇಕಾಗುತ್ತದೆ.

ಅಭಿವ್ಯಕ್ತ ವಿಘಟನೆಗಳನ್ನು ಇಲ್ಲಿ ಕಾಣಬಹುದಾಗಿದೆ. ಹಾಗೆಯೇ ಮನುಷ್ಯ–ಮನುಷ್ಯ ಸಂಬಂಧಗಳು ಹೊಸ ರೀತಿಯಲ್ಲಿ ವಿಶ್ಲೇಷಣೆಗೆ ಒಳಗಾಗುತ್ತಿರುವ ಸಂದರ್ಭ ಇದಾಗಿದೆ. ಅಮೃತಮತಿಯದು ವಿಕಲ್ಪ (Dis-constructed) (ಜಾರೆ) ಎಂದು ಗೊತ್ತಾದಾಗ ಸಂಬಂಧಗಳ ಕವಲು ಕಳಚಿ ಬಿಡುತ್ತದೆ. ಸ್ಪರ್ಶ, ಕಿವಿ, ಕಣ್ಣುಗಳ ಮೂಲಕ ಗಂಡು ಮತ್ತು ಹೆಣ್ಣಿನ ಸಂಬಂಧಗಳು ಏರ್ಪಡಬಹುದು. ಅನೇಕ ಬಾರಿ ಸುಂದರವಲ್ಲದ ನಿಕೃಷ್ಟವಾದ ವಸ್ತುವಿನಲ್ಲಿಯೂ ಆಸಕ್ತಿ ಉಂಟಾಗುತ್ತದೆ ಏಕೆ? ಇದನ್ನು ವಿವರಿಸಲು ಸಾಧ್ಯವಿಲ್ಲ.

ಫ್ರಾಯ್ಡ್‌ನ ಪ್ರಕಾರ ಮನುಷ್ಯನ ಮನಸ್ಸು ಅತ್ಯಂತ ನಿಗೂಢವಾದುದು. ಅದು ಆಂತರ್ಯದಲ್ಲಿ ಅತ್ಯಂತ ಸಂಕೀರ್ಣವಾದ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಮನಸ್ಸಿನ ಈ ಸೂಕ್ಷ್ಮತೆಯೇ ಮನುಷ್ಯನ ನಡವಳಿಕೆಗೆ ಕಾರಣ. ಈ ನಡವಳಿಕೆಯೇ ಇತರ ನಡವಳಿಕೆಗಳಿಗೆ ಪ್ರೇರಕವಾಗುತ್ತವೆ.

ಅಮೃತಮತಿಯನ್ನು justify ಮಾಡುವಾಗ ಸಂಪ್ರದಾಯವಲ್ಲದ ಮತ್ತೊಂದು ಲೋಕವಿದೆ. ಮನೋಲೋಕವೊಂದಿದೆ ಎಂಬುದನ್ನು ಅರಿಯಬೇಕಾಗಿದೆ. ಆಧುನಿಕ ಮನಃಶಾಸ್ತ್ರದಲ್ಲಿ ಕ್ರೈಮನ್ನು ಕ್ರಿಮಿನಲ್‌ನ ಮನಃಶಾಸ್ತ್ರೀಯ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬೇಕೆಂದು ಹೇಳಲಾಗುತ್ತದೆ. ಇನ್ನು ಅಮೃತಮತಿಯು ಅಷ್ಟಾವಂಕನಲ್ಲಿ ಮನಸ್ಸನ್ನು ಜಾರಿ ಬಿಡಲು ಕೇವಲ ಹೊರನೋಟದ ಕಾರಣಗಳು ಮಾತ್ರವಲ್ಲ. ಅಷ್ಟಾವಂಕನ ವೇಣು ನಾದದ ರಾಗ. ಕಲೆ ವ್ಯಕ್ತಿಯ ಮನಸ್ಸಿನ ಮೇಲೆ ಬೀರಬಹುದಾದ ಅನೇಕ ಸಂಗತಿಗಳ ಬಗೆಗೆ ಈಗಾಗಲೇ ಚರ್ಚಿತವಾಗಿದೆ. ಅನೇಕ ಮಾನಸಿಕ ಖಾಯಿಲೆಗಳನ್ನು ಸಂಗೀತದ ಮೂಲಕ ಪರಿಹರಿಸಬಹುದು. ಹಾಗೆಯೇ ಸಂಗೀತವನ್ನು ಮನೋಚಿಕಿತ್ಸೆಗಾಗಿ ಬಳಸುತ್ತಿರುವುದು ಇದೆ. ಹಾಗಾದಲ್ಲಿ ಆಕೆಯ ಮನೋವಿಕಾರಕ್ಕೆ ಈ ಸಂಗೀತ (ರಾಗ)ದ ಪ್ರಭಾವವನ್ನು ಕುರಿತು ವಿಶ್ಲೇಷಣೆಯು ಸಾಗಬೇಕಾಗುತ್ತದೆ.

ಫ್ರಾಯ್ಡ್ ಮತ್ತು ಮನೋವಿಶ್ಲೇಷಣೆ

ಮನುಷ್ಯನು ಏಕೆ ನೈತಿಕವಾಗಿ ವರ್ತಿಸಬೇಕು? ವೈಯುಕ್ತಿಕ ಅಂತಃಸಾಕ್ಷಿಯ ತೃಪ್ತಿಗಾಗಿ ಎಂಬುದನ್ನು ಮನಃಶಾಸ್ತ್ರ ಒಪ್ಪುವುದಿಲ್ಲ. ವ್ಯಕ್ತಿಯ ಮುನ್ನಡೆಯೂ, ಪ್ರಗತಿಯೂ, ಸಾಮಾಜಿಕವಾಗಿ ನಿಯಂತ್ರಿಸಲ್ಪಡುತ್ತದೆ. ಆಗ ವ್ಯಕ್ತಿ ಸಾಮಾಜಿಕ ನೈತಿಕತೆಯನ್ನು ಪ್ರದರ್ಶಿಸುತ್ತಾನೆ. ನೈತಿಕತೆ, ಸತ್ಯಸಂಧತೆ ನಿಜವಾಗಿಯೂ ವೈಯಕ್ತಿಕವಾಗಿರುತ್ತದೆ. ಆದರೆ ವಿರುದ್ಧವಾಗಿ ಅದರಿಂದ ತನ್ನನ್ನು ತಾನು ಬಿಡಿಸಿಕೊಳ್ಳಲು ಸದಾ ಪ್ರಯತ್ನಿಸುತ್ತಿರುತ್ತಾನೆ. ಆ ಪ್ರಯತ್ನಗಳು ವಿಫಲಗೊಂಡಾಗ ವ್ಯಕ್ತಿ ಅದರಿಂದ ಹೊರಬರುವ ಪ್ರಯತ್ನದಲ್ಲಿ ಹಿಂಸೆಯ ಹಾದಿ ಹಿಡಿಯಬಲ್ಲ. ಹಿಂಸೆಯು ಏಕಮುಖಿಯವೇನಲ್ಲ. ಹಿಂಸೆಯನ್ನು ಆಚರಿಸುವವನೇ ಹಿಂಸೆಗೆ ಗುರಿಯಾಗುವ ಅಪಾಯವಿದ್ದೇ ಇರುತ್ತದೆ. ಆದರೂ ಮನಸ್ಸು ಅದೆಲ್ಲ ಮಿತಿಗಳನ್ನು ದಾಟಿಬಿಡಲು ಸದಾ ಹಾತೊರೆಯುತ್ತಿರುತ್ತದೆ.

ವಿರುದ್ಧ ಶಕ್ತಿಗಳು ಎಲ್ಲೆಡೆಯೂ ಕಾರ್ಯ ನಿರತವಾಗಿರುವುದನ್ನು ಒಪ್ಪಲೇಬೇಕು. ಈ ಕಲ್ಪನೆಯಿಂದ ಮನೋಶಕ್ತಿಯ ಬಗೆಗಿನ ವಿಚಾರಗಳನ್ನು ನಿಷ್ಪತ್ತಿಗೊಳಿಸುವುದು ಸೂಕ್ತ. ಭೌತಿಕ ಶಕ್ತಿ ಸಾಧ್ಯತೆಯ ವ್ಯತ್ಯಾಸವನ್ನು ಎಂದರೆ ಉಷ್ಣ–ಶೀತ, ಎತ್ತರ–ಗಿಡ್ಡಗಳಂತಹ ದ್ವಂದ್ವಗಳ ಅಸ್ತಿತ್ವವನ್ನು ಒಳಗೊಳ್ಳುವಂತೆಯೆ ಮನಃಶಕ್ತಿ ದ್ವಂದ್ವಕ್ರಿಯೆಯನ್ನು ಒಳಗೊಳ್ಳುತ್ತದೆ ಎಂಬುದು ಸತ್ಯ. ಲೈಂಗಿಕತೆಯನ್ನು ಏಕೈಕ ಚಾಲಕ ಶಕ್ತಿಯೆಂದು ಫ್ರಾಯ್ಡ್ ಪರಿಭಾವಿಸಿದ. ಆದರೆ, ಇತರೆ ಮನೋವ್ಯಾಪಾರಗಳಿಗೂ ಆತ ಅನಂತರದ ಸ್ಥಾನ ಕೊಡುತ್ತಾನೆ. ಮನೋವಿಜ್ಞಾನದಲ್ಲಿ ಲೈಂಗಿಕತೆಯ ಪ್ರಾಮುಖ್ಯವನ್ನು ಖಂಡಿತ ನಿರಾಕರಿಸುವುದು ಸಾಧ್ಯವಿಲ್ಲ. ಆದರೆ, ಮಾನವ ಮನಸ್ಸಿನ ಎಲ್ಲಾ ಚರ್ಚೆಯನ್ನು ಕಲುಷಿತಗೊಳಿಸುವ ಲೈಂಗಿಕತೆಯ ಹದ್ದು ಮೀರಿದ ಪರಿಭಾಷೆಗೆ ಎಲ್ಲೆಗಳನ್ನು ಕಲ್ಪಿಸುವುದು, ಲೈಂಗಿಕತೆಯನ್ನು ಅದರ ಸಮರ್ಪಕ ಸ್ಥಾನದಲ್ಲಿರಿಸುವುದು ಕೂಡ ಅತ್ಯಂತ ಪ್ರಮುಖವಾದುದು. ಲೈಂಗಿಕತೆ ನಿಸ್ಸಂದೇಹವಾಗಿ ಬಹಳ ವ್ಯಾಪಕ ಹಾಗೂ ಮುಖ್ಯವಾಗಿದ್ದರೂ

ಅದು ಜೀವನ ಪ್ರೇರಣೆಗಳಲ್ಲಿ, ಮನೋದೈಹಿಕ ಕಾರ್ಯಗಳಲ್ಲಿ ಕೇವಲ ಒಂದೇ ಎಂಬ ಸಂಗತಿಗೆ ಸಾಮಾನ್ಯ ಪರಿಜ್ಞಾನ ಸದಾ ಮರಳುತ್ತದೆ.

ಅಮೃತಮತಿಯ ಪಾತ್ರವನ್ನು ನೋಡುವಾಗ ಎಲ್ಲಾ ಪ್ರಶ್ನೆಯನ್ನು ಮೀರಿ ಲೈಂಗಿಕ ಜೀವನದ ವಲಯಗಳಲ್ಲಿ ಕ್ಷೋಭೆ ಎದ್ದು ಕಾಣುತ್ತದೆ. ನಮಗೆ ಕೆಟ್ಟ ಹಲ್ಲು ನೋವು ಬಂದಾಗ ಇನ್ನಾವುದನ್ನು ಅಲೋಚಿಸಲಾರೆವೆಂಬುದು ಸುಪ್ರಸಿದ್ಧ. ಹಾಗೆಯೇ ಫ್ರಾಯ್ಡ್ ವಿವರಿಸುವ ಲೈಂಗಿಕತೆ ನಿಶ್ಚಿತವಾಗಿ ಎಂತಹುದು ಎಂದರೆ ಒಂದು ತಪ್ಪು ದೃಷ್ಟಿ ಅಥವಾ ಸನ್ನಿವೇಶದಿಂದ ಹೊರತಳ್ಳಲ್ಪಡಬೇಕಾದ ಘಟ್ಟವನ್ನು ವ್ಯಕ್ತಿ ಮುಟ್ಟಿದಾಗ ವ್ಯಕ್ತವಾಗುವ ಲೈಂಗಿಕ ಗೀಳು. ಅದು ಅಣೆಕಟ್ಟೊಂದರ ಹಿಂದೆ ರಾಶಿಗೊಂಡ ಉತ್ಪ್ರೇಕ್ಷಿತ ಲೈಂಗಿಕತೆ ಬೆಳವಣಿಗೆಯ ಮಾರ್ಗ, ಯಾವುದೇ ವಸ್ತು ತೆರೆದುಕೊಂಡ ಕೂಡಲೇ ಅದು ಮಾಮೂಲು ಪರಿಮಾಣಕ್ಕೆ ಕುಗ್ಗುತ್ತದೆ. ಹಾಗೆಯೇ ತಮ್ಮ ಸಂಬಂಧಗಳ ವಿರುದ್ಧ ಹಳೆಯ ಮುನಿಸುಗಳಲ್ಲಿ ಮತ್ತು ಬಹಳ ಸಲ ಬದುಕಿನ ಶಕ್ತಿಗಳಿಗೆ ಅಣೆಕಟ್ಟು ನಿರ್ಮಿಸುವ ಭಾವ ಜಟಿಲತೆಗಳಲ್ಲಿ ಸಿಕ್ಕಿ ಹಾಕಿಕೊಳ್ಳುತ್ತದೆ. ಬಾಲಿಶವೆಂದು ಕರೆಯಲಾಗುವ ಲೈಂಗಿಕತೆಯ ಬಗೆಯಲ್ಲಿ ತಪ್ಪದೇ ಗೋಚರವಾಗತಕ್ಕದ್ದು. ಈ ತಡೆಯೇ ಅದು ನಿಜವಾಗಿ ಲೈಂಗಿಕತೆಯಲ್ಲಿ ಮನಸ್ಸಿನ ಮತ್ತೊಂದು ಪ್ರಾಂತಕ್ಕೆ ಸೇರುವ ಒತ್ತಡಗಳ ಅಸಹಜ ವಿಸರ್ಜನೆ. ಹೀಗಿರುವಾಗ ಈ ಪ್ರವಾಹ ಪೂರ್ಣ ಪ್ರಾಂತದಲ್ಲಿ ಕಾಲಾಡಿಸುವುದರಿಂದ ಪ್ರಯೋಜನವೇನು? ಹೊರಹಾಕುವ ನಾಲೆಗಳ ತೆರೆಯುವಿಕೆ ಹೆಚ್ಚು ಮುಖ್ಯ ಎಂಬುದನ್ನು ವಿವೇಚನೆ ಒಪ್ಪುತ್ತದೆ. ಖಂಡಿತವಾಗಿ ಮಡುಗೊಂಡ ಶಕ್ತಿಗೆ ಅಗತ್ಯವಾದ ಸಾಧ್ಯತೆಯ ವ್ಯತ್ಯಾಸವನ್ನು ನಾವು ದೃಷ್ಟಿ ಬದಲಾವಣೆಯಲ್ಲಿ ಕಂಡುಕೊಳ್ಳಲು ಯತ್ನಿಸಬೇಕು. ಇದನ್ನು ಸಾಧಿಸದಿದ್ದರೆ ಒಂದು ವಿಷವೃತ್ತ ಏರ್ಪಡುತ್ತದೆ. ಇಂತಹದೇ ಸಂದರ್ಭ ಅಮೃತಮತಿಯದು.

ಮನೋವಿಶ್ಲೇಷಕರು ಅದರಲ್ಲೂ ಫ್ರಾಯ್ಡ್ ಬೆಳೆಸಿರುವಂತೆ ಮನಸ್‌ತತ್ವವನ್ನು ಒಂದು ಉದಾಹರಣೆಯಾಗಿ ತೆಗೆದುಕೊಂಡು ಮನೋವಿಶ್ಲೇಷಣೆಯನ್ನು ಕುರಿತು ಚರ್ಚಿಸಬಹುದು. ಸಾಧಾರಣವಾಗಿ ಮನೋವಿಜ್ಞಾನಿಗಳಲ್ಲಿ ವಿವಾದಕ್ಕೆ ಎಡೆಮಾಡಿಕೊಟ್ಟಿರುವ ಮನೋವಿಶ್ಲೇಷಣೆಯ ಕೆಲವು ಮೂಲಭೂತ ಮುಖಗಳಿವೆ. ವಿಶೇಷವಾಗಿ ಸುಪ್ತ ಮನಸ್ಸಿನ ಅಥವಾ ಮನಸ್ಸಿನ ಸುಪ್ತ ಪ್ರದೇಶದ ಅಸ್ತಿತ್ವವನ್ನು ಊಹಿಸಿಕೊಳ್ಳುವ ತತ್ವಭಾಗ. ಮನೋವಿಜ್ಞಾನಿಯೊಬ್ಬನ ಪ್ರಕಾರ "ಸುಪ್ತ ಪ್ರಜ್ಞೆಯೆಂಬ ಶಬ್ದದ ಎಲ್ಲಾ ಬಳಕೆಗಳು ಭಾವನೆಗಳು ಸುಪ್ತ ಪ್ರಜ್ಞೆಯಲ್ಲಿರುತ್ತವೆ ಎಂದಾಗಲಿ ಅಥವಾ ಸುಪ್ತಪ್ರಜ್ಞೆ ಶಕ್ತಿ ಪೂರ್ಣವಾದುದು ಎಂದಾಗಲಿ ಹೇಳುವಂತಹವು ವಿಚಾರರಹಿತ ಅಥವಾ ವಿಮರ್ಶಾರಹಿತ ದೃಷ್ಟಿಯನ್ನೊ, ಅಜ್ಞಾನವನ್ನೊ ತೋರುತ್ತವೆ".

ಫ್ರಾಯ್ಡ್‌ನ ಪ್ರಕಾರ ಮನೋವ್ಯಾಪಾರವನ್ನು ಪ್ರಜ್ಞಾಪೂರ್ವಕವಾದುದು ಮತ್ತು ಸುಪ್ತಪ್ರಜ್ಞಾಪೂರ್ವಕವಾದುದು ಎಂದು ವಿಭಜಿಸುವುದೇ ಮನೋವಿಶ್ಲೇಷಣೆಗೆ ಆಧಾರವಾದ

ಪೂರ್ವಪಕ್ಷ. ಹಾಗೆಯೇ ಸಾಮಾನ್ಯವಾದ ನಿದಾನಾತ್ಮಕ ಮಾನಸಿಕ ಕ್ರಿಯೆಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ವೈಜ್ಞಾನಿಕವಾಗಿ ಅವನ್ನು ಸಂಯೋಜಿಸಲು ಸಾಧ್ಯವಾಗುವುದು ಈ ವಿಭಜನೆಯೊಂದರಿಂದಲೇ. ಬೇರೆ ರೀತಿಯಲ್ಲಿ ಮತ್ತೆ ಹೇಳುವುದಾದರೆ ಪ್ರಜ್ಞೆ ಮನೋವ್ಯಾಪಾರದ ಸಾರ ಎಂಬುದನ್ನು ಮನೋವಿಶ್ಲೇಷಣೆ ಒಪ್ಪಲಾರದು. ಪ್ರಜ್ಞೆ ಮನೋಜೀವನದ ಒಂದು ಗುಣವೆಂದೂ ಅದು ತನ್ನ ಇತರ ಗುಣಗಳೊಡನೆ ಸಹ-ಅಸ್ತಿತ್ವ ಪಡೆದಿರಬಹುದು ಅಥವಾ ಇಲ್ಲದೆಯೂ ಇರಬಹುದು ಎಂದು ಅದು ಭಾವಿಸುವುದು ಅನಿವಾರ್ಯ. ಮನುಷ್ಯನ ವರ್ತನೆಗಳು ಕೆಲವೊಮ್ಮೆ ಅರ್ಥವಾಗಲಾರದು. ಹಾಗೇಕೆ ವರ್ತಿಸುತ್ತಾರೆ ಎಂಬುದಕ್ಕೆ ಉತ್ತರವೂ ಸಿಗದು. ಅದನ್ನೇ ಫ್ರಾಯ್ಡ್ ತನ್ನ ಮನೋವಿಶ್ಲೇಷಣೆಯಲ್ಲಿ ಹೇಳುತ್ತಾನೆ. ಸುಪ್ತಪ್ರಜ್ಞೆಯ ಪರಿಕಲ್ಪನೆಯನ್ನು ನಾವು ತಿಳಿಯಲೆಬೇಕಾದುದು ಹೇಗೆಂಬುದನ್ನು ಫ್ರಾಯ್ಡ್ ಈ ರೀತಿ ಅರ್ಥೈಸುತ್ತಾನೆ. ತಾವೇ ಪ್ರಜ್ಞಾಪೂರ್ವಕವಾಗಿ ಪರಿಣಮಿಸದೇ ಸಾಮಾನ್ಯ ಭಾವನೆಗಳು ಮನಸ್ಸಿನಲ್ಲಿ ಉಂಟು ಮಾಡುವಂತಹ ಸರ್ವ ಪರಿಣಾಮಗಳನ್ನು ಉಂಟುಮಾಡುವಂತಹ ಬಹಳ ಶಕ್ತಿವತ್ತಾದ ಮಾನಸಿಕ ಪ್ರಕ್ರಿಯೆಗಳು ಅಥವಾ ಭಾವನೆಗಳು ಉಂಟು. ಇಂತಹ ಭಾವನೆಗಳು ಪ್ರಜ್ಞಾಪೂರಕವಾಗಲಾರವು. ಏಕೆಂದರೆ ನಿರ್ದಿಷ್ಟ ಶಕ್ತಿಯೊಂದು ಅವಕ್ಕೆ ವಿರುದ್ಧವಾಗಿದೆ ಎಂಬ ನಂಬಿಕೆಯೊಡನೆ ಮನೋವಿಶ್ಲೇಷಣಾ ತತ್ವ ಪ್ರವೇಶಿಸುವುದು ಇಲ್ಲಿಯೇ. ಪ್ರಜ್ಞಾಪೂರ್ವಕಗೊಳ್ಳುವುದಕ್ಕೆ ಮುನ್ನ ಭಾವನೆಗಳು ಇದ್ದ ಸ್ಥಿತಿಯನ್ನು ನಾವು ದಮನವೆಂದು ಕರೆಯುತ್ತವೆ. ದಮನವನ್ನು ಆರಂಭಿಸಿ ನಿರ್ವಹಿಸುವ ಶಕ್ತಿ ವಿಶ್ಲೇಷಣಾ ಕಾರ್ಯದ ಕಾಲದಲ್ಲಿ ನಿರೋಧವೆಂದು ಗ್ರಹಿಸಲ್ಪಡುತ್ತದೆ. ಸುಪ್ತಪ್ರಜ್ಞೆಯಲ್ಲಿ ಎರಡು ಬಗೆಗಳಿವೆ. ಸುಪ್ತವಾಗಿದ್ದು ಜಾಗೃತ (ಪ್ರಜ್ಞೆ) ವಾಗಬಲ್ಲದ್ದು ಮತ್ತು ದಮನಗೊಂಡದ್ದು. ಸಾಮಾನ್ಯ ಮಾರ್ಗದಲ್ಲಿ ಜಾಗೃತವಾಗಲಾರದ್ದು. ಸುಪ್ತವಾಗಿದ್ದು ಎಚ್ಚರಗೊಳ್ಳಬಹುದಾದುದ್ದನ್ನು ಪೂರ್ವ ಪ್ರಜ್ಞೆಯೆಂದು ಕರೆಯುತ್ತೇವೆ. ದಮನಗೊಂಡ ಸುಪ್ತಪ್ರಜ್ಞೆಗೆ ಮಾತ್ರ ಸುಪ್ತಪ್ರಜ್ಞೆಯೆಂಬ ಶಬ್ಧವನ್ನು ಮೀಸಲಿಡುತ್ತೇವೆ.

ಪ್ರತಿಯೊಬ್ಬ ವ್ಯಕ್ತಿಯನ್ನು ಮಾನಸಿಕ ವ್ಯಾಪಾರಗಳ ಸುಸಂಬದ್ಧ ವ್ಯವಸ್ಥೆಯೊಂದಿರುತ್ತದೆ. ಅದನ್ನು ಅವನ ಅಹಂ ಎಂದು ಕರೆಯುತ್ತೇವೆ. ಈ ಅಹಂ ನಮ್ಮ ಅಲೋಚನೆಗಳ ಪ್ರಜ್ಞಾಪೂರ್ವಕ ಪ್ರವಾಹದೊಡನೆ ನಾವು ಅನುಭವಿಸುವ ಸಂವೇದನೆಗಳೊಡನೆ ಅಭಿನ್ನವಾಗಿರುತ್ತವೆ. ಅಲ್ಲದೇ ಫ್ರಾಯ್ಡ್‌ನ ಪ್ರಕಾರ ಈ ಅಹಂನಿಂದ ಮನೋ ವ್ಯಾಪಾರಗಳ ಈ ಸುಸಂಬದ್ಧ ವ್ಯವಸ್ಥೆಯಿಂದ ದಮನಗಳು ಉಗಮಗೊಳ್ಳುತ್ತವೆ. ಅವುಗಳಿಂದಾಗಿ ಮನಸ್ಸಿನ ಕೆಲವು ಪ್ರವೃತ್ತಿಗಳನ್ನು ಪ್ರಜ್ಞೆಯಿಂದ ಮಾತ್ರವಲ್ಲದೇ ಅವುಗಳ ಅಭಿವ್ಯಕ್ತಿ ಹಾಗೂ ಚಟುವಟಿಕೆಯ ಇತರ ಪ್ರಕಾರಗಳಿಂದಲೂ ವಿಚ್ಛೇಧಿಸುವ ಪ್ರಯತ್ನ ನಡೆಯುತ್ತದೆ. ಜೀವನದುದ್ದಕ್ಕೂ ಅಹಂನ ವರ್ತನೆ ಮುಖ್ಯವಾಗಿ ತಟಸ್ಥವಾದುದು. ಅಜ್ಞಾತವೂ, ಅನಿಯಂತ್ರಣೀಯವೂ ಆದ ಶಕ್ತಿಗಳಿಂದ ವ್ಯಕ್ತಿ ಬದುಕಲ್ಪಡುತ್ತಾನೆ. ಆದರೆ, ಈ ಶಕ್ತಿಗಳು ಅಂತರ್ಗತವಾಗಿರುತ್ತವೆ. ಸಾಮಾನ್ಯವಾಗಿ ನಾವು ದಮನಮಾಡುವ,

ಆದರೆ ಪ್ರಜ್ಞಾ ತರ್ಕದ ಅಧೀನಕ್ಕೆ ಎಂದೂ ಒಳಪಡದ ವಾಸನೆಗಳ ಮತ್ತು ಭಾವಗಳ ಶೇಖರಣೆಯಾಗಿದ್ದು, ಪ್ರತಿ ವ್ಯಕ್ತಿಯಲ್ಲೂ ಬೇರೆ ಬೇರೆಯಾಗಿ ಗುರುತಿಸಲ್ಪಡುತ್ತವೆ. ಈ ಶೇಖರಣೆಗೆ ಫ್ರಾಯ್ಡ್ ಇದ್ (Id) ಎನ್ನುತ್ತಾನೆ. ಏಕೆಂದರೆ ಅದು ಅಹಂನ ವ್ಯಕ್ತಾತೀತ (Impersonal) ಮುಖ.

ಹೆಣ್ಣು: ಮನೋವಿಶ್ಲೇಷಣೆಯ ದೃಷ್ಟಿಕೋನ

ಮನೋದೈಹಿಕ ಶಾಸ್ತ್ರಕ್ಕಿಂತ ಮನೋವಿಶ್ಲೇಷಣೆಯು ಈಚಿನ ದಿನಗಳಲ್ಲಿ ಮೇಲುಗೈಯನ್ನು ಸಾಧಿಸಿದೆ. ಮಾನಸಿಕ ಸ್ಥಿತಿಯು ಮಾನವ ವರ್ತನೆಗೆ ಕಾರಣ, ಪರಿಣಾಮವನ್ನು ಅರಿಯುವಲ್ಲಿ ಮಹತ್ವದ್ದಾಗಿದೆ. ಮನೋವಿಶ್ಲೇಷಣೆಯು ಒಂದು ಸಿದ್ಧಾಂತವಲ್ಲ; ಅದೊಂದು ವಿಧಾನ ಎಂಬುದಾಗಿ ಕೆಲವು ಮನೋವಿಶ್ಲೇಷಕರು ಅಭಿಪ್ರಾಯ ಪಡುತ್ತಾರೆ. ಆದರೆ ಒಂದು ವಿಧಾನದ ಯಶಸ್ಸು ಅದನ್ನು ರೂಪಿಸಿದ ಸಿದ್ಧಾಂತದ ಬುಡವನ್ನು ಭದ್ರಪಡಿಸುತ್ತದೆಯಷ್ಟೆ? ಮನೋವಿಶ್ಲೇಷಣಾತ್ಮಕ ಚಿಂತನೆಗಳಲ್ಲಿರುವ ಬಿರುಕುಗಳು ಅವುಗಳೊಳಗೆ ಎದ್ದು ಕಾಣುವಂತಿವೆ. ಈ ಬೆಳವಣಿಗೆಯಲ್ಲಿ ಒಂದು ಚಿಂತನಾಕ್ರಮ ಇದೆ. ಅದು ಹೆಣ್ಣಿನ ಅಧ್ಯಯನಕ್ಕೆ ಎಷ್ಟು ನೆರವಾಗಬಲ್ಲದು ಎಂಬುದನ್ನಷ್ಟೇ ಇಲ್ಲಿ ಪರಿಶೀಲಿಸಲಾಗಿದೆಯೆ ಹೊರತು ಇಡೀ ಚಿಂತನಾಕ್ರಮವನ್ನು ಕುರಿತು ವಿಮರ್ಶೆಗೆ ತೊಡಗುವುದಿಲ್ಲ. ಅಲ್ಲದೇ ಮನೋವಿಶ್ಲೇಷಣೆಯನ್ನು ಇಡೀಯಾಗಿ ಚರ್ಚಿಸುವುದು ಇಲ್ಲಿ ಅನಗತ್ಯ ಹಾಗೂ ಅಸಾಧ್ಯ. ಎಲ್ಲಾ ಸೈದ್ಧಾಂತಿಕ ಚೌಕಟ್ಟುಗಳಂತೆಯೇ ಇದು ಕೂಡಾ ತನ್ನ ಇಕ್ಕಟ್ಟಾದ ಪರಿಕಲ್ಪನೆಗಳ ವಿಷಯದಲ್ಲಿ ಒಂದು ವಿಚಿತ್ರವಾದ ನಮನಶೀಲತೆಯನ್ನು ಅಳವಡಿಕೆಯ ದೃಷ್ಟಿಕೋನವನ್ನು ಹೊಂದಿದೆ. ಇಲ್ಲಿ ಬಳಸುವ ಎಷ್ಟೋ ಪದಗಳಿಗೆ ಅತಿ ವಾಚ್ಯಾರ್ಥವೂ ಇದೆ. ಕೆಲವೊಂದು ಪದಗಳು ದೇಹರಚನೆಯಲ್ಲಿ ಎದ್ದು ಕಾಣುವ ಮಾಂಸಲ ಭಾಗವೊಂದನ್ನು ಸೂಚಿಸುತ್ತದೆ. ಇದರ ಜೊತೆಗೆ ಪದದ ಅರ್ಥವನ್ನು ಹಿಗ್ಗಲಿಸಿ ಸಾಂಕೇತಿಕ ನೆಲೆಗೆ ಕೊಂಡೊಯ್ಯುತ್ತದೆ. ವಾಚ್ಯಾರ್ಥದ ನೆಲೆಯಲ್ಲಿ ಸಿದ್ಧಾಂತದ ಒಳತಿರುಳನ್ನು ಗ್ರಹಿಸಿಲ್ಲ ಎನ್ನುತ್ತಾರೆ. ಹೀಗೆ ಒಳತಿರುಳಾದ ಸಾಂಕೇತಿಕ ಅರ್ಥಗಳ ನೆಲೆಯಲ್ಲಿ ಸಿದ್ಧಾಂತಗಳನ್ನು ಚರ್ಚಿಸಿದರೆ ಈ ಚಿಂತಕರು ವಾಚ್ಯಾರ್ಥಕ್ಕೆ ಮಿತಿಗೊಳ್ಳಲು ಸೂಚಿಸುತ್ತಾರೆ. ಈ ಚಿಂತನಾಕ್ರಮದಲ್ಲಿ ಕಾಣುವ ಅತಿ ನಿಖರತೆ ಕೆಲವೊಮ್ಮೆ ಪಾಂಡಿತ್ಯ ಪ್ರದರ್ಶನವಾಗಿ ಅಸ್ಪಷ್ಟ ನೆಲೆಗೆ ದಾಟುತ್ತದೆ. 'ಲೈಂಗಿಕತೆಯು ಅಸ್ತಿತ್ವದ ಸಹಚರಿ ಸ್ಥಿತಿ' ಎಂಬ ಸಾರ್ತ್ರ್ ಮತ್ತು ಮಾರ್ಲೋಪಾಂಟಿ ಇವರ ಹೇಳಿಕೆಯನ್ನು ಎರಡು ಬೇರೆ ರೀತಿಯಲ್ಲಿ ಅರ್ಥೈಸಬಹುದು. ಒಂದು ಅಸ್ತಿತ್ವದ ಪ್ರತಿಯೊಂದು ಅನುಭವವು ಲೈಂಗಿಕ ಸಂಗತಿಯ ಅಸ್ತಿತ್ವದ ನೆಲೆಯಲ್ಲಿ ಮಹತ್ವ ಪಡೆದಿದೆ ಎಂದು ತಿಳಿಯುವುದು. ಇವೆರಡೂ ಅರ್ಥಗಳನ್ನು ಹೊಂದಿಸಿಕೊಳ್ಳಬಹುದಾದರು ಹಲವು ಬಾರಿ ಒಂದು ಅರ್ಥ ಇನ್ನೊಂದು ಅರ್ಥವಾಗಿ ಬಳಕೆಯಾಗತೊಡಗುತ್ತದೆ. ಫ್ರಾಯ್ಡ್ ತಾನೊಬ್ಬ ತತ್ವಶಾಸ್ತ್ರಜ್ಞನಲ್ಲವೆಂದು ವಾದಿಸಿ, ತನ್ನ ಸಿದ್ಧಾಂತಗಳನ್ನು ತಾತ್ವಿಕವಾಗಿ ಸಮರ್ಥಿಸಲು ಹೋಗುವುದಿಲ್ಲವೆಂದು ಹೇಳುತ್ತಾನೆ.

ಹೀಗಾಗಿ ಈ ತಾತ್ವಿಕ ಚರ್ಚೆಗಳಿಂದ ಫ್ರಾಯ್ಡ್‌ನನ್ನು ಹೊರಗಿರಿಸಬೇಕೆಂದು ಆತನ ಶಿಷ್ಯರೆಲ್ಲರೂ ವಾದಿಸುತ್ತಾರೆ. ಆದರೆ, ಫ್ರಾಯ್ಡ್‌ನ ನಿರ್ಣಯಗಳ ಹಿಂದೆ ಒಂದು ತಾತ್ವಿಕ ನೆಲೆಗಟ್ಟು ಇದೆ. ಅವನ ಪರಿಭಾಷೆಯನ್ನು ಬಳಸಿದ ಕೂಡಲೇ ಆ ತಾತ್ವಿಕತೆಯನ್ನು ಗ್ರಹಿಸಿದಂತೆಯೇ.

ಕೇವಲ ಲೈಂಗಿಕತೆಯ ನೆಲೆಯಿಂದಷ್ಟೇ ಮನುಷ್ಯರ ಬದುಕನ್ನು ವಿವರಿಸುವ ಫ್ರಾಯ್ಡ್‌ನ ಈ ಚಿಂತನಾ ವ್ಯವಸ್ಥೆಯ ಕೊರತೆಗಳನ್ನು ತಿಳಿದಿದ್ದ ಆಡ್ಲರ್ ತನ್ನ ಪ್ರತಿವಾದವನ್ನು ಮಂಡಿಸುತ್ತಾನೆ. ಲೈಂಗಿಕತೆಯನ್ನು ಪೂರ್ಣ ವ್ಯಕ್ತಿತ್ವದೊಡನೆ ಐಕ್ಯಗೊಳಿಸಬೇಕೆಂಬುದು ಅವನ ವಾದ. ಫ್ರಾಯ್ಡ್ ಪ್ರಕಾರ ಮನುಷ್ಯನ ಎಲ್ಲಾ ವರ್ತನೆಗಳಿಗೂ ಬಯಕೆಗಳೇ ಕಾರಣ. ಬಯಕೆಗಳೆಂದರೆ ಆನಂದಕ್ಕಾಗಿ ಹುಡುಕಾಟ. ಆದರೆ ಆಡ್ಲರ್ (Adler) ತಿಳಿದಂತೆ ಮನುಷ್ಯರಿಗೆ ಜೀವನದಲ್ಲಿ ಕೇವಲ ನಿರ್ದಿಷ್ಟ ಗುರಿಗಳಿವೆ. ಹೀಗಾಗಿ ಆಡ್ಲರ್ (Adler) ಲೈಂಗಿಕ ಪ್ರವೃತ್ತಿಗಳ ಜಾಗದಲ್ಲಿ ಉದ್ದೇಶ, ಗುರಿ ಮತ್ತು ಯೋಜನೆಗಳನ್ನು ಇರಿಸುತ್ತಾನೆ. ಬುದ್ಧಿಮತ್ತೆಗೆ ಆತ ನೀಡುವ ಸ್ಥಾನಮಾನ ಎಷ್ಟು ದೊಡ್ಡದೆಂದರೆ ಅದಕ್ಕೆ ಹೋಲಿಸಿದಾಗ ಲೈಂಗಿಕತೆಗೆ ಕೇವಲ ಸಾಂಕೇತಿಕ ಬೆಲೆ ಮಾತ್ರ ಉಳಿಯುತ್ತದೆ. ಆದರೆ ಲೈಂಗಿಕತೆಯನ್ನು ಅಷ್ಟು ಸಾಮಾನ್ಯವಾಗಿ ನೋಡಲಾಗುವುದಿಲ್ಲ ಆಡ್ಲರ್‌ನ ಚಿಂತನೆಯಂತೆ ಮನುಷ್ಯ ಜೀವನವನ್ನು ಮೂರು ಮೂಲಭೂತ ಸಂಗತಿಗಳಿಂದ ವಿವರಿಸುತ್ತಾನೆ. ಪ್ರತಿ ವ್ಯಕ್ತಿಯಲ್ಲೂ ಸಾಮರ್ಥ್ಯಗಳಿಸುವ ಬಯಕೆ ಇರುತ್ತದೆ. ಇದರೊಡನೆ ಕೀಳರಿಮೆಯ ಮನೋಭಾವವಿರುತ್ತದೆ. ಇವೆರಡರ ಸಂಘರ್ಷದಲ್ಲಿ ಪ್ರತಿ ವ್ಯಕ್ತಿಯೂ ಹಲವು ಹತ್ತು ರೀತಿಗಳಲ್ಲಿ ತಾನು ಭರಿಸಲಾಗದ ವಾಸ್ತವತೆಯಿಂದ ಪಲಾಯನ ಮಾಡುವ ಸ್ಥಿತಿಯಲ್ಲಿ ಇರುತ್ತಾನೆ. ಆತ ತಾನು ಉಳಿಯಲು ಯತ್ನಿಸುತ್ತಾನೆ. ಇದು ಆತನ ಸಾಮಾಜಿಕ ದೃಷ್ಟಿಕೋನವನ್ನು ಪ್ರಭಾವಿಸಬಲ್ಲ ಮನೋವಿಕಲತೆಗೆ ಕಾರಣವಾಗಬಹುದು. ಹೆಣ್ಣಿನಲ್ಲಿ ಇರುವ ಕೀಳರಿಮೆಯ ಮನೋಭಾವವು ತನ್ನ ಹೆಣ್ಣುತನವನ್ನೇ ಆಕೆ ನಿರಾಕರಿಸುವ ಹಂತಕ್ಕೆ ಒಯ್ಯಬಹುದು ಹೀಗೆ ಮನೋವ್ಯಾಪಾರವನ್ನು ಕುರಿತು ಹೀಗೆ ಎಂದು ನಿಖರವಾಗಿ ಹೇಳಲು ಸಾಧ್ಯವಾಗುವುದಿಲ್ಲ.

ಆಡ್ಲರ್ (Adler) ಮತ್ತು ಫ್ರಾಯ್ಡ್ ಇವರ ನಡುವೆ ಇರುವ ತಾತ್ವಿಕ ಭಿನ್ನತೆಯ ಬಗ್ಗೆಯಾಗಲೀ ಅಥವಾ ಅವರಿಬ್ಬರ ವಾದವನ್ನು ಸಮರ್ಥಿಸುವುದರ ಬಗೆಗಾಗಲೀ ಇಲ್ಲಿ ವಿಶ್ಲೇಷಣೆ ಅನಗತ್ಯ. ಇಷ್ಟಂತೂ ನಿಜ ಲೈಂಗಿಕ ಅಪೇಕ್ಷೆಯನ್ನು ಆಧರಿಸಿದ ವಿವರಣೆಯಾಗಲೀ ಅಥವಾ ಈ ಅಪೇಕ್ಷೆಯ ಉದ್ದೇಶವನ್ನು ಕುರಿತ ವಿವರಣೆಯಾಗಲೀ ಸಾಲದು. ಏಕೆಂದರೆ ಅಪೇಕ್ಷೆ ಮತ್ತು ಉದ್ದೇಶಗಳ ನಡುವೆ ಒಂದು ವಿಶಿಷ್ಟ ಸಂಬಂಧವಿದೆ. ಯಾವುದು ಯಾವುದಕ್ಕೆ ಕಾರಣವಾಗುತ್ತದೆ. ಅಥವಾ ಯಾವುದು ಯಾವುದರ ಇರುವಿಕೆಯನ್ನು ವಿವರಿಸುತ್ತದೆ ಎಂದು ಹೇಳುವುದು ಸಾಧ್ಯವಾಗುವುದಿಲ್ಲ. ಹೀಗಾಗಿ ಮನೋವಿಶ್ಲೇಷಣೆಯಲ್ಲಿ ಈ ಇಬ್ಬರು ಚಿಂತಕರನ್ನೂ ಒಟ್ಟಾಗಿಯೇ ಇರಿಸಿ ನೋಡಬೇಕಾಗುತ್ತದೆ. ಜೀವನದಲ್ಲಿ ಗುರಿಗಳ ಅಂತಿಮ ಸಾಧನೆಗಳ

ನೆಲೆಗಳನ್ನು ಮಂಡಿಸುವ ಆಡ್ಲರ್ (Adler) ತನ್ನ ಚಿಂತನೆಗಳಲ್ಲಿ ಚಿತ್ತ ಪ್ರೇರಿತ ಕಾರಣಗಳನ್ನು ಒಪ್ಪಿಕೊಳ್ಳುತ್ತಾನೆ. ಅಪೇಕ್ಷೆ ಮತ್ತು ಅವು ಪೂರ್ಣಗೊಳ್ಳುವ ರೀತಿಯ ನೆಲೆಯಲ್ಲಿ ಆತ ಬಹುಮಟ್ಟಿಗೆ ಫ್ರಾಯ್ಡ್‌ನನ್ನೇ ಅನುಸರಿಸುತ್ತಾನೆ. ಒಬ್ಬ ಭೌತಶಾಸ್ತ್ರಜ್ಞ ಎರಡು ವಿರುದ್ಧ ಶಕ್ತಿಗಳ ನಡುವೆ ಇರುವ ಆಕರ್ಷಣೆ ಇಲ್ಲವೇ ವಿಕರ್ಷಣೆಗಳ ನೆಲೆಯಲ್ಲಿ ಮಾತ್ರ ಅಪರಿಹಾರ್ಯವಾದ ಸ್ಥಿತಿಯೊಂದನ್ನು ಕಲ್ಪಿಸಿಕೊಳ್ಳಬಲ್ಲ. ಹೀಗಾಗಿ ಮನೋವಿಶ್ಲೇಷಕರೂ ಕೂಡ ಒಂದು ಪ್ರಶ್ನಾತೀತವೆಂದು ತಿಳಿಯಲಾದ ಸ್ಥಿತಿಯನ್ನು ಒಪ್ಪಿಕೊಳ್ಳುತ್ತಾರೆ. ಅವರ ಪ್ರಕಾರ ಮನುಷ್ಯರ ಇಡೀ ಜೀವನ ಹಲವು ಅಪರಿಹಾರ್ಯ ಸಂಗತಿಗಳ ನಡುವೆ ನಡೆಯುವ ಮುಖಾಮುಖಿ. ಇದೇ ಸ್ಥಿತಿ ಹೆಂಗಸಿನಲ್ಲೂ ಇದೆ ಎಂದು ಮನೋವಿಶ್ಲೇಷಕರು ಸೂಚಿಸುತ್ತಾರೆ. ತಮ್ಮ ಸಿದ್ಧಾಂತಗಳಿಗೆ ಪ್ರಾಯೋಗಿಕ ಸಮ್ಮತಿಯನ್ನು ಶೋಧಿಸುವುದಕ್ಕೆ ಮನೋವಿಶ್ಲೇಷಕರಿಗೆ ಏನೂ ಕಷ್ಟವಿಲ್ಲ. ಬಹುಕಾಲದವರೆಗೆ ಟಾಲೆಮಿ ಗ್ರಹ ರಚನೆಯ ವ್ಯವಸ್ಥೆಯಲ್ಲಿ ಗ್ರಹಗಳು ಇರುವ ಜಾಗವನ್ನು ಗುರುತಿಸಲು ಇಡೀ ಲೆಕ್ಕಾಚಾರಕ್ಕೆ ಕೆಲವು ಸೂಕ್ಷ್ಮವಾದ ಸೇರ್ಪಡೆಗಳನ್ನು ಮಾಡುವ ವಿಧಾನವನ್ನು ಅನುಸರಿಸಲಾಗುತ್ತಿತ್ತು. ಮನೋವಿಶ್ಲೇಷಣೆಯಲ್ಲೂ ಇಂಥದೇ ಕಾರ್ಯ ನಡೆಯುತ್ತದೆ. ಈಡೀಪಸ್ ಕಾಂಪ್ಲೆಕ್ಸ್‌ಗೆ ವಿರುದ್ಧವಾದ ಒಂದು ಕಾಂಪ್ಲೆಕ್ಸ್‌ನ್ನು ರೂಪಿಸುವುದು, ಎಲ್ಲಾ ಉದ್ವೇಗಗಳ ಹಿಂದೆ ಯಾವುದೋ ಅಪೇಕ್ಷೆ ಇದೆ ಎನ್ನುವುದು ಅವರ ಮಾರ್ಗಗಳು. ಫ್ರಾಯ್ಡ್‌ನ ಚಿಂತನೆಗಳ ನೆಲಘಟ್ಟನ್ನೇ ಅಲುಗಿಸುವ ಕೆಲವು ವಿವರಗಳನ್ನು ಹೇಗೋ ಆ ಚಿಂತನೆಯ ಚೌಕಟ್ಟಿಗೆ ಹೊಂದಿಸಿದ್ದಾರೆ. ಈ ಎಲ್ಲ ಚಿಂತನೆಗೊಂದು ಆಕಾರ ದೊರೆಯುವುದು ಒಂದು ನಿರ್ದಿಷ್ಟ ಹಿನ್ನಲೆಯಲ್ಲಿ ಮಾತ್ರ. ಆದರೆ ಈ ಆಕಾರ ಗ್ರಹಿಕೆಯಿಂದ ಮಾತ್ರ ಹಿನ್ನಲೆಯ ಎಲ್ಲಾ ವಿವರಗಳೂ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಹೀಗಾಗಿ ವಿಶೇಷ ಸಂದರ್ಭವೊಂದನ್ನು ಫ್ರಾಯ್ಡಿಯನ್ ಸಿದ್ಧಾಂತದಲ್ಲಿ ವಿವರಿಸಿ ಹೊರಟಾಗ, ಅದರೊಳಗೂ ಫ್ರಾಯ್ಡಿಯನ್ ಚಿಂತನೆಗಳಿಗೆ ಸಮರ್ಥನೆ ಹೇಗೋ ಕಾಣತೊಡಗುತ್ತದೆ. ಆದರೆ ಒಂದು ಚಿಂತನೆಗೆ ಹೊಂದಿಕೊಳ್ಳಲಾದ ವಿನಾಯಿತಿಗಳೇ ಹೆಚ್ಚಾದಾಗ, ಮೂಲ ತಾತ್ವಿಕ ಚೌಕಟ್ಟನ್ನು ಮತ್ತೊಮ್ಮೆ ಪರೀಕ್ಷಿಸುವುದು ಅಗತ್ಯವಾಗುತ್ತದೆ. ಇದಕ್ಕಾಗಿಯೇ ಇಂದು ಎಲ್ಲಾ ಮನೋವಿಶ್ಲೇಷಕರು ಬೇರೆ ಬೇರೆ ಪ್ರಸಂಗಗಳನ್ನು ವಿವರಿಸುವಾಗ ಫ್ರಾಯ್ಡಿನ ಚಿಂತನೆಗಳ ಚೌಕಟ್ಟನ್ನೇ ಸಡಿಲಗೊಳಿಸಲು, ಹಿಗ್ಗಿಸಲು, ಹೊಂದಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಇತ್ತೀಚಿನ ಮನೋವಿಶ್ಲೇಷಕರು ಒಂದು ಮನೋಸಂಕೀರ್ಣವಿರುವಲ್ಲಿ ಅದಕ್ಕೆ ಹಲವಾರು ಅಂಗಗಳಿರುತ್ತವೆ. ಈ ಬೇರೆ ಬೇರೆ ಲಕ್ಷಣದ ಅಂಗಗಳ ಜೊತೆಗಿನ ಸಂಬಂದದಲ್ಲಿ ಮನೋಸಂಕೀರ್ಣ ರೂಪುಗೊಂಡಿರುತ್ತದೆಯೇ ಹೊರತು ಈ ಅಂಗಗಳಲ್ಲಿ ಯಾವುದೋ ಒಂದು ಮತ್ತೊಂದನ್ನು ಪ್ರತಿನಿಧಿಸುವ ಮಾದರಿಯಲ್ಲಿರುವುದಿಲ್ಲ. ಆದರೆ ಮೂಲಘಟಕಗಳು ಸುಮ್ಮನೆ ಒಂದು ಸರಳ ಸಂಬಂಧದಲ್ಲಿರುತ್ತವೆ ಎಂದು ತಿಳಿಯುವುದು ಸರಿಯಲ್ಲ. ಏಕೆಂದರೆ ಮಾನಸಿಕ ಜೀವನವು ಏಕಘನಾಕೃತಿಯ ಘಟಕ. ವಿವಿಧ ಘಟಕಗಳ ಮೂಲಕ ಅಸ್ತಿತ್ವದ

ಮೂಲೋದ್ದೇಶವನ್ನು ಗ್ರಹಿಸುವುದರಿಂದ ಮಾತ್ರ ಮೇಲೆ ಹೇಳಿದಂತೆ ಏಕತೆಯನ್ನು ಅರಿಯುವುದು ಸಾಧ್ಯ. ಈ ನೆಲೆಗೆ ನಾವು ದಾಟದಿದ್ದಲ್ಲಿ ಮನುಷ್ಯ ನಿರರ್ಥಕವಾದ, ಆಕಸ್ಮಿಕವಾದ ಒತ್ತಡಗಳ ನಿಷೇಧಗಳು ಕಿತ್ತಾಟಕ್ಕೆ ಆಗರವಾಗಿದ್ದಾನೆಂದು ತಿಳಿಯಬೇಕಾಗುತ್ತದೆ.

ಹೆಂಗಸನ್ನು ಆಕೆ ತನ್ನ ಹೆಣ್ಣುತನದ ಬಗ್ಗೆ ಪಡೆದಿರುವ ಅರಿವಿನ ಮೂಲಕ ವ್ಯಾಖ್ಯಾನಿಸುವುದಾಗಲೀ ಆಕೆ ಸ್ತ್ರೀಲಿಂಗ ಎಂಬ ಅಂಶದಿಂದ ಮಾತ್ರ ವಿವರಿಸುವುದಾಗಲೀ ಉಪಯುಕ್ತವಾಗುವುದಿಲ್ಲ. ಏಕೆಂದರೆ ಆಕೆ ತನ್ನ ಹೆಣ್ಣುತನದ ಬಗ್ಗೆ ಪಡೆಯುವ ಅರಿವು ಆಕೆ ಯಾವ ಸಮಾಜದಲ್ಲಿ ಇರುತ್ತಾಳೋ ಅ ಸಮಾಜವನ್ನು ಅವಲಂಬಿಸಿರುತ್ತದೆ. ಮನೋವಿಶ್ಲೇಷಣೆಯ ಪರಿಭಾಷೆಯು ಸುಪ್ತಪ್ರಜ್ಞೆಯ ನಿಯಂತ್ರಣ ಮತ್ತು ಮನೋಪಾತಳಿಯ ಜೀವನ ವಿಧಾನ ಇವುಗಳನ್ನು ವಿವರಿಸುತ್ತಾ ಪ್ರತಿವ್ಯಾಪ್ತಿಯಲ್ಲೂ ಇದು ಆಕಾರ ಪಡೆಯುವ ಬಗೆಗಳನ್ನು ಮಂಡಿಸುತ್ತದೆ. ಆಗ ಮನೋಸಂಕೀರ್ಣ, ಮನೋಪ್ರವೃತ್ತಿ ಮುಂತಾದ ಪರಿಭಾಷೆಯನ್ನು ಬಳಸುತ್ತಾರೆ. ಆದರೆ ಜೀವನವೆಂಬುದು ಜಗತ್ತಿನೊಡನೆ ಹೊಂದಿರುವ ಸಂಬಂಧದ ಒಂದು ನೆಲೆ. ವ್ಯಕ್ತಿ ತನ್ನ ಸುತ್ತಣ ಜಗತ್ತಿನೊಡನೆ ತನ್ನ ಸಂಬಂಧವನ್ನು ರೂಪಿಕೊಳ್ಳುತ್ತಾ ತನ್ನನ್ನು ತಾನು ವ್ಯಾಖ್ಯಾನಿಸಿಕೊಳ್ಳುತ್ತಾನೆ. ಹೀಗಾಗಿ, ನಾವು ನಮ್ಮ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ನಮ್ಮನ್ನಾವರಿಸಿರುವ ಲೋಕದತ್ತ ಕಣ್ಣು ಹಾಯಿಸಬೇಕು, ಹೆಂಗಸಿನ ಬಯಕೆಗಳ ತೀವ್ರತೆ ಮತ್ತು ಒತ್ತಡಗಳನ್ನು ನಾವು ಸರಿಯಾಗಿ ಯೋಜಿತ ರೀತಿಯಲ್ಲಿ ಗ್ರಹಿಸಬೇಕಾಗಿದೆ. ಈ ಬಯಕೆಯು ಆಕರ್ಷಣೆ ಮತ್ತು ವಿಕರ್ಷಣೆಗಳ ಒಂದು ಅಸ್ಥಿರ ಸಹಯೋಗವನ್ನು ರೂಪಿಸುತ್ತದೆ. ಹೆಣ್ಣಿನ ಮನೋವ್ಯಾಪಾರವು ಅನನ್ಯ ಸಂಬಂಧವಿಲ್ಲದ ಸ್ವತಂತ್ರ ನೆಲೆಗಳನ್ನು ಹೊಂದಿದೆ ಎಂದು ತಿಳಿಯುವ ಮನೋವಿಶ್ಲೇಷಣೆಯ ಚೌಕಟ್ಟನ್ನು ನಾವು ದಾಟಿ ಬರಬೇಕಾಗಿದೆ.

ಸ್ತ್ರೀವಾದಿ ದೃಷ್ಟಿಕೋನ : ಒಂದು ತಾತ್ವಿಕ ವಿವೇಚನೆ

ಸ್ತ್ರೀವಾದಿ ಚಿಂತನೆ ಮೊದಲನೆಯದಾಗಿ ಸ್ತ್ರೀ–ಪುರುಷರ ನಡುವಿನ ಅಸಮಾನತೆ ಪ್ರಕೃತಿ ಸಹಜವಲ್ಲ, ಜೈವಿಕವಲ್ಲ, ಅದು ಸಾಂಸ್ಕೃತಿಕ ಹಿನ್ನೆಲೆಯದಾಗಿದ್ದು, ಪರಿಸರದ ಕಾರಣದಲ್ಲಿ ಉದ್ಭವಿಸಿದ್ದು ಎಂದು ನಂಬುತ್ತದೆ. ಎರಡನೆಯದಾಗಿ ಪುರುಷ ದೃಷ್ಟಿಕೋನ 'ಸಾರ್ವತ್ರಿಕ'ವಲ್ಲ, ಪುರುಷ ಮೌಲ್ಯಗಳು ಪ್ರಧಾನ ಸಂಸ್ಕೃತಿಗೆ ಅನುಕೂಲಕರವಾದ ಅರ್ಧಸತ್ಯವನ್ನಷ್ಟೇ ಹೇಳುತ್ತವೆ. ಈ ಪುರುಷ ಕೇಂದ್ರಿತ ಗ್ರಹಿಕೆಯಲ್ಲಿ ಮಿತಿ ಇದೆ, ಅಪಾಯವಿದೆ ಎಂದೂ ಸ್ತ್ರೀವಾದ ಹೇಳತ್ತದೆ. ಹೆಣ್ಣುತನದ ಗುಣ–ಸ್ವಭಾವಗಳು ದೈಹಿಕವಾಗಿ ಹೆಣ್ಣಾದ ಮಾತ್ರಕ್ಕೆ ಒಳಗೊಂಡಿರುತ್ತದೆ ಎಂಬ ಮೂಲ ನಂಬಿಕೆಯನ್ನೇ ಸ್ತ್ರೀವಾದ ಪ್ರಶ್ನಿಸುತ್ತದೆ. ಹೆಣ್ಣುತನದ ಸಮಾಜ ಸಂಪ್ರದಾಯಗಳು ಪುರುಷ ಲಾಭಕ್ಕಾಗಿ ಮಹಿಳೆಯರ ಮೇಲೆ ಹೇರಿದ ಗುಣಗಳಾಗಿವೆ ಎಂಬುದಾಗಿ ಸ್ತ್ರೀವಾದ ನಂಬುತ್ತದೆ. ತಾಯ್ತನದ ಹಂಬಲ, ಸತೀತ್ವ, ಶೀಲ, ಪಾತಿವ್ರತ್ಯ ಎಲ್ಲವೂ ಸಮಾಜದ

ನಿರೀಕ್ಷೆಯೇ ಹೊರತು ಹೆಣ್ಣಿಗೆ ವರ್ಣತಂತುಗಳಿಂದಲೇ ಹರಿದುಬಂದಿರುವುದಿಲ್ಲ. ಪ್ರತಿ ವ್ಯಕ್ತಿಯಲ್ಲೂ ಹೆಣ್ಣು ಗಂಡು ಗುಣಗಳಿವೆ. ಆದರೆ ಸಮಾಜವು ಧೈರ್ಯ, ಸಾಹಸ, ಆಕ್ರಮಣಶೀಲತೆಯನ್ನು ಗಂಡುಗುಣಗಳೆಂದು, ಗಂಡಿನಲ್ಲಿ ಮಾತ್ರ ಇವುಗಳನ್ನು ಪೋಷಿಸಿದೆ. ಸಹನೆ, ಸಂಯಮ, ಶೀಲ, ವಿಧೇಯತೆಗಳು ಹೆಣ್ಣಿಗೆ ಅನ್ವಯಿಸಿತು. ಇಷ್ಟಕ್ಕೆ ನಿಲ್ಲದೇ ಗಂಡುಗುಣಗಳನ್ನು ಹೆಚ್ಚಿನದೆಂದೂ, ಹೆಣ್ಣು ಗುಣಗಳನ್ನು ದೌರ್ಬಲ್ಯವೆಂಬಂತೆ ನೋಡಿತು. ಪ್ರತಿಲಿಂಗದೊಡನೆ ಜೋಡಿಸಿದ ಗುಣ ವಿಶೇಷಗಳು–ಆ ಲಿಂಗದ ಆಯಾಮಗಳನ್ನು ಸೀಮಿತಗೊಳಿಸಿ, ಹೆಣ್ಣು ಗಂಡಿನ ಸಾಮ್ಯವನ್ನು ಅದುಮಿಟ್ಟು ಬದುಕಿನ ನೂರು ಸಾಧ್ಯತೆಗಳನ್ನು ಬದಿಗಿಟ್ಟಿತು. ಹೆಣ್ಣು–ಗಂಡಿನ ಕಾರ್ಯರಂಗಗಳನ್ನು ವಿಂಗಡಿಸಿ, ಅವರ ಆಸಕ್ತಿ ಅಭಿರುಚಿಗಳಿಗೆ ಆದ್ಯತೆ ಇಲ್ಲದೆ, ನಿಗದಿತ ಏಕತಾನತೆಯ ಪಾತ್ರ ನಿರ್ವಹಣೆಯನ್ನು ನಿರೀಕ್ಷಿಸಿತು.

ಹೆಣ್ಣುಗಂಡಿನ ವಿಭಿನ್ನತೆಯನ್ನು ವ್ಯಕ್ತಿವೈಶಿಷ್ಟ್ಯವೆಂದು ಪರಿಗಣಿಸದೆ ಅಸಮಾನ ನೆಲೆಯ ಮೇಲೆ ರೂಪುಗೊಂಡ ಸಾಮಾಜಿಕ ವ್ಯವಸ್ಥೆ ಹೆಣ್ಣನ್ನು ಸೀಮಿತಗೊಳಿಸಿತು. ಗಂಡಿಗೆ ಪೋಷಣೆಯ ಸಂಪೂರ್ಣ ಹೊರೆಯನ್ನು ಕಡ್ಡಾಯವಾಗಿಸಿತು. ಹೆಣ್ಣಿಗೆ ಶೀಲ ಪಾತಿವ್ರತ್ಯದ ಕಟ್ಟು ಬಿಗಿಯಿತು. ಗಂಡಿನ ಲೈಂಗಿಕತೆಯನ್ನು ಗರ್ವವೆನಿಸಿತು. ಹೇರಿದ ಪಾತ್ರ ನಿರ್ವಹಣೆಯ ಒತ್ತಡದಲ್ಲಿ ಗಂಡುಹೆಣ್ಣುಗಳಿಬ್ಬರೂ ತಮ್ಮ ನಿಜವ್ಯಕ್ತಿತ್ವವನ್ನು ಮುದುಪಿಟ್ಟು ಪಾತ್ರಾಭಿನಯಕ್ಕೆ ಇಳಿಯಬೇಕಾಯಿತು. ಗಂಡು ಹೆಣ್ಣಿಗನಾಗುವ ಭಯದಲ್ಲಿ ಹೆಣ್ಣು ಗಂಡುಬೀರಿ ಎನಿಸಿಕೊಳ್ಳುವ ಭೀತಿಯಲ್ಲಿ, ಹೆಣ್ಣು ಗಂಡುಗಳು ಪರಿಸರದೊತ್ತಡಕ್ಕೆ ಒಪ್ಪಿಕೊಂಡು, ಕಲ್ಪಿತ ಸೀಮೆ ಸರಹದ್ದುಗಳೊಳಗೆ ಪ್ರರಿಭ್ರಮಿಸಿ ಅದರಾಚಿನ ಬದುಕಿನ ನೂರು ಅನುಭವಗಳಿಂದ, ಸಾಧ್ಯತೆಗಳಿಂದ ವಂಚಿತರಾದರು.

ಸ್ತ್ರೀವಾದಿ ದೃಷ್ಟಿಕೋನ ಮಾನವತಾವಾದಕ್ಕಿಂತ ಭಿನ್ನವಲ್ಲ. ಹುಟ್ಟಿನಿಂದಲೇ ಒಂದು ಗುಂಪು ಇನ್ನೊಂದು ಗುಂಪಿಗಿಂತ ಶ್ರೇಷ್ಠ ಎಂಬ ಮೂಲ ಶ್ರೇಣೀಕೃತ ವ್ಯವಸ್ಥೆಯನ್ನು ಸ್ತ್ರೀವಾದ ತಿರಸ್ಕರಿಸುತ್ತದೆ. ಅದು ಬ್ರಾಹ್ಮಣ ಶೂದ್ರನಿಗಿಂತ ಶ್ರೇಷ್ಠ ಎಂಬ ಭಾವನೆಯಾಗಬಹುದು. ಬಿಳಿಯ ಕರಿಯನಿಗಿಂತ ಉತ್ತಮ, ಗಂಡು ಹೆಣ್ಣಿಗಿಂತ ಮೇಲು ಎಂಬ ಭಾವನೆಯೂ ಆಗಬಹುದು. ಆದರೆ ಜಾತಿವಾದ, ಜನಾಂಗವಾದ, ವರ್ಗವಾದಗಳಂತೆ ಶೋಷಕರ, ಶೋಷಿತರ ಸ್ಪಷ್ಟ ವಿಭಾಗವನ್ನು ಸ್ತ್ರೀವಾದದಲ್ಲಿ ಗುರುತಿಸಲು ಸಾಧ್ಯವಿಲ್ಲ. ಈ ಶೋಷಣೆ ಅತಿಸೂಕ್ಷ್ಮ ಹಂತದಲ್ಲಿ ನಡೆಯುವಂತಹದ್ದು. ಜೊತೆಗೆ ಸ್ತ್ರೀಯರೆಲ್ಲರೂ ಸ್ತ್ರೀವಾದಿಗಳಲ್ಲ. ಹಾಗೆಯೇ ಪುರುಷರೆಲ್ಲರೂ ಪುರುಷಪ್ರಧಾನತೆಯನ್ನು ಒಪ್ಪಿಕೊಂಡವರೂ ಅಲ್ಲ. ಆದ್ದರಿಂದಲೇ ಇವನ್ನು ಕೇವಲ ಲಿಂಗ ಆಧಾರಿತವಾಗಿಸದೆ, ಮಾನಸಿಕ ಹಾಗೂ ಬೌದ್ಧಿಕ ಮನಸ್ಥಿತಿಯ ಮೇಲೆ ಆಧರಿಸಿರುವುದನ್ನು ಕುರಿತು ಆಲೋಚಿಸಬೇಕಾಗಿದೆ. ಪುರುಷ ಕೇಂದ್ರಿತ ಸಮಾಜಕ್ಕೂ, ಸ್ತ್ರೀಯರ ಅನಿಸಿಕೆಗಳಿಗೂ, ಹೊರಗಿನ ಸಮಾಜದ ನಂಬಿಕೆಗಳಿಗೂ, ನಿರೀಕ್ಷೆಗಳಿಗೂ ವಿಪರೀತ ಅಂತರವಿದ್ದು,

ಈ ಪುರುಷ ಕೇಂದ್ರಿತ, ಪುರುಷ ನಿರ್ಮಿತ ಅಂತರಗಳು ಸ್ತ್ರೀಯರಲ್ಲಿ ಸದಾ ಕಾಲ ಗೊಂದಲವೆಬ್ಬಿಸಿ ತಮ್ಮ ವ್ಯಕ್ತಿತ್ವವನ್ನು ಅಸ್ತಿತ್ವವನ್ನು ಗುರುತಿಸಿಕೊಳ್ಳುವಲ್ಲಿ ಎಡಬಿಡದೇ ಸಂಘರ್ಷಕ್ಕಳಿಯಬೇಕಾದ ಅನಿವಾರ್ಯತೆ ಇದೆ.

ಸ್ತ್ರೀ ಸಂವೇದನೆಯು ಪುರುಷ ಸಂವೇದನೆಗಿಂತ ಭಿನ್ನ, ಹಾಗೆಯೇ ಸಹಜ ಕೂಡ. ಇದಕ್ಕೆ ಸಾಂಸ್ಕೃತಿಕ ಕಾರಣಗಳಿವೆ, ಮಾನಸಿಕ ಕಾರಣಗಳಿವೆ, ದೈಹಿಕ ಕಾರಣಗಳಿವೆ. ಸಮಾನತೆಯ ಆಧಾರದ ಸಾಮಾಜಿಕ ವ್ಯವಸ್ಥೆಯಲ್ಲಿ, ಹೆಣ್ಣು ಗಂಡಿನ ದೃಷ್ಟಿಕೋನ ಮತ್ತು ಅನುಭವಗಳ ನಡುವೆ ವಿಪರೀತ ಅಂತರವಿರುವುದಿಲ್ಲ ಎಂಬುದು ಸ್ತ್ರೀವಾದದ ನಿಲುವು. ಹೆಣ್ಣುತನ ಗಂಡುತನ ಕೇವಲ ವ್ಯತ್ಯಾಸಗಳನ್ನು ಸೂಚಿಸಲು ಮೀಸಲಾಗದೆ, ಗಂಡು-ಹೆಣ್ಣಿನ ನಡುವೆ ವಿಭಜನೆಯ ರೇಖೆ ಹಾಕಿ, ಅಸಮಾನತೆಯನನು ಹುಟ್ಟು ಹಾಕಿ, ಮೇಲು-ಕೀಳುಗಳನ್ನು ಸೃಷ್ಟಿಸಿ, ಒಂದು ವರ್ಗ ಮತ್ತೊಂದನ್ನು ಶೋಷಿಸಲು ದಾರಿಯಾಯಿತು. ಹಾಗೆಂದೇ ಒಂದೇ ಪರಿಸರದಲ್ಲಿ ಬೆಳೆದ ಹೆಣ್ಣು-ಗಂಡಿನ ಅನುಭವದ ನಡುವೆ ಅಗಾಧ ವ್ಯಾತ್ಯಾಸವಿರುತ್ತದೆ. ಹೆಣ್ಣನ್ನು ಅಬಲೆಯಾಗಿಸುವ, ಮನೆಗೆಲಸಕ್ಕೆ ಹಚ್ಚುವ, ತಗ್ಗಿ ಬಗ್ಗಿ ನಡೆವ, ವಿಧೇಯತೆಯನ್ನು ಕಲಿಸುವ, ವಿವಾಹಕ್ಕೆಂದೇ ತಯಾರಿಸುವ ಪರಿಯಲ್ಲಿ, ಬಾಲ್ಯದಿಂದಲೇ ಆರಂಭವಾಗುವ ಗೃಹಿಣಿ ಪಾತ್ರದ ತರಬೇತಿ ಇರುತ್ತದೆ. ಆದರೆ ಅವಳೊಡನೆ ಹುಟ್ಟಿ ಬೆಳೆವ ಗಂಡು ಮಗುವಿಗೆ ನೀಡುವ ಪ್ರೋತ್ಸಾಹ ಅವನ ಭವಿಷ್ಯವನ್ನು ರೂಪಿಸುವ ಪರಿಯೇ ಬೇರೆ ಇರುತ್ತದೆ. ಈ ಮೂಲ ಕಾರಣದಿಂದಲೇ ಸ್ತ್ರೀಯರ ಅನುಭವ, ಸಂವೇದನೆ ಬೇರೆಯಾಗುತ್ತದೆ. ಆದರೆ ಇತ್ತಿಚೆಗೆ ಸ್ವಲ್ಪ ಮಟ್ಟಿಗೆ ಬದಲಾವಣೆ ಕಂಡುಬರುತ್ತಿದೆಯಾದರೂ ಸಂಪೂರ್ಣ ಅಲ್ಲ. ಹಾಗೆಯೇ ಸಾಹಿತ್ಯದುದ್ದಕ್ಕೂ ಅದು ಪುರುಷ ಬರೆದಿದ್ದಿರಲಿ ಅಥವಾ ಪುರುಷ ಪ್ರಧಾನತೆಯನ್ನು ಒಪ್ಪಿದ ಸ್ತ್ರೀಯರು ರಚಿಸಿದ್ದಿರಲಿ, ಹೆಣ್ಣಿನ ಅಪ್ರಧಾನತೆಯನ್ನು, ವಿಧೇಯತೆಯನ್ನು, ಪರಾಧೀನತೆಯನ್ನು, ಪ್ರಶ್ನಿಸದೇ ತೆತ್ತುಕೊಳ್ಳುವ ಸೀತೆ ಸಾವಿತ್ರಿಯಂತಹವರ ಪಾತ್ರಗಳೇ ಯಥೇಚ್ಛವಾಗಿ ಮೂಡಿಬಂದಿವೆ. ಬೆಂಕಿಗಿಟ್ಟರೂ ಕಾಡಿಗಟ್ಟಿದರೂ ಕರುಣಾಳು ರಾಮನಲ್ಲಿ ತಪ್ಪು ಕಾಣದ, ಬುಟ್ಟಿಯಲ್ಲಿ ಗಂಡನನ್ನು ಹೊತ್ತು ವೇಶ್ಯೆಯ ಮನೆ ತಲುಪಿಸಿದ ಮಹಿಳೆಯರ ಶೀಲ, ಗುಣ, ಪಾತಿವ್ರತ್ಯ, ವಿಧೇಯತೆಗಳನ್ನು ಹಾಡಿ ಕೊಂಡಾಡಿದ ಸಂಸ್ಕೃತಿಯು, ಮಹಿಳೆಯ ವ್ಯಕ್ತಿತ್ವವನ್ನು ಉಪೇಕ್ಷಿಸಿ ಅವಳ ಇಡೀ ವ್ಯಕ್ತಿತ್ವವನ್ನು, ಬದುಕನ್ನು ನೇಪಥ್ಯಕ್ಕೆ ತಳ್ಳಿತು. ಮಹಿಳೆಯ ಗುಣ-ಸ್ವಭಾವ, ಸ್ಥಾನ, ಮಾನ ಸದಾ ಕಾಲ ಪುರುಷಕೇಂದ್ರಿತ ದೃಷ್ಟಿಕೋನದಿಂದ ಅರ್ಥೈಸಲ್ಪಟ್ಟಿದೆ.

ಈ ರೀತಿ ಕಡತಂದ ಇಂತಹ ಹಿರಿಮೆಗಳನ್ನು, ಕಲಿತ ಮೌಲ್ಯಗಳನ್ನು ಸ್ತ್ರೀವಾದಿ ದೃಷ್ಟಿಕೋನವು ತಿರಸ್ಕರಿಸುತ್ತದೆ. ಯಾರ ಹಿತಾಸಕ್ತಿಯ ಪರ ಎಂದು ತನಿಖೆಗೆ ಇಳಿಯುತ್ತದೆ. ನಮ್ಮ ಸಾಹಿತ್ಯ ಪರಂಪರೆಯ ಪುನರ್ ದರ್ಶನಕ್ಕೆ, ಪುನರ್ ಮೌಲೀಕರಣಕ್ಕೆ ಇಳಿಯುತ್ತದೆ.

ಇದು ಹೆಣ್ಣನ್ನು ಕೇವಲ ಇತಿಹಾಸಕ್ಕೆ ಸೇರಿಸಿ ತೃಪ್ತವಾಗುವುದಿಲ್ಲ. ಹೊಸ ಸಾಹಿತ್ಯಿಕ ಮೌಲ್ಯಗಳನ್ನು ಹುಟ್ಟು ಹಾಕುತ್ತದೆ. ಹೆಚ್ಚು ಮಾನವೀಯವಾದ ಮೌಲ್ಯಗಳನ್ನು ಸ್ಥಾಪಿಸಲಿಚ್ಛಿಸುತ್ತದೆ. ಸ್ಥಾಪಿತ ಮೌಲ್ಯಗಳ, ಮಾದರಿಗಳ ಪುನರ್ ಪರಿಶೀಲನೆಗಿಳಿದು ಹೆಣ್ಣನ್ನು ಕುರಿತಾದ ತಪ್ಪು ಗ್ರಹಿಕೆಗಳನ್ನು, ಏಕರೂಪಗಳನ್ನು, ಬಿಟ್ಟುಹೋದ ಅನುಪಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ಸ್ತ್ರೀ ಬರಹದ ವ್ಯತ್ಯಾಸ ವಿಶೇಷತೆಗಳನ್ನು ಒತ್ತಿ ಹೇಳುತ್ತದೆ. ಪುರುಷಕೇಂದ್ರಿತ ಕೃತಿಗಳಲ್ಲಿ ಕೃತಿ ಹೇಳುವುದಷ್ಟನ್ನೇ ಪೂರ್ಣ ಸತ್ಯವೆಂದು ಸುಮ್ಮನಾಗದೇ ಹೇಳಿದ್ದನ್ನು, ಪದ ಪದಗಳ ನಡುವಿನ ಮೌನವನ್ನು ಆಲಿಸಬೇಕಾಗುತ್ತದೆ. ಸ್ತ್ರೀವಾದವನ್ನು ಪುರಾಣದ, ಇತಿಹಾಸದ, ಯಾವುದೇ ಪಾತ್ರಕ್ಕೂ ಅನ್ವಯಗೊಳಿಸಬಹುದು. ಸ್ತ್ರೀವಾದಿ ದೃಷ್ಟಿಕೋನ ಇಂತಹ ಮೌನಗಳನ್ನು ಓದಲು, ಅನುಪಸ್ಥಿಗಳನ್ನು ಅರ್ಥೈಸಲು, ಸ್ತ್ರೀ ಸಂವೇದನೆಯ ಸೂಕ್ಷ್ಮಗಳನ್ನು ತಿಳಿಯಲು ಸಹಾಯಕವಾಗುತ್ತದೆ. ಸ್ತ್ರೀ ದೃಷ್ಟಿಕೋನ ಓದುವ ಹೊಸ ಬಗೆಯನ್ನು, ಓದಲೇ ಬೇಕಾದ ಹೊಸ ಮಾರ್ಗವನ್ನು ಹೊಸ ರೀತಿಯಲ್ಲಿ ಕಲಿಸುತ್ತದೆ.

ಸ್ತ್ರೀವಾದಿ ದೃಷ್ಟಿಕೋನವು ಕೇವಲ ಸಾಹಿತ್ಯವನ್ನು ಓದುವ ಅಥವಾ ವಿಮರ್ಶಿಸುವ ಹೊಸ ಪರಿಯಾಗಿ ಮುಗಿಯುವುದಿಲ್ಲ. ಸ್ತ್ರೀವಾದವು ಸುತ್ತಲಿನ ಪ್ರಪಂಚವನ್ನು ಬದಲಿಸುವ ಪ್ರಜ್ಞಾಪೂರ್ವಕ ಪ್ರಯತ್ನದ ಮಹತ್ವಾಕಾಂಕ್ಷೆಯನ್ನು ಹೊಂದಿದೆ. ಬದುಕನ್ನು ಸ್ತ್ರೀ-ಪುರುಷರಿಬ್ಬರಿಗೂ ತಾರತಮ್ಯವಿಲ್ಲದೇ ತೆರೆದಿಡಲು ಬಯಸುವ ಸ್ತ್ರೀ ದೃಷ್ಟಿಕೋನವು ಪುರುಷ ದೃಷ್ಟಿಕೋನಕ್ಕೆ ವಿರುದ್ದವಾಗಿ ನಿಂತು, ಪ್ರಧಾನ ಮಾದರಿಗೊಂದು ಪ್ರತಿ ಮಾದರಿ ಸೃಷ್ಟಿಸಿ ಸವಾಲೆಸೆಯುವುದಲ್ಲ. ಇತಿಹಾಸದ ಅಸ್ಪಷ್ಟತೆಗಳನ್ನು, ಅನುಪಸ್ಥಿತಿಗಳನ್ನು ಅರ್ಥೈಸಲು ಹೊರಟಿದೆ. ಪ್ರಧಾನ ಸಂಸ್ಕೃತಿ ಬೋಧಿಸಿದ ಸಾಧ್ಯತೆಗಳ ಹೊರತಾಗಿಯೂ ಸಾಧ್ಯತೆಗಳಿವೆಯೆಂದು, ಮತ್ತೊಂದು ಕಣ್ಣೋಟಕ್ಕೆ ಪ್ರಧಾನ ಸಂಸ್ಕೃತಿ ಕುರುಡಾಗಿದೆಯೆಂದು ಒತ್ತಿ ಹೇಳುತ್ತದೆ. ದಾಖಲಿಸುವ ಮಾನವ ಅನುಭವಗಳು ಅರ್ಧಸತ್ಯವಾಗಿ, ಏಕರೂಪವಾಗಿ, ಪುರುಷ ಪೋಷಿತವಾಗಿ ಅಪೂರ್ಣವಾಗದೇ, ಸ್ತ್ರೀಯನ್ನು, ಆಕೆಯ ಅನುಭವಗಳನ್ನು, ಸಾಧನೆಗಳನ್ನು ಒಳಗೊಂಡು ಪರಿಪೂರ್ಣವಾಗಲು ಸ್ತ್ರೀವಾದಿ ದೃಷ್ಟಿಕೋನದ ಅಗತ್ಯವಿದೆ.

ಈಡಿಪಸ್ ಕಾಂಪ್ಲೆಕ್ಸ್: ಮನೋವೈಜ್ಞಾನಿಕ ಲೇಖನಗಳು

ಎಂ. ಬಸವಣ್ಣ ಅವರು ಸ್ವತಃ ಮನಃಶಾಸ್ತ್ರದಲ್ಲಿ ಪದವೀಧರರು ಹಾಗೂ ಇದೇ ವಿಷಯದಲ್ಲಿ ಪ್ರಾಧ್ಯಾಪಕರೂ ಆಗಿದ್ದು, ಮನಃಶಾಸ್ತ್ರದ ಕ್ರಿಯಾಶೀಲ ವಿದ್ಯಾರ್ಥಿಯೂ, ಮಾರ್ಗದರ್ಶಕರೂ ಆಗಿದ್ದಾರೆ. ಇಂದಿಗೂ ಅತ್ಯಂತ ಚಟುವಟಿಕೆಯಿಂದ ಕೂಡಿದವರೂ ಆಗಿದ್ದಾರೆ.

ಸಾಹಿತ್ಯ ಮತ್ತು ಮನೋವಿಜ್ಞಾನ ಇಂದು ಜಗತ್ತಿನಲ್ಲಿ ವಿಫುಲವಾಗಿ ಬೆಳೆದಿದೆ. ಆದರೆ ಅದೇ ಮಟ್ಟದಲ್ಲಿ ಭಾರತೀಯ ಭಾಷೆಗಳಲ್ಲಿ ಇದು ಬೆಳೆದಿಲ್ಲ. ಕನ್ನಡದಲ್ಲಿ ಆಗಿರುವುದು

ಬೆರಳೆಣಿಕೆಗೂ ನಿಲುಕದ ಮಟ್ಟದ್ದು. ಅಂತಹ ಕೇವಲ ಕೆಲವೇ ಕೆಲವು ಕೃತಿಗಳಲ್ಲಿ ಮನೋವಿಜ್ಞಾನದ ಕುರಿತ ಲೇಖನಗಳ ಸಂಗ್ರಹ ಕೃತಿಯೇ 'ಈಡಿಪಸ್ ಕಾಂಪ್ಲೆಕ್ಸ್'.

ಈಡಿಪಸ್ ಕಾಂಪ್ಲೆಕ್ಸ್ ಮನಃಶಾಸ್ತ್ರದ ದೃಷ್ಟಿಕೋನಕ್ಕೆ ಸಂಬಂಧಿಸಿದ ಬೇರೆ ಬೇರೆ ವಿಷಯಗಳನ್ನೊಳಗೊಂಡ ಲೇಖನಗಳ ಸಂಗ್ರಹವಾಗಿದೆ. ಇಲ್ಲಿ ಪ್ರೇಮ, ಸ್ವಸ್ಥ ವ್ಯಕ್ತಿತ್ವ, ಚಿಕಿತ್ಸೆಗೆ ಬರದ ಮನೋ ರೋಗಗಳು, ಮಕ್ಕಳ ಮಾನಸಿಕ ವಿಕಾಸದಲ್ಲಿ ತಂದೆ ತಾಯಿಗಳ ಪಾತ್ರ, ದುಃಖ ಒಂದು ಮನೋವೈಜ್ಞಾನಿಕ ವಿಶ್ಲೇಷಣೆ, ಈಡಿಪಸ್ ಕಾಂಪ್ಲೆಕ್ಸ್ ಒಂದು ಸರಳ ವಿವರಣೆ, ಸಾಹಿತ್ಯ ಮತ್ತು ಮನಃಶಾಸ್ತ್ರ, ಸಿಗ್ಮಂಡ್ ಫ್ರಾಯ್ಡ್, ಕಾರ್ಲ್ ಯೂಂಗ್, ಆಲ್ಫ್ರೆಡ್ ಆ್ಯಡ್ಲರ್ ಕುರಿತಾದ ಲೇಖನಗಳನ್ನು ಒಳಗೊಂಡಿದೆ. ಈ ಕೃತಿಯಲ್ಲಿ ಈ ಲೇಖನಗಳನ್ನು ಪ್ರತ್ಯೇಕವಾಗಿ ಚರ್ಚಿಸದೆ ಸಾಹಿತ್ಯ ಮತ್ತು ಮನಃಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ.

ಆಧುನಿಕ ಮನಃಶಾಸ್ತ್ರದ ಯಾವುದೇ ಗ್ರಂಥವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಲೈಂಗಿಕ ಹಾಗೂ ವೈವಾಹಿಕ ವರ್ತನೆಗಳನ್ನು ವಿವರಿಸುವ ಸಂದರ್ಭಗಳಲ್ಲಿ ಮನಃಶಾಸ್ತ್ರದ ವಿಚಾರವನ್ನು ಹೇರಳವಾಗಿ ಬಳಸಲಾಗುತ್ತಿರುವುದನ್ನು ಕುರಿತು ಚರ್ಚಿಸಲಾಗುತ್ತಿದೆ. ದುರಾದೃಷ್ಟಕರ ವಾದ ವಿಷಯ ಏನೆಂದರೆ ಬೇರೆ ಬೇರೆ ಸಂದರ್ಭಗಳಲ್ಲಿ ಇದರ ಬಳಕೆಯ ಅಗತ್ಯತೆಯೇ ಇಲ್ಲವೆಂಬಂತೆ ನೋಡಲಾಗುತ್ತದೆ. ಆದರೆ ಇತ್ತೀಚೆಗೆ ಮಾನವತಾ ಮನೋವಿಜ್ಞಾನಿಗಳಾದ ಅಬ್ರಹಾಮ್ ಮ್ಯಾಸ್ಲೊ (Abraham Maslow), ಎರಿಕ್ ಫ್ರಾಮ್ (Eric Fromm) ಮೊದಲಾದವರು ಈ ದೃಷ್ಟಿಕೋನವನ್ನು ಹರಿಸಿದ್ದಾರೆ. ಸಾಹಿತ್ಯ ಮತ್ತು ಮನಃಶಾಸ್ತ್ರ ಎಂಬ ಲೇಖನವು ಸಾಹಿತ್ಯಕ್ಕೆ ನಿಜವಾದ ಪ್ರೇರಣೆಯ ಕುರಿತು ಚರ್ಚಿಸಲ್ಪಟ್ಟಿದೆ. ಅಸಂಖ್ಯಾತ ಸಾಹಿತ್ಯ ಕೃತಿಗಳು ಪ್ರೇಮ, ಪರಿಸರ, ಕುಟುಂಬ, ಅಪರಾಧ, ಕ್ರಾಂತಿ ಹಾಗೂ ಸಮಾಜಕ್ಕೆ ಸಂಬಂಧಿಸಿದವುಗಳಾಗಿವೆ. ಸಾಹಿತಿ ಮತ್ತು ಸಾಹಿತ್ಯವನ್ನು ಪರಿಶೀಲಿಸುವ ಮನೋವಿಜ್ಞಾನಿಯ ದೃಷ್ಟಿಕೋನ ಸಾಹಿತ್ಯ ವಿಮರ್ಶಕನಿಗಿಂತ ಭಿನ್ನವಾದುದರ ಕುರಿತು ಲೇಖನದಲ್ಲಿ ಚರ್ಚಿಸಲಾಗಿದೆ. ವಿಮರ್ಶಕನಿಗೆ ಮುಖ್ಯವೆನಿಸುವ ಸಾಹಿತ್ಯಾಂಶಗಳು ಮನೋವಿಜ್ಞಾನಿಗೆ ಅನುಪಯುಕ್ತವಾಗುತ್ತವೆ. ಆದರೆ ಸಂದೇಹಾಸ್ಪದ ಅರ್ಹತೆಯನ್ನು ಪಡೆದ ಕೃತಿಯೊಂದು ಅವನಲ್ಲಿ ಆಸಕ್ತಿಯನ್ನುಂಟು ಮಾಡಬಹುದು. ಉದಾಹರಣೆಗೆ, 'ಮನೋವಿಶ್ಲೇಷಣಾತ್ಮಕ' ಕಾದಂಬರಿಗಳೆಂದು ಪ್ರಸಿದ್ಧಿ ಪಡೆದು ವಿಮರ್ಶಕರ ಮೆಚ್ಚುಗೆಗೆ ಪಾತ್ರವಾಗುವ ಸಾಹಿತ್ಯ ಪ್ರಕಾರಗಳಲ್ಲಿ ಮನೋವಿಜ್ಞಾನಿಗೆ ಏನೇನೂ ಆಸಕ್ತಿ ಇರಲಾರದು. ಕಾರಣವಿಷ್ಟೆ, ಈ ಮನೋವಿಶ್ಲೇಷಣಾತ್ಮಕ ಕೃತಿಗಳು ತಮ್ಮನ್ನು ತಾವೇ ವಿವರಿಸಿಕೊಂಡು ಬಿಟ್ಟಿರುತ್ತವೆ. ಇಲ್ಲಿ ಮನೋವಿಜ್ಞಾನಿ ಹೇಳುವಂತಹದ್ದು ಏನೂ ಉಳಿದಿರುವುದಿಲ್ಲ. ಸಾಮಾನ್ಯವಾಗಿ ಈ ಕೃತಿಗಳು ಮನಃಶಾಸ್ತ್ರದ ಪರಿಚಯವಿರುವ ಸಾಹಿತಿಯ ರಚನೆಗಳಾಗಿರುತ್ತವೆ. ಆದುದರಿಂದ ಇಂತಹ ಕೃತಿಗಳಲ್ಲಿ ಈ ಸೂತ್ರಗಳು ಎಷ್ಟರಮಟ್ಟಿಗೆ ಕರಾರುವಾಕ್ಕಾಗಿ ಅನ್ವಯವಾಗಿವೆ ಎಂಬುದನ್ನು

ಮನೋವಿಜ್ಞಾನದ ಸಹಾಯದಿಂದ ವಿಮರ್ಶಿಸಬಹುದೇ ಹೊರತಾಗಿ ಹೆಚ್ಚಿಗೆ ಏನೂ ಮಾಡಲಾರ. ಕೃತಿಗಳು ಸಾಮಾನ್ಯವಾದಂತೆ ಹೊರನೋಟಕ್ಕೆ ಕಂಡುಬರುತ್ತಿದ್ದು, ಅದರ ಆಂತರ್ಯದಲ್ಲಿ ಅಸಾಮಾನ್ಯತೆಯನ್ನು, ಸಾಮಾನ್ಯರ ನಿಲುವಿಗೆ ನಿಲುಕದ ಗೂಢತೆಯನ್ನು ಹೊಂದಿರುವಂತಹವು ನಿಜಕ್ಕೂ ಮನೋವಿಶ್ಲೇಷಣೆಯ ಸಾಧ್ಯತೆಗಳನ್ನು ಎತ್ತಿ ಹಿಡಿಯುತ್ತವೆ ಎಂಬುದಾಗಿ ಈ ಲೇಖನವು ಚರ್ಚಿಸುತ್ತದೆ. ಈ ದೃಷ್ಟಿಕೋನದಿಂದಲೇ ಯೂಂಗ್ ಸಾಹಿತ್ಯ ಕೃತಿಗಳನ್ನು ವಿಂಗಡಿಸಿರುವುದಾಗಿ ಈ ಲೇಖನವು ಚರ್ಚಿಸುತ್ತದೆ. ಯೂಂಗ್ ಸಾಹಿತ್ಯ ಕೃತಿಗಳನ್ನು ಮನೋವೈಜ್ಞಾನಿಕ (Psychological) ಮತ್ತು ದಾರ್ಶನಿಕ (Visionary) ಎಂದು ಎರಡು ಬಗೆಯಾಗಿ ವಿಂಗಡಿಸಿದ್ದಾನೆ. ಈತನ ಪ್ರಕಾರ ಮನೋವೈಜ್ಞಾನಿಕ ಕೃತಿಗಳು ಸಾಹಿತಿಯ ಜಾಗೃತ ಮನಸ್ಸಿನಿಂದ (Concious) ಹುಟ್ಟಿಬಂದವು. ಇವು ಬಹಳಮಟ್ಟಿಗೆ ಜೀವನದ ಪ್ರತಿಬಿಂಬಗಳು. ಇಲ್ಲಿ ಜೀವನದ ಕಾಮ ಕ್ರೋಧಗಳು, ಕಷ್ಟ ಕಾರ್ಪಣ್ಯಗಳು, ನೋವು ನಲಿವುಗಳು ರಸವತ್ತಾಗಿ ಚಿತ್ರಿಸಲ್ಪಟ್ಟಿರುತ್ತವೆ. ಇವುಗಳ ರಚನೆಗೊಂದು ತಾರ್ಕಿಕ ನೆಲೆಗಟ್ಟು ಇರುತ್ತದೆ. ಒಂದು ಗಂಡು ಮತ್ತು ಒಂದು ಹೆಣ್ಣು ಒಬ್ಬರನ್ನೊಬ್ಬರು ಸಂಧಿಸುತ್ತಾರೆ, ಆಕರ್ಷಿಸುತ್ತಾರೆ, ಪ್ರೀತಿಸುತ್ತಾರೆ. ಅವರ ಪ್ರೀತಿಗೆ ಅಡೆತಡೆಗಳುಂಟಾಗುತ್ತವೆ. ಅವರು ಹೋರಾಡುತ್ತಾರೆ, ಗೆದ್ದರೆ ಮದುವೆಯಾಗುತ್ತಾರೆ, ಸೋತರೆ ಇನ್ನೇನೋ ಆಗುತ್ತಾರೆ. ಇಂತಹ ಜನಜನಿತವಾದ ವಸ್ತು ಸಾಹಿತಿಯ ಪ್ರತಿಭೆಯಿಂದ ಶಬ್ಧ ಸೌಂದರ್ಯದ ಉಡುಗೆಯನ್ನುಟ್ಟ ಲಲಿತ ಕೃತಿಯಾಗಿ ಅಥವಾ ದುರಂತ ಕಥೆಯಾಗಿ ಅಭಿವ್ಯಕ್ತಿಗೊಂಡರೆ ಅದು ಮನೋವೈಜ್ಞಾನಿಕ ಕೃತಿಗಳ ಗುಂಪಿಗೆ ಸೇರುತ್ತದೆ. ಸಾಮಾನ್ಯ ಓದುಗರು ಈ ಕೃತಿಗಳಲ್ಲಿ 'ಮನಃಶಾಸ್ತ್ರ'ವನ್ನು ಹುಡುಕಿಕೊಂಡು ಹೋಗುತ್ತಾರೆ. ಮನೋವಿಜ್ಞಾನಿ ದಾರ್ಶನಿಕ ಕೃತಿಗಳಲ್ಲಿರುವ ಗೂಢಾರ್ಥವನ್ನು ಹುಡುಕಿಕೊಂಡು ಹೋಗುತ್ತಾನೆ.

ಈ ಲೇಖನವು ಮನಶಾಸ್ತ್ರೀಯ ಹಿನ್ನೆಲೆಯಲ್ಲಿ ನೋಡಬಹುದಾದ ಸಾಹಿತ್ಯವನ್ನು ದಾರ್ಶನಿಕ ಕೃತಿಗಳು ಎಂಬುದಾಗಿ ಹೇಳುತ್ತದೆ. ದಾರ್ಶನಿಕ ಕೃತಿಗಳು ತಮ್ಮ ವಸ್ತುವಿನಿಂದಾಗಿ ಅಪರಿಚಿತವೂ, ಅನಿರೀಕ್ಷಿತವೂ, ಅನಪೇಕ್ಷಿತ, ಭಯಂಕರ ಜಿಗುಪ್ಸೆಯನ್ನು ಉಂಟುಮಾಡುವಂತಹದ್ದು ಆಗಿರಬಹುದು. ಆಕೃತಿ ಹೇಗೆ ಹುಟ್ಟಿತು, ಏಕೆ ಹುಟ್ಟಿತು ಎಂಬುದು ಓದುವವರಿಗೂ, ಮತ್ತು ಅದನ್ನು ರಚಿಸಿದವರಿಗೂ ತಿಳಿದುಬರುವಂತಹದ್ದಾಗಿರುವುದಿಲ್ಲ. ಹಾಗಾದರೆ ಅದು ಏತಕ್ಕಾಗಿ ಆ ಬಗೆಯ ರೂಪು ಪಡೆಯಿತು ಎಂಬುದಕ್ಕೆ ಯಾವ ಬಗೆಯ ದೃಷ್ಟಿಕೋನವು ಉತ್ತರ ನೀಡುವುದಿಲ್ಲ. ಏಕೆಂದರೆ ಅವು ಹುಟ್ಟಿಬರುವುದು ಸುಪ್ತಚೇತನದಿಂದ. ಆದ್ದರಿಂದಲೇ ಈ ಬಗೆಯ ಸಾಹಿತ್ಯ ಪ್ರಕಾರಗಳು ಮನೋವಿಜ್ಞಾನಿಗಳಲ್ಲಿ ಆಸಕ್ತಿಯನ್ನು ಕೆರಳಿಸುತ್ತವೆ ಎಂಬುದು ಈ ಲೇಖನದ ಅಭಿಪ್ರಾಯ. ಇದನ್ನು ಒಪ್ಪಲೇಬೇಕಾಗುತ್ತದೆ. ಏಕೆಂದರೆ ಈ ಬಗೆಯ ದಾರ್ಶನಿಕ ಸಾಹಿತ್ಯ ಸುಪ್ತಮನಸ್ಸಿನ ಗರ್ಭದಿಂದ ಮಾತ್ರ ಉದಯಿಸುತ್ತದೆ ಎಂಬುದನ್ನು ವಿಜ್ಞಾನಿಗಳಷ್ಟೇ ಸಾಹಿತಿಗಳೂ ನಂಬುತ್ತಾರೆ. ಇದನ್ನು ಸಮರ್ಥಿಸುತ್ತ ಜರ್ಮನ್ ಮಹಾಕವಿ ಗಯಟೆ (Goethe) ಮಹಾಕಾವ್ಯ

ಗಳಿಗೆಲ್ಲಾ ದೈವಿಶಕ್ತಿಯೇ ಪ್ರೇರಣೆ ಎನ್ನುತ್ತಾನೆ. "No productivity of the highest kind, no remarkable conception, no discovery, no great thought that bears fruit and has results, is in the power of anyone, such things are above earthy control. Man must consider them as an unexpected gift from above which he must receive and venerate with joyful thanks". ಈತನು ಹೇಳುವಂತೆ ಅದು ದೇವರ ವರ, ಉನ್ನತ ಕೃತಿ ರಚನೆಗಳಿಗೆ ಪ್ರೇರಣೆ ಅನಿರೀಕ್ಷಿತ, ಅನೈಚ್ಛಿಕ, ಅಪೌರುಷೇಯ ಎಂಬುದು ದಾರ್ಶನಿಕ ನೀಶೆಯ (Nietzsche) ನಂಬಿಕೆ.

ಫ್ರೆಂಚ್ ಸಾಹಿತಿ ಸ್ಟಂಡಾಲ್ (Stendhal) ಕೂಡಾ ಸಾಹಿತ್ಯ ರಚನೆ ಮಾನವನ ಯತ್ನಕ್ಕೆ ಮೀರಿದ್ದೆಂದು ಭಾವಿಸುತ್ತಾನೆ. (I write blindly, hastily, As these images come in to my mind, my pen writes them down) ಹಾಗೆಯೇ ಈ ಲೇಖನದಲ್ಲಿ ಕನ್ನಡ ಸಾಹಿತಿಗಳು ಹೇಗೆ ಈ ಬಗೆಯ ನಂಬಿಕೆಯನ್ನು ಹೊಂದಿದ್ದರು ಎಂಬುದಕ್ಕೆ ಸಮರ್ಥನೆ ನೀಡಲು ಈ ಕೆಳಗಿನವರ ಹೇಳಿಕೆಗಳನ್ನು ನೀಡುತ್ತಾರೆ. ಗದುಗಿನ ನಾರಾಣಪ್ಪ 'ವೀರ ನಾರಯಣನೇ ಕವಿ, ಲಿಪಿಕಾರ ಕುಮಾರವ್ಯಾಸ' ಎಂದಿರುವುದು. ಷಡಕ್ಷರಿ 'ಕವಿತಾ ಚಿಂತಾರತ್ನಂ ದೊರೆಗುಮೆ ಮಾರಾರಿಯ ಕೃಪೆಯಿಲ್ಲದವಂಗೆ' ಎಂದಿರುವುದು. ವರಕವಿ ಬೇಂದ್ರೆಯವರು ಕಲ್ಪನಾ ವಿಲಾಸ 'ಭೃಂಗದ ಬೆನ್ನೇರಿ' ಬರುತ್ತದೆ ಎಂದಿರುವುದು ಇವರೆಲ್ಲರ ಮಾತುಗಳು ಬೇರೆ ಬೇರೆಯಾದರೂ ಇವರೆಲ್ಲರ ಅಭಿಪ್ರಾಯ ಒಂದೇ ಎಂಬುದು ಇದರಿಂದ ತಿಳಿದುಬರುತ್ತದೆ. ಇದರಿಂದ ದಾರ್ಶನಿಕ ಕಾವ್ಯಕ್ಕೆ, ಸಾಹಿತ್ಯಕ್ಕೆ ಪ್ರೇರಣೆ ಮಾನವನ ಅರಿವಿಗೆ ಮೀರಿದ್ದು. ಕಾವ್ಯದ ಸ್ಫೂರ್ತಿಯ ನೆಲೆ ಕವಿಗೂ ತಿಳಿಯದು. ಅವನ ಲೇಖನಿಯನ್ನು ಅದೃಶ್ಯ ಶಕ್ತಿಯೊಂದು ನಿರ್ದೇಶಿಸುತ್ತದೆ. ಕಾಣದ ಕೈಯೊಂದು ಅದನ್ನು ಮುನ್ನಡೆಸುತ್ತದೆ. ಕವಿಗಳ ಪ್ರಕಾರ ಕಾವ್ಯ ರಚನೆಯಲ್ಲಿ ಎರಡು ಸ್ತರಗಳಿರುತ್ತವೆ. ಮೊದಲನೆಯದು ಭಾವ ಸ್ಫುರಣ, ಎರಡನೆಯದು ಭಾವ ನಿರೂಪಣೆ. ಮೊದಲನೆಯದು ಅವನ ನಿಯಂತ್ರಣಕ್ಕೆ ಒಳಪಡುವುದಿಲ್ಲ. ಅದು ಅನೈಚ್ಛಿಕ, ಅನಿರೀಕ್ಷಿತ, ಆಕಸ್ಮಿಕ. ಆದುದರಿಂದಲೇ ಅದನ್ನು ಸ್ಫೂರ್ತಿ, ಪ್ರತಿಭೆ, ಅಂತಃಪ್ರಜ್ಞೆ, ಅಪೌರುಷೇಯ, ದೈವಿಕ ಎಂದೆಲ್ಲಾ ಕರೆಯುತ್ತಾರೆ. ಎರಡನೆಯದು ಐಚ್ಛಿಕ ಕ್ರಿಯೆ. ಬೆವರು ಬರಿಸುವ ಶ್ರಮದ ಕೆಲಸ. ಕವಿ ತನ್ನಲ್ಲಿ ಮಿಂಚಿದ ಭಾವನೆಗಳಿಗೆ ಭಾಷೆಯ ಉಡುಗೆಯನ್ನು ತೊಡಿಸಿ ಅಲಂಕರಿಸುವ ಕಾರ್ಯ.

ಒಟ್ಟಾರೆ ಈ ಲೇಖನದಲ್ಲಿ ಸಾಹಿತ್ಯ ಮತ್ತು ಮನಃಶಾಸ್ತ್ರಕ್ಕಿರುವ ಸಂಬಂಧವನ್ನು ಫ್ರಾಯ್ಡ್ ಮತ್ತು ಯೂಂಗ್‌ರ ಅಭಿಪ್ರಾಯಗಳನ್ನು ಸಮರ್ಥಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಮಾನವನ ಮನಸ್ಸಿನ ರಚನೆಯೇ ಒಂದು ಬಗೆಯ ಸಂಕೀರ್ಣಗಳ ಜಾಲ ಎಂದು ಅಭಿಪ್ರಾಯಪಡುವು ದರಲ್ಲಿಯೇ ಅದರ ವಿಶ್ಲೇಷಣೆಯ ಸಂಕೀರ್ಣತೆಯು ಅರ್ಥವಾಗಬೇಕಿದೆ. ಒಮ್ಮೊಮ್ಮೆ ಯಾವುದೇ ಬಗೆಯ ಕಾರಣಗಳು ತಿಳಿಯದೆ ಗೊಂದಲಕ್ಕೊಳಗಾಗುವುದೂ ಇದೆ. ಇಂದು ಮನೋವಿಜ್ಞಾನದ ಪ್ರತಿಯೊಂದು ಸಂಪ್ರದಾಯವೂ ಮನಸ್ಸಿನ ಶಾಸ್ತ್ರೀಯವಾದ ತಳಹದಿಯನ್ನು ಒಪ್ಪಿಕೊಳ್ಳುತ್ತದೆ.

ಆದರೂ ವರ್ತನಾವಾದಿಗಳು ವಹಿಸುವ ಕೇವಲ ಶರೀರ ಪ್ರಧಾನವಾದ ಭೂಮಿಕೆ ಕೆಲವೇ ಮನೋವಿಜ್ಞಾನಿಗಳಿಂದ ಮಾನ್ಯ ಮಾಡಲ್ಪಟ್ಟಿದೆ. ಇನ್ನು ಡೇವಿಡ್ ಹ್ಯೂಮ್, ಆರ್ಥರ್ ಶೊಫೆನಾಯರ್, ಇಮ್ಯಾನುಯಲ್ ಕಾಂಟ್ ಮುಂತಾದವರು ಮನೋವಿಜ್ಞಾನವು ಬ್ರಹ್ಮಜ್ಞಾನ ಅಥವಾ ಆತ್ಮ, ಅನಾತ್ಮ ವಿವೇಚನೆಗಳೊಂದಿಗೆ ಸಂಬಂಧ ಹೊಂದಿರುವ ವಿಷಯವೇ ಅಲ್ಲ. ಮನೋವಿಜ್ಞಾನವು ಗಣಿತಶಾಸ್ತ್ರದ ರೀತಿಯ ಅಧ್ಯಯನ ಆಗಬೇಕೆಂಬ ಒತ್ತಾಯ ಮಾಡುತ್ತಾರೆ. ಇವರ ಪ್ರಕಾರ ಆಗಿ ಹೋದ ಅನುಭವದ ನೆನಪಿನ ರಾಶಿಗೆ (ಸಂವೇದನಾತ್ಮಕ ದ್ರವ್ಯಕ್ಕೆ) ಹೊಸದಾದ ವಸ್ತುವನ್ನು ಹೊಂದಿಸಿಕೊಳ್ಳುವ ತತ್ವ ಎಂಬುದಾಗಿ ಸಮರ್ಥನೆ ನೀಡುತ್ತಾರೆ. ಇವರು ಯಾವುದೇ ಒಂದು ಕಲ್ಪನೆಯು, ಬಿಡಿಯಾದ ವಿಚಾರವು, ಅರಿವಿನ ಜಾಗೃತ ಪ್ರಜ್ಞೆಯ ಮೆಟ್ಟಿಲ ಕೆಳಗಿಂದಲೇ ಮನಸ್ಸನ್ನು ಪ್ರವೇಶಿಸುತ್ತದೆ. ಆ ಕಲ್ಪನೆಯು ಉತ್ತೇಜಿತವಾಯಿತೆಂದರೆ ಹೆಚ್ಚು ಹೆಚ್ಚು ಪ್ರಚೋದನೆಯಿಂದ ಸ್ಪಷ್ಟವಾಗಿ ಮೂಡಲು ಶುರುವಾಗುತ್ತದೆ. ಈ ಬಗೆಯ ಸ್ಪಷ್ಟತೆಯು ಯಾವುದಾದರೊಂದು ರೂಪದಲ್ಲಿ ಅಭಿವ್ಯಕ್ತಿಗೊಳ್ಳಲೇಬೇಕಾಗುತ್ತದೆ. ಸಾಹಿತ್ಯವು ಇಂತಹ ಒಂದು ಅಭಿವ್ಯಕ್ತಿ ಪ್ರಕಾರ. ಅದನ್ನು ಈ ಲೇಖನವು ಎಲ್ಲಿಯೂ ಚರ್ಚಿಸುವ ಗೋಜಿಗೆ ಹೋಗುವುದಿಲ್ಲ. ಫ್ರಾಯ್ಡ್, ಯೂಂಗ್ ನಿಜವಾಗಿಯೂ ಸಾಹಿತ್ಯದ ಚರ್ಚೆಯಲ್ಲಿ ಅತಿ ಹೆಚ್ಚು ಮಹತ್ವ ಪಡೆಯುತ್ತಾರಾದರೂ, ಉಳಿದ ವರ್ತನಾವಾದಿಗಳು, ಆತ್ಮವಾದಿಗಳು, ಮೂಲಪ್ರವೃತ್ತಿ ವಾದಗಳು, ಹೇತುವಾದಿಗಳು ಮುಂತಾದವರ ವಾದಗಳನ್ನು ಸಾಹಿತ್ಯ ಚರ್ಚೆಯಲ್ಲಿ ಪರಿಗಣಿಸುವುದು ಅವಶ್ಯಕ ಎಂದೆನಿಸುತ್ತದೆ.

ಅಧ್ಯಾಯ : ಮೂರು

ಮನಸ್ಸಿನ ಸ್ವರೂಪ: ತಾತ್ವಿಕ ಚರ್ಚೆ

ಅಧ್ಯಾಯ : ಮೂರು

ಮನಸ್ಸಿನ ಸ್ವರೂಪ: ತಾತ್ವಿಕ ಚರ್ಚೆ

'ಮನಸ್ಸು' ಎಂದರೇನು?

ಇದು ಸಾಹಿತ್ಯವನ್ನು ಕುರಿತ ಮನಃಶಾಸ್ತ್ರೀಯ ಅಧ್ಯಯನ. ಹಾಗಾಗಿ ಮನಸ್ಸು ಎಂದರೆ ಏನು ಎಂಬುದನ್ನು ಅದಕ್ಕೆ ಸಂಬಂಧಿಸಿದ ಮನಃಶಾಸ್ತ್ರೀಯ ತಿಳುವಳಿಕೆಯ ನೆರವಿನಿಂದ ವಿವರಿಸಿಕೊಳ್ಳುವ ಅಗತ್ಯವಿದೆ. ಇಲ್ಲದಿದ್ದರೆ ಒಟ್ಟಾರೆ ಮಹಾಪ್ರಬಂಧದ ಬರವಣಿಗೆಗೆ ಒಂದು ವ್ಯಾಪಕತೆ ಬರುವುದಿಲ್ಲ. ಈ ದೃಷ್ಟಿಯಿಂದ ಈ ಅಧ್ಯಾಯದಲ್ಲಿ ಮನಸ್ಸಿನ ಸ್ವರೂಪವನ್ನು ಕುರಿತು ಚರ್ಚಿಸಲಾಗುವುದು.

ನಿರಂತರವಾಗಿ ಬದಲಾವಣೆ ಹೊಂದುವ ಹಾಗೂ ಹೊಯ್ದಾಡುವ, ಸ್ವತಂತ್ರ ಅಸ್ತಿತ್ವವಿಲ್ಲದಿರುವ, ಆದರೂ ಅದರ ಸಾಮರ್ಥ್ಯವನ್ನು ವ್ಯಕ್ತಪಡಿಸುವ ಅಂಶವೇ ಮನಸ್ಸು ಎಂಬುದು ಬಹುತೇಕ ಮನಃಶಾಸ್ತ್ರಜ್ಞರಿಂದ ಒಪ್ಪಲ್ಪಟ್ಟ ಮನಸ್ಸಿನ ಕುರಿತಾದ ವಿವರಣೆಯಾಗಿದೆ.

ಮನಸ್ಸು ಎಲ್ಲಿದೆ? ಮನಸ್ಸಿನಲ್ಲಿ ವಿಚಾರಗಳು ಹೇಗೆ ಮೂಡುತ್ತವೆ? ಈ ವಿಚಾರಗಳು ಕ್ರಿಯೆಗಳಾಗಿ ಮಾರ್ಪಡುವುದಾದರೂ ಹೇಗೆ? ಹೊರ ಜಗತ್ತಿನ ವಿದ್ಯಮಾನಗಳು ದಾಖಲಾಗುವ ಹಾಗೂ ಅದಕ್ಕೆ ಪ್ರತಿಸ್ಪಂದಿಸುವ ಸ್ವಭಾವಕ್ಕೆ ಕಾರಣವಾಗುವ ಅಂಶಗಳಾವುವು? ಹೀಗೆ ಅನೇಕ ಪ್ರಶ್ನೆಗಳು ಪ್ರಾಚೀನ ತತ್ವಜ್ಞಾನಿಗಳಾದ ಪ್ಲೇಟೋ, ಅರಿಸ್ಟಾಟಲ್, ಡೆಕಾರ್ಟ್, ಲಾಕ್ ಮುಂತಾದವರನ್ನೂ ಕಾಡಿವೆ. ಹೀಗೆ ಅವರಿಂದ ಕೇಳಲ್ಪಟ್ಟ ಪ್ರಶ್ನೆಗಳು ಊಹೆ ಹಾಗೂ ತರ್ಕವನ್ನು ಆಧರಿಸಿದ ವೈಯಕ್ತಿಕ ಗ್ರಹಿಕೆಗೆ ಸೀಮಿತವಾಯಿತೆಂದೇ ಹೇಳಬಹುದು.

ಮನಸ್ಸು ಒಂದು ರೀತಿಯ ಶಕ್ತಿ, ಶಾಖ, ಬೆಳಕು, ವಿದ್ಯುತ್ ಗುರುತ್ವಾಕರ್ಷಣ ಶಕ್ತಿಗಳಂತೆ ಮನಸ್ಸು ಒಂದು ತೆರನಾದ ಶಕ್ತಿ. ಆದರೂ ಉಳಿದೆಲ್ಲಾ ಶಕ್ತಿಗಳನ್ನು ಪ್ರಯೋಗಕ್ಕೊಳಪಡಿಸುವಂತೆ, ಮನಸ್ಸನ್ನು ಸುಲಭವಾಗಿ ಒಳಪಡಿಸಲಾಗುವುದಿಲ್ಲ. ಮನಸ್ಸು ಎಂದರೆ ತಾವು ಯೋಚಿಸಲು, ಯೋಚಿಸಿದ್ದನ್ನು ವ್ಯಕ್ತಪಡಿಸಲು ಬಳಸಲ್ಪಡುವ, ಶರೀರದೊಳಗೆ ನೆಲೆಗೊಂಡಿರುವಂತಹದ್ದು ಎಂದು ಸರಳವಾಗಿ ವಿವರಿಸಬಹುದು. ನಾವು ಯಾವುದನ್ನು ನೋಡಲಾರೆವೋ, ಗ್ರಹಿಸಲಾರೆವೋ,

ಅರ್ಥಮಾಡಿಕೊಳ್ಳಲಾರೆವೋ ಅಥವಾ ಅಳೆಯಲಾರೆವೋ ಅಂತಹ ಮನಸ್ಸನ್ನು ಅನೇಕ ವರ್ಷಗಳ ಹಿಂದೆಯೇ ವೈಜ್ಞಾನಿಕ ಸಂಶೋಧನೆಗಳಿಂದ, ತತ್ವಜ್ಞಾನದ ತಾರ್ಕಿಕ ದೃಷ್ಟಿಯ ಸಂದೇಹಗಳಿಂದ ಪ್ರತಿಪಾದಿಸುವವರೆಗಿನಿಂದ ಇಂದಿನವರೆಗೂ ಸ್ಪಷ್ಟವಾದ ನಿರ್ಧಾರ ಸಾಧ್ಯವಾಗಲಿಲ್ಲ ಎಂಬುದೇ ಮನಸ್ಸಿನ ಶಕ್ತಿಯ ಅಗಾಧತೆ ಎಷ್ಟೆಂಬುದನ್ನು ಊಹಿಸಬಹುದಾಗಿದೆ.

ಎಷ್ಟೋ ವಿಷಯಗಳನ್ನು ಯಾರೇ ಹೇಳಲಿ, ಯಾರಿಂದಲೇ ಕೇಳಲಿ ಅದರ ವಾಸ್ತವವನ್ನು ಅನುಭವಿಸುವುದು ಸಾಧ್ಯವಿಲ್ಲ. ಇದೇ ರೀತಿ ಈಗಿರುವ ವೈಜ್ಞಾನಿಕ ಪ್ರಗತಿಯ ಅರಿವಿನಲ್ಲಿ ಮನಸ್ಸು ಏನು ಎಂಬುದನ್ನು ತಿಳಿಯುವುದು ವೈಜ್ಞಾನಿಕ ದರ್ಶನಗಳಿಂದ ಅಸಾಧ್ಯ. ಸ್ವಂತ ಅನುಭವದಿಂದ, ಮಾನಸಿಕ ಚಟುವಟಿಕೆಯಿಂದ ಮಾತ್ರ ಮನಸ್ಸನ್ನು ಅರಿಯಬಹುದು.

ಮನಸ್ಸು ಎಂಬುದನ್ನು ಪೂರ್ಣವಾಗಿ, ಕರಾರುವಾಕ್ಕಾಗಿ ವಿವರಿಸುವುದು ಸಾಧ್ಯವಿಲ್ಲ. ಆದರೂ ಅದರ ಬೆಳವಣಿಗೆ, ಚಟುವಟಿಕೆಗಳು ಇವುಗಳನ್ನು ಸಾಕ್ಷ್ಯವಾಗಿರಿಸಿ, ಪ್ರಯೋಗಗಳಿಂದ ಸಮರ್ಥಿಸಿ, ಆದಷ್ಟು ಮಟ್ಟಿಗೆ ಅದರ ಸ್ವಭಾವವನ್ನು, ಸ್ವರೂಪವನ್ನು ತಿಳಿಯಬಹುದಾಗಿದೆ.

ಮನಸ್ಸು ಎಲ್ಲಿದೆ? ಎಂಬ ಪ್ರಶ್ನೆಗೆ ಸಾಧಾರಣವಾಗಿ ಮೆದುಳಿನಲ್ಲಿದೆ ಎಂದು ನಂಬಲಾಗಿದೆ. ಏಕೆಂದರೆ ಮೆದುಳಿನ ಯಾವುದಾದರೂ ಒಂದು ಭಾಗವು ಆಘಾತಕ್ಕೆ ಒಳಗಾದರೆ ಅಥವಾ ರೋಗಗಳಿಂದ ಭಾದಿಸಲ್ಪಟ್ಟರೆ ಅಂತಹವರ ಮನಸ್ಸು ಎಲ್ಲರ ಮನಸ್ಸಿನ ಹಾಗೆ ಅಥವಾ ಈ ಮೊದಲಿದ್ದಂತೆ ಇರುವುದಿಲ್ಲ. ಮೆದುಳಿನ ಸರಿಯಾದ ಬೆಳವಣಿಗೆ ಆಗದೇ ಹುಟ್ಟುವ ಮಕ್ಕಳ ಮನಸ್ಸು ಉಳಿದೆಲ್ಲಾ ಸಾಮಾನ್ಯ ಮಕ್ಕಳಂತಿರುವುದಿಲ್ಲ. ಅಂದರೆ ಮೆದುಳು ಚೆನ್ನಾಗಿ ಸುವ್ಯವಸ್ಥಿತವಾಗಿದ್ದರೆ, ಆಗ ಮನಸ್ಸು ಕೆಲಸ ಮಾಡಲು ಸಾಧ್ಯ, ಬೆಳೆಯಲು ಸಾಧ್ಯ ಎನ್ನಬಹುದು.

ಕೆಲವು ಪ್ರಾಣಿಗಳ ಮೆದುಳಿನ ಮೇಲಿನ ಶಸ್ತ್ರಕ್ರಿಯೆಗಳಿಂದ ಅವುಗಳ ಮನಸ್ಸು ಅಸ್ತವ್ಯಸ್ತವಾಗುವುದನ್ನು ಕಂಡು, ಮೆದುಳಿನಲ್ಲಿ ಮನಸ್ಸು ಮನೆ ಮಾಡಿಕೊಂಡಿದೆ ಎಂಬ ನಿರ್ಧಾರಕ್ಕೆ ಬರಲಾಗಿದೆ. ಆದರೆ ಹುಚ್ಚರ ಮೆದುಳಿನಲ್ಲಿ ನೂರಕ್ಕೆ ತೊಂಬತ್ತರಲ್ಲಿ ಯಾವ ವ್ಯತ್ಯಾಸವಾಗಲಿ, ದೋಷವಾಗಲಿ ಕಂಡುಬರುವುದಿಲ್ಲ. ಬಹುಶಃ ಪರೀಕ್ಷೆಗಳ ದೋಷಗಳೋ ಅಥವಾ ಮೆದುಳಿನ ಆಯಾ ಸಂದರ್ಭದ ರಾಸಾಯನಿಕ ವ್ಯತ್ಯಾಸಗಳೋ, ಭೌತಿಕವಾದ ಏರುಪೇರುಗಳು ಉಂಟಾಗಿ ಹುಚ್ಚು ಕಾಣಿಸಿಕೊಳ್ಳಬಹುದು ಮತ್ತು ಅಂತಹವರನ್ನು ಪರೀಕ್ಷೆ ಮಾಡುವ ಸಮಯದಲ್ಲಿ ಮನಸ್ಸು ಹತೋಟಿಯಲ್ಲಿರುವುದರಿಂದ ವ್ಯತ್ಯಾಸಗಳು ಮೆದುಳಿನಲ್ಲಿ ಕಾಣದಿರಬಹುದು ಎಂದು ವೈದ್ಯರು ಹೇಳಿಬಿಡುತ್ತಾರೆ.

ಮೆದುಳಿನ 'ಸೆರಿಬ್ರಂ' ಭಾಗವೇ ಮನಸ್ಸಿನ ಕಾರ್ಯಕ್ಷೇತ್ರ ಎನ್ನಲಾಗಿದೆ. ಅನುವಂಶಿಕ ನೆನಪುಗಳ ಸಂಗ್ರಹಣೆಯೂ, ಈ ಜನ್ಮದಲ್ಲಿ ಕಲಿತ ಪಾಠಗಳ ಅನುಭವಗಳ ಸಂಗ್ರಹಣೆಯೂ, ಸೆರಿಬ್ರಂನಲ್ಲಿ ಶೇಖರಿಸಲ್ಪಡುತ್ತದೆ. (cerebellum) (ಸೆರಿಬೆಲ್ಲಂ) ಅನುಮಸ್ತಿಷ್ಕ ಭಾಗದಲ್ಲಿ ಮನಸ್ಸಿನ ಕಾರ್ಯವೇನೂ ಇರಲಾರದು ಎಂದು ತಿಳಿಯಲಾಗಿದೆ.

ಒಟ್ಟಾರೆ ಮನುಷ್ಯನ ಮನಸ್ಸನ್ನು ದೃಢಪಡಿಸುವುದು ಆತನ ಆಲೋಚನಾ ವಿಧಾನ. ಮನುಷ್ಯನ ಪ್ರಶಾಂತ ಜೀವನಕ್ಕೆ ಹಾಗೂ ನೆಮ್ಮದಿಯ ಬಾಳಿಗೆ ಮನಸ್ಸೇ ಮುಖ್ಯವಾದುದು ಎನ್ನುವುದರಲ್ಲಿ ಎರಡು ಮಾತಿಲ್ಲ. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳ ಸಂಕಲನವೇ ಮನಸ್ಸು. ಅವುಗಳೆಲ್ಲವನ್ನೂ ಹಿಡಿತದಲ್ಲಿ ಅಥವಾ ಹತೋಟಿಯಲ್ಲಿ ಇರಿಸಿಕೊಳ್ಳುವುದೇ ಮನಸ್ಸಿನ ನಿಯಂತ್ರಣ ಎನ್ನಬಹುದು. ಮನುಷ್ಯರು ಏನು ಮಾಡಬೇಕೆಂದುಕೊಳ್ಳುತ್ತಾರೋ ಅದನ್ನೇ ಮಾಡುತ್ತಾರೆ. ವ್ಯಕ್ತಿ ತನ್ನ ಅಂತಃಕರಣವನ್ನು ಯಾವ ರೀತಿ ಸ್ಪಂದಿಸುವಂತಾಗಿಸಿದರೆ ಅದೇ ರೀತಿ ಅದು ಸಂಭವಿಸುತ್ತದೆ. ವ್ಯಕ್ತಿ ವಿಕಾಸ ಮತ್ತು ವ್ಯಕ್ತಿತ್ವ ವಿಕಾಸ ಎಂಬುವು ಅವರ ಆಲೋಚನಾ ವಿಧಾನವನ್ನು ಅವಲಂಬಿಸಿರುತ್ತವೆ. ಅವರ ಆಲೋಚನೆಗಳೇ ಧೈರ್ಯವನ್ನು, ಅಧೈರ್ಯವನ್ನು ಉತ್ತೇಜಿಸುತ್ತವೆ. ಆದ್ದರಿಂದ ಮನಸ್ಸಿದರೆ ಎಲ್ಲವೂ ಸರಳ, ಸುಂದರ. ಇಲ್ಲದೇ ಹೋದರೆ ಕಠೋರ, ಕಠಿಣ ಎನ್ನಲಾಗಿದೆ.

ಮನಸ್ಸು ಎಂಬುದು ಸ್ಮೃತಿಗಳ ಪೆಟ್ಟಿಗೆಯಿದ್ದಂತೆ. ವ್ಯಕ್ತಿಯ ಆಲೋಚನೆಗಳು, ಭಾವನೆಗಳು, ಎಲ್ಲವೂ ಕ್ರೋಢೀಕರಿಸಿರುತ್ತದೆ. ಅದೊಂದು ರೀತಿಯಲ್ಲಿ ಅತಿ ಸೂಕ್ಷ್ಮವಾದುದು, ಅತಿ ಶಕ್ತಿಯುತವಾದುದು. ಎಲ್ಲಾ ವಿಧವಾದ ಅನುಭವಗಳನ್ನು ಅದು ಗ್ರಹಿಸಿ ನಿಕ್ಷಿಪ್ತವಾಗಿಸುತ್ತದೆ. ಇದು ವ್ಯಕ್ತಿಯ ಸಮಗ್ರ ಸಮೀಕರಣ ಶಕ್ತಿ.

'ಮನಸ್ಸು ಬಾಲ್ಯ, ಯೌವನ, ಪ್ರೌಢಾವಸ್ಥೆ ಮತ್ತು ವೃದ್ಧಾಪ್ಯಗಳ ಪ್ರಭಾವಕ್ಕೆ ಒಳಗಾಗುವುದು ಸಹಜ. ಆದ್ದರಿಂದಲೇ ಈ ಎಲ್ಲಾ ಕಾಲಘಟ್ಟಗಳನ್ನು ಹಾದು ಹೋಗುವ ಹಂತದಲ್ಲಿ ವ್ಯಕ್ತಿ ವಿಶಿಷ್ಟತೆ ಎಂಬುದು ಭಿನ್ನ ಭಿನ್ನವಾಗಿರುತ್ತದೆ. ಈ ವಿಶಿಷ್ಟತೆಯೇ ವ್ಯಕ್ತಿತ್ವದ ವಿಕಾಸಕ್ಕೆ ಪ್ರೇರಕ. ಮನಸ್ಸಿನ ತಾರ್ಕಿಕ ಸಮರ್ಥನೆಯು ಮಾನವನಿಗೆ ಅನುಪಯೋಗದ ಸಂಗತಿ. ಆದರೆ ತಮ್ಮ ದೌರ್ಬಲ್ಯಗಳಿಂದಲೂ, ಕೊರತೆಗಳಿಂದಲೂ ಕೊರಗು ಕಾಡಲು ಪ್ರಾರಂಭವಾದಾಗ, ನಾವು ನಿರ್ದೋಷಿಗಳು ಎಂಬ ಸಮರ್ಥನೆಯು ಅಗತ್ಯವಾಗುತ್ತದೆ. ಹಗಲು ಕನಸು ಕಾಣುವ, ನಿರ್ಣಯಿಸುವ, ತರ್ಕಬದ್ಧವಾಗಿ ಸಮಾಧಾನ ಹೊಂದುವ ಪ್ರಜ್ಞಾಪೂರ್ವಕವಾದ ಚಟುವಟಿಕೆಯಿಂದ ಮನಸ್ಸು ಸದಾ ಕೂಡಿರುತ್ತದೆ.

ಮನಸ್ಸಿನ ಕುರಿತಾದ ಜಿಜ್ಞಾಸೆಯು ವೇದ ಕಾಲದ ಚಿಂತಕರು ಆಧ್ಯಾತ್ಮ ಹಾಗೂ ತಾತ್ವಿಕ ಜಿಜ್ಞಾಸೆಯ ಚಿಂತಕರಿಂದಲೂ ನಡೆದಿದೆ. "ಚಂದ್ರಮಾ ಮನಸ್ನೋ ಜಾತಃ......" ಎನ್ನುತ್ತದೆ ಪುರುಷ ಸೂಕ್ತ. ಹಿಗ್ಗುವ, ಕುಗ್ಗುವ ಮನಸ್ಸಿಗೂ, ವೃದ್ಧಿ ಕ್ಷಯಗಳನ್ನು ಅನುಭವಿಸುವ ಚಂದ್ರನಿಗೂ ಇರುವ ಸಂಬಂಧದ ಗಾಢತೆಯನ್ನು ಕುರಿತು ಹೇಳುತ್ತದೆ. ಅಂತೆಯೇ ಮನಸ್ಸಿನ ವ್ಯಾಪಾರಗಳನ್ನು ವಿವರಿಸುವುದು ಮನಸ್ಸಿನಷ್ಟೇ ಸಂಕೀರ್ಣವಾದುದು ಮತ್ತು ಅಮೂರ್ತವಾದುದು. ಎಲ್ಲವನ್ನೂ ಅರಿತ ಮಾನವನಿಗೆ ತನ್ನನ್ನು ತಾನು ಅರಿಯಲು, ನಿಯಂತ್ರಿಸಿಕೊಳ್ಳಲು, ಆಂತರಿಕ ಪ್ರಪಂಚವನ್ನು

ಅರ್ಥೈಸಿಕೊಳ್ಳಲು ಸಾಧ್ಯವಾಗದಿರುವುದು ಮನಸ್ಸಿನ ವ್ಯಾಪ್ತಿ ಹಾಗೂ ಇದರ ಸ್ವರೂಪದ ಅಮೂರ್ತತೆಯನ್ನೇ ಎತ್ತಿ ಹಿಡಿಯುತ್ತದೆ.

ಯೂಂಗ್‌ನ ದೃಷ್ಟಿಕೋನದಲ್ಲಿ 'ಮನಸ್ಸು'

ಮನಸ್ಸಿನ ಪ್ರಕ್ರಿಯೆಗಳನ್ನು ಯೂಂಗ್ ಫ್ರಾಯ್ಡ್‌ಗಿಂತ ವಿಭಿನ್ನ ನೆಲೆಯಲ್ಲಿ ವಿವರಿಸಿದ್ದಾನೆ. ಮನಸ್ಸಿನ ಪ್ರಕ್ರಿಯೆಗಳನ್ನು ಮೂರು ರೀತಿಯ ಸಿದ್ಧಾಂತಗಳ ಮೂಲಕ ಯೂಂಗ್ ವಿವರಿಸಿದ್ದಾನೆ. **ಮೊದಲನೆಯದು 'ವಿರೋಧಗಳ ಸಿದ್ಧಾಂತ'** (Principle of opposites). ಅಂದರೆ ಪ್ರತಿಯೊಂದು ಬಯಕೆ, ಆಸೆ, ಆಲೋಚನೆಗೂ ವಿರುದ್ಧವಾದದ್ದು ಉಂಟಾಗುತ್ತದೆ. ಅಂದರೆ ಒಳ್ಳೆಯ ಯೋಚನೆಯ ಜೊತೆಗೆ ಅದಕ್ಕೆ ವಿರುದ್ಧವಾದ ಕೆಟ್ಟ ಯೋಚನೆಯೂ ಬರುತ್ತದೆ. ಮೇಲೆ–ಕೆಳಗೆ, ಕಪ್ಪು–ಬಿಳುಪು. ಇವು ಹೀಗೆ ಒಂದರೊಡನೆ ಇನ್ನೊಂದು ಬರುತ್ತವೆಯೋ ಅದೇ ರೀತಿಯಲ್ಲಿ ಮನಸ್ಸಿನ ಪ್ರಕ್ರಿಯೆ ನಡೆಯುತ್ತದೆ. ಇಂತಹ 'ವಿರುದ್ಧ' ಪ್ರವೃತ್ತಿಯೇ 'ಮನಸ್ಸಿನ ಬಲ ಅಥವಾ ಲಿಬಿಡೋ' (Libido) ಎಂದು ಯೂಂಗ್‌ನ ಅಭಿಪ್ರಾಯ. ಅಣುವನ್ನು ಬೇರ್ಪಡಿಸಿದಂತೆ ಅಥವಾ ಒಂದು ವಿದ್ಯುತ್ ವ್ಯೂಹದ ಎರಡು ಧ್ರುವಗಳಂತೆ. ಈ 'ವಿರೋಧ'ವೇ ಶಕ್ತಿಮೂಲ. ಬಲವಾದ ವಿರೋಧ ಹೆಚ್ಚು ಶಕ್ತಿಯನ್ನು ಮನಸ್ಸಿಗೆ ನೀಡಿದರೆ, ದುರ್ಬಲವಾದ ವಿರೋಧ ಕಡಿಮೆ ಶಕ್ತಿಯನ್ನು ನೀಡುತ್ತದೆ.

ಎರಡನೆಯದು 'ಸಮಾನತೆಯ ಸಿದ್ಧಾಂತ – (Principle of Equivalence)

ವಿರೋಧಿ ಪ್ರವೃತ್ತಿಯಿಂದ ಉಂಟಾದ ಶಕ್ತಿ ಎರಡೂ ಕಡೆಗಳಿಗೆ ಸಮಾನವಾಗಿ ಹಂಚಲ್ಪಡುತ್ತದೆ. ವ್ಯಕ್ತಿ ತನ್ನಲ್ಲಿ ಯಾವುದೇ ಕೆಟ್ಟ ಬಯಕೆಯೇ ಇಲ್ಲವೆಂದು ಸಾಧಿಸಿ, ಅದನ್ನು ಅದುಮಿಟ್ಟರೆ ಈ ಶಕ್ತಿ ಸುಪ್ತ ಮನಸ್ಸಿನ ಒಂದು ಸಂಕೀರ್ಣ ಪ್ರಕ್ರಿಯೆಯಾಗಿ ರೂಪುಗೊಳ್ಳುತ್ತದೆ (complex). ಅಂದರೆ ಇಡೀ ಜೀವನವೆಲ್ಲಾ ವ್ಯಕ್ತಿ ತಾನು ಬರಿಯ ಒಳ್ಳೆ ಸಂಗತಿಗಳನ್ನೇ ಯೋಚಿಸುತ್ತೇನೆ, ಒಳ್ಳೆ ಸಂಗತಿಗಳನ್ನೇ ಮಾಡುತ್ತೇನೆ, ತನಗೆ ಸುಳ್ಳು, ಮೋಸ, ಕೊಲ್ಲುವುದು ಯಾವುದೂ ಯೋಚನೆಗಳು ಇಲ್ಲ ಎಂದುಕೊಂಡರೆ ಪ್ರತಿಯೊಂದು ಬಾರಿಯೂ ಈ ಸಂಕೀರ್ಣ ಪ್ರಕ್ರಿಯೆ ರೂಪುಗೊಂಡು ಅದು ಆ ವ್ಯಕ್ತಿಯಲ್ಲಿನ ಪ್ರತ್ಯೇಕ ವ್ಯಕ್ತಿತ್ವವೇ ಆಗಿ ಬದುಕಿನುದ್ದಕ್ಕೂ ಕಾಡಲಾರಂಭಿಸುತ್ತದೆ. ಮಾನಸಿಕವಾಗಿ ದ್ವಂದ್ವಗಳನ್ನು ಉಂಟುಮಾಡಿ, ಅವುಗಳ ನಡುವೆಯೇ ಘರ್ಷಣೆಯಾಗಿ ಮನೋವ್ಯಾಧಿಯೂ ಆಗಿ ಪರಿಣಮಿಸಬಹುದು.

ಮೂರನೆಯದು: ಎಂಟ್ರೋಪಿ – (Entropy)

ಭೌತಶಾಸ್ತ್ರದ ಪರಿಕಲ್ಪನೆಗಳಲ್ಲಿ ಒಂದಾದ 'ಎಂಟ್ರೋಪಿ' ಎಲ್ಲಾ ಭೌತಿಕ ವ್ಯೂಹಗಳೂ 'ಇಳಿಕೆ'ಯಾಗುತ್ತಾ ಬಂದು ಶಕ್ತಿಯ ಸಮವಾದ ಹಂಚುವಿಕೆಯನ್ನು ವರ್ಣಿಸುತ್ತದೆ. ಅದೇ ರೀತಿ

ಮನಸ್ಸಿನಲ್ಲಿ ವಿರೋಧಿ ಪ್ರಕ್ರಿಯೆಗಳು ಒಂದಾಗಿ ಜೀವನ ಸಾಗಿದಂತೆ ಶಕ್ತಿ ಕುಂದುತ್ತಾ ಹೋಗುತ್ತದೆ. ವ್ಯಕ್ತಿಗಳಲ್ಲಿ ವಯಸ್ಸಾಗುತ್ತಾ ಬಂದಂತೆ ತನ್ನ ವಿಭಿನ್ನ ಸ್ವಭಾವಗಳನ್ನು ಒಪ್ಪಿಕೊಳ್ಳತೊಡಗುತ್ತದೆ. 'ಆದರ್ಶ'ದ ಪರಿಕಲ್ಪನೆಯಿಂದ ಹೊರಬಂದು ಎಲ್ಲವೂ 'ಒಳ್ಳೆಯದು', 'ಕೆಟ್ಟದ್ದು' ಎರಡರ ಮಿಶ್ರಣ ಎಂಬುದನ್ನು ಒಪ್ಪಿಕೊಳ್ಳುತ್ತಾನೆ. ಯಾವುದೇ 'ಲಿಂಗ'ಕ್ಕೆ ಸೇರಿದ್ದರೂ ತನ್ನಲ್ಲಿರುವ ವಿರುದ್ಧ (ಗಂಡು/ಹೆಣ್ಣು) ಗುಣವನ್ನು ಒಪ್ಪಿಕೊಳ್ಳಲಾಗುತ್ತದೆ. ದೈಹಿಕವಾಗಿಯೂ ಗಂಡು-ಹೆಣ್ಣುಗಳಲ್ಲಿ ಜೈವಿಕ ಪ್ರಕ್ರಿಯೆಗಳು ವಯಸ್ಸಾದಂತೆ, ವೃದ್ಧಾಪ್ಯ ಸಮೀಪಿಸಿದಂತೆ ಒಂದೇ ಆಗತೊಡಗುತ್ತವೆ. ತಮ್ಮ 'ವಿರೋಧ'ಗಳನ್ನು ದಾಟಿ ಮೇಲೇರುವ 'ತಾವು ಯಾರು' ಎಂಬುದರ ಎರಡೂ ಮುಖಗಳನ್ನು ನೋಡುವ ಈ ಪ್ರಕ್ರಿಯೆಗೆ (Transcendence) ತರ್ಕಾತೀತ ಒಳ ಅರಿವಿಗೆ ಮಾತ್ರ ಗ್ರಾಹ್ಯವಾಗುವ ಸ್ಥಿತಿ ಎನ್ನಲಾಗುತ್ತದೆ.

ಯೂಂಗ್ ಮನಸ್ಸನ್ನು ಮೂರು ಭಾಗಗಳನ್ನಾಗಿ ವಿಂಗಡಿಸುತ್ತಾನೆ. ಮೊದಲನೆಯದು Ego (ಅಹಂ). ಇದು ಜಾಗೃತ ಸ್ಥಿತಿ. ನಂತರದು ವೈಯಕ್ತಿಕ ಸುಪ್ತಸ್ಥಿತಿ. ಆ ಕ್ಷಣದಲ್ಲಿ ಅದು ಜಾಗೃತವಿದ್ದರೂ, ಜಾಗೃತವಾಗಬಹುದಾದ ಸಾಮರ್ಥ್ಯ. ನೆನಪುಗಳು ಅಡಗಿರುವ ಮನಸ್ಸಿನ ಈ ಭಾಗದಿಂದ ಅದುಮಿಟ್ಟ ಭೂತಕಾಲದ ಅನುಭವಗಳನ್ನೂ, ನೆನಪುಗಳನ್ನೂ ಹೊರತೆಗೆಯಲು ಸಾಧ್ಯ.

ಯೂಂಗ್‌ನನ್ನು ಬೇರೆಲ್ಲಾ ಮನೋವಿಜ್ಞಾನಿಗಳಿಂದ ಭಿನ್ನವಾಗಿ ನಿಲ್ಲಿಸಿರುವುದು 'ಸಮಷ್ಟಿ ಸುಪ್ತ ಪ್ರಜ್ಞೆ' (collective unconscious) ಪರಿಕಲ್ಪನೆ. ಇದನ್ನು 'ಮಾನಸಿಕ ಅನುವಂಶಿಕತೆ (psychic inheritance) ಎಂದು ಕರೆಯಬಹುದು. ಇದು ಇಡೀ ಮಾನವ ಜನಾಂಗ ತನ್ನ ವಿಕಾಸದ ಹಾದಿಯಲ್ಲಿ ಅನುಭವಿಸಿದ ವಿಷಯಗಳ ಸಾರ ಸಂಗ್ರಹ. ಮಾನವ ಸಹಜವಾದ ಅನುಭವಗಳ ಜೊತೆಗೆ ಪ್ರಾಣಿ ಸಹಜವಾದ ಅನುಭವಗಳೂ ಇಲ್ಲಿ ಸಂಗ್ರಹಗೊಂಡಿರುತ್ತವೆ. ಜೀವೋತ್ಪತ್ತಿ ಆದಂದಿನಿಂದ ಇಂದಿನವರೆಗೆ, ವಿಕಾಸದ ಹಾದಿಯಲ್ಲಿ ಜೀವಿಗೆ ಆಗಿರಬಹುದಾದ ಅನುಭವಗಳೆಲ್ಲವೂ ಇಲ್ಲಿ ಉಳಿದುಬಂದಿರುತ್ತವೆ. ಅಂದರೆ ಮಾನವರೆಲ್ಲರಲ್ಲೂ ಇದ್ದೇ ಇರುವ ಮನಸ್ಸಿನ ಸಾಮಾನ್ಯ ಪದರ (common layer) ಇದು. ಯೂಂಗ್ ಹೇಳುವಂತೆ ಇದು ಮಾನವೀಯತೆಯ ಅಡಿಪಾಯ. ಯೂಂಗ್ ಸಾಮೂಹಿಕ ಸುಪ್ತಚೇತನದಲ್ಲಿದ್ದುಕೊಂಡು ವ್ಯಕ್ತಿಯ ವರ್ತನೆಗಳನ್ನು ನಿರ್ದೇಶಿಸುವ, ನಿರ್ಧರಿಸುವ ಚಿಂತನ ರೂಪಗಳನ್ನು (thought forms) ಆದಿಮ ಪ್ರತಿಮೆಗಳು, ಪುರಾತನ ಪ್ರತಿಮೆಗಳು ಅಥವಾ ಪ್ರಾಚೀನ ಪ್ರತಿಮೆಗಳು (archetypes) ಎಂದು ಕರೆದಿದ್ದಾನೆ. ಚೇತನ, ಅಹಂ, ವೈಯಕ್ತಿಕ ಸುಪ್ತಚೇತನ ಮತ್ತು ಅದರಲ್ಲಡಗಿರುವ ಪ್ರಾಚೀನ ಪ್ರತಿಮೆಗಳು ಮಾನವನ ವ್ಯಕ್ತಿತ್ವ ರಚನೆಯ ಹಿಂದಿರುವ ಮೂಲ ಘಟಕಗಳು ಎಂಬುದು ಯೂಂಗ್‌ನ ಅಭಿಪ್ರಾಯ.

ಮನಃಶಾಸ್ತ್ರ ಎಂದರೇನು?

ವರ್ತನೆಯ ವೈಜ್ಞಾನಿಕ ಅಧ್ಯಯನವನ್ನು ಮನೋವಿಜ್ಞಾನ, ಮನಃಶಾಸ್ತ್ರ ಎನ್ನಬಹುದು. ಇಂಗ್ಲಿಷ್‌ನ 'ಸೈಕಾಲಜಿ' (psychology) ಎಂಬ ಪದ ಸೈಕೆ (psyche) ಮತ್ತು (logus) 'ಲೋಗಸ್' ಎಂಬ ಎರಡು ಗ್ರೀಕ್ ಪದಗಳಿಂದ ಉತ್ಪನ್ನವಾಗಿದೆ. ಸೈಕೆ ಎಂದರೆ ಆತ್ಮ, ಲೋಗಸ್ ಎಂದರೆ ಶಾಸ್ತ್ರ ಅಥವಾ ವಿಜ್ಞಾನ. ಆದುದರಿಂದ 'ಸೈಕಾಲಜಿ' ಎಂದರೆ ಆತ್ಮದ ವಿಜ್ಞಾನ. ತೀರಾ ಇತ್ತೀಚಿನವರೆಗೂ ಸ್ವತಂತ್ರವಾದ ವಿಜ್ಞಾನವಾಗಿ ರೂಪುಗೊಳ್ಳದೆ ತತ್ವಶಾಸ್ತ್ರದ ಭಾಗವಾಗಿಯೇ ಇತ್ತು. ಗ್ರೀಕರು, ರೋಮನ್ನರು ಹಾಗೂ ಭಾರತೀಯ ತತ್ವಜ್ಞಾನಿಗಳು ಮನಃಶಾಸ್ತ್ರವು ಪ್ರತ್ಯೇಕವಾದ ಅಧ್ಯಯನ ವಿಷಯವೆಂದು ಪರಿಗಣಿಸಿರಲಿಲ್ಲ. 'ಮನಃಶಾಸ್ತ್ರ' ಎಂದರೆ ಆತ್ಮವನ್ನು ಅರಿಯುವ ಅದರ ಸ್ವರೂಪವನ್ನು ಗ್ರಹಿಸುವ ಶಾಸ್ತ್ರ ಎಂಬುದಾಗಿ ಧಾರ್ಮಿಕತೆ ಹಾಗೂ ಆಧ್ಯಾತ್ಮಿಕತೆಯ ಸ್ಪರ್ಶದಿಂದ ಕೂಡಿತ್ತು.

ಆದರೆ ಆತ್ಮ ಅವಿನಾಶಿ. ಅದು ದೇಹದ ಯಾವ ಭಾಗದಲ್ಲಿದೆ? ಅದನ್ನು ಕಣ್ಣಿನಿಂದ ಕಾಣಬಹುದೇ? ಒಬ್ಬರಿಗೆ ಒಂದೇ ಆತ್ಮ ಇರುವುದಾ? ಅದರ ಕಾರ್ಯವೇನು? ಎಂಬಿತ್ಯಾದಿ ಪ್ರಶ್ನೆಗಳಿಗೆ ಉತ್ತರ ಸಿಗದಿದ್ದಾಗ ತತ್ವಶಾಸ್ತ್ರದಿಂದ ಬೇರೆಯಾಗಿ 'ಆತ್ಮದ ವಿಜ್ಞಾನ' ಎಂಬ ಪ್ರಯೋಗ ಸಿದ್ಧವಿಲ್ಲದ ವ್ಯಾಖ್ಯೆ ಬೇರೆ ಅರ್ಥ ಪಡೆದುಕೊಂಡಿತು. 'ಸೈಕೆ' (psyche) ಎಂಬ ಪದಕ್ಕೆ 'ಮನಸ್ಸು' ಎಂದು ಹೊಸ ಅರ್ಥವನ್ನು ಆರೋಪಿಸಲಾಯಿತು.

'ವಿಲ್‌ಹೆಲ್ಮ್ ವುಂಡ್ಟ್' ಎಂಬ ಜರ್ಮನ್ ಜೀವವಿಜ್ಞಾನಿ ೧೮೭೯ರಲ್ಲಿ ಲೈಫ್‌ಝಿಗ್ ಎಂಬಲ್ಲಿ ಪ್ರಪ್ರಥಮವಾಗಿ ಪ್ರಯೋಗಶಾಲೆಯೊಂದನ್ನು ಪ್ರಾರಂಭಿಸಿ ಪ್ರಯೋಗಾತ್ಮಕ ಮನೋವಿಜ್ಞಾನಕ್ಕೆ ಬುನಾದಿ ಹಾಕಿದನು. ಅಲ್ಲಿಯವರೆಗೂ ತತ್ವಶಾಸ್ತ್ರದ ಒಂದು ವಿಭಾಗವೆನಿಸಿಕೊಂಡಿದ್ದ ಮನೋವಿಜ್ಞಾನಕ್ಕೆ ಪ್ರತ್ಯೇಕ ಅಸ್ತಿತ್ವದ ಪ್ರಾರಂಭ ಇಲ್ಲಿಂದ ಆಯಿತು ಎನ್ನಬಹುದು. ಆದ್ದರಿಂದಲೇ ಈತನನ್ನು 'ಆಧುನಿಕ ಮನೋವಿಜ್ಞಾನದ ಪಿತಾಮಹ' ಎಂದು ಕರೆಯಲಾಗಿದೆ. ವುಂಡ್ಟ್ ಮನೋವಿಜ್ಞಾನವನ್ನು ಜಾಗೃತ ಪ್ರಜ್ಞೆಯ ಅಧ್ಯಯನ ಎಂದು ಕರೆದು ಮನಸ್ಸಿನ ಸಂರಚನೆಯನ್ನು ಅರಿಯಲು ಅಂತರಾವಲೋಕನ ವಿಧಾನವನ್ನು ಬಳಸಿದ ವೇಳೆಗೆ ಅಮೇರಿಕದ ವಿಲಿಯಂ ಜೇಮ್ಸ್ 'The principle of psychology' ಎಂಬ ಪುಸ್ತಕವನ್ನು ಹೊರತಂದು ಮನಸ್ಸಿನ ಕ್ರಿಯಾತ್ಮಕತೆಯನ್ನು ಅರಿಯುವುದು 'ಮನೋವಿಜ್ಞಾನದ ಗುರಿ' ಎಂದು ಹೇಳಿದ್ದ. ಎರಡು ಸಂಪುಟಗಳ 'ಪ್ರಿನ್ಸಿಪಲ್ ಆಫ್ ಸೈಕಾಲಜಿ' (೧೮೯೦) ಗ್ರಂಥವು ತತ್ವಶಾಸ್ತ್ರಕ್ಕಿಂತ ಭಿನ್ನವಾದ ವ್ಯಕ್ತಿತ್ವವನ್ನು ಮನಃಶಾಸ್ತ್ರಕ್ಕೆ ಒದಗಿಸಿದ ಕೃತಿ. ಇದಲ್ಲದೆ ಮನಸ್ಸನ್ನು ಬುದ್ಧಿಶಕ್ತಿ, ಸೃಜನಶೀಲತೆ, ನೈತಿಕತೆ ಎಂದೆಲ್ಲ ವಿಭಜಿಸಿ ಪರಿಶೀಲಿಸುವ ಆ ಕಾಲದ ಮನೋವಿಜ್ಞಾನದ ಬಗೆಯನ್ನು ಅದು ನಿರಾಕರಿಸಿತು. ಮನಃಶಾಸ್ತ್ರವನ್ನು ಮಾನಸಿಕ ಜೀವನದ ವಿಜ್ಞಾನ ಮನಸ್ಸಿನ ವಿದ್ಯಮಾನಗಳ

ಹಾಗೂ ಅದರ ಸ್ಥಿತಿಗತಿಗಳ ಅಧ್ಯಯನ. ಮನಸ್ಸಿನ ವಿದ್ಯಮಾನಗಳೆಂದರೆ ಭಾವನೆಗಳು, ಆಸೆಗಳು, ಅರಿವು ವಿವೇಚನೆ, ನಿರ್ಧಾರಗಳು ಎಂದು ವ್ಯಾಖ್ಯಾನಿಸಿದ.

ತಮ್ಮ ಮನೋಭಾವಗಳನ್ನು ಪರಿವರ್ತಿಸುವ ಮನುಷ್ಯರು ತಮ್ಮ ಬದುಕಿನ ಬಾಹ್ಯ ಅಂಶಗಳನ್ನು ಪರಿವರ್ತಿಸಬಹುದು ಎಂದು ನಂಬಿದವನು ಈತ. ಮನುಷ್ಯನ ಸ್ವಭಾವ ತುಂಬಾ ಸಂಕೀರ್ಣ. ಆತನ ಯಾವುದೇ ಒಂದು ಸಾಮರ್ಥ್ಯವನ್ನು ಪ್ರತ್ಯೇಕಿಸಿ ಅಳೆಯುವುದು ಕಷ್ಟ ಸಾಧ್ಯ. ಆತನ ತಿಳುವಳಿಕೆಯ ಪ್ರಮಾಣವನ್ನು ಅಳೆಯಹೊರಡುವುದು ಮೂರ್ಖತನ. ಆಲೋಚನೆ, ಗ್ರಹಿಕೆಗಳಲ್ಲಿ ಎಷ್ಟೆಷ್ಟೋ ಬಗೆಗಳಿವೆ. ಒಬ್ಬೊಬ್ಬ ಮನುಷ್ಯನೂ ಅನುಭವಕ್ಕೆ ಭಿನ್ನ ಭಿನ್ನ ರೀತಿಯಲ್ಲಿ ಪ್ರತಿಕ್ರಿಯೆ ನೀಡುತ್ತಾನೆ ಎಂದು ಆತ ತರ್ಕಿಸುತ್ತಾನೆ. ವಿಲಿಯಂಜೇಮ್ಸ್ ತನ್ನ ಕಾಲಕ್ಕೆ ಎಷ್ಟರಮಟ್ಟಿಗೆ ಸೇರಿದವನೋ ಅಷ್ಟೇ ತನ್ನ ಕಾಲದ ಆಚೆಗೂ ಸೇರಿದವನು. ಆತನ ನಿಧನಾ ನಂತರ ಆತನ ಮನೋವೈಜ್ಞಾನಿಕ ಹಾಗೂ ತತ್ವಶಾಸ್ತ್ರೀಯ ವಿಚಾರಗಳನ್ನು ಅನಂತರ ಬಂದ ದಾರ್ಶನಿಕರು ಹಾಗೂ ಮನಃಶಾಸ್ತ್ರಜ್ಞರು ತಮಗೆ ಬೇಕಾದ ಹಾಗೆ ಬಳಸಿಕೊಂಡರು. ಆತನ ಚಿಂತನೆಗಳು ಸಮಕಾಲೀನವೂ, ಪ್ರಸ್ತುತವೂ ಆಗಿವೆ ಎಂಬುದು ಆತನ ಮಹತ್ವವನ್ನು ತೋರಿಸುತ್ತದೆ.

೧೯೦೦ರ ಹೊತ್ತಿಗೆ ಜಾನ್‌ವಾಟ್ಸನ್ ಎಂಬಾತ ಬಿಹೇವಿಯರಿಸಂ (Behaviourisum) ಅಥವಾ 'ವರ್ತನಾವಾದ'ವನ್ನು ಹುಟ್ಟು ಹಾಕಿದ. ಈತನ ಪ್ರಕಾರ, ಮನಸ್ಸು, ಆತ್ಮ, ಚೇತನ ಎನ್ನುವುದನ್ನೆಲ್ಲಾ ಪ್ರಮಾಣಿಸಿ ನೋಡಲಾಗುವುದಿಲ್ಲ. ಮಾಪನ ಮಾಡಿ ತೋರಿಸುವಂತಹದ್ದು ವರ್ತನೆ. ಆದ್ದರಿಂದ ವರ್ತನೆಯ ವೈಜ್ಞಾನಿಕ ಅಧ್ಯಯನವೇ ಮನೋವಿಜ್ಞಾನ ಎನ್ನುತ್ತಾನೆ.

೧೯೧೩ರಲ್ಲಿ ವ್ಯಾಟ್ಸನ್ 'ವರ್ತನವಾದಿ ಕಂಡಂತೆ ಮನಃಶಾಸ್ತ್ರ' ಎಂಬ ಪ್ರಬಂಧವನ್ನು ಪ್ರಕಟಿಸಿದ. ಇದನ್ನು 'ವರ್ತನವಾದಿಗಳ ಪ್ರಣಾಳಿಕೆ' ಎನ್ನಲಾಗಿದೆ. ಈ ಪ್ರಬಂಧದಲ್ಲಿ ವ್ಯಾಟ್ಸನ್ ಮನಃಶಾಸ್ತ್ರದ ಹೊಸ ತತ್ವವಾದ 'ವರ್ತನವಾದ'ದ ಮುಖ್ಯ ಲಕ್ಷಣಗಳನ್ನು ನಿರೂಪಿಸಿದ್ದಾನೆ. ಈತನ ಪ್ರಕಾರ ಮನೋವಿಜ್ಞಾನವು ಶುದ್ಧಾಂಗ ವಸ್ತುನಿಷ್ಠವಾಗಿದ್ದು ಪ್ರಾಕೃತಿಕ ವಿಜ್ಞಾನದ ಪ್ರಾಯೋಗಿಕ ಶಾಖೆಯಾಗಿದೆ. ವರ್ತನೆಯ ಸಂಭಾವ್ಯತೆ ಹಾಗೂ ನಿಯಂತ್ರಣವೇ ಅದರ ತಾತ್ವಿಕ ಗುರಿ ಅಂತರಾವಲೋಕನವು ಖಂಡಿತವಾಗಿ ಅದರ ವಿಧಾನವಲ್ಲ. ಅಂತೆಯೇ ಪ್ರಜ್ಞೆಯ ಅಧ್ಯಯನದಿಂದ ಒದಗಿ ಬರುವ ದತ್ತಾಂಶಗಳಲ್ಲಿ ವೈಜ್ಞಾನಿಕ ಮೌಲ್ಯವಿಲ್ಲ. ವರ್ತನವಾದಿಗಳ ದೃಷ್ಟಿಯಲ್ಲಿ ಮನುಷ್ಯ ಹಾಗೂ ಪ್ರಾಣಿಯ ನಡುವೆ ವ್ಯತ್ಯಾಸವಿಲ್ಲ. ಅದರೆಲ್ಲಾ ಸಂಕೀರ್ಣತೆ ಹಾಗೂ ಪರಿಷ್ಕಾರದೊಂದಿಗೆ ಮನುಷ್ಯನ ವರ್ತನೆಯ ಒಟ್ಟಾರೆ ಅನ್ವೇಷಣೆಯ ಭಾಗವೇ ಆಗಿದೆ.

ವ್ಯಾಟ್ಸನ್‌ನ ಸಹೋದ್ಯೋಗಿಗಳು ಹಾಗೂ ಇತರ ಮನೋವಿಜ್ಞಾನಿಗಳು ವರ್ತನವಾದದ ಬಗೆಗಿನ ಅವನ ಆಲೋಚನೆಗಳು ಹೆಚ್ಚು ತಾತ್ವಿಕವಾಗಿವೆ ಎಂದು ನಿರಾಕರಿಸಿದರು. ಅದಕ್ಕೆ ಆಧಾರಗಳು ಸಾಲವು ಎಂದು ಟೀಕಿಸಿದರು. ತನ್ನ ವರ್ತನವಾದದಲ್ಲಿ ಜನರ ಬಾಹ್ಯ ವರ್ತನೆ

ಹಾಗೂ ಅವರು ಬೇರೆ ಬೇರೆ ಸಂದರ್ಭಗಳಲ್ಲಿ ನೀಡುವ ಪ್ರತಿಕ್ರಿಯೆಗಳಿಗೆ ಹೆಚ್ಚಿನ ಮಹತ್ವ ನೀಡಿ ಆಂತರಿಕ ಮಾನಸಿಕ ಸ್ಥಿತಿಗಳ ಬಗ್ಗೆ ಗಮನ ಹರಿಸದಿರುವುದು ಒಂದು ಮಿತಿಯಾಗಿತ್ತು. ಆದರೆ ವ್ಯಾಟ್ಸನ್ ಮನುಷ್ಯನ ಕ್ರಿಯೆಗಳ ಬಗ್ಗೆ ಚಿಕಿತ್ಸಕವಾಗಿ ಅರಿತುಕೊಳ್ಳಬೇಕಾದರೆ ಆತನ ಬಾಹ್ಯ ಕ್ರಿಯೆಗಳು ವಸ್ತುನಿಷ್ಠ ಅಧ್ಯಯನವನ್ನು ಮೊದಲು ಮಾಡಬೇಕೆಂದು ವಾದಿಸಿದ.

ವರ್ತನಾವಾದವನ್ನು ಪೂರ್ಣವಾಗಿ ಒಪ್ಪದ ವಿಚಾರಧಾರೆ ೪೦ರ ದಶಕಗಳಲ್ಲಿ ತಲೆ ಎತ್ತಿತ್ತು. ಅಮೇರಿಕನ್ ಮನೋವಿಜ್ಞಾನಿ ಅಬ್ರಾಹಂ ಹೆರೋಲ್ಡ್ ಮ್ಯಾಸ್ಲೊ (೧೯೦೮-೧೯೭೦) ಅಗತ್ಯಗಳ ಶ್ರೇಣೀಕರಣ ಸಿದ್ಧಾಂತವನ್ನು ರೂಪಿಸಿದ. ಈತನ ಮಾನವ ಅಭಿಪ್ರೇರಣೆಯ ಸಿದ್ಧಾಂತವು ಬಹುತೇಕ ಎಲ್ಲ ಮೂಲಭೂತ ಆಶಯಗಳನ್ನು ಸಂಘಟಿಸುತ್ತದೆ. ಅವನ ಪ್ರಕಾರ ವ್ಯಕ್ತಿಯ ಅಂತರಂಗವು ನಿರಂತರವಾಗಿ ವಿಕಾಸ ಹೊಂದುತ್ತಾ ತೆರೆದುಕೊಳ್ಳುತ್ತದೆ. ವ್ಯಕ್ತಿಯ ಅಗತ್ಯಗಳು ವಿವಿಧ ಸ್ತರಗಳಲ್ಲಿದ್ದು ಆತ ಈ ಅಗತ್ಯಗಳನ್ನು ಪೂರೈಸಿಕೊಳ್ಳಲು ಒಂದು ಖಚಿತ ವ್ಯವಸ್ಥೆ ರೂಪಿಸಿಕೊಳ್ಳುತ್ತಾನೆ. ಶ್ರೇಣೀಕೃತವಾದ ಈ ಅಗತ್ಯಗಳಲ್ಲಿ ಯಾವುದೋ ಒಂದು ಹಂತದ ಅಗತ್ಯವನ್ನು ಪೂರೈಸಿಕೊಂಡ ಮೇಲೆಯೇ ಇನ್ನೊಂದು ಹಂತಕ್ಕೆ ಏರಲು ಸಾಧ್ಯ. ಜನರ ಅಭಿಪ್ರೇರಣೆಯು ಅವರ ಅಗತ್ಯಗಳಿಂದ ರೂಪುಗೊಳ್ಳುತ್ತದೆ. ಆದುದರಿಂದ ಮಾನವನ ನಡವಳಿಕೆಯು ಆತನ ಅಗತ್ಯಗಳ ಪೂರೈಕೆಗಳಿಂದ ನಿರ್ದೇಶಿತವಾಗಿದೆ ಎಂದು ಪ್ರತಿಪಾದಿಸಿದ್ದಾನೆ.

ಈತನು ಅಗತ್ಯಗಳ ಶ್ರೇಣೀಕರಣವನ್ನು ತ್ರಿಭುಜಾಕೃತಿಯಲ್ಲಿ ರೇಖಿಸುತ್ತಾನೆ. ಈತನ ಅಭಿಪ್ರಾಯದಂತೆ ಮಾನವರು ತಮ್ಮ ಜೀವನವನ್ನು ಶ್ರೇಣೀಕರಣದ ತೀರ ಕೆಳಹಂತದಿಂದ ಆರಂಭಿಸುತ್ತೇವೆ. ಅವು ಯಾವುವೆಂದರೆ,

ಶಾರೀರಿಕ ಅಗತ್ಯಗಳು: ಉಸಿರಾಟ, ಬಾಯಾರಿಕೆ, ಆಹಾರ, ನಿದ್ರೆ, ಸಂಭೋಗ ಇತ್ಯಾದಿ

ಭದ್ರತೆಯ ಅಗತ್ಯಗಳು: ಅಪಾಯ ಹಾಗೂ ಆತಂಕದ ನಿವಾರಣೆ ಭದ್ರತೆ ಹಾಗೂ ಸ್ಥಿರತೆಯ ಬಯಕೆ.


ಪ್ರೀತಿ, ಪ್ರೇಮ ಹಾಗೂ ಕೌಟುಂಬಿಕ ಭದ್ರತೆ: ವಾತ್ಸಲ್ಯ, ಪ್ರೇಮದ ಬಯಕೆ, ಗುಂಪಿನ ಸದಸ್ಯನಾಗಿರಬೇಕು, ಇತರ ಸದಸ್ಯರು ಸ್ವೀಕರಿಸಬೇಕೆಂಬ ಹಂಬಲ.

ಆತ್ಮ ಸಂಮಾನದ ಅಗತ್ಯ: ಆತ್ಮಗೌರವ, ಸಾಮರ್ಥ್ಯ ಹಾಗೂ ಪರಿಣತಿಯ ಹಂಬಲ.

ಸ್ವ-ವಾಸ್ತವೀಕರಣದ ಅಗತ್ಯ: ಸಾಮರ್ಥ್ಯಗಳ ಅರಳುವಿಕೆ, ವ್ಯಕ್ತಿಗತ ಗುರಿಗಳ, ಆಕಾಂಕ್ಷೆಗಳ ಸಾಧನೆ. (self actualization) ಪ್ರತಿಭೆಯ ಪೂರ್ಣ ಬಳಕೆಗಾಗಿ ಸತತ ಪ್ರಯತ್ನ, ಗುರಿಸಾಧನೆಗಾಗಿ ನಿರಂತರ ಹೋರಾಟ

ಅರಿವಿನ ಅಗತ್ಯ: ಕುತೂಹಲ, ಜಿಜ್ಞಾಸೆ, ಜಗತ್ತನ್ನು ಸರಿಯಾಗಿ ಗ್ರಹಿಸಬೇಕೆಂಬ ಆಸೆ.

ಅಸ್ತಿತ್ವದ ಅಗತ್ಯ:



ಮ್ಯಾಸ್ಲೊನ ವಿಚಾರಗಳು ಮನುಷ್ಯನ ಸ್ಥಿತಿಗತಿಗಳ ಬಗೆಗಿನ ಒಳನೋಟಗಳು ಆ ಕಾಲದ ಮನೋವಿಜ್ಞಾನ ಕ್ಷೇತ್ರದಲ್ಲಿ ತೀರಾ ನೂತನವಾಗಿದ್ದವು. ಈತನು ರೂಪಿಸಿದ ಮನೋವಿಜ್ಞಾನದ ಶಾಖೆಗೆ ಮಾನವತಾವಾದದ ಬೆಂಬಲವಿತ್ತು. ಈತನ ಸಿದ್ಧಾಂತವು ಮನುಷ್ಯನನ್ನು ಇಡಿಯಾಗಿ ಪರಿಭಾವಿಸುತ್ತದೆ. ಮನುಷ್ಯರು ತಮ್ಮ ಸಹಜ ಪರಿಸರದಲ್ಲಿ ದಿನ ದಿನದ ಸಮಸ್ಯೆಗಳನ್ನು ಎದುರಿಸುತ್ತಾರೆ. ಹೊಂದಾಣಿಕೆ ಮಾಡಿಕೊಳ್ಳುವ ಪರಿಯನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಾರೆ. ಮನುಷ್ಯನ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುತ್ತಾ ಮನೋವಿಜ್ಞಾನಿಗಳು ಮನುಷ್ಯ ಹಾಗೂ ಆತನ ಸುತ್ತಲಿನ ಪರಿಸರದ ನಡುವಣ ಸಂಬಂಧಗಳನ್ನು ಗ್ರಹಿಸಲು ಅನುಕೂಲ ಮಾಡಿಕೊಟ್ಟಿದೆ.

ಅಬ್ರಹಾಂ ಮಾಸ್ಲೊ ಸ್ವವಾಸ್ತವೀಕರಣದ ಮೂಲಕ ಮನುಷ್ಯನ ವಿಕಾಸವನ್ನು ವಿವರಿಸಿದಂತೆ ಅಮೇರಿಕಾದ ಕಾರ್ಲ್ ರೋಜರ್ಸ್ (೧೯೦೨–೧೯೮೭) ಮಾನವತಾವಾದಿ ಮನೋವಿಜ್ಞಾನಿ. ಈತನ ಪ್ರಕಾರ 'ಮನುಷ್ಯರು ಸ್ವಭಾವತಃ ಒಳ್ಳೆಯವರು. ಆದರೆ ತೀವ್ರ ಆಘಾತಕಾರಿ ಸನ್ನಿವೇಶಗಳಲ್ಲಿ ಸ್ವಭಾವ ಬದಲಾಗುತ್ತದೆ. ವ್ಯಕ್ತಿಗಳನ್ನು ವಸ್ತುಗಳೆಂದು ಭಾವಿಸದೆ ಮನುಷ್ಯರೆಂದು ಭಾವಿಸಬೇಕು. 'ಪೂರ್ಣ ಕ್ರಿಯಾಶೀಲ' ವ್ಯಕ್ತಿಯೇ ಆರೋಗ್ಯವಂತ ವ್ಯಕ್ತಿ' ಎಂದು ಪ್ರತಿಪಾದಿಸುತ್ತಾನೆ. ಅವನ ಪ್ರಕಾರ ಪೂರ್ಣ ಕ್ರಿಯಾಶೀಲ ವ್ಯಕ್ತಿಯ ಲಕ್ಷಣಗಳು ಈ ಕೆಳಗಿನಂತಿವೆ.

ವ್ಯಕ್ತಿ ತನ್ನ ಭಾವನೆ, ವಿಚಾರಗಳು, ಸಂಸಾರದ ಅನುಭವಗಳ ಬಗ್ಗೆ ಮುಕ್ತನಾಗಿರಬೇಕು.

ವ್ಯಕ್ತಿ ಈ ಕ್ಷಣದಲ್ಲಿ ಅನುಕ್ಷಣದಲ್ಲಿ ಬದುಕಬೇಕು. ನಾವು ಭೂತದಲ್ಲೋ, ಭವಿಷ್ಯತ್ತಿನಲ್ಲೋ ಬದುಕುವವರಾಗಬಾರದು. ಈ ಗಳಿಗೆಯ ಬದುಕು ನಮಗೆ ಪರಮ ಪವಿತ್ರವಾಗಬೇಕು.

ನಮ್ಮನ್ನು ನಾವು ನಿಜಕ್ಕೂ ನಂಬಬೇಕು. ಅಂದರೆ ನಮ್ಮ ಆತ್ಮಸಾಕ್ಷಿ, ಒಳಮನಸ್ಸಿನ ನಿರ್ದೇಶನಗಳಿಗೆ ತಕ್ಕಂತೆ ಬದುಕಬೇಕು.

ವ್ಯಕ್ತಿ ತನ್ನ ಮುಂದಿರುವ ನಿರ್ಬಂಧಿತ ಸ್ವಾತಂತ್ರ್ಯವನ್ನು ಅನುಭವಿಸಬೇಕು. ಈ ಸ್ವಾತಂತ್ರ್ಯವನ್ನು ಅನುಭವಿಸುತ್ತಾ ತನ್ನ ಆಯ್ಕೆಯನ್ನು ತಾನೇ ಮಾಡಬೇಕು. ಮತ್ತು ತನ್ನ ಆಯ್ಕೆಗಳಿಗೆ ತಾನೇ ಜವಾಬ್ದಾರನಾಗಬೇಕು.

ನಾವು ಮುಕ್ತರೂ ಸ್ವತಂತ್ರರೂ ಆದಾಗ ವಿವಿಧ ರಂಗಗಳಲ್ಲಿ ಸೃಜನಶೀಲವಾಗಿ ತೊಡಗಲು, ಸೃಷ್ಟಿಸಲು ಸಾಧ್ಯ. ಅಂತಹ ಸೃಜನಾತ್ಮಕತೆಯಿಂದ ಬದುಕನ್ನು ಹೊಸದಾಗಿ ಕಂಡು ಸಂಭ್ರಮಿಸಬಹುದು.

ಕಾರ್ಲ್ ರೋಜರ್ಸ್‌ನ ಚಿಕಿತ್ಸಾ ಕ್ಷೇತ್ರದ ಹಾಗೂ ಆ ಕ್ಷೇತ್ರದ ಹೊರಗಿನ ಕೆಲವು ವಿದ್ವಾಂಸರು ಮನುಷ್ಯನ ಸ್ವಭಾವ ಹಾಗೂ ಚಿಕಿತ್ಸೆಯ ಕ್ರಮಗಳ ಬಗ್ಗೆ ರೋಜರ್ಸ್‌ನ ವಿಚಾರಗಳು ತುಂಬಾ ಸರಳೀಕೃತವಾದವು ಎಂದು ಟೀಕಿಸಿದ್ದಾರೆ. ಆದರೆ ಸಲಹಾರ್ಥಿ ಕೇಂದ್ರಿತ ಸಮಾಲೋಚನೆ, ರೋಜರ್ಸ್ ಚಿಕಿತ್ಸಾ ವಿಧಾನ ಇಂದಿಗೂ ಜಗತ್ತಿನ ವಿವಿಧ ಭಾಗಗಳಲ್ಲಿ ರೂಢಿಯಲ್ಲಿರುವುದು ಮನೋವಿಜ್ಞಾನಕ್ಕೆ ಅವನ ಕೊಡುಗೆಗೆ ಸಾಕ್ಷಿಯಾಗಿದೆ.

ಹೀಗೆ ವರ್ತನಾವಾದವನ್ನು ಪೂರ್ಣವಾಗಿ ಒಪ್ಪದ ಮಾನವತಾವಾದ ಮಾನವ ಸ್ವಭಾವದ ಬಗ್ಗೆ ಆಶಾವಾದಿಗಳಾಗಿದ್ದ ಇವರು ಮಾನವ ಸ್ವರೂಪದ ಸಕಾರಾತ್ಮಕ ಗುಣಗಳ ಬಗ್ಗೆ ಸಂಶೋಧನೆಯಿಂದ ಮನಃಶಾಸ್ತ್ರವನ್ನು ಎತ್ತರಕ್ಕೆ ಕೊಂಡೊಯ್ದಿದ್ದಾರೆ.

ಹೀಗೆ ಅನೇಕ ವಿಚಾರಧಾರೆಗಳು, ಸಿದ್ಧಾಂತಗಳು ಒಟ್ಟಾಗಿ ಮನಃಶಾಸ್ತ್ರ ಮನೋವಿಜ್ಞಾನವಾಗಿ ರೂಪುಗೊಳ್ಳಲು ಸಹಾಯಕವಾಯಿತು. ಕಲಿಕೆ, ಗ್ರಹಿಕೆ, ಸ್ಮರಣ, ಅವಧಾನ, ವರ್ತನೆ ಇತ್ಯಾದಿ ಕ್ಷೇತ್ರಗಳಲ್ಲಿ ಸರಳವಾದ ಪ್ರಯೋಗಗಳಿಂದ ತೊಡಗಿ ಸಂಕೀರ್ಣ ಪ್ರಯೋಗಗಳವರೆಗೆ ಸಾಗಿಬಂದು ಮನಃಶಾಸ್ತ್ರವು ಒಂದು ಸ್ವತಂತ್ರ ವಿಜ್ಞಾನವಾಗಿ ಬೆಳೆದಿದೆ. ಕಳೆದ ಅನೇಕ ವರ್ಷಗಳಲ್ಲಿ ಮನೋವಿಜ್ಞಾನ ಕ್ಷೇತ್ರದಲ್ಲಾದ ಬದಲಾವಣೆಗಳು ಅಸಾಧಾರಣವಾಗಿವೆ. ಮನೋವಿಜ್ಞಾನದಲ್ಲಿ ಫಲಿತಾಂಶಗಳು ನಿಖರತೆಯ ದೃಷ್ಟಿಯಿಂದ ಕೊಂಚ ಸಂದೇಹಾಸ್ಪದ. ವಿಜ್ಞಾನದಲ್ಲಿ ವಿವಿಧ ಪದಾರ್ಥಗಳ ಗಾತ್ರ, ತೂಕ, ವೇಗ, ದ್ರವ್ಯರಾಶಿ, ಗುಣಲಕ್ಷಣ, ರಾಸಾಯನಿಕ ಬದಲಾವಣೆ ಇತ್ಯಾದಿಗಳನ್ನು ನಿಖರವಾಗಿ ಅಳೆಯಬಹುದು. ಎಷ್ಟೆಷ್ಟು ಬಗೆಯಲ್ಲಿ ಪ್ರಯೋಗ ಮಾಡಿದರೂ ಏಕರೂಪದ ನಿಖರವಾದ ಫಲಿತಾಂಶ ಲಭಿಸುತ್ತದೆ. ಆದರೆ ಮನೋವಿಜ್ಞಾನದಲ್ಲಿ ಜೀವಿಗಳ ವರ್ತನೆಗಳನ್ನು ಪರಿಶೀಲಿಸುವುದರಿಂದಾಗಿ ಎಷ್ಟೋ ಸಲ ಒಂದೇ ಬಗೆಯ ಸನ್ನಿವೇಶ ಸೃಷ್ಟಿ ಕಷ್ಟ ಸಾಧ್ಯ. ಭಾವನೆಗಳ ಏರಿಳಿತಗಳಿಂದ ಕೂಡಿದ ಜೀವಿಗಳ ಮೇಲಣ ಪ್ರಯೋಗಗಳಾದುದರಿಂದ ಏಕರೂಪದ ಫಲಿತಾಂಶ ಸಿಗಲಾರದು. ಮನುಷ್ಯನ ನಡವಳಿಕೆ ಹಾಗೂ ಪ್ರತಿಕ್ರಿಯೆಗಳು ಬೇರೆ ಬೇರೆ ಪರಿಸರಗಳಲ್ಲಿ, ಸನ್ನಿವೇಶಗಳಲ್ಲಿ, ಸಂದರ್ಭಗಳಲ್ಲಿ ಬೇರೆ ಬೇರೆಯಾಗಿರುತ್ತವೆ. ಎಲ್ಲ ಸನ್ನಿವೇಶಗಳಲ್ಲಿ ಮನುಷ್ಯ ಒಂದೇ ಬಗೆಯಾಗಿ ವರ್ತಿಸುತ್ತಾನೆ ಎನ್ನಲಾಗದು. ಒಂದೇ ಸನ್ನಿವೇಶಕ್ಕೆ ಬೇರೆ ಬೇರೆ ಕಾಲಘಟ್ಟಗಳಲ್ಲಿ, ಬೇರೆ ಬೇರೆ ಸಂದರ್ಭ ಹಾಗೂ ಸನ್ನಿವೇಶಗಳಲ್ಲಿ ಪ್ರತಿಕ್ರಿಯೆ ಬೇರೆ ಬೇರೆಯಾಗಬಹುದು.

ಆದ್ದರಿಂದಲೇ ಗಣಿತ, ರಸಾಯನಶಾಸ್ತ್ರ ಅಥವಾ ಭೌತವಿಜ್ಞಾನದಂತೆ ಮನೋವಿಜ್ಞಾನವು ಶುದ್ಧ ವಿಜ್ಞಾನವಾಗಲಾರದು. ಅದು ವಿಶಿಷ್ಟತೆಯಿಂದ ಕೂಡಿದ ವ್ಯಕ್ತಿಗಳನ್ನು ಹಾಗೂ ಸಂದರ್ಭಗಳನ್ನು ಅಧ್ಯಯನ ಮಾಡುವುದರಿಂದ ಇತರ ವಿಜ್ಞಾನಗಳ ರೀತಿಯಲ್ಲಿ ಸಾರ್ವತ್ರಿಕವಾದ ಸಾಧಾರಣೀಕರಣಗಳನ್ನು ಅವಲಂಬಿಸುವಂತಿಲ್ಲ. ಸಾಧಾರಣೀಕರಣಗಳಿಗೆ ಕೈ ಹಾಕದೇ ಸಂದರ್ಭಾನುಸಾರ ಅನುಮತಿಗಳನ್ನು ಇಲ್ಲವೇ ಸಂಭಾವ್ಯತೆಗಳನ್ನು ಸೂಚಿಸಬಹುದಷ್ಟೆ.

ಮನೋವಿಶ್ಲೇಷಣೆ

ಸಿಗ್ಮಂಡ್ ಫ್ರಾಯ್ಡ್ (೧೮೫೬–೧೯೩೯) ೧೯ನೇ ಶತಮಾನದ ಅತ್ಯಂತ ಮೇಧಾವಿ; ಆಧುನಿಕ ಮನೋವಿಜ್ಞಾನದ ಹರಿಕಾರ. ೧೮೫೬ರಲ್ಲಿ ಉಣ್ಣೆ ವ್ಯಾಪಾರಿಯ ಮಗನಾದ ಆಸ್ಟ್ರೀಯಾದ ಮೊರೇವಿಯ ಪಟ್ಟಣದಲ್ಲಿ ಜನಿಸಿದನು. (ಅಂದಿನ ಮೊರೇವಿಯ ಅಥವಾ ಇಂದಿನ ಜೆಕ್ ರಿಪಬ್ಲಿಕ್). ಈತನು ವಕೀಲನಾಗಬೇಕೆಂದು ಬಯಸಿದರೂ, ವೈಯಕ್ತಿಕ ಕಾರಣಗಳಿಗಾಗಿ ವೈದ್ಯನಾದನು. ನಂತರದಲ್ಲಿ ಒಬ್ಬ ನರರೋಗ ತಜ್ಞನಾಗಿ ಕೆಲಸ ಮಾಡುತ್ತಿದ್ದನು. ಆಸ್ಪತ್ರೆಯಲ್ಲಿ ರೋಗಿಗಳ ರೋಗ ಲಕ್ಷಣಗಳು ಕೆಲವೊಮ್ಮೆ ದೈಹಿಕವಾದ ಕಾರಣಗಳು ಸಿಗದೇ ಹೋದಾಗ ಅವನು ಮನಸ್ಸಿನ ಕಡೆಗೆ ಗಮನ ಹರಿಸಿದನು. ಇದೇ ಕಾರಣದಿಂದ ಮನಸ್ಸಿನ ಮೂಲೆ ಮೂಲೆಗಳನ್ನು ಇಣುಕಿ ನೋಡುತ್ತಾ, ಅಲ್ಲಿ ಆಗುವ ಪ್ರಕ್ರಿಯೆಗಳಿಗೆ ವಿವರಣೆ ನೀಡುತ್ತಾ ಮನಸ್ಸಿನ ಆಯಾಮಗಳನ್ನು ಮೂರ್ತ ರೂಪದಲ್ಲಿ ವಿವರಿಸಿ ವಿಶ್ಲೇಷಣೆಗೈದು, ಮನೋವಿಶ್ಲೇಷಣಾ ಸಿದ್ಧಾಂತ (psychoanalysis)ವನ್ನು ರೂಪಿಸಿದನು. ನಂತರ ಮನೋವಿಶ್ಲೇಷಣೆಯು 'ಮನೋ ಚಿಕಿತ್ಸಾ' ವಿಧಾನವಾಗಿ ರೂಪುಗೊಂಡಿತು.

ಮನುಷ್ಯನ ಮನಸ್ಸು ಅತ್ಯಂತ ನಿಗೂಢವಾದದ್ದು. ಅದು ಆಂತರ್ಯದಲ್ಲಿ ಅತ್ಯಂತ ಸಂಕೀರ್ಣವಾದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಮನಸ್ಸಿನ ಈ ಸೂಕ್ಷ್ಮತೆಯೇ ಮನುಷ್ಯನ ನಡವಳಿಕೆಗಳಿಗೆ ಕಾರಣ. ಈ ನಡವಳಿಕೆಯೇ ಇತರ ನಡವಳಿಕೆಗಳಿಗೆ ಪ್ರೇರಕ ಎಂಬುದನ್ನು ಸಿಗ್ಮಂಡ್ ಫ್ರಾಯ್ಡ್ ಅಧ್ಯಯನ, ರೋಗಿಗಳ ತಪಾಸಣೆ ಹಾಗೂ ಚಿಕಿತ್ಸೆಗಳ ಮೂಲಕ ಕಂಡುಕೊಂಡ. ಬಾಲ್ಯ ಕಾಲದ ಅನುಭವಗಳೇ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುತ್ತವೆ ಎಂದು ಫ್ರಾಯ್ಡ್ ವಾದಿಸಿದ. ಈ ಎಲ್ಲಾ ಅನುಭವಗಳ ಹಿನ್ನೆಲೆಯಲ್ಲಿ ಮನೋ–ದೈಹಿಕ ಸಮಸ್ಯೆಗಳ ಚಿಕಿತ್ಸೆ ಹಾಗೂ ನಿವಾರಣೆಗಾಗಿ ಮನೋ ವಿಶ್ಲೇಷಣಾ ಸಿದ್ಧಾಂತವನ್ನು ರೂಪಿಸಿದ.

೧೮೯೬ರಲ್ಲಿ ಫ್ರಾಯ್ಡ್‌ನ ತಂದೆ ನಿಧನ ಹೊಂದಿದರು. ತಂದೆಯ ಸಾವಿನಿಂದ ಫ್ರಾಯ್ಡ್ ಆಂತರ್ಯದಲ್ಲಿ ಬುಡಮೇಲಾದ ಸ್ಥಿತಿಯನ್ನು ಅನುಭವಿಸಿದ. ತನ್ನ ತಂದೆಯ ಕುರಿತು ಅದುವರೆಗೆ ದಮನಿಸಿಕೊಂಡಿದ್ದ ಅಸೂಯೆ, ಸಿಟ್ಟು, ವ್ಯಥೆ, ಮಹತ್ವಾಕಾಂಕ್ಷೆಯ ಭಾವನೆಗಳೆಲ್ಲಾ ನಾಚಿಕೆ, ನಿರ್ವೀರ್ಯತೆ, ಭಿಡೆಗಳಾಗಿ ಆತನ ಮನಸ್ಸಿಗೆ ಮರಳಿ ಬರುತ್ತಿದ್ದವು. ಆತ ತನ್ನ ಭೂತಕಾಲದೊಂದಿಗೆ ಬಡಿದಾಡುತ್ತಿದ್ದ ಪರಿಣಾಮವಾಗಿ ಸ್ವ–ವಿಶ್ಲೇಷಣೆಗೆ ತೊಡಗಿದ. ಸ್ವ–ವಿಶ್ಲೇಷಣೆಯು ಬಾಲ್ಯ ಕಾಲದ ನೆನಪುಗಳು ಈಡೇರದ ಆಸೆಗಳು ಕನಸಿನಲ್ಲಿ ಕಾಣಿಸಿಕೊಳ್ಳುವುದನ್ನು ಅರಿತು ಆತ ಕನಸುಗಳ

ವಿಶ್ಲೇಷಣೆಯಲ್ಲಿ ತೊಡಗಿದ. ಈ ವಿಶ್ಲೇಷಣೆಯ ಮೂಲಕ ವಯಸ್ಕನ ಸುಪ್ತಪ್ರಜ್ಞೆ ಎಂಬುದು ಆತನಲ್ಲಿ ಹುದುಗಿರುವ ಮಗುವಿನಿಂದ ರೂಪುಗೊಳ್ಳುತ್ತದೆ. ತಾಯಿಯ ಬಗೆಗೆ ಪ್ರೀತಿ, ತಂದೆಯ ಜೊತೆ ಸ್ಪರ್ಧೆ, ಶೀಲಹರಣದ ಭಯ, ವಯಸ್ಕ ಹಂತದಲ್ಲಿ ಈ ಭಾವನೆಗಳ ಪರಿಹಾರದ ಯತ್ನ, ಕನಸಿನಲ್ಲೂ, ಸುಪ್ತಪ್ರಜ್ಞೆಯಲ್ಲೂ ಉಂಟುಮಾಡುವ ಪ್ರಭಾವ ಇವೆಲ್ಲವನ್ನೂ ವಿಶ್ಲೇಷಣೆಯ ಮೂಲಕ ಫ್ರಾಯ್ಡ್ ಕಂಡುಕೊಂಡು ಸ್ವ-ವಿಶ್ಲೇಷಣೆಯ ತಂತ್ರವನ್ನು ರೂಪಿಸಿದ. ಹೀಗೆ ವಿಶ್ಲೇಷಣೆ ಮಾಡುತ್ತಲೇ ಸುಪ್ತಪ್ರಜ್ಞೆಯ ಅನಾವರಣದ ಮನೋ ವಿಶ್ಲೇಷಣೆಯ ವಿಧಾನವನ್ನು ಕಂಡುಹಿಡಿದ ರೋಗಿಯ ಸುಪ್ತಪ್ರಜ್ಞೆಯಲ್ಲಿ ಹುದುಗಿರುವ ಗಮನಿಸಲ್ಪಟ್ಟ ಗ್ರಹಿಕೆಗಳ ವಿಶ್ಲೇಷಣೆಯನ್ನು ಆತ 'ಮನೋ ವಿಶ್ಲೇಷಣೆ' ಎಂದು ಕರೆದ.

ರೋಗಿಗಳೊಂದಿಗಿನ ಅಧ್ಯಯನವು ಫ್ರಾಯ್ಡ್‌ನಿಗೆ ಒಂದು ವಿಷಯವನ್ನು ಖಚಿತಪಡಿಸಿತು. ಸುಪ್ತಪ್ರಜ್ಞೆಯ ವಿಚಾರಗಳು, ಭಾವನೆಗಳು ವ್ಯಕ್ತಿತ್ವ ರೂಪಿಸುವಲ್ಲಿ ಅತ್ಯಂತ ಪ್ರಧಾನ ಪಾತ್ರ ವಹಿಸುತ್ತವೆ. ಸದಾ ಇರುವ ಈ ಶಕ್ತಿಗಳು ರೂಪ ಮರೆಸಿ ಪ್ರಜ್ಞಾಸ್ಥಿತಿಗೆ ಒಂದು ವ್ಯಕ್ತಿ ಮಾಡುವ ಕೆಲಸದ ಮೇಲೆ, ಸಂಬಂಧಗಳ ಮೇಲೆ, ನಂಬಿಕೆಗಳ ಮೇಲೆ ಪ್ರಭಾವ ಬೀರುತ್ತವೆ. ವ್ಯಕ್ತಿಗಳ ಕನಸುಗಳ ಮೂಲಕವು ಸುಪ್ತ ಪ್ರಜ್ಞೆಯ ಕಾರ್ಯ ವೈಖರಿ ವ್ಯಕ್ತವಾಗುತ್ತದೆ. ಸುಪ್ತ ಕಾಮನೆಗಳ ಅಭಿವ್ಯಕ್ತಿಗೆ ಕನಸುಗಳೇ ಸರಿಯಾದ ದಾರಿ ಎಂದು ತಿಳಿದು ಫ್ರಾಯ್ಡ್ ಅವುಗಳ ವಿಶ್ಲೇಷಣೆಯಲ್ಲಿ ತೊಡಗಿದನು. ಇದರ ಪರಿಣಾಮವೇ ೧೯೦೦ರಲ್ಲಿ 'ದ ಇಂಟರ್‌ಪ್ರಿಟೇಶನ್ ಆಫ್ ಡ್ರೀಮ್ಸ್' (The Interpretation of dreams) ಎಂಬ ಮಹತ್ವದ ಕೃತಿಯು ಹೊರಬಂದಿತು. ವ್ಯಕ್ತಿಯ ತೊದಲ್ನುಡಿಗಳು, ಬರವಣಿಗೆಗಳು, ಕೈ ತಪ್ಪುಗಳು ಕೂಡ ಸುಪ್ತ ಪ್ರಜ್ಞೆಯ ಆಂತರ್ಯವನ್ನು ಬಯಲು ಮಾಡುತ್ತವೆ ಎಂಬುದನ್ನು ಪ್ರತಿಪಾದಿಸಿದ.

ಈತನ ಬಹುದೊಡ್ಡ ಕೊಡುಗೆ ಎಂದರೆ ಸುಪ್ತ ಪ್ರಜ್ಞೆಯ ಬಗೆಗಿನ ಚಿಂತನೆಗಳು. ಮನುಷ್ಯನ ಜಾಗೃತ ಸ್ಥಿತಿಯಲ್ಲಿನ ನಡವಳಿಕೆ ಹಾಗೂ ವಿಚಾರಗಳಿಗೆ ಆತನ ಸುಪ್ತಪ್ರಜ್ಞೆಯೆ ಕಾರಣ ಎಂಬುದನ್ನು ಜಗತ್ತಿಗೆ ಮೊದಲ ಬಾರಿಗೆ ತಿಳಿಸಿದ. ಸ್ವಜ್ಞಾನ, ಸ್ವ-ನಿಗ್ರಹ ಸಾಧ್ಯವೆಂಬ ಸಕಾರಾತ್ಮಕ ತತ್ವಾದರ್ಶವನ್ನು ಅದುವರೆಗೂ ಪ್ರತಿಪಾದಿಸುತ್ತಾ ಬಂದಿದ್ದ ಪಾಶ್ಚಾತ್ಯ ಜಗತ್ತಿನ ನಿದ್ದೆಗೆಡಿಸಿದ ಫ್ರಾಯ್ಡ್, ವ್ಯಕ್ತಿಗಳಿಗೆ ಸ್ವತಂತ್ರ ಸಂಕಲ್ಪ ಎಂಬುದಿಲ್ಲ. ಅವರ ಮಾತು, ವರ್ತನೆ, ಆಲೋಚನೆಗಳೆಲ್ಲ ಅವರ ಸುಪ್ತಪ್ರಜ್ಞೆಯಿಂದ ಹೊರಹೊಮ್ಮುತ್ತವೆ. ಎಷ್ಟೋ ಸಲ ವ್ಯಕ್ತಿಗಳಿಗೆ ತಮ್ಮನ್ನು ತಾವೇ ಗ್ರಹಿಸುವುದು ಕಷ್ಟಸಾಧ್ಯ ಎಂಬ ಕ್ರಾಂತಿಕಾರಕ ವಿವಾದಾಸ್ಪದ ವಿಚಾರವನ್ನು ಫ್ರಾಯ್ಡ್ ಪ್ರತಿಪಾದಿಸಿದ.

ಈತ ರೂಪಿಸಿದ ಮನೋ ವಿಶ್ಲೇಷಣಾ ಸಿದ್ಧಾಂತವು (psycho-Analysis) ಮೊದಲು ಮನಸ್ಸನ್ನು ಮೂರು ಪದರಗಳಾಗಿ ವಿಂಗಡಿಸಿ, ಅವುಗಳ ಕ್ರಿಯೆಗಳನ್ನು ಕುರಿತು ವಿಶ್ಲೇಷಿಸಿದ. ತನ್ನ ಅನುಭವದಲ್ಲಿ ಕಂಡು ಕೇಳಿದ ಸಂಗತಿಗಳಿಂದಾಗಿ ಕಾಲಕಾಲಕ್ಕೆ ತನ್ನ ಅಭಿಪ್ರಾಯಗಳನ್ನು ಬದಲಾವಣೆ ಮಾಡುತ್ತಿದ್ದನು. ಇದೇ ಕಾರಣದಿಂದಾಗಿ ತನ್ನ ರೋಗಿಗಳ ವಿಶ್ಲೇಷಣಾ ಸಂದರ್ಭದಲ್ಲಿ

ಬಂದ ಮಾಹಿತಿಗಳನ್ನಾಧರಿಸಿ ಮೊದಲಿನ ಸ್ವಾಭಾವಿಕ ಸಿದ್ಧಾಂತವನ್ನು ತೊರೆದು ಮನಸ್ಸಿನ ಎರಡನೇ ರಚನಾ ಸಿದ್ಧಾಂತವನ್ನು ರೂಪಿಸಿದನು.

ಮೊದಲಿನ ಸಿದ್ಧಾಂತದಂತೆ ಮನಸ್ಸನ್ನು (un-concious) ಸುಪ್ತ ಪ್ರಜ್ಞೆ, ಪೂರ್ವ ಜಾಗೃತಾ ಪ್ರಜ್ಞೆ (pre–concious) ಜಾಗೃತ ಪ್ರಜ್ಞೆ (concious) ಎಂದು ಮೂರು ಪದರಗಳಾಗಿ ವಿಂಗಡಿಸಿದನು. ಎರಡನೆಯ ಸಿದ್ಧಾಂತದಲ್ಲಿ ಮನಸ್ಸನ್ನು ಕ್ರಮವಾಗಿ ಈದ್, ಈಗೋ, ಸೂಪರ್ ಈಗೋ (Id, Ego, superego) ಎಂದು ವಿಂಗಡಿಸಿದನು. ಮನುಷ್ಯನ ವರ್ತನೆಗಳೆಲ್ಲವೂ ಈದ್‌ನಿಂದ ಉದ್ಭವಿಸಿದ ಸುಪ್ತ ಚೇತನಗಳು, ಜಾಗೃತಾವಸ್ಥೆಗೆ ಪ್ರವೇಶಿಸಿದ ವಿಷಯಗಳೇ ಹೊರತು ಬೇರೆ ಇಲ್ಲ ಎಂದು ಅಭಿಪ್ರಾಯ ಪಟ್ಟನು. ಫ್ರಾಯ್ಡ್‌ನ ಮನೋವಿಶ್ಲೇಷಣಾ ಸಿದ್ಧಾಂತದಲ್ಲಿ ಮುಖ್ಯವಾದ ಮೂರು ಅಂಶಗಳನ್ನು ಗುರುತಿಸಬಹುದು. ಹುಟ್ಟಾಸೆಗಳು, ಮಾಸಿದ ನೆನಪುಗಳು ಮತ್ತು ಲೈಂಗಿಕ ಚೇತನ. ಫ್ರಾಯ್ಡ್ ಹೇಳುವ ಹಾಗೆ ಹಳೆಯ, ತಡೆಹಿಡಿದ ನೆನಪುಗಳು, ಹುಟ್ಟಾಸೆಗಳು ಮತ್ತು ಲೈಂಗಿಕ ಸಂಘರ್ಷಗಳು, ಜಾಗೃತಾವಸ್ಥೆಗೆ ಬಂದಾಗ ಮಾನಸಿಕ ರೋಗದ ಚಿಹ್ನೆಗಳಾಗಿ ಅಭಿವ್ಯಕ್ತಗೊಳ್ಳುತ್ತವೆ ಎಂದು ಪ್ರತಿಪಾದಿಸಿದನು.

ಕನಸುಗಳ ವಿಶ್ಲೇಷಣೆ

ಇದು ಫ್ರಾಯ್ಡ್‌ನ ಅತ್ಯಂತ ಮಹತ್ವದ ಕೊಡುಗೆ. ೧೮೯೯ರಲ್ಲಿ The interpretation of dreams ಕೃತಿಯನ್ನು ಪ್ರಕಟಿಸಿದ.

ವ್ಯಕ್ತಿಗಳು ಕಾಣುವ ಕನಸನ್ನು ಫ್ರಾಯ್ಡ್ 'ವ್ಯಕ್ತ ವಿಷಯ (manifest content) ಎಂದು ಕರೆದು, ಈ ಕನಸಿನ ಹುಟ್ಟಿಗೆ ಕಾರಣವಾದ ಆಂತರಿಕ (ಸುಪ್ತ ಚೇತನದಲ್ಲಿರುವ) ಅಂಶಗಳನ್ನು ಅವ್ಯಕ್ತ ವಿಷಯ (latent content) ಎಂದು ಕರೆದಿದ್ದಾನೆ.

ಈತನ ಪ್ರಕಾರ ಕನಸುಗಳಿಗೆ ಕಾರಣ ದಮನಗೊಂಡ ಅತೃಪ್ತ ಬಯಕೆಗಳು. ಪ್ರಮುಖವಾಗಿ ಲೈಂಗಿಕ ಬಯಕೆಗಳು. ಈ ಬಯಕೆಗಳು ಅನೈತಿಕವಾಗಿದ್ದು, ನಾಗರಿಕ ಸಮಾಜದಲ್ಲಿ ಪ್ರತ್ಯಕ್ಷವಾಗಿ ಅಭಿವ್ಯಕ್ತಗೊಳ್ಳುವುದಿಲ್ಲ. ಆದರೂ ಅವು ಅಭಿವ್ಯಕ್ತಿಗಾಗಿ ಹಾತೊರೆಯುತ್ತಿರುತ್ತವೆ. ನೇರವಾಗಿ, ಪ್ರಜ್ಞಾತ್ಮಕವಾಗಿ, ಕ್ರಿಯಾತ್ಮಕವಾಗಿ ತೃಪ್ತಿಗೊಳ್ಳುವುದು ಅಸಾಧ್ಯವಾದುದರಿಂದ ಮಾನಸಿಕವಾಗಿ, ನಿದ್ರಾಸ್ಥಿತಿಯಲ್ಲಿ ಸಾಂಕೇತಿಕವಾಗಿ ರೂಪ ಮರೆಸಿಕೊಂಡು ಕನಸಾಗಿ ಹೊರಹೊಮ್ಮುತ್ತವೆ.

ಫ್ರಾಯ್ಡ್‌ನ ಮತ್ತೊಂದು ಕೊಡುಗೆ ಎಂದರೆ ಮನೋವಿಶ್ಲೇಷಣೆಯಲ್ಲಿ ಆತ ರೂಪಿಸಿದ ಮನೋಲೈಂಗಿಕ ಸಿದ್ಧಾಂತ. ಲೈಂಗಿಕತೆ ಕೇವಲ ವಯಸ್ಕರಿಗೆ ಸಂಬಂಧಿಸಿದ್ದು ಎಂಬ ನಂಬಿಕೆಯ ಸಮಾಜದಲ್ಲಿ ಹುಟ್ಟು ಶಿಶುವಿನಲ್ಲೂ ಲೈಂಗಿಕ ಆಸಕ್ತಿ ಮತ್ತು ಆ ಸಂಬಂಧಿತ ಚಟುವಟಿಕೆಗಳನ್ನು ಕಾಣಬಹುದು ಎಂದು ಫ್ರಾಯ್ಡ್ ಹೇಳಿದನು. ಈತನ ಮನೋಲೈಂಗಿಕ ಸಿದ್ಧಾಂತವು ಸಾಕಷ್ಟು ವಿರೋಧಗಳನ್ನು ಎದುರಿಸಿತು. ಆದರೆ ಈತನ ಮನೋಲೈಂಗಿಕ ಸಿದ್ಧಾಂತಗಳನ್ನು ಪರಿಶೀಲಿಸುವಾಗ 'ಲೈಂಗಿಕ' ಎಂಬುದನ್ನು ವಿಶಾಲಾರ್ಥದಲ್ಲಿ ಬಳಸಿರುವುದು ಕಂಡುಬರುತ್ತದೆ. ಈತನ ಪ್ರಕಾರ

ಯಾವ ಯಾವ ಪ್ರಚೋದನೆಗಳು ಸುಖಾನುಭವವನ್ನು ಉಂಟು ಮಾಡುವವೋ ಅವೆಲ್ಲವೂ ಲೈಂಗಿಕವೇ. ಆದ್ದರಿಂದಲೇ ಫ್ರಾಯ್ಡ್ 'ಲೈಂಗಿಕ' (sexual) ಪದಕ್ಕೆ ಬದಲು 'ಮನೋಲೈಂಗಿಕ' (psycho sexual) ಎಂಬ ಪದವನ್ನು ಬಳಸಿದ್ದಾನೆ. ಹಾಗೆಯೇ ಲೈಂಗಿಕ ಅನುಭವಗಳು ಮೇಲಿನ ಅರ್ಥದಲ್ಲಿ ಶೈಶವದಲ್ಲೇ ಜರುಗುತ್ತವೆ ಎಂಬುದನ್ನು ಫ್ರಾಯ್ಡ್ ಶೈಶವಾತ್ಮಕ ಲೈಂಗಿಕತೆ (Infantile sexuality) ಎನ್ನುತ್ತಾನೆ.

ಲೈಂಗಿಕತೆ ವ್ಯಕ್ತಿಯಲ್ಲಿ ವಿವಿಧ ಹಂತಗಳಲ್ಲಿ ಬೆಳೆಯುತ್ತದೆ ಎಂಬುದು ಮತ್ತು ಅದರ ವಿವಿಧ ಹಂತಗಳನ್ನು ಫ್ರಾಯ್ಡ್ ಮನೋಲೈಂಗಿಕ ಅವಸ್ಥೆ (psycho-sexual stages) ಎಂದು ಕರೆದಿದ್ದಾನೆ. ಒಂದೊಂದು ಅವಸ್ಥೆಯಲ್ಲಿಯೂ ಲೈಂಗಿಕ ಶಕ್ತಿ (Libido–ಕಾಮ) ಒಂದೊಂದು ನಿರ್ದಿಷ್ಟ ವಲಯದಲ್ಲಿ ಕೇಂದ್ರೀಕರಿಸಲ್ಪಟ್ಟಿರುತ್ತದೆ. ಅದರ ಪ್ರಚೋದನೆ ಆದಾಗ ವ್ಯಕ್ತಿಗೆ ಅದರ ಸುಖಾನುಭವ ಆಗುತ್ತದೆ.

ಮೊದಲಹಂತ: (Oral-stage) ಮೌಖಿಕಾವಸ್ಥೆ

ಒಂದು ಮತ್ತು ಎರಡನೇ ವರ್ಷಗಳಲ್ಲಿ ಮಗು ಬಾಯಿಯ ಮೂಲಕ ಲೈಂಗಿಕ ತೃಪ್ತಿ ಪಡೆಯುತ್ತದೆ. ಎದೆ ಚೀಪುವುದು, ಬೆರಳು ಚೀಪುವುದು, ಏನಾದರೂ ಕಡಿಯುವುದು ಮುಂತಾದ ಕ್ರಿಯೆಗಳಿಂದ ಮಗು ಪಡೆಯುವ ಅನುಭವ ಮೂಲತಃ ಲೈಂಗಿಕವೇ ಎನ್ನುವುದು ಫ್ರಾಯ್ಡ್‌ನ ಸೂಕ್ಷ್ಮವಾದ ಅಭಿಮತ.

ಎರಡನೆಯ ಹಂತ: ಗುದಾವಸ್ಥೆ (Anal - stage)

ಮಗು (ಬಾಲಕ, ಬಾಲಕಿ) ಮಲಮೂತ್ರ ವಿಸರ್ಜನೆಯ ಮೂಲಕ ಲೈಂಗಿಕ ತೃಪ್ತಿ ಕಂಡುಕೊಳ್ಳುತ್ತದೆ. ಮಲ ಮೂತ್ರ ಮಾಡಿಕೊಂಡು ಅದರಲ್ಲಿ ಕೈ ಅದ್ದಿ, ತಟ್ಟಿ ಸಂತೋಷಪಡುತ್ತದೆ. ಹೀಗೆ ಆದಾಗ ವಿಪರೀತ ಶಿಕ್ಷೆ, ಭಯ ಉಂಟುಮಾಡಿದರೆ ಮಗು ತನ್ನ ಸಹಜ ಭಾವನೆಗಳನ್ನು ದಮನಿಸಿಕೊಳ್ಳುತ್ತದೆ. ಮುಂದೆ ಕೊಳೆ, ಕಸ, ಗಲೀಜಿನ ಬಗ್ಗೆ ಕೀಳು ಪ್ರವೃತ್ತಿಯನ್ನು ಬೆಳೆಸಿಕೊಂಡು ಮಾನಸಿಕ ಆರೋಗ್ಯವನ್ನು ಹಾಳುಮಾಡಿಕೊಳ್ಳಲೂಬಹುದು.

ಮೂರನೆಯ ಹಂತ: ಶಿಶ್ನ ಹಂತ (Phallic stage)

ಇದು ಸುಮಾರು ನಾಲ್ಕರಿಂದ ಆರು ವರ್ಷದೊಳಗೆ ಜರಗುತ್ತದೆ. ಈ ಕಾಲದಲ್ಲಿ ಜನನೇಂದ್ರಿಯಗಳ ಸ್ಪರ್ಶ ಮತ್ತು ಪ್ರಚೋದನೆ ಮಕ್ಕಳಿಗೆ ಸುಖಾನುಭವವನ್ನು ಉಂಟುಮಾಡುತ್ತವೆ.

ಸಾಮಾನ್ಯವಾಗಿ ಈ ಹಂತದಲ್ಲಿ ಪ್ರತಿಯೊಂದು ಮಗುವೂ ಒಂದು ವಿಶಿಷ್ಟವಾದ ಭಾವಸಂಕೀರ್ಣವನ್ನು ಅನುಭವಿಸುತ್ತದೆ. ಈ ಭಾವ ಸಂಕೀರ್ಣವೇ ಈಡಿಪಸ್ ಕಾಂಪ್ಲೆಕ್ಸ್. ಅಂದರೆ ಪ್ರತಿಯೊಂದು ಮಗುವು ನಾಲ್ಕರಿಂದ ಆರು ವರ್ಷ ವಯಸ್ಸಿನಲ್ಲಿ ತನ್ನ ಮಾತಾ ಪಿತರೊಡನೆ ಒಂದು ನಿರ್ದಿಷ್ಟ ಮನೋಭಾವವನ್ನು ಹೊಂದಿರುತ್ತದೆ. ಗಂಡು ಮಕ್ಕಳು ಈ ಹಂತದಲ್ಲಿ ತಾಯಿಯನ್ನು ಅಪಾರವಾಗಿ ಪ್ರೀತಿಸುತ್ತಾ, ಅಷ್ಟೇ ತೀವ್ರವಾಗಿ ತಂದೆಯನ್ನು ಪ್ರತಿಸ್ಪರ್ಧಿ

ಎಂದು ತಿಳಿದು ದ್ವೇಷಿಸುತ್ತಾರೆ. ಇದನ್ನು ಫ್ರಾಯ್ಡ್ ಈಡಿಪಸ್ ಕಾಂಪ್ಲೆಕ್ಸ್ ಎಂದು ಕರೆದಿದ್ದಾನೆ. ಹಾಗೆ ಹೆಣ್ಣು ಮಗು ತನ್ನ ತಂದೆಯನ್ನು ಅತಿಯಾಗಿ ಪ್ರೀತಿಸುತ್ತಾ ತಂದೆಯ ಪ್ರೀತಿಯನ್ನು ತಾಯಿ ತಮ್ಮ ಜೊತೆ ಹಂಚಿಕೊಳ್ಳುವುದನ್ನು ದ್ವೇಷಿಸುತ್ತದೆ. ಇದನ್ನು 'ಇಲೆಕ್ಟ್ರಾ ಕಾಂಪ್ಲೆಕ್ಸ್' ಎಂದು ಕರೆದಿದ್ದಾನೆ. ಆದರೆ ಮುಂದೆ ಈ ಕಾಮನೆಯನ್ನು ದಮನಿಸಿ ಮಕ್ಕಳು ಬೆಳೆಯುತ್ತವೆ.

ಜನನಾಂಗ ಹಂತ: ಇದು ಹದಿಹರೆಯದಿಂದ ಮೊದಲುಗೊಂಡು ಕುಟುಂಬದೊಂದಿಗೆ, ಹೊರಗಿರುವ ಜನರ ಜೊತೆ, ಸಾಮಾನ್ಯ ಮನುಷ್ಯರು ಸಮಾಜದ ರೀತಿನೀತಿಗಳಿಗೆ ಅನುಗುಣವಾಗಿ ಲೈಂಗಿಕತೆಯನ್ನು ರೂಢಿಸಿಕೊಳ್ಳುತ್ತಾರೆ.

ಲೈಂಗಿಕತೆಗೆ ಸಂಬಂಧಿಸಿದ ಸಿದ್ಧಾಂತಗಳನ್ನು ಸಿಗ್ಮಂಡ್ ಫ್ರಾಯ್ಡ್ ಸಂಪೂರ್ಣ ಬುಡಮೇಲು ಮಾಡಿದ. ಗಂಡು ಹೆಣ್ಣುಗಳ ನಡುವಿನ ಪರಸ್ಪರ ಆಕರ್ಷಣೆ, ಸ್ಪರ್ಶ, ಸುಖ, ಚುಂಬನ, ಸಂಭೋಗ ಇಡೀ ಲೈಂಗಿಕತೆ ಮತ್ತು ಇದು ಹದಿಹರೆಯದ ಕಾಲದಲ್ಲಿ ಕಾಣಿಸಿಕೊಂಡು ವಯಸ್ಕ ಹಂತದಲ್ಲಿ ಮುಂದುವರಿದು ಸಂತಾನೋತ್ಪತ್ತಿಗೆ ಹಾದಿ ಮಾಡಿಕೊಡುತ್ತದೆ ಎಂದು ನಂಬಲಾಗಿತ್ತು. ಆದರೆ ಮನೋವಿಶ್ಲೇಷಣೆಯ ಮೂಲಕ ಲೈಂಗಿಕತೆಯ ಬಗ್ಗೆ ಫ್ರಾಯ್ಡ್ ಕಂಡುಕೊಂಡ ಸಂಗತಿಗಳು ಈ ಕೆಳಗಿನಂತಿವೆ.

ವ್ಯಕ್ತಿಯ ಲೈಂಗಿಕ ಜೀವನವು ಪಕ್ವತೆ ಅಥವಾ ಹರೆಯದ ಹಂತದಲ್ಲೇ ಆರಂಭವಾಗುವುದಿಲ್ಲ. ಮಗು ಜನ್ಮ ತಳೆದ ಬಳಿಕ ಸಾಮಾನ್ಯ ನೆಲೆಯಲ್ಲೂ ಪ್ರಕಟಗೊಳ್ಳಬಹುದು.

ಲೈಂಗಿಕ ಹಾಗೂ ಜನನಾಂಗಿಕ ಎಂಬ ವ್ಯತ್ಯಾಸವನ್ನು ಪರಿಗಣಿಸುವುದು ಸೂಕ್ತ. ಲೈಂಗಿಕತೆ ಎಂಬ ಪರಿಕಲ್ಪನೆ ವ್ಯಾಪಕವಾಗಿದ್ದು ಬದುಕಿನ ಹಲವು ಕ್ರಿಯೆಗಳನ್ನು ಒಳಗೊಂಡಿದೆ. ಅದಕ್ಕೂ ಜನನಾಂಗಕ್ಕೂ ವಿಶೇಷ ಸಂಬಂಧವಿಲ್ಲ.

ಲೈಂಗಿಕ ಜೀವನವೆಂದರೆ ಸಂಭೋಗ ಮತ್ತು ಸಂತಾನೋತ್ಪತ್ತಿ ಮಾತ್ರವಲ್ಲ. ಆರಂಭಿಕ ಬಾಲ್ಯ ಕಾಲದಲ್ಲಿ ಕಂಡುಬರುವ ದೈಹಿಕ ಚಟುವಟಿಕೆಗಳು ಲೈಂಗಿಕ ಸ್ವರೂಪದ್ದಾಗಿದ್ದು, ಅದಕ್ಕೂ ಮುಂದೆ ಬರುವ ವಯಸ್ಕ ಲೈಂಗಿಕ ಬದುಕಿನ ಮಾನಸಿಕ ವ್ಯಾಪಾರಗಳಿಗೂ ಸಂಬಂಧವಿದೆ. ಆರಂಭ ಬಾಲ್ಯ ಕಾಲದಲ್ಲಿ ಕಂಡುಬರುವ ಈ ವಿದ್ಯಮಾನಗಳು ಕ್ರಮ ಪ್ರಕಾರವಾಗಿ ವಿಕಸಿಸುತ್ತಾ ಐದನೆಯ ವಯಸ್ಸಿನಲ್ಲಿ ತುರಿಯಾವಸ್ಥೆ ತಲುಪಿ ಬಳಿಕ ಶಾಂತವಾಗುತ್ತದೆ. ಹದಿಹರೆಯ ಹರೆಯದಲ್ಲಿ ಮತ್ತೆ ವ್ಯಕ್ತಿಯ ಲೈಂಗಿಕ ಬದುಕು ಮುಂದುವರೆಯುತ್ತದೆ.

'ಮನೋವಿಶ್ಲೇಷಣೆ' ಎಂಬುದು ಎಂದಿಗೂ ಮುಗಿಯದ ಅನಂತ ಪ್ರಕ್ರಿಯೆ ಎಂದು ಭಾವಿಸಿದ್ದ ಸಿಗ್ಮಂಡ್ ಫ್ರಾಯ್ಡ್‌ನ ಈ ಕೆಳಗಿನ ಮಾತುಗಳು ಮಾರ್ಮಿಕವಾಗಿವೆ. "ಜನ ಸದಾ ನನ್ನತ್ತ ಕಲ್ಲು ತೂರುತ್ತಾರೆ. ಏಕೆಂದರೆ ನಾನು ಮನುಕುಲದ ನಿದ್ದೆ ಕೆಡಿಸಿದ್ದೇನೆ."

ಫ್ರಾಯ್ಡ್‌ನ ಸಿದ್ಧಾಂತಗಳು ಮನಃಶಾಸ್ತ್ರ, ಸಾಹಿತ್ಯ, ವಿಮರ್ಶೆ, ಕಲೆ ಮೊದಲಾದ ವಿವಿಧ ಪ್ರಕಾರಗಳನ್ನು ಗಾಢವಾಗಿ ಪ್ರಭಾವಿಸಿವೆ. ಫ್ರೆಂಚ್ ಜ್ಞಾನಿ ಜ್ಯಾಕ್ಸ್ ಡೆರಿಡಾ, ಜೀನ್ ಫ್ರಾಂಕೊ, ಲಿಟಾರ್ಡ್, ಜ್ಯಾಕ್ಸ್ ಲಾಕನ್ ಮೊದಲಾದವರ ಮೇಲೆ ಆತನ ಪ್ರಭಾವವಿದೆ.

ಹೀಗೆ ಸಿಗ್ಮಂಡ್ ಫ್ರಾಯ್ಡ್ ಒಬ್ಬ ಮನೋವಿಜ್ಞಾನಿಯಾಗಿ, ಸಾಹಿತಿಯಾಗಿ, ನರರೋಗ ತಜ್ಞನಾಗಿ ಮತ್ತು ಮನೋವೈದ್ಯನಾಗಿ ಮನಸ್ಸಿನ ಮೂಲೆ ಮೂಲೆಗಳನ್ನು ಹೊಕ್ಕು ಅಲ್ಲಿರುವ ಕಣಕಣಗಳನ್ನು ಹೊರತೆಗೆದು ಜಗತ್ತಿಗೆ ಸಾರಿದನು. ಅವನ ಸಿದ್ಧಾಂತಗಳು ವಿವಾದಕ್ಕೆ ಒಳಗಾದರೂ ಮನೋ ವೈದ್ಯಕೀಯದಲ್ಲಿ ಇಂದಿಗೂ ಪ್ರಸ್ತುತವಾಗಿವೆ ಎಂಬುದು ವಾಸ್ತವ.

ಕಾರ್ಲ್‌ಗೆಸ್ಟೋವ್ ಯೂಂಗ್

ಮನಸ್ಸಿನ ಬಗ್ಗೆ ವೈಜ್ಞಾನಿಕ ಅಧ್ಯಯನಗಳು ೧೯ನೇ ಶತಮಾನದ ಅಂತಿಮ ದಶಕದಲ್ಲಿ ಪ್ರಾರಂಭವಾದವು. ಇದಕ್ಕೆ ಕಾರಣೀಭೂತನಾದವನು ಸಿಗ್ಮಂಡ್ ಫ್ರಾಯ್ಡ್. ಅಮೂರ್ತವಾದ ಮನಸ್ಸಿಗೆ ಒಂದು ರಾಚನಿಕ ಸ್ವರೂಪವನ್ನು ಕೊಟ್ಟಾತ. ಇಂತಹ ಫ್ರಾಯ್ಡ್ ತನ್ನ ಉತ್ತರಾಧಿಕಾರಿ ಎಂದು ಘೋಷಿಸಿದ್ದು ಕಾರ್ಲ್‌ಗೆಸ್ಟೋವ್ ಯೂಂಗ್‌ನನ್ನು. ತನ್ನ ಪದಸಂಯೋಜನಾ ಪರೀಕ್ಷೆಯಿಂದ ಮನೋವಿಶ್ಲೇಷಣೆ ಮಾಡುವ ವಿಧಾನ ಹಾಗೂ ಪ್ರಖರ ಬುದ್ಧಿಮತ್ತೆಯಿಂದ ಗಮನ ಸೆಳೆದ ಯೂಂಗ್ ಹಾಗೂ ಫ್ರಾಯ್ಡ್ ಒಟ್ಟಿಗೆ ಕಾರ್ಯ ನಿರ್ವಹಿಸಿದ ಕಾಲವು ಮನೋವಿಜ್ಞಾನಕ್ಕೆ ಕೊಡುಗೆಗಳ ಮಹಾಪೂರವನ್ನೇ ಒದಗಿಸಿತು. ಮನೋಲೈಂಗಿಕ ಸಿದ್ಧಾಂತವನ್ನು ಎಲ್ಲಾ ಸ್ಥಿತಿಗತಿಗಳಿಗೂ ಅನ್ವಯಿಸುತ್ತಿದ್ದ ರೀತಿ, ಆತನ ಜಿಗಟುತನ, ಇತರರ ಅಭಿಪ್ರಾಯವನ್ನು ಅಪಹಾಸ್ಯ ಮಾಡುವ ರೀತಿ ಯೂಂಗ್‌ನಲ್ಲಿ ಬೇರೆ ರೀತಿಯ ಅನ್ವೇಷಣೆಗಳಿಗೆ ತನ್ನನ್ನು ತಾನು ತೊಡಗಿಸಿಕೊಳ್ಳಲು ಕಾರಣವಾಯಿತು.

ಫ್ರಾಯ್ಡ್‌ಗಿಂತ ವಿಶಾಲವಾದ, ಆಳವಾದ ಹರಹಿನಲ್ಲಿ ಮನಸ್ಸನ್ನು ವಿಶ್ಲೇಷಿಸಿದಾತ ಯೂಂಗ್. ಅದಲ್ಲದೆ ವಿವಿಧ ಧರ್ಮಗಳು, ಪುರಾಣಗಳು, ಜಾನಪದ ಕತೆಗಳು, ಸಾಹಿತ್ಯ, ಚಿತ್ರಕಲೆ, ಆಚಾರಗಳು, ಮೂಢ ನಂಬಿಕೆಗಳು, ಕನಸುಗಳು, ರಸ ವಿದ್ಯೆ, ಕುಂಡಲಿನೀ, ಯೋಗ, ಅತೀಂದ್ರಿಯ ಅನುಭವಗಳು ಹೀಗೆ ವೈವಿಧ್ಯಮಯ ಆಸಕ್ತಿಯನ್ನು ಹೊಂದಿದ್ದರಿಂದ ಈ ಎಲ್ಲವನ್ನು ಮನೋವಿಜ್ಞಾನ ಸಿದ್ಧಾಂತಗಳಿಗೆ ಸಮರ್ಥವಾಗಿ ಬಳಸಿಕೊಳ್ಳುವಲ್ಲಿ ಈತ ಸಫಲನಾದ.

ಯೂಂಗ್‌ನ ಕೊಡುಗೆಗಳು

೧. **ಸಮಷ್ಠಿ ಸುಪ್ತ ಪ್ರಜ್ಞೆ: (collective concious)**

ಇದು ಯೂಂಗ್‌ನನ್ನು ಬೇರೆಲ್ಲ ಮನೋವಿಜ್ಞಾನಿಗಳಿಂದ ಭಿನ್ನವಾಗಿ ವಿಶಿಷ್ಟವಾಗಿ ನಿಲ್ಲಿಸುತ್ತದೆ. ಈತನ ಪ್ರಕಾರ ಮನಸ್ಸಿನ ರಚನೆಯಲ್ಲಿ ಮೂರು ಹಂತಗಳಿವೆ.

ಜಾಗೃತ ಪ್ರಜ್ಞೆ

ವೈಯುಕ್ತಿಕ ಸುಪ್ತ ಪ್ರಜ್ಞೆ

ಸಮಷ್ಠಿ ಸುಪ್ತ ಪ್ರಜ್ಞೆ ಅಥವಾ ಸಾಮೂಹಿಕ ಸುಪ್ತ ಪ್ರಜ್ಞೆ

ವಿಶ್ವದ ಅನೇಕ ಕಲಾವಿದರಲ್ಲಿ, ಸಾಹಿತಿಗಳಲ್ಲಿ ಕಂಡುಬರುವ ಸೃಜನಾತ್ಮಕ ಅನುಭವಗಳ ಸಾಮ್ಯತೆ: ಎಲ್ಲಾ ಧರ್ಮಗಳಲ್ಲಿ ಕಂಡುಬರುವ ಪಾರಮಾರ್ಥಿಕ ಅನುಭವಗಳ ಸಾಮ್ಯತೆಗಳನ್ನು

ಯೂಂಗ್ ಸಮಷ್ಠಿ ಸುಪ್ತ ಪ್ರಜ್ಞೆ ಅಥವಾ ಸಾಮೂಹಿಕ ಸುಪ್ತಪ್ರಜ್ಞೆಯ ಮೂಲಕ ವಿವರಿಸುತ್ತಾನೆ. ಯೂಂಗ್‌ನ ಈ ಪರಿಕಲ್ಪನೆಯು ಸಾಹಿತಿಗಳು, ಕಲಾವಿದರು, ಧಾರ್ಮಿಕ ಕ್ಷೇತ್ರದಲ್ಲಿರುವವರ ಮೇಲೆ ತುಂಬಾ ಪ್ರಭಾವ ಬೀರಿದೆ.

೨. Archetypes

ಕನಸುಗಳ ವಿಶ್ಲೇಷಣೆಯಲ್ಲಿ ತನ್ನ ಸಿದ್ಧಾಂತವನ್ನು ಕೇವಲ ಸಂಕೇತಗಳ ಮೂಲಕ ಯೂಂಗ್ ಪ್ರತಿಪಾದಿಸಿದ್ದಾನೆ. ಅವುಗಳೆಂದರೆ;

ಪರ್ಸೊನಾ (ವ್ಯಕ್ತಿಗಳು ನಿತ್ಯ ಜೀವನದಲ್ಲಿ ಹಾಕಿಕೊಳ್ಳುವ ಮುಖವಾಡಗಳು)

ನೆರಳು (ನಾವು ಹೊರಜಗತ್ತಿಗೆ ಕಾಣದಂತೆ ಮುಚ್ಚಿಟ್ಟಿರುವ ನಮ್ಮ ಕೆಟ್ಟ ಗುಣಗಳು (The shadow)

ಅನಿಮಾ – ಅನಿಮಸ್ (ವ್ಯಕ್ತಿಗಳೆಲ್ಲರಲ್ಲಿರುವ ಸ್ತ್ರೀ–ಪುರುಷ ಗುಣಗಳು)

ದೈವಿಕ ಶಿಶು. (ನಮ್ಮ ಮುಗ್ಧತೆ, ಅಸಹಾಯಕತೆ, ಮಹತ್ವಾಕಾಂಕ್ಷೆ.(The Devine child)

ಜಾಣ – ವೃದ್ಧ/ವೃದ್ಧೆ (ಮಾರ್ಗದರ್ಶಕರು)

ಮಹಾತಾಯಿ (The Great Mother)

ತಂತ್ರಗಾರ (The Trickster)

ಹೊಂದಾಣಿಕೆ, ಏಕಕಾಲಿಕತೆ (ಸಿಂಕ್ರೋಸಿಟಿ ತತ್ವ) (Synchronicity)

ವ್ಯಕ್ತಿತ್ವದ ಬಗೆಗಿನ ಚರ್ಚೆಯಲ್ಲಿ ಮಾನಸಿಕ ಪ್ರಕ್ರಿಯೆಗಳು ಹೇಗೆ ರೂಪುಗೊಳ್ಳುತ್ತವೆ ಎಂಬುದಕ್ಕೆ ದೃಷ್ಟಿಕೋನ – ಕಾರಣ ಮತ್ತು ಪರಿಣಾಮದ ಪ್ರಕ್ರಿಯೆ. ಒಂದು ಸಂಗತಿ ಇನ್ನೊಂದಕ್ಕೆ, ಇನ್ನೊಂದು ಹೀಗೆ ಮುಂದುವರಿಯುತ್ತಾ ಭೂತ, ವರ್ತಮಾನವನ್ನು ನಿರ್ಧರಿಸುತ್ತದೆ. ಇನ್ನೊಂದು ದೃಷ್ಟಿಕೋನ ನಾವು ಮುಂದುವರಿಯುವುದು, ಮಹತ್ವ ಬೆಳೆಯುವುದು, ಉದ್ದೇಶಗಳು, ಮೌಲ್ಯಗಳು, ಅರ್ಥಗಳು ಇವುಗಳನ್ನು ಹೊಂದಿದ ನಮ್ಮ ಆಲೋಚನೆಗಳಿಂದ ಎಂಬುದು ಫ್ರಾಯ್ಡ್‌ನ ಚಿಂತನೆಯ ಮೊದಲ ದೃಷ್ಟಿಕೋನವನ್ನು ಸಮರ್ಥಿಸುತ್ತದೆ. ಆದರೆ ಇತ್ತೀಚಿನ ಮನೋವಿಜ್ಞಾನಿಗಳು ಎರಡನೆಯದನ್ನು ಪ್ರತಿಪಾದಿಸುತ್ತಾರೆ. ಯೂಂಗ್ ಈ ಎರಡೂ ದೃಷ್ಟಿಕೋನಗಳನ್ನು ವ್ಯಕ್ತಿತ್ವದ ರೂಪುಗೊಳ್ಳುವಿಕೆಯಲ್ಲಿ ಮುಖ್ಯ ಎನ್ನುತ್ತಾನೆ. ಅದಕ್ಕೆ ಪೂರಕವಾಗಿ ಮೂರನೆಯ ಇನ್ನೊಂದು ತತ್ವ ಹೊಂದಾಣಿಕೆಯನ್ನು (synchronicity) ವಿವರಿಸಿದ್ದಾನೆ.

ಹೊಂದಾಣಿಕೆ ಎರಡು ಘಟನೆ ಅಥವಾ ಸಂಗತಿಗಳು ಕಾರಣ ಪರಿಣಾಮಗಳಲ್ಲಿ ಉದ್ದೇಶ–ಮೌಲ್ಯಗಳಲ್ಲಿ ಸಂಬಂಧಿಸಿರದಿದ್ದರೂ ಅರ್ಥಪೂರ್ಣವಾಗಿ ಹೊಂದಿಕೊಳ್ಳುವಂತದ್ದು.

೩. ಯೂಂಗ್ ಮತ್ತು ಆಲ್‌ಕೆಮಿ (Alchemy) – ರಸ ವಿದ್ಯೆ

೧೯೪೪ರಲ್ಲಿ ಯೂಂಗ್ 'ಮನಃಶಾಸ್ತ್ರ ಮತ್ತು ರಸ ವಿದ್ಯೆ' (psychology and alchemy) ಎಂಬ ಪುಸ್ತಕವನ್ನು ಪ್ರಕಟಿಸಿದ. ರಸ ವಿದ್ಯೆಯ ತತ್ವಗಳನ್ನು ಮನೋವಿಶ್ಲೇಷಣೆಯ ಪ್ರಕ್ರಿಯೆಗೆ

ಸಂವಾದಿಯಾಗಿ ಆತ ನಡೆಸಿದ ಅಧ್ಯಯನದ ಸಿದ್ಧಾಂತಗಳಿವು. ವೈಯಕ್ತಿಕ ಮಹೋನ್ನತಿಯ (Individuation) ಪ್ರಕ್ರಿಯೆ 'ಸತು' ಎಂಬ ಲೋಹ ಬಂಗಾರವಾಗುವಂತೆ ಅಶುದ್ಧ ಆತ್ಮ ಪರಿಶುದ್ಧವಾಗುವ ಬಗೆ ಇದು ಎಂದು ಯೂಂಗ್ ಪ್ರತಿಪಾದಿಸಿದ.

ಹಾಗೆಯೇ ರಸ ವಿದ್ಯೆಯ ಮೂಲ ತತ್ವಗಳನ್ನಾಧರಿಸಿ ಯೂಂಗ್ ಪ್ರತಿಪಾದಿಸಿದ "ಮಾನಸಿಕ ರಸ ವಿದ್ಯೆ' ಮನಸ್ಸಿನ ಪರಿಪೂರ್ಣತೆ ಸಾಧಿಸುವಲ್ಲಿ ಸಹಾಯಕವಾಯಿತು ಎನ್ನುವುದಕ್ಕಿಂತ ಅದು ಮನಸ್ಸಿನ ಕುರಿತಾದ ಸಂಶೋಧನೆಗಳನ್ನು ವಿಸ್ತೃತವಾಗಿಸಿತು.

ರಸವಿದ್ಯೆ ಸತ್ಯಗಳು ಇಂದು ಅಸತ್ಯವೆಂದು ವೈಜ್ಞಾನಿಕವಾಗಿ ದೃಢಪಟ್ಟಿದ್ದರೂ ಕಲಿಕೆಯ ದೃಷ್ಟಿಯಿಂದ ವೈಜ್ಞಾನಿಕ ಮಾರ್ಗ ಬೆಳೆದು ಬಂದ ದೃಷ್ಟಿಕೋನದಿಂದ ಯೂಂಗ್ ಮತ್ತು ರಸವಿದ್ಯೆಯ ಬಗೆಗೆ ತಿಳಿದುಕೊಳ್ಳಬೇಕಾಗುತ್ತದೆ.

'ಅಲ್‌ಕೆಮಿ' ಅಥವಾ ರಸ ವಿದ್ಯೆಯ ಸಿದ್ಧಾಂತ ರಾಸಾಯನಿಕ ಶಾಸ್ತ್ರದ್ದು. ಬೇರೆ ಲೋಹಗಳನ್ನು ಕೆಲವು ರಾಸಾಯನಿಕ ಪ್ರಕ್ರಿಯೆಗಳ ಮುಖಾಂತರ ಬಂಗಾರವನ್ನಾಗಿ ಪರಿವರ್ತಿಸುವ ಪ್ರಕ್ರಿಯೆ ಈ ರಸ ವಿದ್ಯೆ. ಪುರಾತನ ಈಜಿಪ್ಟ್, ಗ್ರೀಸ್, ಭಾರತದಲ್ಲಿ ಇದು ಪ್ರಚಲಿತವಾಗಿತ್ತು. ಗ್ರಹಗಳು, ಬಣ್ಣಗಳು, ಲೋಹಗಳು, ಕೆಲವು ಜಾತಿಗಳ ಪ್ರಾಣಿಗಳ ಚಿಹ್ನೆ – ಸಂಕೇತಗಳು, ದೇಹದ ಭಾಗಗಳು, ಇವೆಲ್ಲಕ್ಕೂ ಈ ರಸ ವಿದ್ಯೆಯಲ್ಲಿ ಪ್ರಾಮುಖ್ಯತೆ ಇತ್ತು, ಯೂಂಗ್ ಈ ಎಲ್ಲವನ್ನೂ ಅವಲೋಕಿಸಿ ಇದನ್ನು ಒಂದು ಅಂತರ್ ಸಾಂಸ್ಕೃತಿಕ ಪ್ರಕ್ರಿಯೆಯಾಗಿ ವಿವರಿಸುತ್ತಾನೆ. ರಸ ವಿದ್ಯೆ ಮಾನಸಿಕ ಪ್ರಕ್ರಿಯೆಯಾಗಿ ಪರಿಕಲ್ಪಿಸಲ್ಪಟ್ಟಾಗ,

ವ್ಯಕ್ತಿ ತನ್ನ ದೇಹದಲ್ಲಿ ಏನಾಗುತ್ತಿದೆ ಎಂಬುದನ್ನು ಗುರುತಿಸುತ್ತಾನೆ.

ಮನಸ್ಸಿನಲ್ಲಿ ಸುಪ್ತವಾಗಿ ನಡೆಯುವ ಪ್ರಕ್ರಿಯೆಗಳನ್ನು ತನ್ನ ದೇಹ ಮನಸ್ಸುಗಳ ಬೆಳವಣಿಗೆಗೆ ಉಪಯೋಗಿಸುವ ಸಾಮರ್ಥ್ಯ ಹೊಂದುತ್ತಾನೆ.

ಮಾನಸಿಕ ರಸ ವಿದ್ಯೆಯನ್ನು ಒಂದು ಪುರಾತನ ಮನೋದೈಹಿಕ ಚಿಕಿತ್ಸೆಯಾಗಿ, 'ಗುಣಪಡಿಸುವ ಶಕ್ತಿ'ಯಾಗಿ 'ದೇವರ ಸೇವೆ'ಯಾಗಿ ಪರಿಗಣಿಸಲಾಗುತ್ತದೆ. ಮನೋಚಿಕಿತ್ಸೆ ಅಥವಾ psychotherapy ಮೂಲಭೂತವಾಗಿ ಮನಸ್ಸಿನ ಸೇವೆ. ಅದು ವ್ಯಕ್ತಿಯ ಸುಪ್ತಪ್ರಜ್ಞೆಯೊಂದಿಗೆ ಜೋಡಿಸಿ ವ್ಯಕ್ತಿಗೆ ಪೂರ್ಣತನದ ಅನುಭವ ನೀಡುತ್ತದೆ. ಏಕೆಂದರೆ ಸುಪ್ತಪ್ರಜ್ಞೆಯ ಸಂಘರ್ಷಗಳು ಮನೋದೈಹಿಕ (psychosomatic) ಕಾಯಿಲೆಗೂ ಕಾರಣವಾಗುತ್ತವೆ. ಯೂಂಗ್ ಈ ತತ್ವಗಳನ್ನು ವಿವರಿಸಿ 'ಮಾನಸಿಕ ವೈಯಕ್ತಿಕ ಪ್ರಜ್ಞೆ' (Individuation) ತಲುಪುವ ಪ್ರಕ್ರಿಯೆ ಒಂದು ರಾಸಾಯನಿಕ ಕ್ರಿಯೆಯಂತೆಯೇ ನಿರ್ದಿಷ್ಟವಾದ ಹಂತಗಳಿಂದ ಕೂಡಿದೆ ಎಂಬುದನ್ನು ಪ್ರತಿಪಾದಿಸಿದ.

ಎರಿಕ್‌ಸನ್(೧೯೦೨ – ೧೯೯೪)

ಎರಿಕ್‌ಸನ್ ಇಪ್ಪತ್ತನೆಯ ಶತಮಾನದ ಬಹುಮುಖ್ಯ ಡ್ಯಾನಿಶ್ – ಜರ್ಮನ್ – ಅಮೇರಿಕನ್ ವಿಕಾಸ ಮನೋವಿಜ್ಞಾನಿ. ಖ್ಯಾತ ಮನೋವೈದ್ಯ ಸಿಗ್ಮಂಡ್ ಫ್ರಾಯ್ಡ್‌ನ ಜೊತೆ

ಕೆಲಸ ಮಾಡಿದ ಈತ ಅಸ್ಮಿತೆಯ ಬೆಳವಣಿಗೆ, ಮನೋಚರಿತ್ರೆ, ಮನೋಸಾಮಾಜಿಕ ವಿಕಾಸದ ಕ್ಷೇತ್ರಗಳಿಗೆ ಗಣನೀಯ ಕೊಡುಗೆ ನೀಡಿದ್ದಾನೆ. 'ಅಸ್ಮಿತೆಯ ಬಿಕ್ಕಟ್ಟು' ಎಂಬ ಪರಿಕಲ್ಪನೆ ಹಾಗೂ ಪಾರಿಭಾಷಿಕವನ್ನು ಜಗತ್ತಿಗೆ ನೀಡಿದವನೇ ಎರಿಕ್‌ಸನ್.

ಎರಿಕ್‌ಸನ್ ಮನೋವಿಶ್ಲೇಷಣೆಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯೇ ಮನೋ ಸಾಮಾಜಿಕ ಅಸ್ಮಿತೆಯ ಸಿದ್ಧಾಂತ. ಫ್ರಾಯ್ಡ್ ಮನೋಸಾಮಾಜಿಕ ವಿಕಾಸದ ಐದು ಹಂತಗಳನ್ನು ಪ್ರತಿಪಾದಿಸಿದರೆ ಎರಿಕ್‌ಸನ್ ಎಂಟು ಹಂತಗಳನ್ನು ಪ್ರತಿಪಾದಿಸುತ್ತಾನೆ.

ಹಂತ	ವಯೋಮಾನ	ಸಕಾರಾತ್ಮಕ ಲಕ್ಷಣ	ನಕಾರಾತ್ಮಕ ಲಕ್ಷಣ
೧ ವಿಶ್ವಾಸ v/s ಅವಿಶ್ವಾಸ	೦–೧ ½ ವರ್ಷ	ಪರಿಸರದ ಪ್ರೇರಣೆಯಿಂದ ಭರವಸೆಯ ಭಾವನೆ	ಪರರ ಬಗ್ಗೆ ಅವಿಶ್ವಾಸ, ಭಯ, ಶಂಕೆ.
೨ ಸ್ವಾಯುತ್ತೆ v/s ಅಪಮಾನ	೧ ½–೩ ವರ್ಷ	ಶೋಧಕ್ಕೆ ಒತ್ತು ನೀಡಿದರೆ ಆತ್ಮ ನಿರ್ಭರತೆ	ತನ್ನ ಬಗ್ಗೆ ಗುಮಾನಿ ಸ್ವಾತಂತ್ರ್ಯದ ಕೊರತೆ
೩ ಮುಂದೊತ್ತುವಿಕೆ v/s ಅಪರಾಧಿ ಪ್ರಜ್ಞೆ	೩–೬ ವರ್ಷ	ಕ್ರಿಯೆಗಳನ್ನು ಕೈಗೊಳ್ಳಲು ಅವಕಾಶಗಳ ಶೋಧನೆ	ತನ್ನ ಆಲೋಚನೆ ಹಾಗೂ ಕ್ರಿಯೆಗಳ ಬಗ್ಗೆ ಅಪರಾಧಿ ಪ್ರಜ್ಞೆ
೪ ಪರಿಶ್ರಮ v/s ಕೀಳರಿಮೆ	೬–೧೨ ವರ್ಷ	ಸಾಮರ್ಥ್ಯದ, ವಿಕಾಸದ ಪ್ರಜ್ಞೆ	ಕೀಳರಿಮೆ ಭಾವನೆ, ಹಿಡಿತವಿಲ್ಲದಿರುವಿಕೆ
೫ ಅಸ್ಮಿತೆ v/s ದ್ವಂದ್ವ ಪಾತ್ರ	ಹದಿಹರೆಯ	ಸ್ವದ ವಿಶಿಷ್ಟತೆಯ ಅರಿವು ನಿರ್ವಹಿಸಬೇಕಾದ ಪಾತ್ರದ ಬಗ್ಗೆ ಅರಿವು	ಸೂಕ್ತ ಪಾತ್ರಗಳ ಗುರುತಿಸಲಾಗದ
೬ ಆಪ್ತತೆ v/s ಏಕಾಂತತೆ	ಆರಂಭದ ವಯಸ್ಕ ಸ್ಥಿತಿ	ಪ್ರೇಮ ಕಾಮದ ಸಂಬಂಧ ಆಪ್ತ ಸ್ನೇಹಭಾವ	ಇತರರ ಜೊತೆಗಿನ ಸಂಬಂಧಗಳ ಬಗ್ಗೆ ಭಯ
೭ ಉತ್ಪಾದಕತ್ವ v/s ಸ್ಥಾಗಿತ್ಯ	ಮಧ್ಯವಯಸ್ಕತೆ	ಜೀವನದ ಪ್ರಗತಿಯಲ್ಲಿ ಕೊಡುಗೆ ನೀಡುವ ಪ್ರಜ್ಞೆ	ತನ್ನ ಕ್ರಿಯೆಗಳ ಬಗ್ಗೆ ಕ್ಷುಲ್ಲಕ ಭಾವ
೮ ಅಹಂ ಸಂಘಟನೆ v/s ನಿರಾಶೆ	ಅಪರ ವಯಸ್ಕತೆ	ಜೀವನದ ಸಾಧನೆಗಳ ಬಗ್ಗೆ ಸಂತೃಪ್ತಿ	ಕಳೆದು ಹೋದ ಅವಕಾಶಗಳ ಬಗ್ಗೆ ಕೊರಗುವಿಕೆ

ನವ ಫ್ರಾಯ್ಡ್‌ವಾದಿ ಎರಿಕ್‌ಸನ್ ಮನೋ ವಿಶ್ಲೇಷಣೆಯ ಕ್ಷೇತ್ರಕ್ಕೆ ಗಮನಾರ್ಹ ಕೊಡುಗೆ ನೀಡಿದ್ದಾನೆ. 'ಅಸ್ಮಿತೆ' ಹಾಗೂ 'ಅಸ್ಮಿತೆಯ ಬಿಕ್ಕಟ್ಟು' ಎಂಬ ಎರಡು ಪರಿಭಾಷೆಗಳನ್ನು ಬಳಕೆಗೆ ತಂದನು. ಈತನ ಪ್ರಕಾರ 'ಅಸ್ಮಿತೆ' ಎಂಬುದು ವ್ಯಕ್ತಿಯ ಜನನದಿಂದ ಉದ್ಭವಿಸಿ ಹದಿಹರೆಯದಲ್ಲಿ 'ಬಿಕ್ಕಟ್ಟು' ಎದುರಿಸುತ್ತದೆ. ವ್ಯಕ್ತಿಯ ಭೂತ ಹಾಗೂ ಭವಿಷ್ಯಗಳ ನಡುವೆ ಅಸ್ಮಿತೆಯು ಸಂಘರ್ಷವನ್ನು

ಏರ್ಪಡಿಸುತ್ತದೆ. ಹದಿಹರೆಯ 'ಅಸ್ಮಿತೆಯ ಬಿಕ್ಕಟ್ಟು' ಪರಿಪೂರ್ಣ ಅಸ್ಮಿತೆಯ ವಿಕಾಸಕ್ಕೆ ಅಗತ್ಯ. ಏಕೆಂದರೆ ಈ ಅವಧಿಯಲ್ಲಿ ವ್ಯಕ್ತಿ ತನ್ನ 'ಸ್ವಜ್ಞಾನ' ಸಂಪಾದಿಸುವುದಲ್ಲದೆ ಸಮಾಜ ಹಾಗೂ ಸಂಸ್ಕೃತಿಯಲ್ಲಿ ತನ್ನ ಸ್ಥಾನವೇನು ಎಂಬುದನ್ನು ನಿರ್ಧರಿಸುತ್ತಾನೆ. ಅಸ್ಮಿತೆಯ ಬಿಕ್ಕಟ್ಟನ್ನು ವ್ಯಾಖ್ಯಾನಿಸುವ ಸಂದರ್ಭದಲ್ಲಿ 'ಬಿಕ್ಕಟ್ಟ'ನ್ನು ಎರಿಕ್‌ಸನ್ ಆಘಾತಕಾರಿ ಅಪಾಯವೆಂದು ಬಣ್ಣಿಸದೆ ವಿಕಾಸದ ಒಂದು ಗಂಭೀರ ತಿರುವು ಎಂದು ಬಣ್ಣಿಸಿದ್ದಾನೆ. ಈ ಅಸ್ಮಿತೆಯ ಬಿಕ್ಕಟ್ಟಿನ ಕಾಲದಲ್ಲೇ ವ್ಯಕ್ತಿಯ ವಿಕಾಸವು ಒಂದಲ್ಲ ಒಂದು ದಿಕ್ಕಿನಲ್ಲಿ ಮುನ್ನಡೆ ಸಾಧಿಸಬೇಕು ಮತ್ತು ಆ ವ್ಯಕ್ತಿ ಏನಾಗಬೇಕು ಎಂಬುದೂ ಸಿದ್ಧವಾಗಬೇಕು ಎಂದು ಅಭಿಪ್ರಾಯ ಪಡುತ್ತಾನೆ.

ಈತನ ಅಸ್ಮಿತೆಗೆ ಸಂಬಂಧಿಸಿದ ತತ್ವ ಪ್ರಣಾಳ ಬಗ್ಗೆ ಸಾಕಷ್ಟು ಅಧ್ಯಯನಗಳಾಗಿವೆ. ಹದಿಹರೆಯದಲ್ಲಿ ಅಸ್ಮಿತೆಯ ಬಿಕ್ಕಟ್ಟನ್ನು ಯಶಸ್ವಿಯಾಗಿ ನಿಭಾಯಿಸಿದ ವ್ಯಕ್ತಿಗಳು ಆರಂಭಿಕ ವಯಸ್ಕ ಹಂತದ ಬಿಕ್ಕಟ್ಟನ್ನು ನಿಭಾಯಿಸುವಲ್ಲಿ ಸಫಲರಾಗುತ್ತಾರೆ ಎಂಬ ಎರಿಕ್‌ಸನ್ ವಿಚಾರಗಳು ಮನೋವಿಶ್ಲೇಷಣೆಗೆ ಅಗತ್ಯವಾದ ಹಲವು ಒಳನೋಟಗಳನ್ನು ಒದಗಿಸುತ್ತಿದೆ.

ಆಲ್ಫ್ರೆಡ್ ಆ್ಯಡ್ಲರ್

ಇವನು ಮಾನವನ ವರ್ತನೆಗಳನ್ನು ನಿಯಂತ್ರಿಸುವ ಘಟಕಗಳಲ್ಲಿ ಲೈಂಗಿಕತೆಗೆ ಪ್ರಾಮುಖ್ಯತೆ ಕೊಟ್ಟವನು. ಫ್ರಾಯ್ಡ್ ಪರಂಪರೆಯ ಅನುಭವಗಳನ್ನು ಹೊತ್ತು ತರುವ ಮೂಲ ಪ್ರತಿಮೆಗಳ (archetype) ಪ್ರಭಾವವನ್ನು ಕುರಿತು ಯೂಂಗ್ ಹೇಳಿದ್ದಾನೆ. ವ್ಯಕ್ತಿತ್ವವನ್ನು ನಿರ್ಧರಿಸುವಲ್ಲಿ ಇವರಿಬ್ಬರೂ ಗಮನಿಸಿದ ಸಾಮಾಜಿಕ ಪ್ರಭಾವವನ್ನು ಮನೋವಿಶ್ಲೇಷಣಾ ಕ್ಷೇತ್ರಗೆ ಕೊಡುಗೆ ನೀಡಿದವನೇ ಆಲ್ಫ್ರೆಡ್ ಆ್ಯಡ್ಲರ್.

ಮಾನವರ ವರ್ತನೆಗಳ ಹಿಂದಿರುವ ಪ್ರೇರಣೆಗೆ ಸಾಮಾಜಿಕ ಆಸಕ್ತಿಯೇ ಕಾರಣ ಮತ್ತು ವ್ಯಕ್ತಿತ್ವವನ್ನು ನಿರ್ಧರಿಸುವಲ್ಲಿ ಸಮಾಜದ ಹಿತಕ್ಕಾಗಿ ದುಡಿಯುವ ಒಂದು ಅಂತರ್ನಿಹಿತ ಪ್ರವೃತ್ತಿಯಿರುವುದೇ ಕಾರಣ ಎಂಬುದಾಗಿ ಮೂಲ ಕಲ್ಪನೆಯೊಂದನ್ನು ಮನೋವಿಶ್ಲೇಷಣಾ ಕ್ಷೇತ್ರಕ್ಕೆ ನೀಡಿದ್ದಾನೆ. ಈತನ ಪ್ರಕಾರ ಸಾಮಾಜಿಕ ಆಸಕ್ತಿ (social interest) ವ್ಯಕ್ತಿಯ ಜೀವನ ಶೈಲಿ (style of life)ಯನ್ನು ನಿರ್ಧರಿಸುತ್ತದೆ. ವ್ಯಕ್ತಿತ್ವ ಸಿದ್ಧಾಂತಗಳ ನಿರೂಪಣೆಯಲ್ಲಿ ಸಮಾಜದ ಪ್ರಾಮುಖ್ಯತೆಗೆ ಒತ್ತು ನೀಡಿರುವುದು ಸಮಾಜ ಮನೋವಿಜ್ಞಾನದ ಬೆಳವಣಿಗೆಗೂ ಸಹಾಯಕವಾಯಿತು. ಈತನು ಪ್ರಚುರಪಡಿಸಿದ ವಿಚಾರಗಳನ್ನು 'ಸಮಾಜ ಮನೋವೈಜ್ಞಾನಿಕ ವ್ಯಕ್ತಿತ್ವ ಸಿದ್ಧಾಂತ' ಎಂದು ಗುರುತಿಸಲಾಗಿದೆ. ಆ್ಯಡ್ಲರ್‌ನ ಮೂಲ ಕಲ್ಪನೆಗಳು.

ಕಾಲ್ಪನಿಕ ಆದರ್ಶ (fictional finalism)

ಮಾನವರು ಊಹೆಗಳು, ಕಲ್ಪನೆಗಳು, ನಂಬಿಕೆಗಳು ಸರಿಯೋ-ತಪ್ಪೋ ಆದರೂ ಅವುಗಳೊಡನೆ ಜೀವಿಸುವರು. ಇವು ಮಾನವನ ವರ್ತನೆಯನ್ನು ನಿರ್ಧರಿಸುವಲ್ಲಿ ಮುಖ್ಯ

ಪಾತ್ರ ವಹಿಸುತ್ತವೆ. ಪ್ರಜ್ಞಾತ್ಮಕ ಗುರಿ ಮತ್ತು ಗುರಿ ಇವುಗಳು ಆಂತರಿಕ ನಂಬಿಕೆಗಳು, ಕಾಲ್ಪನಿಕ ಗುರಿಗಳು ವರ್ತನೆಯನ್ನು ಪ್ರೇರೇಪಿಸುತ್ತವೆ ಎಂಬುದು ಈತನ ವಾದ.

ಮೇಲರಿಮೆ: ಈತನ ಪ್ರಕಾರ ಮೇಲರಿಮೆ ಎಂಬುದು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಕಂಡುಬರುವ ಒಂದು ತೆರನಾದ ಆತ್ಮಸಾಕ್ಷಾತ್ಕಾರ, ಪರಿಪೂರ್ಣತೆಯ ಆವಿಷ್ಕಾರ. ಇದು ಸಾಮಾಜಿಕ ಸ್ಥಾನಮಾನಗಳನ್ನು ಗಳಿಸುವ ನಾಯಕನಾಗುವ ಪ್ರವೃತ್ತಿಯಲ್ಲ. ಮೇಲ್ಮೈಗಾಗಿ ಯತ್ನಿಸುವ ಪ್ರವೃತ್ತಿ. ಒಬ್ಬೊಬ್ಬ ವ್ಯಕ್ತಿಯೂ ಒಂದೊಂದು ವಿಧದಲ್ಲಿ ಉನ್ನತಿಯನ್ನು ಸಾಧಿಸಲು ಯತ್ನಿಸುತ್ತಾರೆ. ಮಾನಸಿಕವಾಗಿ ಅಸ್ವಸ್ಥನಾದವನು ಸ್ವಪ್ರತಿಷ್ಠೆ ಮತ್ತು ಸ್ವಾರ್ಥ ಸಾಧನೆಗಳಲ್ಲಿ ನಿರತನಾಗುತ್ತಾನೆ. ಸ್ವಸ್ಥ ವ್ಯಕ್ತಿ ಸಾಮಾಜಿಕ ಆಸಕ್ತಿಗಳನ್ನು ಬೆಳೆಸಿಕೊಳ್ಳುತ್ತಾನೆ. ಇದು ಮಾನವನ ಸಹಜಾಭಿವೃತ್ತಿ ಎಂದು ಅಭಿಪ್ರಾಯಪಡುತ್ತಾನೆ.

ಕೀಳರಿಮೆ: ಜೀವನದ ಯಾವುದೇ ವಿಚಾರದಲ್ಲಿ ಪರಿಪೂರ್ಣತೆಯ ಅಭಾವವಿದ್ದರೆ ಅದು ಕೀಳರಿಮೆಯನ್ನು ಉಂಟುಮಾಡುತ್ತದೆ. ಇದು ಅಪಸಾಮಾನ್ಯತೆ (abnormality) ಕುರುಹಲ್ಲ. ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಅಂದರೆ ಅನ್ಯರಿಂದ ಟೀಕೆಗೊಳಗಾಗುವುದು, ತಿರಸ್ಕರಿಸಲ್ಪಡುವುದು, ಕೀಳರಿಮೆ (ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್) ಆಗಿ ಪರಿವರ್ತನೆಗೊಳ್ಳಬಹುದು. ಹೀಗಾದಾಗ ಅದನ್ನು ಮೀರಿ ನಿಲ್ಲಲು ಮನಸ್ಸು ಮೇಲರಿಮೆ (superiority complex)ಯನ್ನು ಬೆಳೆಸಿಕೊಳ್ಳುವುದು. ಅದು ಕೆಲವೊಮ್ಮೆ ಅಸಮಂಜಸ ವರ್ತನೆಗಳಾಗಿಬಿಡಬಹುದು, ದುರಹಂಕಾರ, ದುರಭಿಮಾನ, ಉದ್ಧಟತನಗಳಿಗೆ ಎಡೆಮಾಡಬಹುದು ಅಥವಾ ಸಾಮಾಜಿಕವಾಗಿ ವ್ಯಕ್ತಿಯ ವರ್ತನೆ ಅನುಪಯುಕ್ತವಾಗಬಹುದು. ಈ ಕೀಳರಿಮೆ ಉನ್ನತ ಗುರಿಯನ್ನು ತಲುಪಲು ವ್ಯಕ್ತಿಯನ್ನು ಪ್ರೇರೇಪಿಸುವ ಸಾಧ್ಯತೆಯು ಇದೆ. ಆಗ ಕೀಳರಿಮೆಯು ಶಕ್ತಿಯ ಚಿಲುಮೆಯಾಗುತ್ತದೆ ಮತ್ತು ಕೀಳರಿಮೆಯನ್ನು ಪರಿಹರಿಸಿಕೊಂಡು ಎತ್ತರಕ್ಕೇರುವ, ಮೇಲ್ಮೈಯನ್ನು ಸಾಧಿಸುವ ಪ್ರವೃತ್ತಿ ಮಾನವರಿಗೆ ಹುಟ್ಟಿನಿಂದಲೇ ಬಂದಿರುತ್ತದೆ ಎಂಬುದು ಆ್ಯಡ್ಲರ್‌ನ ಖಚಿತ ಅಭಿಪ್ರಾಯ.

ಜೀವನಶೈಲಿ (style of life)

ಆ್ಯಡ್ಲರ್ ಬರಹಗಳಲ್ಲಿ ಅಪಾರವಾಗಿ ಕಂಡುಬರುವ ಸ್ಟೈಲ್ ಆಫ್ ಲೈಫ್ ಈತನ ಸಿದ್ಧಾಂತದ ಕೇಂದ್ರಬಿಂದು. ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಯೂ ಇತರ ವ್ಯಕ್ತಿಗಳಿಗಿಂತ ಭಿನ್ನವಾದ ಜೀವನ ಶೈಲಿಯನ್ನು ಹೊಂದಿರುತ್ತಾನೆ ಮತ್ತು ಅದು ವ್ಯಕ್ತಿಗೆ ಅನನ್ಯತೆ (Uniqueness)ಯನ್ನು ತಂದುಕೊಡುತ್ತದೆ. ಈತನ ಪ್ರಕಾರ ಮಾನವರೆಲ್ಲರ ಗುರಿ ಒಂದೇ ಅದು ಔನತ್ಯವನ್ನು ತಲುಪುವುದು. ಆದರೆ ಈ ಗುರಿಯನ್ನು ಪ್ರತಿಯೊಬ್ಬರು ಸಾಧಿಸುವ ರೀತಿ ಮಾತ್ರ ಬೇರೆ ಬೇರೆಯೇ ಆಗಿರುತ್ತದೆ. ಉದಾ: ವಿಜ್ಞಾನ ರಂಗದಲ್ಲಿ ಅಭಿವೃದ್ಧಿ ಹೊಂದಲು ಕೆಲವರು ಬಯಸಬಹುದು. ಇನ್ನೊಬ್ಬರು ಕಲೆ, ಸಂಗೀತ, ಸಾಹಿತ್ಯ, ದಾರ್ಶನಿಕ, ಆಧ್ಯಾತ್ಮ ಹೀಗೆ ಬೇರೆ ಬೇರೆ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಲು ಬಯಸುತ್ತಾರೆ. ಇದು ವ್ಯಕ್ತಿಯ ವರ್ತನೆಗಳು, ಆಸಕ್ತಿ ಮತ್ತು ಅಭಿವ್ಯಕ್ತಿಗಳನ್ನು

ನಿರ್ಧರಿಸುತ್ತದೆ. ತನ್ನ ಗುರಿ ಸಾಧನೆಗೆ ಪೂರಕವಾಗಿರುವುದನ್ನು ಆಯ್ದು ಉಳಿದೆಲ್ಲವನ್ನು ಕೈ ಬಿಡುತ್ತಾನೆ.

ಜೀವನ ಶೈಲಿ ಬಾಲ್ಯದಲ್ಲಿ ರೂಪುಗೊಂಡು ಮತ್ತು ೪ರಿಂದ ೫ನೆಯ ವಯಸ್ಸಿನಲ್ಲಿ ಹುಟ್ಟುವ ಅನಂತರ ಜರುಗುವ ಎಲ್ಲಾ ಅನುಭವಗಳನ್ನು ತನ್ನೊಳಗೆ ಸೇರಿಸಿಕೊಂಡು ವ್ಯಕ್ತಿಗೆ ಒಂದು ಅನನ್ಯತೆಯನ್ನು ತಂದುಕೊಡುತ್ತದೆ. ವ್ಯಕ್ತಿಯ ಅಭಿವೃತ್ತಿಗಳು (attitudes) ಭಾವನೆಗಳು (feelings) ಕಾಣ್ಕೆಗಳು (apperceptions) ಬಾಲ್ಯದಲ್ಲೇ ಸ್ಥಿರವಾಗಿ ನೆಲೆಗೊಳ್ಳುವುದರಿಂದ ಮುಂದೆ ಜೀವನಶೈಲಿಯಲ್ಲಿ ಅದರ ಪ್ರಭಾವ ಮಹತ್ವದ್ದು ಮತ್ತು ಬದಲಾವಣೆ ತರುವುದು ದುಸ್ಸಾಧ್ಯ ಎಂಬುದು ಆಡ್ಲರ್‌ನ ಅಭಿಪ್ರಾಯ.

ಸಾಮಾಜಿಕ ಆಸಕ್ತಿ – ಪರಿಪೂರ್ಣ ಮಾನವೀಯ ಸಮಾಜದ ನಿರ್ಮಾಣಕ್ಕೆ ಅನುವಾಗುವ ವ್ಯಕ್ತಿಗತ ಆಸಕ್ತಿ (Social Interest is the true and inevitable compensation for all the natural weakness of individual human beings. ಮಾನವನ ಪ್ರಮುಖ ಗುರಿ striving for superiority ಸಾಮಾಜೀಕರಣ (socialization)ವನ್ನು ಒಳಗೊಳ್ಳುತ್ತದೆ. ಎಲ್ಲರೂ ಸುಖವಾಗಿರುವ ಸಮಾಜದಲ್ಲಿ ತಾನೂ ಸುಖಿ ಎಂಬ ಭಾವನೆ, ಆದರ್ಶ ಸಮಾಜ ನಿರ್ಮಾಣದ ಗುರಿ, ಇದೆಲ್ಲದರ ಹಿನ್ನೆಲೆಯಲ್ಲಿರುವುದೇ ಸಾಮಾಜಿಕ ಆಸಕ್ತಿ ಎಂಬುದು ಈತನ ಅಭಿಪ್ರಾಯ. ಈತನ ಪ್ರಕಾರ ಇದನ್ನು ಯಾರು ಕಲಿಸಬೇಕಾಗಿಲ್ಲ. ಆದರೆ ಸಹಜ ಪ್ರವೃತ್ತಿಗಳ ಹಾಗೆ ತನ್ನಷ್ಟಕ್ಕೆ ತಾನೇ ಹೊರಹೊಮ್ಮದೆ ಇರುವುದನ್ನು ಹೊರಗೆಳೆಯಬೇಕು ಹಾಗೂ ಅದಕ್ಕೆ ಪ್ರೇರಣೆ ಹಾಗೂ ಮಾರ್ಗದರ್ಶನ ಅಗತ್ಯವಾದುದು.

ಸೃಜನಶೀಲ ಸ್ವಯಂ (creative self)

ಪ್ರತಿಯೊಬ್ಬ ವ್ಯಕ್ತಿಯಲ್ಲೂ ತನ್ನ ಗುರಿ ಏನು? ಅದರ ಸಾಧನೆ ಮಾರ್ಗವೇನು ಎಂದು ಅರಿತು ನಡೆಯುವ ಸೃಜನಾತ್ಮಕ ಶಕ್ತಿಯೊಂದು ಪರಿಸರದ ಪ್ರಚೋದನೆ, ಅದಕ್ಕೆ ಜೀವಿಯ ಪ್ರತಿಕ್ರಿಯೆ ಇವೆರಡರ ನಡುವೆ ಸಮನ್ವಯವನ್ನುಂಟುಮಾಡಿ ವರ್ತನೆಗಳಿಗೆ ಅರ್ಥವನ್ನು ತಂದು ಕೊಡುತ್ತದೆ. ಹೀಗೆ ಪ್ರತಿಯೊಬ್ಬನೂ ತನ್ನ ವ್ಯಕ್ತಿತ್ವವನ್ನು ತಾನೇ ರೂಪಿಸಿಕೊಳ್ಳುತ್ತಾನೆ. ಇದೆಲ್ಲವನ್ನೂ ನಿರ್ಧರಿಸುವ, ನಿಯಂತ್ರಿಸುವ ಘಟಕವೇ ಸ್ವಯಂ. ಆ್ಯಡ್ಲರ್‌ನ ಈ ಕಲ್ಪನೆ ಯೂಂಗ್‌ನ ಆತ್ಮ ಸಾಕ್ಷಾತ್ಕಾರಕ್ಕೆ ಹತ್ತಿರವಾದುದು. ಈತ ಪ್ರತಿಪಾದಿಸಿದ 'ಸ್ವಯಂ'ನ ಕಲ್ಪನೆ ಅಬ್ರಾಹಂ ಮಾಸ್ಲೊ, ವಿಕ್ಟರ್ ಫ್ರಾಂಕ್ಲ್ (victor frankl) ರೋಲೊ ಮೇ (Rollo,may) ಕಾರ್ಲ್ ರೋಜರ್ಸ್ (carl Rogers), ಆಲ್ಬರ್ಟ್ ಎಲ್ಲಿಸ್ (Albert Ellis) ಮುಂತಾದ ಮನೋವಿಜ್ಞಾನಿಗಳನ್ನು ಪ್ರಭಾವಿಸಿವೆ. ಸಾಮಾಜಿಕ ಆಸಕ್ತಿ, ಜೀವನಶೈಲಿ ಮುಂತಾದವುಗಳ ಸಂಶೋಧನೆಗಳು ಇತ್ತೀಚೆಗೆ ಜರುಗುತ್ತಿವೆ. ಎಲ್ಲಕ್ಕಿಂತ ಮಿಗಿಲಾಗಿ ಆತನ ಮನಃಚಿಕಿತ್ಸಾ ವಿಧಾನವೊಂದು (psychotherapy) ಬೆಳೆದು ಬಂದಿದೆ.

ಮನೋವಿಶ್ಲೇಷಣೆಯ ಮಿತಿಗಳು

ಮನೋವಿಶ್ಲೇಷಣಾ ದೃಷ್ಟಿಕೋನವು ಮಾನವರನ್ನು ಮೂಲತಃ ದುರ್ಗುಣಗಳಿಂದ ಕೂಡಿದ, ಪ್ರಾಣಿ ಸಹಜ ಪ್ರವೃತ್ತಿಗಳಿರುವ, ಸುಪ್ತವಾದ ಅಗತ್ಯಗಳು ಹಾಗೂ ನಿರೋಧಿಸಿದ ಆಸೆ ಆಕಾಂಕ್ಷೆಗಳಿಂದ ನಿರ್ದೇಶಿಸಲ್ಪಡುವವರು ಎಂದು ನೋಡುತ್ತದೆ. ಫ್ರಾಯ್ಡ್‌ನ ದೃಷ್ಟಿಕೋನವು ಶರೀರ ಹಾಗೂ ಮನಸ್ಸು ಎರಡೂ ಬೇರೆ ಬೇರೆ ಎಂದು ಭಾವಿಸುತ್ತದೆ.

ಬಾಲ್ಯದ ಅನುಭವಗಳಿಗೆ ಅತಿಯಾದ ಮಹತ್ವವನ್ನು ನೀಡಲಾಗಿದೆ. ಇಂದಿನ ಸಮಸ್ಯೆಯನ್ನು ಎಂದೋ ಆದ ಬಾಲ್ಯದ ಅನುಭವದ ಆಧಾರದ ಮೇಲೆ ಅರ್ಥೈಸಲಾಗುತ್ತದೆ. ಇದರಿಂದ ವ್ಯಕ್ತಿಗೆ ತನ್ನ ಸಮಸ್ಯೆಗಳಿಂದ ಬಿಡುಗಡೆ ಹೊಂದುವ ಸಾಮರ್ಥ್ಯವಿಲ್ಲ, ಅವನು ಅಸಹಾಯಕ ಎಂಬ ರೀತಿಯಲ್ಲಿ ನೋಡಲಾಗುತ್ತದೆ.

ಫ್ರಾಯ್ಡ್‌ನ ಅಭಿಪ್ರಾಯದಲ್ಲಿ ಎಲ್ಲ ವರ್ತನೆಗಳು ಮಾನಸಿಕ ಶಕ್ತಿಯ ಮೂಲಕ ಉಂಟಾಗುತ್ತದೆ. ಈ ಶಕ್ತಿ ವಸ್ತುವಿನಿಂದ ವಸ್ತುವಿಗೆ ಹರಿಯುತ್ತದೆ. ಈ ರೀತಿಯ ವಿವರಣೆಗಳು ಸನ್ನಿವೇಶಗಳ ಮಹತ್ವವನ್ನು ಕಡೆಗಣಿಸುತ್ತವೆ.

ಸಿದ್ಧಾಂತದ ಅಂಶಗಳನ್ನು ಪ್ರಾಯೋಗಿಕವಾಗಿ ಸಿದ್ಧಪಡಿಸಲು ಸಾಧ್ಯವಿಲ್ಲ. ಇವುಗಳ ಸಿಂಧುತ್ವವನ್ನು ಮಾಪನ ಮಾಡಲು ಸಾಧ್ಯವಾಗಿಲ್ಲ.

ಇಷ್ಟೆಲ್ಲಾ ಮಿತಿಗಳಿದ್ದರೂ ಮನೋವಿಶ್ಲೇಷಣೆಯ ಮಹತ್ವವನ್ನು ಅಲ್ಲಗಳೆಯಲಾಗುವುದಿಲ್ಲ. ಮಾನವನ ಆಲೋಚನೆ ಮತ್ತು ವರ್ತನೆ, ಸುಪ್ತ ಆಸೆ, ಆಕಾಂಕ್ಷೆಗಳಿಂದ ಪ್ರಭಾವಿತವಾಗುತ್ತವೆ ಎಂಬ ಫ್ರಾಯ್ಡ್‌ರ ವಿಚಾರ ಮನೋವಿಜ್ಞಾನದಲ್ಲಿ ಕ್ರಾಂತಿ ಉಂಟುಮಾಡಿತು. ಎಲ್ಲಾ ರೀತಿಯ ವಿಚಾರಗಳು ನೈತಿಕತೆಯ ಬಗ್ಗೆ ಪ್ರಶ್ನಿಸದೇ ಸಾವಧಾನವಾಗಿ ಆಲಿಸಿ ಸ್ವೀಕರಿಸಬೇಕೆಂಬ ಮನೋಭಾವವನ್ನು ಮನೋವಿಜ್ಞಾನಿಗಳಲ್ಲಿ ಮೂಡಿಸುವುದರಲ್ಲಿ ಈ ಸಿದ್ಧಾಂತದ ಕೊಡುಗೆ ಪ್ರಮುಖವಾದುದು. ಆದ್ದರಿಂದಲೇ ಮನೋಚಿಕಿತ್ಸೆ, ವೈಜ್ಞಾನಿಕ, ವೈದ್ಯಕೀಯ ಕ್ಷೇತ್ರಕ್ಕೆ ಸೀಮಿತವಾಗಬೇಕಿದ್ದ ಮನೋವಿಶ್ಲೇಷಣೆಯು ಮಾನವನ ಸೃಜನಶೀಲ ಕ್ಷೇತ್ರಗಳಾದ ಸಾಹಿತ್ಯ, ಕಲೆಗಳ ಕುರಿತಾದ ಅಧ್ಯಯನ ಕ್ಷೇತ್ರಕ್ಕೂ ಕಾಲಿಡುವಂತಾಯಿತು.

ಮನೋವಿಜ್ಞಾನದ ಶಿಸ್ತನ್ನು ಬಳಸಿ ಸಾಹಿತ್ಯ ಪಠ್ಯಗಳ ಅಧ್ಯಯನ

ಮನೋವಿಜ್ಞಾನವು ಮನೋವ್ಯಾಪಾರಗಳ ಅಧ್ಯಯನ, ಮಾನವ ಮನಸ್ಸು ಸಾಹಿತ್ಯ ಕಲೆಯ ಉಗಮಸ್ಥಾನ. ಆದುದರಿಂದಲೇ ಸಾಹಿತ್ಯದ ಅಧ್ಯಯನಕ್ಕೂ ಮನೋವಿಜ್ಞಾನವನ್ನು ಅನ್ವಯಿಸಿ ಅಧ್ಯಯನ ಮಾಡುವುದು ನಡೆದಿದೆ.

ಮಾನವ ಪ್ರಜ್ಞೆಯ ವಲಯದಿಂದ ಮೂಡಿದ ಜೀವನದ ಪಾಠಗಳು, ಭಾವನೆಗಳು, ಅನುಭವಗಳು, ಮನುಷ್ಯನ ಜಾಗೃತ ಜೀವನವನ್ನು ರೂಪಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತವೆ.

ತಾನು ಬದುಕುತ್ತಾ ಎಲ್ಲರೊಡನೆ ಮತ್ತು ಸ್ವಯಂ ಸಂವೇದನಾಶೀಲ ಬದುಕಿನೊಡನೆ ವಿಶಿಷ್ಟವಾಗಿ ವ್ಯವಹರಿಸಬೇಕಾಗುತ್ತದೆ. ಈ ರೀತಿಯ ಬದುಕಿನ ವ್ಯಾಪಾರಗಳೇ ಸಾಹಿತ್ಯ ರಚನೆಯಂತಹ ಒಂದು ಸಂಕೀರ್ಣ, ಸೃಜನಾತ್ಮಕ ಮಾನಸಿಕ ಪ್ರಕ್ರಿಯೆಗೆ ಪ್ರೇರಣೆಯಾಗುತ್ತದೆ. ಮಾನಸಿಕ ಪ್ರಕ್ರಿಯೆ ಎಂಬುದು ಖಚಿತವಾದ ನಿರ್ದಿಷ್ಟ ಘಟ್ಟಗಳಲ್ಲಿ, ಸಮಯದಲ್ಲಿ ಉಂಟಾಗುವುದಿಲ್ಲ. ಅದು ವ್ಯಕ್ತಿಯ ಜೀವನದುದ್ದಕ್ಕೂ ಹಾದುಬರುತ್ತದೆ. ಅದು ಬಹುಮುಖಿಯಾಗಿದ್ದು ಸಾಮಾಜಿಕ, ಮಾನಸಿಕ ಸನ್ನಿವೇಶವನ್ನು ಹೊಂದಿಕೊಂಡು ಬೇರೆ ಬೇರೆ ಮಜಲುಗಳಲ್ಲಿ ಸೂಕ್ಷ್ಮವಾಗುತ್ತದೆ.

ಮನೋವಿಜ್ಞಾನವು ಮನುಷ್ಯನ ವರ್ತನೆಯನ್ನು ಅನುಭವಗಳನ್ನು ಅದರ ಕಾರ್ಯ-ಕಾರಣ ಸಂಬಂಧಗಳನ್ನು ಅಧ್ಯಯನ ಮಾಡುವ ಒಂದು ಶಿಸ್ತು. ಮನುಷ್ಯನ ವರ್ತನೆಗೂ, ಅಭಿವ್ಯಕ್ತಿಗೂ, ಪ್ರತಿಕ್ರಿಯೆಗಳಿಗೂ ಬಾಹ್ಯ ನೋಟವು ಒಂದು ದೃಷ್ಟಿಕೋನವನ್ನು ಒದಗಿಸುತ್ತದೆ. ಆದರೆ ಅದೇ ಅಂತಿಮವೆಂದು ನಿರ್ಧರಿಸಲಾಗುವುದಿಲ್ಲ. ಬಾಹ್ಯ ನೋಟಕ್ಕೆ ನಿಲುಕುವ ಮನುಷ್ಯನ ವರ್ತನೆಯು ಸಮಾಜಮುಖಿ ಧೋರಣೆಯದ್ದು. ತಮಗರಿವಿಲ್ಲದೆ ವಿಶಿಷ್ಟ ಸಂದರ್ಭಗಳಲ್ಲಿ ವ್ಯಕ್ತವಾಗುವ ವರ್ತನೆಯು ವಾಸ್ತವ ಧೋರಣೆಯ ಪ್ರತೀಕವಾಗಿರುತ್ತದೆ. ಈ ಬಗೆಯ ವಿಶಿಷ್ಟ ವರ್ತನೆಗಳ ಅಭಿವ್ಯಕ್ತಿಯನ್ನು ಪಾತ್ರಗಳ, ಘಟನೆಗಳ, ಸಂದರ್ಭಗಳ ಮುಖಾಂತರ ಸಾಹಿತ್ಯ, ಕಲೆ ಮುಂತಾದ ಸೃಜನಶೀಲ ಕ್ರಿಯೆಗಳಲ್ಲಿ ಕಾಣಬಹುದು. ಸೃಜನಶೀಲ ಕ್ರಿಯೆಗಳು ಕೇವಲ ವೈಯಕ್ತಿಕ ಅನುಭವ ಮಾತ್ರವಾಗಿರದೆ ಸಾರ್ವತ್ರಿಕವೂ ಆಗಿರುತ್ತವೆ. ವೈಯಕ್ತಿಕ ಗ್ರಹಿಕೆ, ಅನುಭವದ್ದಾಗಿರಬಹುದು. ಎಲ್ಲೋ ಕಂಡು ಕೇಳಿರುವಂತಹದ್ದೂ ಆಗಿರಬಹುದು. ಅವುಗಳೆಲ್ಲವನ್ನು ಗ್ರಹಿಸಿ, ಮೌಲ್ಯ ನಿರ್ಣಯವಾದ ಮೇಲೆಯೇ ಅದಕ್ಕೊಂದು ಸೃಜನಶೀಲರೂಪ ಉಂಟಾಗುವುದು. ಇಂತಹದನ್ನು ಮನಃಶಾಸ್ತ್ರದ ನೆಲೆಯಲ್ಲಿ ವಿಶ್ಲೇಷಿಸುವುದು ಹೆಚ್ಚು ಸೂಕ್ತ ಎಂದೆನಿಸುತ್ತದೆ.

ಮನಸ್ಸಿನ ಉನ್ನತ ಮಟ್ಟದ ಕಾರ್ಯಾಚರಣೆಯು ಸೃಜನಶೀಲತೆಯನ್ನು ಪ್ರಭಾವಿಸುತ್ತದೆ. ಸೃಜನಶೀಲತೆಯು ಮನುಷ್ಯನ ಒಳಪ್ರಪಂಚ ಹಾಗೂ ಹೊರಪ್ರಪಂಚದ ಜೊತೆಗಿನ ಸಂಬಂಧಗಳಲ್ಲಿ ಹಾಗೂ ಅನುಭವಗಳ ಸಂದರ್ಭಗಳಿಂದ ಒಡಮೂಡುತ್ತದೆ. ವ್ಯಕ್ತಿಯ ವೈಯಕ್ತಿಕ ಪರಿಸರ ಹಾಗೂ ಸಾಮಾಜಿಕ ಪರಿಸರ ಮತ್ತು ಸೃಜನಶೀಲತೆಯ ನಡುವೆ ಸಂಬಂಧವಿದೆ. ಸಾಹಿತ್ಯ ಪಠ್ಯಗಳು ಮನುಷ್ಯ ತನ್ನ ಅನುಭವಗಳನ್ನು ವಿನೂತನ ರೀತಿಯಲ್ಲಿ ಬಳಸಿಕೊಂಡದ್ದರ ಪರಿಣಾಮವೇ ಆಗಿದೆ. ಹೀಗೆ ತಮ್ಮ ಅನುಭವಗಳನ್ನು ಬಳಸಿಕೊಳ್ಳುವಾಗ ಅವರಿಗರಿವಿಲ್ಲದೆ ವೈಯಕ್ತಿಕ ಭಾವನೆಗಳು, ತುಮುಲಗಳು, ಆಸೆ, ಆಕಾಂಕ್ಷೆಗಳು, ನೋವು, ಹತಾಶೆಗಳು, ಕನಸುಗಳು, ಆದರ್ಶಗಳು, ಕಲ್ಪನೆಗಳು ತಾವು ಸೃಷ್ಟಿಸುವ ಸಾಹಿತ್ಯಗಳಲ್ಲಿ ಮೂಡಿರುತ್ತವೆ. ಸ್ವತಃ ರಚಿಸಿದಾತನಿಗೆ ಅದರ ಕುರಿತು ಮಾಹಿತಿ ಇರಬೇಕಾಗಿಲ್ಲ; ಅಥವಾ ಇರುವುದಿಲ್ಲ. ಇದಕ್ಕೆಲ್ಲಾ ಕಾರಣವನ್ನು ಮನೋವಿಜ್ಞಾನದ ನೆರವಿನಿಂದ ಹುಡುಕುವ ಪ್ರಯತ್ನ ತೀರಾ ಇತ್ತೀಚಿನದ್ದಾದರೂ, ಆ ಕ್ರಿಯೆಯ ಹಿಂದೆ ಮನಸ್ಸು ಮತ್ತು ಅದರ ಕಾರ್ಯಯೋಜನೆಯು ವ್ಯವಹರಿಸಿರುವುದು ಕಂಡುಬರುತ್ತದೆ.

ಅನೇಕರು ಸಾಹಿತ್ಯ ಹುಟ್ಟಿನ ಕುರಿತಾಗಿ ಚಿಂತನೆ ನಡೆಸಿದ್ದಾರೆ. ಯಶವಂತ ಚಿತ್ತಾಲರ ಪ್ರಕಾರ "ಸಾಹಿತ್ಯದ ಹುಟ್ಟಿಗೆ ಒಂದು ಪ್ರಚೋದನೆ ಬರಬೇಕು, ಲೇಖಕನಾಗಬೇಕು ಎಂಬ ಅಹಂಕಾರಜನ್ಯವಾದ ಅಭೀಪ್ಸೆ, ಅಹಂಕಾರವೇ ಮೂಲ ಪ್ರಚೋದನೆಯಾದಾಗ ಹುಟ್ಟಿಕೊಳ್ಳುವ ಸಾಹಿತ್ಯ. ಇನ್ನೊಂದು ಸಮಗ್ರ ಬದುಕನ್ನು ಒಂದೇ ಒಂದು ಮಹಾ ಸಂಕಲ್ಪನೆಯಲ್ಲಿ ಹಿಡಿದಿಡಬಲ್ಲ ಪ್ರತಿಭೆ (ಕೋಪರ್ನಿಕಸ್, ಗೆಲಿಲಿಯೋ, ನ್ಯೂಟನ್, ಐನ್‌ಸ್ಟೈನ್, ಡಾರ್ವಿನ್, ಫ್ರಾಯ್ಡ್, ಮಾರ್ಕ್ಸ್, ಶೇಕ್ಸ್‌ಪಿಯರ್, ವಾಲ್ಮೀಕಿ, ವ್ಯಾಸ) ಎಲ್ಲಿ ಕಾರ್ಯಪ್ರವೃತ್ತವಾಗಿದೆಯೋ ಅಲ್ಲೇ ಜಗತ್ತಿನ ಮಹಾಕೃತಿಗಳು ಜನ್ಮ ಪಡೆದಿವೆ."

ಚಿತ್ತಾಲರ ಸಾಹಿತ್ಯದ ಹುಟ್ಟಿಗೆ ಕಾರಣವಾದ ಪ್ರಚೋದನೆ ಮತ್ತು ಪ್ರತಿಭೆಗಳ ವಿಷಯವನ್ನು ಒಪ್ಪುತ್ತಲೇ ಮನಃಶಾಸ್ತ್ರದ ನೆಲೆಯಲ್ಲಿ ಈ ಪ್ರಚೋದನೆ ಮತ್ತು ಪ್ರತಿಭೆಗಳ ಸ್ವರೂಪವನ್ನು ಕುರಿತು ಅಧ್ಯಯನದ ಅವಶ್ಯಕತೆ ಕುರಿತ ಚರ್ಚೆ ಮುಖ್ಯ.

ಮನುಷ್ಯ ಬುದ್ಧಿವಂತ ಪ್ರಾಣಿ. ಸಾಮಾಜಿಕ ಬದುಕಿನಲ್ಲಿರುವಾಗ ವ್ಯಕ್ತಿ ತನ್ನ ವೈಯಕ್ತಿಕತೆಯನ್ನು ಮೀರಿ ಬದುಕುತ್ತಾನೆ, ವರ್ತಿಸುತ್ತಾನೆ, ಅಭಿವ್ಯಕ್ತಿಸುತ್ತಾನೆ. ಅದು ವಾಸ್ತವಕ್ಕಿಂತ ಭಿನ್ನ ಸ್ವರೂಪದ್ದು. ಒಬ್ಬೊಬ್ಬ ವ್ಯಕ್ತಿಯದ್ದು ಒಂದೊಂದು ಬಗೆಯ ಮನೋ ಜಗತ್ತು. ಸರಾಸರಿ ವ್ಯಕ್ತಿಗಳನ್ನು ಆಯ್ದು ಅವರ ಮೇಲೆ ಅಧ್ಯಯನ ನಡೆಸಿ ಒಂದು ಸಾಮಾನ್ಯೀಕರಣಕ್ಕೆ ಬರುವ ಪ್ರವೃತ್ತಿಯು ಎಲ್ಲಾ ಶಿಸ್ತುಗಳಲ್ಲೂ ಕಂಡುಬರುತ್ತದೆ. ಆ ಸಾಮಾನ್ಯೀಕರಣವನ್ನು ಕುರಿತಾಗಿ ಪೂರ್ವಾಗ್ರಹ ಹೊಂದಲಾಗುತ್ತದೆ. ಆದರೆ ಸಾಹಿತ್ಯದಂತಹ ಸೃಜನಶೀಲ ಕ್ರಿಯೆಯು ಮಾನವ ಭಾವಾವೇಶಕ್ಕಿಂತ ಹೆಚ್ಚು ಆಳವಾದ ಮತ್ತು ಪರಿಣಾಮಕಾರಿಯಾದ ಅನುಭವದಿಂದ ಸೃಷ್ಟಿಸಲ್ಪಟ್ಟಿರುತ್ತದೆ. ಈ ಬಗೆಯ ಭಾವಾವೇಶ ಮಾನವನ ಜಾಗೃತ ಅನುಭವದ ವಲಯದೊಳಗೆ ಬರುತ್ತದೆ. ಆದ್ದರಿಂದ ಒಂದು ಕಡೆ ವೈಯಕ್ತಿಕ ಬದುಕು, ಮತ್ತೊಂದೆಡೆ ವ್ಯಕ್ತಾತೀತವಾದ ಮನುಷ್ಯನ ಸೃಜನಾತ್ಮಕ ಮನೋ ಪ್ರಪಂಚ. ಒಬ್ಬ ಮನುಷ್ಯನಾಗಿ ಆತನಿಗೆ ಲಹರಿಗಳು, ಸಂಕಲ್ಪಗಳು ಹಾಗೂ ವೈಯಕ್ತಿಕ ಗುರಿಗಳಿರುತ್ತವೆ. ಆದರೆ ಅದರೊಂದಿಗೆ ಉನ್ನತ ನೆಲೆಯ ಚಿಂತನೆಗಳು, ಮನುಕುಲದ ಜಾಗೃತ ಮನೋ ಜೀವನದೊಂದಿಗೆ ಧಾರಣ ಮಾಡಿಕೊಳ್ಳಲಾಗಿರುತ್ತದೆ. ಹೀಗೆ ಜಾಗೃತಗೊಂಡ ಮನಸ್ಸಿನ ವ್ಯಕ್ತಿಗಳ ಬದುಕು ಘರ್ಷಣೆಯಿಂದ ಕೂಡಿರುತ್ತದೆ. ವ್ಯಕ್ತಿಯ ಮನಸ್ಸನ್ನು ಅನೇಕ ಆಯಾಮಗಳಿಂದ ನೋಡಿದಾಗ ಎರಡು ಶಕ್ತಿಗಳು ಕ್ರಿಯಾ ನಿರತವಾಗಿರುವುದು ಕಂಡುಬರುತ್ತದೆ. ಒಂದೆಡೆ ಸುಖ ಸಂತೃಪ್ತಿ ಹಾಗೂ ಜೀವನದಲ್ಲಿ ಸುರಕ್ಷಿತತೆಯ ಸಾಮಾನ್ಯ ಮಾನವನ ಆಕಾಂಕ್ಷೆ. ಮತ್ತೊಂದೆಡೆ ಪ್ರತಿಯೊಂದು ವೈಯಕ್ತಿಕತೆಯನ್ನು ಮೀರಿ ದೂರ ಹೋಗಬೇಕೆನ್ನುವ ಮನಸ್ಸಿನ ನಿಷ್ಠುರ ಕಾಮನೆ. ಇವುಗಳನ್ನು ಮೀರುವ ಪ್ರಯತ್ನದಲ್ಲಿ ತೊಡಗುವ ಸಂದರ್ಭದಲ್ಲಿಯೇ ಸಾಹಿತ್ಯದಂತಹ ಸೃಜನಶೀಲ ಕ್ರಿಯೆಯು ಜರುಗುತ್ತದೆ.

ಸಾಹಿತ್ಯದಂತಹ ಸೃಜನಶೀಲ ಪ್ರಕ್ರಿಯೆಯು ಆ ಕ್ಷಣಕ್ಕೆ ಉಗಮಗೊಂಡಿರಲು ಸಾಧ್ಯವಿಲ್ಲ. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ವೈಯಕ್ತಿಕ ಸುಪ್ತಚೇತನವೊಂದಿರುತ್ತದೆ. ಅದು ನಿಷ್ಕ್ರಿಯ ಸ್ವರೂಪದ್ದಲ್ಲ. ಅದು ಜೀವಂತವಾದುದು ಮತ್ತು ಕ್ರಿಯಾಶೀಲವಾದುದು. ಸಂವೇಗಪೂರ್ಣವಾದವು. ಯಾವುದಾದರು ಒಂದು ಪ್ರಮುಖ ಭಾವನೆಗಳು ಸಮಾವೇಶಗೊಂಡು ಒಂದು ಶಕ್ತಿಯುತ ಕೇಂದ್ರವಾಗಿ ಪರಿಣಮಿಸುತ್ತವೆ. ಇದೇ ಸಾಹಿತ್ಯದ ಹುಟ್ಟಿಗೆ ಕಾರಣವಾದ, ಅವುಗಳ ವಸ್ತುವಿಗೆ ರೂಪು ಕೊಟ್ಟ ಪ್ರೇರಣೆಯಾಗಿರಬಹುದು. ಇಲ್ಲಿ ಅಭಿವ್ಯಕ್ತಿಗೊಂಡ ಅನುಭವವು ತನ್ನ ಮೂಲ ಗುಣದಲ್ಲೇ ಸಾಹಿತ್ಯ ಕೃತಿಯಾಗಿ ಬೇರೆಯವರನ್ನು ತಲುಪಬೇಕೆಂಬ ಉದ್ದೇಶವಾಗಿರಬಹುದು. ಮತ್ತು ಇಲ್ಲಿನ ಕಲಾವಿದ ಪ್ರಜ್ಞೆ ತಾನು ಬದುಕುತ್ತಿರುವ ಅಥವಾ ಕಂಡು ಕೇಳಿದ ಪರಿಸರಕ್ಕೆ ಸ್ಪಂದಿಸಿರುವುದಾಗಿರಬಹುದು ಅಥವಾ ತಾನು ಜೀವಿಸಿರುವ ಸಮಾಜದ, ದೇಶದ, ಜಗತ್ತಿನ ಯಾವುದಾದರೂ ಆಶೋತ್ತರಗಳಿಗೆ, ನೋವುಗಳಿಗೆ, ಅನುಭವಗಳಿಗೆ, ವಾಸ್ತವ ಪ್ರಜ್ಞೆಗೆ ಸಾಹಿತ್ಯದ ಮೂಲಕ ಆಕಾರ ಕೊಡುವ ಪ್ರಯತ್ನವಾಗಿರಬಹುದು ಅಥವಾ ತನ್ನ ಬದುಕನ್ನು ತೀರಾ ನಿಯಂತ್ರಣಕ್ಕೊಳಪಡಿಸುವುದರ ವಿರುದ್ಧ ಸವಾಲಾಗಿಯೂ ಇರಬಹುದು. ಇವೆಲ್ಲವೂ ಕೇಂದ್ರೀಕರಿಸುವುದು ಮನುಷ್ಯನ ಮನೋ ವಲಯವನ್ನೇ. ಸಾಹಿತ್ಯ ಚಟುವಟಿಕೆಯಂತಹ ಕ್ರಿಯೆಯು ಮಾನವ ವ್ಯಕ್ತಿತ್ವದ ಅಪೂರ್ಣತೆಯ ಪ್ರತಿಬಿಂಬ. ಅದು ಪೂರ್ಣಗೊಳ್ಳುವುದು ಒಂದು ಬಗೆಯ ಸೃಷ್ಟಿ ಕ್ರಿಯೆಯ ನಂತರ. ಯಾರೇ ಆಗಲೀ ಒಂದು ಕೃತಿ, ಕಲೆಯ ಸೃಷ್ಟಿಯ ನಂತರ ನಿರಾಳರಾಗಿ ಬಿಡುತ್ತಾರೆಂದು ಭಾವಿಸಲಾಗುವುದಿಲ್ಲ. ಮಾನವ ಮನಸ್ಸೇ ಹಾಗೆ. ಬದುಕಿನ ಪ್ರತೀ ಕ್ಷಣವೂ ಒಂದಿಲ್ಲೊಂದು ಏರಿಳಿತಗಳ ಸುಳಿಯಲ್ಲಿಯೇ ಸಿಲುಕಿರಲು ಬಯಸುತ್ತದೆ. ಒಂದರಿಂದ ಬಿಡುಗಡೆ ಹೊಂದುವ, ಮತ್ತೊಂದಕ್ಕೆ ಹಾತೊರೆಯುವ ಪ್ರವೃತ್ತಿ ಮನಸ್ಸಿನದ್ದು. ಯಾರು ಸಾಹಿತ್ಯದಂತಹ ಸೃಜನಶೀಲ ಕ್ರಿಯೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾನೋ, ಆ ಕ್ಷಣದಲ್ಲಿ ಮಾತ್ರ ಮಾನಸಿಕವಾಗಿ ಬಿಡುಗಡೆ ಹೊಂದುತ್ತಾನೆ. ಆತನ ಸಾಮಾಜಿಕ ಪ್ರಜ್ಞೆ, ಕಾಳಜಿ, ದೃಷ್ಟಿಕೋನಗಳು, ಪ್ರಭಾವಿಸಿಲ್ಪಟ್ಟ ಸಿದ್ಧಾಂತಗಳ ಹೊರತಾಗಿಯೂ ತನ್ನದೇ ಆದ ಅನನ್ಯತೆಯೊಂದು ಇರುತ್ತದೆ. ಅದನ್ನು ಪೂರ್ಣವಾಗಿ ಸಾಹಿತ್ಯವೊಂದರಿಂದಲೇ ಕಂಡುಕೊಳ್ಳಲಾಗುವುದಿಲ್ಲ. ಅದು ಮನಸ್ಸಿನ ವಿಶಿಷ್ಟತೆಯಿಂದಲೇ ಸಾಧ್ಯ.

ಯಾವುದೋ ಒಂದು ಕೃತಿ, ದೇಶ, ಕಾಲ, ಸ್ಥಳಗಳ ಮಿತಿಯಿಲ್ಲದೆ ಸಹೃದಯರನ್ನು ತಲುಪುತ್ತದೆ. ಅಲ್ಲಿ ಆ ದೇಶದ ಸಂಸ್ಕೃತಿ, ಆಚಾರ ವಿಚಾರಗಳು, ಬದುಕಿನ ಬಗೆಗಿನ ದೃಷ್ಟಿಕೋನಗಳು ಓದುಗರಿಗೆ ಮುಖ್ಯವೆನಿಸುವುದಿಲ್ಲ. ಆದರೆ ಆ ಕೃತಿಯ ಆಶಯ, ತನ್ನ ಅನುಭವದೊಂದಿಗಿನ ಸಾಮ್ಯತೆ, ಹೀಗೆ ಅನೇಕ ಅಂಶಗಳೇ ಕೃತಿಯನ್ನು ದೇಶ, ಭಾಷೆ, ಸಂಸ್ಕೃತಿಯ ಗಡಿಯಾಚೆಯು ಮಹತ್ವದನ್ನಾಗಿಸುತ್ತದೆ. ಹಾಗೆಯೇ ಮನುಷ್ಯರ ಮನಸ್ಸಿನ ಭಾವನೆಗಳು, ಅಸಭ್ಯ, ಅನಾಗರಿಕ, ಅನೈತಿಕ ಬಯಕೆಗಳು, ಸಾಮಾಜಿಕ, ಕೌಟುಂಬಿಕ ಪರಿಸರದ ಕಾರಣದಿಂದ

ಹತ್ತಿಕ್ಕಲ್ಪಟ್ಟಿರುತ್ತವೆ. ಅಂತಹ ಭಾವನೆಗಳು ಬಿಡುಗಡೆ ಹೊಂದಲು ಕಾಯುತ್ತಿರುತ್ತವೆ. ಹಾಗೆ ಉಳಿದು, ಬೆಳೆದು ಶಕ್ತಿಯುತವಾಗಿ ಹಲವು ಬಗೆಯಲ್ಲಿ ವ್ಯಕ್ತಿಯ ಮೇಲೆ ಪ್ರಭಾವ ಬೀರುತ್ತವೆ. ವ್ಯಕ್ತಿಯ ಜಾಗೃತ ಮನಸ್ಸು ಶಕ್ತಿಯುತವಾಗಿದ್ದರೆ ಪರೋಕ್ಷವಾಗಿ ಅದು ಆತನ ವರ್ತನೆಯ ಮೇಲೆ ಪ್ರಭಾವ ಬೀರುತ್ತದೆ. ಇಲ್ಲವೇ ಕನಸಿನಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಒಂದು ವೇಳೆ ವ್ಯಕ್ತಿಯ ಮನಸ್ಸು ಬಲಹೀನವಾಗಿದ್ದರೆ ಮನಃಸ್ವಾಸ್ಥ್ಯ ಕಳೆದುಕೊಳ್ಳುತ್ತಾನೆ. ಹಾಗಾಗಿಯೇ ಮನಸ್ಸು ಉದಾತ್ತೀಕರಣಗೊಂಡು (sublimation), ಕಲೆ, ಸಾಹಿತ್ಯದ ಮೂಲಕ ನೆರವಾಗುತ್ತದೆ. ಈ ಅರ್ಥದಲ್ಲಿಯೇ ಕಲೆ ಸಾಹಿತ್ಯಗಳು ಎರಡು ರೀತಿಯ ಪರಿಣಾಮಗಳಿಗೆ ಕಾರಣವಾಗಬಹುದು. ಕಲಾಕಾರನು ತನ್ನ ಭಾವನೆಗಳ ಒತ್ತಡದಿಂದ ಬಿಡುಗಡೆಗೊಂಡರೆ, ಸಹೃದಯನು ತನ್ನನ್ನು ಮನೋಪ್ರಜ್ಞೆಯ ಆಚೆಗೂ ವಿಸ್ತರಿಸಿಕೊಳ್ಳಲು, ಕಂಡುಕೊಳ್ಳಲು ಕಾರಣವಾಗುತ್ತದೆ.

ಈ ಮೇಲ್ಕಂಡ ಅರ್ಥದಲ್ಲಿ ಸಾಹಿತ್ಯವನ್ನು ಕೇವಲ ಆಂತರಿಕ ಲೈಂಗಿಕ ತುಮುಲಗಳ, ಅನೈತಿಕ ಭಾವನೆಗಳ, ಅಸಭ್ಯ ಬಯಕೆಗಳ ಅಲಂಕೃತ ಅಭಿವ್ಯಕ್ತಿ ಎಂದು ಪರಿಭಾವಿಸಲಾಗುವುದಿಲ್ಲ. ಯಾವುದನ್ನು ವ್ಯಕ್ತಿ ಸಾರ್ವತ್ರಿಕ ನೆಲೆಯಲ್ಲಿ ಹೊರಗೆಡಹಲು ಸಾಧ್ಯವಿಲ್ಲವೊ ನೈತಿಕ, ಸಾಮಾಜಿಕ, ಸಾಂಸ್ಕೃತಿಕ, ಪ್ರಜ್ಞೆಗಳ ಹಿಡಿತದಿಂದ ತಪ್ಪಿಸಿಕೊಳ್ಳಲಾರದ ಸಂದರ್ಭಗಳು ಎಲ್ಲವನ್ನು ಮೀರುವ ಪ್ರಯತ್ನವೆಂದು ಭಾವಿಸಬಹುದು. ಇದನ್ನು ಯಾವ ವೈಜ್ಞಾನಿಕ ಸಿದ್ಧಾಂತಗಳ ನೆರವಿನಿಂದ ವಿವರಿಸಲು ಸಾಧ್ಯವಾಗುವುದಿಲ್ಲ. ಅದೊಂದು ಬಗೆಯ ಪ್ರಜ್ಞಾಪ್ರವಾಹ. ಮನಃಶಾಸ್ತ್ರದ ಅವಶ್ಯಕತೆಯು ಇಂತಹ ಹಲವಾರು ಸಂದರ್ಭಗಳಲ್ಲಿ ಮಹತ್ವದ್ದೆನಿಸುತ್ತದೆ.

ಮಾನವ ಮನಸ್ಸು ಕೇವಲ ದಮನಗೊಂಡ ಬಯಕೆಗಳ ಸಂಗ್ರಹಕಾರ ಮಾತ್ರವಲ್ಲ. ವಾಸ್ತವ ಬದುಕನ್ನು ಮೀರಿದ ಕಲ್ಪನೆಗಳು ಚಿಂತನೆಗಳು ಊಹಿಸಲು, ಕಲ್ಪಿಸಲು ಸಾಧ್ಯವಾಗದೆ ವ್ಯಕ್ತಿಯ, ಆಂತರ್ಯದೊಂದಿಗೆ ಸಂಘರ್ಷಕ್ಕಿಳಿಯುತ್ತವೆ. ಅದನ್ನು ಸಾಕಾರಗೊಳಿಸುವುದು ಅಸಾಧ್ಯವೆಂದೂ ತಿಳಿದಿದ್ದರೂ ಸಾಧ್ಯವಾಗಿಸುವ ಹಠವಿರಬಹುದು. ಬದುಕು ವಿಕಾಸದ ಹಂತದಲ್ಲಿಯೇ ಕೇಡಿಗೆ ಈಡಾಗಬಹುದು. ಅಥವಾ ಬದುಕೆಂದರೆ ಸುಂದರ, ಸುಮಧುರ ಎಂಬ ಭಾವನೆಗೆ ಕಾರಣವಾಗಿರಬಹುದು. ಇವೆಲ್ಲವನ್ನು ಮೀರಿ ಸೃಷ್ಟಿ, ಸ್ಥಿತಿಯ ಕುರಿತ ಪ್ರಶ್ನೆಗಳು ಮನುಷ್ಯನ ಮನೋ ಲೋಕವನ್ನು ಅಲ್ಲಾಡಿಸಬಹುದು. ದೇವರು, ಪ್ರಕೃತಿ, ಆಧ್ಯಾತ್ಮದ ಅಮೂರ್ತತೆಯ ಗೊಂದಲಗಳೂ ಕೂಡಾ ತೃಪ್ತಗೊಳ್ಳದೆ ಅದಕ್ಕೊಂದು ಉತ್ತರ ಕಂಡುಕೊಳ್ಳುವ, ಮಾರ್ಗವಾಗಿಯೂ ಕಲೆ, ಸಾಹಿತ್ಯದಂತಹ ಸೃಜನಶೀಲ ಪ್ರಕ್ರಿಯೆಗಳಿಗೆ ಕಾರಣವಾಗುವುದೆಂದೇ ತೋರುತ್ತದೆ.

ಮನುಷ್ಯ ಪ್ರಜ್ಞೆಯು ನಾಗರಿಕತೆಯ ಅನುಭವವನ್ನು ದಾಖಲಿಸುವ ಪರಂಪರೆ ಶತಶತಮಾನಗಳ ಹಿಂದೆಯೇ ರೂಢಿಯಲ್ಲಿದೆ. ಬದಲಾದ ಕಾಲಕ್ಕೆ ತಕ್ಕಂತೆ ಪ್ರಜ್ಞೆಯೂ, ಗ್ರಹಿಕೆಯೂ, ಧೋರಣೆಯೂ ಬದಲಾಗುತ್ತಲೇ ಇದೆ. ಯಾವುದೂ ಕೂಡಾ ಅಖಂಡ ಸತ್ಯವಾಗಿ ಉಳಿದಿಲ್ಲ. ಹೊಸ ಹೊಸ

ಅನ್ವೇಷಣೆಗಳು, ಹುಡುಕಾಟಗಳು ಅಂದು ಇತ್ತು, ಇಂದೂ ಇದೆ; ಮುಂದುವರೆಯುತ್ತಲೇ ಇರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಹೇಳುವುದಾದರೆ ಸಾಹಿತ್ಯ ಪಠ್ಯಗಳ ಅಧ್ಯಯನ ಸಂದರ್ಭವು ಪಾತ್ರಗಳು, ಘಟನೆಗಳು, ಕಾರ್ಯಕಾರಣ ಸಂಬಂಧಗಳ ಸೂಕ್ಷ್ಮ ಒಳನೋಟವನ್ನು ಒದಗಿಸುವಲ್ಲಿ ಮನೋವಿಜ್ಞಾನದ ಶಿಸ್ತು ಅನಿವಾರ್ಯವೂ, ಅವಶ್ಯಕವೂ ಆಗಿದೆ. ಸಾಹಿತ್ಯದಲ್ಲಿ ಸನ್ನಿವೇಶ ಮತ್ತು ಪಾತ್ರಗಳನ್ನು ಕುರಿತು ಅಧ್ಯಯನ ಮಾಡುತ್ತೇವೆ. ಸಾಹಿತ್ಯ ಪಾತ್ರಗಳಿಗೆ ಭಾವನೆಗಳನ್ನು ತುಂಬಿಸಿರುತ್ತದೆ. ಆ ಭಾವನೆಗಳಿಗೆ ಕಾರಣವಾದ ಪ್ರಚೋದನೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಮನಃಶಾಸ್ತ್ರ ನೆರವಾಗುತ್ತದೆ. ಸಾಹಿತ್ಯ ಪಠ್ಯದೊಳಗಿನ ಪಾತ್ರಗಳು ಕ್ರಿಯೆಗಳು ವರ್ತನೆಗಳ ಮೂಲಕ ವ್ಯಕ್ತವಾಗುತ್ತದೆ. ಸಾಹಿತ್ಯ ಕೃತಿಗಳ ಫೀಲಿಂಗ್‌ನ ಅಧ್ಯಯನ ಎಂದರೆ ಮನಃಶಾಸ್ತ್ರೀಯ ಅಧ್ಯಯನ ಎಂದರ್ಥ.

ಯಾವುದೇ ಪಾತ್ರವು ತನ್ನಷ್ಟಕ್ಕೆ ತಾನು ಅಂದುಕೊಳ್ಳುವುದು ಕಾರಣವಿಲ್ಲದೆ ಯಾವುದೋ ಒಂದು ಕ್ರಿಯೆಗೆ ಭಿನ್ನವಾದ ವರ್ತನೆಯನ್ನು ತೋರುವುದು. (ಶರೀರ, ಭಂಗಿ, ಹಾವ, ಭಾವ, ಅಸಹನೆ, ಸಂತೋಷ, ಹತಾಶೆ, ವ್ಯಂಗ್ಯ) ಯಾವುದೋ ಒಂದು ಎಳೆ, ಯಾವುದೋ ಒಂದು ಭಾವನೆ ಮುಂದಿನ ಕಥಾ ಬೆಳವಣಿಗೆಗೆ ಕಾರಣವಾಗಿಬಿಡುತ್ತವೆ. ಇಂತಹ ಸಾಧ್ಯತೆಗಳನ್ನು ಗ್ರಹಿಸಲು ಮನಃಶಾಸ್ತ್ರೀಯ ಶಿಸ್ತು ಸಹಾಯಕವಾಗುತ್ತದೆ.

ಒಟ್ಟಾರೆ ಸಾಹಿತ್ಯ ಪಠ್ಯಗಳಲ್ಲಿ ಸಾಹಿತಿಯ ಭಾವ ಲಹರಿ ಹಾಗೂ ಸ್ವ-ಮೌಲ್ಯಮಾಪನ ಒಂದನ್ನೊಂದು ಪ್ರಭಾವಿಸುತ್ತವೆ. ವ್ಯಕ್ತಿಗಳು ತಮ್ಮನ್ನು ನಕಾರಾತ್ಮಕವಾಗಿ ಅಥವಾ ಸಕಾರಾತ್ಮಕವಾಗಿ ಮೌಲ್ಯಮಾಪನ ಮಾಡಿಕೊಳ್ಳುವ ಪ್ರಕ್ರಿಯೆ ಹೌದು. ವ್ಯಕ್ತಿ ತಾನು ಏನಾಗಿದ್ದೇನೆ, ಏನಾಗಬೇಕೆಂದಿದ್ದೆ ಎಂಬುದರ ನಡುವಣ ಅಂತರವು 'ಸಾಮಾಜಿಕ ಸ್ವ' (ಈಗ ಏನಾಗಿದ್ದಾನೋ ಅದು) 'ಆದರ್ಶ ಸ್ವ' (ಆಸೆ, ಆಕಾಂಕ್ಷೆಗಳನ್ನು ಆಧರಿಸಿ ಏನಾಗಬೇಕೆಂದಿದ್ದಾರೋ ಅದು) ಮತ್ತು ವಿಧಿ 'ಸ್ವ' (ought-self) ಕರ್ತವ್ಯ ಹಾಗೂ ಜವಾಬ್ದಾರಿ ಇವುಗಳೆಲ್ಲವೂ ಅವ್ಯಕ್ತ ಸ್ಥಿತಿಯಿಂದ ವ್ಯಕ್ತ ಸ್ಥಿತಿಗೆ ಸಾಹಿತ್ಯದ ಪ್ರಕ್ರಿಯೆಯ ಮೂಲಕ ಅನಾವರಣಗೊಳ್ಳುತ್ತದೆ. ಮಾನವನ ಆಂತರಿಕ ಹಾಗೂ ಬಾಹ್ಯ ಜಗತ್ತಿನ ಜಟಿಲ ಪ್ರಕ್ರಿಯೆಗಳ ತತ್ವ ಪ್ರತೀಕವು ಅಭಿವ್ಯಕ್ತಗೊಂಡಾಗ ಅದನ್ನು ಅರ್ಥೈಸುವಲ್ಲಿ ಮುಖಾಮುಖಿಯಾಗುವ ಮನುಷ್ಯನ ವೈಯಕ್ತಿಕತೆಯು ಸುಪ್ತ ಲೋಕ ಮತ್ತು ವಾಸ್ತವ ಲೋಕಗಳ ನಡುವಿನ ಸಂಘರ್ಷಗಳನ್ನು ಎದುರಿಸುವ ಸಂದರ್ಭಗಳು ಸಾಹಿತ್ಯ ರಚನೆಯ ಪ್ರಕ್ರಿಯೆಯಲ್ಲಿ ಕಾಣಬಹುದು. ಇಂತಹ ಸಾಹಿತ್ಯದ ಸಂಕೀರ್ಣ ಸ್ವರೂಪವನ್ನು ಮನಃಶಾಸ್ತ್ರೀಯ ಶಿಸ್ತಿನ ಮೂಲಕ ಹೆಚ್ಚು ಪರಿಣಾಮಕಾರಿಯಾಗಿ, ನ್ಯಾಯಯುತವಾಗಿ ಗ್ರಹಿಸುವ ದೃಷ್ಟಿಕೋನವನ್ನು ಒದಗಿಸುತ್ತದೆ. ಆನೇಕ ವಿಚಾರ ಶೂನ್ಯತೆಯ ಜೊತೆಗೆ ವೈಚಾರಿಕತೆಯ,

ಅವಿವೇಕದ ಜೊತೆ ವಿವೇಕವೂ, ಅನೀತಿಯ ಜೊತೆಗೆ ನೈತಿಕತೆಯೂ ಪರಂಪರಾನುಗತವಾಗಿ ಬಂದಿರುವ ಪೂರ್ವ ಪ್ರವಣತೆಗಳು ಇವೆಲ್ಲವನ್ನು ಮನೋ ಲೋಕದ ಒಳಹೊಕ್ಕು ನೋಡುವುದರಿಂದ ಮಾತ್ರ ಗ್ರಹಿಕೆಗೆ ಸಿಲುಕುತ್ತವೆ, ಅರ್ಥವತ್ತಾಗುತ್ತವೆ. ಮನಃಶಾಸ್ತ್ರದ ಶಿಸ್ತು ಸಾಹಿತ್ಯದಂತಹ ಸೃಜನಶೀಲ ಪ್ರಕ್ರಿಯೆಯ ಮೂಲ ಸ್ವರೂಪವನ್ನು ಅರಿಯಲು ಹೆಚ್ಚಿನ ಸೂಕ್ಷ್ಮ ಒಳನೋಟವನ್ನು ಒದಗಿಸುವಂತಹದ್ದು.

ಸಾಹಿತ್ಯ ಮತ್ತು ಮನಶಾಸ್ತ್ರದ ತಾತ್ವಿಕ ಸ್ವರೂಪ

"ಮನುಷ್ಯನ ಮೆದುಳಿನಲ್ಲಿ ಭಾಷೆ ಹುಟ್ಟಿದ ಘಟನೆಯಷ್ಟೇ ಅದ್ಭುತವಾದ ಘಟನೆ 'ಪ್ರಶ್ನೆ' ಹುಟ್ಟಿದ್ದೇ ಇರಬೇಕು. ಹಾಗೆಯೇ ಮಾನವ ಪ್ರಜ್ಞೆಯ ಇತಿಹಾಸದಲ್ಲಿ 'ಪ್ರಶ್ನೆ' ಹುಟ್ಟಿದ ಕ್ಷಣ ಶಬ್ಧ ಹುಟ್ಟಿದ ಕ್ಷಣದಷ್ಟೇ ಕ್ರಾಂತಿಕಾರಿಯಾದುದು" ಎಂಬ ಯಶವಂತ ಚಿತ್ತಾಲರ ಹೇಳಿಕೆಯೊಂದಿಗೆ ಸಾಹಿತ್ಯ ಮತ್ತು ಮನೋವಿಜ್ಞಾನದ ಕುರಿತಾದ ಸ್ವರೂಪದ ಕುರಿತ ಚರ್ಚೆಯ ಪ್ರಾರಂಭವು ಅರ್ಥಪೂರ್ಣವಾಗುತ್ತದೆ. ನಾವಿರುವ ಈ ಕಾಲಘಟ್ಟ ಮಾರ್ಕ್ಸ್ ನಂತರದ, ಫ್ರಾಯ್ಡ್ ನಂತರದ ರಚನಾವಾದಿಗಳ ನಂತರದ ಯುಗ. ಈ ಯುಗದ ಆಹ್ವಾನಗಳೇ ಬೇರೆ. ಇಂತಹ ಕಾಲಘಟ್ಟಗಳಲ್ಲಿ ಸಾಹಿತ್ಯವೂ ಕೂಡಾ ಅನೇಕ ಬಗೆಯ ಪ್ರಭಾವ ಹಾಗೂ ಪ್ರೇರಣೆಗೆ ಒಳಗಾಗಿದೆ. ಸಾಹಿತ್ಯ ಸೃಷ್ಟಿಯು ಮನೋವಿಜ್ಞಾನವನ್ನು ಬಳಸಿಕೊಂಡಿದೆಯೋ ಎಂಬ ಪ್ರಶ್ನೆಗೆ ಉತ್ತರಿಸುವುದು ಸುಲಭವಲ್ಲ. ಏಕೆಂದರೆ ಸಾಹಿತ್ಯದ ಮೌಲ್ಯಮಾಪನಕ್ಕೆ ಮನೋವಿಜ್ಞಾನದ ನೆರವಿನ ಅಗತ್ಯವಿದೆ ಎಂದು ಹೇಳಲು ಬರುವುದಿಲ್ಲ. ಅದು ರಸಾನುಭವಕ್ಕೆ ಪೂರಕವಾಗಿ ಬರಬೇಕಾದುದೇ ವಿನಃ ಒತ್ತಾಯಪೂರ್ವಕವಾಗಿ ಹೇರುವುದಲ್ಲ. ಇದನ್ನು ಕುರಿತು ಮನೋವಿಜ್ಞಾನಿ ಆ್ಯಡ್ಲರ್ ಹೇಳುವ ಮಾತು ಇದು. "ಒಂದು ಕಲಾಕೃತಿಯ ಆಕರ್ಷಣೆ ಅದರ ಸಂಶ್ಲೇಷಣದಿಂದ ಹುಟ್ಟುತ್ತದೆ. ವಿಜ್ಞಾನದ ವಿಶ್ಲೇಷಣೆ ಅದನ್ನು ಕೆಡಿಸಿ ನಾಶಗೊಳಿಸಬಹುದು, ಕೆಲವೊಮ್ಮೆ ಮನೋವೈಜ್ಞಾನಿಕ ಒಳನೋಟ ಕಲಾಮೌಲ್ಯವನ್ನು ಹೆಚ್ಚಿಸಬಹುದು".

ಮನಸ್ಸು ಮತ್ತು ಅದರ ವ್ಯಾಪಾರಗಳ ಪ್ರಜ್ಞಾಪೂರ್ವಕ, ಅಪ್ರಜ್ಞಾಪೂರ್ವಕ, ವ್ಯವಸ್ಥಿತ ತತ್ವವೆಂಬ ಅರ್ಥದಲ್ಲಿ ಮನೋವಿಜ್ಞಾನ ಸಾಹಿತ್ಯಕ್ಕೆ ಅನಗತ್ಯ. ತನಗೆ ತಾನೆ ಅದು ಕಲಾ ಮೌಲ್ಯವನ್ನು ಪಡೆದಿಲ್ಲ. ಮನೋವಿಜ್ಞಾನವು ಸೃಷ್ಟಿಕ್ರಿಯೆಯ ಆಂತರ್ಯದಲ್ಲಿಯೇ ಘಟಿಸುವಂತಹದ್ದು. ಯಾವ ಸಾಹಿತಿಯೂ ಮನೋವಿಶ್ಲೇಷಣೆಯಿಂದ ಹೊರಟು ಸಾಹಿತ್ಯ ರಚಿಸುತ್ತೇನೆಂದು ಹೇಳಿಕೊಳ್ಳಲಾರ. ಸಾಹಿತ್ಯ ಪ್ರತಿಭಾಮೂಲವಾದದ್ದು. ಇನ್ನು ಯಾವುದೇ ರೀತಿಯ ಮನೋವೈಜ್ಞಾನಿಕ ಸ್ಪಷ್ಟೀಕರಣ ಸ್ವಲ್ಪವೂ ಇಲ್ಲದ ಸಾಹಿತ್ಯವೇ ಮನೋವಿಜ್ಞಾನಿಗೆ ಹೆಚ್ಚಿನ ಆಸಕ್ತಿಯನ್ನು ಉಂಟುಮಾಡವಂತಹದ್ದು. ಸಾಹಿತಿ ಮತ್ತು ಸಾಹಿತ್ಯವನ್ನು ಪರಿಶೀಲಿಸುವ ಮನೋವಿಜ್ಞಾನಿಯ ದೃಷ್ಟಿಕೋನ ಸಾಹಿತ್ಯ ವಿಮರ್ಶಕನಿಗಿಂತ ಭಿನ್ನವಾದುದು. ಸಾಹಿತ್ಯ ವಿಮರ್ಶಕನಿಗೆ ಮುಖ್ಯವೆನಿಸುವ

ಸಾಹಿತ್ಯಾಂಶಗಳು ಮನೋವಿಜ್ಞಾನಿಗೆ ಆಸಕ್ತಿಯನ್ನು ಉಂಟುಮಾಡುವುದಿಲ್ಲ. ಆದರೆ ಸಾಮಾನ್ಯವಾದ ಕೃತಿಯೊಂದು ಆತನಿಗೆ ಆಸಕ್ತಿಯನ್ನು ನೀಡಬಹುದು. ಉದಾಹರಣೆಗೆ 'ಮನೋವಿಶ್ಲೇಷಣಾತ್ಮಕ' ಕಾದಂಬರಿಗಳೆಂದು ಪ್ರಸಿದ್ಧಿ ಪಡೆದು ವಿಮರ್ಶಕರ ಮೆಚ್ಚುಗೆಗೆ ಪಾತ್ರವಾಗುವ ಸಾಹಿತ್ಯ ಪ್ರಕಾರಗಳಲ್ಲಿ ಮನೋವಿಜ್ಞಾನಿಗೆ ಯಾವುದೇ ಆಸಕ್ತಿ ಇರುವುದಿಲ್ಲ. ಕಾರಣವಿಷ್ಟೆ. ಈ ಮನೋವಿಶ್ಲೇಷಣಾತ್ಮಕ ಕೃತಿಗಳು ತಮ್ಮನ್ನು ತಾವೇ ವಿವರಿಸಿಕೊಂಡು ಬಿಟ್ಟಿರುತ್ತವೆ. ಸಾಮಾನ್ಯವಾಗಿ ಈ ಕೃತಿಗಳು ಮನಃಶಾಸ್ತ್ರದ ಪರಿಚಯವಿರುವ ಸಾಹಿತಿಯ ರಚನೆಗಳಾಗಿರುತ್ತವೆ. ಇಲ್ಲಿ ಮನಃಶಾಸ್ತ್ರದ ಸೂತ್ರಗಳ ಅನ್ವಯ ನಡೆದಿರುತ್ತವೆ. ಆದುದರಿಂದ ಇಂತಹ ಕೃತಿಗಳಲ್ಲಿ ಈ ಸೂತ್ರಗಳು ಎಷ್ಟರಮಟ್ಟಿಗೆ ಕರಾರುವಕ್ಕಾಗಿ ಅನ್ವಯವಾಗಿವೆ ಎಂಬುದನ್ನು ಮನೋವಿಜ್ಞಾನಿ ವಿಮರ್ಶಿಸುವುದರ ಹೊರತಾಗಿ ಹೆಚ್ಚಿಗೆ ಏನೂ ಮಾಡಲಾರ. ಯಾವ ಕೃತಿಗಳು ಮನಃಶಾಸ್ತ್ರದ ನಿಯಮಗಳಿಗೆ ಅನುಸಾರವಾಗಿ ರಚಿತವಾಗಿಲ್ಲವೋ ಅವು ಅವನಿಗೆ ಪ್ರಿಯವಾಗುತ್ತವೆ. ಉದಾಹರಣೆಗೆ, ಕಾರಂತರ 'ಮೂಕಜ್ಜಿಯ ಕನಸುಗಳು' ಮನೋವಿಜ್ಞಾನಿಗೆ ಹಿತವಾದಷ್ಟು ತ್ರಿವೇಣಿಯವರ 'ಬೆಕ್ಕಿನ ಕಣ್ಣು' ಇಷ್ಟವಾಗದೆ ಇರಬಹುದು. ಕಾರಣವಿಷ್ಟೆ, ಮನೋವಿಜ್ಞಾನಿ ಇಂತಹವುಗಳಲ್ಲಿ ಹೇಳಬೇಕಾದ್ದು ಏನೂ ಇಲ್ಲವೆಂದು ಅರ್ಥ.

ಮೇಲಿನ ಈ ದೃಷ್ಟಿಕೋನವನ್ನಿಟ್ಟುಕೊಂಡೇ ಯೂಂಗ್ ಸಾಹಿತ್ಯ ಕೃತಿಗಳನ್ನು ಮನೋವೈಜ್ಞಾನಿಕ ಮತ್ತು ದಾರ್ಶನಿಕ ಎಂದು ಎರಡು ಬಗೆಯಾಗಿ ವಿಂಗಡಿಸಿದ್ದಾನೆ. ಮನೋವೈಜ್ಞಾನಿಕ ಕೃತಿಗಳು ಸಾಹಿತಿಯ ಜಾಗೃತ ಮನಸ್ಸಿನಿಂದ ಹುಟ್ಟಿಬಂದವು. ಇವು ಬಹಳಷ್ಟುಮಟ್ಟಿಗೆ ಜೀವನವನ್ನು ಪ್ರತಿಬಿಂಬಿಸುವಂತಹವು. ಇಲ್ಲಿ ಜೀವನದ ಕಾಮ–ಕ್ರೋಧಗಳು, ಕಷ್ಟ–ಕಾರ್ಪಣ್ಯಗಳು, ನೋವು–ನಲಿವುಗಳು ರಸವತ್ತಾಗಿ ಚಿತ್ರಿಸಲ್ಪಟ್ಟಿರುತ್ತವೆ. ಇವುಗಳ ರಚನೆಗೂ ಒಂದು ತಾರ್ಕಿಕತೆ ಇರುತ್ತದೆ. ಗಂಡು, ಹೆಣ್ಣು, ಆಕರ್ಷಣೆ, ಪ್ರೀತಿ, ಪ್ರೀತಿಯಲ್ಲಿ ಸೋಲು ಅಥವಾ ಗೆಲುವು ಹೀಗೆ ಇಂತಹ ಜನಜನಿತವಾದ ವಸ್ತು ಸಾಹಿತಿಯ ಶಬ್ದಭಂಡಾರದಿಂದ ಒಂದು ಲಲಿತ ಕೃತಿಯಾಗಿ ಅಥವಾ ದುರಂತ ಕಥೆಯಾಗಿ ಅಭಿವ್ಯಕ್ತಗೊಂಡರೆ ಅದು ಮನೋವೈಜ್ಞಾನಿಕ ಕೃತಿಗಳ ಗುಂಪಿಗೆ ಸೇರುತ್ತದೆ. ಸಾಮಾನ್ಯ ಓದುಗರು ಈ ಕೃತಿಗಳಲ್ಲಿ 'ಮನಃಶಾಸ್ತ್ರ'ವನ್ನು ಹುಡುಕಿಕೊಂಡು ಹೋಗುತ್ತಾರೆ. ಮನೋವಿಜ್ಞಾನಿ ದಾರ್ಶನಿಕ ಕೃತಿಗಳಲ್ಲಿರುವ ಗೂಡಾರ್ಥವನ್ನು ಹುಡುಕಿಕೊಂಡು ಹೋಗುತ್ತಾರೆ.

ದಾರ್ಶನಿಕ ಕೃತಿಗಳು ಎಂಬುದಾಗಿ ಯೂಂಗ್ ವಿಂಗಡಿಸಿರುವ ಸಾಹಿತ್ಯ ಕೃತಿಗಳ ವಸ್ತು ಓದುಗನಿಗೆ ತೀರಾ ಅಪರಿಚಿತ, ಅನಿರೀಕ್ಷಿತ, ಅನಪೇಕ್ಷಿತ, ಭಯಂಕರ, ಜಿಗುಪ್ಸೆ ಎಂಬಂತಹ ಭಾವಗಳನ್ನು ಉಂಟು ಮಾಡಬಹುದು. ಕೃತಿ ಹೇಗೆ ಹುಟ್ಟಿತು, ಏಕೆ ಹುಟ್ಟಿತು ಎನ್ನವುದು ಓದುಗನಿಗಿರಲಿ, ರಚಿಸಿದವನಿಗೂ ತಿಳಿಯುವುದಿಲ್ಲ. ಹಾಗಾದರೆ ಈ ಕೃತಿ ಅದೇ ಹುಟ್ಟಿತು ಎಂದರೆ ಬಹುಶಃ ಮನಃಶಾಸ್ತ್ರದ ಹುಡುಕಾಟ ಪ್ರಾರಂಭವಾಗುವುದು ಇಂತಹದರಿಂದಲೇ.

ಸಾಹಿತ್ಯ ರಚನೆ ಸ್ತ್ರೀ–ಪುರುಷರಿಬ್ಬರಿಂದಲೂ ನಡೆಯುವ ಪ್ರಕ್ರಿಯೆ. ಇಲ್ಲಿ ಪುರುಷನಿಂದ ರಚಿತಗೊಂಡ ಸಾಹಿತ್ಯ ಹಾಗೂ ಸ್ತ್ರೀಯರಿಂದ ರಚಿಸಲ್ಪಡುವ ಸಾಹಿತ್ಯಗಳು ಇವೆರಡರಲ್ಲೂ ಅನೇಕ ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಪ್ರತಿಯೊಂದು ಪುರುಷನಲ್ಲಿಯೂ 'ಸ್ತ್ರೀ' ಎನ್ನುವ ಕಲ್ಪನೆ ಇರುತ್ತದೆ. ಅವನ ಈ ಕಲ್ಪನೆ ಯಾವುದೇ ಒಂದು ಗೊತ್ತಾದ ಹೆಣ್ಣಿನ ಚಿತ್ರವಾಗಿರುವುದಿಲ್ಲ. ಅದು ಇಡೀ ಹೆಣ್ತನದ ಪ್ರತಿಬಿಂಬ. ಅದು ಸ್ತ್ರೀಯನ್ನು ಕುರಿತಾದ ಅವನ ಆದರ್ಶ ಚಿತ್ರಣವೂ ಹೌದು. ಅವನ ಹೆಣ್ಣಿನ ಆಯ್ಕೆ ಈ ಆದರ್ಶವನ್ನನುಸರಿಸಿಯೇ ಜರುಗುತ್ತದೆ. ಇದರಿಂದಾಗಿ ಹಲವು ವೇಳೆ ಅನಾಹುತಗಳು ನಡೆಯುತ್ತವೆ. ಏಕೆಂದರೆ ಗಂಡಸಿನ ಆದರ್ಶ ಸ್ತ್ರೀ ಕಲ್ಪನೆಗೂ, ವಾಸ್ತವದ ಸ್ತ್ರೀಗೂ ವ್ಯತ್ಯಾಸವಿರುವುದು ಸಹಜ. ಆದುದರಿಂದ ವೈವಾಹಿಕ ಬಂಧನಕ್ಕೊಳಗಾದ ಬದುಕಿನಲ್ಲಿ ಗಂಡಸು ನಿರಾಶನಾಗುವ ಸಂಭವ ಹೆಚ್ಚು. ಅಂತಹ ವ್ಯಕ್ತಿ ಜೀವನದಲ್ಲಿ ತಾನು ವಂಚಿತನಾದಂತೆ ಭಾವಿಸಿಕೊಳ್ಳಬಹುದು. ಗಂಡ ಹೆಂಡಿರ ನಡುವಿನ ವೈಮನಸ್ಸಿಗೆ ಪ್ರಮುಖ ಕಾರಣಗಳಲ್ಲಿ ಇದು ಒಂದು. ಹಾಗಾದರೆ ಪುರುಷನ ಸ್ತ್ರೀ–ಕಲ್ಪನೆ ಹಾಗೆ ಇರಬೇಕು, ಹಾಗೆಯೇ ಇರುತ್ತದೆ ಎಂಬುದಕ್ಕೆ ಸ್ಪಷ್ಟವಾದ ಕಾರಣಗಳೇನು ಇದುವರೆವಿಗೂ ಸ್ಪಷ್ಟವಾಗಿಲ್ಲ. ಆದರೆ ಮನಸ್ಸಿನ ಪ್ರಭಾವಕ್ಕೊಳಗಾಗಿ ಪುರುಷ ತಾನು ರೂಪಿಸಿಕೊಳ್ಳುವ ಸ್ತ್ರೀ ಚಿತ್ರಣಕ್ಕೆ ವಿಶಿಷ್ಟ ಲಕ್ಷಣಗಳಿರುತ್ತವೆ. ಅವೆಲ್ಲವೂ ಅತ್ಯಂತ ಗುಣಾತ್ಮಕತೆಯ ದೃಷ್ಟಿಕೋನದಿಂದ ರೂಪಿತಗೊಂಡಂತಹವು. ಹಾಗೆಯೇ ಪ್ರತಿಯೊಬ್ಬ ಹೆಣ್ಣಿಗೂ ಪುರುಷನ ಬಗೆಗಿನ ಕಲ್ಪನೆ ವಾಸ್ತವಕ್ಕಿಂತ ಭಿನ್ನವಾಗಿರುತ್ತದೆ. ಕಲ್ಪನೆ ಮತ್ತು ವಾಸ್ತವಗಳ ತಾಕಲಾಟಗಳು ಮನಸ್ಸಿನ ಹತೋಟಿಯನ್ನು ಮೀರುವ ಸಂದರ್ಭಗಳಾಗಿ ಅನೇಕ ಬಗೆಯ ಅಭಿವ್ಯಕ್ತಿಗಳಿಗೆ ಕಾರಣವಾಗಬಹುದು. ದ್ವಂದ್ವತೆ ಎನ್ನುವುದು ಮಾನವ ಜೀವನದ ಒಂದು ಅನಿವಾರ್ಯ ಕ್ರಿಯೆ. ವ್ಯಕ್ತಿತ್ವದ ಪ್ರಮುಖ ಘಟಕಗಳು ಸದಾ ಒಂದನ್ನೊಂದು ವಿರೋಧಿಸುತ್ತಿರುತ್ತವೆ. ಈ ಆತಂಕ ವಿರೋಧ ಬಿಕ್ಕಟ್ಟಿಗೆ ಎಡೆಮಾಡಿಕೊಡುತ್ತವೆ. ಪರಸ್ಪರ ವಿರೋಧ, ತುಮುಲ, ಬಿಕ್ಕಟ್ಟು, ಉದ್ವೇಗ ಇವು ವ್ಯಕ್ತಿತ್ವದ ವಿಕಾಸಕ್ಕೆ ಅನಿವಾರ್ಯ. ಬಿಕ್ಕಟ್ಟಿಲ್ಲದಿದ್ದರೆ ಶಕ್ತಿಯ ಬಿಡುಗಡೆಯಾಗುವುದಿಲ್ಲ. ಶಕ್ತಿಯ ಬಿಡುಗಡೆಯಿಂದ ಮಾತ್ರ ಕ್ರಿಯೆ ನಡೆಯಲು ಸಾಧ್ಯ. ಕ್ರಿಯೆಯಿಂದ ಮಾತ್ರ ವ್ಯಕ್ತಿತ್ವದ ಬೆಳವಣಿಗೆ ಸಾಧ್ಯ. ಈ ರೀತಿಯ ದ್ವಂದ್ವತೆಗಳಿದ್ದಾಗಲೇ ಹೊಸದರ ಸೃಷ್ಟಿ ಸಾಧ್ಯ. ಸಾಹಿತ್ಯಕ್ಕೂ ಇದನ್ನು ಅನ್ವಯಿಸಿ ನೋಡಬೇಕಾಗುತ್ತದೆ. ಸಾಹಿತ್ಯದ ಸೃಷ್ಟಿ ದ್ವಂದ್ವತೆ, ಬಿಕ್ಕಟ್ಟು, ಅತ್ಯಂತ ನೋವಿನ ಸಂದರ್ಭಗಳಲ್ಲಿಯೇ ಹೆಚ್ಚು ನಡೆದಿರುವುದು ಈಗಾಗಲೇ ಅನೇಕ ನಿದರ್ಶನಗಳಿಂದ ನಮ್ಮ ಅರಿವಿಗೆ ಬಂದಿದೆ. ಆದರೆ ಅದಕ್ಕಿರುವ ಮೂಲಭೂತ ಕಾರಣಗಳನ್ನು ಹುಡುಕಲು ಮನೋವಿಜ್ಞಾನದ ಮೊರೆ ಹೋಗಬೇಕಾಗುತ್ತದೆ. ಸಾಹಿತಿಯೊಬ್ಬ ಕೃತಿ ರಚನೆಗಿಂತ ಪೂರ್ವದಲ್ಲಿ ದ್ವಂದ್ವತೆಗೆ, ಉದ್ವೇಗಕ್ಕೆ, ನೋವಿಗೆ ಒಳಗಾಗಿದ್ದಲ್ಲಿ ಸಾಹಿತ್ಯವೊಂದು ಎಲ್ಲಾ ಬಗೆಯ ರಸಗಳು, ಸಂತೋಷಗಳು, ನೋವುಗಳು, ನಲಿವುಗಳು, ದುರಂತಗಳು ಎಲ್ಲವನ್ನೂ ಒಳಗೊಳ್ಳುವುದಾದರೂ ಹೇಗೆ? ಸಾಮಾನ್ಯವಾಗಿ ಗ್ರಹಿಸಬಹುದಾದ ಗ್ರಹಿಕೆಗಳು, ಭಾವನೆಗಳು,

ಚಿಂತನೆಗಳು ಅಥವಾ ಪರಿಕಲ್ಪನೆಗಳು ಅದನ್ನು ವ್ಯಕ್ತಿಯೊಬ್ಬನ ಸೂಕ್ಷ್ಮ ಒಳನೋಟಗಳು ಸಾಹಿತ್ಯ ರಚನೆಯ ಮೂಲಕ ಒಂದು ನಿರ್ದಿಷ್ಟ ರೂಪವನ್ನು ಪಡೆದುಕೊಳ್ಳುತ್ತವೆ. ಹಾಗೇ ನಿರ್ದಿಷ್ಟ ರೂಪ ಪಡೆದುಕೊಳ್ಳುವಾಗ ಸಾಹಿತಿಯು ತನ್ನ ಅರಿವಿನ ಲೋಕವನ್ನು ಈ ಮೂಲಕ ವಿಸ್ತರಿಸಿಕೊಳ್ಳುತ್ತಾ ಹೋಗುತ್ತಾನೆ. ಅಥವಾ ಮಾರ್ಪಡಿಸುವ ಕಾರ್ಯವನ್ನು ಮಾಡುತ್ತಾನೆ. ಆಗ ಈವರೆಗೆ ಸಾಹಿತಿಯ ಅರಿವಿನಲ್ಲಿದ್ದ, ಸಹೃದಯರ ಅಥವಾ ಓದುಗರ ಅರಿವಿನಲ್ಲಿ ಇಲ್ಲದ ಸಂಗತಿಯೊಂದು ನಿರ್ಮಿಸಲ್ಪಡುತ್ತದೆ. ಈ ದೃಷ್ಟಿಕೋನದಿಂದಲೇ ಮನಃಶಾಸ್ತ್ರದ ಮೂಲಕ ಸಾಹಿತ್ಯವನ್ನು ಅರಿಯುವ ಪ್ರಯತ್ನ ನಡೆಸಬೇಕಾಗುತ್ತದೆ. ಅಂದಮೇಲೆ ಓದುಗರ ಅಥವಾ ಸಹೃದಯರ ಗ್ರಹಿಕೆಯ ಲೋಕದಲ್ಲಿ ಇಲ್ಲದ ಸಂಗತಿಯೊಂದು ಸಾಹಿತ್ಯದ ಮೂಲಕ ವಿಸ್ತರಿಸಲ್ಪಟ್ಟಾಗ ಓದುಗರ ಅಥವಾ ಸಹೃದಯರ ಗ್ರಹಿಕೆಯು ಮಾರ್ಪಾಡು ಹೊಂದುವ ಮೂಲಕ ಮತ್ತಷ್ಟು ವಿಸ್ತಾರವನ್ನು ಪಡೆದುಕೊಳ್ಳುತ್ತದೆ. ಸಾಮಾನ್ಯ ಗ್ರಹಿಕೆಯ ಲೋಕಕ್ಕೆ ಹೊಸ ಸಂಗತಿಯೊಂದನ್ನು ಪರಿಚಯಿಸಬೇಕಾಗುವುದು ಒತ್ತಡಪೂರ್ವಕವಾಗಿ ನಡೆಯುವುದಲ್ಲ. ಸಾಹಿತ್ಯವು ಸ್ವಯಂಪೂರ್ಣ ಬಾಹ್ಯ ರಚನೆಯಾಗಿರುವುದಿಲ್ಲ. ಅದೊಂದು ಕ್ರಿಯಾತ್ಮಕ ಒಳನೋಟವೊಂದನ್ನು ಸದಾ ಅಡಗಿಸಿರುತ್ತದೆ. ಓದುಗರ ಅಥವಾ ಸಹೃದಯರಲ್ಲಿ ಹಲವು ಖಾಸಗಿ ಗ್ರಹಿಕೆಗಳೂ, ಕೆಲವು ಸರ್ವೇಸಾಮಾನ್ಯ ಗ್ರಹಿಕೆಗಳು ಅಥವಾ ಅಭಿಪ್ರಾಯಗಳು ನೆಲೆಸಿರುತ್ತವೆ. ಇಂತಹ ಸಾಮಾನ್ಯ ಗ್ರಹಿಕೆಯ ಲೋಕವನ್ನು ಭೌತ ವಾಸ್ತವದೊಂದಿಗೆ ಕ್ರಿಯಾತ್ಮಕವಾಗಿ ಜೋಡಿಸುವ ಹಾಗೂ ಸತ್ಯವನ್ನು ಬೇರೊಂದು ದೃಷ್ಟಿಕೋನದ ಆಯಾಮದಿಂದ ನೋಡುವ ಪ್ರಯತ್ನವೇ ಸಾಹಿತ್ಯವನ್ನು ಮನಃಶಾಸ್ತ್ರದ ಮೂಲಕ ನೋಡುವ ವಿಶ್ಲೇಷಿಸುವ ಪ್ರಯತ್ನ ಎಂದು ಹೇಳಬಹುದು.

ಸಾಹಿತ್ಯ ಮತ್ತು ಮನಶಾಸ್ತ್ರದ ಸಂಬಂಧ ಎಂತಹದು ಮತ್ತು ಸಾಹಿತ್ಯದ ಉದ್ದೇಶವೇನು ಎಂಬ ಪ್ರಶ್ನೆಗಳಿಗೆ ದೊರೆಯುವ ಉತ್ತರವು ಭಿನ್ನಭಿನ್ನವಾಗಿರುವುದು ಸಾಧ್ಯ. ಏನೇ ಇರಲಿ, ಹಲವು ಸಾಹಿತ್ಯ ಪ್ರಕಾರಗಳು ಅನಾದಿ ಕಾಲದಿಂದಲೂ ಸೃಷ್ಟಿಯಾಗುತ್ತಲೇ ಇವೆ. ಸಾಹಿತ್ಯವನ್ನೊಳಗೊಂಡ ಸಂಸ್ಕೃತಿಗಳು ಅದಿಲ್ಲದ ಸಂಸ್ಕೃತಿಗಳಿಗಿಂತ ಹೆಚ್ಚು ಕಾಲ ಬಾಳಿವೆ ಮಾತ್ರವಲ್ಲ, ಎಷ್ಟೋ ಸಾಹಿತ್ಯವಿಲ್ಲದ ಸಂಸ್ಕೃತಿಗಳನ್ನು ಪಲ್ಲಟಗೊಳಿಸಿವೆ ಕೂಡಾ. ಮನುಷ್ಯನ ಮನಸ್ಸು ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಹದಗೊಳಿಸುವಲ್ಲಿ ಸಾಹಿತ್ಯವು ವಹಿಸುವ ಪಾತ್ರವೇ ಇದಕ್ಕೆ ಕಾರಣವಿರಬಹುದು. ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳುವುದು ಸಾಮಾಜಿಕ ವಿಕಾಸದ ಪ್ರಕ್ರಿಯೆಯಾಗಿದೆ. ಸಾಹಿತ್ಯವು ಈ ಪ್ರಕ್ರಿಯೆಯಲ್ಲಿ ತನ್ನ ಪಾತ್ರವನ್ನು ಹೇಗೆ ನಿರ್ವಹಿಸುತ್ತದೆ ಎಂದು ನೋಡುವಾಗ ಮತ್ತೊಂದು ಸಂಗತಿಯ ಮೇಲೆ ಗಮನ ಹರಿಸಬೇಕಾಗುತ್ತದೆ. ಮುಖ್ಯವಾಗಿ ಸಾಹಿತ್ಯವು ವಾಸ್ತವ ಪರಿಸ್ಥಿತಿಯ ಒಂದಂಶವನ್ನು ಆರಿಸಿಕೊಂಡು ಅದನ್ನು ಪರಿವರ್ತಿಸಿ ಅದಕ್ಕೆ ವಾಸ್ತವಕ್ಕಿಂತ ಭಿನ್ನವಾದ ಮತ್ತು ವಿಶಿಷ್ಟ ಅರ್ಥಗಳಿಂದ ಕೂಡಿದ ರೂಪವನ್ನು ಕೊಡುತ್ತದೆ. ಅಂದರೆ ಬಾಹ್ಯ ವಾಸ್ತವವನ್ನು ಮನುಷ್ಯನ ಅಂತಃ ಪ್ರವೃತ್ತಿಗಳಿಗೆ ಅನುಗುಣವಾದ ರೀತಿಯಲ್ಲಿ

ಪುನರ್ನಿರ್ಮಿಸುತ್ತದೆ. ಮಾನವನ ಅಂತಃಪ್ರವೃತ್ತಿಗಳು ಸುಪ್ತ ಪ್ರಜ್ಞೆಯ ಪ್ರೇರಕ ಶಕ್ತಿಯಾಗಿರುವುದರಿಂದ ಸಾಹಿತ್ಯವು ಬಾಹ್ಯ ವಾಸ್ತವವನ್ನು ವೈಯಕ್ತಿಕ ಆಕಾಂಕ್ಷೆಗಳಿಗೆ ಅನುಗುಣವಾಗಿಯೇ ವಿನ್ಯಾಸಗೊಳಿಸುತ್ತದೆ. ಬದುಕಿನ ಸಂತೋಷ, ವಿಷಾದ, ಕುರುಡು ವ್ಯಾಮೋಹ ಮೊದಲಾದವುಗಳನ್ನೇ ವಸ್ತುವಾಗಿಸಿಕೊಂಡು ಸಮಗ್ರವಾಗಿ ಚಿತ್ರಿಸುವ ಶ್ರೇಷ್ಠ ಸಾಹಿತ್ಯವು ಸಾಮಾಜಿಕವಾಗಿಯೂ, ಮಾನಸಿಕವಾಗಿಯೂ, ಜೈವಿಕವಾಗಿಯೂ ಮಹತ್ವದ್ದಾಗಿರುತ್ತದೆ.

ಸಾಹಿತ್ಯದಲ್ಲಿರುವ ಪ್ರತಿವಸ್ತುವು ಜಗತ್ತಿನ ಇರುವಿಕೆಯೂ, ಆಗುವಿಕೆಯೂ ಆಗಿರುತ್ತದೆ. ಈ ಜಗತ್ತಿನ ಪ್ರತಿ ವಸ್ತುವಿಗೂ ಸಾಮಾನ್ಯ ಮತ್ತು ವಿಶೇಷವೆಂಬ ಎರಡು ಗುಣಗಳಿರುತ್ತವೆ. ವಸ್ತುವಿನ ತಾರ್ಕಿಕ ದೃಷ್ಟಿಗೂ, ಅನುಮಾನವೇ ಮೊದಲಾದ ವಿಚಾರ ಸರಣಿಗೂ ನಿಲುಕುವುದು ಬಾಹ್ಯ ಮತ್ತು ಸಾಮಾನ್ಯ ಗುಣಗಳು ಮಾತ್ರ. ಸಾಹಿತ್ಯ ವಸ್ತುವಿನ ಅಂತರಂಗದ ವಿಶೇಷ ಗುಣಗಳು ಅನೇಕ ಸಂದರ್ಭದಲ್ಲಿ ಬಾಹ್ಯ ಗಮನಕ್ಕೆ ಬರುವುದಿಲ್ಲ. ಮನುಷ್ಯನು ತನ್ನ ಸುತ್ತಮುತ್ತಲಿನ ವಸ್ತುಗಳು ಮತ್ತು ಘಟನೆಗಳಿಂದ ತನಗೇನು ಉಪಯೋಗವಾದೀತು, ತಾನು ಅವುಗಳಿಂದ ಯಾವ ರೀತಿಯ ಪ್ರಯೋಜನ ಪಡೆದೇನು, ಅವುಗಳನ್ನು ತನ್ನ ಅನುಕೂಲಕ್ಕಾಗಿ ಹೇಗೆ ಬಳಸಿಕೊಳ್ಳಬಹುದು ಎಂದು ಸಾಮಾನ್ಯವಾಗಿ ಯೋಚಿಸುವ ಸಂದರ್ಭಗಳಲ್ಲಿ ವಸ್ತುಗಳ ಅಂತಃಸತ್ವವನ್ನು ಕುರಿತು ಪರ್ಯಾಲೋಚಿಸುವ ಅಪೇಕ್ಷೆಯಾಗಲೀ, ವ್ಯವಧಾನವಾಗಲೀ ಅವನಿಗೆ ಇರುವುದಿಲ್ಲ. ಅಲ್ಲದೇ ವ್ಯಾವಹಾರಿಕ ಜಗತ್ತಿನ ಲಾಭ, ನಷ್ಟಗಳ ಚಿಂತೆಯಲ್ಲಿದ್ದು ತನ್ನದೇ ಅಂತಃಶಕ್ತಿಗಳನ್ನು ಅರಿಯದೆ ಬದುಕನ್ನು ಬರಡಾಗಿಸಿಕೊಳ್ಳುವುದೂ ಉಂಟು. ಇಂತಹ ಸಂದರ್ಭಗಳಲ್ಲಿ ಸಾಹಿತ್ಯ ಸಾಮಾನ್ಯ ಮನುಷ್ಯರಲ್ಲಿ ಕೂಡ ಬದುಕಿನ ಉತ್ಸಾಹ ಭರವಸೆಗಳನ್ನು ಮೂಡಿಸುತ್ತದೆ. ಸತತವಾದ ಸೋಲು, ನಿರಾಸೆ ಮೊದಲಾದ ಕಹಿ ವಾಸ್ತವಗಳು ಕೂಡಾ ಸಾಹಿತ್ಯ ಕೃತಿಯಲ್ಲಿ ಔಚಿತ್ಯಪೂರ್ಣವಾಗಿ ಸಂಘಟನೆಗೊಂಡಾಗ ಆಳವಾದ ಅರ್ಥವನ್ನು ಒಳಗೊಂಡ ರೀತಿಯಲ್ಲಿ ಶೋಕತಪ್ತವಾದ ಮನಸ್ಸಿಗೂ ಒಂದು ಬಗೆಯ ಮುದ ನೀಡುತ್ತದೆ. ಇಂತಹ ಸಂದರ್ಭಗಳು ಮನೋವೈಜ್ಞಾನಿಕವಾಗಿ ವಿಶ್ಲೇಷಣೆಗೆ ಒಳಪಡಬೇಕಾಗುತ್ತದೆ. ಆಗ ಬೆಚ್ಚಿಬೀಳಿಸುವ ದುರಂತವು ಕೂಡಾ ಶ್ರೇಷ್ಠ ಸಾಹಿತ್ಯಕೃತಿಯಾಗಬಲ್ಲದು. ಸಾಹಿತ್ಯದ ದೃಷ್ಟಿಗೆ ಸಿಕ್ಕಿದೊಡನೆಯೇ ವಿಶ್ವದ ವಸ್ತುಗಳೆಲ್ಲ ತಮ್ಮ ಮೇಲು ಮುಸುಕನ್ನು ಕಳಚಿ ಒಳಗಿನ ವಿಶೇಷ ರೂಪವನ್ನು ಪ್ರದರ್ಶಿಸುತ್ತವೆ. ಈ ಒಳಗಿನ ವಿಶೇಷ ರೂಪಗಳನ್ನು ಮನೋವಿಜ್ಞಾನವು ಇನ್ನಷ್ಟು ಆಳದಿಂದ ವಿಭಿನ್ನ ಆಯಾಮಗಳಿಂದ ನೋಡಬೇಕಾಗುತ್ತದೆ. ಅತಿ ತುಚ್ಛವೆಂದು, ಸಾಮಾನ್ಯವೆಂದು ಸಾಹಿತ್ಯದಲ್ಲಿ ಕಂಡುಬಂದಂತಹದ್ದು ಕೂಡಾ ಮನೋವಿಜ್ಞಾನದ ನೆಲೆಯಲ್ಲಿ ಮಹತ್ವದ್ದೆಂದು ಗುರುತಿಸಲ್ಪಡುತ್ತದೆ. ಸಾವಿನಂತಹ ಸಾವನ್ನು ಕೂಡಾ ಕುತೂಹಲಕಾರಿಯಾಗಿ ಮಾಡಬಲ್ಲದು. ಸಾಹಿತಿಯ ಪ್ರತಿಭೆಯಿಂದಾಗಿ ರೂಪುಗೊಂಡ ಸಾಹಿತ್ಯ ಜಗತ್ತು, ಸಹೃದಯನ ಅಥವಾ ಓದುಗನ ಮನಸ್ಸು ಮತ್ತು ಬದುಕಿನ ವಾಸ್ತವಗಳಿಗೆ ಮುಖಾಮುಖಿಯಾಗುವುದರಲ್ಲಿಯೇ ಸಾಹಿತ್ಯದ ಮಹತ್ವ

ಅಡಗಿರುವಂತಹದ್ದು. ಅದು ಕೇವಲ ಓದುಗನ ಅಥವಾ ಸಹೃದಯನ ಬದುಕಿನ ವಾಸ್ತವ ಮಾತ್ರವೇ ಆಗಿರುವುದಿಲ್ಲ. ಅದು ಸಮಷ್ಠೀ ಬದುಕಿನ ಸಾಮೂಹಿಕ ಪ್ರಜ್ಞೆಯಾಗಿರುವುದರಿಂದಲೇ (ಯೂಂಗ್) ಸಾಹಿತ್ಯ ಸಾರ್ವಕಾಲಿಕ ಹಾಗೂ ಸಾರ್ವತ್ರಿಕ ಮೌಲ್ಯಗಳಿಗೆ ಒಳಗಾಗುವುದು. ಈ ಸಮಷ್ಠಿ ಬದುಕಿನ ಸಾಮೂಹಿಕ ಪ್ರಜ್ಞೆಯಿಂದಲೇ ಸಾಹಿತ್ಯವು ಮನಸ್ಸಿನ ಕ್ಷುದ್ರತೆ, ದೌರ್ಬಲ್ಯಗಳನ್ನು ದಾಟಿ ಸುತ್ತಲಿನ ಜಗತ್ತನ್ನು ಹೆಚ್ಚು ಭರವಸೆಯಿಂದ, ವಿಶಾಲ ದೃಷ್ಟಿಯಿಂದ ನೋಡಲು ವ್ಯಕ್ತಿಯನ್ನು ಸಮರ್ಥನನ್ನಾಗಿ ಮಾಡುತ್ತದೆ. ಗಾನ, ನೃತ್ಯಗಳಂತಹ ಸಾಮೂಹಿಕ ಆಚರಣೆಗಳಲ್ಲಿ ಭಾಗಿಯಾಗುವ ವ್ಯಕ್ತಿಯು ತಾತ್ಕಾಲಿಕವಾಗಿಯಾದರೂ ವಾಸ್ತವ ಲೋಕದಿಂದ ಬಿಡುಗಡೆ ಹೊಂದಿ ಒಂದು ಬಗೆಯ ಅರೆ ನಿದ್ರಾವಸ್ಥೆಗೆ ಸರಿಯುತ್ತಾನೆ. ಹಾಗೆಯೇ ಸಾಹಿತ್ಯವು ಕೂಡಾ ಓದುಗನನ್ನು ಅಂತಹ ಸ್ಥಿತಿಗೆ ತಂದು ನಿಲ್ಲಿಸುತ್ತದೆ. ಇದರಿಂದಾಗಿ ಪೂರ್ವ ಪರಿಚಿತ ಲೋಕದ ವಾಸ್ತವ ಸಂಬಂಧಗಳನ್ನು ಮುರಿಯುವುದು, ಕಟ್ಟುವುದು ಸಾಧ್ಯವಾಗುತ್ತದೆ. ಆದರೆ ಈ ನಿರ್ಮಾಣವು ಅನಿಯಮಿತವಾದುದಾಗಲೀ, ಯಾದೃಚ್ಛಿಕವಾದುದಾಗಲೀ ಅಲ್ಲ. ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಸಮಷ್ಠಿ ಪ್ರಜ್ಞೆಗೆ ಅನುಗುಣವಾಗಿ ಇಲ್ಲಿನ ವ್ಯವಹಾರವು ನಡೆಯುತ್ತದೆ. ಆದ್ದರಿಂದಲೇ ಸಾಹಿತ್ಯವನ್ನು ಸಮಷ್ಠಿ ಪ್ರಜ್ಞೆಯ ತಳಹದಿಯ ಮೇಲೆ ಅರಿಯಬೇಕಾದ ಅನಿವಾರ್ಯತೆ ಇದೆ.

ಸಾಹಿತಿಯು ತನ್ನ ವಿಶಿಷ್ಟವಾದ ಪ್ರತಿಭೆಯಿಂದ ವಿನೂತನ ಪ್ರಪಂಚವೊಂದನ್ನು ಸೃಷ್ಟಿಸುತ್ತಾನೆ. ಅಂದ ಮಾತ್ರಕ್ಕೆ ಅವರು ಬಳಸುವ ವಸ್ತು ಮತ್ತು ಸಂಗತಿಗಳು ಬೇರೆಲ್ಲಿಯೂ ಇರಲೇ ಇಲ್ಲವೆಂದು ಅರ್ಥವಲ್ಲ. ಯಕ್ಷಿಣಿ, ಇಂದ್ರಜಾಲಗಳ ನಂಬಿಕೆಯನ್ನು ಹೊರತುಪಡಿಸಿದರೆ ಶೂನ್ಯದಿಂದ ವಸ್ತುಗಳನ್ನು ಸೃಷ್ಟಿಸುವುದು ಸಾಧ್ಯವೆಂದು ಯಾವ ವಿವೇಕಶಾಲಿಯೂ ನಂಬಲಾರ. ಸಾಹಿತ್ಯದ ಮೂಲಕ ಸಾಮಗ್ರಿ ಕೂಡ ಲೋಕದಿಂದಲೇ ಬಂದಂತಹವು. ಲೋಕದ ಮೂಲಕ ಸಾಮಗ್ರಿ ದೊರಕಿದ್ದರೂ ಅದನ್ನು ನೋಡುವ ನೋಟ, ಸೂಕ್ಷ್ಮ ರೀತಿಯ ಗ್ರಹಿಕೆ, ಅದನ್ನು ತನ್ನ ಸಂವೇದನೆಗೆ ಒಳಪಡಿಸುವ ಬಗೆ ಎಲ್ಲವೂ ಸಾಹಿತಿಯ ಅಂತರಂಗದ ಮಾನಸಿಕ ಸ್ಥಿತಿಗತಿಗಳ ಮೇಲೆಯೇ ಅವಲಂಬಿತವಾಗಿರುತ್ತದೆ. ಸಾಹಿತಿಯ ಸೃಷ್ಟಿಯು ಕೇವಲ ತೋರಿಕೆ ಎಂದಾಗಲೀ, ಮನೋವಿಕಾರ ಎಂದಾಗಲಿ ಹೇಳುವುದು ಸುಲಭವಲ್ಲ. ಏಕೆಂದರೆ ಸಾಹಿತ್ಯವು ಸಾಹಿತಿಯ ಪ್ರಜ್ಞಾಪೂರ್ವಕವಾದ ಸ್ಥಿತಿಯಿಂದಲೇ ಸೃಷ್ಟಿಸಲ್ಪಟ್ಟಿರುತ್ತದೆ. ಆದ್ದರಿಂದ ಸಾಹಿತ್ಯ ಕೃತಿಯು ಅನುಭವವೂ, ವಾಸ್ತವೂ ಆಗಿರುತ್ತದೆ. ಆದರೆ ಅದನ್ನು ಕೇವಲ ಹೊರನೋಟದ ಮೂಲಕ ಅರ್ಥೈಸುವುದು ಸರಿಯಾದುದಲ್ಲ. ಏಕೆಂದರೆ ಸಾಹಿತ್ಯವು ಒಳಗೊಂಡಿರುವ ಅಂಶಗಳು ನಿಜವಾಗಿಯೂ ಅಸ್ತಿತ್ವದಲ್ಲಿವೆಯೇ? ಅಥವಾ ವಾಸ್ತವಕ್ಕೆ ಹತ್ತಿರವಾದುದ್ದೇ? ಕೇವಲ ಕಲ್ಪನೆ, ಊಹೆ ಅಥವಾ ದೂರದೃಷ್ಟಿಕೋನಗಳಿಗೆ ಸಂಬಂಧಪಟ್ಟಿದ್ದೇ? ಎಂಬಂತಹ ಅನೇಕ ಯೋಚನಾ ಆಯಾಮಗಳು ಮತ್ತು ಅದಕ್ಕಿರುವ ಸಾಧ್ಯತೆಯನ್ನು ನಾವು ಅಲ್ಲಗಳೆಯಲು ಬರುವುದಿಲ್ಲ. ಇಂತಹ ಆಯಾಮಗಳಲ್ಲಿ ಮನಃಶಾಸ್ತ್ರದ ದೃಷ್ಟಿಕೋನವು ಪ್ರಮುಖವಾದುದೆಂದು ಅನ್ನಿಸುತ್ತದೆ.

ವ್ಯಕ್ತಿಯ ಅಥವಾ ಪಾತ್ರಗಳ ಅಥವಾ ಘಟನೆಗಳ ಬಾಹ್ಯ ನೋಟದ ವಸ್ತುಸ್ಥಿತಿಯು ಮಾನವ ವರ್ತನೆಯ ರೂಪದಲ್ಲಿ ವ್ಯಕ್ತವಾಗುವುದು. ಈ ವರ್ತನೆಗಳು ಬಾಹ್ಯ ಗ್ರಹಿಕೆಗೆ ಮಾತ್ರ ಸೀಮಿತವಾಗುವುದರಿಂದಲೇ ಅನೇಕ ಬಾರಿ ಪಾತ್ರಗಳನ್ನು, ಘಟನೆಗಳನ್ನು ನೋಡುವ ನೋಟಕ್ರಮವು ತೀರಾ ಸಂಕುಚಿತವಾಗಿಬಿಡುವ ಸಾಧ್ಯತೆಗಳು ಇವೆ. ಇದಕ್ಕೆ ಈಗಾಗಲೇ ಅನೇಕ ನಿದರ್ಶನಗಳು ನಮ್ಮ ಕಣ್ಣ ಮುಂದೆ ಇವೆ. ಸಾಹಿತ್ಯ ವಿಮರ್ಶೆಗಳನ್ನು ಗಮನಿಸಿದಾಗ ಒಂದೇ ಘಟನೆ, ವಸ್ತು, ವಿಷಯಗಳನ್ನೊಳಗೊಂಡ ಒಂದು ಸಾಹಿತ್ಯ ಕೃತಿಯ ಬಗೆಗಿನ ವಿಮರ್ಶಕರ ಭಿನ್ನ ಭಿನ್ನ ಧೋರಣೆಗಳು ನಮ್ಮ ಕಣ್ಣೆದುರಿಗೆ ಇವೆ. ಇಲ್ಲಿ ವಿಮರ್ಶಕರ ಧೋರಣೆಗಳು ಸರಿ ಅಥವಾ ತಪ್ಪು ಎಂಬುದಾಗಿ ಪರಿಭಾವಿಸಲು ಸಾಧ್ಯವಿಲ್ಲ. ಶ್ರೇಷ್ಠ ಸಾಹಿತ್ಯವು ತನ್ನೊಳಗೆ ಅಗಾಧ ವಿಶ್ವವನ್ನು ಅಡಗಿಸಿಟ್ಟಿರುತ್ತದೆ. ಮನುಷ್ಯನ ಅಂತಃಪ್ರೇರಣೆಗಳು, ಪ್ರಜ್ಞಾಪೂರ್ವಕ, ಅಪ್ರಜ್ಞಾಪೂರ್ವಕ ವಾಗಿ ಜಗತ್ತಿನ ಆಗುಹೋಗುಗಳಿಗೆ ಕಾರಣವಾಗಿರುತ್ತವೆ. ಅದನ್ನೇ ಸಾಹಿತ್ಯ ಕೃತಿಯು ಪ್ರತಿನಿಧಿಸುವುದು ಕೂಡಾ. ಅಂತಹ ಕೃತಿಯು ವಿಜ್ಞಾನದಿಂದ ತಿಳಿಯಲಾಗದ, ಮತಧರ್ಮಗಳು ಯಾವುದನ್ನು ತಿಳಿಸುವಂತೆ ಸೋಗು ಹಾಕುತ್ತವೆಯೋ ಅದರಿಂದಲೂ ತಿಳಿಯಲಾಗದ ಇನ್ನೊಂದು ಜಗತ್ತನ್ನು ಪ್ರತಿನಿಧಿಸುತ್ತವೆ. ಆ ಜಗತ್ತು ಮನ್ಯಷ್ಯನೆಂದರೆ ಏನು? ಅವನೇಕೆ ಹೀಗಿದ್ದಾನೆ? ಅವನೇಕೆ ನಿರಾಸೆಗಳಲ್ಲಿ ತೊಳಲಾಡುತ್ತಾನೆ? ಆತ ಪ್ರೀತಿಸುವುದೇಕೆ? ಪ್ರೀತಿಸಲ್ಪಡಲು ಹಾತೊರೆಯುವುದೇಕೆ? ಯಾವುದನ್ನು ಪ್ರೀತಿಸುತ್ತಾನೆ? ಅಷ್ಟೇ ಅದನ್ನು ದ್ವೇಷಿಸುತ್ತಾನೆ ಏಕೆ? ಎಂಬ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಇದನ್ನು ವಿವರಿಸಲು ಶಾಸ್ತ್ರಗಳ ಅಥವಾ ಮತಧರ್ಮಗಳ ಪರಿಭಾಷೆಯಲ್ಲಿ ಸಾಧ್ಯವಿಲ್ಲ. ಇಂತಹ ಸಂದರ್ಭಗಳಲ್ಲಿ ಮನಃಶಾಸ್ತ್ರವು ಪ್ರಮುಖ ಪಾತ್ರವನ್ನು ವಹಿಸಬೇಕಾಗುತ್ತದೆ.

ಫ್ರಾಯ್ಡ್ ತನ್ನ ಕನಸುಗಳ ವಿಶ್ಲೇಷಣೆಯಲ್ಲಿ ಹೇಳಿರುವುದನ್ನು ಆಧುನಿಕ ಮನೋವಿಜ್ಞಾನಿಗಳು ಒಪ್ಪದಿರಬಹುದು. ಆದರೂ ಕನಸುಗಳಿಗೆ ಇನ್ನಿತರ ಬಗೆಯ ಮಾನಸಿಕ ಚಟುವಟಿಕೆಗಳಿಗಿಂತ ಭಿನ್ನವಾದ ಕೆಲವು ವಿಶಿಷ್ಟ ಗುಣಗಳಿವೆ ಎಂಬುದನ್ನು ಸಾರಾಸಗಟಾಗಿ ತಳ್ಳಿಹಾಕಲು ಬರುವುದಿಲ್ಲ. ಸುತ್ತಮುತ್ತಲಿನ ವಿಷಯಗಳು, ಘಟನೆಗಳು ಮಾರ್ಪಾಟು ಹೊಂದಿ, ಪಲ್ಲಟಗೊಂಡು, ಅವುಗಳು ಭಾಗಶಃ ನಿದ್ರೆಯಲ್ಲಿ ಹುಟ್ಟಿಸುವುದು ಕನಸುಗಳೆಂದು ನಾವು ಅರ್ಥೈಸುವುದು ಸರ್ವೇಸಾಮಾನ್ಯ. ಬೇರೆ ಎಲ್ಲಾ ಬಗೆಯ ಭ್ರಮೆಗಳಲ್ಲಿ ಪ್ರಜ್ಞೆಯು ಪರಿಸರದ ಬಗೆಗೆ ಅಸ್ಪಷ್ಟವಾಗಿಯಾದರೂ ಜಾಗೃತವಾಗಿರುತ್ತದೆ ಮತ್ತು ವ್ಯಕ್ತಿಯ ತನ್ನೊಳಗಿನ ಭ್ರಮೆಗಳಿಗೆ ತಾನೇ ಉಗಮಸ್ಥಾನವಾಗುವುದಿಲ್ಲ. ಕನಸುಗಳಲ್ಲಿ ಮಾತ್ರ ಹಾಗೆಯೇ ಆಗುತ್ತದೆ. ಹೀಗೆ ಪ್ರಜ್ಞೆಯನ್ನು, ವಸ್ತುಗಳನ್ನು ಸೃಷ್ಟಿಸುವಲ್ಲಿ ಬಳಸಿಕೊಳ್ಳಲು ಕಾರಣವೇನೆಂದರೆ ವ್ಯಕ್ತಿಯು ತನ್ನ ಇಂದ್ರಿಯಗಳ ಗಮನವನ್ನು ಪರಿಸರದಿಂದ ಒಳಕ್ಕೆ ಎಳೆದುಕೊಂಡು ಅಂತರ್ಮುಖಿಯಾಗುವುದು. ಈ ಬಗೆಯ ಅಂತರ್ಮುಖತೆಯೇ ನಿದ್ದೆ. ಇಡೀ ಮಾತು ಸಾಹಿತ್ಯ ನಿರ್ಮಾಣದ ಮನೋಸ್ಥಿತಿಗೂ ಅನ್ವಯಿಸಬಹುದಾಗಿದೆ.

ಮಾನವ ಶಿಶುವಿನ ಪ್ರಜ್ಞೆ ಉಪಕ್ರಮಿಸುವುದು ಶೈಶವದಲ್ಲಿ ಎಂಬುದು ಈಗಾಗಲೇ ವಿಜ್ಞಾನಿಗಳು ಒಪ್ಪಿಕೊಂಡಂತಹ ವಿಷಯ. ಇಲ್ಲಿ ಬಾಹ್ಯ ಪರಿಸರದಿಂದ ಶಿಶುವು ತನ್ನನ್ನು ತಾನು ಪ್ರತ್ಯೇಕಿಸಿಕೊಳ್ಳುವುದು ಸ್ವಯಂ ನಡೆಯುವ ಪ್ರಕ್ರಿಯೆ. ಆದರೆ ಇದಿಷ್ಟನ್ನೇ ಪ್ರಜ್ಞೆ ಎನ್ನಲಾಗುವುದಿಲ್ಲ. ಸ್ವಯಂ ಅರಿವು ಮತ್ತು ಪರಿಸರ ಮುಖಾಮುಖಿಯಾಗುವಾಗ ಮಾತ್ರ ಅದು ಪ್ರಜ್ಞೆ ಎನಿಸಿಕೊಳ್ಳುತ್ತದೆ. ಏಕೆಂದರೆ ಪ್ರಜ್ಞೆಯು ಪ್ರೌಢವಾಗಿ ಬೆಳೆಯಲು, ಖಚಿತವಾಗಲು ಅಗತ್ಯವಾದುದು ನಿಕಟವಾದ ಸಾಮಾಜಿಕ ಸಂಪರ್ಕ. ಇಂತಹ ಸಾಮಾಜಿಕ ಸಂಪರ್ಕಗಳು ವ್ಯಕ್ತಿಯನ್ನು ನಿಯಂತ್ರಿಸುತ್ತವೆ. ಇದು ಸಾಹಿತ್ಯಕ್ಕೂ ಸಂಬಂಧಿಸುತ್ತದೆ. ವಾಸ್ತವತೆಯನ್ನು ಸಂಕೇತಗಳಾಗಿ ಪರಿವರ್ತಿಸುವ ವಿಚಾರದಲ್ಲಿ ಸಾಹಿತ್ಯದಂತಹ ಮತ್ತೊಂದು ಪ್ರಕಾರವಿಲ್ಲ. ಇಲ್ಲಿ ನಡೆಯದ ಕಾರ್ಯಗಳಿಲ್ಲ. ಸಾಹಿತ್ಯ ನಿರ್ಮಾಣವು ಬಾಹ್ಯ ವಾಸ್ತವದಿಂದ ಪ್ರೇರಣೆಗೊಂಡರೂ ಅದು ಅನೇಕ ಮನೋವಿಕಾರಗಳ ಪ್ರವಾಹವನ್ನು ಒಳಗೊಂಡಿರುತ್ತದೆ. ಆ ಪ್ರವಾಹವು ಅಣೆಕಟ್ಟಿನ ಹಾಗೆ ಸಾಹಿತ್ಯವನ್ನು ಬಾಹ್ಯ ನೋಟಕ್ಕೆ ಸೀಮಿತಗೊಳಿಸುವುದಿಲ್ಲ. ಅದಕ್ಕೆ ಮನೋವಿಶ್ಲೇಷಣೆಯ ಅಗತ್ಯತೆ ಇರುತ್ತದೆ. ಸಾಹಿತ್ಯಗಳ ಸಂಕೇತಗಳು ಬಹುಮಟ್ಟಿಗೆ ವ್ಯಾಪಕಾರ್ಥಗಳಲ್ಲಿ ವಿನ್ಯಾಸಗೊಂಡಿದ್ದು ವಿಭಿನ್ನ ಬಗೆಯ ವ್ಯಾಖ್ಯಾನಗಳಿಗೆ ಅವಕಾಶ ಮಾಡಿಕೊಡುತ್ತವೆ. ಏಕೆಂದರೆ ಮನುಷ್ಯ ಮನಸ್ಸಿನ ಸಂರಚನೆಯು ವ್ಯಕ್ತಿಯ ಪ್ರವೃತ್ತಿಜನ್ಯ ಅಪೇಕ್ಷೆಗಳು, ಆತಂಕ, ಭರವಸೆ, ಭಯ, ಕ್ರೌರ್ಯ ಮೊದಲಾದವುಗಳೆಲ್ಲ ಯಾದೃಚ್ಛಿಕ ನೆನಪಿನ ಪ್ರತಿಮೆಗಳ ಮೂಲಕ ಪಲ್ಲಟಗೊಂಡಿರುತ್ತವೆ. ಆದರೆ ಈ ಪ್ರತಿಮೆಗಳ ನಡುವೆ ಅಜಾಗೃತ ಪ್ರಜ್ಞೆಯ ಭಾವುಕ ಸಂಬಂಧವೊಂದಿರುತ್ತದೆ. ಕೆಲವೊಮ್ಮೆ ಇವು ಕನಸುಗಳ ಮೂಲಕ ವ್ಯಕ್ತವಾಗುತ್ತವೆ. ಸಾಹಿತ್ಯದ ನಿರ್ಮಾಣದಲ್ಲೂ ಕೂಡಾ ಇದು ಸುಪ್ತ ಹಾಗೂ ವ್ಯಕ್ತ ರೂಪಗಳೆರೆಡರ ಮೂಲಕ ನಿರೂಪಿತಗೊಂಡಿರುತ್ತವೆ. ಈ ಎರಡರ ನಡುವಿನ ಸಂಬಂಧವನ್ನು ವ್ಯಾಖ್ಯಾನಿಸುವುದೇ ಮನೋವಿಶ್ಲೇಷಣೆಯ ಪ್ರಮುಖ ಉದ್ದೇಶ.

ಸಾಹಿತ್ಯ ಪ್ರಕ್ರಿಯೆಯ ಅನುಸಂಧಾನವು ವ್ಯಕ್ತಿಗಳ ಸಾಮಾಜಿಕತೆಯ ಮುಖಾಂತರ ನಡೆಯುತ್ತದೆ. ಆದಾಗ್ಯೂ ಸಾಹಿತ್ಯ ಕೃತಿಯ ಅನುಸಂಧಾನವು ಪರಿಣಾಮಕಾರಿಯಾಗಬೇಕಾದರೆ ಸಂಯೋಜನೆಗೊಳ್ಳುವ ಅನುಭವಗಳು ಗಾಢವೂ, ಪ್ರಧಾನವೂ ಆಗಿರಬೇಕು. ಅನುಭವಗಳಿಗೆ ಕಾರಣವಾಗುವ ಚಿತ್ತವೃತ್ತಿಗಳು ಇಂತಿಷ್ಟೇ ಎಂದಾಗಲೀ, ಅವು ಯಾವ ಯಾವ ಕಾರಣಗಳಿಂದ ಉತ್ಕರ್ಷಗೊಳ್ಳುತ್ತವೆ ಎಂದಾಗಲೀ ನಿರ್ದಿಷ್ಟಪಡಿಸುವುದು ಸಾಧ್ಯವಿಲ್ಲ. ಸಾಹಿತ್ಯ ಕೃತಿಗಳನ್ನು ಓದುವ ಅಥವಾ ನಾಟಕಗಳನ್ನು ನೋಡುವ ಸಹೃದಯರಿಗೆ ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಳ್ಳುವ ಚಿತ್ತವೃತ್ತಿಗಳು ಸಾಮಾಜಿಕ ಪ್ರಜ್ಞೆಯಲ್ಲಿ ನಿರಾಕಾರವಾಗಿ, ಮೂಕವಾಗಿ ಅಡಗಿದ್ದಿರಬೇಕು. ಆಗ ಮಾತ್ರ ಈವರೆಗೆ ಅಸ್ತವ್ಯಸ್ತವಾಗಿದ್ದ ಅನುಭವವನ್ನು ಸಂಯೋಜನೆಗೊಳಿಸಿ ನೋಡಲು ಮನೋವಿಶ್ಲೇಷಣೆಗೆ ಸಾಧ್ಯವಾಗುತ್ತದೆ.

ಸಾಹಿತ್ಯ ಕೃತಿಗಳ ವಿಮರ್ಶೆಯಲ್ಲಿ ಭೌತವಾದಿ ದೃಷ್ಟಿಕೋನವನ್ನು ಅನುಸರಿಸಿ ವರ್ಗ ಸಮಾಜದಲ್ಲಿ ಸಾಹಿತ್ಯ ಕೃತಿಗಳು ವರ್ಗ ಸಾಮಾನ್ಯವಾಗುವುದರ ಕುರಿತು ವಿಶ್ಲೇಷಣೆಗಳು ನಡೆಯುತ್ತಿವೆ. ಏಕೆಂದರೆ ಮಾರ್ಕ್ಸವಾದದ ಪ್ರಕಾರ ವರ್ಗದ ಕಲ್ಪನೆಯನ್ನು ಸ್ಥೂಲವಾಗಿ ಹೀಗೆ ವ್ಯಾಖ್ಯಾನಿಸಲಾಗಿದೆ. ಒಂದು ವರ್ಗವೆಂದರೆ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಸ್ತರದ ಆರ್ಥಿಕ ಸಂಬಂಧಗಳಿರುವ ಆ ಕಾರಣಕ್ಕಾಗಿ ಒಂದು ಸಾಮಾನ್ಯ ರೀತಿಯ ಜೀವನಾನುಭವಗಳನ್ನು ಪಡೆದ ಜನರ ಗುಂಪು. ಆ ಗುಂಪಿನವರ ಆಂತರಿಕ ವ್ಯತ್ಯಾಸಗಳ ಸರಾಸರಿ ಮೊತ್ತವು ಕಡಿಮೆ ಪ್ರಮಾಣದಲ್ಲಿರುತ್ತದೆ. ಹಾಗೆಯೇ ಮತ್ತೊಂದು ಗುಂಪಿನವರ ಜೀವನಾನುಭವಗಳ ಆಂತರಿಕ ವ್ಯತ್ಯಾಸಗಳ ಸರಾಸರಿ ಮೊತ್ತವು ಸಹ ಕಡಿಮೆ ಪ್ರಮಾಣದಲ್ಲಿರುತ್ತದೆ. ಆದರೆ ಈ ಎರಡು ಗುಂಪುಗಳ ಜೀವನಾನುಭವಗಳನ್ನು ಹೋಲಿಸಿ ನೋಡಿದಾಗ ಎದ್ದು ತೋರುವ ಬಾಹ್ಯ ವ್ಯತ್ಯಾಸಗಳು ಅಧಿಕ ಪ್ರಮಾಣದಲ್ಲಿರುತ್ತವೆ. ಈ ಬಗೆಯ ವ್ಯತ್ಯಾಸಗಳಿಗೆ ಮೂಲ ಕಾರಣವಾಗುವುದು ಎರಡು ಗುಂಪಿನವರ ಆರ್ಥಿಕ ಪರಿಸ್ಥಿತಿಗಳ ನಡುವಿನ ಅಸಮಾನತೆ. ಆರ್ಥಿಕ ಕಾರಣಗಳಿಂದ ಅನಿವಾರ್ಯವಾಗಿ ಹುಟ್ಟುವ ಐಹಿಕ ಸೌಕರ್ಯಗಳ ತಾರತಮ್ಯವು ಒಂದೇ ಸಮುದಾಯದ ಬೇರೆ ಬೇರೆ ವರ್ಗಗಳ ಜೀವನಾನುಭವಗಳ ವ್ಯತ್ಯಾಸಗಳಿಗೂ ಕಾರಣವಾಗುತ್ತವೆ ಎಂಬುದು ಈ ವಿಶ್ಲೇಷಣೆಯಿಂದ ತಿಳಿದುಬರುವ ಮುಖ್ಯ ಸಂಗತಿ. ಸಾಹಿತ್ಯಗಳು ಸಾಮಾನ್ಯವಾಗಿ ಆಯಾ ವರ್ಗದ ಸಾಧಾರಣ ಪ್ರಜ್ಞೆಯ ಧ್ವನಿಯೇ ಆಗಿರುತ್ತದೆ ಎಂಬುದಾಗಿ ಮಾತ್ರ ವಿಶ್ಲೇಷಣೆಗೊಳಪಟ್ಟಲ್ಲಿ ಆಯಾ ವರ್ಗಗಳ ಮಾನಸಿಕ ಸಂಘರ್ಷದ ನೆಲೆಯನ್ನು ಗಮನಿಸಲು ಸಾಧ್ಯವೇ ಆಗುವುದಿಲ್ಲ. ಅತ್ಯಂತ ಸ್ಥೂಲವಾಗಿ ಸಾಹಿತ್ಯವನ್ನು ಈ ಬಗೆಯ ಭೌತವಾದಿ ನೆಲೆಯಲ್ಲಿ ನೋಡಲಾಗುತ್ತಿದೆ. ಇದು ಆಯಾ ವರ್ಗಗಳಿಗೆ ಸಂಬಂಧಿಸಿಲ್ಲದೆಯೂ ಅನೇಕ ಬಗೆಯ ಧೋರಣೆಗಳಿಂದ ಸಾಹಿತ್ಯ ಕೃತಿಗಳು ರಚನೆಗೊಂಡಿರಬಹುದು. ಸಾಹಿತ್ಯ ಕೇವಲ ಆಯಾ ಕಾಲಘಟ್ಟದ, ಸಮಕಾಲೀನ ಪ್ರಜ್ಞೆಗೆ ಸಾಹಿತಿಯೊಬ್ಬ ಸ್ಪಂದಿಸುವ ಮಾತ್ರಕ್ಕೆ ರಚನೆಗೊಳ್ಳುವುದಿಲ್ಲ. ಆತನು ಸಾಹಿತಿಯಾಗಿರುವ ಹಾಗೆಯೇ ಆತ ಒಬ್ಬ ಮನುಷ್ಯ. ಆತನಲ್ಲೂ ಅಸಾಮಾನ್ಯ ಅನುಭವಗಳ ಸರಾಸರಿ ಮೊತ್ತವೊಂದಿರುತ್ತದೆ. ಅದು ಆತನ ಸಾಮಾನ್ಯತೆಯಾಗಿರುತ್ತದೆ. ಸಮಕಾಲೀನ ಮನುಷ್ಯರ ಬದುಕು, ವೈಚಿತ್ರ್ಯತೆಗಳು, ವಿಲಕ್ಷಣತೆಗಳು, ಅನಿರೀಕ್ಷಿತ ಬದಲಾವಣೆಗಳು, ಮಾನಸಿಕ ಪ್ರವೃತ್ತಿಗಳು ಆತನನ್ನು ಕಾಡುತ್ತವೆ. ಅದಕ್ಕೆ ಆತನ ಸೂಕ್ಷ್ಮ ಚಿಕಿತ್ಸಕ ನೋಟ, ಗ್ರಹಿಕೆ, ಸ್ಪಂದನೆ ಕಾರಣವಾಗಬಹುದು. ಸಾಹಿತ್ಯವು ಮೊದಲು ಸಮಗ್ರ ವಸ್ತುವಿನ್ಯಾಸವನ್ನು ಗಮನಿಸಿ ಆಮೇಲೆ ವ್ಯಕ್ತಿಗತವಾಗಿ ಸಂಕಲಿಸತೊಡಗುತ್ತದೆ. ಹೀಗಾಗಿ ಓದುಗರು ತಮ್ಮಲ್ಲಿಯೇ ಗುರುತಿಸಿಕೊಳ್ಳುವುದಕ್ಕಿಂತ ಅದು ಸೃಷ್ಟಿಸುವ ಪ್ರಪಂಚದೊಳಗೆ ನಿಂತು ಪರಿವೀಕ್ಷಿಸುತ್ತಾರೆ.

ಕೆಲವೊಮ್ಮೆ ತಮ್ಮ ಬದುಕಿಗೆ, ತಮಗೆ ಸಾಮ್ಯವುಳ್ಳ ಪಾತ್ರ ಘಟನೆಗಳೊಂದಿಗೆ ತಮ್ಮನ್ನು ತಾವು ಸಮೀಕರಿಸಿಕೊಂಡು ಬಿಡುವ ಸಂದರ್ಭಗಳು ಉಂಟು. ಇಂತಹ ಸಂದರ್ಭಗಳಲ್ಲಿಯೇ ಮನಃಶಾಸ್ತ್ರದ ನೆರವು ಅನಿವಾರ್ಯವಾಗುತ್ತದೆ. ಕೇವಲ ವ್ಯಕ್ತಿ ಸಾಹಿತ್ಯದೊಂದಿಗೆ ತನ್ನನ್ನು

ತಾನು ಸಮೀಕರಿಸಿಕೊಳ್ಳುವುದಷ್ಟೇ ಆದರೆ ಮನೋವಿಶ್ಲೇಷಣೆಯ ಅಗತ್ಯ ಇರುವುದಿಲ್ಲ. ಸಾಹಿತ್ಯವು ಒಳಗೊಳ್ಳುವ ವಿಷಯಗಳು ಕೇವಲ ಕರ್ತೃವಿನ ಭಾವನೆ, ಅನುಭವ ಎಂಬುದಾಗಿ ಪರಿಗಣಿಸದೇ ಅದನ್ನು ಒಂದು ಸಮಾಜದ, ಜನಾಂಗದ, ಮತಧರ್ಮದ, ಲಿಂಗ ತಾರತಮ್ಯದ ಹಿನ್ನೆಲೆಯಲ್ಲಿ ನಡೆಸುವ ಸಂಘರ್ಷಗಳ ಸಂದರ್ಭಗಳಲ್ಲಿ ಮನೋವಿಶ್ಲೇಷಣೆಯ ಅಗತ್ಯತೆ ಮಹತ್ವದ್ದಾಗುತ್ತದೆ.

ಸಾಹಿತ್ಯವೊಂದು ಯಾವ ಸಮುದಾಯದಲ್ಲಿ ಮನುಷ್ಯರ ಅನುಭವಗಳು ಸದಾ ಗಣನೀಯ ಪ್ರಮಾಣದಲ್ಲಿ ಪರಿವರ್ತನೆಯಾಗುತ್ತವೆಯೋ ಅಲ್ಲಿ ಮಾತ್ರ ರೂಪುಗೊಳ್ಳಲು ಸಾಧ್ಯ. ಅನುಭವಗಳು ಪರಿವರ್ತನೆಗೊಳ್ಳಲು ಕಾರಣ ಸಾಮಾಜಿಕ, ರಾಜಕೀಯ, ಕೌಟುಂಬಿಕ, ಆರ್ಥಿಕ, ನೈತಿಕ ನೆಲೆಗಟ್ಟಿನಲ್ಲಿ ಉಂಟಾಗುವ ಕ್ಷಿಪ್ರ ಬದಲಾವಣೆಗಳು. ಈ ದೃಷ್ಟಿಯಿಂದ ಯಾವುದೇ ಸಾಹಿತ್ಯ ರಚನೆಯಾಗುವುದು ಆಕಸ್ಮಿಕವೇನಲ್ಲ. ಜನಜೀವನದಲ್ಲಿ ಸದಾ ಒಂದಿಲ್ಲೊಂದು ಘಟನೆಗಳು ಸಂಭವಿಸುತ್ತಲೇ ಇದ್ದು ಜನರು ಪರಿವರ್ತನೆಗೊಳ್ಳುತ್ತಿರುವ, ಚಡಪಡಿಸುತ್ತಿರುವ, ಕಾಲಘಟ್ಟದ ಪ್ರತಿನಿಧಿಗಳಾಗಿಯೇ ಸಾಹಿತ್ಯವನ್ನು ನೋಡಬೇಕಾದ ಅಗತ್ಯವಿರುವುದರಿಂದ ಮನೋವಿಶ್ಲೇಷಣೆಯ ದೃಷ್ಟಿಕೋನ ಮಹತ್ವದ್ದೆಂದು ಕಾಣುತ್ತದೆ.

ಸಾಹಿತ್ಯದ ಮನೋವ್ಯಾಪಾರವು ಸಾರ್ವತ್ರಿಕವೂ, ಶ್ರೇಷ್ಠವೂ ಆಗಿರುವುದರಿಂದಲೇ ಅದು ಸೈದ್ಧಾಂತಿಕವಾಗಿ ಸಶಕ್ತವೂ ಹಾಗೂ ಸುಂದರವೂ, ಸುಂದರವಲ್ಲದ್ದೂ, ಸಾಮಾನ್ಯವಾದದ್ದು, ಅಸಾಮಾನ್ಯವಾದದ್ದೂ ಆಗಿರುತ್ತದೆ. ಮನುಷ್ಯರು ನಿಷ್ಫಲ ತಿಕ್ಕಾಟಗಳಲ್ಲಿ ಸಂಘರ್ಷಗಳಲ್ಲಿ ತೊಡಗಿ, ನಿಸ್ಸತ್ವರಾಗಿ, ಕಮರಿ ಹೋಗುವವರೆಗೂ, ಸಮುದಾಯದ ನಾಡಿಮಿಡಿತವು ಸ್ತಬ್ಧಗೊಳ್ಳುವವರೆಗೂ ಸಾಹಿತ್ಯದ ಮೂಲ ಸತ್ವವು ಬದುಕಿ ಉಳಿಯುತ್ತದೆ. ಏಕೆಂದರೆ ಸಾಹಿತ್ಯವು ಕೇವಲ ತಾಕಲಾಟವಲ್ಲ. ತನ್ನ ಚಡಪಡಿಕೆಯಿಂದಲೇ ತೆರೆದುಕೊಳ್ಳುತ್ತಾ ಹೋಗುವ ಬೆಳವಣಿಗೆ ಇದು. ಬದಲಾವಣೆಯು ಅದರ ಅಸ್ತಿತ್ವದ ಮೂಲವಾಗಿದ್ದು, ಅದು ತನ್ನ ಗರ್ಭದಿಂದಲೇ ಅದಕ್ಕಾಗಿ ತುಡಿಯುತ್ತದೆ. ಆದ್ದರಿಂದಲೇ ಮನುಷ್ಯನು ತನ್ನನ್ನು ತಾನು ಕಂಡುಕೊಳ್ಳುವ ಪ್ರಯತ್ನ ಇದರಲ್ಲಿ ಅಡಗಿರುತ್ತದೆ. ಅಂತಹ ಪ್ರಯತ್ನವು ಕೇವಲ ಸಾಮಾಜಿಕ, ಆರ್ಥಿಕ, ರಾಜಕೀಯ, ನೈತಿಕ, ಧಾರ್ಮಿಕ ನೆಲೆಯಲ್ಲಿ ನೋಡಿದರೆ, ಪರಿಶೀಲಿಸಿದರೆ, ವಿಶ್ಲೇಷಿಸಿದರೆ ಪೂರ್ಣಗೊಳ್ಳಲಾರದು. ಅದರಾಚೆಯ ಮತ್ತೊಂದು ಮನೋಲೋಕದ ಆಯಾಮದ ಅಗತ್ಯತೆಯು ಮುಖ್ಯವಾಗುತ್ತದೆ. ಆದ್ದರಿಂದಲೇ ಸಾಹಿತ್ಯವನ್ನು ಮತ್ತೊಂದು ಆಯಾಮದಲ್ಲಿ ಅರಿಯಲು ಮನೋವಿಶ್ಲೇಷಣೆಯ ಅಗತ್ಯವೂ, ಅನಿವಾರ್ಯವೂ, ಅವಶ್ಯವೂ ಆಗುತ್ತದೆ. ಉದಾಃ ಗಾನ, ನೃತ್ಯಗಳಂತಹ ಸಾಮೂಹಿಕ ಆಚರಣೆಗಳಲ್ಲಿ ಭಾಗಿಯಾಗುವ ವ್ಯಕ್ತಿಯು ತಾತ್ಕಾಲಿಕವಾಗಿಯಾದರೂ ವಾಸ್ತವ ಲೋಕದಿಂದ ಬಿಡುಗಡೆ ಹೊಂದಿ ಒಂದು ಬಗೆಯ ಅರೆ ನಿದ್ರಾವಸ್ಥೆಗೆ ಸರಿಯುತ್ತಾನೆ. ಇದರಿಂದಾಗಿ ಪೂರ್ವ ಪರಿಚಿತ ಲೋಕದ ವಾಸ್ತವ ಸಂಬಂಧಗಳನ್ನು ಮುರಿಯುವುದು, ಕಟ್ಟುವುದು ಸಾಧ್ಯವಾಗುತ್ತದೆ. ಆದರೆ ಈ ನಿರ್ಮಾಣವು ಅನಿಯಮಿತವಾದುದಾಗಲಿ, ಯಾದೃಚ್ಛಿಕವಾದುದಾಗಲಿ ಅಲ್ಲ. ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಸಮಷ್ಟಿ ಪ್ರಜ್ಞೆಗೆ ಅನುಗುಣವಾಗಿ ಇಲ್ಲಿನ ವ್ಯವಹಾರವು ನಡೆಯುತ್ತದೆ. ಗಾನ ನೃತ್ಯಗಳಲ್ಲಿ

ವ್ಯಕ್ತಿಯು ಬಾಹ್ಯ ವಾಸ್ತವದಿಂದ ಒಳಸರಿದಿದ್ದರೂ ಸಹ ಆತನು ತನ್ನ ಸಹಚರರ ಅಂತರಂಗ ಜಗತ್ತಿನಲ್ಲಿ ಕೂಡಿಕೊಂಡು ಲಯಬದ್ಧವಾಗಿ ಮೈ ಕುಣಿಸುವುದು, ಹಾಡುವುದು, ಮಾತುಗಳನ್ನು ರಾಗ-ತಾಳಗಳಿಗೆ ಅನುಗುಣವಾಗಿ ಸಾಂಗತ್ಯದಿಂದ ಉಚ್ಚರಿಸುವುದು ಮಾಡುತ್ತಿರುತ್ತಾನೆ. ಇದು ಅಲ್ಲಿ ಸೇರಿದ ಸಾಮಾಜಿಕರಿಗೆಲ್ಲ ಸರಿಸಮಾನವಾದ ಉದ್ದೇಶ ಮತ್ತು ಅರ್ಥಗಳ ಜಾಲವೊಂದನ್ನು ನೇಯುತ್ತದೆ. ಗಾನದ ಸ್ವರಗಳ ಏರಿಳಿತ, ನೃತ್ಯದ ನಡಿಗೆ, ಅಭಿನಯ, ಪ್ರಾಣಿ ಪಕ್ಷಿ ಮೊದಲಾದವುಗಳ ಅನುಕರಣೆ ಇವೆಲ್ಲ ಸಾಮಾಜಿಕರ ಗೃಹೀತ ಅನುಭವಗಳು, ಪರಿಕರಗಳು ಇಂತಹ ಅನುಭವಸಿದ್ಧ ಪರಿಕರಗಳನ್ನು ಆಯ್ಕೆ ಮಾಡಿಕೊಂಡು ಅವುಗಳನ್ನು ಒಟ್ಟುಗೂಡಿಸಿ, ಸಮಷ್ಟಿಪ್ರಜ್ಞೆಯ ತಳಹದಿಯ ಮೇಲೆ ಸಾಹಿತ್ಯ ಅಥವಾ ಸಮೂಹ ಕಲೆಗಳ ನಿರ್ಮಾಣವಾಗುತ್ತದೆ. ಪ್ರಾಚೀನ ಗ್ರೀಕರಲ್ಲಿದ್ದಂತೆ ಆರಾಧಕರ ಮೈಮೇಲೆ ದೇವತೆಗಳು ಬಂದು ಮಾತಾಡುವುದು ಇಂದಿಗೂ ಹಲವು ದೇಶಗಳ ಜಾನಪದರ ಬದುಕಿನಲ್ಲಿ ನೋಡುವಂತೆ ಪೂಜಾರಿಗಳು, ಪಾದ್ರಿಗಳು ಮೊದಲಾದವರ ಮೈಮೇಲೆ ಬರುವ ಗ್ರಾಮದೇವತೆಗಳು, ಭೂತ, ಗಣ ಇವೆಲ್ಲ ಅಭಿವ್ಯಕ್ತಿಗಳೇ ಆಗಿವೆ. ಇದೇ ಬಗೆಯ ಅಭಿವ್ಯಕ್ತಿಯೇ ಸಾಹಿತ್ಯದಲ್ಲೂ ಕಂಡುಬರುವುದು. ಇವು ಕೇವಲ ತಳಹದಿ ಇಲ್ಲದ ಸೃಷ್ಟಿಯಿಲ್ಲ. ಅಚೇತನವಾದ ವಸ್ತುಗಳು ಸಚೇತವಾಗಿಯೂ, ಸಚೇತನವಾದವುಗಳು ಅಚೇತನವಾಗಿ ರೂಪಾಂತರಗೊಳ್ಳುವ ಸಾಧ್ಯತೆಯಿರುವ ಸಾಹಿತ್ಯವನ್ನು ಬಾಹ್ಯ ವಾಸ್ತವದಿಂದಾಚೆಗಿನ ಲೋಕವೊಂದನ್ನು ಕಾಣುವ ಅಗತ್ಯತೆ ಇರುವುದರಿಂದಲೇ ಇಲ್ಲಿ ಮನೋವಿಶ್ಲೇಷಣೆಯು ಅಗತ್ಯವೆನಿಸುತ್ತದೆ.

ಆಧುನಿಕ ಮನಃಶ್ಯಾಸ್ತ್ರದಲ್ಲಿ ಸಾಹಿತ್ಯ

ಫ್ರಾಯ್ಡ್ ಮತ್ತು ಯೂಂಗ್‌ರಂತೆ ಸಾಹಿತ್ಯವನ್ನು ಆಳವಾಗಿ ಅಭ್ಯಾಸ ಮಾಡಿದ ಮನೋವಿಜ್ಞಾನಿಗಳು ಬಹಳ ವಿರಳ. ಹಾಗೆಯೇ ಫ್ರಾಯ್ಡ್ ಮತ್ತು ಯೂಂಗ್‌ರ ಮಟ್ಟಕ್ಕೆ ಏರಬಲ್ಲವರು ಯಾರು ಇಲ್ಲ ಎಂಬುದಾಗಿಯೇ ಸದ್ಯಕ್ಕೆ ಅಭಿಪ್ರಾಯ ಪಡುವವರೂ ಅನೇಕರಿದ್ದಾರೆ. ಆಧುನಿಕ ಮನೋವಿಜ್ಞಾನಿಗಳ ಪ್ರಕಾರ ಸಾಹಿತ್ಯ ರಚನೆ ಒಂದು ಸಂಕೀರ್ಣವಾದ ಮಾನಸಿಕ ಕ್ರಿಯೆ. ಇದಕ್ಕೆ ಯಾವುದಾದದರೊಂದು ನಿರ್ದಿಷ್ಟ ಕಾರಣಗಳು ಇವೆ ಎಂಬುದಾಗಿ ಕರಾರುವಕ್ಕಾಗಿ ಹೇಳಲೂ ಆಗುವುದಿಲ್ಲ. ಮಾನವನ ಅನುಭವಗಳು ಅನೇಕ ರೀತಿಯ ಕಾರಣಗಳ ಫಲ ಎಂದು ಹೇಳಬಹುದು. ಯಾವುದೇ ಒಂದು ಅನುಭವ ಇಂತಹುದೇ ಕಾರಣವೊಂದರಿಂದ ಹುಟ್ಟಿದೆ ಎಂದೂ ಹೇಳಲಾಗುವುದಿಲ್ಲ. ಒಂದೇ ಬಗೆಯ ಅನುಭವಗಳು ಬೇರೆ ಬೇರೆ ವ್ಯಕ್ತಿಗಳಲ್ಲಿ ಬೇರೆ ಬೇರೆ ಕಾರಣಗಳಿಂದ ಹುಟ್ಟಿರುವ ಸಾಧ್ಯತೆಯೂ ಇರುತ್ತದೆ. ಸಾಹಿತ್ಯಕ್ಕೆ ಸಂಬಂಧಿಸಿದಂತೆ ಫ್ರಾಯ್ಡ್‌ನ ಬರಹಗಳಲ್ಲಿ ಮುಖ್ಯವಾದುದು ಸುಪ್ತಚೇತನ ಸಿದ್ಧಾಂತ. ಸುಪ್ತಚೇತನ ಮಾನವನ ಅತೃಪ್ತ ಆಕಾಂಕ್ಷೆಗಳ ಆಗರ. ಈತನ ಪ್ರಕಾರ ಮಾನವ ಮನಸ್ಸಿನಲ್ಲಿ ಚೇತನಾಂಶ ಒಂದಾದರೆ ಉಳಿದ ಶೇಕಡಾ ಒಂಭತ್ತರಷ್ಟು ಸುಪ್ತ ಚೇತನಾಂಶ ಇರುತ್ತದೆ. ಸುಪ್ತಚೇತನ ವಿಶಾಲವಾಗಿರುವಷ್ಟೆ ಪ್ರಭಾವಯುತವೂ ಆಗಿರುತ್ತದೆ. ವರ್ತನೆಯ ಬಹುತೇಕ ಅಂಶವು ಸುಪ್ತಚೇತನದಿಂದ ನಿರ್ಧಾರಿತವಾಗಿರುತ್ತದೆ. ಈತನ ಪ್ರಕಾರ ಮಾನವನ ಮೂಲ ಪ್ರೇರಣೆಗಳು ಪ್ರಾಣಿಸಹಜವಾಗಿರುತ್ತದೆ.

ಇದು ಹುಟ್ಟು–ಸಾವು, ಅಳಿವು–ಉಳಿವು, ಅನಿರ್ಬಂದ ಲೈಂಗಿಕತೆ, ಹಿಂಸಾಚಾರ, ನಿರಂತರ ಸುಖಾಪೇಕ್ಷೆ ಮುಂತಾದವುಗಳಿಗೆ ಸಂಬಂಧಿಸಿದವಾಗಿರುತ್ತದೆ. ಸಾಮಾಜಿಕ ಜೀವನದಲ್ಲಿ ತೃಪ್ತಿಗೊಳಿಸಲಾಗದ, ತೃಪ್ತಿಗೊಳಿಸಬಾರದಂತಹ ಅನೇಕ ಬಯಕೆಗಳು ಬಾಲ್ಯದಲ್ಲಿಯೇ ಸುಪ್ತಚೇತನಕ್ಕೆ ತಳ್ಳಲ್ಪಡುತ್ತವೆ. ಹೀಗೆ ತಳ್ಳಿದ ಬಯಕೆಗಳು ಅಲ್ಲಿಯೇ ಶಕ್ತಿಯುತವಾಗಿ ಉಳಿದಿದ್ದು ಹೊರಬರಲು ಅವಕಾಶವನ್ನು ನಿರೀಕ್ಷಿಸುತ್ತಿರುತ್ತವೆ. ಅವು ಜಾಗೃತ ಮನಸ್ಸಿಗೆ ಒಪ್ಪುವಂತಾದ್ದಗಿಲ್ಲವಾದ್ದರಿಂದ ವ್ಯಕ್ತಿ ಎಚ್ಚರ ಇರುವಾಗ ಅವು ಹೊರಬರುವ ಸಾಧ್ಯತೆಗಳು ಕಡಿಮೆ. ಆದುದರಿಂದ ವ್ಯಕ್ತಿಗೆ ಎಚ್ಚರವಿಲ್ಲದಾಗ ಕನಸಿನ ರೂಪದಲ್ಲಿ ಆ ಬಯಕೆಗಳು ಅಭಿವ್ಯಕ್ತಗೊಳ್ಳುತ್ತವೆ. ಒಂದು ವೇಳೆ ಜಾಗೃತ ಮನಸ್ಸಿನ ಅರಿಕೆಯನ್ನು ಮೀರಿ ಪೂರ್ಣ ಪ್ರಮಾಣದಲ್ಲಿ ಅವು ಪ್ರಕಟವಾದರೆ ವ್ಯಕ್ತಿ ಮನೋರೋಗಿಯಾಗುತ್ತಾನೆ. ಹಲವು ವೇಳೆ ಸುಪ್ತಮನಸ್ಸಿನ ಅತೃಪ್ತ ಬಯಕೆಗಳೇ ಸಾಹಿತ್ಯ ರಚನೆಗೆ ಪ್ರೇರಣೆಯಾಗಬಹುದೆಂಬುದು ಫ್ರಾಯ್ಡ್‌ನ ಅಭಿಮತ.

ಜಾಗೃತ ಮನಸ್ಸಿನಿಂದ ಹೊರದೂಡಲ್ಪಟ್ಟು, ಸುಪ್ತಚೇತನದಲ್ಲಿ ಕ್ರಿಯಾಶೀಲವಾಗಿ ಉಳಿದು, ಪ್ರಬಲ ಶಕ್ತಿಯ ಕೇಂದ್ರಗಳಂತೆ ಕೆಲಸ ಮಾಡುತ್ತಾ, ಅಭಿವ್ಯಕ್ತಿಗಾಗಿ ಕಾದು ಕುಳಿತಿರುವ ಭಾವ ಸಮುಚ್ಚಯಗಳನ್ನು ಫ್ರಾಯ್ಡ್ ಕಾಂಪ್ಲೆಕ್ಸ್‌ಗಳೆಂದು ಕರೆಯುತ್ತಾನೆ. ಈ ಕಾಂಪ್ಲೆಕ್ಸ್‌ಗಳು ಸುಪ್ತವಾಗಿದ್ದರೂ ಒಂದಲ್ಲ ಒಂದು ರೀತಿಯಲ್ಲಿ ವ್ಯಕ್ತಿಯ ವರ್ತನೆ ಮತ್ತು ಚಿಂತನೆಗಳನ್ನು ಪರೋಕ್ಷವಾಗಿಯಾದರೂ ನಿರ್ದೇಶಿಸುತ್ತವೆ. ಇಂತಹ ಹಲವಾರು ಕಾಂಪ್ಲೆಕ್ಸ್‌ಗಳು ಸುಪ್ತಚೇತನದಲ್ಲಿ ಅಸ್ತಿತ್ವದಲ್ಲಿರುತ್ತವೆ. ಅವುಗಳಲ್ಲಿ ಮುಖ್ಯವಾದುದು ಈಡಿಪಸ್ ಕಾಂಪ್ಲೆಕ್ಸ್ (Oedipus Complex). ಈತನ ಪ್ರಕಾರ ಉಳಿದೆಲ್ಲಾ ಕಾಂಪ್ಲೆಕ್ಸ್‌ಗಳಿಗಿಂತ ಈಡಿಪಸ್ ಕಾಂಪ್ಲೆಕ್ಸ್ ಪ್ರಬಲವಾದುದು ಮತ್ತು ಅವು ಹುಟ್ಟು ಮತ್ತು ವಿಕಾಸವನ್ನು ನಿರ್ಣಯಿಸುತ್ತವೆ. ಸಾಹಿತ್ಯ ರಚನೆಗೆ ಈಡಿಪಸ್ ಕಾಂಪ್ಲೆಕ್ಸ್ ಒಂದು ಪ್ರಮುಖ ಪ್ರೇರಣೆ ಎಂಬುದು ಈತನ ಅಭಿಪ್ರಾಯ.

ವ್ಯಕ್ತಿತ್ವಕ್ಕೆ ಅಸ್ತಿಭಾರ ಬಾಲ್ಯದಲ್ಲಿಯೇ ನಡೆದಿರುತ್ತದೆ ಎಂಬುದು ಫ್ರಾಯ್ಡ್‌ನ ಅಭಿಪ್ರಾಯ. ಇದು ನಡೆಯುವುದು ಕೌಟುಂಬಿಕ ಪರಿಸರದಲ್ಲಿ. ಬಾಲ್ಯದಲ್ಲಿ ತಂದೆ, ತಾಯಿ ಮತ್ತು ಮಗು ಮೂವರ ನಡುವೆ ಉದ್ಭವಿಸುವ ಒಂದು ವಿಶಿಷ್ಟವಾದ, ಸಂಕೀರ್ಣವಾದ ಭಾವ ತುಮುಲವೇ ಈಡಿಪಸ್ ಕಾಂಪ್ಲೆಕ್ಸ್, ಪ್ರತಿಯೊಂದು ಗಂಡು ಮಗು ಸುಮಾರು ೪–೫ ವರ್ಷ ವಯಸ್ಸಿನವನಿರುವಾಗ ಅವನಿಗೆ ತಂದೆಯ ಮೇಲೆ ದ್ವೇಷ, ಹಾಗೆಯೇ ತಾಯಿಯ ಮೇಲೆ ಅಮಿತವಾದ ಪ್ರೇಮ ಹುಟ್ಟುತ್ತದೆ. ಇದೇ ಈಡಿಪಸ್ ಕಾಂಪ್ಲೆಕ್ಸ್. ಮಗು ಹೆಣ್ಣಾದರೆ ಅವಳಿಗೆ ತಾಯಿಯ ಮೇಲೆ ದ್ವೇಷ, ತಂದೆಯಲ್ಲಿ ಪ್ರೇಮ. ಇದು ಎಲೆಕ್ಟ್ರಾ ಕಾಂಪ್ಲೆಕ್ಸ್ (Electra Complex). ಮೇಲ್ನೋಟಕ್ಕೆ ತೋರುವಂತೆಯೇ ಇವು ಅಸಭ್ಯ, ಅನೈತಿಕ ಹಾಗೂ ಅನಾಗರಿಕ ಬಯಕೆಗಳು. ಕೌಟುಂಬಿಕ, ಸಾಮಾಜಿಕ ಪರಿಸರ ಈ ಭಾವನೆಗಳನ್ನು ಬೆಳೆಯಲು ಅವಕಾಶ ನೀಡುವುದಿಲ್ಲ. ಮಕ್ಕಳು ಬೆಳೆದಂತೆ ಒಂದು ವಿಶಿಷ್ಟ ರೀತಿಯಲ್ಲಿ ಈ ಭಾವಬಂಧದಿಂದ ಬಿಡುಗಡೆ ಹೊಂದಿ ಸ್ವಸ್ಥ

ಜೀವನ ನಡೆಸುತ್ತಾರೆ. ಆದರೆ ಕೆಲವೊಂದು ಸಂದರ್ಭಗಳಲ್ಲಿ ಈ ಭಾವಗಳು ಸುಪ್ತಚೇತನಕ್ಕೆ ತಳ್ಳಲ್ಪಡುತ್ತವೆ. ಅಲ್ಲಿ ಅದು ಉಳಿದು ಬೆಳೆದು, ಶಕ್ತಿಯುತವಾಗಿ, ಹಲವು ಬಗೆಯಲ್ಲಿ ವ್ಯಕ್ತಿಯ ಮೇಲೆ ಪ್ರಭಾವ ಬೀರುತ್ತವೆ. ಅವನ ಜಾಗೃತ ಮನಸ್ಸು ಶಕ್ತಿಯುತವಾಗಿದ್ದು ಪರೋಕ್ಷವಾಗಿ ಅವನ ವರ್ತನೆಯ ಮೇಲೆ ಪ್ರಭಾವ ಬೀರುತ್ತದೆ. ಅದು ಬೇರೆ ಬೇರೆ ರೀತಿಯಲ್ಲಿ ಕನಸಿನ ಮೂಲಕ ಅಭಿವ್ಯಕ್ತಿಗೊಳ್ಳುತ್ತದೆ. ಅವನ ಚೇತನ ಬಲಹೀನವಾಗಿದ್ದರೆ ಮನಸ್ವಾಸ್ಥ್ಯವನ್ನು ಕಳೆದುಕೊಳ್ಳುತ್ತಾನೆ. ಒಬ್ಬೊಬ್ಬರಲ್ಲಿ ಈ ಕಳವಳಕಾರಕ ಬಯಕೆಗಳು ಉದಾತ್ತೀಕರಣಗೊಂಡು (Sublimation) ಕಲೆಯ ರೂಪದಲ್ಲೂ, ಸಾಹಿತ್ಯದ ರೂಪದಲ್ಲೂ ಅಭಿವ್ಯಕ್ತಗೊಳ್ಳಬಹುದು. ಈ ಅರ್ಥದಲ್ಲಿ ಸಾಹಿತ್ಯ ಆಂತರಿಕ ಲೈಂಗಿಕ ತುಮುಲಗಳ, ಅನೈತಿಕ ಭಾವನೆಗಳ, ಅಸಭ್ಯ ಬಯಕೆಗಳ ಅಲಂಕೃತ ಅಭಿವ್ಯಕ್ತಿ ಎಂಬುದಾಗಿ ಫ್ರಾಯ್ಡ್ ಅಭಿಪ್ರಾಯ ಪಡುತ್ತಾನೆ.

ಸಾಹಿತ್ಯ ನಿರ್ಮಾಣದಲ್ಲಿ ಈಡಿಪಸ್ ತುಮುಲಗಳ ಪ್ರಭಾವವನ್ನು ಫ್ರಾಯ್ಡ್ ನಿದರ್ಶನಗಳೊಡನೆ ವಿವರಿಸಿದ್ದಾನೆ. ಈ ತುಮುಲಕ್ಕೆ ಇಟ್ಟಿರುವ ಹೆಸರು ಸಾಹಿತ್ಯದಿಂದಲೇ ಆರಿಸಿದುದು. ಈಡಿಪಸ್, ಗ್ರೀಕ್ ನಾಟಕಕಾರ Sophoclesನ ಒಂದು ದುರಂತ ನಾಟಕದ ಕೇಂದ್ರ ಪಾತ್ರ. ಥೀಬ್ಸ್ ದೇಶದ ದೊರೆ ಲೇಯಸ್ (Laius) ಅವನ ರಾಣಿ ಜೊಕಾಸ್ಟ (Jocasta) ಇವರ ಮಗ ಈಡಿಪಸ್. ಅವನು ದುರಾದೃಷ್ಟವಶಾತ್ ತನ್ನ ತಂದೆಯನ್ನು ಕೊಂದು, ತಾಯಿಯನ್ನು ವಿವಾಹವಾಗಿ, ಮಕ್ಕಳನ್ನು ಪಡೆದು, ವಿನಾಶ ಹೊಂದುವುದು ನಾಟಕದ ವಸ್ತು. ಸಾಹಿತ್ಯದಲ್ಲಿ ಈಡಿಪಸ್ ಕಾಂಪ್ಲೆಕ್ಸ್ ಹೀಗೆ ನೇರವಾಗಿ ಅಭಿವ್ಯಕ್ತಿಗೊಳ್ಳದೆ, ಪರೋಕ್ಷವಾಗಿ ಪ್ರಕಟವಾಗುವ ಸಾಧ್ಯತೆಗಳೇ ಹೆಚ್ಚು. ಅಂತಹ ಒಂದು ನಿದರ್ಶನ ಶೇಕ್ಸ್‌ಪಿಯರ್‌ನ ಹ್ಯಾಮ್ಲೆಟ್ ನಾಟಕದಲ್ಲಿದೆ. ತನ್ನ ತಂದೆಯನ್ನು ಕೊಂದು ತಾಯಿಯನ್ನು ವರಿಸಿದ ದೊರೆ ಕ್ಲಾಡಿಯಸ್‌ನ ಮೇಲೆ ಸೇಡು ತೀರಿಸುವಲ್ಲಿ ಹ್ಯಾಮ್ಲೆಟ್ ತೋರುವ ವಿಳಂಬ ಪ್ರವೃತ್ತಿ ಹಲವಾರು ಬಗೆಯ ವಿವರಣೆಗೊಳಗಾಗಿರುವುದು ಎಲ್ಲರಿಗೂ ತಿಳಿದ ವಿಷಯ. ಹ್ಯಾಮ್ಲೆಟ್ ತೋರುವ ವಿಳಂಬಕ್ಕೆ ನೀಡಲಾಗಿರುವ ವಿವರಣೆಗಳನ್ನು ನಿರಾಕರಿಸಿದ ಫ್ರಾಯ್ಡ್, ಅದಕ್ಕೆ ಕಾರಣ ಹ್ಯಾಮ್ಲೆಟ್‌ನಲ್ಲಿ ಸುಪ್ತವಾಗಿರುವ ಈಡಿಪಸ್ ಕಾಂಪ್ಲೆಕ್ಸ್ ಎಂದು ವಾದಿಸುತ್ತಾನೆ. ಈತನ ಪ್ರಕಾರ ಹ್ಯಾಮ್ಲೆಟ್ ತನ್ನ ತಾಯಿಯನ್ನು ಪ್ರೀತಿಸುವ ಕಾರಣ ತಂದೆಯ ಸಾವನ್ನು ಆಶಿಸಿರಬೇಕು. ಅಂದರೆ ಹ್ಯಾಮ್ಲೆಟ್ ತಾನೇ (ಅಪ್ರಜ್ಞಾಪೂರ್ವಕವಾಗಿ) ಮಾಡಬಯಸಿದ್ದ ಕಾರ್ಯವನ್ನು ಕ್ಲಾಡಿಯಸ್ ಮಾಡಿರುವಾಗ ಅವನ ಮೇಲೆ ಸೇಡು ತೀರಿಸಿಕೊಳ್ಳುವುದಾದರೂ ಹೇಗೆ? ಈ ಕಾರಣದಿಂದಲೇ ತನಗೆ ತನ್ನ ತಂದೆಯ ಭೂತ ನಿಯೋಜಿಸಿದಷ್ಟೆ ಕಾರ್ಯವನ್ನು ಶೀಘ್ರವಾಗಿ ಹ್ಯಾಮ್ಲೆಟ್ ನೆರವೇರಿಸಲು ಇಷ್ಟಪಡುವುದಿಲ್ಲ. ಹಾಗೆಯೇ ಅವನು ಒಫೀಲಿಯಳೊಡನೆ ನಡೆದುಕೊಳ್ಳುವ ರೀತಿ ಅವನ ಈಡಿಪಸ್ ತುಮುಲವನ್ನು ದೃಢೀಕರಿಸುತ್ತದೆ. ಈ ನಾಟಕವನ್ನು ರಚಿಸುವಾಗ ಶೇಕ್ಸ್‌ಪಿಯರ್ ಈಡಿಪಸ್ ಭಾವನೆಗಳ ಪ್ರಭಾವದಲ್ಲಿದ್ದಿರಬೇಕೆಂದು ಫ್ರಾಯ್ಡ್ ವಾದಿಸಿದ್ದಾನೆ. ನಾಟಕ ರಚನೆಗೆ ಕೊಂಚಕಾಲ ಮೊದಲು ಶೇಕ್ಸ್‌ಪಿಯರ್‌ನ ತಂದೆ ತೀರಿಕೊಂಡಿದ್ದನಂತೆ ಮತ್ತು ಶೇಕ್ಸ್‌ಪಿಯರ್‌ನ

ಮಗನೊಬ್ಬ ಸಣ್ಣ ವಯಸ್ಸಿನಲ್ಲೇ ತೀರಿಕೊಂಡಿದ್ದನಂತೆ. ಅವನ ಹೆಸರು ಹ್ಯಾಮ್ಲೆಟ್ (Hamlet). ಈ ಹಿನ್ನೆಲೆಯಲ್ಲೇ ಶೇಕ್ಸ್‌ಪಿಯರ್ ಹ್ಯಾಮ್ಲೆಟ್ ನಾಟಕವನ್ನು ರಚಿಸಿರಬೇಕು ಎನ್ನುತ್ತಾನೆ ಫ್ರಾಯ್ಡ್.

ಹೀಗೆ ತನ್ನ ವಾದಗಳಿಗೆ ಸಮರ್ಥನೆಯನ್ನು ಸಾಹಿತ್ಯದ ಮೂಲಕ ಕೊಡಲು ಹೊರಟ ಫ್ರಾಯ್ಡ್ ಕನಸುಗಳಿಗೂ, ಮನೋವಿಕಾರಗಳಿಗೂ, ಸಾಹಿತ್ಯ ರಚನೆಗೂ ಪ್ರೇರಣೆಗಳು ಒಂದೇ ಬಗೆಯವು ಎನ್ನುತ್ತಾನೆ. ಅವುಗಳೆಂದರೆ ಸುಪ್ತಚೇತನದ ಅತೃಪ್ತ ಆಕಾಂಕ್ಷೆಗಳು, ಲೈಂಗಿಕ ತುಮುಲಗಳು ಎಂಬ ವಾದವನ್ನು ಮಂಡಿಸುತ್ತಾನೆ.

ಒಟ್ಟೊ ರ್‍ಯಾಂಕ್ (Otto Rank, Psychoanalyst) ಪ್ರಕಾರ ಸಾಹಿತಿ ಕನಸಿಗನಿಗೂ, ಮನೋರೋಗಿಗೂ (Neurotic) ನಡುವೆ ಇರುತ್ತಾನೆ. ಈ ಮೂರು ಜನರ (ಸಾಹಿತಿ, ಮನೋರೋಗಿ, ಕನಸು ಕಾಣುವವ) ಮನೋ ವ್ಯಾಪಾರಗಳು ಒಂದೇ ತೆರನಾದವು. ಅವುಗಳ ಅಭಿವ್ಯಕ್ತಿ ಮಾತ್ರ ಬೇರೆ ಬೇರೆ. ಮನೋರೋಗಿ ತನ್ನ ಪರಿಸರಕ್ಕೆ ಒಪ್ಪಿಗೆಯಾಗದ ಮನೋವಿಕಾರ ಗಳಿಂದಾಗಿ ವಾಸ್ತವ ಪ್ರಪಂಚದಿಂದ ವಿಮುಖನಾಗುತ್ತಾನೆ. ಸಾಹಿತಿ ವಾಸ್ತವಿಕತೆಯಿಂದ ಹಿಮ್ಮೆಟ್ಟಿದರೂ ಜನ ಮೆಚ್ಚುವಂತಹ ಒಂದು ಪ್ರತಿ ವಿಶ್ವವನ್ನು ತನ್ನ ಕಲ್ಪನೆಯಲ್ಲಿ ನಿರ್ಮಿಸಿಕೊಂಡು ಅದರಲ್ಲಿ ವಿಹರಿಸುತ್ತಾನೆ. ಹೀಗೆ ಮನೋರೋಗಿ ಸೋತಲ್ಲಿ ಸಾಹಿತಿ ಗೆಲ್ಲುತ್ತಾನೆ. ರ್‍ಯಾಂಕ್ ಪ್ರಕಾರ ಸಾಹಿತ್ಯವನ್ನೊಳಗೊಂಡಂತೆ ಸಕಲ ಸುಂದರ ಕಲಾಸೃಷ್ಟಿಗಳು ಹುಟ್ಟುವುದು ನಮ್ಮ ಅತಿ ನೋವಿನ ಅನುಭವಗಳಲ್ಲಿಯೇ (our sweetest expressions originals from our worst pains).

ಸಾಹಿತ್ಯವನ್ನು ಕುರಿತು ಚರ್ಚಿಸಿದ ಯೂಂಗ್ (Jung) ಫ್ರಾಯ್ಡ್‌ನ ಅನುಯಾಯಿ ಆಗಿದ್ದರೂ, ಸಾಹಿತ್ಯಕ್ಕೆ ಸುಪ್ತಚೇತನದ ಅತೃಪ್ತ ಲೈಂಗಿಕ ಬಯಕೆಗಳು ಕಾರಣ ಎಂಬುದನ್ನು ಒಪ್ಪುವುದಿಲ್ಲ. ಹಾಗೆಯೇ ಸಾಹಿತ್ಯಕ್ಕೆ ಪ್ರೇರಣೆ ಸುಪ್ತಚೇತನದಿಂದ ಬರುತ್ತದೆ ಎಂಬುದನ್ನು ಆತ ಅಲ್ಲಗಳೆಯುವುದೂ ಇಲ್ಲ. ಆತನ ಪ್ರಕಾರ ಸಾಹಿತ್ಯ ಮನಸ್ಸಿನ ವಿಕಾಸದ ದ್ಯೋತಕ, ಮನಃಸ್ವಾಸ್ಥ್ಯದ ಅಭಿವ್ಯಕ್ತಿ, ಕಲೆ ಮತ್ತು ಸಾಹಿತ್ಯ ಒಟ್ಟು ವ್ಯಕ್ತಿಯ ಮೂಲಕ ನಡೆಯುವ ಅಭಿವ್ಯಕ್ತಿ, ಸಾಹಿತ್ಯ ಮತ್ತು ಮನೋವ್ಯಾಧಿ ಒಂದೇ ಮೂಲದಿಂದ ಬಂದಿರಬಹುದಾದರೂ ಅವೆರಡೂ ಒಂದೇ ಅಲ್ಲ. ಹಾಗೆ ನೋಡಿದರೆ, ಫ್ರಾಯ್ಡ್‌ನ ಪ್ರಕಾರ ಧರ್ಮ (Religion), ದರ್ಶನ (Philosophy), ಸಾಹಿತ್ಯ ಹಾಗೂ ಮನೋ ವ್ಯಾಧಿ ಇವೆಲ್ಲವುಗಳ ಮೂಲ ಒಂದೇ ಅಲ್ಲ ಎಂಬುದು ಯೂಂಗ್‌ನ ಅಭಿಮತ.

ಯೂಂಗ್ ಸಾಹಿತ್ಯವನ್ನು ಮನೋ ವೈಜ್ಞಾನಿಕ ಹಾಗೂ ದಾರ್ಶನಿಕವೆಂದು ವಿಂಗಡಿಸಿ ವಾದವನ್ನು ಸಮರ್ಥಿಸುತ್ತಾನೆ. ಅವನ ಆಸಕ್ತಿ ಹೆಚ್ಚಾಗಿ ಕಂಡುಬರುವುದು ದಾರ್ಶನಿಕ ಕೃತಿಗಳಲ್ಲಿ. ಈತನ ಪ್ರಕಾರ ಸಾಹಿತ್ಯಕ್ಕೆ ವಸ್ತು ಒದಗುವುದು ದರ್ಶಾನಾನುಭವಗಳಿಂದ. ಈ ದರ್ಶನಗಳು ಮೂಡಿಬರುವುದು ಸುಪ್ತಚೇತನದಿಂದ. ಯೂಂಗ್‌ನ (Jung) ಸುಪ್ತಚೇತನ ಸಿದ್ಧಾಂತ ಫ್ರಾಯ್ಡ್‌ಗಿಂತ ಭಿನ್ನವಾದುದು. ಈತನ ಪ್ರಕಾರ ಸುಪ್ತಚೇತನದಲ್ಲಿ ಎರಡು ಪದರಗಳಿವೆ. ಒಂದು ವಯುಕ್ತಿಕ

ಸುಪ್ತಚೇತನ (Personal Unconscious) ಇನ್ನೊಂದು ಸಾಮೂಹಿಕ ಸುಪ್ತಚೇತನ (Collective Unconsiousness). ಒಬ್ಬ ವ್ಯಕ್ತಿಯ ಅನುಭವಗಳು ಮಾತ್ರ ಮೊದಲನೆಯದಲ್ಲಿ ಇರುತ್ತವೆ. ಆದರೆ ಸಾಮೂಹಿಕ ಸುಪ್ತಚೇತನಗಳು ಅನುವಂಶಿಕವಾದವು. ಇಡೀ ಮಾನವ ಜನಾಂಗ ತನ್ನ ವಿಕಾಸದ ಹಾದಿಯಲ್ಲಿ ಅನುಭವಿಸಿದ ಘಟನೆಗಳ ಸಂಚಿತಸಾರ ಸಂಗ್ರಹವೇ ಸಾಮೂಹಿಕ ಸುಪ್ತಚೇತನ, ವಿಶ್ವದಲ್ಲಿ ಜೀವ ಉತ್ಪತ್ತಿಯಾದಂದಿನಿಂದ ಇಂದಿನವರೆಗೆ ಜೀವಿಗೆ ಆಗಿರಬಹುದಾದ ಅನುಭವಗಳ ಪಳೆಯುಳಿಕೆಗಳು ಅಲ್ಲಿರುತ್ತವೆ. ಸಾಮೂಹಿಕ ಸುಪ್ತಚೇತನ ಮಾನವರೆಲ್ಲರಲ್ಲೂ ಇರುವ ಸಾಮಾನ್ಯ ಪದರ, ಮಾನವೀಯತೆಯ ಅಡಿಪಾಯ. ಯೂಂಗ್‌ನ ಪ್ರಕಾರ ಸಾಹಿತ್ಯಕ್ಕೆ ಪ್ರೇರಣೆ ಉಂಟಾಗುವುದು ಇಲ್ಲಿಂದಲೇ. ಸಾಹಿತ್ಯ ಅವತರಿಸಲು ಪ್ರೇರಣೆ ಹಾಗೂ ಪರಿಸರ ಬೇಕು. ಸಾಹಿತಿ ತನಗಾದ ದರ್ಶಾನಾನುಭವಕ್ಕೆ ಒಂದು ರೂಪಕೊಟ್ಟು, ಅದಕ್ಕೊಂದು ಹಿನ್ನೆಲೆಯನ್ನು ರಚಿಸಿ ಜನರ ಮುಂದಿಡುತ್ತಾನೆ. ಅದನ್ನು ವಿವರಿಸುವುದು, ಅರ್ಥೈಸುವುದು ಜನರಿಗೆ ಸೇರಿದ್ದು ಎಂಬುದು ಯೂಂಗ್‌ನ ಅಭಿಪ್ರಾಯ.

ಫ್ರಾಯ್ಡ್ ಹೇಳಿದ ಸುಪ್ತ ಲೈಂಗಿಕ ಪ್ರವೃತ್ತಿಗಳಷ್ಟೇ ಸಾಹಿತ್ಯಕ್ಕೆ ಪ್ರೇರಣೆ ಎಂಬ ಮಾತನ್ನು ಆಧುನಿಕ ಮನೋ ವಿಜ್ಞಾನಿಗಳು ಒಪ್ಪುವುದಿಲ್ಲ. ಫ್ರಾಯ್ಡ್ ಹೇಳಿರುವುದು ಒಂದು ಕಾರಣ. ಯೂಂಗ್ ಹೇಳಿದ್ದು ಇನ್ನೊಂದು ಕಾರಣ. ಫ್ರಾಯ್ಡ್ ಮತ್ತು ಯೂಂಗರಿಗೆ ತಿಳಿಯದ, ನಾವು ತಿಳಿದಿಲ್ಲದ ಹಲವು ಕಾರಣಗಳು ಸಾಹಿತ್ಯ ಸೃಷ್ಟಿಗೆ ಇರಬಹುದು. ಹಾಗೆ ನೋಡಿದರೆ, ಫ್ರಾಯ್ಡ್‌ನಿಂದ ಆರಂಭವಾದ ಮನೋ ವೈಜ್ಞಾನಿಕ ಸಾಹಿತ್ಯ ವಿಶ್ಲೇಷಣೆ ನಡೆದು ಬಂದ ಹಾದಿಯಲ್ಲಿ ಒಂದು ಕ್ರಮ ಕಂಡುಬರುತ್ತದೆ. ಫ್ರಾಯ್ಡ್ ಪ್ರಕಾರ ಸಾಹಿತ್ಯಕ್ಕೆ ಪ್ರೇರಣೆ ಸುಪ್ತ ಮನಸ್ಸಿನ ಲೈಂಗಿಕ ಸಮಸ್ಯೆಗಳು. ಯೂಂಗ್‌ನ ಕಾಲಕ್ಕೆ ಅದು ಸುಪ್ತಮನಸ್ಸಿನ ಸಮಸ್ಯೆಗಳಷ್ಟೇ ಎಂಬುದಾಗಿ ಪರಿಗಣಿಸಲಾಯಿತು. ಇಂದಿನವರ ಪ್ರಕಾರ ಅವು ಕೇವಲ ಮನಸ್ಸಿನ ಸಮಸ್ಯೆಗಳಾಗಿ ಉಳಿದಿವೆ. ಅವು ವ್ಯಕ್ತಿಯ ಆಂತರಿಕ ಸಮಸ್ಯೆಗಳಾಗಿರಬಹುದು ಅಥವಾ ವ್ಯಕ್ತಿಗಳ ನಡುವಣ ಸಮಸ್ಯೆಗಳಾಗಿರ ಬಹುದು. ಅವು ಪ್ರಜ್ಞಾಪೂರ್ವಕವಾಗಿರಬಹುದು ಅಥವಾ ಅಪ್ರಜ್ಞಾಪೂರ್ವಕವಾಗಿರಬಹುದು. ಸಮಸ್ಯೆಗಳು ಲೈಂಗಿಕ, ಬೌದ್ಧಿಕ, ಧಾರ್ಮಿಕ, ಕೌಟುಂಬಿಕ, ಸಾಮಾಜಿಕ ಅಥವಾ ದಾರ್ಶನಿಕವಾಗಿರ ಬಹುದು. ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಬೇರೆ ಬೇರೆ ವ್ಯಕ್ತಿಗಳು ಬೇರೆ ಬೇರೆ ಮಾರ್ಗವನ್ನು ಅವಲಂಬಿಸುತ್ತಾರೆ. ಕೆಲವರು ಸಾಹಿತ್ಯ ರಚನೆ ಮಾಡಬಹುದು. ಆದರೆ ಯಾವುದೇ ಒಬ್ಬ ಸಾಹಿತಿಯೂ ತಾವು ಸಾಹಿತ್ಯ ರಚನೆಯ ಮೂಲಕ ತನ್ನ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಕೊಂಡಿರುವುದಾಗಿ ಹೇಳಲು ಸಂಪೂರ್ಣ ಸಾಧ್ಯವಾಗುವುದಿಲ್ಲ. ಸಾಧ್ಯವಾಗಿಯೂ ಇಲ್ಲ. ಸ್ವಲ್ಪಮಟ್ಟಿಗೆ ಆತ ಆ ಸಮಸ್ಯೆಯಿಂದ ಕ್ಷಣಿಕವಾದ ಬಿಡುಗಡೆ ಹೊಂದಿದ ಭಾವವನ್ನು ಹೊಂದಬಹುದಷ್ಟೆ.

ಆಂಡ್ರೆ ಮಾರ್ರಿಸ್ (Andre Maurois) ಎಂಬ ಫ್ರೆಂಚ್ ಬರಹಗಾರನ ಪ್ರಕಾರ ಬರಹದ ಮೂಲಕ ತನ್ನನ್ನು ತಾನು ಹೊರಸೂಸುವ ಬಯಕೆ, ಕಾರ್ಯರೂಪದಲ್ಲಿ ಪರಿಹರಿಸಿಕೊಳ್ಳಲಾಗದ ಜೀವನದ ಸಂದಿಗ್ಧಗಳು ಅಥವಾ ಆಂತರಿಕ ಸಂಘರ್ಷಗಳಿಂದ ಉದ್ಭವಿಸುತ್ತವೆ. (The need

to express oneself in writing springs from Maladjustment to life or from an inner conflict, which man cannot resolve in action). ಈ ಮಾತನ್ನು ಆಧುನಿಕ ಮನೋವಿಜ್ಞಾನಿಗಳು ಒಪ್ಪುತ್ತಾರೆ. ಹಾಗೆಯೇ ಸಮಕಾಲಿನ ಮನೋವಿಜ್ಞಾನಿ ಹಾರೊವರ್‌ಳು (Horrower) ತನ್ನ ಮಾತುಗಳಲ್ಲಿ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾಳೆ.

I write poems because they solve a conflict, because I am ill at ease spiritually and I want to clarify me thoughts and feelings. I write poem because of some inner chaos. I am driven to create order. I write poems because I am flooded, overfowered by feelings which have been provoked by some aspect of life or nature. The great bulk of feeling can only be subdued or brought under control if I allow some intellectual craftsmanship to work on it to produce a manageable thought which I can control in the place of all-pervading emotions which control me.

ಪದ್ಯ ರಚನೆ ನನ್ನ ಆಂತರಿಕ ಸಂಘರ್ಷಗಳನ್ನು ಪರಿಹರಿಸುತ್ತದೆ. ನನ್ನ ಅನಿಸಿಕೆಗಳು ಚಿಂತನೆಗಳನ್ನು ಪುಷ್ಟೀಕರಿಸುತ್ತದೆ. ನನ್ನ ಅಂತರಂಗದ ಗೊಂದಲವನ್ನು ಪರಿಹರಿಸಲು ಒಂದು ವ್ಯವಸ್ಥಿತ ಪರಿಸ್ಥಿತಿಯನ್ನುಂಟು ಮಾಡುತ್ತದೆ. ಯಾವುದೋ ಒಂದು ಬಾಹ್ಯಪ್ರಚೋದನೆ ನನ್ನಲ್ಲಿ ಭಾವಗಳ ಮಹಾ ಪೂರವನ್ನುಂಟು ಮಾಡಿ, ನಾನು ಅವುಗಳ ಕೈವಶವಾದಾಗ ಪದ್ಯ ಬರೆಯುತ್ತೇನೆ. ಭಾವೋದ್ವೇಗಗಳನ್ನು ತಗ್ಗಿಸಿ ನಿಯಂತ್ರಣಕ್ಕೊಳಪಡಿಸಬೇಕಾದರೆ ನನಗೆ ಬರವಣಿಗೆಯಂತಹ ಬೌದ್ಧಿಕ ಕ್ರಿಯೆ ಅವಶ್ಯಕ. ಆಗ ಮಾತ್ರ ನನ್ನನ್ನು ನಿಯಂತ್ರಿಸಲು ಹೊರಟಿದ್ದ ಚಿಂತನೆಗಳನ್ನು ನಾನು ನಿಯಂತ್ರಿಸುವುದು ಸಾಧ್ಯವಾಗುತ್ತದೆ.

ಒಟ್ಟಾರೆ ಸಾಹಿತಿ ತನ್ನ ಸಾಹಿತ್ಯದ ಮೂಲಕ ಆತ್ಮಾಭಿವ್ಯಕ್ತಿ ಮಾಡುತ್ತಾನೆ. ಆತನ ಅಂತರಂಗದ ಕ್ಷೋಭೆಗೆ ಸಾಹಿತ್ಯ ಚಿಕಿತ್ಸೆಯಾಗುತ್ತದೆ ಎಂಬುದನ್ನು ಸ್ವಲ್ಪಮಟ್ಟಿಗೆ ಒಪ್ಪಬಹುದಾದರೂ ಪೂರ್ಣ ಪ್ರಮಾಣದಲ್ಲಲ್ಲ. ಕೇವಲ ಸಾಹಿತಿಯ ಆಂತರಿಕ ತುಮುಲಗಳೆ ಮುಖ್ಯವಾಗುತ್ತವೆ ಎಂಬುದನ್ನು ಒಪ್ಪುವುದು ಕಷ್ಟಸಾಧ್ಯ. ಆದರೂ ಸಾಹಿತ್ಯದ ಚಿಕಿತ್ಸಾಗುಣ ಮನೋ ವಿಜ್ಞಾನಿಗಳಿಗೆ ಮನದಟ್ಟಾಗಿರುವುದಂತೂ ಸತ್ಯ

ಅಧ್ಯಾಯ : ನಾಲ್ಕು

ಸ್ತ್ರೀ ಪಾತ್ರಗಳ ಅಧ್ಯಯನ

ಅಧ್ಯಾಯ : ನಾಲ್ಕು

ಸ್ತ್ರೀ ಪಾತ್ರಗಳ ಅಧ್ಯಯನ

'ಹಳದಿ ಮೀನು'

ಅವಳು ಪಾತ್ರ ವಿಶ್ಲೇಷಣೆ

ಬದಲಾದ ಅನುಭವಗಳಿಗೆ ತಮ್ಮನ್ನು ತಾವು ಅನ್ವೇಷಿಸಿಕೊಳ್ಳುವ ಪ್ರಯತ್ನವು, ಹೊಸ ಚಿಂತನೆಗಳಿಗೆ, ಗ್ರಹಿಕೆಗಳಿಗೆ ಸದಾ ಮುಖಾಮುಖಿಯಾಗುತ್ತಿರುತ್ತದೆ. ಮತ್ತು ಇದು ಆಧುನಿಕ ಜಗತ್ತಿನ ಎಲ್ಲರನ್ನೂ ತೀವ್ರವಾಗಿ ತಟ್ಟಿ ಬಾಧಿಸುತ್ತಿರುತ್ತದೆ. ಇದರಲ್ಲಿ ಅನೇಕರು ಸಫಲರಾಗುತ್ತಾರೆ. ಇನ್ನೂ ಅನೇಕರು ಸಫಲರಾಗುವುದಿಲ್ಲ. ಆಂತರಿಕ ಸಂಬಂಧಗಳನ್ನು ಬಾಹ್ಯ ಸಂಬಂಧಗಳೊಂದಿಗೆ ಜೋಡಿಸಿಕೊಳ್ಳುವಲ್ಲಿ ಗೊಂದಲವನ್ನು ಸೃಷ್ಟಿಸಿಕೊಳ್ಳುತ್ತಾರೆ ಮತ್ತು ಅನುಭವಿಸುತ್ತಾರೆ. ಮನಸ್ಸು ಪ್ರೀತಿ, ದ್ವೇಷ, ಅಸೂಯೆ, ಆದರ, ಗೌರವ, ಅಭಿಮಾನ, ಜಿಗುಪ್ಸೆ, ಅಹಂ, ಕ್ರೋಧ ಮುಂತಾದವುಗಳ ಸಂಕೀರ್ಣತೆಯ ಸಂಘರ್ಷಗಳಲ್ಲಿಯೇ ಹಲವರ ಬದುಕು ಕಳೆದುಹೋಗುತ್ತದೆ. 'ಹಳದಿ ಮೀನು' ಕಾದಂಬರಿಯ "ಅವಳು" ಪಾತ್ರವನ್ನು ಮೇಲೆ ಹೇಳಿದ ಸಂದರ್ಭದೊಂದಿಗೆ ಇಟ್ಟು ನೋಡುವ ಮೂಲಕ ಈ ಕುರಿತಾದ ಕಾರ್ಯಕಾರಣ ಸಂಬಂಧಗಳ ಮನೋವೈಜ್ಞಾನಿಕ ಹಿನ್ನೆಲೆಯ ವಿಶ್ಲೇಷಣೆಯನ್ನು ಮಾಡಬಹುದು.

ಇಂದ್ರಿಯಗಮ್ಯ ಭಾವನಾತ್ಮಕ ಸಂಭ್ರಮಗಳಲ್ಲಿ ಉಳಿದುಬಿಡುವ ಯೌವನದ ಕಾಲಘಟ್ಟವು ಅನೇಕ ಅನುಭವಗಳ ಶೋಧನೆಗೂ, ಹೊಸ ಆವಿಷ್ಕಾರಗಳಿಗೂ, ಸಂಶೋಧನೆಗಳಿಗೂ ನೆಲೆಯಾಗುವುದೇ ಅದರ ಶಕ್ತಿ ಸಂಚಯಗೊಂಡ ಪರಿಣಾಮ. ಸಾಮಾಜಿಕ ಬದುಕು ಹಿಡಿತಕ್ಕೆ ಸಿಗದ, ಅಂತರಂಗದ ದ್ವಂದ್ವಗಳ ಸಂಘರ್ಷಗಳ ಭರಪೂರ ಸಮಯ. ಇಂದ್ರಿಯಗಳ ಸೆಳೆತ ಒಂದೆಡೆಯಾದರೆ, ಅದರ ವಿರುದ್ಧ ದಿಕ್ಕಿಗೆ ಪ್ರವರ್ತಿಸುವ ಮನಸ್ಸಿನ ಸೆಳೆತ ಇನ್ನೊಂದೆಡೆ. ಇವೆರಡನ್ನೂ ಸಮತೋಲನಗೊಳಿಸಿಕೊಂಡು ಮುನ್ನಡೆಯುವಾಗ ಇಡಬೇಕಾದ ಒಂದೊಂದು ಹೆಜ್ಜೆಯೂ ಅತ್ಯಂತ ಮಹತ್ವದ್ದು. 'ಅವಳು' ಕೂಡಾ ಇಂತಹ ಸಂದರ್ಭವೊಂದಕ್ಕೆ ಮುಖಾಮುಖಿಯಾಗಿರುವುದು ಆಕೆಯ ಮೂಲಕವೇ ಸ್ಪಷ್ಟವಾಗುತ್ತದೆ. ಆದರೆ ಈ ಸಂದರ್ಭದಲ್ಲಿ

ಅವಳ ನಿರ್ಧಾರಗಳು, ಅದರ ಪರಿಣಾಮಗಳು ಮತ್ತು ಅವು ಆಕೆಯ ಬದುಕನ್ನು ನಿಯಂತ್ರಿಸುವ, ಆಕ್ರಮಿಸುವ ಸಂದರ್ಭದಲ್ಲಿ ಅದಕ್ಕೆ ಆಕೆಯ ಮನಸ್ಸು ಅಭಿವ್ಯಕ್ತಿಸುವ ಪರಿಯೇ ವಿಶ್ಲೇಷಣೆಗೆ ಕಾರಣವಾದುದೆಂದು ಪರಿಗಣಿಸಲಾಗುತ್ತದೆ.

'ಅವಳು' ಆಧುನಿಕತೆಯ ಅನಿವಾರ್ಯತೆಯನ್ನು ಮನಗಂಡು ಅರ್ಥಮಾಡಿಕೊಳ್ಳುವ ಮತ್ತು ತನ್ನ ಕೌಟುಂಬಿಕ ಬೇರುಗಳಿಂದ ಕಳಚಿಕೊಳ್ಳದೆ ಇರುವ ಪರಂಪರೆಯ ಸತ್ವವನ್ನು ಅರಿತವಳು. ಆಧುನಿಕತೆಯ ರೋಮಾಂಚನವೂ ಆಕೆಗೆ ಗೊತ್ತಿದೆ. ಜೊತೆಗೆ ಪರಂಪರೆಯ ದೌರ್ಬಲ್ಯವೂ ಗೊತ್ತಿದೆ. ಹಾಗೂ ಆಧುನಿಕತೆಯ ಹಿಂಸೆಯೂ ಆಕೆಗೆ ಪರಿಚಿತವೇ. ಹೀಗೆ ಹಲವು ವಿಚಾರಗಳು ಒಂದು ಪಾತ್ರವನ್ನು ಕೇಂದ್ರ ಮಾಡಿ ಹಿಡಿದಿಡುವ ಪ್ರಯತ್ನದಲ್ಲಿ "ಅವಳ" ಪಾತ್ರದ ಸೃಷ್ಟಿಯಾದಂತೆ ಅನಿಸುತ್ತದೆ. ಈ ಕಾದಂಬರಿಯಲ್ಲಿ ಅವಳ ಗ್ರಹಿಕೆ, ಪ್ರತಿಕ್ರಿಯೆಗಳಲ್ಲಿ ಕಂಡುಬರುವ ಗೊಂದಲವು ಇಡೀ ಆಧುನಿಕತೆಗೆ ಒಳಗಾದ, ಒಳಗಾಗುತ್ತಿರುವವರೆಲ್ಲರ ಗೊಂದಲವೂ ಆಗಿದೆ. 'ಅವಳು' ಇಲ್ಲಿ ಪಾತ್ರಧಾರಿಯಾಗಿ, ಆಧುನಿಕ ಪ್ರಜ್ಞೆಯ ಸಾಕ್ಷಿಯಾಗಿಯೂ ನಿರೂಪಿಸಲ್ಪಡುತ್ತಾಳೆ. ಆಧುನಿಕತೆಯನ್ನು ಮೀರಿದ ಯೋಚನಾ ವರ್ಗವೊಂದು ಇದರ ಜಡತೆಗೆ ಬೇಸತ್ತು, ವರ್ತಮಾನದಾಚೆಗೆ ನಿಂತು ನೋಡುವಾಗಲೂ ಅನಿವಾರ್ಯವಾಗಿ, ಬದಲಾಗುವ ಬದುಕಿನ ಸ್ವರೂಪದ ತೆಕ್ಕೆಗೆ ಒಳಗಾಗುವ ಮತ್ತು ಅದರ ಪರಿಣಾಮವನ್ನು 'ಅವಳ' ಮೂಲಕ ನಿರೂಪಿಸಲಾಗಿದೆ. ಮುಖ್ಯವಾಗಿ ಕುಟುಂಬಕ್ಕಾಗಿ ತನ್ನ ಹಿತಾಸಕ್ತಿಯನ್ನು ಕಡೆಗಣಿಸುವ ಹೆಣ್ಣಿನ ಚಿತ್ರಣದ ಹಿಂದೆ ಸಾಮೂಹಿಕ ಸುಪ್ತಪ್ರಜ್ಞೆ(collective consciousness) ಕಾರ್ಯನಿರ್ವಹಿಸಿರುವುದು ಸ್ಪಷ್ಟ.

ಆಯ್ಕೆ ಮತ್ತು ನಿರಾಕರಣೆ ಇವೆರಡನ್ನೂ ಹೆಣ್ಣಿಗೆ ಸಂಬಂಧಿಸಿದಂತೆ ತೀರಾ ವೈಯಕ್ತಿ ನೆಲೆಯಲ್ಲಿ ಗ್ರಹಿಸಲಾಗುವುದಿಲ್ಲ. 'ಅವಳ' ಪ್ರಜ್ಞೆ ಎಂಬುದು ಆಕೆಯ ಪ್ರಜ್ಞೆಯ ಆಚೆಗೆ ನಿಂತು ನೋಡುವ ಮನಸ್ಥಿತಿಯಲ್ಲಿಯೇ ಗ್ರಹಿಸಲ್ಪಡುತ್ತದೆ; ನಿರೂಪಿಸಲ್ಪಡುತ್ತದೆ. ಆದರೆ 'ಅವಳ' ಮನಸ್ಥಿತಿಯ ನಿಜವಾದ ಸ್ವರೂಪವು ಈ ಕಾದಂಬರಿಯ ಅನೇಕ ಸಂದರ್ಭಗಳಲ್ಲಿ ಸಮಸ್ತ ಹೆಣ್ಣಿನ ಕುಲದ ಧ್ವನಿಯಾಗಿ ಮೂಡಿಬಂದಿದೆ. ಇಂತಹುದೆ ಧ್ವನಿಯನ್ನು ಈ ಕೆಳಗಿನ ಸಂದರ್ಭದಲ್ಲಿ ಗಮನಿಸಬಹುದು.

"ಲಂಗು ಲಗಾಮು ಎಂದರೆ ನನಗೆ ಮೈ ಉರಿಯುತ್ತದೆ. ಕೈಕಾಲು ಆಡಿಸುವುದಕ್ಕೂ ಜಾಗವಿಲ್ಲದ ಕಡೆ ನನ್ನ ಬುದ್ಧಿ ಕೆಡುತ್ತದೆ, ಕೂಗಾಡುತ್ತೇನೆ, ಹುಚ್ಚಿಯಾಗುತ್ತೇನೆ. ಯಾವನಾದರೂ ನನ್ನನ್ನು ಪಂಜರದಲ್ಲಿಡಬೇಕೆಂದು ಬಯಸಿದರೆ ಅವನ ಬಗ್ಗೆ 'ಜಿಗುಪ್ಸೆ' ಹುಟ್ಟುತ್ತದೆ. ಎಲ್ಲಾ ರೀತಿಯ ಜೀವನದಲ್ಲೂ ಪಾಲು ಪಡೆಯಬೇಕು. ಒಬ್ಬ ಗಂಡನಲ್ಲ. ಹತ್ತು ಗಂಡಸಾದರೂ ಅನುಭವಿಸಿ ನೋಡಿಬಿಡಬೇಕು".೧

ಹೆಣ್ಣನ್ನು ಕುರಿತಾಗಿ ಸ್ಥಾಪಿತ ಆಲೋಚನೆಗಳು, ಚಿಂತನೆಗಳು ಈಗಾಗಲೇ ಚಾಲ್ತಿಯಲ್ಲಿವೆ; ಮನಸ್ಸಿನಲ್ಲಿ ಬೇರೂರಿವೆ. ಆಕೆಯ ಕುರಿತಾಗಿ ಹೀಗೆ ಇರಬೇಕು ಎಂದು ನಿರೀಕ್ಷಿಸಲಾಗಿದೆ. ಆ

ನಿರೀಕ್ಷೆಯ ಸಾಕಾರದಲ್ಲಿ ಹೆಣ್ಣಿನ ಮಹತ್ವ ಅಡಗಿದೆ ಎಂದು ಹೆಣ್ಣನ್ನು ವ್ಯವಸ್ಥಿತವಾಗಿ ನಂಬಿಸಲಾಗಿದೆ. ಹಾಗಾಗದೇ ಹೋದ ಸಂದರ್ಭಗಳಲ್ಲಿ ಹೆಣ್ಣನ್ನು ದೈಹಿಕವಾಗಿ, ಮಾನಸಿಕವಾಗಿ ಹಿಂಸಿಸಲಾಗುತ್ತದೆ. ಆದರೆ ಆಕೆಯ ವರ್ತನೆ ಮತ್ತು ಅದು ನಡೆಯುತ್ತಿರುವ ಸನ್ನಿವೇಶ ಏಕೆ, ಹೇಗೆ ಎಂಬುದನ್ನು ಹುಡುಕುವ, ಅರಿಯುವ ಮಾನವೀಯ ನೆಲೆಯೇ ಕಂಡುಬರುವುದಿಲ್ಲ. ಯಾವುದೇ ಐಡಿಯಾಲಜಿ ಮತ್ತು ವಿಶ್ಲೇಷಣೆಗಳ ನಡುವೆ ಸಂಕೀರ್ಣ ಸಂಬಂಧಗಳನ್ನು ಕಾಣಬಹುದು. "ಪರಸ್ಪರ ಸಂಬಂಧವಿಲ್ಲದ ಭಿನ್ನ ಭಿನ್ನ ವಸ್ತುಗಳನ್ನು ಒಂದೆಡೆ ತರುವ ಮತ್ತು ಆ ಯತ್ನದಲ್ಲಿ ಅವುಗಳನ್ನು ಬದಲಾಯಿಸುವ ಒಂದು ತಯಾರಿಕೆ"[೨] ಎಂಬ ಮ್ಯಾಗೆರೆಯ ಸಾಹಿತ್ಯ ಕೃತಿಯ ವ್ಯಾಖ್ಯಾನವನ್ನು ಬಹುತೇಕ ಒಪ್ಪಿಕೊಳ್ಳಲೇಬೇಕಾಗುತ್ತದೆ.

'ಹಳದಿ ಮೀನು' ಕಾದಂಬರಿಯ ಅವಳು ಪಾತ್ರವನ್ನು ಮನಃಶಾಸ್ತ್ರೀಯವಾಗಿ ವಿಶ್ಲೇಷಿಸುವ ಸಂದರ್ಭದಲ್ಲಿ ಈ ಕೆಳಗಿನ ಅಂಶಗಳನ್ನು ಪರಿಗಣಿಸಲಾಗಿದೆ.

ಬಾಹ್ಯ ಹಾಗೂ ಸಾಮಾಜಿಕ ನೆಲೆಗಳಿಂದ ಕಂಡುಬರುವ ಹೆಣ್ಣಿನ ಕುರಿತಾದ ವಿಚಾರಗಳು.

ಪ್ರತಿ ವ್ಯಕ್ತಿಯ ವೈಯಕ್ತಿಕತೆಯಂತೆ 'ಅವಳು' ಪಾತ್ರದ ವೈಯಕ್ತಿಕತೆ.

'ಅವಳು' ಪಾತ್ರದ ಮೂಲಕ ಧ್ವನಿತವಾಗಿರುವ ಹೆಣ್ಣಿನ ಆಶಯ ಮನಃಶಾಸ್ತ್ರೀಯ ನೆಲೆ.

'ಅವಳು' ಪಾತ್ರದ ಪ್ರಜ್ಞೆ.

ಈಗಾಗಲೇ ಸಾಮಾಜಿಕ ನೆಲೆಗಳಲ್ಲಿ ಸಾಮಾನ್ಯ ನೆಲೆಯಲ್ಲಿ ಹೆಣ್ಣಿನ ಕುರಿತಾಗಿರುವ ಅಭಿಪ್ರಾಯಗಳನ್ನು ಬದಲಾಯಿಸುವ ಯಾವ ಅಂಶವೂ ಇಲ್ಲಿ ಕಂಡುಬರುವುದಿಲ್ಲ. ಪುರುಷನೊಬ್ಬನು ಜಗತ್ತನ್ನು ಗ್ರಹಿಸುವ ಸಂದರ್ಭದಲ್ಲಿ ತನ್ನನ್ನು ತಾನು ಉದಾತ್ತೀಕರಿಸಲು ಹೆಣ್ಣೊಬ್ಬಳ ಅಸ್ತಿತ್ವವನ್ನು ಕಡೆಗಣಿಸುವ ಪ್ರಯತ್ನವನ್ನು ಇಲ್ಲಿ ಕಾಣಬಹುದು. 'ಅವಳು' ಪಾತ್ರದ ಮೂಲಕ ಪುರುಷ ಪ್ರವೃತ್ತಿಯನ್ನು ಸಮರ್ಥಿಸುವ ಉದಾತ್ತೀಕರಿಸುವ ಪ್ರಯತ್ನವಾಗಿಯೇ ಕಂಡುಬರುತ್ತದೆ. ಆದರೆ ಈ ರೀತಿಯ ಸೃಷ್ಟಿಯ ಹಿಂದೆಯೂ ಅರಿವಿಲ್ಲದಂತೆ ಹೆಣ್ಣಿನ ತುಮುಲಗಳು, ತುಡಿತಗಳು, ತಮ್ಮ ಅಸ್ತಿತ್ವವನ್ನು ನಿರಾಕರಿಸುವ ವರ್ಗಕ್ಕೆ ಪ್ರತಿರೋಧವನ್ನು ಒಡ್ಡಿರುವುದು ಅತ್ಯಂತ ಸೂಕ್ಷ್ಮವಾಗಿ, ಸ್ಪಷ್ಟವಾಗಿ ಚಿತ್ರಿತವಾಗಿದೆ.

ಪ್ರತಿಯೊಬ್ಬ ಮನುಷ್ಯನ ವರ್ತನೆಗೆ ಎರಡು ಆಯಾಮಗಳಿರುತ್ತವೆ.

ಎಲ್ಲರೂ ಕಾಣುವಂತೆ ಅವನ ದೇಹದ ಭಂಗಿಯಲ್ಲಿ ಆಗುವ ಬದಲಾವಣೆಗಳು.

ಮನುಷ್ಯ ತಾನು ಮಾತ್ರ ಗುರುತಿಸಬಹುದಾದ ಬದಲಾವಣೆಗಳು.

"ಮನುಷ್ಯ ತಾನು ಸ್ವತಃ ಗುರುತಿಸಬಹುದಾದ ಆದರೆ ಸಾಮಾನ್ಯವಾಗಿ ಯಾರೂ ಗಮನಿಸದ ಮಿದುಳಿನಲ್ಲಿ ನಡೆಯುವ ಭಾವನೆ, ಯೋಚನೆಗಳಿಗೆ ಸಂಬಂಧಪಟ್ಟಂತೆ ಎಂಬ ಅರ್ಥದಲ್ಲಿ ಮಾನಸಿಕ ಎಂಬುದಾಗಿ ಅರ್ಥೈಸಲ್ಪಡುತ್ತದೆ".[೩]

'ಅವಳು' ಪಾತ್ರವನ್ನು ಮನಃಶಾಸ್ತ್ರೀಯ ವಿಶ್ಲೇಷಣೆಗೆ ಒಳಪಡಿಸುವ ಸಂದರ್ಭದಲ್ಲಿ 'ವೈಯಕ್ತಿಕ ಪ್ರಜ್ಞೆ'ಯ ಮೂಲಕ ನೋಡಬೇಕಾಗುತ್ತದೆ. ಏಕೆಂದರೆ ಸಾಹಿತ್ಯದ ವೈಶಿಷ್ಟ್ಯಪೂರ್ಣ ಗ್ರಹಿಕೆಯ ಹಾಗೂ ವಿಶ್ಲೇಷಿಸುವ ಕ್ರಮಗಳಲ್ಲಿ ಕೇವಲ ಸಾಹಿತ್ಯದ ಬಗ್ಗೆ, ಬದುಕಿನ ಬಗ್ಗೆ ನೋಡಲಾಗುತ್ತದೆಯೇ ವಿನಃ ಪ್ರತಿಯೊಂದು ಪಾತ್ರದ ಆಶಯವನಲ್ಲ. ಪ್ರಜ್ಞೆಯನ್ನಲ್ಲ. "ವಾಸ್ತವಿಕ ಓದುಗನು ಒಂದು ಸಾಹಿತ್ಯಕ ಕೃತಿಯ ಅರ್ಥವನ್ನು ಗ್ರಹಿಸುವ ಬಗ್ಗೆ ಇಜ಼ರ್ ಒಂದು ಮಹತ್ವಪೂರ್ಣ ಒಳನೋಟವನ್ನು ಕೊಟ್ಟಿದ್ದಾನೆ. ಅವನ ವಾದವೆಂದರೆ "ಒಂದು ಸಾಹಿತ್ಯ ಕೃತಿಯನ್ನು ಇಡಿಯಾಗಿ ಗ್ರಹಿಸುವುದು ಸಾಧ್ಯವೇ ಇಲ್ಲ. ಸಾಹಿತ್ಯ ಕೃತಿಯ ಗ್ರಹಿಕೆಯಲ್ಲಿ ನಮ್ಮ ದೃಷ್ಟಿಕೋನಗಳು ಸದಾ ಸೀಮಿತವಾಗಿದ್ದು, ಬದಲಾಗುತ್ತಾ ಹೋಗುತ್ತವೆ. ಒಂದು ಘಟನೆಯ ಗ್ರಹಿಕೆ ಮುಂದಿನ ಮತ್ತೊಂದು ಘಟನೆಯ ಗ್ರಹಿಕೆಯಿಂದ ಸ್ವಲ್ಪವಾದರೂ ಮಾರ್ಪಾಡಾಗುತ್ತದೆ. ಈ ರೀತಿ ಸದಾ ಬದಲಾಗುವ ಹಾಗೂ ಮಾರ್ಪಾಡಾಗುವ ಬಿಡಿ ಗ್ರಹಿಕೆಗಳು ಕೊನೆಗೆ ಒಂದು ನೂತನ ಅರಿವನ್ನು ಉಂಟುಮಾಡುತ್ತವೆ. ವಿಕ್ರಮಾರ್ಜುನ ವಿಜಯದಲ್ಲಿ ಮೊದಲು ನಾವು ದುರ್ಯೋಧನನ ಗುರುನಿಂದೆಯನ್ನು ಕೇಳಿದಾಗ ಅವನನ್ನು 'ಗರ್ವಿ' ಅಥವಾ ಅಸಂಸ್ಕೃತನೆಂದು ಗ್ರಹಿಸುತ್ತೇವೆ. ಮುಂದೆ ಅವನು ಕರ್ಣನನ್ನು ಕುರಿತು ಪ್ರಲಾಪಿಸುವಾಗ ಅವನ ಮಿತ್ರ ಪ್ರೇಮವನ್ನು ಗ್ರಹಿಸುತ್ತೇವೆ. ಆದರೆ ದುರ್ಯೋಧನನಿಗೆ ಕರ್ಣನ ನಿಜವಾದ ಹುಟ್ಟಿನ ಸಂಗತಿ ತಿಳಿದಿತ್ತು ಎನ್ನುವಾಗ ಈ ಗ್ರಹಿಕೆಯೂ ಸ್ವಲ್ಪ ಮಾರ್ಪಾಡಾಗುತ್ತದೆ. ಹೀಗೆ ಒಂದು ಸಾಹಿತ್ಯ ಕೃತಿಯ ಗ್ರಹಿಕೆ ಅರಿವಾಗಲೂ ಹಂತ ಹಂತವಾಗಿ ಸಾಗುತ್ತದೆ. ಮತ್ತು ಪ್ರತಿಯೊಂದು ಹಂತದಲ್ಲಿಯೂ ಗ್ರಹಿಕೆ ಅಪೂರ್ಣವಾಗಿದ್ದು, ಸೀಮಿತವಾಗಿರುತ್ತದೆ. ಇಂತಹ ಬದಲಾವಣೆ ಮತ್ತು ತಿದ್ದುಪಡಿಗಳೇ ಸಾಹಿತ್ಯ ಕೃತಿಯ ಅರ್ಥವನ್ನು ಸೃಜಿಸುತ್ತಾ ಹೋಗುತ್ತವೆ. ಅಭಿಪ್ರಾಯವು ಯಾವುದೇ ಕತೆ, ಕಾದಂಬರಿಯ ಜೊತೆ ಪಾತ್ರಗಳ ವಿಚಾರಕ್ಕೂ ಅನ್ವಯಿಸುತ್ತದೆ""[9]

'ಅವಳು' ಪಾತ್ರವನ್ನು ಸೃಷ್ಟಿಸಿರುವುದು 'ಪುರುಷ ಪ್ರಜ್ಞೆ' ಎಂಬ ಅರಿವಿನಿಂದಲೇ ನೋಡಿದಾಗ ಒಂದು ಸಮುದಾಯದ ಜೀವನ ಶ್ರದ್ಧೆಯನ್ನು ನಿಯಂತ್ರಿಸಿರುವ ಒಟ್ಟು ಬದುಕಿನ ವ್ಯಾಪಾರಗಳಲ್ಲಿ ಹೆಣ್ಣಿನ ಕುರಿತಾದ ಬದಲಾಗದ ಮನೋಭಾವಗಳೇ ಎದ್ದು ಕಾಣುತ್ತವೆ. ಮನುಷ್ಯ ಪರಿಸರದ ಫಲವಾಗಿ ಮಾತ್ರ ಹೆಣ್ಣನ್ನು ಪರಿಭಾವಿಸುವ, ಪ್ರವೃತ್ತಿಯು ವ್ಯಕ್ತಿ ವಿಶಿಷ್ಟ ಪ್ರಜ್ಞೆಯನ್ನು ನಿರಾಕರಿಸಿರುವುದು ಕಂಡುಬರುತ್ತದೆ.

ಮುಖ್ಯವಾಗಿ ಗಂಡು ಹೆಣ್ಣಿನ ಸಂಬಂಧಗಳನ್ನು ವಿವೇಚಿಸುವ ವಿಭಿನ್ನ ನೆಲೆಗಳನ್ನು ಆ ನೆಲೆಗಳನ್ನು ಕಂಡುಕೊಳ್ಳಲು ಅನುಸರಿಸಿರುವ ತಾತ್ವಿಕ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕಾಗಿದೆ. ಕೇವಲ ಶಾಸ್ತ್ರೀಯವಾಗಿ, ಪ್ರಾಯೋಗಿಕ ವಿಶ್ಲೇಷಣೆಯಾಗಿ ನೋಡುವಾಗ ಈಗಾಗಲೇ ಚಾಲ್ತಿಯಲ್ಲಿರುವ ಸಿದ್ಧಾಂತಗಳ ದೃಷ್ಟಿಕೋನಗಳ ನಿಯಂತ್ರಣಕ್ಕೆ ಒಳಗಾಗಿಬಿಡುವ

ಸಾಧ್ಯತೆ ಇದೆ. ಹಾಗಾಗಿಯೆ ಪ್ರತಿಯೊಬ್ಬ ವ್ಯಕ್ತಿಯ ಅನನ್ಯತೆಯನ್ನು, ಅವುಗಳ ಮೂಲಕ ಧ್ವನಿತವಾಗುವ ಜೀವನ ಸಂದರ್ಭಗಳನ್ನು ಗಣನೆಗೆ ತೆಗೆದುಕೊಳ್ಳುವಾಗ ಮನಃಶಾಸ್ತ್ರವು ನೆರವಿಗೆ ಬರುತ್ತದೆ.

'ಹಳದಿ ಮೀನು' ಕಾದಂಬರಿಯ 'ಅವಳು' ಪಾತ್ರ ಸ್ತ್ರೀ ಹಿತಾಸಕ್ತಿ, ಸ್ತ್ರೀವಾದ, ತತ್ವ ವಿಚಾರ ಮತ್ತು ಸಾಮಾಜಿಕ ಜೀವನ ಇವುಗಳ ನಡುವೆ ಯಾವುದೇ ಸಂಬಂಧವಿರದೆ, ಬೇರೆ ಬೇರೆ ತಾತ್ವಿಕತೆ, ಬೇರೆ ಬೇರೆ ಹಿತಾಸಕ್ತಿಗಳ ಪೋಷಣೆಗಾಗಿ ಸೃಷ್ಟಿಯಾದುದನ್ನು ಸಮರ್ಥಿಸುತ್ತದೆ. ಹೆಣ್ಣಿನ ಕುರಿತಾದ ಮಾನವ ಮನಸ್ಸಿನ ಅಜ್ಞಾತ ಪ್ರಕ್ರಿಯೆಗಳ ಹಾಗೂ ಸುಪ್ತ ಶಕ್ತಿಗಳ ಅಭ್ಯಾಸ ಮತ್ತು ಶೋಧನೆಯ ಫಲವೇ ಸಾಹಿತ್ಯದಂತಹ ಸೃಜನಶೀಲ ಕ್ರಿಯೆಯಲ್ಲೂ ಮುಂದುವರೆದಿರುವುದಕ್ಕೆ ಕಾರಣ. ಈ ಪಾತ್ರದ ಸೃಷ್ಟಿಯ ಹಿಂದಿನ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಸಂದರ್ಭದಲ್ಲಿ ಕಾದಂಬರಿಯ ಒಳರೂಪ ಮತ್ತು ಹೊರಗೆ ಅದರ ಪರಿಣಾಮ ಎರಡೂ ಕೂಡ ಒಂದೇ ಮಾನಸಿಕ ಸ್ಥಿತಿಯಿಂದಲೇ ಮೂಡಿರುವುದು ಸ್ಪಷ್ಟವಾಗುತ್ತದೆ.

"ಲಂಗು ಲಗಾಮು ಎಂದರೆ ನನಗೆ ಮೈ ಉರಿಯುತ್ತದೆ. ಕೈ ಕಾಲು ಆಡಿಸುವುದಕ್ಕೂ ಜಾಗವಿಲ್ಲದ ಕಡೆ ನನ್ನ ಬುದ್ಧಿ ಕೆಡುತ್ತದೆ. ಕೂಗಾಡುತ್ತೇನೆ, ಹುಚ್ಚಿಯಾಗುತ್ತೇನೆ. ಯಾವನಾದರೂ ನನ್ನನ್ನು ಪಂಜರದಲ್ಲಿ ಇಡಬೇಕೆಂದು ಬಯಸಿದರೆ ಅವನ ಬಗ್ಗೆ 'ಜಿಗುಪ್ಸೆ' ಹುಟ್ಟುತ್ತದೆ. ಎಲ್ಲಾ ರೀತಿಯ ಜೀವನದಲ್ಲೂ ಪಾಲು ಪಡೆಯಬೇಕು. ಒಬ್ಬ ಗಂಡನಲ್ಲಿ ಹತ್ತು ಗಂಡಸಾದರೂ ಅನುಭವಿಸಿ ನೋಡಿಬಿಡಬೇಕು".[೫]

ಈ ಮೇಲಿನ ಸಂದರ್ಭವು ಬದುಕಿನಲ್ಲಿ ಆಳವಾಗಿ ಬೇರೂರಿರುವ ಪುರುಷಾಧಿಕಾರತ್ವ ನಿಯಂತ್ರಣದ ವಿರುದ್ಧ ಹೆಣ್ಣೊಬ್ಬಳ ಅಮೂರ್ತ ರೂಪದ ಪ್ರತಿಭಟನೆ ಎಂದೆನಿಸುತ್ತದೆ. ಆದರೆ ಭೂತಕಾಲದ ಹೊರಗೆ ನಿಂತು ಕಾರ್ಯನಿರ್ವಹಿಸುವ ಬೌದ್ಧಿಕ ಅಥವಾ ನೈತಿಕ ಪರಿಕಲ್ಪನೆಗಳಿಂದ ಈ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಆಗುವುದಿಲ್ಲ. ಬದಲಾಗಿ ಪ್ರಸ್ತುತ ನಾವು ಜೀವಿಸುತ್ತಿರುವ ಕಾಲಘಟ್ಟದಲ್ಲೂ ಬದಲಾಗದೇ ಹಾಗೇ ಉಳಿದಿರುವ ಈ ಅನುಭವವನ್ನು ವಿರೋಧಿಸುವ ಪ್ರವೃತ್ತಿಯಾಗಿಯೇ ಅರ್ಥಮಾಡಿಕೊಳ್ಳಬೇಕಾಗುತ್ತದೆ.

'ಅವಳನ್ನು' ಅವನು 'ಹೆಣ್ಣು' ಎಂಬ ಪೂರ್ವಾಗ್ರಹದಿಂದಲೇ ನೋಡುತ್ತಾನೆ ಮೆಚ್ಚುತ್ತಾನೆ, ಅನುಮಾನಿಸುತ್ತಾನೆ, ಕಡೆಗಣಿಸುತ್ತಾನೆ. ಅವಳ ಹೆಣ್ತನವನ್ನು ದೈಹಿಕವಾಗಿ ಗ್ರಹಿಸಿರುವ ನೆಲೆ ಒಂದೆಡೆಯಾದರೆ ತನ್ನ ದೃಷ್ಟಿಕೋನದಿಂದಲೇ ಹೆಣ್ಣನ್ನು ಗ್ರಹಿಸುವ, ವಿಶ್ಲೇಷಿಸುವ ಮತ್ತು ಅವಳ ಕುರಿತಾಗಿ ತೀರ್ಮಾನ ಕೈಗೊಳ್ಳುವ ಪುರುಷ ನೆಲೆಯೆ ಇಲ್ಲಿಯೂ ಕಂಡುಬರುತ್ತದೆ. ಅವಳು ತನ್ನನ್ನು ತಾನು ವಿಮರ್ಶಿಸುವ ಪರಿಭಾವಿಸುವ, ಅಂತರಾವಲೋಕನ ಮಾಡಿಕೊಳ್ಳುವುದಕ್ಕೂ, ಅವನು ಅವಳನ್ನು ಕುರಿತಾಗಿ ಗ್ರಹಿಸಿರುವ ನೆಲೆಯಲ್ಲೂ ವ್ಯತ್ಯಾಸಗಳು ಸ್ಪಷ್ಟವಾಗುತ್ತವೆ.

ಅವಳು ತನ್ನನ್ನು ತಾನು ಮೀರಲಾರದ ವ್ಯಕ್ತಿ ವಿಶಿಷ್ಟ ಸಂವೇದನೆಗಳನ್ನು ಮತ್ತು ಅವಳನ್ನು ಮೀರಿದ ಸಂಬಂಧಗಳ ಸಾಂಸ್ಕೃತಿಕ ಘರ್ಷಣೆಗಳನ್ನು ಕಾಣಬಹುದು. ಇಲ್ಲಿ ಮನೋವೈಜ್ಞಾನಿಕ ನೆಲೆಗಳು, ಆಂತ್ರೋಪೊಲಾಜಿಕಲ್ ವಿಸ್ತಾರಗಳನ್ನೂ ಏಕಕಾಲದಲ್ಲಿ ಸಾಧ್ಯವಾಗಿಸುವಂತಹ ಸಂದರ್ಭ ಇದೆ. ಹೆಣ್ಣು ತನ್ನ ಬದುಕನ್ನು ತಾನೇ ರೂಢಿಸಿ, ರೂಪಿಸುವಲ್ಲಿ ಪುರುಷನೊಬ್ಬನ ಬದುಕು ಮುಖಾಮುಖಿಯಾಗುತ್ತಾ, ಒಂದು ಇನ್ನೊಂದರಿಂದ ಪ್ರತಿಫಲಿಸದೇ ಸಂಕೀರ್ಣವಾಗುವ ಸಂದರ್ಭ. ಮುಂದಿನ ಕಾರ್ಯಕಾರಣಗಳಿಗೆ ಹೆಣ್ಣನ್ನೇ ದೂಷಿಸುವ ಸಮಾಜ. ಇದು ಸಾಮಾನ್ಯವಾಗಿ ಕಂಡುಬರುವುದಾದರೂ ಅವಳ ಆಯ್ಕೆ ಮತ್ತು ಕಳೆದುಕೊಂಡದ್ದರ ನಡುವಿನ ಘರ್ಷಣೆ, ಗೊಂದಲ ಸಾಮಾನ್ಯದ್ದೆಂದು ಅನಿಸುವುದಿಲ್ಲ.

"ಕಾಲ ಸರಿದಂತೆ, ದೇಹ ಬೆಳೆದಂತೆ ಬುದ್ಧಿ ಪಕ್ವವಾಗುತ್ತ ವಿಕಾಸವಾದಂತೆ ವ್ಯಕ್ತಿಯಲ್ಲಿ ನೈತಿಕ ಪ್ರಜ್ಞೆ ಬಲಿಯುತ್ತದೆ. ನೈತಿಕತೆ ಎಂದರೇನು? ನಮ್ಮ ಅಥವಾ ಇತರರ ವರ್ತನೆಗಳ ಸರಿ ಹಾಗೂ ತಪ್ಪುಗಳ ಕುರಿತಾದ ವ್ಯಕ್ತಿಗತ ನಿರ್ಣಯ ಅಥವಾ ಮೌಲ್ಯ. ಇತರರ ಜೀವನದಲ್ಲಿ ಮೂಗು ತೂರಿಸದೆ, ಅವರಿಗೆ ಕೇಡು ಬಗೆಯದೆ ನ್ಯಾಯದ ಹಾದಿಯಲ್ಲಿ ಸಾಗುವುದು".[೬]

ಈ ದೃಷ್ಟಿಯಿಂದ ನೋಡಿದಾಗ ವರ್ತನೆಯ ಸರಿ ತಪ್ಪುಗಳ ಬಗೆಗಿನ ಮೌಲ್ಯ ನಿರ್ಣಯ ತೀರಾ ವೈಯಕ್ತಿಕವಾದುದು. ಕಾಲ, ದೇಶ, ಸಮಾಜ, ಸಂಸ್ಕೃತಿ ಬದ್ಧವಾದುದು. ಹೀಗಾಗಿಯೇ ನೈತಿಕತೆಯ ಪರಿಕಲ್ಪನೆ ಸ್ಥಾಯಿಯಾಗಿ ಇರಬೇಕಾಗಿಲ್ಲ. ಎಲ್ಲರಿಗೂ ಒಂದೇ ಆಗಿರಬೇಕಾಗಿಲ್ಲ. ಸಭ್ಯ, ಗೃಹಸ್ಥ, ಸಭ್ಯ ನಾಗರೀಕ, ಎಲ್ಲರಿಗೂ ಒಳ್ಳೆಯವನಾಗಿರುವುದು, ವಿಧೇಯತೆಯಿಂದ ವರ್ತಿಸುವುದು ಈ ಬಗೆಯ ಹಂಬಲ ಸದಾ ವ್ಯಕ್ತಿಯಲ್ಲಿ ಜಾಗೃತವಾಗಿರುತ್ತದೆ. ಆದರೆ ತಾರ್ಕಿಕ ಚಿಂತನಾ ಕ್ರಮ ಹಾಗೂ ಇಚ್ಛಾಬಲ ಪ್ರಬಲವಾಗಿರುವ ಕೈ ಬೆರಳೆಣಿಕೆಯ ಮಂದಿ ಈ ಬಗೆಯ ಹಂಬಲ ಜಾಗೃತವಾಗಿದ್ದರೂ ವಿವೇಚನೆ, ತರ್ಕಗಳಿಂದ ಕೂಡಿರುತ್ತಾರೆ. ಇಂತಹವರಿಗೆ ಮೌಲ್ಯಗಳೆಂದರೆ ಸ್ಥಗಿತ-ಸ್ಥಿರ ಮಾರ್ಗಗಳಲ್ಲ. ಅವು ವ್ಯಕ್ತಿ ಹಾಗೂ ಸಮಾಜದ ನಡುವಣ ಒಪ್ಪಂದದ ಪ್ರತಿಫಲ, ಅವಳು ಪ್ರಜಾಪ್ರಭುತ್ವದ ನೆಲೆಯಲ್ಲಿ ವ್ಯಕ್ತಿ ಹಾಗೂ ಸಮಷ್ಠಿ ಹಿತಸಾಧನೆಗಾಗಿ ಮೌಲ್ಯಗಳನ್ನು ಬದಲಾಯಿಸಬಹುದು ಎಂಬ ನಿಲುವಿಗೆ ಬದ್ಧಳಾಗಿರುವಂತೆ ತೋರುತ್ತದೆ. ಬಹುತೇಕ ಸಮಾಜ ಸುಧಾರಕರು, ಸಾಮಾಜಿಕ ನೀತಿ ನಿಯಮಗಳನ್ನು ಹಾಗೂ ಮೌಲ್ಯಗಳನ್ನು ಪರಿಷ್ಕರಿಸಿರುವ ಸಾಧ್ಯತೆಗಳು ಆಕೆಯ ಮುಂದೆ ಕಂಡುಬರುವಾಗ ವಿವಾಹದ ಬಗೆಗೆ, ಬದುಕಿನ ಬಗೆಗೆ, ಸಂಬಂಧಗಳ ಬಗೆಗೆ, ಅಂತಹುದೆ ನಿಲುವನ್ನು ಹೊಂದಿರುವುದು ಆಕೆಯ ಧೋರಣೆಯಲ್ಲಿ ವ್ಯಕ್ತವಾಗುತ್ತದೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಅವನ ಅಸ್ತಿತ್ವದ ಅಡಿಪಾಯಕ್ಕೆ ತನ್ನಿಂದ ಧಕ್ಕೆಯಾದಂತೆ, ನೈತಿಕ ದ್ವಂದ್ವಗಳಿಗೆ ಒಳಗಾಗುವ ಸನ್ನಿವೇಶಗಳು ಕೆಲವೊಮ್ಮೆ ಎಲ್ಲವನ್ನೂ ನಿರಾಕರಿಸುವ ಸ್ವಭಾವಕ್ಕೆ ಅವಳಲ್ಲಿನ 'ಅಂತರ್ವಿರೋಧ' ನೆಲೆಯೇ ಕಾರಣ ಎಂದೆನಿಸುತ್ತದೆ.

ಮನುಷ್ಯನ ಮನಸ್ಸು ಸಂಕೀರ್ಣವಾದ ಭಾವನೆಗಳ ಅಂತರ್ಜಾಲದೊಳಗೆ (Emotional network) ಪ್ರವರ್ತಿಸುವಂತಹದ್ದು. ಈ ಭಾವನೆಗಳೆ ಮನುಷ್ಯನ ನಡವಳಿಕೆಯನ್ನು, ನಿರ್ಧಾರಗಳನ್ನು ನಿಯಂತ್ರಿಸುವ ಪ್ರಬಲ ಶಕ್ತಿಗಳಾಗಿವೆ. ಈ ಭಾವನಾತ್ಮಕ ಸಂವಿಧಾನವು (Emotional constitution) ವ್ಯಕ್ತಿತ್ವವನ್ನು (Personality) ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

"Personality is the dynamic organization within the individual of those psychophysical systems that determine his unique adjustment to his environment".[೭]

ಈ ಮೇಲಿನ ವ್ಯಕ್ತಿತ್ವದ ನಿರ್ವಚನದಲ್ಲಿ ಬರುವ dynamic ವಿಶೇಷವು ವ್ಯಕ್ತಿತ್ವದಲ್ಲಿ ಕಾಲದಿಂದ ಕಾಲಕ್ಕೆ ಆಗಬಹುದಾದ ಬದಲಾವಣೆಗಳನ್ನು ಸೂಚಿಸುತ್ತದೆ. ಸನ್ನಿವೇಶಗಳಿಗೆ, ವ್ಯಕ್ತಿಗಳಿಗೆ ಅನುಗುಣವಾಗಿ ನಮ್ಮ ಪ್ರತಿಕ್ರಿಯೆಗಳು ಬದಲಾಗುತ್ತವೆ. ಒಬ್ಬನೇ ವ್ಯಕ್ತಿಯು ವ್ಯಕ್ತಪಡಿಸುವ ಅಭಿಪ್ರಾಯಗಳು, ಪ್ರತಿಕ್ರಿಯೆಗಳು, ನಿಲುವುಗಳು ಒಂದನ್ನೊಂದು ವಿರೋಧಿಸುವ ಸ್ಥಿತಿಯನ್ನು ಮನಃಶಾಸ್ತ್ರದಲ್ಲಿ 'ಅಂತರ್ವಿರೋಧ' ಅಥವಾ 'ಸ್ವ–ವಿರೋಧ' (self contradiction) ಎಂದು ಕರೆಯಲಾಗಿದೆ.

Self contradiction is an expression in direct opposition to a previous expression made or implied by the person himself.[೮]

ಅವಳಲ್ಲಿ ಕೂಡಾ ಇಂತ ಅಂತರ್ವಿರೋಧಗಳನ್ನು ಕಾಣಬಹುದಾಗಿದೆ. ಭಾವನಾತ್ಮಕ, ವರ್ತನೆಯ ನೆಲೆ, ತಾತ್ವಿಕ ನೆಲೆಗಳಲ್ಲಿ ಅವಳ ಅಂತರ್ವಿರೋಧ ಪ್ರವೃತ್ತಿಯನ್ನು ಗುರುತಿಸಬಹುದಾಗಿದೆ. ಭಾವನಾತ್ಮಕ ನೆಲೆ ತನ್ನ ಕುಟುಂಬ, ಸಮಾಜ, ಪುರುಷರು ಮತ್ತು 'ಅವನ' ಬಗೆಗಿನ ಅವಳ ಮನೋಭಾವಗಳು ಭಾಷಿಕ ಅಭಿವ್ಯಕ್ತಿಯ (Verbal expression)ಲ್ಲಿ ವ್ಯಕ್ತವಾಗುತ್ತವೆ.

"ಒಬ್ಬನನ್ನು ಪ್ರೀತಿಸುತ್ತೇನೆ ಎಂದು ಹೇಳಿಬಿಟ್ಟರೆ, ಅದು ಬಹಳ ಸಾಧಾರಣ ಮನುಷ್ಯರ ಲಕ್ಷಣ ಅಲ್ಲವೇ?" ಎಂದು ಮೂದಲಿಸುತ್ತಾನೆ. ಇದು ಸತ್ಯವಲ್ಲ. ನನಗೆ ಪ್ರೀತಿ ಅಗತ್ಯ, ಕೈಯ ಬಿಸಿ, ತೋಳ ಅಪ್ಪುಗೆ ಬೇಕು. ನಾನು ಶೂನ್ಯದಲ್ಲಿದ್ದೇನೆ. ನನ್ನ ಪ್ರತಿಧ್ವನಿಯನ್ನು ಕತ್ತು ಹಿಸುಕಿ ಕೊಂದಿದ್ದಾರೆ. ನನ್ನ ನೆರಳು ನೆರಳಲ್ಲ; ಹೊಗೆಯ ಮೋಡ".

"ಏನಾದರೇನಂತೆ? ದಿನವೂ ಇಷ್ಟಿಷ್ಟು ಸಾಯುತ್ತಿದ್ದೇನೆ. ಕಡೆಯವರೆಗೂ ಸಾಯುತ್ತಲೇ ಇರುತ್ತೇನೆ. ಅವನ ಹತ್ತಿರ ಇದ್ದರೇನು. ಇವನ ಹತ್ತಿರ ಇದ್ದರೇನು! ಪ್ರೀತಿ, ಸಾವು ಒಂದನ್ನು ಕಂಡರೆ ಮತ್ತೊಂದಕ್ಕಾಗುವುದಿಲ್ಲ, ಒಂದಿದ್ದರೆ ಮತ್ತೊಂದಿಲ್ಲ".[೯]

ಈ ವಾಸ್ತವ ಬದುಕಿಗೆ ಅವಾಸ್ತವ, ಅಲೌಕಿಕ, ಹಿನ್ನೆಲೆಯನ್ನು ಸಮರ್ಥನೆಯನ್ನು ಹುಡುಕುವ ಮನಸ್ಸು ಆ ಮೂಲಕ ಆಂತರಿಕ ಸಂವೇದನೆಗಳು, ದ್ವಂದ್ವಗಳನ್ನು ಜಗತ್ತಿನೊಂದಿಗೆ

ಸಂವಹನಗೊಳಿಸುವ ಮಾನಸಿಕ ಭಾವನಾತ್ಮಕ ಅಂತರ್ವಿರೋಧಿ ಪ್ರವೃತ್ತಿಯನ್ನು ಅವಳಲ್ಲಿ ಕಾಣಬಹುದು.

ವರ್ತನೆಯ ನೆಲೆ

'ಅವಳು' ಒಂದು ಕಡೆ ಅವನನ್ನು ಗಂಡಸರನ್ನು, ವಾಸ್ತವವನ್ನು ನಿರಾಕರಿಸುತ್ತಾಳೆ. ಮತ್ತೊಂದೆಡೆ ಬದುಕುವ ಪ್ರೀತಿಗಾಗಿ ಹಂಬಲಿಸುವ, ಆತನ ಸಾವಿಗೆ ತಾನೇ ಕಾರಣ ಎಂದು ಹಪಾಹಪಿಸುವ ಪ್ರವೃತ್ತಿಯು ಕಂಡುಬರುತ್ತದೆ. 'ಲಂಗು ಲಗಾಮಿಲ್ಲದ ಬದುಕು' ಎಂಬ ಅವಳ ಮಾತಿನಿಂದ ಆಧುನಿಕ ಶಿಕ್ಷಣದ ಪ್ರಭಾವಕ್ಕೊಳಗಾಗಿದ್ದಾಳೆ ಎಂದು ಗ್ರಹಿಸಬಹುದು. ಆದರೆ ಕುಟುಂಬ, ತಂದೆ, ತಾಯಿ ಸಂಬಂಧಗಳಿಗೂ ಬದ್ಧಳಾಗಿದ್ದಾಳೆ. ಹೆಣ್ಣಾದವಳು ಯಾವ ಕಾರಣಕ್ಕೂ ನೈತಿಕ ನಿರ್ಬಂಧಗಳನ್ನು ದಾಟಕೂಡದೆಂದು ವಿಧಿಸಿರುವ ಸಮಾಜದಲ್ಲಿ ಸಹನೀಯವಾದ ಬದುಕು ಸಾಧ್ಯವಿಲ್ಲ ಎಂಬುದರ ಅರಿವು ಆಕೆಗಿದ್ದಂತೆ ತೋರುತ್ತದೆ. ಮನಃಶಾಸ್ತ್ರದ ದೃಷ್ಟಿಕೋನವು ವಾಸ್ತವವಾಗಿ ಆಯಾ ಕಾಲದ ಸಾಮಾಜಿಕ ನಡವಳಿಕೆಗಳನ್ನು, ಸಾಮಾಜಿಕ ಸ್ತರಗಳನ್ನು ಮೀರಿ ಬದುಕುವುದು ಸಾಧ್ಯವಿಲ್ಲ ಎನ್ನುತ್ತದೆ. ಆಯ್ಕೆ ಮಾಡಿಕೊಳ್ಳಲಾಗದ ಮತ್ತು ನಿರಾಕರಿಸಲಾಗದ ಯಾವುದೇ ಒಂದು ತೀರ್ಮಾನಕ್ಕೆ ಬರಲಾಗದ ಘರ್ಷಣಾತ್ಮಕ ವರ್ತನೆಯನ್ನು ಕಾಣಬಹುದು.

ತಾತ್ವಿಕ ನೆಲೆ: ಬದುಕು, ಪ್ರೀತಿ, ಸ್ನೇಹ, ಸಂಬಂಧ, ಆಯ್ಕೆ ಇವೆಲ್ಲವುಗಳ ಬಗೆಗಿನ ಸೈದ್ಧಾಂತಿಕ ತಾಕಲಾಟವು (Philosphical inconsistency) ತಾತ್ವಿಕ ಗೊಂದಲವಾಗಿ ಅವಳಲ್ಲಿ ಪರಿಣಮಿಸಿದೆ.

ಈ ಮೇಲಿನ ಮೂರು ನೆಲೆಗಳಲ್ಲಿ ಅವಳು ಪರಸ್ಪರ ವಿರೋಧಿಯಾದ ನಿಲುವುಗಳನ್ನು ತಾಳುವುದನ್ನು ಕಾಣಬಹುದು. ಮಾನವ ವ್ಯಕ್ತಿ ಮತ್ತು ಪರಿಸರ ಇವೆರಡರ ಜೊತೆಗಿನ ಸಂಗಮ, ಒಡನಾಟ ಮತ್ತು ಸಂಘರ್ಷಗಳ ನಡುವೆ ಸದಾ ಚಲಿಸುತ್ತಲೇ ಇರುತ್ತಾನೆ. ಅಂದ ಮೇಲೆ ವ್ಯಕ್ತಿಯ ಎಲ್ಲಾ ವರ್ತನೆಗಳು ಪರಿಸರದ ಪ್ರಭಾವಕ್ಕೆ ಒಳಗಾಗಿಯೇ ಇರುತ್ತದೆ. ಅದೇ ರೀತಿ ಹೆಣ್ಣೊಬ್ಬಳ ಬದುಕು, ಆಕೆಯ ಸಂಘರ್ಷ, ಎಲ್ಲವೂ ಆಕೆಯ ಪರಿಸರದಿಂದಲೇ ಉತ್ಪನ್ನಗೊಂಡಿದ್ದು ಗಂಡಿನ ಅಸ್ತಿತ್ವ, ನೈತಿಕ ದ್ವಂದ್ವಗಳಿಗೆ ಹೆಣ್ಣನ್ನೇ ಗುರಿ ಮಾಡಿದಾಗ ಆಕೆಯ ಮನಸ್ಥಿತಿ ವ್ಯಕ್ತದ ಆಚೆಗೆ ಬಂದು ನಿಲ್ಲುತ್ತದೆ.

"ಈ ಲೋಕದ ಏಕಾಂತ, ಪಂಜರಗಳಲ್ಲಿ ಅಳು, ಕಣ್ಣೀರು ಎನ್ನುವುದೆಲ್ಲ ಅಶ್ಲೀಲ. ಈ ಆತ್ಮಚಿಕಿತ್ಸೆಯಿಂದ ಗಾಯವನ್ನು ಕೆದಕಿದರೆ ನೋಡಿಕೊಳ್ಳುವುದರಿಂದ ಏನೂ ಪ್ರಯೋಜನವಿಲ್ಲ. ನನ್ನನ್ನು ಇನ್ನಷ್ಟು ಮಂಕು ಮಾಡಿ ಕೂರಿಸುತ್ತದೆ. ಅಷ್ಟೆ, ನನಗೇನೂ ಅರ್ಥವಾಗುವುದಿಲ್ಲ. ನಾನು ಏನನ್ನಾದರೂ ಅನುಭವಿಸುತ್ತ ಇದ್ದೇನೋ ಇಲ್ಲವೋ ಎನ್ನುವುದು ಕೂಡಾ ನನಗೆ ಗೊತ್ತಿಲ್ಲ. ಈ ಸಂಗತಿಗಳಿಗೆಲ್ಲಾ ಮನಸ್ಸು ಕೊಡಬೇಕೇ, ಇದನ್ನು ಮನಸ್ಸಿಗೆ ತಂದುಕೊಂಡು

ಅನುಭವಿಸುವುದು ಸರಿಯೇ? ಮೊಲದ ಮರಿಗಳ ಹಾಗೆ ನೆಲದ ಮೇಲೆ ಬೆಚ್ಚಗೆ ಮೈ ಮುದುಡಿ ಉಣ್ಣೆಯ ಮುದ್ದೆಯಾಗಿ ಮಲಗಿಕೊಳ್ಳಬಾರದೇ"?[೧೦] ಈ ಸಂದರ್ಭದಲ್ಲಿ ಅವಳು ತನ್ನನ್ನು ತಾನು ವ್ಯಕ್ತಪಡಿಸಿಕೊಳ್ಳುವ ಪರಿ ಪ್ರಾಮಾಣಿಕ ನೆಲೆಯದ್ದು.

ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ಹುಟ್ಟು ಗುಣಗಳ ಕಾರಣದಿಂದಾಗಿಯೇ ಒಬ್ಬರಿಗಿಂತ ಮತ್ತೊಬ್ಬರು ಭಿನ್ನರಾಗುತ್ತಾರೆ. ಅದು ಅವರ ಬದುಕಿನ ಆಯ್ಕೆ ಮತ್ತು ನಿರಾಕರಣೆಯನ್ನು ನಿರ್ಧರಿಸುತ್ತದೆ. ಮನುಷ್ಯನ ಮನಸ್ಸು ಮತ್ತು ಪ್ರವೃತ್ತಿ, ನಡವಳಿಕೆ ಇವುಗಳ ನಡುವಣ ಕಾರ್ಯಕಾರಣ ಸಂಬಂಧವೆಂಬುದು ಭೌತ ಜಗತ್ತಿಗೆ ಮಾತ್ರ ಸೀಮಿತವಾದುದಲ್ಲ. ನೈತಿಕ ಜಗತ್ತಿನಲ್ಲೂ ತಪ್ಪಿಸಿಕೊಳ್ಳಲಾಗದ ಒಂದು ಸುವ್ಯವಸ್ಥಿತವೂ, ಜಟಿಲವೂ ಆದ ಅನಿವಾರ್ಯತೆ ಎಂಬುದಿರುತ್ತದೆ. ಅಂತಹ ಅನಿವಾರ್ಯತೆಗೆ ಆಕೆ ಮುಖಾಮುಖಿಯಾಗಿದ್ದಾಳೆ. ಕೌಟುಂಬಿಕ ಹಾಗೂ ಸಾಮಾಜಿಕ ನಡವಳಿಕೆಗಳನ್ನು ಮೀರುವ ಹಂಬಲ ಸಹಜವಾಗಿ ಎಲ್ಲ ಹದಿಹರೆಯದವರಲ್ಲಿ ಕಂಡುಬರುತ್ತದೆ. ಆದರೆ ಯಾವ ಬುದ್ಧಿವಂತಿಕೆ, ವಿದ್ಯಾವಂತಿಕೆ, ನಡವಳಿಕೆ 'ಅವನತ್ತ' ಅವಳನ್ನು ಆಕರ್ಷಿಸಿತ್ತೋ ಅದು ಗಾಢವಾದುದಾಗಿರಲಿಲ್ಲ. ಬದಲಿಗೆ ಬಾಳಿ ಬದುಕಲು ಪ್ರೇರೇಪಿಸದ ಆತನ ವಿಚಾರಗಳು ಅಕೆಯನ್ನು ಗೊಂದಲಕ್ಕೆ ಈಡು ಮಾಡಿರಬಹುದು. ಆಧುನಿಕ ಕಾಲದಲ್ಲಿ ಸಮಾಜವು ಹೆಣ್ಣನ್ನು ನೋಡುವ ದೃಷ್ಟಿ ಹೆಣ್ಣು ತನ್ನನ್ನೇ ತಾನು ನೋಡಿಕೊಳ್ಳುವ ದೃಷ್ಟಿಗಳೆರಡೂ ಬದಲಾಗಿವೆ ಮತ್ತು ವೈಯಕ್ತಿಕ ನೆಲೆಯಲ್ಲಿ ಖಚಿತವಾದ ಧೋರಣೆಗಳು ರೂಪುಗೊಂಡ ಸಂದರ್ಭವೂ ಇದಾಗಿದೆ. ಆಧುನಿಕ ಸಂವೇದನೆಯು ಸೃಷ್ಟಿಸಿದ ಕೌಟುಂಬಿಕ, ಸಾಮಾಜಿಕ ಅಥವಾ ನೈತಿಕ ಒತ್ತಡಗಳಿಗೆ ಸಿಲುಕಿ ತನ್ನ ಭಾವನೆಗಳಿಗೆ ದ್ರೋಹ ಮಾಡಿಕೊಳ್ಳದ ಎಚ್ಚೆತ್ತ ಮಹಿಳೆಯ ಪ್ರತಿನಿಧಿಯಾಗಿದ್ದಾಳೆ. ವ್ಯಕ್ತಿಯೊಬ್ಬ ಆಯ್ಕೆ–ನಿರಾಕರಣೆ, ಸುಪ್ತ–ಜಾಗೃತಾವಸ್ಥೆಗಳ ನಡುವೆ, ತರ್ಕ–ಅಸಂಬದ್ಧತೆಗಳ ಸುತ್ತ ಚಲಿಸಬಹುದಾದ ಸಾಧ್ಯತೆಗಳನ್ನು 'ಅವಳು' ಪಾತ್ರವು ಯಶಸ್ವಿಯಾಗಿ ಅಭಿವ್ಯಕ್ತಿಸುತ್ತದೆ.

ಹೆಣ್ಣಿನ ಕುರಿತಾದ ಕಾದಂಬರಿಕಾರರ ವೈಯಕ್ತಿಕ ಗ್ರಹಿಕೆ ಅಸ್ಪಷ್ಟ ನೆಲೆಯಲ್ಲಿ ಕಂಡುಬರುತ್ತದೆ. ಕಾದಂಬರಿಯ ಒಳರೂಪ ಮತ್ತು ಹೊರಗೆ ಕಾದಂಬರಿಕಾರರ ನಿರೀಕ್ಷೆ ಎರಡು ಪುರುಷ ಪ್ರಜ್ಞೆಯನ್ನು ಮೀರದೇ ಹಾಗೇ ಉಳಿದುಕೊಂಡಿದೆ. ಉನ್ನತ ಮಟ್ಟದ ಆಲೋಚನೆಗಳು, ಗ್ರಹಿಕೆಗಳು ವಾಸ್ತವತೆಯನ್ನು ಮೀರುವ ಸಂದರ್ಭದ ಘರ್ಷಣೆಗಳನ್ನು ಲಿಂಗ ತಾರತಮ್ಯದ ಧೋರಣೆಯಲ್ಲಿಯೇ ಕಾದಂಬರಿಕಾರರು ನೋಡಿದ್ದಾರೆ. 'ಅವಳ' ಆಂತರಿಕ ಆಶಯದ ಸ್ವರೂಪ ಇಲ್ಲಿ ಮುಖ್ಯವಾಗುವುದೇ ಇಲ್ಲ. ಅವಳು ಮತ್ತು ಆತನ ಸಂಬಂಧ ಬರೀ ಬಾಹ್ಯ ಸ್ವರೂಪದಲ್ಲಿಯೇ ಉಳಿದಿದ್ದರೆ ಅವಳು ಹೆಂಗಸಾಗುತ್ತಿದ್ದಳು. ಆದರೆ ಆತನ ಗುಣಗಳು ಅವಳ ಅಂತರಂಗವನ್ನು ಪ್ರವೇಶಿಸಿರುವ ಮತ್ತು ಅದನ್ನು ನಿರಾಕರಿಸಲಾರದ ಮನಸ್ಥಿತಿ ಮಾತ್ರ ಎಲ್ಲಿಯೂ ಚಿತ್ರಿತವಾಗುವುದಿಲ್ಲ ಎಂಬುದೇ ಪುರುಷ ದೃಷ್ಟಿಕೋನದ ಮಿತಿಯನ್ನು ಎತ್ತಿ ಹಿಡಿಯುತ್ತದೆ. ಆತನ ವರ್ತನೆಯು

ಅವಳಲ್ಲಿ ಉಂಟುಮಾಡಿದ ಹತಾಶೆ, ನಿರರ್ಥಕತೆಯ ಭಯ, ಒಟ್ಟಾರೆ ಜೀವಕ್ಕೆ ಕ್ರಿಯಾಶೀಲತೆಯೇ ನಷ್ಟವಾಗಿರುವ ಸಂದರ್ಭವೇ ಇಲ್ಲಿ ಮರೆಮಾಚಲ್ಪಟ್ಟಿದೆ. ಪ್ರೇಮ-ಕಾಮ, ಸಾವು-ಬದುಕು, ಹೆಣ್ಣು-ಗಂಡು, ವಾಸ್ತವ-ಅವಾಸ್ತವ, ಪ್ರೀತಿ-ಹತಾಶೆ ಈ ರೀತಿಯ ಪರಿ ಭಾಷೆಗಳಿಂದಲೇ ಗ್ರಹಿಸಲಾಗಿದೆ. ಆದರೆ ಬದುಕುವ ಸಂದರ್ಭದಲ್ಲಿ ಈ ಸಂಘರ್ಷದ ನಿರಂತರತೆ ಮತ್ತು ಪ್ರಜ್ಞೆಯ ಒಳಪದರದಲ್ಲಿ ಇಳಿದಷ್ಟೂ ಅದು ವ್ಯಕ್ತಿಯಲ್ಲಿ ಉಂಟುಮಾಡುವ ಸಂಘರ್ಷ, ಗೊಂದಲ ದೈಹಿಕ ಹಾಗೂ ಮಾನಸಿಕ ನೆಲೆಯಲ್ಲಿ ಬೇರೆಯದೇ ಆಯಾಮವನ್ನು ಸೃಷ್ಟಿಸುತ್ತದೆ. ಇನ್ನೊಬ್ಬರ ಅಸ್ತಿತ್ವ, ವಿಚಾರ ಮತ್ತು ಭಾವನೆಗಳನ್ನು ಅವ್ಯಕ್ತ ಉದ್ದೇಶದ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಲಾಗದ ಬೌದ್ಧಿಕ ಸಂಚು ತನ್ನ ಮಾನಸಿಕತೆಯನ್ನು ಬದಲಾಯಿಸಿಕೊಳ್ಳದೆ ಇರುವುದು 'ಅವಳ' ಪಾತ್ರ ಸೃಷ್ಟಿಯ ಹಿಂದಿರುವ ತಂತ್ರಗಾರಿಕೆಗೆ ಸಾಕ್ಷಿಯಾಗಿದೆ. ಕ್ರಿಯಾಶೀಲವಾಗಿರುವ ಸೃಜನಶೀಲ ಪ್ರಕ್ರಿಯೆಯು ಹೊಸ ಹೊಸ ಅನ್ವೇಷಣೆಗಳಿಗೆ, ತಾಂತ್ರಿಕತೆಗೆ, ತಾತ್ವಿಕತೆಗೆ ತನ್ನನ್ನು ತಾನು ಒಡ್ಡಿಕೊಳ್ಳುವ ಸಂದರ್ಭದಲ್ಲೂ ಹೆಣ್ಣಿನ ಕುರಿತಾದ ದೃಷ್ಟಿಕೋನಗಳಲ್ಲಿ ಬದಲಾವಣೆ ಆಗದಿರುವುದು ಯಥಾಸ್ಥಿತಿಯನ್ನು ಕಾಪಾಡುವ ಉದ್ದೇಶವೇ ಆಗಿದೆ. ಗಂಡು ತನ್ನ ಉತ್ಕಟತೆಯಲ್ಲೇ ಬದುಕುವಾಗ ಆ ಉತ್ಕಟತೆಗೆ ಕಾರಣವಾದ ಹೆಣ್ಣನ್ನು ಕಡೆಗಣಿಸುತ್ತಾನೆ. ಬದುಕಿನ ಇತ್ಯಾತ್ಮಕತೆಯನ್ನು ಮುಂದುವರೆಸಿಕೊಂಡು ಹೋಗುವ ಶಕ್ತಿಯನ್ನೇ ಧಿಕ್ಕರಿಸುವ ಈ ಪ್ರವೃತ್ತಿಯನ್ನು ಜೀವವಿರೋಧಿ ಎಂದೇ ಕರೆಯಬೇಕಾಗುತ್ತದೆ.

ಹೆಣ್ಣಿಗೆ ಅವಳದೇ ಆದ ಒಂದು ಸ್ವತಂತ್ರ ಜಗತ್ತಿದೆ. ಅದನ್ನು ಗ್ರಹಿಸುವಲ್ಲಿ, ನಿರಾಕರಿಸುವಲ್ಲಿ, ಆಯ್ಕೆಮಾಡಿಕೊಳ್ಳುವಲ್ಲಿ ಅವಳಿಗೆ ಸ್ವಾತಂತ್ರ್ಯವಿದೆ. ವ್ಯಕ್ತಿಯ ಬದುಕು ಎಂದಿಗೂ ಸ್ವಯಂ ಪೂರ್ಣವಲ್ಲ. ಆದ್ದರಿಂದಲೇ ಅದಕ್ಕೊಂದು ಲಯ, ವಿನ್ಯಾಸ, ಜೊತೆಗೆ ವಿರೋಧಾಭಾಸಗಳೂ ಇವೆ. ಅನ್ಯರ ನಿಯಂತ್ರಣದ ಕಪಿಮುಷ್ಟಿಗೆ ಸಿಲುಕಿದಾಗ ಅದು ಪಲ್ಲಟಗೊಳ್ಳುವುದು. ಹೀಗಾಗಿಯೇ 'ಅವಳ' ದ್ವಂದ್ವಗಳು, ನಿಜವಾದ ಹೆಣ್ಣಿನ ದ್ವಂದ್ವಗಳು. ಅವು ಎಷ್ಟೇ ಆಧುನಿಕತೆಗೆ ಒಳಗಾದರೂ ಬದಲಾಗದ ಸಮಾಜದ ಪ್ರತೀಕಗಳು. ಭೂತದಿಂದ ಬಿಡುಗಡೆ ಹೊಂದುವ ಮೂಲಕ, ಭವಿಷ್ಯಕ್ಕೆ ತನ್ನನ್ನು ತಾನು ತೆರೆದುಕೊಂಡು ವರ್ತಮಾನದಲ್ಲಿ ಸಂವೇದನಾಶೀಲರಾಗಿ ಬದುಕುವ ನಿಜವಾದ ಜೀವನ ವಿವೇಕವು ಇಂತಹ ಸೃಜನಶೀಲ ಪ್ರಕ್ರಿಯೆಯಲ್ಲಿ ಕಂಡುಬರುವುದಿಲ್ಲ. ಅವಳ ಬದುಕಿನ ಪ್ರಜ್ಞೆಯಲ್ಲಿ ಬೇಸರ, ದ್ವಂದ್ವ, ಗೊಂದಲ, ನಿರ್ಧಾರ ತೆಗೆದುಕೊಳ್ಳುವಲ್ಲಿನ ಮಾನಸಿಕ ಸ್ಥಿತಿ ಯೋಚನೆಗಳ ಚಲನೆಯೇ ಆಗಿದೆ. ಭಯ, ಕೋಪ, ಹತಾಶೆ, ದುಃಖ, ವಿರಹ, ಕಳೆದುಕೊಳ್ಳುವಿಕೆ ಇವೆಲ್ಲವೂ ಆಕೆಯ ಮಾನಸಿಕ ಸನ್ನಿವೇಶಗಳನ್ನು ಪ್ರತಿನಿಧಿಸುತ್ತವೆ.

"ಅಪ್ಪನ ಸನ್ನಿ ತಿಳಿದು, ಜ್ಞಾನ ಬಂದಾಗ ಅವನಿಂದ ಕಾಗದ ಬರುವುದು ನಿಂತು ಹೋಗಿತ್ತು. ನನ್ನ ಕೈಗೆ ಬಂದ ಹನ್ನೊಂದು ಕಾಗದಗಳನ್ನು ಒಂದು ಡ್ರಾ ಒಳಗೆ ಹಾಕಿ ಮರೆತುಬಿಟ್ಟೆ. ಹಾಗೆ ಮಾಡಿದ್ದು ಸರಿಯಲ್ಲ; ನೀತಿಯಲ್ಲ. ನೋವಿಗೆ ನೀತಿಯೊಂದೇ ಉತ್ತರ.

ಯಾವಾಗಲೂ ಎಲ್ಲೇ ಆಗಲಿ ನೊಂದಾಗ ಆ ನೋವಿಗೆ ಎಲ್ಲೋ ನಾವೇ ಕಾರಣರಾಗದೆ ಆ ನೋವು ನಮ್ಮನ್ನು ಅರಸುವುದಿಲ್ಲ. ನಮ್ಮ ಜೀವನದಲ್ಲಾಗುವ ಯಾವ ಸಂಗತಿಯೂ ನಮ್ಮೊಳಗಿನ ಒಳ ಸಂಕಲ್ಪವಿಲ್ಲದೆ ನಡೆಯುವುದಿಲ್ಲ. ಅಂತಃಕರಣದ ಯಾವ ಕಾರಣವೂ ಗೋಪ್ಯವಲ್ಲ. ನಾನು ಅವನಿಗೆ ನಿಜವಾಗಿ ಹೇಳುತ್ತಿದ್ದುದು ಒಂದೇ. ಹೋಗೋ ಹುಡುಗ ಹೋಗು, ಆಕಾಶದೆತ್ತರ ಸಿಡಿದು ಬೀಳು, ಕುದಿ, ಕುದಿ, ಆಕಾಶ ಮುಟ್ಟುವವರೆಗೂ ಬೇಕಾದರೂ ಕುದಿ, ನನಗೇನು ಬೇಕಾಗಿದೆ? “ಹಿಂಸೆಯಲ್ಲೆಲ್ಲ ಪಾಲುಗೊಂಡರೂ ಅಗ್ನಿಪರೀಕ್ಷೆಗೆ ಮೈಕೊಡಲೇಬೇಕು, ಅನೀತಿಯನ್ನೆಲ್ಲಿ ಮುಟ್ಟಿದರೂ ನಾವು ಮತ್ತೆ ಮೈತುಂಬ ಪರಿಪೂರ್ಣವಾಗಿ ನಿಲ್ಲಲಾರೆವು. ನಾನು ಉಪಮೆಗಳನ್ನು ಹೊಸೆದೆ, ಕವಿತೆಗಳ ಸಾಲುಗಳಲ್ಲಿ ಕುಪ್ಪಳಿಸಿದೆ. ಆದರೆ ಸರಿಯಾದ ಕಾಲ ಬಂದಾಗ ವಿಷ ನಿಮಿಷ ಒದಗಿ “ಇದೋ ಹಿಡಿ ಶೂನ್ಯ”, ಎಂದಾಗ ಎಲ್ಲವನ್ನೂ ಉಪಮೆಗಳ ಕಂತೆ ಗೋಡೆಯ ಮೇಲೆ ಎಸೆದ ನೆರಳು ಬೆಳಕಿನ ಬೊಂಬೆ ಎಂದು ನಿರಾಕರಿಸಿದೆ. ಸಾವು ಹೊರಬೆಳಕಿಗೆ ಬಾಗಿಲಲ್ಲ. ಗಾಯಗಳು ಸುಲಭವಾಗಿ ಮಾಯುವುದಿಲ್ಲ. ಹುಣ್ಣಿನ ಮೇಲೆ ಹುಣ್ಣಾಗುವುದೇ ಪ್ರಕೃತಿ. ನಾನು ಒಂಟಿಯಾದೆ, ನನ್ನನ್ನು ನನ್ನ ಪರಿಸ್ಥಿತಿಯ ಪಂಜರದೊಳಗಿಟ್ಟು ಕೀಲಿ ಇಲ್ಲದ ಬೀಗ ಲಗಾಯಿಸಿದ ಹಾಗಾಯಿತು”.[೧೧]

ಮೇಲಿನ ಸಂದರ್ಭವು ತನ್ನ ಕುಟುಂಬದ ಹಿತಕ್ಕಾಗಿ ಸ್ವಹಿತವನ್ನು ‘ಅವಳು’ ಕಡೆಗಣಿಸಿದ್ದಾಳೆ ಎಂದು ಅನಿಸುತ್ತದೆ. ಮೇಲುನೋಟಕ್ಕೆ ಹೀಗೆ ಅನ್ನಿಸಬಹುದಾದ ಸಂದರ್ಭವು ಬೌದ್ಧಿಕ ಮನಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿದೆ. ಬೌದ್ಧಿಕತೆಯು ತನ್ನ ಸುತ್ತಲು ನಿರ್ಮಿತವಾಗಿರುವ ವಸ್ತುವಿನ ಮೇಲೆ ಸಂದೇಹ ಪಡುತ್ತಲೇ ಇರುತ್ತದೆ. ಬುದ್ಧಿ ಅಹಂಕಾರದಿಂದ ಕೂಡಿರುತ್ತದೆ ಎಂಬುದಕ್ಕೆ ಈ ಸಂದೇಹ ಪ್ರವೃತ್ತಿಯೇ ಕಾರಣ. ಗ್ರಹಿಕೆಯ ವಸ್ತು ಮತ್ತು ಕ್ರಿಯೆ ಇವೆರಡರ ನಡುವೆ ಅಡಗಿಕೊಂಡಿರುವ ಸೂಕ್ಷ್ಮ ವಿಷಯದ ಪ್ರಕಟರೂಪಗಳೆಂದು ಯಾರು ಯೋಚಿಸುವುದಿಲ್ಲ ಮತ್ತು ಕಲ್ಪನೆ ಸಹ ಮಾಡುವುದಿಲ್ಲ. ಆ ಸೂಕ್ಷ್ಮತೆಯ ಶಕ್ತಿ ವಸ್ತುವಾಗುತ್ತದೆ. ಅದೇ ಶಕ್ತಿ ವ್ಯಕ್ತಿಯಾಗುತ್ತಾನೆ. ವಾಸ್ತವವಾಗಿ ಯಾವುದನ್ನು ಪ್ರಕಟ ರೂಪಗಳಲ್ಲಿ ಗ್ರಹಿಸಲಾಗಿತ್ತೋ ಅದು ಮರೆಮಾಚಲ್ಪಟ್ಟ ಮುಖವಾಡ ಅಷ್ಟೆ.

“ಬುದ್ಧಿ ತನ್ನನ್ನು ವಾಸ್ತವದ ಮಾಹಿತಿ ಸಂಗ್ರಹ ಕಾರ್ಯದಲ್ಲೇ ತೊಡಗಿಸಿಕೊಂಡು ಬಿಟ್ಟರೆ ಅದು ಕೇವಲ ಬುದ್ಧಿವಂತಿಕೆಯನ್ನು ಮೆರೆಸಬಹುದೇ ಹೊರತು ಬೌದ್ಧಿಕ ಸಾಹಸದ ಅಂತಿಮ ಲಕ್ಷ್ಯವಾದ ಪ್ರಜ್ಞಾವಂತಿಕೆಯನ್ನಲ್ಲ. ಕೇವಲ ಮೆದುಳು (ಪ್ರವೃತ್ತಿ) ಆಗಿದುದ್ದು ಮನಸ್ಸು (ಬುದ್ಧಿ) ಆಗಿ, ಮನಸ್ಸು ಕೊನೆಯಲ್ಲಿ ಪ್ರಜ್ಞೆಯಾಗಿ ವಿಕಾಸಗೊಳ್ಳಬೇಕು”.[೧೨]

ಯಾವುದೇ ವ್ಯಕ್ತಿಯ ಕುರಿತಾದ ಅದರಲ್ಲೂ ಹೆಣ್ಣೊಬ್ಬಳನ್ನು ಕುರಿತಾದ ವಿಶ್ಲೇಷಣೆಯು ಅದಕ್ಕೆ ಜನ್ಮವಿತ್ತ ಮನಸ್ಸಿನ ಹಿನ್ನೆಲೆಯನ್ನು ವಿಶ್ಲೇಷಿಸಿದ ಗ್ರಹಿಕೆಯು ಬುದ್ಧಿವಂತಿಕೆಯಿಂದ

ಕೂಡಿದ್ದು ಅಪ್ರಜ್ಞಾಪೂರ್ವಕವಾಗಿರುವುದನ್ನು ಕಾಣಬಹುದು. ಪ್ರಜ್ಞಾವಂತಿಕೆಯ ವಿಚಾರವಾದವನ್ನು ಮಾನವತಾವಾದ ಎನ್ನಬಹುದು. 'ಅವಳು' ತನ್ನ ಬದುಕನ್ನು ಎರಡು ಸಂಬಂಧಗಳ ನಡುವೆ ಸರಿದೂಗಿಸಬೇಕು. ಒಂದು ತನ್ನ ಕುಟುಂಬ; ಇನ್ನೊಂದು ತನ್ನ ಬದುಕಿನಲ್ಲಿ ಪುರುಷನೊಬ್ಬನ ಆಗಮನ. ವಾಸ್ತವದಲ್ಲಿ ಸ್ತ್ರೀ-ಸಂವೇದನೆ ಮತ್ತು ಪುರುಷಕೇಂದ್ರಿತ ವ್ಯವಸ್ಥೆಗಳ ನಡುವೆ ಉಂಟಾಗುವ ಈ ಘರ್ಷಣೆ ಇಂದು ನಿನ್ನೆಯದಲ್ಲ. ಆದರೆ ಸಾಂಪ್ರದಾಯಿಕ ಮನಸ್ಥಿತಿಯೊಂದು ಅಪ್ರಜ್ಞಾಪೂರ್ವಕವಾಗಿ ಅದೇ ನೆಲೆಯಲ್ಲಿಯೇ ಸಾಗುತ್ತಾ ಬಂದಿರುವುದು. ಅವಳು ತನ್ನ ತಂದೆಗಾಗಿ ಅವನನ್ನು ನಿರಾಕರಿಸುವ ಸಂದರ್ಭವನ್ನು ಗಮನಿಸಬಹುದು. ಆದರೆ ಪ್ರಜ್ಞಾಪೂರ್ವಕವಾಗಿ ಅವಳ ನಿರಾಕರಣೆಯ ಸ್ವರೂಪವನ್ನು ಪುರುಷ ಅಹಂಕಾರದ ನೆಲೆಯಲ್ಲಿಯೇ ಚಿತ್ರಿಸಿರುವುದನ್ನು ಗಮನಿಸಬೇಕಾಗುತ್ತದೆ.

ಆಕೆಯ ಸುತ್ತಲಿನ ಪ್ರಪಂಚದೊಂದಿಗೆ ಆಕೆಗಿರುವ ಸಂಬಂಧ, ಅದರೊಂದಿಗೆ ಆತನೊಂದಿಗಿನ ಕ್ರಿಯೆ ಪ್ರತಿಕ್ರಿಯೆಗಳ ಮೂಲಕ ಉಂಟಾದ ನೋವು ನಲಿವುಗಳ ಸಂಕೀರ್ಣತೆ ಆಕೆಯ ಅಂತರಂಗವನ್ನು ಕಲಕಿದೆ. ಆದ್ದರಿಂದಲೇ ಆಕೆ "ಸಾವು ಹೊಸಬೆಳಕಿಗೆ ಬಾಗಿಲಲ್ಲ. ಗಾಯಗಳು ಸುಲಭವಾಗಿ ಮಾಯುವುದಿಲ್ಲ. ಹುಣ್ಣಿನ ಮೇಲೆ ಹುಣ್ಣಾಗುವುದೇ ಪ್ರಕೃತಿ. ನಾನು ಒಂಟಿಯಾದೆ. ನನ್ನನ್ನು ನನ್ನ ಪರಿಸ್ಥಿತಿಯ ಪಂಜರದೊಳಗಿಟ್ಟು ಕೀಲಿ ಇಲ್ಲದ ಬೀಗ ಲಗಾಯಿಸಿದ ಹಾಗಾಯಿತು"[೧೩] ಎನ್ನುತ್ತಾಳೆ.

ಹೆಣ್ಣು ಗಂಡಿನ ಸಂಬಂಧ ದೈಹಿಕತೆಯನ್ನು ಮೀರಿ ನಿಲ್ಲಬೇಕು ಎಂಬ ಯೋಚನೆಯೇ ಅಮಾನವೀಯ ನೆಲೆಯದ್ದು ಎಂದೆನಿಸುತ್ತದೆ. ಪ್ರಕೃತಿ ಸಹಜವಾದ ಮತ್ತು ಅಷ್ಟೇ ಅರ್ಥಪೂರ್ಣವಾದ ಈ ಜಗತ್ ನಿಯಮವನ್ನು ಪ್ರತಿರೋಧಿಸುವುದು ಅರ್ಥಹೀನ. ಹೆಣ್ಣು ಮತ್ತು ಗಂಡಿನ ನಡುವೆ ಇದು ಏಕಮುಖಿ ಆದಾಗ ಅದರ ಪರಿಣಾಮ ಮಾತ್ರ ಅಸಾಧಾರಣವಾದದ್ದೇ ಆಗಿರುತ್ತದೆ. ಈ ನೆಲೆಯಲ್ಲಿಯೂ 'ಅವಳ'ನ್ನು ಗ್ರಹಿಸಲು ಸಾಧ್ಯಾವಾದಾಗ ಗ್ರಹಿಕೆಯಲ್ಲಿ ಪ್ರಾಮಾಣಿಕತೆಯನ್ನು ಕಾಣಬಹುದು. ತನ್ನ ಮನಸ್ಸಿನ ಆಪ್ಯಾಯಮಾನಕ್ಕೆ ಕಾರಣವಾಗುವ ಸಂಗತಿಗೂ ಮತ್ತು ಮನೋವ್ಯಾಪಾರದ ಕ್ರಮಕ್ಕೂ ನಡುವೆ ಸಾಮ್ಯತೆಯಲ್ಲದೇ ಹೋಗುವ ಸಂದರ್ಭದಲ್ಲಿ ಗ್ರಹಿಸುವ ಮನಸ್ಸು ಮತ್ತು ಗ್ರಹಿಸಬೇಕಾದ ವಿಷಯಗಳಲ್ಲಿ ಉಂಟಾಗುವ ಸಂಘರ್ಷದಿಂದ ಪಾರಾಗಲು ನಿರಾಕರಣೆಯೊಂದೇ ಆಯ್ಕೆಯಾಗುತ್ತದೆ. ಆದರೂ ನಿರಾಕರಿಸಲ್ಪಟ್ಟ ಸಂಗತಿಗೂ ಮತ್ತು ವ್ಯಕ್ತಿಗೂ ಇರುವ ಸಂಬಂಧಗಳು ನೋವು, ಹತಾಶೆ, ದುಃಖ, ನಷ್ಟದ ಜಟಿಲ ಸಂಕೀರ್ಣ ರೂಪದಲ್ಲಿ ಅಂತರಂಗವನ್ನು ಸೆಳೆಯುತ್ತವೆ. ವಿಶ್ಲೇಷಣೆಯ ಇಂತಹ ಸಂದರ್ಭದಲ್ಲಿ ಗಮನವನ್ನು ಹರಿಸಬೇಕಾದುದು ಮನೋವ್ಯಾಪಾರದ ಕಡೆಗೆ. ಬದುಕಿನಲ್ಲಿ ಆಳವಾಗಿ ಬೇರೂರಿರುವ ಧೋರಣೆಗಳು ಹೆಣ್ಣಿನ ಕುರಿತಾಗಿ, ಸಮಾಜದ ಕುರಿತಾಗಿ, ದೃಷ್ಟಿಕೋನಗಳಲ್ಲಿ ಬದಲಾವಣೆಗೊಳ್ಳುವುದೇ ಇಲ್ಲ.

ಆದರೆ ಮನುಷ್ಯನ ಪ್ರಜ್ಞೆ ಸದಾ ಒಂದೇ ರೀತಿಯಿತ್ತು ಎಂದಲ್ಲ. ಅದು ಕಾಲಕಾಲಕ್ಕೆ ಬದಲಾಗುತ್ತಾ ಬಂದಿದೆ. ಹೊಸದನ್ನು ಆಹ್ವಾನಿಸುತ್ತಾ ಬೆಳೆದಿದೆ. ಆದರೆ ಸಾಹಿತ್ಯದಂತಹ ಸೃಜನಶೀಲ ಕ್ಷೇತ್ರವು ದೇಹ ಮತ್ತು ಮನಸ್ಸನ್ನು ಒಂದೇ ಎಂಬಂತೆ ಪರಿಭಾವಿಸಿದೆ. ಆ ಧೋರಣೆಯಲ್ಲೇ ಲಿಂಗ ತಾರತಮ್ಯ ಅಡಗಿದೆ.

ಹೆಣ್ಣಿನ ಬದುಕನ್ನು ಸಾಮಾನ್ಯ ವಾಸ್ತವದಲ್ಲಿ ನೋಡುವುದಕ್ಕೂ, ಆದರ್ಶದ ನೆಲೆಯಲ್ಲಿ ನೋಡುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಅವಳು ಮತ್ತು ಅವನು ತೀರಾ ವಿಭಿನ್ನವಾದ ದೃಷ್ಟಿಕೋನವುಳ್ಳವರು. ಅವನು ಅಮೂರ್ತತೆಯಲ್ಲಿ ನಂಬಿಕೆಯಿಟ್ಟರೆ ಇವಳು ಮೂರ್ತತೆಗೆ ಹಾತೊರೆಯುವಳು. ವ್ಯಕ್ತಿಗಳೊಳಗೆ ಯಾಂತ್ರಿಕ ಮತ್ತು ಅಯಸ್ಕಾಂತೀಯ ಕೇಂದ್ರಗಳಿರುತ್ತವೆ. ಅವರ ಗ್ರಹಿಕೆಗಳು ವಿಕೃತವಾದಾಗ ಅದು ಜೀವನದ ಗುಣಮಟ್ಟದ ಮೇಲೆ, ಆಶ್ರಿತರ ಮೇಲೆ, ಸಂಗಾತಿಗಳ ಮೇಲೆ ಪರಿಣಾಮ ಉಂಟುಮಾಡುತ್ತದೆ. ಗ್ರಹಿಕೆಗಳು ವಿಕೃತಗೊಳ್ಳಲು ವ್ಯಕ್ತಿಯ ಅಸ್ತಿತ್ವದ ಚೈತನ್ಯವು ಕೆಳಮಟ್ಟದಲ್ಲಿರುವುದೇ ಕಾರಣ. ಪ್ರೀತಿ, ಆಶ್ಚರ್ಯ, ಸಂತೋಷ ತೃಪ್ತಿ ಇದ್ದರೆ ಈ ಚೈತನ್ಯವು ಮೇಲ್ಮಟ್ಟಕ್ಕೇರುತ್ತದೆ. ವ್ಯಕ್ತಿಯ ಯೋಚನೆ ಬದಲಾವಣೆಯನ್ನು ಸ್ವತಂತ್ರವಾಗಿ ನೋಡಲು ಬಿಡುವುದಿಲ್ಲ.

ಪದ್ಮಿನಿ

ಕಾಮ-ಪ್ರೇಮಗಳ ನಡುವೆ ಅಂತರ, ಪರಿವರ್ತನೆಯ ಸ್ವರೂಪ ಅವರವರ ಭಾವಕ್ಕೆ ಗ್ರಹಿಕೆಗೆ ನಿಲುಕುವಾಗ ಅತ್ಯಂತ ಧೋರಣಾತ್ಮಕ ಅರ್ಥವನ್ನು ಪಡೆಯುತ್ತದೆ. 'ಹಯವದನ' ನಾಟಕದಲ್ಲಿನ ಪದ್ಮಿನಿಯನ್ನು ಕುರಿತ ಚರ್ಚೆಯು ಮೇಲ್ಕಂಡ ನೆಲೆಯಲ್ಲಿಯೇ ಸಾಗುವುದಾದರೂ ಪ್ರತಿಯೊಂದಕ್ಕೂ ಒಂದು ಮೂಲಭೂತ ಪ್ರೇರಣೆ ಇರುವುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಸಾಮಾಜೀಕರಣ ಎಂಬುದು ಹೆಂಗಸಿನ ಪಾಲಿಗೆ ಹೆಣ್ಣನ್ನು ಪುರುಷಾಧಿಪತ್ಯಕ್ಕೆ ಅಧೀನಗೊಳಿಸುವ, ವಿದೇಯಳಾಗಿಸುವ ಪ್ರಕ್ರಿಯೆಯಾಗಿದೆ. ಇದು ಹೆಣ್ಣಿನ ಸಹಜ ಆಸೆ, ಅಪೇಕ್ಷೆಗಳನ್ನು ದಮನ ಮಾಡುವ ಪ್ರಕ್ರಿಯೆಯೂ ಆಗಿದೆ. ಇದನ್ನು ಹೆಣ್ಣಿನ ಮೇಲೆ ವಿನಾಃ ಕಾರಣ ಬಲಾತ್ಕಾರವಾಗಿ ಹೇರಲಾಗಿದೆ. ಇದನ್ನು ಸಾಮಾಜಿಕವಾಗಿ ರೂಢಿಯಾಗಿಸಲಾಗಿದೆ. ಕಾಮವನ್ನು ಒಂದು ಜೀವನ ಮೌಲ್ಯವೆಂದು ಒಪ್ಪಿಕೊಳ್ಳುವಾಗ ಲೈಂಗಿಕ ಸಂಬಂಧಗಳನ್ನು ಕೇವಲ ಅನಿವಾರ್ಯ ಸಂಬಂಧಗಳನ್ನಾಗಿ ಇಲ್ಲವೇ ಯಾಂತ್ರಿಕ ಸಂಬಂಧಗಳನ್ನಾಗಿ ನೋಡಲಾಗು ವುದಿಲ್ಲ. ಆದರೆ ಅನೇಕ ದೃಷ್ಟಿಕೋನಗಳು ನೋಡುವ, ಗ್ರಹಿಸುವ ರೀತಿ ಲೈಂಗಿಕ ಸಂಬಂಧಗಳು ಅನಿವಾರ್ಯ ಸಂಬಂಧಗಳಾಗಿ, ಯಾಂತ್ರಿಕ ಸಂಬಂಧಗಳಾಗಿ ಅದರ ಜೀವನ ಮೌಲ್ಯವನ್ನು ಕಡೆಗಣಿಸಿಬಿಡುತ್ತವೆ.

ಕಾಮ-ಪ್ರೇಮದ ನಡುವಿನ ಸಂಘರ್ಷದ ಸಂಕೇತವಾಗಿ 'ಪದ್ಮಿನಿ' ಕಂಡುಬರುತ್ತಾಳೆ. ದೇವದತ್ತ ತನ್ನೊಡನಿದ್ದರೂ ಆಕೆಗೆ ಹಿತವನ್ನುಂಟುಮಾಡುವುದು ಕಪಿಲನ ಸಾನಿಧ್ಯ, ದಾಂಪತ್ಯದ

ಏಕಾಂತದ ಅನೇಕ ಸಂದರ್ಭಗಳಲ್ಲಿಯೂ ಕಪಿಲನ ಇರುವಿಕೆ ಬಯಸುವ ಪದ್ಮಿನಿಯ ವರ್ತನೆಯ ಕಾರಣ ಕುರಿತಾಗಿ ಕುತೂಹಲ ಉಂಟಾಗುತ್ತದೆ.

ದಾಂಪತ್ಯದಲ್ಲಿ 'ಕಾಮ' ಎಂಬುದು ಸೃಜನಶೀಲವಾದಗಲೇ ಅದು ಹೆಚ್ಚು ಹೆಚ್ಚು ಮಹತ್ವವನ್ನು ಪಡೆದುಕೊಳ್ಳುತ್ತದೆ. "ಅದೇ ಚೌಕಟ್ಟು, ಆಕರ್ಷಣೆ ಮನದ ಕಾವು-ವಿರಹ-ನಂತರ ಕಾಮ ಉನ್ನತೀಕರಣಗೊಂಡು ಸುಪ್ರೇಮವಾಗುವ ಕ್ರಿಯೆ".೮ ಕಾಮ ಉನ್ನತೀಕರಣಗೊಂಡು ಸುಪ್ರೇಮವಾಗುವ ಕ್ರಿಯೆ ಸದಾ ಉಸಿರಾಡುತ್ತಿರಬೇಕಾಗುತ್ತದೆ. ನಿಶ್ವಾಸ, ಉಚ್ಛ್ವಾಸಗಳಂತೆ ಅದು ಸ್ವಾಭಾವಿಕವಾಗಿ ಇರಬೇಕೇ ವಿನಃ ಯಾಂತ್ರಿಕವಾಗಬಾರದು. ದೇವದತ್ತನೊಂದಗಿನ ದಾಂಪತ್ಯದ ಆರು ತಿಂಗಳಗಳನ್ನು ಕಳೆದಿರುವ ಪದ್ಮಿನಿಗೆ ದೇವದತ್ತನಲ್ಲಿ ಆಕರ್ಷಣೆ ಕಡಿಮೆಯಾದುದೇ ಕಪಿಲನ ಬಗೆಗಿನ ಆಕರ್ಷಣೆಗೆ ಕಾರಣವಾಗಿರಬಹುದೇ? ಕಪಿಲನ ಆಕರ್ಷಣೆಯ ಮುಂದೆ ದೇವದತ್ತ ಮಂಕಾಗಿ ಹೋದ ಹಾಗೆ ಪದ್ಮಿನಿಯ ನಡವಳಿಕೆಯು ಕಂಡುಬರುತ್ತದೆ. ಇದನ್ನು ಸುಲಭವಾಗಿ ದೈಹಿಕ ಆಕರ್ಷಣೆಯೆಂದು ಹೇಳಿಬಿಡಬಹುದು. ಇದನ್ನೇ ಓಶೋ ಅವರು ಈ ರೀತಿ ಹೇಳುತ್ತಾರೆ. ನಾವು ಯಾರೊಟ್ಟಿಗೆ ಇರುತ್ತೇವೋ ಅವರ ಬಗ್ಗೆ ನಮ್ಮ ಸಂವೇದನೆ ಶಿಥಿಲಗೊಳ್ಳುತ್ತದೆ. ದಿನವೂ ಅವರನ್ನು ನೋಡುತ್ತಿರುತ್ತೇವೆ. ಆದ್ದರಿಂದ ಅವರಲ್ಲಿ ನೋಡಲು ಯೋಗ್ಯವಾದುದು ಮತ್ತೇನೂ ಉಳಿದಿರುವುದಿಲ್ಲ. ದಿನವೂ ಅವರನ್ನು ಹುಡುಕುತ್ತೇವೆ. ಆದ್ದರಿಂದ ಅವರಲ್ಲಿ ಹುಡುಕಲು ಹೊಸದೇನೂ ಇರುವುದಿಲ್ಲ. ಅವರ ವ್ಯಕ್ತಿತ್ವದೊಡನೆ ನಮ್ಮ ಪರಿಚಯ ಬೆಳೆದಂತೆ ಎಲ್ಲವೂ ಹಳಸಲಾರಂಭಿಸುತ್ತದೆ. ಇದು ಎಲ್ಲಾ ಇಂದ್ರಿಯಗಳ ರೀತಿ. ಒಂದೇ ರೀತಿಯ ಊಟ ದಿನವೂ ಸಿಗುತ್ತಿದ್ದರೆ ಇಂದು ಅದರಲ್ಲಿದ್ದ ರುಚಿ ನಾಳೆ ಇರುವುದಿಲ್ಲ. ಮಾರನೆಯ ದಿನದ ಹೊತ್ತಿಗೆ ನಮಗೆ ಬೇಸರ ಉಂಟಾಗುತ್ತದೆ. ನಾಲ್ಕನೆಯ ದಿನ ಮತ್ತದೇ ಊಟ ತಿನ್ನಬೇಕೆಂದರೆ ನಾವು ತಟ್ಟೆಯನ್ನು ಪಕ್ಕಕ್ಕೆ ಸರಿಸಿಬಿಡುತ್ತೇವೆ. ಇದನ್ನೇ ನಾವು ಮೊದಲನೆಯ ದಿನ ಬಹಳ ಚೆನ್ನಾಗಿದೆ ಎಂದು ತಿಂದದ್ದು, ಅದೇ ಊಟ ನಾಲ್ಕನೆಯ ದಿನದ ಹೊತ್ತಿಗೆ ಅಸಹ್ಯವಾಗುತ್ತದೆ.

ಓಶೋ ಅವರ ಅಭಿಪ್ರಾಯವನ್ನು ಅಲ್ಲಗಳೆಯಲು ಸಾಧ್ಯವಿಲ್ಲವಾದರೂ ಮನುಷ್ಯ ಸ್ತ್ರೀ-ಪುರುಷ ಸಂಬಂಧಗಳು ಬಹುತೇಕ ಆಕರ್ಷಣೆ ಮತ್ತು ವಿಕರ್ಷಣೆಗೆ ಕಾರಣ ಕುರಿತು, ಇಂದ್ರಿಯಗಳ ಸ್ವಭಾವದ ಕುರಿತು ಅನೇಕ ಕುತೂಹಲಗಳು ಮೂಡುತ್ತವೆ. ಹಾಗಾದರೆ ಅನುದಿನವೂ ಹೊಸತನ್ನು ಹುಡುಕುವುದು ಇಂದ್ರಿಯಗಳ ಸ್ವಭಾವವೇ? ಇಂದ್ರಿಯಗಳಿಗೆ ಹೊಸತನದಲ್ಲಿ ಉತ್ತೇಜನ ದೊರಕುವುದೆ? ಈ ಕಾರಣದಿಂದಲೇ ಸಮಾಜಗಳು ಐಂದ್ರಿಕವಾದಂತೆಲ್ಲಾ ಹೊಸತನ್ನು ಕಂಡುಹಿಡಿಯುವ ಪ್ರಕ್ರಿಯೆಗಳು ನಡೆಯುತ್ತಿವೆ ಎಂದು ಭಾವಿಸಬಹುದೆ?

ಪದ್ಮಿನಿಯ ಪಾತ್ರವು ಮೇಲ್ನೋಟಕ್ಕೆ ಇಂದ್ರಿಯಗಳ ಪ್ರವೃತ್ತಿಯಿಂದ ಪ್ರೇರಿತಳಾದ ವಿವಾಹಿತೆಯೊಬ್ಬಳ ವ್ಯಕ್ತಿತ್ವವನ್ನಾಗಿ ನೋಡುವ ಸಾಧ್ಯತೆ ಎಂದೇ ತೋರುತ್ತದೆ. ಆದರೆ ಒಬ್ಬ

ಸ್ಫುರದ್ರೂಪಿ, ಮೃದು ಸ್ವಭಾವಿ, ವಿದ್ವಾಂಸನಾದ ಗಂಡನಿರುವ ಹೆಣ್ಣೊಬ್ಬಳು ತೀರಾ ಸಾಮಾನ್ಯವಾಗಿರುವ ಪುರುಷನೊಂದಿಗೆ ಹೊಂದುವ ಆಕರ್ಷಣೆಯ ಹಿಂದಿರುವ ಸ್ವರೂಪವನ್ನು ಗಮನಿಸಬೇಕಾಗುತ್ತದೆ. ಇದರ ಸ್ವರೂಪವನ್ನು ಬೇರೆ ಬೇರೆ ಆಯಾಮಗಳ ಮೂಲಕ ನೋಡಬೇಕಾಗುತ್ತದೆ. ಇದನ್ನು ಎರಡು ನೆಲೆಯಲ್ಲಿ ಗ್ರಹಿಸಬಹುದು. ಒಂದು ತಾರ್ಕಿಕ ನೆಲೆಯಲ್ಲಿ; ಇನ್ನೊಂದು ವಾಸ್ತವ ನೆಲೆಯಲ್ಲಿ.

"ಯಾವ ಸಂವೇದನೆಯೂ ಸಂಪೂರ್ಣವಾಗಿ ಸಾರ್ವಜನಿಕವಾಗಿರದೆ ದೃಷ್ಟಿಕೋನಗಳ ಭಿನ್ನತೆಯ ಪರಿಣಾಮವಾಗಿರುತ್ತದೆ".[೧೪] ವಾಸ್ತವದಲ್ಲಿ ಯಾವುದೇ ವ್ಯಕ್ತಿಯ ಕುರಿತಾದ ಅಭಿಪ್ರಾಯಗಳು ದೃಷ್ಟಿಕೋನಗಳ ಭಿನ್ನತೆಯ ಪ್ರಭಾವದಿಂದ ಹೊರತಾಗಿರುವುದಿಲ್ಲ. ಸಮಾಜದಲ್ಲಿ ರೂಢಿಗತವಾಗಿರುವ ನಡವಳಿಕೆಗಳು ಹಾಗೂ ಅದನ್ನು ಗ್ರಹಿಸಿರುವ ರೀತಿಗಳು ದೃಷ್ಟಿಕೋನವನ್ನು ಪ್ರಭಾವಿಸಿರುತ್ತವೆ. ಪದ್ಮಿನಿಯನ್ನು ನೋಡುವಾಗ ಕೂಡಾ ಇದನ್ನು ಮೀರಲು ಸಾಧ್ಯವಾಗುವುದಿಲ್ಲ. ಆದರೆ ಹೀಗೆ ಮೀರುವ ಪ್ರಯತ್ನವೇ ವಾಸ್ತವವಾಗಿರುತ್ತದೆ.

ಭಾರತೀಯ ಸಾಮಾಜಿಕ ಸನ್ನಿವೇಶದಲ್ಲಿ ಹೆಣ್ಣನ್ನು ಕುರಿತಾದ ಸ್ಥಾಪಿತ ಮೌಲ್ಯವಿದೆ. ಈ ಮೌಲ್ಯವು ಜಗತ್ತು ಎಷ್ಟೇ ಆಧುನಿಕ ಚಿಂತನೆಗೆ ಒಳಗಾದರೂ ಬದಲಾಗದೇ ಗಟ್ಟಿಯಾಗಿಯೇ ಉಳಿದುಬಿಟ್ಟಿದೆ. ಅದೇ ರೀತಿಯಾಗಿ 'ಸ್ತ್ರೀತ್ವ'ವು ರಹಸ್ಯಮಯ ಎಂಬ ಪರಿಕಲ್ಪನೆಯನ್ನು ಸರ್ವೆ ಸಾಮಾನ್ಯ ಎಂಬಂತೆ ಬಳಸಲಾಗುತ್ತದೆ. ಹೆಣ್ಣು ತನ್ನನ್ನು ತಾನು ವ್ಯಕ್ತಪಡಿಸಿಕೊಳ್ಳಲಾರಳು ಎಂಬುದೇ ಇದರ ಮೂಲ ಅರ್ಥ. ವಾಸ್ತವದಲ್ಲಿ ಪದ್ಮಿನಿಗೆ ಕಪಿಲನ ಬಗೆಗಿರುವ ಆಕರ್ಷಣೆ ಯಾದರೂ ಎಂತಹುದು? ದೇವದತ್ತನಲ್ಲಿ ಕಂಡುಬರದ ಯಾವ ಅಂಶ ಪದ್ಮಿನಿಯನ್ನು ಕಪಿಲನ ಕಡೆಗೆ ಆಕರ್ಷಿಸಿರಬಹುದು? ಮೊದಲ ನೋಟಕ್ಕೆ ಪದ್ಮಿನಿಯನ್ನು ಚಂಚಲ ಸ್ವಭಾವದವಳು ಎಂದು ಕಪಿಲ ಅಂದುಕೊಂಡಂತೆ ಪದ್ಮಿನಿಗೂ ಕಪಿಲನ ಬಗೆಗೆ ಮೊದಲ ನೋಟಕ್ಕೆ ಆಕರ್ಷಣೆ ಉಂಟಾಗಿರಬಹುದೇ? ಹೀಗೆ ಅನೇಕ ಪ್ರಶ್ನೆಗಳು ಮೂಡುತ್ತವೆ.

ಮೇಲ್ನೋಟಕ್ಕೆ ಪದ್ಮಿನಿಗೆ ಕಪಿಲನಲ್ಲಿ ಆಕರ್ಷಣೆ ಇರುವುದು ಸ್ಪಷ್ಟ. ಆದರೆ ಈ ಆಕರ್ಷಣೆ ಕೇವಲ ದೈಹಿಕ ನೆಲೆಯದ್ದು ಎಂಬ ಗ್ರಹಿಕೆ ಸಮಾಜದ ಸ್ಥಾಪಿತ ಮೌಲ್ಯಗಳ ನಿರಂತರ ಕಾಯ್ದುಕೊಳ್ಳುವಿಕೆಯ ಪರಿಣಾಮದಿಂದ ಪ್ರೇರಿತವಾದುದು. ಪದ್ಮಿನಿ ಕಪಿಲರ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕಾದರೆ ಪದ್ಮಿನಿಯಲ್ಲಿ ಕಂಡುಬರುವ ಸಂಘರ್ಷದ ನೆಲೆಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಪದ್ಮಿನಿಯ ಸಂಘರ್ಷದ ನೆಲೆಗಳು

ಸಮಾಜವೊಂದು ಹಾಕಿಕೊಟ್ಟಿರುವ ಚೌಕಟ್ಟಿನಲ್ಲಿ ಹೆಣ್ಣನ್ನು ನೋಡುವ ಕ್ರಮವೊಂದಿದೆ. ಅದಕ್ಕಿಂತ ಭಿನ್ನವಾದ ನೆಲೆಯಲ್ಲಿ ಪದ್ಮಿನಿಯನ್ನು ಅರ್ಥೈಸುವುದಾದಲ್ಲಿ ಆಕೆಯ ವರ್ತನೆಗಳೆಲ್ಲವೂ

ಅತ್ಯಂತ ಆಧುನಿಕವಾಗಿಯೇ ಕಾಣುತ್ತವೆ. ಆಧುನಿಕತೆ ಕೇವಲ ಬರಹದಲ್ಲಿ, ಬಾಯಿಮಾತಲ್ಲಿ ತನ್ನ ಅಸ್ತಿತ್ವವನ್ನು ಪ್ರಕಟಗೊಳಿಸುವುದಿಲ್ಲ. ಅದು ಬದುಕಿನ ವಿಸ್ತರಣೆಯಲ್ಲಿ, ವಿವಿಧ ಸ್ತರಗಳಲ್ಲಿ ತನ್ನನ್ನು ತಾನು ಪ್ರಾಮಾಣಿಕವಾಗಿ ಪ್ರಕಟಗೊಳಿಸುತ್ತದೆ. ಈ ನಿಟ್ಟಿನಲ್ಲಿ ಹೆಣ್ಣಿನ ಸಭ್ಯತೆಯನ್ನು ಮೀರದಂತೆ ಪದ್ಮಿನಿ ಆಧುನಿಕವಾಗುತ್ತಾಳೆ ಹಾಗೂ ಅತ್ಯಂತ ಪ್ರಾಮಾಣಿಕವಾಗಿ ವ್ಯಕ್ತಗೊಳ್ಳುತ್ತಾಳೆ.

ಹೆಣ್ಣೊಬ್ಬಳು ಅದರಲ್ಲೂ ವಿವಾಹಿತ ಹೆಣ್ಣೊಬ್ಬಳು ತನ್ನನ್ನು ತಾನು ಪ್ರಾಮಾಣಿಕವಾಗಿ ವ್ಯಕ್ತಪಡಿಸಿಕೊಳ್ಳುತ್ತಾಳೆಂದರೆ ಆಕೆಯಲ್ಲಿನ ಆಂತರಿಕ ಸಂಘರ್ಷದ ನೆಲೆಯನ್ನು ಗ್ರಹಿಸಬೇಕಾಗುತ್ತದೆ. ಪದ್ಮಿನಿ ದೇವದತ್ತನದು ನೋಡುಗರಿಗೆ ಅನುರೂಪ ಜೋಡಿ. ಇಬ್ಬರೂ ಸೌಂದರ್ಯದಲ್ಲಿ ಸರಿಸಾಟಿಯಾದವರು. ಪದ್ಮಿನಿಯನ್ನು ಮೆಚ್ಚಿ ವಿವಾಹವಾದವನು ದೇವದತ್ತ. ಆದರೆ ದೇವದತ್ತನ ಮಾತಿನಲ್ಲಿಯೇ ಪದ್ಮಿನಿಗೆ ಕಪಿಲನಲ್ಲಿ ಆಕರ್ಷಣೆ ಇದೆ. ಈ ಆಕರ್ಷಣೆಯ ಸುಳಿವು ಅನುಮಾನಗೊಂಡ ಮನಸ್ಸಿನಿಂದ ಮೂಡಿದ್ದಲ್ಲ. ಅದು ಗಂಡನಾದವನ ಎದುರಿಗೆ ಪದ್ಮಿನಿಯ ವರ್ತನೆಯು ಉಂಟುಮಾಡಿರುವಂತಹದ್ದು. ಹಾಗೆಂದ ಮಾತ್ರಕ್ಕೆ ನೇರವಾದ, ನಿಷ್ಠುರವಾದ ವರ್ತನೆಯಿಂದ ಉಂಟಾದುದಲ್ಲ. ಅದು ದೇವದತ್ತನ ಆತ್ಮಾವಲೋಕನದ ಫಲ. ಬದುಕನ್ನು ಸುಂದರೀಕರಿಸುವ ಸಂದರ್ಭದಲ್ಲಿ ಪದ್ಮಿನಿಯಲ್ಲಿ ಉಂಟಾದ ಬದಲಾವಣೆ. ಇದು ಸಾಧಾರಣ ಬದಲಾವಣೆಯಲ್ಲ. ವಿವಾಹಿತ ಹೆಣ್ಣಿನ ಕುರಿತಾದ ಸ್ಥಾಪಿತ ಮೌಲ್ಯಗಳನ್ನು ಧಿಕ್ಕರಿಸಲೆಂಬಂತೆ ಉಂಟಾದ ಮನಸ್ಸಿನ ಚಿತ್ರಣ. ಇದು ದೇವದತ್ತನನ್ನು ತಿರಸ್ಕರಿಸಲಾರದ, ಹಾಗೆಯೇ ಸಂಪೂರ್ಣವಾಗಿ ನಿಷ್ಠಳೂ ಆಗಲಾರದ ದ್ವಂದ್ವ. ಈ ದ್ವಂದ್ವತೆಯು ಕೇವಲ ಪದ್ಮಿನಿಯೊಬ್ಬಳದ್ದಾಗಿ ಇಲ್ಲಿ ವಿಶ್ಲೇಷಿಸಲ್ಪಡಲಾಗದು. ಇದು ಹೆಣ್ಣೆಂಬ ಸ್ತ್ರೀತನದ ದ್ವಂದ್ವ, ಕಾಮ ಮತ್ತು ಪ್ರೇಮಗಳ ನಡುವಿನ ಗೊಂದಲದ, ಒತ್ತಡದ ವಾಸ್ತವದಲ್ಲಿ ಬದುಕಬೇಕಾಗಿರುವ ವಿಶಿಷ್ಟ ಮನಸ್ಸುಗಳ ಸಂಘರ್ಷ. ಪುರುಷ ರಾಜಕಾರಣ ವ್ಯವಸ್ಥೆಯಲ್ಲಿ ನಿರೂಪಿತಗೊಂಡಿರುವ ಏಕಮುಖಿಯಾದ ನೈತಿಕತೆ, ಸ್ತ್ರೀ ಮೌಲ್ಯಗಳು, ಪರಂಪರೆಗಳು, ಆಚರಣೆಗಳು, ರೂಢಿ ಸಂಪ್ರದಾಯಗಳೆಂಬ ಕೃತಕ ಬೇಲಿನಿಂದ ಬಂಧಿಸಲ್ಪಟ್ಟ ಅಪ್ರಾಮಾಣಿಕ ನೆಲೆಯಲ್ಲಿ ಬದುಕುತ್ತಿರುವ ಹೆಣ್ಣಿನ ಸಮುದಾಯದ ಒತ್ತಡ ಅಷ್ಟು ಸುಲಭವಾಗಿ ಅರ್ಥವಾಗಲಾರದು. ಇಂತವು ಬಲು ಸೂಕ್ಷ್ಮವಾದವು. ಆದರೆ ಇಂತಹ ಸೂಕ್ಷ್ಮತೆಯನ್ನು ವ್ಯವಸ್ಥೆಯು ಬಯಲಿಗೆಳೆದು ಗೇಲಿ ಎಬ್ಬಿಸಿಬಿಡುತ್ತದೆ. ಹಾಗಾಗಿಯೇ ಇಂತಹ ಒತ್ತಡಗಳು ಅದುಮಿಡಲ್ಪಡುತ್ತವೆ.

ಕಾಮ ಮತ್ತು ಪ್ರೇಮದ ಸಂಘರ್ಷದ ನಡುವೆ ಉತ್ಕಟತೆಗಷ್ಟೇ ಸೀಮಿತವಾಗದ ಸ್ಪಷ್ಟ ತಿಳುವಳಿಕೆಯ ಪ್ರಜ್ಞಾಪೂರ್ವಕ ಆಯ್ಕೆಯ ವರ್ತನೆಯನ್ನು ಪದ್ಮನಿ ತೋರುತ್ತಾಳೆ. ಸಾಂಪ್ರದಾಯಿಕ ಭಾರತೀಯ ಸಮಾಜದ ಆಲೋಚನೆ, ಮೌಲ್ಯ ಸಂವೇದನೆಗಳ ಚೌಕಟ್ಟನ್ನು ಮೀರುವ ಮೂಲಕ ಸ್ತ್ರೀತನದ ತುಡಿತಗಳು ಸಂವೇದನೆಗಳು, ಆಕಾಂಕ್ಷೆಗಳನ್ನು ಪ್ರಾಮಾಣಿಕ ನೆಲೆಯಲ್ಲಿ ಪ್ರಕಟಿಸುವ

ಸಂದರ್ಭ. ಮೂಲ ಕಾಮದ, ಗೃಹಸ್ಥ ಕಾಮದ ಹಾಗೂ ಸಮಾಜ ಒಪ್ಪಿತ ಕಾಮದ ನಡುವಿನ ಸಂಘರ್ಷ ಪದ್ಮಿನಿಯ ಮೂಲಕ ಅನಾವರಣಗೊಂಡಿದೆ. ಕಪಿಲನ ಸಾನಿಧ್ಯದಲ್ಲಿ ಪದ್ಮಿನಿಯ ವರ್ತನೆಯು, ಆಕೆಯ ಭಾವನಾ ವಲಯಗಳ ಸಂಕೀರ್ಣತೆಯನ್ನು ಸ್ಪಷ್ಟಪಡಿಸುತ್ತದೆ. ಆಕೆ ತನ್ನ ಮೂಲ ಭಾವನೆಯ ಕುರಿತಾಗಿ ಯಾವುದೇ ಸೈದ್ಧಾಂತಿಕ ಎಚ್ಚರ ವಹಿಸುವುದಿಲ್ಲ. ಕಪಿಲನೊಂದಿಗಿನ ತನ್ನ ಭಾವನೆಯನ್ನು ಆಕೆ ಮುಚ್ಚಿಡುವುದಿಲ್ಲ. ಆಕೆಯ ವ್ಯಕ್ತಿಗತ ವಾಸ್ತವವೊಂದಿದೆ. ಅದು ಅಪರಿಪೂರ್ಣಗೊಂಡಿರುವುದರಿಂದಲೇ ಪದ್ಮಿನಿ ತನ್ನನ್ನು ಪರಿಪೂರ್ಣತೆಗೊಳಿಸುವ ಭಾವನೆಯನ್ನು ಕಪಿಲನ ಸಾನಿಧ್ಯದಿಂದ ಅನುಭವಿಸುತ್ತಾಳೆ. ಆ ಮೂಲಕ ಪೂರ್ಣಗೊಳ್ಳದ ಬಯಕೆ ಹಾಗೂ ವಾಸ್ತವ ಬದುಕಿನ ನಡುವೆ ಸಂಘರ್ಷವನ್ನು ನಿರಂತರವಾಗಿ ಆಕೆ ಎದುರಿಸುತ್ತಾಳೆ.

ಪದ್ಮಿನಿಯ ಸಂಘರ್ಷದ ನೆಲೆಗಳು ಪದ್ಮಿನಿಯ ಸ್ಥಾನದಲ್ಲಿಯೇ ನಿಂತು (ಅನುಭೂತಿ) ನೋಡಬೇಕು. ಇದು ಪದ್ಮಿನಿಯ ಸಂಘರ್ಷ. ಈ ಬಗೆಯ ಸಂಘರ್ಷವು ಎಲ್ಲಾ ಸ್ತ್ರೀಯರಲ್ಲಿ ಇರುತ್ತದೆ ಎಂದು ಸಾಮಾನ್ಯೀಕರಿಸುವುದಿಲ್ಲ. ಆದರೆ ಇಂತಹ ಸಂಘರ್ಷಗಳು ಬಹುತೇಕರಲ್ಲಿ ಕಾಣುವುದು ಸಹಜ. ಇದಕ್ಕೆ ಕಾರಣವೂ ಇದೆ. ಏಕೆಂದರೆ ಮದುವೆ ಎಂಬುದು ಸಂತಾನೋತ್ಪತ್ತಿಗೆ ಎಂಬ ಭಾವನೆ. ಅಂದರೆ ಲೈಂಗಿಕತೆ ಮತ್ತು ಸಂತಾನೋತ್ಪತ್ತಿಗೂ ನೇರವಾದ ಸಂಬಂಧ ಇದೆ ಎಂದೇ ಭಾವಿಸುತ್ತವೆ. ಹೆಗಲ್‌ನ ಚರ್ಚೆಯನ್ನು ಇಲ್ಲಿ ಗಮನಿಸಬಹುದು. "ಮನಷ್ಯ ಲೈಂಗಿಕ ಕ್ರಿಯೆಯ ಮೂಲಕ ಲಿಂಗಗಳಿಗೆ ಮತ್ತು ಅವುಗಳ ಸಂಬಂಧಗಳಿಗೆ ಮಹತ್ವ ನೀಡುತ್ತಾನೆ. ತಾನು ಮಾಡುವ ಎಲ್ಲ ಕೆಲಸಗಳಿಗೂ ಮನುಷ್ಯ ಹೀಗೆಯೇ ಅರ್ಥ ಮತ್ತು ಮೌಲ್ಯಗಳನ್ನು ಪ್ರಧಾನ ಮಾಡುತ್ತಾನೆ".[೧೫] ಅಂತೆಯೇ ಸ್ತ್ರೀಯ ಎಲ್ಲಾ ಗುಣ ವಿಶೇಷಗಳು, ಚಟುವಟಿಕೆಗಳನ್ನು ಇದುವರೆಗೂ ಲೈಂಗಿಕತೆಯ ಹಿನ್ನೆಲೆಯಲ್ಲಿ ಅರ್ಥ ಮಾಡಿಸುವ ಪರಿ. ಆಕೆಯ ಭಾವಾನಾತ್ಮಕ, ಸಂವೇದನಾತ್ಮಕ ಆಯಾಮಗಳನ್ನು ಪರಿಗಣಿಸಬೇಕೆಂಬ ಸಾಮಾನ್ಯ ಮಾನವೀಯತೆಯನ್ನು ರೂಪಿಸಿಕೊಂಡಿಲ್ಲ. ಬಹುತೇಕ ನಿಯಂತ್ರಣಗೊಂಡ ಬದುಕು ಹೆಣ್ಣಿನದು. ಕೇವಲ ಮೂಳೆ, ಮಾಂಸಗಳಿರುವವಳು ಮಾತ್ರವಾಗಿರದೇ ಅಗಾಧ ಶಕ್ತಿ, ಸಹನೆಯು ಆಕೆಗಿದೆ. ಆದರೆ ವಿಚಾರಗಳನ್ನು ವಿವರಿಸುವಲ್ಲಿ, ಸಾಧ್ಯತೆಗಳನ್ನು ಸೃಷ್ಟಿಸುವಲ್ಲಿ ಆಕೆ ಒತ್ತಡಕ್ಕೆ ಒಳಗಾಗುತ್ತಾಳೆ. ತನ್ನನ್ನು ತಾನು ವಿಸ್ತರಿಸುವ, ವಿಕಸಿಸುವ, ಪಕ್ವತೆ ಗಳಿಸುವ, ಅಭಿವ್ಯಕ್ತಿಸುವ ಎಲ್ಲಾ ಬಗೆಯ ಸಾಮರ್ಥ್ಯಗಳು ಪದ್ಮಿನಿಯ ಸಂಘರ್ಷಕ್ಕೆ ಪ್ರೇರಣೆಯಾಗಿರಬಹುದು.

ಪದ್ಮಿನಿಯ ಪಾತ್ರದಲ್ಲಿ ಸುಪ್ತ ಪ್ರಜ್ಞೆಯ ನಿಯಮ (Unconciousness lawfulness)

ಮದುವೆಯಾದ ಪದ್ಮಿನಿ ಕಪಿಲನಲ್ಲಿ ಆಕರ್ಷಣೆಗೊಂಡಿದ್ದಾಳೆ. ಆದರೆ ಆ ಆಕರ್ಷಣೆಯ ಸ್ವರೂಪವು ಮನೋಸ್ಥಿತಿಯ ಭೂಮಿಕೆಯಿಂದ ಉಂಟಾದುದೇ? ಅಥವಾ ಪರಿಸರದ ಪ್ರಭಾವವೇ ಎಂಬುದನ್ನು ವಿಶ್ಲೇಷಿಸುವುದು ಈ ನೆಲೆಯಲ್ಲಿ ಬಹುಮುಖ್ಯವಾಗುತ್ತದೆ. ದೈಹಿಕ ನೆಲೆಯಲ್ಲಿಯೇ

ನೋಡುವುದಾದರೆ ಭಾರತೀಯ ಸಂಸ್ಕೃತಿಯ ಸೌಂದರ್ಯದ ಕಲ್ಪನೆಯನ್ನೇ ಸಂಶಯದಿಂದ ನೋಡಬೇಕಾಗಬಹುದು. ಏಕೆಂದರೆ ದೇವದತ್ತನು ಭಾರತೀಯ ಸೌಂದರ್ಯ ಕಲ್ಪನೆಯ ಪ್ರತಿರೂಪವಾಗಿದ್ದಾನೆ. ಅಂತೆಯೇ ಪಾಂಡಿತ್ಯವುಳ್ಳವನೂ, ಮೃದು ಸ್ವಭಾವಿಯೂ ಆಗಿದ್ದನು. ಇದಕ್ಕೆ ಪೂರ್ಣ ವಿರುದ್ಧನಾಗಿದ್ದವನು ಕಪಿಲ. ಆದರೂ ತಮ್ಮಿಬ್ಬರ ಏಕಾಂತದಲ್ಲೂ ಕಪಿಲನ ಉಪಸ್ಥಿತಿಯನ್ನು ಬಯಸುತ್ತಾಳೆ ಪದ್ಮಿನಿ. ಇಂತಹವುಗಳನ್ನು ಫ್ರಾಯ್ಡಿಯನ್ (Fruidean) ಚೌಕಟ್ಟುಗಳಿಂದ ಸೀಮಿತಗೊಳಿಸುವುದು ಸುಲಭ. ಆದರೆ ಯೂಂಗ್‌ನ ಸಂಕೇತಗಳು (Arche-types) ಇದನ್ನು ಪುನರ್ ರಚಿಸುವ ಸಾಧ್ಯತೆಯನ್ನು ನೀಡುತ್ತದೆ.

ಪದ್ಮಿನಿ ಮತ್ತು ದೇವದತ್ತನ ಮದುವೆಯಾಗಿ ಆರು ತಿಂಗಳು ಕಳೆದಿವೆ. ಗರ್ಭಿಣಿಯಾದ ಪದ್ಮಿನಿ ಮತ್ತು ದೇವದತ್ತರು ಕಪಿಲನೊಂದಿಗೆ ಪ್ರವಾಸ ಹೊರಡುವ ಸಿದ್ಧತೆಯಲ್ಲಿದ್ದಾರೆ. "ಪದ್ಮಿನಿ ನಿನಗೆ ಹತ್ತು ಸಲ ಹೇಳಿದೆ. ನಿನ್ನ ಪರಿಸ್ಥಿತಿಯಲ್ಲಿ ಈ ಪ್ರವಾಸ ಮಾಡಲು ಮನಸ್ಸಿಲ್ಲ ನನಗೆ".. ಕಪಿಲನೊಂದಿಗೆ ಇಷ್ಟವಿರದ ಪ್ರವಾಸ ದೇವದತ್ತನಿಗೆ. ಕಪಿಲನ ಸಾನಿಧ್ಯ ಪದ್ಮಿನಿಗೆ ಬೇಕು. ಕಪಿಲನ ಸಾನಿಧ್ಯ ಪದ್ಮಿನಿಗೆ ಬೇಕು. ಇದು ದೇವದತ್ತನಿಗೆ ಸ್ಪಷ್ಟವಾಗಿದೆ. "ಒಂದು ಸಲ ನಿನ್ನೊಬ್ಬಳನ್ನೇ ಕೂಡಿಸಿಕೊಂಡು ಓದಿ ಹೇಳೋಣ. ಒಂದೆರಡು ದಿನ ಆದರೂ ಬೇರೆ ಯಾರೂ ಅಡ್ಡ ಬರದೆ ಕಳೆಯೋಣ ಅಂತ ಅನಿಸೋದೂ ತಪ್ಪೇನು? ಇನ್ನು ಅವನು ಬಂದ ಮೇಲೂ ಕಾವ್ಯ ವಾಚನ ಆಗೋದು ಅಷ್ಟೇ ಇತ್ತು. ನಿನ್ನ ಕಪಿಲ ಕಪಿಲ..... ಪಲ್ಲವಿ ಸುರು ಅಗಿಬಿಟ್ಟಿತಲ್ಲ"[೧೬] ಎನ್ನುವ ಸಂದರ್ಭವು ಪದ್ಮಿನಿಗೆ ಕಪಿಲನ ಉಪಸ್ಥಿತಿಯ ಬಯಕೆ ಇರುವುದು. ಅದು ಪತಿಯಾದ ದೇವದತ್ತನ ಅರಿವಿಗೆ ಬಂದಿರುವುದು ಮತ್ತು ದೇವದತ್ತನಿಗೆ ಇದು ಅಸಂತುಷ್ಟತೆಯನ್ನು ಉಂಟುಮಾಡುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

ಇಂತಹ ಸಂದರ್ಭಗಳು ಸಹಜವಾಗಿ ಮದುವೆಯಾದ ಸ್ತ್ರೀಯೊಬ್ಬಳು ಗಂಡನಿದ್ದೂ ಪರಪುರುಷನ ಕಡೆಗೆ ಆಕರ್ಷಿತಳಾಗುವುದು, ಸ್ತ್ರೀಯ ಶೀಲವನ್ನು, ನಡತೆಯನ್ನು ಪ್ರಶ್ನಿಸುವ ಕಾರಣಗಳಾಗಿಬಿಡುತ್ತವೆ. ಇಂತಹ ಆಕರ್ಷಣೆಗೆ ಕಾರಣವಾಗುವ ಸಂದರ್ಭಗಳು ಯಾವ ನೋಟಕ್ಕೂ ನಿಲುಕಲಾರದೇ ಹೋಗಿಬಿಡುತ್ತವೆ.

ಸ್ತ್ರೀಯ ಮನೋಬಿಂಬದ ಅಭಿವ್ಯಕ್ತಿ ಯಾವಾಗಲೂ ಬಹಳ ಸ್ಫುಟ ಮತ್ತು ಸ್ವಚ್ಛ. ಸಾಹಿತ್ಯ ಮತ್ತು ಇತಿಹಾಸಗಳಲ್ಲಿ ಅದರ ಪ್ರಭಾವವನ್ನು ನಿರಂತರವಾಗಿ ಕಾಣಬಹುದು. ಹಲವಾರು ಪೌರಾಣಿಕ ಪ್ರತಿಮೆಗಳ ಸೃಷ್ಟಿಗೆ ಕಲ್ಪನೆಗಳಲ್ಲಿ ಅನಿಮಾ ಅಥವಾ ಅನಿಮಸ್ ಪ್ರೇರಣೆ. ಇಂತಹ ಪ್ರೇರಣೆಯೊಂದು 'ಹಯವದನ' ನಾಟಕದಲ್ಲಿ ಪದ್ಮಿನಿಯ ಪಾತ್ರ ಸೃಷ್ಟಿಗೂ ಕಾರಣವಾಗಿರಬಹುದೆಂದು ಊಹಿಸಬಹುದು.

ಯಾವುದೇ ಪಾತ್ರ ತನ್ನ ತೀರಾ ವಯಕ್ತಿಕವಾದ ಅನುಭವ ಇತರರಿಗೆ ವಿಲಕ್ಷಣವನ್ನುಂಟು ಮಾಡಿದಾಗ ಆ ಪಾತ್ರದ ಕುರಿತಾದ ಕುತೂಹಲ ಸಹಜ. ಆದರೆ ಆ ಕುತೂಹಲ ವಯುಕ್ತಿಕ

ನೆಲೆಯಲ್ಲಿ ಉಳಿದುಬಿಡುತ್ತದೆ. ಅದನ್ನು ಸಾರ್ವತ್ರಿಕ ನೆಲೆಯಲ್ಲಿ ನೋಡಿದಾಗ ಆ ಪಾತ್ರದ ಕುರಿತಾದ ಅಭಿಪ್ರಾಯಗಳು ಬದಲಾಗಬಹುದು. ಅದರಲ್ಲೂ ಮನಃಶಾಸ್ತ್ರೀಯ ನೆಲೆಯು ಮನುಷ್ಯ ಅರ್ಥಮಾಡಿಕೊಳ್ಳಲಾಗದ ಮನೋ ಲೋಕವೊಂದರ ದರ್ಶನದ ಜೊತೆಗೆ ಕಾರ್ಯ-ಕಾರಣ ಸಂಬಂಧಗಳ ವಿಶ್ಲೇಷಣೆಗೆ ಸಹಾಯಕವಾಗುತ್ತದೆ.

ಫ್ರಾಯ್ಡಿಯನ್ ಸಿದ್ಧಾಂತವು ಈ ಬಗೆಯ ವರ್ತನೆಯನ್ನು ಲಿಬಿಡೋ (Libido) ನೆಲೆಯಲ್ಲಿ ನೋಡಬೇಕಾದ ಸಾಧ್ಯತೆಯ ಬಗೆಗೆ ತಿಳಿಸುತ್ತದೆ. ಫ್ರಾಯ್ಡ್ ಹೇಳುವ ಲೈಂಗಿಕ ಹಿನ್ನೆಲೆಯ Libido ನೆಲೆಗಿಂತ ಯೂಂಗ್ ವಿವರಿಸುವ ಲಿಬಿಡೋ (Libido) ನೆಲೆಯು ಪದ್ಮಿನಿಯ ಪಾತ್ರವನ್ನು ಹೆಚ್ಚು ಅರ್ಥಮಾಡಿಕೊಳ್ಳಲು ಸಹಾಯಕವಾಗಬಹುದು.

ಪದ್ಮಿನಿ ತನ್ನ ಮನಸ್ಸಿನ ತುಮುಲ ಅಥವಾ ಸಂಘರ್ಷಗಳನ್ನು ಕಪಿಲನನ್ನು ಮುಂದೆ ಇರಿಸಿಕೊಂಡು ಹೊರಹಾಕುತ್ತಿರುವಂತೆ ತೋರುತ್ತದೆ. ಇದಕ್ಕೆ ನಿಖರವಾದ ಕಾರಣಗಳನ್ನು ಹುಡುಕುವುದು ಸಾಧ್ಯವಿಲ್ಲವಾದರೂ ಅದರ ಹಿಂದಿನ ಸ್ವರೂಪವನ್ನು ಊಹಾತ್ಮಕವಾಗಿ ಅರ್ಥಮಾಡಿಕೊಳ್ಳಬಹುದು. ಪದ್ಮಿನಿ ದೇವದತ್ತನ ಉಪಸ್ಥಿತಿಯಲ್ಲಿ ಕಪಿಲನನ್ನು ಕುರಿತೇ ಮಾತಾನಾಡುತ್ತಾಳೆ. ಜೊತೆಗೆ ಆತನ ಇರುವಿಕೆಯನ್ನು ಬಯಸುತ್ತಾಳೆ. ದೇವದತ್ತ ಹೇಳಿದನೆಂದು ತಾವು ಮೂವರು ಹೋಗಬೇಕಿದ್ದ ಪ್ರವಾಸವನ್ನು ಮೊಟಕುಗೊಳಿಸುತ್ತಾಳೆ. ಆದರೆ ಕಪಿಲನ ಆಗಮನದೊಂದಿಗೆ ತಮ್ಮ ನಿರ್ಧಾರವನ್ನು ಅಲ್ಲಗೆಳೆದು ಪ್ರವಾಸಕ್ಕೆ ಹೊರಡುತ್ತಾಳೆ. ಈ ಸಂದರ್ಭವನ್ನು ಡಾ. ಫ್ರೀಟ್ಜ್ ಪರ್ಲ್ಸ್ ಅವರ ಗೆಸ್ಟಾಲ್ಟ್‌ನ ಮೂಲಕ ವಿಶ್ಲೇಷಿಸಬಹುದು.

ಸಾಮಾನ್ಯವಾಗಿ ವ್ಯಕ್ತಿಗಳು ಒಂದೇ ಸಮಯದಲ್ಲಿ ಎರಡು ಮನೋಸ್ತರಗಳಲ್ಲಿ ಕ್ರಿಯಾಶೀಲರಾಗುತ್ತಾರೆ. ಒಂದು ಸ್ತರ ವ್ಯಕ್ತಿಯ ಹೊರಗೆ ಇರುವ ವಾಸ್ತವ (Reality). ಇನ್ನೊಂದು ನಮ್ಮ ಒಳಗೆ ಇರುವ ಕಲ್ಪನೆ (ಫ್ಯಾಂಟಸಿ). ವಾಸ್ತವದಲ್ಲಿ ಈಗ ಇಲ್ಲದ, ಅಸಾಧ್ಯವಾದ ಮತ್ತು ಈಡೇರದ ವಿಷಯವನ್ನು ಊಹಿಸಿ, ಸಾಧ್ಯತೆಗಳನ್ನು ತಯಾರಿಸಿ ಇಟ್ಟುಕೊಳ್ಳುವ ಮಾನಸಿಕ ಕ್ರಿಯೆ ವ್ಯಕ್ತಿಯಲ್ಲಿ ಇರುತ್ತದೆ. ಇದು ಒಂದು ಸನ್ನಿವೇಶದಲ್ಲಿ ಹೇಗೆ ಇರಬೇಕು, ಏನು ಮಾಡಬೇಕು ಮತ್ತು ಏನು ಮಾತಾಡಬೇಕು ಎಂಬುದನ್ನು ಕಲ್ಪನೆಯಲ್ಲಿ ರಿಹರ್ಸಲ್ ಮಾಡುತ್ತಿರುತ್ತೇವೆ. ನಂತರ ಅದನ್ನು ವಾಸ್ತವದಲ್ಲಿ ಕ್ರಿಯಾರೂಪಕ್ಕೆ ತರುತ್ತೇವೆ.

ಪದ್ಮಿನಿಯು ಪ್ರವಾಸವನ್ನು ಮೊಟಕುಗೊಳಿಸುತ್ತಾಳೆ. ಆದರೆ ಕಪಿಲ ಬಂದೊಡನೆ ಸಂಪೂರ್ಣವಾಗಿ ತನ್ನ ಮತ್ತು ದೇವದತ್ತನ ನಡುವಿನ ತೀರ್ಮಾನವನ್ನು ಮರೆತುಬಿಡುತ್ತಾಳೆ. ಈ ನಡವಳಿಕೆಯೊಂದಿಗೆ ಪದ್ಮಿನಿಯು ಅತ್ಯಂತ ಪ್ರಾಮಾಣಿಕವಾಗಿ, ನೇರವಾಗಿ ಸ್ಪಷ್ಟವಾಗಿ ಕಪಿಲನ ಕುರಿತಾದ ಆಕೆಯ ಭಾವನೆಯನ್ನು ವ್ಯಕ್ತಪಡಿಸುತ್ತಾಳೆ. ವಾಸ್ತವವಾಗಿ ಮಾನವ ವರ್ತನೆಯು ಸ್ವಭಾವಸಿದ್ಧವಾದುದು, ಅಲುಗಾಡದಂತೆ ಭದ್ರವಾಗಿ ಒಂದೆಡೆ ನೆಟ್ಟಂತಹದ್ದು ಅಲ್ಲ. ಅದು

ಅನೇಕ ಸಾಮಾಜಿಕ ನಿಯಮಗಳು, ಸಂಪ್ರದಾಯಗಳಿಂದ ನಿರ್ಧಾರವಾಗುವಂತಹದ್ದು. ಸಮಾಜವು ಹೊಸ ಹೊಸ ಸನ್ನಿವೇಶಗಳಲ್ಲಿ ವ್ಯವಹರಿಸತೊಡಗಿದಂತೆ ಇವುಗಳಲ್ಲೂ ಸತತವಾಗಿ ಬದಲಾವಣೆ ಕಂಡುಬರುತ್ತದೆ. ಯಾವಾಗ ಸಂಪ್ರದಾಯವು ಕೆಲವೊಂದು ನಿಬಂಧನೆಗಳಿಗೆ ಒಳಪಡುತ್ತದೋ ಆಗ ಅದು ಮಾನವ ವರ್ತನೆಯನ್ನು ರೂಪಿಸುತ್ತದೆ. ಮಾನವನೇ ನಿರ್ಮಿಸಿರುವ ಅನೇಕ ನಿಯಮಗಳು ಆತನ ನಿಯಂತ್ರಣದಾಚೆ ವ್ಯವಹರಿಸುತ್ತವೆ. ಇಂತಹ ನಿಬಂಧನೆಗೆ ಒಳಪಟ್ಟ ಪದ್ಮಿನಿಯ ಮನಸ್ಸು ಮಾನವ ನಿರ್ಮಿತ ನಿಯಮ, ಸಂಪ್ರದಾಯದ ನಿಯಂತ್ರಣದಾಚೆ ಮೀರುವ ನಡವಳಿಕೆಯಾಗಿ ಮಾತ್ರ ಕಾಣುತ್ತದೆ. ಪರಿಸರದಿಂದ ಪ್ರತ್ಯೇಕಗೊಂಡ ಪ್ರಜ್ಞೆಯ ವಾಸ್ತವತೆಯನ್ನು ತನ್ನ ಇಚ್ಛಾನುಸಾರ ಪರಿವರ್ತಿಸಿರುವಂತೆ ಪದ್ಮಿನಿಯು ವರ್ತಿಸುತ್ತಾಳೆ.

ಪದ್ಮಿನಿಯ ಮಾತಿನ ಈ ಸಂದರ್ಭವು ಕೂಡಾ ಆಕೆಯ ಮನೋನೆಲೆಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತದೆ. ಆಕೆಯೇ ಹೇಳುವಂತೆ ದೇವದತ್ತ ಪದ್ಮಿನಿಯನ್ನು ಪ್ರೀತಿಸುತ್ತಾನಾದರೂ "ಬಾವಿಯಲ್ಲಿ ಮುಳುಗಿ ಸತ್ತರೂ ಅವಳ ಹೆಣ ಹೊಟ್ಟೆ ಉಬ್ಬಿ ಮೇಲೆ ತೇಲಿ ಬರುವವರೆಗೆ ಅವಳು ಕಳೆದು ಹೋಗಿದ್ದಾಳೆ ಎನ್ನುವ ಎಚ್ಚರಾನೂ ಇರುತ್ತದೋ ಇಲ್ಲೋ".[೧೭] ಈ ಸಂದರ್ಭವು ದೇವದತ್ತ ಸಂಪೂರ್ಣವಾಗಿ ಪದ್ಮಿನಿಯ ಕಡೆಗೆ ಅಪ್ಯಾಯಮಾನತೆಯನ್ನು ಹೊಂದಿಲ್ಲವೆಂದು, ಮತ್ತು ಆಕೆಯ ಕಲ್ಪನೆಯ ಸಾಮಾನ್ಯ ಬದುಕಿಗೆ, ದೇವದತ್ತನ ಪಾಂಡಿತ್ಯದ ಬದುಕು ನಿಲುಕದಿರುವ ಅನಿಸಿಕೆಯು ಇದಾಗಿರಬಹುದು. ದೇವದತ್ತನೇ ಹೇಳುವಂತೆ "ಕಪಿಲ ನಾಚಿ ಬಳುಕುವ ಪ್ರಾಣಿಯೇ ಅಲ್ಲ. ಆದರೆ ಈಗ ಇವಳನ್ನು ನೋಡಿದರೆ ಸಾಕು. ಒಡತಿಯನ್ನು ಕಂಡು ಬಾಲ ಬಡಿಯುವ ದೈನ್ಯ...... ಇಷ್ಟು ಕಾಣಿಸೋದಿಲ್ಲೇನು ಇವಳಿಗೆ?[೧೭]

ಪದ್ಮಿನಿ ಮೇಲ್ನೋಟಕ್ಕೆ ಬಹುರ್ಮುಖಿ (Extrovert) ಆಗಿ ಕಾಣುತ್ತಾಳೆ. ಸಹಜವಾಗಿ ಎಲ್ಲರೊಡನೆ ಬೆರೆಯುವ, ಪರಸ್ಪರ ಭಾವನೆಗಳನ್ನು ಹಂಚಿಕೊಳ್ಳುವ ಸ್ವಭಾವ ಇಂತಹವರದ್ದಾಗಿರುತ್ತದೆ. ದೇವದತ್ತ ಅಂತರ್ಮುಖಿಯೂ ಆಗಿ ಕಂಡುಬರುತ್ತಾನೆ. ಕಪಿಲನ ಸಾಮಾನ್ಯ ಬದುಕು, ಒರಟುತನ ಪದ್ಮಿನಿಯೊಂದಿಗಿನ (Intimacy) ಆಪ್ತತೆ, ದಿನದಿಂದ ದಿನಕ್ಕೆ ಪದ್ಮಿನಿಗೆ ಆಕರ್ಷಿತನಾಗುವಂತೆ ಮಾಡಿರಬಹುದು. ಈ ಬಗೆಯ ಆಕರ್ಷಣೆಯು ಲೈಂಗಿಕ ಇಚ್ಛೆಯಿಂದ ಕೂಡಿದುದಾಗಿರುವುದಿಲ್ಲ. ಆದಕ್ಕೆ ಹೊರತಾಗಿಯೂ, ಮಾನವರಲ್ಲಿ ಉಂಟಾಗುವ ಪರಸ್ಪರ ಆಕರ್ಷಣೆ, ವಿಶ್ವಾಸ ಗೌರವ ಇತ್ಯಾದಿಗಳಂತಹ ಆಕರ್ಷಣೆ. ಇಂತಹ ಆಕರ್ಷಣೆಯು ದೇಹದ ಅಚ್ಚುಕಟ್ಟು, ರೂಪುರೇಷೆಗಳನ್ನು ಕುರಿತುದಲ್ಲ. ವ್ಯಕ್ತಿಯ ನಡವಳಿಕೆ, ಅನುಕಂಪ, ಬುದ್ಧಿವಂತಿಕೆ ಇತ್ಯಾದಿಗಳಿಂದಲೂ ಆಕರ್ಷಣೆ, ವಿಶ್ವಾಸ, ಗೌರವಗಳು ಉಂಟಾಗುತ್ತವೆ. ಇವೆಲ್ಲವೂ ವ್ಯಕ್ತಿಯ ಮನಸ್ಸಿನಿಂದ ಪ್ರಚೋದಿತವಾದವು.

ಮನಸ್ಸನ್ನು ನಡೆಸುವ ಆಂತರಿಕವಾದ ಚೈತನ್ಯವೊಂದಿರುತ್ತದೆ. ಅದು ತನ್ನ ಸುತ್ತಮುತ್ತಲಿನ ಸಕಾರಾತ್ಮಕವಾದ, ಉತ್ಕೃಷ್ಟವಾದ ಹಾಗೂ ಗುಣಾತ್ಮಕವಾದುದನ್ನು ಗಮನಿಸುತ್ತಿರುತ್ತದೆ. ಸುಪ್ತ ಮನಸ್ಸಿನ ಆಳದಲ್ಲಿ ಇದು ಬೇರೂರಿರುತ್ತದೆ. ಆದರೆ ವಾಸ್ತವ ಬದುಕಿನಲ್ಲಿ ಎಲ್ಲವೂ ಸಕಾರಾತ್ಮಕವಾಗಿ,

ಉತ್ಕೃಷ್ಟವಾಗಿ, ಗುಣಾತ್ಮಕವಾಗಿಯೇ ಇರುವುದಿಲ್ಲ. ಇದು ಜನಾಂಗೀಯ ಅನುಭವಗಳ ಭಂಡಾರವಾಗಿರುವ ಯೂಂಗ್ ಹೇಳಿರುವ ಸಾಮೂಹಿಕ, ವೈಯಕ್ತಿಕ ಸುಪ್ತಾವಸ್ಥೆಯೂ ಹೌದು. ಪದ್ಮಿನಿಗೆ ಕಪಿಲನಲ್ಲಿನ ಆಕರ್ಷಣೆಯು ಸುಪ್ತಚೇತನದಲ್ಲಿ ಅಡಗಿರುವ ಲೈಂಗಿಕ ಅನೈತಿಕ ಬಯಕೆಯಲ್ಲ. ಕ್ರಿಯಾತ್ಮಕ (Conative) ನೆಲೆಯಲ್ಲಿ ಹಾಗೆ ಅನಿಸುವುದಾದರೂ ಮನಃಶಾಸ್ತ್ರದ ಜ್ಞಾನಾತ್ಮಕ (cognitive), ಭಾವಾತ್ಮಕ (affective) ಹಾಗೂ ಚೇತನಾತ್ಮಕ (concious), ಸುಪ್ತ ಚೇತನಾತ್ಮಕ (sub-concious) ನೆಲೆಯಲ್ಲಿ ನೋಡುವಾಗ ಕಾಮಕಲ್ಪನೆಯ ಜೈವಿಕ ಅಭಿಪ್ರೇರಣೆಯ ಪ್ರಧಾನತೆ ಕಡಿಮೆಯಾಗುತ್ತದೆ ಮತ್ತು ಜೈವಿಕ ಅಭಿಪ್ರೇರಣೆಯು ಊರ್ಧ್ವಗಾಮಿ ಪ್ರೇರಣೆಗಳಿಗೆ ಎಡೆಮಾಡಿ ಕೊಟ್ಟಿರುವುದು ಅರ್ಥವಾಗುತ್ತದೆ.

ಪದ್ಮಿನಿ ಗರ್ಭಧರಿಸಿರುವ ಸಮಯ, ಇಂತಹ ಸಮಯದಲ್ಲಿ ಸ್ತ್ರೀಯು ಪರಿಪೂರ್ಣ ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕವಾಗಿ ತಾನು ಜನ್ಮ ನೀಡುವ ಮಗುವಿನೊಂದಿಗೆ ಅನನ್ಯತೆಯನ್ನು ಗುರುತಿಸಿಕೊಳ್ಳುತ್ತಾಳೆ.

ದೇವದತ್ತ ಮತ್ತು ಕಪಿಲರ ಶಿರ ಮತ್ತು ದೇಹಗಳ ಅದಲು-ಬದಲು ಸಂದರ್ಭವು ಪದ್ಮಿನಿಯು ಅತ್ಯಂತ ಜಾಗರೂಕತೆಯಿಂದ ನಿರ್ವಹಿಸಿದ ಪ್ರಜ್ಞಾಪೂರ್ವಕ ಕ್ರಿಯೆ ಎಂದೇ ಅನಿಸುತ್ತದೆ. ತನಗೆ ಜನಿಸಲಿರುವ ಮಗುವು ದೇವದತ್ತನಂತಹ ರೂಪ, ಬುದ್ಧಿ, ಕಪಿಲನಂತಹ ಶರೀರ, ಒರಟುತನ ಹೊಂದಿರಬೇಕೆಂಬ ಆಕೆಯ ಸುಪ್ತಪ್ರಜ್ಞೆಯ ನಿಯಮವೇ ಈ ಸಂದರ್ಭದಲ್ಲಿ ಕಾರ್ಯನಿರ್ವಹಿಸಿದೆ ಎಂದು ಹೇಳಬಹುದು.

ಗೊಂಬೆಗಳು ಗುರುತಿಸುವ ಪದ್ಮಿನಿಯ ಅಂತರ್ವಿರೋಧದ ನೆಲೆಗಳು

ಪದ್ಮಿನಿಯ ಪಾತ್ರದ ತಳಮಳವನ್ನು ಗೊಂಬೆಗಳ ಮೂಲಕ ನೋಡಿರುವ ಪ್ರಕ್ರಿಯೆ ಇಡೀ ನಾಟಕದ ಮೇರು ಘಟ್ಟ ಎಂದೇ ಅನಿಸುತ್ತದೆ. ಇಲ್ಲಿ ಗೊಂಬೆಗಳು ಪದ್ಮಿನಿಯ ಅಂತರಂಗದಲ್ಲಿ ಧ್ವನಿತವಾಗುತ್ತಿರುವ ಜೀವನ ಸಂದರ್ಭಗಳ ಹೊಯ್ದಾಟಕ್ಕೆ ಸಾಕ್ಷಿಯಾಗುತ್ತವೆ. ಜೊತೆಗೆ ಇದು ಈ ಬಗೆಯ ಹೊಯ್ದಾಟಗಳನ್ನು ಅರ್ಥಮಾಡಿಕೊಳ್ಳುವ, ವಿಶ್ಲೇಷಿಸುವ ಸಾಮಾಜಿಕ ದೃಷ್ಟಿ, ಲೋಕ ದೃಷ್ಟಿಯ ಧ್ವನಿಯೇ ಆಗಿದೆ. ಇಲ್ಲಿ ಗೊಂಬೆಗಳು ವಿಶ್ಲೇಷಿಸುವ ಕುರಿತಾದ ಚರ್ಚೆಯ ಪ್ರಾಮುಖ್ಯತೆಯು ಮುಖ್ಯ, ಅದಕ್ಕಿಂತ ಹೆಚ್ಚಾಗಿ ಆ ತೊಯ್ದಾಟದ ಹಿಂದಿನ ಮನೋಭೂಮಿಕೆಯನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ವಿವಾಹವೊಂದು ದೀರ್ಘಕಾಲ ಉಳಿಯಲು ಮತ್ತು ತೃಪ್ತಿಕರವಾಗಲು ದಂಪತಿಗಳ ಪರಸ್ಪರ ಅವಲಂಬನೆಯು ಪ್ರಮುಖ ಕಾರಣವಾಗಿರುತ್ತದೆ. ಈ ಅವಲಂಬನವು ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ನೆಲೆಯಲ್ಲಿ ಇರಬೇಕಾಗುತ್ತದೆ. ಸ್ಟರ್ನ್‌ಬರ್ಗ್ ಅವರು ಹೇಳುವಂತೆ ಗಾಢಾನುರಾಗ (passion), ಆಪ್ತತೆ (Intimacy) ಮತ್ತು ಬದ್ಧತೆ (Intimacy) ಇವು ಮೂರು ಪರಿಪೂರ್ಣ ಪ್ರೀತಿ ಮತ್ತು ಸಂಬಂಧದ ಹೆಗ್ಗುರುತು. ಈ ಪರಿಪೂರ್ಣತೆ ಅಷ್ಟು ಸುಲಭವಾಗಿ

ಲಭ್ಯವಾಗುವಂತಹದಲ್ಲ. ಪದ್ಮಿನಿಯ ದಾಂಪತ್ಯವು ಮೇಲಿನ ನೆಲೆಗಳಲ್ಲಿ ಅಪೂರ್ಣಗೊಂಡಿರುವ ಸಾಧ್ಯತೆಯೇ ಆಕೆಯ ಹೊಯ್ದಾಟಕ್ಕೆ ಕಾರಣವಾಗಿರಬಹುದು. ವಿವಾಹ ಸಂದರ್ಭವು ಕಾಲ ಕಳೆದಂತೆಲ್ಲಾ ಬದುಕಿನ ವಿವಿಧ ಮಜಲುಗಳಿಗೆ ಮುಖಾಮುಖಿಯಾಗಬೇಕಾಗುತ್ತದೆ. ಕುಟುಂಬ, ಸಮಾಜ ಮುಂತಾದವುಗಳ ನೀತಿ ನಿಯಮಗಳ ಒತ್ತಡಗಳಿಗೆ ಮಣಿಯಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ತೀರಾ ವೈಯಕ್ತಿಕತೆ ಎಂಬುದಕ್ಕೆ ಆಸ್ಪದವೇ ಇರುವುದಿಲ್ಲ. ಇದರಿಂದ ಹೆಚ್ಚು ಬಾಧಿಸಲ್ಪಡುವವಳು ಹೆಣ್ಣು. ಸಮಾಜದಲ್ಲಿ ಪುರುಷ ಲೋಕದ ನಿಯಮಗಳು ಹೆಣ್ಣಿಗೆ ಅನ್ವಯವಾಗುವುದಿಲ್ಲ. ಆ ಮಟ್ಟಿಗೆ ಹೆಣ್ಣಿನ ಸ್ವಾತಂತ್ರ್ಯವು ನಿಷೇಧಗೊಂಡಿರುವುದು. ಸಾರ್ವತ್ರಿಕವೂ, ನಿರಂತರವಾಗಿಯೂ ನಡೆದುಕೊಂಡು ಬಂದಿರುವ, ಈಗಲೂ ಮುಂದುವರಿಸಿಕೊಂಡು ಹೋಗುತ್ತಿರುವ ಪ್ರಕ್ರಿಯೆಯಾಗಿದೆ. ಏಕೆಂದರೆ ಹೆಣ್ಣಿನ ವ್ಯಕ್ತಿ ಪ್ರಜ್ಞೆಯ ಮೂಲಕ ಆಕೆಯ ಬದುಕನ್ನು ನೋಡಲಾಗುತ್ತಿಲ್ಲ. ಮನುಷ್ಯನ ಸಾಮಾಜಿಕ ಸಂಬಂಧಗಳಿಗೆ ಚಟುವಟಿಕೆಗಳ ಪ್ರೇರಣೆ ಎಂಬಂತೆ ಒಟ್ಟು ಬದುಕಿನ ಸಂದರ್ಭಗಳಲ್ಲಿ ಆಕೆಯನ್ನು ಪ್ರತ್ಯೇಕಿಸಲಾಗುತ್ತಿಲ್ಲ. ಒಂದು ಸಾಮುದಾಯಿಕ ಜೀವನ ಶ್ರದ್ಧೆಯನ್ನು ಈ ದಿಸೆಯಲ್ಲಿ ವ್ಯವಸ್ಥೆಗಳು ನಿಯಂತ್ರಿಸುತ್ತಲೇ ಬಂದಿವೆ. ಹಾಗಾಗಿ ಈ ಬಗೆಯ ತೊಯ್ದಾಟಗಳು ಮನುಷ್ಯನ ಹೊಯ್ದಾಟಗಳಾಗಿ ನೋಡಲಾಗುತ್ತದೆಯೇ ವಿನಃ ಹೆಣ್ಣಿನ ಹೊಯ್ದಾಟವಾಗಿ ಅಲ್ಲ. ಪದ್ಮಿನಿಯ ಈ ತೊಯ್ದಾಟಗಳು ಆಕೆಯ ಮನಸ್ಸಿನ ಸಂಕೀರ್ಣತೆ ಹಾಗೂ ಆಕೆಯಲ್ಲಿ ಅಂತಸ್ಥವಾಗಿರುವ ಸ್ವಯಂ ವಿರೋಧಗಳಲ್ಲಿ ವ್ಯಕ್ತಗೊಳ್ಳುತ್ತದೆ. ಪದ್ಮಿನಿಯ ಭಾವನೆಗಳನ್ನು ನಿರ್ಜೀವಗೊಂಡ ಗೊಂಬೆಗಳ ಮೂಲಕ ಹೇಳಿಸುವಾಗಲೂ ಚಿಕಿತ್ಸಕ ದೃಷ್ಟಿಯೇ ಕಂಡುಬರುತ್ತದೆ. ಪದ್ಮನಿಯ ಗಂಡ ಜೀವಂತವಾಗಿರುವಾಗ ಇನ್ನು ವಿವಾಹದ ಹೊಸ್ತಿಲಲ್ಲಿರುವಾಗಲೇ ಕಪಿಲನಂತಹವನ ಕಡೆಗೆ ಆಕರ್ಷಿತಳಾಗುವ, ಆದರಿಂದ ಹೊರಬರಲಾರದ ಪರಿಸ್ಥಿತಿಯನ್ನು ಅನುಭವಿಸುವ ಭಾವನೆಗಳ ಒತ್ತಡಗಳಲ್ಲಿ ಸಿಲುಕಿರುವ ಸಂದರ್ಭವು ಎಷ್ಟೊಂದು ತೀವ್ರವಾದ ಒತ್ತಡಕ್ಕೆ ಗುರಿಯಾಗಿದ್ದಾಳೆಂಬುದನ್ನು ಅವಳ ದೃಷ್ಟಿಯಿಂದಲೇ ನೋಡಬೇಕು. ಅದನ್ನು ಸುಲಭವಾಗಿ 'ಹಾದರ' ಎಂದು ಗೊಂಬೆಗಳು ಹೇಳಿಬಿಡುತ್ತವೆ. ಆದರೆ ಈ ಬಗೆಯ ಒತ್ತಡದ ಬದುಕನ್ನು ರೂಪಿಸಿದ ಅಂಶಗಳಾವುವು? ಮತ್ತು ಇದನ್ನು ಪೋಷಿಸುವ ಪ್ರೇರಣೆಗಳಾವುವು ಎಂಬುದರ ಕಡೆಗೆ ಕುರುಡಾಗಿಬಿಡುತ್ತವೆ. ಪದ್ಮಿನಿ ನಿದ್ದೆ ಹೋಗುವ ಸಂದರ್ಭದಲ್ಲಿ ಗೊಂಬೆಗಳು ಮಾತಾಡಿಕೊಳ್ಳುವ ಈ ಪ್ರಸಂಗವನ್ನು ಗಮನಿಸಬೇಕು.

"ಗೊಂಬೆ – ೧ – ನೋಡು

ಗೊಂಬೆ – ೨ – ಏನು?

ಗೊಂಬೆ – ೧ – ಅವಳ ಕಣ್ಣೆವೆಯ ಹಿಂದೆ ನೋಡು ಕನಸು

ಗೊಂಬೆ – ೨ ನನಗೇನೂ ಕಾಣಿಸೋದಿಲ್ಲ.

ಗೊಂಬೆ – ೧ ಇನ್ನೂ ಮಬ್ಬು.... ಪೂರಾ ಆರಂಭಿಸಿಲ್ಲ ನೋಡು."[೧೧೮]

ಕನಸು ಕಾಣುವವನು ಕನಸಿನಲ್ಲಿ ಮೂಡುವ ಯಾವ ಭಾವವನ್ನು ಪ್ರಜ್ಞಾಪೂರ್ವಕವಾಗಿ ನಿಯಂತ್ರಿಸಲಾರ. ಕೇವಲ ಅದನ್ನು ಅನುಭವಿಸುತ್ತಿರುತ್ತಾನೆ. ಆದರೆ ಕನಸಿಗೆ ವಾಸ್ತವದಲ್ಲಿ, ಹೊರಜಗತ್ತಿನಲ್ಲಿ ಯಾವ ಮೌಲ್ಯವು ಇಲ್ಲ. ಅದು ಕೇವಲ ಕಾಣುವವರ ಅನುಭವವಷ್ಟೆ. ಆದರೂ ಅದನ್ನು ವಿಶ್ಲೇಷಿಸಲಾಗುತ್ತದೆ. ಅಂತೆಯೇ ಪದ್ಮಿನಿಯ ಕಣ್ಣಿನ ಹಿಂದಿನ ಕನಸುಗಳನ್ನು ಗೊಂಬೆಗಳು ವಿಶ್ಲೇಷಿಸುತ್ತವೆ. ಇದು ವಾಸ್ತವತೆಯನ್ನು ಸಂಕೇತಗಳಾಗಿ ಪರಿವರ್ತಿಸುವ ಸಾಹಿತ್ಯದ ಶ್ರೇಷ್ಠಗುಣ. ಆದರೆ ವ್ಯಕ್ತಿಯಿಂದ ವ್ಯಕ್ತಿಗೆ, ಕಾಲದಿಂದ ಕಾಲಕ್ಕೆ ಸಂವೇದನೆಗಳು ಮತ್ತು ಅನುಭವ ರೂಪಗಳು ಬದಲಾಗುತ್ತಲೇ ಇರುತ್ತವೆ. ಅಂತಹ ಸಂವೇದನೆಗಳು ಅಮೂರ್ತವಾಗಿದ್ದು ಅವುಗಳನ್ನು ವ್ಯಕ್ತಿನಿಷ್ಠವಾಗಿ ನೋಡಬೇಕೇ ಹೊರತು ವಸ್ತುನಿಷ್ಠವಾಗಿ ಅಲ್ಲ.

ಪದ್ಮಿನಿ ಹಗಲು ವೇಳೆಯಲ್ಲಿ ಕನಸು ಕಾಣುವ ಕುರಿತಾದ ಬೊಂಬೆಗಳು ಮಾತಾಡಿಕೊಳ್ಳುತ್ತವೆ. ಇಲ್ಲಿ ಪದ್ಮಿನಿಯ ಕುರಿತು ತಿರಸ್ಕಾರ, ಸಿಟ್ಟನ್ನು ಕಾಣುತ್ತೇವೆ. ಇದು ಸಾಮಾಜಿಕ ಧೋರಣೆಗಳಿಂದ ರೂಪುಗೊಂಡ ಮನಸ್ಥಿತಿಯ ಪರಿಣಾಮ ಇಲ್ಲಿ ವ್ಯಕ್ತಿಗತವಾದುದೆಲ್ಲವನ್ನೂ ತಿರಸ್ಕರಿಸುವ ಪ್ರವೃತ್ತಿ ಇದೆ. ಪ್ರೀತಿ, ವಿವಾಹ, ದಾಂಪತ್ಯ ಮತ್ತು ಕುಟುಂಬ ವ್ಯವಸ್ಥೆಗಳು ಹೆಣ್ಣಿನ ಬಯಕೆ, ಒತ್ತಡಗಳನ್ನು ಒಂದು ನಿರ್ದಿಷ್ಟ ಸಾಮಾಜಿಕ ಚೌಕಟ್ಟಿನಲ್ಲಿ ನಿಜಗೊಳಿಸಿಕೊಳ್ಳುವಂತೆ, ಅವುಗಳಿಗೆ ಧಾರ್ಮಿಕ, ನೈತಿಕ, ಸ್ವರೂಪವನ್ನು ನೀಡುವ ಮೂಲಕ ಹೆಣ್ಣಿನ ಮೂಲ ಪ್ರೇರಣೆಗಳಿಗೆ ಧಕ್ಕೆ ಉಂಟುಮಾಡಿವೆ. ಮನುಷ್ಯನ ಮೂಲ ಪ್ರವೃತ್ತಿಗಳಲ್ಲೊಂದಾದ ಕಾಮದ ಬೆಳಕಿನಲ್ಲಿ ಇನ್ನುಳಿದ ಮೂಲ ಪ್ರೇರಣೆಗಳನ್ನು ಕಡೆಗಣಿಸುವ ಸಂದರ್ಭವು ಪದ್ಮನಿಯಂತೆ ಕನಸುಗಳ, ಹಗಲುಗನಸುಗಳ ಮೂಲಕ ವ್ಯಕ್ತವಾಗುವುದು ಸ್ಪಷ್ಟವಾಗುತ್ತದೆ. ಪದ್ಮಿನಿಗೆ ಕಪಿಲನಲ್ಲುಂಟಾದ ವ್ಯಕ್ತಿ ಪ್ರೇಮದ ಬಯಕೆ ಅವ್ಯಾಹತವಾದ ಒಂದು ಪ್ರವಾಹ. ವಿವಾಹವಾದ ಪದ್ಮನಿಯಲ್ಲಿನ ಹೆಣ್ತನವನ್ನು ಬಡಿದೆಬ್ಬಿಸಿದ ಕಪಿಲ ಆಕೆಗೆ ದೇಹ ಬಯಕೆಯ ಕಾರಣವಾಗದೇ ಮನದ ಬಯಕೆಯ ಸಂಗಾತಿಯಾಗಬಲ್ಲನೆಂಬ ಕಾರಣ ಎಂದೆನಿಸುತ್ತದೆ. ಬದುಕಿನ ಸ್ಪರ್ಶವಿಲ್ಲದ ದಾಂಪತ್ಯದಲ್ಲಿ ಅದಕ್ಕೊಂದು ಜೀವನ ಸ್ಪರ್ಶ ನೀಡುವ ವಿಚಾರ ಮುಖಾಮುಖಿಯಾದಾಗ ಅದು ತನ್ನ ನಿಜ ಸ್ವರೂಪವನ್ನು ಪಡೆದುಕೊಂಡು ಹಾಗೂ ಇನ್ನಷ್ಟು ಪಕ್ವಗೊಂಡದ್ದರ ಪರಿಣಾಮವೇ ಕಪಿಲ ಪದ್ಮಿನಿಗೆ ಆಕರ್ಷಿತನಾಗುತ್ತಾನೆ. ಇಂತಹದರ ಸ್ವರೂಪವನ್ನು ಮಾನವೀಯ ನೆಲೆಯಲ್ಲಿ ಅರ್ಥಮಾಡಿಕೊಳ್ಳಲಾರದ ಗೊಂಬೆಗಳು ಸೂಕ್ಷ್ಮವಾದ ಸ್ತ್ರೀ ತಿರಸ್ಕಾರದ ಧೋರಣೆಗಳ ಪ್ರತೀಕಗಳಾಗುತ್ತವೆ. ಜೊತೆಗೆ ಈ ಬಗೆಯ ಧೋರಣೆಗಳು ಸಫಲವಾಗದೇ ಹೋಗುವುದನ್ನು ಹತಾಶೆಗೊಳ್ಳುವುದನ್ನು ಗೊಂಬೆಗಳ ಹೊಡೆದಾಟವು ಸಂಕೇತಿಸುತ್ತದೆ.

ಗೊಂಬೆಗಳ ಮೂಲಕ ಪದ್ಮಿನಿಯನ್ನು ಮತ್ತು ಆಕೆಯ ಮನಸನ್ನು ಏತಕ್ಕಾಗಿ ಗುರುತಿಸಿರಬಹುದು? ಬಹುಶಃ ಇಲ್ಲಿಯೇ ಸಾಹಿತ್ಯದ ತಂತ್ರಗಾರಿಕೆ ಅಡಗಿರುವುದು ಸ್ಪಷ್ಟವಾಗುತ್ತದೆ. ಯಾವುದೇ ವ್ಯಕ್ತಿಯ ವಯುಕ್ತಿಕ ವಿಷಯವನ್ನು ಕುರಿತು ಮಾತನಾಡುವುದು ಯಾವಾಗಲು

ಅಪಾಯಕಾರಿ. ಏಕೆಂದರೆ ವರ್ತಮಾನದಲ್ಲಿ ಅದರ ಪರಿಣಾಮ ಬೇರೆಯೇ ಆಗಿರುತ್ತದೆ. ಸಾಹಿತ್ಯವು ಮನುಕುಲದ ಬದುಕಿನಿಂದ ತನ್ನ ಶಕ್ತಿಯನ್ನು ಪಡೆದುಕೊಳ್ಳುತ್ತವೆ. ಆ ಶಕ್ತಿಯನ್ನು ವಯುಕ್ತಿಕ ನೆಲೆಯಲ್ಲಿ ಬಳಸಿಕೊಳ್ಳಲಾಗುವುದಿಲ್ಲ. ಅದನ್ನು ಬಳಸಿಕೊಳ್ಳುವ ಸಂದರ್ಭವು ಸಮಷ್ಟಿ ಸುಪ್ತಪ್ರಜ್ಞೆಯಾಗಿ, ಒಂದು ಜೀವಂತ ಅನುಭವವಾಗಿ ಮಾರ್ಪಡಿಸಿಕೊಳ್ಳುವ ಮೂಲಕ ಒಂದು ಯುಗದ ಜಾಗೃತ ದೃಷ್ಟಿಯಾಗಿ ಅನ್ವಯಿಸಲು ಪ್ರಯತ್ನಿಸುತ್ತದೆ.

"ಸಂಪೂರ್ಣ ವಾಸ್ತವತೆಯನ್ನೆ ಒಬ್ಬ ಕೃತಿಕಾರ ಚಿತ್ರಿಸಿದರೂ, ವಾಸ್ತವತೆ ಕಂಡದ್ದನ್ನು ಕಂಡ ಹಾಗೆ ಚಿತ್ರಿಸಿದರೂ, ಆತನ ಚಿತ್ರಣ ವಸ್ತುವಿನ ಯಥಾವತ್ತಾಗಿ ಪ್ರತಿಬಿಂಬವಾಗಿರದೆ ಲೇಖಕನ ವ್ಯಕ್ತಿತ್ವದ ಮೂಲಕ ಹಾಯ್ದು ಬಂದಿರುತ್ತದೆ."[೧೯]

ಪದ್ಮಿನಿಯ ಅಂತರಂಗದ ವಾಸ್ತವವನ್ನು ಸಾಹಿತ್ಯವು ತನ್ನ ಗ್ರಹಿಕೆಯ ವಾಸ್ತವಕ್ಕೆ ಅನ್ವಯಿಸಿ, ವಿಶ್ಲೇಷಿಸಿ ತನ್ನೇಲ್ಲಾ ಜವಬ್ದಾರಿಯನ್ನು ಬೊಂಬೆಗಳಿಗೆ ವರ್ಗಾಯಿಸಿದೆ. ಇಲ್ಲಿ ಎರಡು ಅಂಶಗಳನ್ನು ಗುರುತಿಸಬಹುದು.

ಒಂದು ಯಾವುದನ್ನು ತಾನು ಹೇಳುವಲ್ಲಿ ನಾಗರಿಕತೆಯ ನಿಯಂತ್ರಣವಿತ್ತೋ ಅದನ್ನು ಬೊಂಬೆಗಳಿಗೆ ವರ್ಗಾಯಿಸಿರುವುದು.

ಎರಡು ಯಾವ ಗ್ರಹಿಕೆಯು ಹೆಚ್ಚು ಸಂಕೀರ್ಣವೂ ಸಂಕೇತಾತ್ಮಕವೂ ಆಗುತ್ತಾ ಹೋದಾಗ ವಾಸ್ತವದ ಹಿಂದಿನ ಅಂಶಕ್ಕಿಂತ ವಾಸ್ತವಕ್ಕೆ ಹೆಚ್ಚು ಮಹತ್ವವನ್ನು ನೀಡಿರುವುದು.

ಕಾಮವನ್ನು ಜೀವನ ಮೌಲ್ಯವೆಂದು ಒಪ್ಪಿಕೊಂಡಾಗಲೂ, ಲೈಂಗಿಕ ಸಂಬಂಧಗಳು ಯಾಂತ್ರಿಕ ಸಂಬಂಧಗಳಾದಾಗ, ಹೊಸ ಜೀವನ ಸಾಧ್ಯತೆಗಳತ್ತ ಮನಸ್ಸು ತಂತಾನೆ ತೆರೆದುಕೊಳ್ಳುತ್ತದೆ. ಈ ನಿಟ್ಟಿನಲ್ಲಿ ನೋಡುವುದಾದಲ್ಲಿ ಹೊಣೆಗಾರಿಕೆ ಇರುವ ಪ್ರೀತಿಗಾಗಿ ಪದ್ಮಿನಿ ತುಡಿಯುತ್ತಾಳೆ.

ಪ್ರೀತಿಯು ಮೂಲಭೂತವಾಗಿ ಒಬ್ಬ ನಿರ್ದಿಷ್ಟ ವ್ಯಕ್ತಿಯ ಜೊತೆಗಿನ ಸಂಬಂಧವಲ್ಲ. ಅದೊಂದು ಬಗೆಯ ದೃಷ್ಟಿಕೋನ. ವ್ಯಕ್ತಿತ್ವವನ್ನು ಒಂದು ನಿರ್ದಿಷ್ಟ ಅಚ್ಚಿನಲ್ಲಿ ರೂಪಿಸಕೊಳ್ಳುವುದು. ಪದ್ಮಿನಿಯನ್ನು ಕಪಿಲ ಆಕರ್ಷಿಸುವುದು ಈ ಬಗೆಯ ವ್ಯಕ್ತಿತ್ವದಿಂದಲೇ. ಎರಿಕ್ ಫ್ರಾಂ ಅವರು ಈ ಕುರಿತಾಗಿ ಹೀಗೆ ಹೇಳುತ್ತಾರೆ. "ಒಲವು ಅಥವಾ ಪ್ರೀತಿಯು ಒಂದು ದೃಷ್ಟಿಕೋನ ಹಾಗೂ ತೀವ್ರತರವಾದ ಕ್ರಿಯಾಶೀಲ ಚಟುವಟಿಕೆ. ವ್ಯಕ್ತಿಯು ಪ್ರತಿಯೊಂದು ಸಂದರ್ಭದಲ್ಲೂ ನಿರಂತರವಾಗಿ ಎಚ್ಚರದಿಂದ ಇರುವಂತೆ ಮಾಡುವ ಚಟುವಟಿಕೆ. ಇನ್ನೊಬ್ಬರ ವ್ಯಕ್ತಿತ್ವಕ್ಕೆ ತೋರುವ ಸಮಾನತೆ, ಅರಿಯುವ ಭಾವ, ಗೌರವ, caring ಇವೆಲ್ಲವೂ ಪ್ರೀತಿಯ ಮುಖ್ಯ ಅಂಶಗಳು."[೨೦] ಈ ಕಾರಣಕ್ಕಾಗಿಯೇ ಇರಬಹುದು ವಿದ್ವಾಂಸನೂ, ನಾಜೂಕು ಸ್ವಭಾವದ ದೇವದತ್ತನಿಗಿಂತ ಒರಟಾದ ಪಾದರಸದಂತೆ ಪುಟಿಯುವ ಕಪಿಲನಲ್ಲಿ ಆಕರ್ಷಿತಳಾಗುತ್ತಾಳೆ. ಪದ್ಮಿನಿ ಕಪಿಲನನ್ನು ಕುರಿತು ಹೇಳುತ್ತಾ "ಕಾಡು-ಕುರುಬ ಇದ್ದ ಹಾಗೆ ಇದ್ದಾನೆ. ಆದರೆ ನಾಚತಾನೇನು? ಕೆಳತುಟಿ

ಕಡಿತಾನೇನು? ಕೆಂಪಗಾಗತಾನೇನು? ಮದುಮಗಳು ಇದ್ದ ಹಾಗೆ ಈ ಮದುಮಗಳಿಗೆ ಯಾರೂ ನಾಚಲಿಕ್ಕೇ ಕಲಿಸಲಿಲ್ಲ. ಈಗ ಆ ಒರಟನನ್ನು ನೋಡಿ ಕಲಿತಿದ್ದೇನೆ."[೨೧]

ಈ ಸಂದರ್ಭವು ಪದ್ಮಿನಿಗೆ ನಾಚುವ, ನಾಜೂಕು ಸ್ವಭಾವದ ತನ್ನ ಗಂಡನ ಹೆಣ್ತನವನ್ನು ಸೂಕ್ಷ್ಮವಾಗಿ ಟೀಕಿಸುವ ಮೂಲಕ ಅತ್ಯಂತ ಸೂಕ್ಷ್ಮವಾಗಿ ಕಪಿಲನು ಆಕರ್ಷಕವಾಗಲು ಕಾರಣ ಹೇಳುತ್ತಾಳೆ. ಕೇವಲ ಲೈಂಗಿಕ ಆಕರ್ಷಣೆಯೇ ಆಗಿದ್ದಲ್ಲಿ ದೇವದತ್ತನ ಶಿರ, ಕಪಿಲನ ದೇಹದೊಂದಿಗೆ ಪದ್ಮಿನಿ ತೃಪ್ತಳಾಗಬೇಕಿತ್ತು. ಆದರೆ ದೇಹ, ಶಿರಗಳ ಅದಲು ಬದಲಿನ ನಂತರವೇ ಪದ್ಮಿನಿ ಹೆಚ್ಚು ಹೆಚ್ಚು ಅಂತರ್ಮುಖಳಾಗುತ್ತಾಳೆ. ದೇವದತ್ತನ ಮುಖವು ಕಪಿಲನ ನೆನಪನ್ನು ಉಂಟುಮಾಡಿದರೆ, ಕಪಿಲನ ದೇಹ ದೇವದತ್ತನ ಶರೀರದ ಸ್ಪರ್ಶದ ಭಾವನೆಗಳಲ್ಲಿರಬೇಕಾದ ಅನುಭವವನ್ನು ಕೆರಳಿಸುತ್ತಿದ್ದಿರಬಹುದು. ಇದು ಮನುಷ್ಯ ಮನಸ್ಸಿನ ಅಪರಿಚಿತ ಲೋಕ, ಕೆಲವು ಜನರ ಅನುಭವವಗಳು ದಾಖಲಾದ ಮಾತ್ರಕ್ಕೆ ಅದೇ ಸಾರ್ವತ್ರಿಕ ಸತ್ಯವೆಂದು, ಅದರಿಂದ ಉಂಟಾದ ಸಿದ್ಧಾಂತಗಳು, ಪರಿಕಲ್ಪನೆಗಳ ವಿಶ್ಲೇಷಣೆಯು ವ್ಯಕ್ತಿಗಳನ್ನು ಅವರ ವರ್ತನೆಗಳನ್ನು ಅರ್ಥೈಸಲು ಸಂಪೂರ್ಣವಾಗಿ ಸಾಧ್ಯವಾಗುವುದೆಂದು ಹೇಳಲಾಗದು. ಪ್ರತೀ ವ್ಯಕ್ತಿಯೂ ಅನನ್ಯನೆ. ಆತನ ವ್ಯಕ್ತಿತ್ವವನ್ನು ಈ ಬಗೆಯ ಅನನ್ಯತೆಯಿಂದಲೇ ನೋಡಬೇಕಾಗುತ್ತದೆ.

ಒಟ್ಟಾರೆ ಪದ್ಮಿನಿಯು ದಾಂಪತ್ಯಕ್ಕೆ ಪ್ರವೇಶಿಸಿದ ಕೆಲವು ತಿಂಗಳುಗಳಲ್ಲಿಯೇ ಇಬ್ಬರು ಪುರುಷ ಕೇಂದ್ರಗಳ ನಡುವೆ ಹೊಯ್ದಾಟಗಳನ್ನು ಎದುರಿಸಬೇಕಾಗಿದೆ. ಇದು ಯಾವುದೇ ಪರಿಸರದ ಅಧಿಕಾರದ ಒತ್ತಡಗಳಿಂದುಂಟಾದುದಲ್ಲ. ಅದು ಹೆಣ್ಣಿನ ವಾಸ್ತವ ಬದುಕಿನ ಮತ್ತು ಸಾಂಸ್ಥಿಕವಾಗಿ ನಿರ್ಧರಿಸಲ್ಪಟ್ಟ ಚೌಕಟ್ಟುಗಳಿಂದ ಉಂಟಾದ ಒತ್ತಡ. ಅದನ್ನು ಮೀರುವ ಪ್ರಜ್ಞಾಪೂರ್ವಕ ನಿಲುವು ಪದ್ಮಿನಿಯು ಶಿರ ಮತ್ತು ದೇಹಗಳ ಅದಲು ಬದಲು ಸಂದರ್ಭದಲ್ಲಿ ಸ್ಪಷ್ಟವಾಗುತ್ತದೆ. ಇದು 'ಸ್ತ್ರೀ' ಜಗತ್ತಿನ ಬೇಲಿಯನ್ನು ದಾಟುವ ಬಂಡಾಯ ಪ್ರಕ್ರಿಯೆ. ತತ್‌ಕ್ಷಣದ ನಿರ್ಧಾರಗಳಿಂದ ಈ ಬಗೆಯ ಬಂಡಾಯ ರೂಪುಗೊಂಡುದಲ್ಲ. ಸ್ತ್ರೀ ಲೋಕವನ್ನು ಹತಾಶೆಗೆ ತಳ್ಳಿ ನಿಷ್ಕ್ರಿಯಗೊಳಿಸುವ ಸಿದ್ಧಾಂತಗಳ, ಧೋರಣೆಗಳ ಎಲ್ಲೆಯಿಂದ ಹೊರ ಬರುವ ಪ್ರತಿ ಹೆಣ್ಣಿನ ಬಂಡಾಯದ ಪ್ರತಿನಿಧಿಯಾಗಿ ಪದ್ಮಿನಿ ನಿಲ್ಲುತ್ತಾಳೆ. ಹೆಣ್ಣಿನ ಈ ಬಗೆಯ ಅಂತರ್ವಿರೋಧದ ನೆಲೆಗಳನ್ನು ಪ್ರಾಮಾಣಿಕವಾಗಿ ಅರ್ಥಮಾಡಿಕೊಳ್ಳುವವರೆಗೂ ಇದು ಮುಂದುವರೆಯುತ್ತಲೇ ಇರುತ್ತದೆ. ವಿಜ್ಞಾನ ಹೊರ ಜಗತ್ತನ್ನು ವಿಶೇಷ ರೀತಿಯಿಂದ ಅಧ್ಯಯನ ಮಾಡುತ್ತಿದೆ. ಮನುಷ್ಯನ ಕುರಿತಾಗಿ ಸಾಕಷ್ಟು ವಿಷಯಗಳನ್ನು ಸಂಗ್ರಹಿಸುತ್ತಲಿದೆ. ಶಾಶ್ವತ ಮೌಲ್ಯಗಳ ಅನುಸಂಧಾನಕ್ಕೂ ಅದು ಪ್ರೇರಣೆಯನ್ನು ನೀಡಬಹುದು. ಆದರೆ ಮಾನವ ಮನಸ್ಸಿನ ಅನುಭೂತಿ ಅದರ ಪಾಲಿಗೆ ನಿಲುಕದ್ದು. ಅದನ್ನು ಬೇರೆ ಮಾರ್ಗದಿಂದಲೇ ಕಂಡುಕೊಳ್ಳಬೇಕು. ಅಲೆಕ್ಸಿಸ್ ಕೆರಲ್ ಅವರ ಹೇಳಿಕೆಯನ್ನು ಇದಕ್ಕೆ ಅನ್ವಯಿಸಬಹುದು. "The aim of civilization is the progress, not of science and machinery, but of mankind".[೨೨]

ಹಯವದನ ನಾಟಕದಲ್ಲಿ ಪದ್ಮಿನಿಯ ಪಾತ್ರವು ದ್ವಂದ್ವ ವಿನ್ಯಾಸದಲ್ಲಿ ರೂಪುಗೊಂಡಿದೆ. ಗಂಡನಿದ್ದು ಬೇರೊಬ್ಬನೊಂದಿಗಿನ ಆಕೆಯ ಆಕರ್ಷಣೆಯನ್ನು ಅನೇಕ ಆಯಾಮಗಳ ಮೂಲಕ ಚರ್ಚಿಸಬಹುದು. ನಡವಳಿಕೆ ಮಾತುಗಳು ಅಲ್ಲದೇ ಆಕೆಯ ಅಪ್ರಜ್ಞಾ ಮನಸ್ಸಿನ ಬಯಕೆಗಳು, ಕಣ್ಣೆವೆಯ ಹಿಂದಿನ ಕನಸುಗಳನ್ನು ನಿರ್ಜೀವ ಗೊಂಬೆಗಳಿಗೆ ಜೀವಕೊಟ್ಟು ಮತ್ತಷ್ಟು ಗಟ್ಟಿಯಾಗಿ ಆಕೆಯ ವರ್ತನೆಯನ್ನು ಎತ್ತಿತೋರಿಸಲಾಗಿದೆ. ಹೀಗೆ ಪದ್ಮಿನಿಯ ವರ್ತನೆಯು ಗುರುತಿಸಲ್ಪಟ್ಟಿರುವುದರ ಒಳಸ್ವರೂಪ ಏನಿರಬಹುದು? ಅದು ಶಬ್ಧಗಳಿಗೆ, ಚಿತ್ರಗಳಿಗೆ ಹಾಗೂ ಭಾವನೆಗಳಿಗೆ ವ್ಯಕ್ತಿಗಳು ನೀಡುವ ಭಾಷಿಕ ಅಭಿವ್ಯಕ್ತಿ. ಸ್ಪಷ್ಟತೆಯಿಲ್ಲದ ಅನಿಶ್ಚಿತತೆಗಳನ್ನು ಭಾಷೆಯಲ್ಲಿ ಪರಿವರ್ತಿಸುವ ಮನುಷ್ಯ ಮನಸ್ಸಿನ ಪ್ರತಿಬಿಂಬವಾಗಿ ಮಾತ್ರ ಇದನ್ನು ಗಮನಿಸಬಹುದು. ಸ್ತ್ರೀಯರನ್ನು ಕುರಿತಾದ ಎಲ್ಲಾ ಗ್ರಹಿಕೆಗಳು ಸಮೀಪದ ಭೌತಿಕ ಪರಿಸರದಲ್ಲಿ ಗ್ರಹಿಸಲಾದುದೇ ಆಗಿರುತ್ತದೆ. ಸಾಹಿತ್ಯವು ಸ್ತ್ರೀಯ ವೈಯಕ್ತಿಕ ಬಯಕೆಗಳನ್ನು ವಿವರಿಸಲು ಸಂಕೇತಗಳನ್ನು ಬಳಸುವ ಮೂಲಕ ಕೆಲವೊಂದು ಸೂಕ್ಷ್ಮ ಒಳನೋಟಗಳನ್ನು ತೆರೆದಿಡಲು ಪ್ರಯತ್ನಿಸಿದಂತೆ ತೋರುತ್ತದೆ. ಯಾವುದು ಹೊರ ರೂಪದಲ್ಲಿ ನಿಯಂತ್ರಿಸಲ್ಪಡುತ್ತದೋ ಅದು ಆಂತರಿಕವಾಗಿ ಪ್ರಕಟಗೊಳ್ಳುವ ಮೂಲಕ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತದೆ. ಸಂಕೇತಗಳನ್ನು ಗ್ರಹಿಕೆಯ ಮೇಲ್ಮಟ್ಟದಲ್ಲಿ ಅರ್ಥೈಸಿದಾಗ ಅದರ ನೈಜತೆಗೆ ಘನತೆ ಉಂಟಾಗುತ್ತದೆ. ಪದ್ಮಿನಿಗೆ ಕಪಿಲನಲ್ಲಿ ಉಂಟಾದ ಆಕರ್ಷಣೆ ಅದು ಮುಂದಿನ ಎಲ್ಲಾ ಘಟನೆಗಳಿಗೆ ಕಾರಣವಾಗುವ ಸ್ಥಿತಿ. ಇವೆಲ್ಲವಕ್ಕೂ ಪ್ರಜ್ಞಾಪೂರ್ವಕ ಮತ್ತು ಅಪ್ರಜ್ಞಾಪೂರ್ವಕ ಕಾರಣ ಇದ್ದೇ ಇದೆ ಎಂಬುದು ಸ್ಪಷ್ಟ. ಗೊಂಬೆಗಳ ಮೂಲಕ ಗುರುತಿಸಲ್ಪಡುವ ಪದ್ಮಿನಿಯ ಒಳತೋಟಿಗಳು ನಿಯಂತ್ರಣಕ್ಕೊಳಪಟ್ಟ ಸ್ತ್ರೀ ಮನಸ್ಸಿನ ಯೋಚನಾ ಹಂತವನ್ನು ಮೀರುವುದರ ತಾತ್ವಿಕ ಅನ್ವೇಷಣೆಯೇ ಆಗಿದೆ. ತಾತ್ವಿಕತೆಯ ನೆಲೆಯಲ್ಲಿ ಪದ್ಮಿನಿಯನ್ನು ಇಟ್ಟು ನೋಡುವಾಗ ಅವಳ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಗೊಂಬೆಗಳನ್ನು ಸಾಂಕೇತಿಕವಾಗಿ ಬಳಸಿರುವುದು ಸಾಹಿತ್ಯದ ತಂತ್ರಗಾರಿಕೆ. ಬರಿಯ ಹೊರ ಗ್ರಹಿಕೆಯಿಂದ ಲಭ್ಯವಾಗದ ಅಸ್ಪಷ್ಟ ಸಂಗತಿಗಳು ಇನ್ನೂ ಸ್ಪಷ್ಟವಾಗಿ ಕಂಡುಕೊಳ್ಳಲು ಇದು ಸಹಾಯಕವಾಗುತ್ತದೆ. ಹಾಗೆ ಕಂಡುಕೊಳ್ಳುವ ಮೂಲಕ ಪದ್ಮಿನಿಯನ್ನು ಮತ್ತು ಆಕೆಯ ವರ್ತನೆಯನ್ನು ಪುರುಷ ಜಗತ್ತಿನ ಗ್ರಹಿಕೆಯಲ್ಲೇ ಇರಿಸುವ ಮನಸ್ಥಿತಿಯೊಂದನ್ನು ಇಲ್ಲಿ ಕಾಣಬಹುದು. ಪುರುಷ ಜಗತ್ತಿನ ಈ ಗ್ರಹಿಕೆಯನ್ನು ಮೀರಿ ಬೇರೆ ಆಯಾಮಗಳಲ್ಲಿ ಪದ್ಮಿನಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದಾಗ ಪದ್ಮಿನಿ ಎಲ್ಲಾ ಕಾಲ, ಸಂದರ್ಭದಲ್ಲೂ ಬಾಳಿದ, ಬಾಳುತ್ತಿರುವ ಬಹುತೇಕ ಸ್ತ್ರೀ ಮನಸ್ಸಿನ ಪ್ರಾಮಾಣಿಕ ಸಂಕೇತವಾಗಿ ಕಂಡುಬರುತ್ತಾಳೆ.

ಅಮೃತಮತಿ

ಜನ್ನನ 'ಯಶೋಧರ ಚರಿತೆಯ' 'ಅಮೃತಮತಿ' ಪಾತ್ರವನ್ನು ಎರಡು ವಿಭಿನ್ನ ನೆಲೆಯಲ್ಲಿ ಅರ್ಥಮಾಡಿಕೊಳ್ಳಬಹುದಾದ ಸಾಧ್ಯತೆಯನ್ನು ಇಲ್ಲಿ ಚರ್ಚಿಸಲಾಗಿದೆ. ಈಗಾಗಲೇ ಅನೇಕ

ಸಾಹಿತಿಗಳು, ವಿಮರ್ಶಕರು ಅಮೃತಮತಿಯ ಪಾತ್ರವನ್ನು ವಿಶ್ಲೇಷಿಸಿದ್ದಾರೆ, ವಿಮರ್ಶಿಸಿದ್ದಾರೆ. ಹಾಗೆಯೇ ಅಮೃತಮತಿಯ ಪಾತ್ರವನ್ನು ಸ್ತ್ರೀವಾದಿ ನೆಲೆಯಿಂದ, ಭೋಗದ ನೆಲೆಯಿಂದ, ಅಧಿಕಾರ ಕೇಂದ್ರಿತ ನೆಲೆಯ ಹಿನ್ನೆಲೆಯ ಮೂಲಕ ಅರ್ಥಮಾಡಿಸುವ ಪ್ರಯತ್ನ ಮಾಡಿದ್ದಾರೆ.

ಜೀವ ವಿಕಾಸದಲ್ಲಿ ಕಾಮದ ಸ್ಥಾನವನ್ನು ಅರಿಯುವುದಾದಲ್ಲಿ ಕಾಮ-ಇದು ನಿಸರ್ಗ ತನ್ನ ಸ್ವಾತಂತ್ರ್ಯಕ್ಕಾಗಿ, ಸಂತತಿಯ ನಿರಂತರತೆಗಾಗಿ ಸೃಷ್ಟಿಸಿಕೊಂಡ ಸಾಧನ ಎನ್ನುವ ವಿವರಣೆಯನ್ನು ಕೊಡುವಾಗಿನ ಧಾಟಿಯಲ್ಲಿ ಬರುವ ನೈಜತೆ, ಯಥಾರ್ಥತೆ ಇವು ಈ ಕಾಮಕ್ಕೆ ಅಧಿಕಾರಿಯಾದ ವ್ಯಕ್ತಿಯೇ. ನಾನು ನಿಸರ್ಗದ ಈ ಉದ್ದೇಶವನ್ನು ಸಫಲಗೊಳಿಸುವುದಕ್ಕಾಗಿಯೇ ಮಕ್ಕಳನ್ನು ಹುಟ್ಟಿಸುತ್ತೇನೆ. ಹಾಗೆ ಮಕ್ಕಳನ್ನು ಹುಟ್ಟಿಸುವುದು ಸಾಧ್ಯವಾಗಲಿ ಎಂಬ ಉದ್ದೇಶದಿಂದ ಒಬ್ಬ ಹುಡುಗಿಯನ್ನು ಅಥವಾ ಹುಡುಗನನ್ನು ಮದುವೆಯಾಗುತ್ತೇನೆ. ಹಾಗೆ ಮದುವೆಯಾಗಲು ಸಾಧ್ಯವಾಗಲಿ ಎಂಬ ಉದ್ದೇಶದಿಂದ ಒಬ್ಬ ಹುಡುಗಿ ಅಥವಾ ಹುಡುಗನನ್ನು ನಾನು ಪ್ರೀತಿಸುತ್ತೇನೆ ಎನ್ನುವಾಗಿನ ಧಾಟಿಯಲ್ಲಿ ಬರಲು ಸಾಧ್ಯವೆ? ಸಾಹಿತ್ಯವಾಗಲಿ, ಅದರಲ್ಲಿನ ಪಾತ್ರವಾಗಲಿ, ಅದರ ಸೃಷ್ಟಿಯ ಉದ್ದೇಶವನ್ನು, ಉಪಯುಕ್ತತೆಯನ್ನು ಕುರಿತು ನಾವು ಕೇಳುವ ಪ್ರಶ್ನೆಗೆ ಸರಿಯಾದ ಉತ್ತರ ನೀಡುವುದಿಲ್ಲ. ಕಾರಣ ಕೇಳಿದ ಪ್ರಶ್ನೆಯೇ ಮೂಲದಲ್ಲಿ ಸರಿಯಾಗದೇ ಇದ್ದಿರಬಹುದಲ್ಲವೆ?"[೨] ಹಾಗಾದರೂ ವಿಮರ್ಶಕ ದೃಷ್ಟಿಯು ಉದ್ದೇಶವನ್ನಿಟ್ಟುಕೊಂಡು ಸಾಹಿತಿಯ ಪ್ರಜ್ಞೆಯ ಆಚೆ ನಿಂತು ನೋಡುವ ಪ್ರಯತ್ನ ಮಾಡುತ್ತದೆ. ಇದೇ ರೀತಿ ಸ್ತ್ರೀಯೊಬ್ಬಳ ವ್ಯಕ್ತಿತ್ವವನ್ನು ರೂಢಿಯಿಂದ ಬಂದ ದೃಷ್ಟಿಕೋನದಿಂದಲೇ ನೋಡುವ ಪ್ರಯತ್ನ ಕಂಡುಬರುತ್ತದೆ.

ಜನ್ನನ 'ಯಶೋಧರ ಚರಿತೆ'ಯಲ್ಲಿನ ಅಮೃತಮತಿಯನ್ನು 'ಸ್ತ್ರೀ' ಎಂಬ ನೆಲೆಯಲ್ಲಿ ನೋಡುವಾಗ ಭಾರತೀಯ ಸಾಂಪ್ರಾದಾಯಿಕ ಚೌಕಟ್ಟು, ಇಲ್ಲಿನ ಸ್ತ್ರೀ ಕುರಿತಾದ ಸ್ಥಾಪಿತ ಮೌಲ್ಯಗಳು ಅನಾದಿಕಾಲದಿಂದ ಹಿಡಿದು ಇಂದಿನವರೆಗೂ ಹೆಚ್ಚು ಕಡಿಮೆ ಒಂದೇ ರೇಖೆಯಲ್ಲಿ ಸಾಗುತ್ತಿರುವುದು ಕಂಡುಬರುತ್ತದೆ. ವಿಜ್ಞಾನ ತಂತ್ರಜ್ಞಾನಗಳು, ಪಾಶ್ಚಾತ್ಯ ಚಿಂತನೆಗಳು, ಜೈವಿಕ, ದೈಹಿಕ ನೆಲೆಯ ಕುರಿತಾಗಿ ಎಷ್ಟೇ ಆಧುನಿಕ ನೆಲೆಯಲ್ಲಿ ಸ್ತ್ರೀ-ಪುರುಷರನ್ನು ಅರ್ಥೈಸಿದರೂ, ಭಾರತೀಯ ಮನಸ್ಸು ಸಾರಾಸಗಟಾಗಿ ಅದನ್ನು ಒಪ್ಪಿಕೊಳ್ಳುವ ಮಟ್ಟದ ಮನಸ್ಥಿತಿಯನ್ನು ರೂಪಿಸಿಕೊಂಡಿಲ್ಲವೆಂದೇ ಹೇಳಬಹುದು. ಹಾಗಾಗಿಯೇ ಅಮೃತಮತಿಯ ಕುರಿತಾಗಿ ಅನೇಕ ಪ್ರಶ್ನೆಗಳು, ಕುತೂಹಲಗಳು ಮೂಡುತ್ತವೆ. 'ಅಮೃತಮತಿ'ಯ ಒಟ್ಟಾರೆ ವ್ಯಕ್ತಿತ್ವವನ್ನು ಈ ಕೆಳಕಂಡ ನೆಲೆಗಳಲ್ಲಿ ನೋಡುವ ಸಾಧ್ಯತೆಯ ಪ್ರಯತ್ನ ಇಲ್ಲಿದೆ.

ವರ್ತನೆಯ ನೆಲೆ

ಫ್ರಾಯ್ಡಿಯನ್ (Frauidian) ಸಿದ್ಧಾಂತವು ಲೈಂಗಿಕತೆ ಪ್ರವೃತ್ತಿಗಳ ಕುರಿತು ಈ ರೀತಿ ಅಭಿಪ್ರಾಯಪಡುತ್ತದೆ. ಮನುಷ್ಯನ ಸುಪ್ತಪ್ರಜ್ಞೆಯಲ್ಲಿ ಬೇರು ಬಿಟ್ಟಿರುವ ಹಾಗೂ ಅದು ಮನುಷ್ಯನ

ಕ್ರಿಯೆಗಳ ಮೂಲಕ ಪ್ರಭಾವ ಬೀರುವ ಮೂಲಕ ತನ್ನ ಇರುವಿಕೆಯನ್ನು ಸ್ಪಷ್ಟಪಡಿಸುತ್ತದೆ ಎಂಬುದು. ಹಾಗಾದಲ್ಲಿ ಅಮೃತಮತಿಯು ಕೇವಲ ಲೈಂಗಿಕ ಉದ್ದೇಶದಿಂದಲೇ ಬೇರೊಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಿಕೊಂಡಳೇ? ಎಂಬ ಪ್ರಶ್ನೆ ಮೂಡುತ್ತದೆ. ತನ್ನ ಕಾಮ ವಾಂಛೆಗಾಗಿ ಸ್ಫುರದ್ರೂಪಿ, ಅಧಿಕಾರ, ಅಂತಸ್ತು ಇರುವ ಗಂಡನನ್ನು ಬಿಟ್ಟು ಅತ್ಯಂತ ಕುರೂಪಿಯು, ಸಮಾಜದ ಕೆಳಸ್ತರದ ಪುರುಷನನ್ನು ಪ್ರೇಮಿಸುವುದು, ಕಾಮಿಸುವುದಾದರೂ ಏಕೆ? ಎಂಬ ಪ್ರಶ್ನೆಗೆ ಉತ್ತರವನ್ನು ಹುಡುಕಬೇಕಾಗುತ್ತದೆ.

ಪ್ರೀತಿ, ಕಾಮ ಇವೆಲ್ಲವೂ ವಿವಾಹವೆಂಬ ಸಂಸ್ಥೆಯ ಚೌಕಟ್ಟಿನಲ್ಲಿ ಸಾಮಾಜಿಕ ಒಪ್ಪಿಗೆಯ ನೆಲೆಯಲ್ಲಿ ಅಭಿವ್ಯಕ್ತಿಸಲ್ಪಡುವ ರೀತಿ ಎಲ್ಲರಿಗೂ ಸ್ವೀಕಾರಾರ್ಹವಾಗಿರುತ್ತವೆ. ಸಾಮಾಜಿಕ ಒಪ್ಪಿಗೆಯ ನೆಲೆಯನ್ನು ಮೀರುವ ಮತ್ತು ವಿವಾಹೇತರ ನೆಲೆಯ ಮೂಲಕ ಅಭಿವ್ಯಕ್ತಿಗೊಳ್ಳುವ ಪ್ರಕ್ರಿಯೆ ಕುರಿತಾದ ಮೌಲ್ಯಾರೋಪಣ ದೃಷ್ಟಿಯೊಂದು ಸಮಾಜದಲ್ಲಿ ಅಸ್ತಿತ್ವದಲ್ಲಿದೆ. ಈ ನೆಲೆಯನ್ನು ಮೀರಿದ ನಡವಳಿಕೆಯು ಅಮೃತಮತಿಯಿಂದ ಅಭಿವ್ಯಕ್ತಿಗೊಳ್ಳುತ್ತದೆ. ಆದ್ದರಿಂದಲೇ ಅಮೃತಮತಿಯ ವರ್ತನೆಯನ್ನು ಸಿದ್ಧಗೊಳಿಸಿ ಪೊಟ್ಟಣದಲ್ಲಿ ಕಟ್ಟಲಾಗಿರುವ ಸ್ಥಾಪಿತ ಮೌಲ್ಯಗಳಿಂದ ಎರವಲು ಪಡೆಯಲಾದ ದೃಷ್ಟಿಕೋನದಲ್ಲಿ ನೋಡಲಾಗುತ್ತದೆ.

ಜೈನಧರ್ಮದ ಅಹಿಂಸೆಯ ಮಹತ್ವವನ್ನು ಸಾರುವ ಕೃತಿಯೊಂದು ಹೆಣ್ಣಿನ ನಡವಳಿಕೆಯ ಹಿನ್ನೆಲೆಯನ್ನು ಪರಿಧಿಯನ್ನಾಗಿಸಿಕೊಳ್ಳುವ ಮೂಲಕ ಧರ್ಮದ ಮಹತ್ವವನ್ನು ಪ್ರತಿಪಾದಿಸಲು ಹೊರಟಿರುವುದು ಕಂಡುಬರುತ್ತದೆ.

ಯಶೋಧರ ಸ್ಫುರದ್ರೂಪಿ, ಅಧಿಕಾರ, ಅಂತಸ್ತು ಮೇಲಾಗಿ ರಾಜನ ಸ್ಥಾನದಲ್ಲಿರುವ ವ್ಯಕ್ತಿ ತನ್ನ ಗಂಡನಾಗಿರುವಾಗ ಯಾವುದೋ ಒಂದು ಕೊಳಲ ನಾದಕ್ಕೆ ಮರುಳಾಗಿ, ಹಿಂದೆ ಮುಂದೆ ನೋಡದೆ, ಯೋಚಿಸದೆ, ತರ್ಕಿಸದೆ, ವಿವೇಚನಾ ರಹಿತಳಾಗಿ ಅವನನ್ನು ಕಾಣುವ, ಕೂಡುವ ಬಯಕೆ ಹುಟ್ಟುವುದಕ್ಕೆ ನಿರ್ದಿಷ್ಟವಾದ ಕಾರಣವೊಂದು ಇರಲೇಬೇಕಲ್ಲವೇ? ಹಾಗೆಯೇ ಈ ವರ್ತನೆಯ ಹಿಂದಿನ ಮನೋಪಾತಳಿಯನ್ನು ಅರ್ಥಮಾಡಿಕೊಳ್ಳದೇ ಹೋದರೆ ಪಾತ್ರಕ್ಕೆ ನ್ಯಾಯ ಒದಗಿಸಿದಂತಾಗುವುದಿಲ್ಲ.

> "ಬಿನದಕ್ಕೆ ಪಾಡುತಿರೆನು
> ಣ್ದನಿ ನಿದ್ರೆಗೆ ಕತಕಬೀಜಮಾಯ್ತೆನೆ ಮೃಗಲೋ
> ಚನೆ ತಿಳಿದಾಲಿಸಿ ಮುಟ್ಟಿದ ಮನಮನೆ ತೊಟ್ಟನೆ ಪಸಾಯದಾನಂಗೊಟ್ಟಳ್
> ಅಂತೆಸೆಯೆ ಪಾಡುತಿರೆ ತ
> ದ್ದಂತಿವನತಿನೂತ್ನಗೀತ ಪಾತನ ವಿಕಲ
> ಸ್ವಾಂತೆಗೆ ನೋಡುವ ಕೂಡುವ
> ಚಿಂತೆ ಕಡಲ್ವರಿದುದಂದು ಬೆಳಗಪ್ಪಿನೆಗಂ।"[೨೪]

ಈ ಮೇಲಿನ ಪದ್ಯ ಭಾಗಗಳು ಅಮೃತಮತಿಯ ಈ ವರ್ತನೆಯ ಕುರಿತು ಅನೇಕ ಪ್ರಶ್ನೆಗಳನ್ನು ಹುಟ್ಟು ಹಾಕುತ್ತವೆ. ಕೊಳಲ ನಾದಕ್ಕೆ ಅಮೃತಮತಿ ಮನಸೋತಿದ್ದೆ ಆದಲ್ಲಿ, ನಾದ ನುಡಿಸಿದವನನ್ನು ಕಾಣುವ ಹಂಬಲ ಅತ್ಯಂತ ಸಹಜವಾದುದಾಗಿತ್ತು. ಆದರೆ ಆ ಕ್ಷಣಕ್ಕೆ ಆತನನ್ನು ಕೂಡುವ ಹಂಬಲ ಅಸಹಜ (obnormal) ಎನಿಸುತ್ತದೆ. ಒಂದು ವೇಳೆ ನಾದ ನುಡಿಸಿದವರು ಒಬ್ಬ ಹೆಣ್ಣಾಗಿದ್ದರೆ? ಬಹುಶಃ ಅನೇಕ ಬಾರಿ ಈ ಕೊಳಲ ನಾದ ಅವಳ ಕಿವಿಗೆ ಬಿದ್ದಿರುವ ಸಾಧ್ಯತೆ ಇರಲೇಬೇಕು. ಅದರ ಬಗೆಗೆ ಆಕೆಯ ಆಸಕ್ತಿ ಸಾಮಾನ್ಯ ನೆಲೆಯಲ್ಲಿಯೇ ಇತ್ತು. ಆದರೆ "ಇಂದ್ರಿಯಗಳ ಮೂಲಕ ಒಂದು ಪ್ರಚೋದನೆಯು ಮಿದುಳನ್ನು ತಲುಪಿದಾಗ ಕೆಲವೊಮ್ಮೆ ಈ ಪ್ರಚೋದನೆಯಿಂದ ಹುಟ್ಟಿದ ಭಾವನೆ, ಯೋಚನೆಗಳೇ ಹೊಸ ಪ್ರಚೋದನೆಯಾಗಿ ಇನ್ನೊಂದು ಭಾವನೆ, ಯೋಚನೆ ಹುಟ್ಟುವ ಸರಣಿ ಕ್ರಿಯೆ ಪ್ರಾರಂಭವಾಗುತ್ತದೆ. ಈ ಗೋಜಲಿನಲ್ಲಿ ಮನುಷ್ಯ ತನ್ನ ಒಳಗೇ ಹುಟ್ಟಿದ ಯಾವುದೋ ಒಂದು ಪ್ರಚೋದನೆಗೆ ಪ್ರತಿಕ್ರಿಯಿಸುವ ಸಂಭವವಿರುತ್ತದೆ."[೨೫] ಇಂತಹ ಪ್ರತಿಕ್ರಿಯೆಗೆ ಅನೇಕ ಕಾರಣ ಕೊಡಬಹುದು.

ಹೆಣ್ಣಿಗೆ ದೈಹಿಕ ತೃಪ್ತಿಯ ನೆಲೆಗಿಂತಲೂ ಪ್ರತ್ಯೇಕ ಪ್ರಜ್ಞೆಯ ಸಾಹಚರ್ಯ ಬೇಕಾಗಿರುವುದು.

ಅವಳ ಆಂತರ್ಯ ಮತ್ತು ಜಗತ್ತನ್ನು ಅವಳ ಪ್ರಜ್ಞೆಯ ಮೂಲಕ ವೀಕ್ಷಿಸುವವರಿಲ್ಲದೇ ಹೋಗಿರುವುದು.

ಹೆಣ್ಣಿನ ಹೆಣ್ತನವನ್ನು ಬಡಿದೆಬ್ಬಿಸಬೇಕಾಗಿರುವುದು.

ದಾಂಪತ್ಯದ ಪ್ರಣಯವು ಯಾಂತ್ರಿಕವಾದ ಸಂದರ್ಭದಲ್ಲಿ ಆಕೆಯಲ್ಲಿ ಜಾಗೃತಗೊಳ್ಳುವ ತುಡಿತಗಳೊಡನೆ ಆಕೆಯ ಸಂಘರ್ಷಗಳು.

ಭಾವನಾತ್ಮಕ ನೆಲೆ

ಫ್ರಾಯ್ಡ್ ವಸ್ತುನಿಷ್ಠ ಸಂಬಂಧ ಸಿದ್ಧಾಂತ (object relations theory)ದಲ್ಲಿ ಇಂತಹ ವರ್ತನೆಯ ಕಾರಣವನ್ನು ಈ ರೀತಿ ವಿಶ್ಲೇಷಿಸುತ್ತಾನೆ. "ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಅನೇಕ ಹುಟ್ಟಾಸೆಗಳು ಶಾರೀರಿಕವಾಗಿ ತೃಪ್ತವಾಗಬೇಕಾದಲ್ಲಿ, ಅದಕ್ಕೆ ಮಾನಸಿಕ ಪುನರ್ಬಲನದ (Re-inforcement) ಅವಶ್ಯಕತೆ ಇರುತ್ತದೆ. ಹುಟ್ಟಾಸೆಯ ಉದ್ದೇಶ ತನ್ನ ಹಸಿವನ್ನು ಇಂಗಿಸಿಕೊಳ್ಳುವುದು, ಅದರ ಮೂಲಕ ತೃಪ್ತಿಪಟ್ಟುಕೊಳ್ಳುವುದು. ವಸ್ತುವು ಅಂತಿಮ ಹಂತದ ಕ್ರಿಯೆಯನ್ನು ನಿರ್ವಹಿಸಿ ಅದರಿಂದ ತನ್ನ ಆಸೆಗಳನ್ನು ಈಡೇರಿಸಿಕೊಳ್ಳುವುದು. ಮನೋವಿಶ್ಲೇಷಣಾ ಸಿದ್ಧಾಂತದ ಪ್ರಕಾರ ಈ ಸಂಬಂಧದಲ್ಲಿ ಏನಾದರೂ ವ್ಯತ್ಯಯವಾದರೆ ಅದು ಮುಂದೆ ಹಲವಾರು ಮಾನಸಿಕ ಸಮಸ್ಯೆಗಳಿಗೆ ನಾಂದಿಯಾಗುತ್ತದೆ. ಈ ಸಂಬಂಧದಲ್ಲಿ ಬಹುಮುಖ್ಯವಾದ ಭಾವನಾತ್ಮಕ ಸಂಬಂಧ ಮತ್ತು ಪರಿಸರ ಪ್ರಮುಖ ಪಾತ್ರ ವಹಿಸುತ್ತದೆ. ಫ್ರಾಯ್ಡ್ ಪ್ರಕಾರ ಲೈಂಗಿಕ ಪ್ರಕ್ರಿಯೆಯಲ್ಲಿಯೂ ವಸ್ತುನಿಷ್ಠ ಸಂಬಂಧವು ಮಹತ್ವದ ಪಾತ್ರ ವಹಿಸುತ್ತದೆ. ಇಲ್ಲಿ ಯಶೋಧರ ಮತ್ತು ಅಮೃತಮತಿಯ

ಸಂಬಂಧಗಳಲ್ಲಿ ಭಾವನಾತ್ಮಕ ಹಾಗೂ ಪರಿಸರದ ನಡುವೆ ಇರುವ ಸಂಘರ್ಷಗಳಲ್ಲಿ ಅವಳ ವರ್ತನೆಯ ಬದಲಾವಣೆಗೆ ಕಾರಣವಾಗಿರುವ ಸಾಧ್ಯತೆಯನ್ನು ಗುರುತಿಸಬಹುದು. ಇದನ್ನು ಕೇವಲ ಲೈಂಗಿಕ ನೆಲೆಯಲ್ಲಿ ಫ್ರಾಯ್ಡ್ ಗುರುತಿಸುವ ಪ್ರಯತ್ನ ಮಾಡಿದ್ದಾನೆ. ಆದರೆ ಈ ಬಗೆಯ ವರ್ತನೆಯನ್ನು ಮಾನವೀಯ ನೆಲೆಯಲ್ಲಿ ಅರ್ಥೈಸಿದಾಗ ಪಾತ್ರದ ತುಮುಲಗಳನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಬಹುದು".[೨೬] ಈ ರೀತಿ ನೀನಾ ಅರ್‌ಬ್ಯಾಕ್ ತನ್ನ 'ಮಹಿಳೆ ಮತ್ತು ದೈತ್ಯಶಕ್ತಿ' ಎಂಬ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಮಹಿಳೆಯ ಅದಮ್ಯ ಚೈತನ್ಯದ ಬಗ್ಗೆ ಪ್ರಸ್ತಾಪಿಸುತ್ತಾ ಈ ರೀತಿ ಅಭಿಪ್ರಾಯ ಪಡುತ್ತಾರೆ. "ವಾಸ್ತವವಾಗಿ ಮಹಿಳೆಯರಲ್ಲಿ ರಾಕ್ಷಸ ಚೈತನ್ಯವಿದೆ. ಆಕೆ ದೇವಿಯಾಗಿರಲಿ, ದಾರಿ ತಪ್ಪಿದ ಹೆಣ್ಣಾಗಿರಲಿ, ದಬ್ಬಾಳಿಕೆಯನ್ನು ಮೂಕವಾಗಿ ಸಹಿಸುವ ಹೆಣ್ಣಾಗಿರಲಿ, ಆಕೆಯ ಈ ಎಲ್ಲಾ ರೂಪಗಳ ಹಿಂದೆ ದೈತ್ಯ ಬಲವಿದೆ. ಅದಕ್ಕೆಲ್ಲಾ ನಮ್ಮ ಸಮಾಜದಲ್ಲಿ ಪ್ರಯತ್ನ ಪೂರ್ವಕವಾಗಿ ಅಬಲತ್ವದ ಮುಸುಕು ಹೊದಿಸಲಾಗಿದೆ".[೨೭]

'ಸ್ತ್ರೀ'ಯ ಅನನ್ಯತೆಯನ್ನು ಕಂಡೂ ಕಾಣದಂತಿರುವ ಸಮಾಜ ದೋಷಪೂರಿತ ದೃಷ್ಟಿಕೋನದಿಂದ ಕೂಡಿದೆ. ಈ ನೆಲೆಯಲ್ಲಿ ನೋಡುವಾಗ ಅಮೃತಮತಿ 'ಯಶೋಧರನ ಪ್ರತಿಷ್ಠೆಯ ಪ್ರತೀಕವಾಗಿ ಕಾಣುತ್ತಾಳೆ. ಸೌಂದರ್ಯವತಿಯಾದ ಅವಳು ರಾಜನೊಬ್ಬನ ಪ್ರತಿಷ್ಠೆಯ ಸಂಗಾತಿಯೇ ವಿನಃ ಅವಳೊಂದು ನನ್ನಂತಹ ಮನಸ್ಸಿರುವ ಜೀವಿ ಎಂದು ಪರಿಗಣಿಸಲ್ಪಡದೇ ಹೋದಾಗ, ಅಮೃತಮತಿಗೆ ಯಶೋಧರನ ವಾಂಛೆಗೆ ಮಾತ್ರ ತಾನು ಸೀಮಿತ ಎಂಬ ವಾಸ್ತವ ಅರಿವಾಗುತ್ತಲೇ ಮನಸ್ಸು ವಿಕ್ಷಿಪ್ತಗೊಂಡಿರುವ ಸಾಧ್ಯತೆ ಇದೆ. ಈ ರೀತಿ ವಿಕ್ಷಿಪ್ತಗೊಂಡ ಮನಸ್ಸು ತನ್ನ ನಿರ್ಮಾಣದ ಸಂಪೂರ್ಣ ಹೊಣೆಯನ್ನು ಹೊತ್ತು ಏನಾಗಬೇಕೆಂದು ನಿಶ್ಚಯಿಸಿ, ಏನಾಗುತ್ತಾನೋ ಅದಕ್ಕೆ ಸಂಪೂರ್ಣ ಜವಾಬ್ದಾರನಾದಂತೆ ಅನಿಸುತ್ತದೆ. ಹಾಗಾಗಿಯೇ ಯಶೋಧರನ ಬಗ್ಗೆ ನಿಷ್ಠುರ ನಿಲುವನ್ನು ತಾಳುತ್ತಾಳೆ.

ಈ ನಿಟ್ಟಿನಲ್ಲಿ ಅಮೃತಮತಿಗೆ ತನ್ನ ಈ ನಿಷ್ಠುರತೆಯನ್ನು ಪ್ರಕಟಿಸಲು ಒಂದು ಕಾರಣ ಬೇಕಿತ್ತು. ಅದು ಕೇವಲ ತಾನೇ ನಿಶ್ಚಯಿಸಿಕೊಂಡ ನಿರ್ಧಾರ. ಆ ನಿರ್ಧಾರ ಪ್ರಕಟಗೊಳ್ಳಲು ನಿಮಿತ್ತವಾದದ್ದು ಅಷ್ಟಾವಂಕನ ಕೊಳಲನಾದ. ಏಕೆಂದರೆ "ನಿದ್ದೆಗೆ ಕತಕಬೀಜಮಾಯ್ತೆನೆ ಮೃಗಲೋಚನೆ ತಿಳಿದಾಲಿಸಿ ಮುಟ್ಟಿದ ಮನಮನೆ ತೊಟ್ಟನೆ ಪಸಾಯದನಂಗೊಟ್ಟಳ್."[೨೮] ಏಕೆಂದರೆ ಅಮೃತಮತಿಯ ಮನಸ್ಸಿಗೆ ಕೊಳಲ ನಾದ ಆಕರ್ಷಿಸಿದ್ದರೆ, ಆ ಕೊಳಲ ನಾದಕ್ಕೆ ಮನಸೋತಿದ್ದೆ ಆದಲ್ಲಿ ಕಾಣುವ ಕುತೂಹಲ, ಹಂಬಲ ಸಹಜವೇ ಆಗಿರುತ್ತಿತ್ತು. ಆದರೆ ಆ ಕ್ಷಣವೇ ತನ್ನನ್ನು ಒಪ್ಪಿಸಿಕೊಳ್ಳುವ ಪ್ರಕ್ರಿಯೆ ನಿಜಕ್ಕೂ ಅಸಹಜವಾದುದೆಂದು ಅನಿಸಿದರೂ ಆಕಸ್ಮಿಕವಾಗಬೇಕೆಂದು ಹೇಳಲಾಗುವುದಿಲ್ಲ. ಕೊಳಲ ನಾದ ಅಮೃತಮತಿಯ ಕಿವಿಗೆ ಬೀಳುವ ಸಂದರ್ಭ ಆಕಸ್ಮಿಕವಾದುದೆಂದು ಅನಿಸುವುದಿಲ್ಲ. ಆದರೆ ವಾಸ್ತವ ಜಗತ್ತಿನಿಂದ ಹೊರಬರಬೇಕೆನ್ನುವ ಅವಳ ನಿರ್ಧಾರ ನಿಶ್ಚಯವಾಗಿತ್ತು. ಆ ದೃಢ ನಿಶ್ಚಯವೇ ಅವಳಿಗೆ ಆಕರ್ಷಣೆ ಗಾಢವಾಗಲು ಕಾರಣವಾಗಿರುವಂತೆ ಅನಿಸುತ್ತದೆ.

ಫ್ರಾಯ್ಡ್‌ನ ಪ್ರಕಾರ ಮಾನವನ ಈ ರೀತಿಯ ವರ್ತನೆಗೆ ಪ್ರೇರಣೆ ಮೂಲಭೂತವಾಗಿ ಪ್ರಾಣಿ ಸಹಜವಾದ ಅನಿಯಂತ್ರಿತ ಲೈಂಗಿಕತೆ ಮತ್ತು ಸುಖಾಪೇಕ್ಷೆ, ಹಿಂಸಾಚಾರ, ಅಳಿವು ಉಳಿವುಗಳ ಸಂಘರ್ಷ. ಆದರೆ ಅಮೃತಮತಿಯ ವರ್ತನೆಯು ಅನಿಯಂತ್ರಿತ ಲೈಂಗಿಕತೆ ಮತ್ತು ಸುಖಾಪೇಕ್ಷೆ, ಹಿಂಸಾಚಾರದ ಪ್ರೇರಣೆಯಿಂದ ರೂಪುಗೊಂಡದ್ದಲ್ಲ. ಅದೊಂದು ಅಳಿವು-ಉಳಿವುಗಳ, ಅಧಿಕಾರ, ಪ್ರತಿಷ್ಠೆಗಳ ನಡುವೆ ಸಿಲುಕಿ ಅದರಿಂದ ಹೊರಬರಲು ತುಡಿಯುತ್ತಿರುವ ಹೆಣ್ಣೊಬ್ಬಳ ಸಹಜ ತುಮುಲ. ಸಮಾಜದ ಕಟ್ಟುಪಾಡುಗಳನ್ನು ಮೀರಿ ನಿಸರ್ಗಕ್ಕೆ, ಅಮಾನುಷ ನೆಲೆಗೆ ಹೊರಡುತ್ತಾಳೆಂದರೆ ಅದು ಆಕೆಯ ಹದ್ದು ಮೀರಿದ ನಡವಳಿಕೆಯೆಂದೇ ಬಿಂಬಿತವಾಗುತ್ತದೆ. ಈ ರೀತಿ ಟೀಕಿಸುವ ಸಂದರ್ಭದಲ್ಲಿ ಗಂಡನಾದವನ ದೌರ್ಬಲ್ಯದ ಕುರಿತಾಗಿ ಮೌನ ತಾಳಿ ಬಿಡುತ್ತದೆ. ಅಂತರ್‌ವ್ಯಕ್ತಿ ಸಂಬಂಧಗಳನ್ನು ಪರಿಶೀಲಿಸಬೇಕಾದ ಅನೇಕ ಕಡೆಗಳಲ್ಲಿ ಏಕವ್ಯಕ್ತಿ ಕೇಂದ್ರಿತವಾದ ನಿರ್ಧಾರವೇ ನಡೆದುಬಿಡುತ್ತದೆ. ಇಲ್ಲಿ ಅಮೃತಮತಿಗೆ ಲಭ್ಯವಿರುವ ಮುಕ್ತ ಆಯ್ಕೆಯಿಂದ, ಅವಳಲ್ಲಿರುವ ಒತ್ತಡ ಹಾಗೂ ನಿಷೇಧಗಳಿಂದ ಬೇರೆ ಮಾಡಿ ನೋಡಲಾಗುತ್ತಿರುವುದರ ಪರಿಣಾಮವೇ ಅವಳನ್ನು ಕುರಿತಾದ ಅನೇಕ ಬರಹಗಳು ನೈತಿಕತೆಯ ವಿಶ್ಲೇಷಣೆಗಳಾಗಿ ಬಿಟ್ಟಿವೆ. ಜೊತೆಗೆ ಅಮೃತಮತಿಯ ಈ ವರ್ತನೆಯ ಹಿಂದಿರಬಹುದಾದ ಒತ್ತಡದ ಕಾರಣವನ್ನು ಅರಿಯುವ ಪ್ರಯತ್ನ ನಡೆಯದಂತೆ ಸ್ಥಾಪಿತ ಸಾಮಾಜಿಕ ಮೌಲ್ಯಗಳು ಯೋಚನಾ ವಿಧಾನಗಳನ್ನು ನಿರ್ಬಂಧಿಸಿವೆ. ಪುರುಷನ ಅಧಿಕಾರ, ಪ್ರತಿಷ್ಠೆಗಳ ಒತ್ತಡಕ್ಕೆ ಸಿಲುಕಿರುವ ಹೆಣ್ಣಾಗಿಯೇ ಈಕೆ ಕಂಡುಬರುತ್ತಾಳೆ. ಲೈಂಗಿಕತೆಗೂ, ನೈತಿಕತೆಗೂ ಸಂಬಂಧ ಕಲ್ಪಿಸಿರುವುದರಿಂದಲೇ ಅಮೃತಮತಿಯು ವಿಘಟಿತಳಾಗಿರುವಂತೆ ಕಂಡುಬರುತ್ತಾಳೆ. ಲೈಂಗಿಕತೆಯ ಪರಿಕಲ್ಪನೆಯಲ್ಲೇ ಮೌಲ್ಯಗಳನ್ನು ಅಡಗಿಸಿರುವುದರಿಂದಲೇ ಹೆಣ್ಣಿನ ಈ ಆಯ್ಕೆಯನ್ನು, ಅದರ ಹಿಂದಿನ ಕಾರಣವನ್ನು ಅರಿಯಲಾಗುತ್ತಿಲ್ಲ. ಹೆಣ್ಣಾಗಲೀ, ಗಂಡಾಗಲೀ ಪ್ರತಿಯೊಬ್ಬರಿಗೂ ಆಯ್ಕೆಯ ಸ್ವಾತಂತ್ರ್ಯವಿದೆ. ಇದನ್ನೇ ಸಿಮೋನ್ ದ ಬೋವ ಈ ರೀತಿ ವಿಶ್ಲೇಷಿಸುತ್ತಾರೆ. "ಆಯ್ಕೆಯ ಸ್ವಾತಂತ್ರ್ಯವಿದೆ ಎಂದರೆ ವ್ಯಕ್ತಿಯಲ್ಲಿ ಕಾಣಿಸಿಕೊಳ್ಳುವ ಗಣನೀಯ ಸಮಾನಾಂಶಗಳ ವಿವರಣೆಯನ್ನು ನಿರಾಕರಿಸಬೇಕಾಗಿರುತ್ತದೆ. ಈ ಆಯ್ಕೆಯ ಸ್ವಾತಂತ್ರ್ಯವು ಮನುಷ್ಯರಲ್ಲಿರುವ ಅಭಾದಿತ ಸಮಾನಾಂತರಗಳನ್ನು ನಿರಾಕರಿಸಬೇಕಾಗಿಲ್ಲ".[೨೯] ಮನೋವಿಶ್ಲೇಷಣೆಯ ಮೂಲಕ ಪ್ರತಿ ವ್ಯಕ್ತಿಯ ಸಂದರ್ಭದಲ್ಲಿ ಕೆಲವು ಅಬಾಧಿತ ಸಮಾನಾಂಶಗಳು ಗಂಡಿಗೆ ಲಭ್ಯವಾಗುವಂತೆ ಹೆಣ್ಣಿಗೆ ಲಭ್ಯವಾಗುವುದಿಲ್ಲ. ಇದು ಕೆಲವರಲ್ಲಿ ಹತಾಶ ಸ್ಥಿತಿಯನ್ನುಂಟು ಮಾಡಬಲ್ಲದು. ಇನ್ನು ಕೆಲವರು ಇದನ್ನು ಮೀರುವಿಕೆಯ ಮೂಲಕ ತಮ್ಮ ಅಸ್ತಿತ್ವದ ನೆಲೆಯನ್ನು ಕಂಡುಕೊಳ್ಳುವರು. ಇಲ್ಲಿ ಅಮೃತಮತಿಯ ವರ್ತನೆಯು ಇಂತಹ ಮೀರುವಿಕೆಯ ಪ್ರಯತ್ನವೆಂದೇ ಅನಿಸುತ್ತದೆ. ಹಾಗಾಗಿಯೇ ಅಮೃತಮತಿ ಅನೇಕ ಸಾಮಾನ್ಯ ಹೆಂಗಸರಂತೆ ವಾಸ್ತವಕ್ಕೆ ಬೆನ್ನು ಹಾಕಿ ಓಡುವ ಪ್ರಯತ್ನ ಮಾಡದೇ ವ್ಯವಸ್ಥೆಯನ್ನು, ಸ್ಥಾಪಿತ ಸಾಮಾಜಿಕ ಮೌಲ್ಯಗಳನ್ನು ಮೀರುವ ಮೂಲಕ ಸ್ವಪರಿಪೂರ್ಣತೆಯೆಡೆಗೆ ಸಾಗುವ ಪ್ರಯತ್ನವಾಗಿ

ತನ್ನ ಆಯ್ಕೆಯಾದ ಅಷ್ಟಾವಂಕನೊಂದಿಗೆ ಸೇರುತ್ತಾಳೆ. ಇದು ಆಕೆಯ ಆಯ್ಕೆಗೆ ಸಂಬಂಧಿಸಿದ್ದು. ಇದು ಆಕೆಯ ಅತ್ಯಂತ ಪ್ರಾಮಾಣಿಕ ಆಯ್ಕೆ ಆಗಿತ್ತು ಎಂಬುದನ್ನು ಈ ಉಲ್ಲೇಖಿತ ಪದ್ಯ ಭಾಗದ ಮೂಲಕ ತಿಳಿಯಬಹುದು. ಕೊಳಲು ನುಡಿಸಿದ ವ್ಯಕ್ತಿಯ ಕುರಿತು ದಾಸಿ ವಿವರಿಸುತ್ತಾಳೆ. ಆತನ ಕುರೂಪವನ್ನು ದಾಸಿ ವ್ಯಂಗ್ಯದ ಮೂಲಕ ವಿವರಿಸುತ್ತಾಳೆ. ಆದರೆ ಅದಕ್ಕೆ ಅಮೃತಮತಿಯ ಪ್ರತಿಕ್ರಿಯೆ ಅಸಾಮಾನ್ಯದಾದುಗಿತ್ತು.

> "ಕರಿದಾದೊಡೆ ಕತ್ತುರಿಯಂ
> ಮುರುಡಾದೊಡೆ ಮಲಯಜಂಗಳಂ ಕೊಂಕಿದೊಡೇಂ
> ಸ್ಮರಚಾಪಮುನಿಳಿಕಯ್ವರೆ
> ಮರುಳೇ ಪೊಲ್ಲಮೆಯೆ ಲೇಸು ನಲ್ಲರ ಮಯ್ಯೊಳ್ ।"[೩೦]

ಆತನನ್ನು ಕಾಣಲು ಕೂಡಲು ಹಾತೊರೆಯುತ್ತಾಳೆ. ಅಷ್ಟಾವಂಕನ ರೂಪವನ್ನು ಕಂಡಾಗಲೂ, ಆತನ ಒರಟು ವರ್ತನೆಯಿಂದಲೂ ಆಕೆಯ ನಿಷ್ಠೆ ಬದಲಾಗುವುದಿಲ್ಲ. ಅದೂ ಇನ್ನೂ ಹೆಚ್ಚುತ್ತದೆ. ಬದಲಿಗೆ ಪ್ರತಿದಿನ ಆತನನ್ನು ಸೇರಲು ಬಯಸುತ್ತಾಳೆ, ಹಾತೊರೆಯುತ್ತಾಳೆ. ಇಲ್ಲಿ ಅಮೃತಮತಿಯು ತನ್ನ ಸುಪ್ತ ಮನಸ್ಸಿನ ಒತ್ತಡವನ್ನು ಶಮನಗೊಳಿಸುವ ಕಾರಣಕ್ಕಾಗಿಯೇ ತನಗರಿವಿದ್ದೋ, ಇಲ್ಲದೆಯೋ ಈ ಬಗೆಯ ನಿರ್ಧಾರವನ್ನು ತೆಗೆದುಕೊಳ್ಳುತ್ತಾಳೆ. ಅದು ಅಷ್ಟಾವಂಕನಲ್ಲಿ ಪೂರ್ಣಗೊಳ್ಳುತ್ತದೆ. ಇದೊಂದು ಬಗೆಯ ಅಹಂ ಅನ್ನು ತೃಪ್ತಿಗೊಳಿಸಿಕೊಳ್ಳುವ ಮನುಷ್ಯನ ಮಾನಸಿಕ ಸ್ಥಿತಿ ಎಂದೇ ಹೇಳಬೇಕಾಗುತ್ತದೆ. ಇದು ಎರಡು ರೀತಿಯಲ್ಲಿ ಇಲ್ಲಿ ಪ್ರಕಟಗೊಂಡಿದೆ.

೧. ಅಷ್ಟಾವಂಕನೊಂದಿಗೆ ಹೊಂದಿಕೊಳ್ಳುವುದು

೨. ಸ್ವಯಂನೊಂದಿಗೂ ಹೊಂದಿಕೊಳ್ಳುವುದು

ಅಮೃತಮತಿ, ಯಶೋಧರ ನಡುವಿನ ವಸ್ತುನಿಷ್ಠ ಸಂಬಂಧ (Object relations theory)

ಈ ಬಗೆಯ ವರ್ತನೆಗಳಿಗೆ ಈ ನೆಲೆಯಲ್ಲೂ ಕಾರಣ ಹುಡುಕಬಹುದು. "ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಅನೇಕ ಹುಟ್ಟಾಸೆಗಳು ಶಾರೀರಿಕವಾಗಿ ತೃಪ್ತವಾಗಬೇಕಾದಲ್ಲಿ ಅದಕ್ಕೆ ಮಾನಸಿಕ ಪುನರ್ಬಲನದ (Reinforcement) ಅವಶ್ಯಕತೆ ಇರುತ್ತದೆ. ಹುಟ್ಟಾಸೆಯ ಉದ್ದೇಶ ತನ್ನ ಹಸಿವನ್ನು ಇಂಗಿಸಿಕೊಳ್ಳುವುದು. ಅದರ ಮೂಲಕ ತೃಪ್ತಿ ಪಟ್ಟುಕೊಳ್ಳುವುದು. ವಸ್ತುವು ಅಂತಿಮ ಹಂತದ ಕ್ರಿಯೆಯನ್ನು ನಿರ್ವಹಿಸಿ ಅದರಿಂದ ತನ್ನ ಆಸೆಗಳನ್ನು ಈಡೇರಿಸಿಕೊಳ್ಳುವುದು".[೩೧] ಮನೋವಿಶ್ಲೇಷಣಾ ಸಿದ್ಧಾಂತದ ಪ್ರಕಾರ ಈ ಸಂಬಂಧದಲ್ಲಿ ಏನಾದರೂ ವ್ಯತ್ಯಯವಾದರೆ ಅದು ಮುಂದೆ ಹಲವಾರು ಮಾನಸಿಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಈ ಸಂಬಂಧದಲ್ಲಿ ಬಹುಮುಖ್ಯವಾಗಿ ಭಾವನಾತ್ಮಕ ಸಂಬಂಧ ಮತ್ತು ಪರಿಸರ ಪ್ರಮುಖ ಪಾತ್ರ ವಹಿಸುತ್ತದೆ. ಈ ನಿಟ್ಟಿನಲ್ಲಿ ನೋಡುವಾಗ ಯಶೋಧರ ಮತ್ತು ಅಮೃತಮತಿಯ ಸಂಬಂಧಗಳಲ್ಲಿ ಭಾವನಾತ್ಮಕ

ಹಾಗೂ ಪರಿಸರದ ನಡುವೆ ಸಂಘರ್ಷಗಳು ಇರುವುದರಿಂದಲೇ ಅಮೃತಮತಿಯ ವರ್ತನೆಯಲ್ಲಿ ಬದಲಾವಣೆಗಳಾಗಿದೆ. ಅಮೃತಮತಿ ಮತ್ತು ಯಶೋಧರರ ಸಂಬಂಧಗಳು ಸಕ್ರಿಯ ನೆಲೆಯಲ್ಲಿ ಇಲ್ಲದಿರುವುದರ ಪರಿಣಾಮ ಎನ್ನಬಹುದು. ಆ ಕಾರಣದಿಂದಲೇ ಯಶೋಧರನ ಬಗೆಗೆ ನಿಷ್ಠುರ ಭಾವನೆಗಳನ್ನು ಬೆಳೆಸಿಕೊಳ್ಳುತ್ತಾಳೆ. ಆದ್ದರಿಂದಲೇ ಕ್ರಮೇಣ ಆಕೆಯ ಮನಸ್ಸು ಬಾಹ್ಯದ ಪರಿಸರದ ಕಡೆಗೆ ತಿರುಗುತ್ತದೆ. ಕೆಲವೊಮ್ಮೆ ಇಂತಹ ಪ್ರವೃತ್ತಿಯು 'ಆಕ್ರಮಣಕಾರಿ' ಮತ್ತು 'ವಿನಾಶಕಾರಿ' (Aggressiveness and destructiveness) ವರ್ತನೆಯಾಗಿ ಮಾರ್ಪಡುತ್ತದೆ. ಇದನ್ನು ಫ್ರಾಯ್ಡ್ ಕಾಮ ಸುಖಾಸಕ್ತಿ ಮತ್ತು ಹತ್ಯಾಶಕ್ತಿ (Eros and Thanatos) ಎನ್ನುತ್ತಾನೆ. ಇಲ್ಲಿ ಕಾಮ ಸುಖಾಸಕ್ತಿಯನ್ನು ಲೈಂಗಿಕ ನೆಲೆಯಲ್ಲಿ ಅರ್ಥೈಸದೇ ಅಹಂ ಮತ್ತು ಅಸ್ತಿತ್ವ ಪ್ರಜ್ಞೆಯ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅಂದರೆ ಅಹಂಗೆ ಮತ್ತು ಅಸ್ತಿತ್ವಕ್ಕೆ ಘಾಸಿಯಾಗಿದೆ ಎಂದು ಮನಸ್ಸು ಗ್ರಹಿಸಿದಾಗ, ಅದಕ್ಕೆ ತೋರುವ ಪ್ರತಿಕ್ರಿಯೆ ಇನ್ನು ತಾನು ಪಡೆಯುತ್ತಿರುವ ಪ್ರೀತಿ ಅರ್ಥವಿಲ್ಲದ್ದು, ಮೌಲ್ಯವಿಲ್ಲದ್ದು. ಆದ್ದರಿಂದ ಅದರ ಭ್ರಮೆಯಲ್ಲಿ ತನ್ನ ವ್ಯಕ್ತಿತ್ವ ನಾಶಮಾಡಿಕೊಳ್ಳುವುದಕ್ಕಿಂತ ವಾಸ್ತವವನ್ನು ವ್ಯಾವಹಾರಿಕವಾಗಿ ಒಪ್ಪಿಕೊಂಡು, ಇನ್ನೊಬ್ಬರ ಸ್ನೇಹ ಸಹವಾಸವನ್ನು ಕೇವಲ ಹೆಣ್ಣಾಗಿ ಒಪ್ಪಿಕೊಂಡಿರುವಂತೆ ಅಮೃತಮತಿ ಕಂಡುಬರುತ್ತಾಳೆ.

ಅಬ್ರಾಹಂ ಮಾಸ್ಲೊ ಮತ್ತು ಮಾನವತಾವಾದ ಸಿದ್ಧಾಂತ

ಅಮೃತಮತಿಯನ್ನು ಕುರಿತು ಚರ್ಚಿಸುವಾಗ ಅಬ್ರಾಹಂ ಮಾಸ್ಲೋ ಅವರು ಹೇಳುವಂತೆ ಶ್ರೇಣಿ ರೂಪದಲ್ಲಿರುವ ವ್ಯಕ್ತಿಗಳ ಪ್ರೇರಣೆಗಳ ಬಗ್ಗೆ ಚರ್ಚಿಸಬೇಕಾಗುತ್ತದೆ. ಶ್ರೇಣಿಯಲ್ಲಿರುವ ಪ್ರೇರಣೆಗಳು ಕ್ರಮವಾಗಿ ದೈಹಿಕ ಪ್ರೇರಣೆಗಳು, ಭದ್ರತಾ ಪ್ರೇರಣೆಗಳು, ವಾತ್ಸಲ್ಯ (ಪ್ರೀತಿ, ಪ್ರೇಮ), ಆತ್ಮಗೌರವ ಹಾಗೂ ಆತ್ಮಸಿದ್ಧಿ. (psysiological, safety, prolongingness, Esteem and self actualization). ಇವರು ಹೇಳುವಂತೆ 'ಮೂಲ' ಪ್ರೇರಣೆಗಳು ತೃಪ್ತಿಹೊಂದಿದ ನಂತರ ಮೇಲ್ಮಟ್ಟದ ಪ್ರೇರಣೆಗಳು ಮೂಡುತ್ತವೆ. ಈ ನಿಟ್ಟಿನಲ್ಲಿ ನೋಡುವಾಗ ಅಮೃತಮತಿಯ ವರ್ತನೆಯನ್ನು ಆತ್ಮಗೌರವಕ್ಕೆ (self-esteem) ಸಂಬಂಧಿಸಿದುದೆಂದೇ ಅರ್ಥಮಾಡಿಕೊಳ್ಳಬಹುದು. ಆತ್ಮಗೌರವ (self-esteem) ತನ್ನ ಅಸ್ತಿತ್ವಕ್ಕೆ ಧಕ್ಕೆ ಉಂಟಾದಾಗ ಪ್ರಚೋದನೆಗೊಳ್ಳುವಂತಹದ್ದು. ಅಂತಹ ಸಂದರ್ಭದಲ್ಲಿ ವ್ಯಕ್ತಿಗಳು ದಟ್ಟವಾದ ವಾಸ್ತವ ಪ್ರಜ್ಞೆ, ಆಗಾಧವಾದ ಸ್ವಯಂ ಪ್ರೇರಣೆ, ಸಂಪ್ರದಾಯ ವಿರೋಧ ಹಾಗೂ ತಮ್ಮ ಪರಿಸರದ ಮಿತಿಗಳನ್ನು ಮೀರುವ ಸ್ವಭಾವವನ್ನು ಪ್ರದರ್ಶಿಸುತ್ತಾರೆ. ಈ ಹಿನ್ನೆಲೆಯಲ್ಲಿ ಅಮೃತಮತಿ ಯಶೋಧರನಿಗೆ ತಾನು ಕೇವಲ ಪ್ರತಿಷ್ಠೆಯ, ಭೋಗದ ವಸ್ತುವಾಗಿ ಪರಿಗಣಿಸಲ್ಪಟ್ಟವಳೆಂಬುದು ಅನುಭವಕ್ಕೆ ಬರಲು ತೊಡಗಿದಂತೆ ಆಕೆಯ ಆತ್ಮಗೌರವ ಪ್ರಚೋದನೆಗೊಳ್ಳುತ್ತದೆ. ಏಕೆಂದರೆ ರಾಜನೀತಿ ಹಾದಿ ಅಥವಾ ಆರ್ಥಿಕ ಹಾದಿಗಳು ಅಹಂಕಾರವನ್ನು ಪ್ರಾಪ್ತಿಗೊಳಿಸುವ ಸಾಂಸಾರಿಕ ಹಾದಿಗಳಾಗಿರುತ್ತದೆ. ಯಶೋಧರನಂತಹ ರಾಜ ಹಣ, ಅಧಿಕಾರ,

ಸನ್ಮಾನವನ್ನು ಅರ್ಜಿಸಿಕೊಳ್ಳುವಂತೆಯೇ, ಅಮೃತಮತಿಯು ಆತನ ಅಹಂಕಾರದ, ಪ್ರತಿಷ್ಠೆಯ ಭಾಗವೇ ಆಗಿರುತ್ತಾಳೆ. ಈ ಬಗೆಯ ಪರಿಸರವು ಅವಳ ಮೂಲ ಪ್ರೇರಣೆಗಳನ್ನು ತೃಪ್ತಿಗಳಿಸಿದ್ದರೂ ಮೇಲ್ಮಟ್ಟದ ಪ್ರೇರಣೆಗಳು ತೃಪ್ತಿಕೊಂಡಿರುವುದಿಲ್ಲ. ಹಾಗಾಗಿ ಆ ಪ್ರೇರಣೆಗಳ ತೃಪ್ತಿಗಾಗಿ ಅಮೃತಮತಿಯು ಪ್ರಯತ್ನಿಸಿರುವಂತೆ ಕಂಡುಬರುತ್ತದೆ.

ಲಿಬಿಡೊ(Libido) **ನೆಲೆ : ಕಾಮಚೇತನ ಕಲ್ಪನೆ**

ಲಿಬಿಡೋ ಪರಿಕಲ್ಪನೆಯು ಲೈಂಗಿಕತೆಯ ಒಂದು ಅಂಗ. ಅದೊಂದು ಮಾನಸಿಕ ಪ್ರಕ್ರಿಯೆ. ಅದು ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಅಭಿವ್ಯಕ್ತಗೊಳ್ಳುವಂತಹದ್ದು. ಮಾನಸಿಕವಾಗಿ ಅಭಿವ್ಯಕ್ತಗೊಳ್ಳುವ ಲೈಂಗಿಕ ಬಯಕೆಯೇ ಲಿಬಿಡೊ (Libido). ಇದು ಕೇವಲ ಲೈಂಗಿಕ ಸಂಯೋಗಕ್ಕಾಗಿ ಮಾತ್ರ ಅಲ್ಲ. ಇದಕ್ಕಿಂತ ಬೇರೆ ಬೇರೆ ಗುರಿ ಮತ್ತು ಉದ್ದೇಶಗಳು ಇರುತ್ತವೆ. ಅಮೃತಮತಿಯ ವರ್ತನೆಯಲ್ಲಿ ಈ ಬಗೆಯ (Libido) ಪ್ರವೃತ್ತಿಯು ಅಸ್ತಿತ್ವ ಸ್ಥಾಪನೆಯ ಉದ್ದೇಶವನ್ನು ಹೊಂದಿರುವುದು ಅತ್ಯಂತ ಸ್ಪಷ್ಟವಾಗುತ್ತದೆ. ಇದು ದೈಹಿಕ ತೃಪ್ತಿಯ ಉದ್ದೇಶ ಹೊಂದಿರದೇ ಮಾನಸಿಕವಾದದ್ದು. ಸ್ತ್ರೀಯ ವೈವಾಹಿಕ ಬದುಕಿನ ಸಫಲತೆ, ವಿಫಲತೆಗಳು ಗಂಡನಿಂದ ಅವಳಿಗೆ ಸಿಗುವ ಮರ್ಯಾದೆ, ಅವಳ ಪ್ರಜನನ ಶಕ್ತಿಗಳು ಅನಾದಿ ಕಾಲದಿಂದಲೂ ಸಮಾಜದಲ್ಲಿ ಅವಳ ಸ್ಥಾನವನ್ನು ನಿರ್ಧರಿಸುತ್ತಲೇ ಬಂದಿವೆ. ಮನುಷ್ಯನ ಮನಸ್ಸು ಪ್ರೀತಿ, ಆದರ, ಗೌರವ, ಅಭಿಮಾನ, ಜಿಗುಪ್ಸೆ, ದ್ವೇಷ, ಕ್ರೋಧಗಳು ಈ ಬಗೆಯ ಸಂಕೀರ್ಣವಾದ ಭಾವನೆಗಳ ಅಂತರ್ಜಾಲದೊಳಗೆ (Emotional Network) ವರ್ತಿಸುತ್ತವೆ. ಈ ಅಂತರ್ಜಾಲ ವ್ಯವಸ್ಥೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೂ ಅದು ಮನಸ್ಸನ್ನು ವಿಕ್ಷಿಪ್ತಗೊಳಿಸಿಬಿಡುತ್ತದೆ. ಅಮೃತಮತಿಯು ಮನಸ್ಸಿನ ಸಂಕೀರ್ಣತೆ (Mental complex)ಯಿಂದ ಉಂಟಾಗುವ ದೀರ್ಘಕಾಲೀನ ಅಭಿವ್ಯಕ್ತಗೊಳ್ಳುವ ವರ್ತನೆಯೆಂದು ಹೇಳಬಹುದು. ಅದನ್ನು ಆಕೆ ತನ್ನ ಹೆಣ್ಣಿನ ನೆಲೆಯಿಂದಲೇ ಅಭಿವ್ಯಕ್ತಗೊಳಿಸುತ್ತಾಳೆ. ಇಲ್ಲಿ 'ಗಂಡಿನ ಪ್ರೀತಿ'ಯನ್ನು ತನಗೆ ಬೇಕಾದಂತೆ ಆಯ್ಕೆಮಾಡಿಕೊಂಡ ಅಮೃತಮತಿ ತಾನು ಇದೂವರೆಗೂ ಜೀವಿಸಿದ ಒತ್ತಡದಿಂದ ಹೊರಬಂದಂತೆ ಅನಿಸುತ್ತಾಳೆ. ಮನಃಶಾಸ್ತ್ರೀಯ ನೆಲೆಯಲ್ಲಿ ನೋಡುವಾಗ ಲೈಂಗಿಕತೆಯು ವ್ಯಕ್ತಿಯ ಬದುಕಿನ ಅತ್ಯಂತ ಪ್ರಬಲವಾದ ಪ್ರವೃತ್ತಿಯಾಗಿ ಕಾಣುತ್ತದೆ. ಫ್ರಾಯ್ಡ್ ಹೇಳುವಂತೆ ಉಳಿದೆಲ್ಲ ಸೃಜನಶೀಲ, ಆಕ್ರಮಣಶೀಲ, ಸಂವೇದನಾಶೀಲ ಕಾರ್ಯಗಳಿಗೆ ಭಾಗಶಃ ಪ್ರೇರಕಶಕ್ತಿ. ಅಮೃತಮತಿಯು ತನ್ನ ಅಸ್ತಿತ್ವವನ್ನು ಪ್ರತಿಷ್ಠಾಪಿಸಲು ಈ ಮಾರ್ಗದ ಮೂಲಕ ತೆರಳುತ್ತಾಳೆ. ಏಕೆಂದರೆ ಯಶೋಧರನಿಗೆ ಪ್ರತಿಷ್ಠೆಯಾಗಿದ್ದ ರಾಜ ಪದವಿ, ರಾಜ್ಯ ಇವುಗಳ ಜೊತೆ ಸುಂದರವಾದ ಹೆಣ್ಣು ಖಾಸಗಿ ಆಸ್ತಿಯಾಗಿರಬಹುದೇ ವಿನಃ ತನಗೆ ಸರಿಸಮಾನದ ಮನಸ್ಸು, ಭಾವನೆಗಳಿರುವ ಮನುಷ್ಯ ಎಂಬ ಪರಿಗಣನೆ ಇದ್ದಿರಲು ಸಾಧ್ಯವಿಲ್ಲ. ಯಶೋಧರನೇ ಹೇಳುತ್ತಾನೆ. "ನನ್ನ ತೋಳಿನ ಈ ಕರವಾಲವು ವೈರಿ ನರೇಂದ್ರರನ್ನು ಇರಿಯಬೇಕೇ ಹೊರತು ಈ ಕ್ಷುದ್ರರನ್ನು ಇರಿಯಲಾಗದು".[೩೦] ಇದರಿಂದ ಆತ ಆಕೆಯ ಬಗೆಗೆ ಹೊಂದಿರಬಹುದಾದ ದೃಷ್ಟಿಕೋನ ಸ್ಪಷ್ಟವಾಗಿ ಅರ್ಥವಾಗುತ್ತದೆ.

ಮನುಷ್ಯ ಸ್ವಭಾವವನ್ನು ಕುರಿತು ಎರಿಕ್ ಫ್ರಾಂ ಈ ರೀತಿ ಹೇಳುತ್ತಾನೆ. ಮನುಷ್ಯ ಸ್ವಭಾವವು ತಟಸ್ಥವಾದುದು ಅಥವಾ ನಿರ್ಲಿಪ್ತವಾದುದು. ಆದರೆ ಅದು ಒಳಿತೂ ಅಲ್ಲ; ಕೆಡಕೂ ಅಲ್ಲ. ಐತಿಹಾಸಿಕ ಹಾಗೂ ಸಾಮಾಜಿಕ ಸಂದರ್ಭಗಳು ಅವನ ಸ್ವಭಾವವನ್ನು ನಿರೂಪಿಸುತ್ತವೆ. "Man for Himself" ಗ್ರಂಥದಲ್ಲಿ ಎರಿಕ್ ಫ್ರಾಂ ಈ ಕುರಿತು ಸ್ಪಷ್ಟೀಕರಿಸುತ್ತ ಹೇಳಿದ್ದೇನೆಂದರೆ, "Evil has no independent existence, it is the obsense of the good, the result of the failure to realising the life"[೨]

ಅಮೃತಮತಿಯ ತೀರ್ಮಾನವು ಎರಿಕ್ ಫ್ರಾಂ ಹೇಳುವ ಹಾಗೆ ಜೀವನವನ್ನು, ಜೀವನ ಸಂಗಾತಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಸೋತಂತಹ ಗಂಡೊಬ್ಬನ ಮನಸ್ಥಿತಿಯಿಂದ ಉಂಟಾದುದು. ಹೆಣ್ಣೊಬ್ಬಳಲ್ಲಿ ತಾನು ಬೇರೊಬ್ಬರ ವಸ್ತುವಾಗಿ, ಪ್ರತಿಷ್ಠೆಗಾಗಿ ಉಪಯೋಗಸಲ್ಪಡುತ್ತಿದ್ದೇನೆ ಎಂಬ ಅರಿವು ಮೂಡಿದ ಸಂದರ್ಭ ಆಕೆಯ ಮನಸ್ಸಿನ ಒತ್ತಡ ತೀವ್ರತೆಯನ್ನು ಪಡೆದುಕೊಳ್ಳುತ್ತದೆ. ಏಕೆಂದರೆ ಸಾಮಾನ್ಯ ನೆಲೆಯ ಹೆಂಗಸರು ಬದುಕಿನ ಮೂಲ ಪ್ರೇರಣೆಗಳನ್ನು ತೃಪ್ತಿಪಡಿಸುವಲ್ಲಿಯೇ ಬದುಕನ್ನು ಕಳೆಯುತ್ತಾರೆ. ಆದರೆ ಅಮೃತಮತಿಯಂತಹ ಹೆಣ್ಣು ಮೇಲ್ಮಟ್ಟದ ಪ್ರೇರಣೆಗಳ ತೃಪ್ತಿಗಾಗಿ ಹಾತೊರೆಯುತ್ತಾರೆ. ಒಂದು ಬಗೆಯಲ್ಲಿ ಪ್ರೇರಣೆಗಳು ಈಡೇರದ ಅತೃಪ್ತಿ ಇಂತಹವರಲ್ಲಿ ನಕಾರಾತ್ಮಕತೆಯನ್ನು ರೂಪಿಸುತ್ತದೆ.

ಅಮೃತಮತಿಯ ಅತೃಪ್ತಿಯು ಕೇವಲ ದೈಹಿಕ ನೆಲೆಯದ್ದಾಗಿರದೆ ಮಾನಸಿಕ ನೆಲೆಯೇ ಆಕೆಯ ಅತೃಪ್ತಿಯ ಮೂಲ ಸೆಲೆಯಾಗಿದೆ. ವಿಕ್ಷಿಪ್ತಗೊಂಡ ಮನಸ್ಸು ಒಂದು ಕ್ಷಣದಲ್ಲಿ ಎಲ್ಲಾ ಬಗೆಯ ಸೀಮಾರೇಖೆಯನ್ನು ದಾಟುವಂತೆ ಮಾಡಬಲ್ಲದು. ಅಹಂ ಮತ್ತು ಅಸ್ತಿತ್ವದ ಮನೋಸ್ಥಿತಿಗಳು ದ್ವಂದ್ವದಲ್ಲಿ ಇದ್ದಾಗ ಅವು ಒತ್ತಡವನ್ನು ಉಂಟುಮಾಡುತ್ತವೆ. ಈ ಒತ್ತಡವು ಹಿಂದೆ ಮುಂದೆ ಯೋಚಿಸದೇ ಕಾರ್ಯ ಪ್ರವೃತ್ತರಾಗುವಂತೆ ಮಾಡಿಬಿಡುತ್ತದೆ. ಯಶೋಧರನೊಂದಿಗಿನ ಪ್ರತೀ ಕ್ಷಣವೂ ಅವಳಿಗೆ ಈ ಬಗೆಯ ಒತ್ತಡವನ್ನೇ ಉಂಟುಮಾಡುತ್ತಿರಬೇಕು. ಆದ್ದರಿಂದಲೇ ಈ ಒತ್ತಡದ ಶಮನಕ್ಕೆ ತನ್ನದೇ ಆದ ಆಯ್ಕೆ ಮಾಡಿಕೊಳ್ಳುತ್ತಾಳೆ. ಆದರೂ ಆಕೆಯ ಒತ್ತಡ ಆಕೆಯ ಆಯ್ಕೆಯಿಂದ ಪೂರ್ಣವಾಗಿ ಶಮನಗೊಳ್ಳುವುದಿಲ್ಲ. ಏಕೆಂದರೆ ಆಕೆ ಕೇವಲ ದೈಹಿಕ ವಾಂಛೆಗಾಗಿ ಪರಪುರುಷನನ್ನು ಓಲೈಸುವುದಾಗಿದ್ದರೆ ಅಷ್ಟಾವಂಕನಂತವನನ್ನು ಬಯಸುವ ಕಾರಣವೇ ಇರುತ್ತಿರಲಿಲ್ಲ. ಯಶೋಧರನ ಪ್ರತಿಷ್ಠೆಯ ವಸ್ತು ತಾನು ಎಂಬುದು ಆಕೆಯ ಅಸ್ತಿತ್ವ ಪ್ರಜ್ಞೆಗೆ, ಆತ್ಮಗೌರವಕ್ಕೆ ಘಾಸಿಯನ್ನು ಉಂಟುಮಾಡಿರಲೇಬೇಕು. ಯಶೋಧರನಂತಹ ರಾಜನೆಲ್ಲಿ? ಕುರೂಪಿ, ಕೆಳ ಅಂತಸ್ತಿನವನಾದ ಅಷ್ಟಾವಂಕನೆಲ್ಲಿ? ಆದರೂ ಆಕೆಯ ಆಯ್ಕೆ ಅಷ್ಟಾವಂಕ. ಈತನನ್ನು ಕಾಮಿಸುವ, ಪ್ರೀತಿಸುವ, ಮೂಲಕ ಯಶೋಧರನ ಪ್ರತಿಷ್ಠೆಗೆ, ಆತ್ಮಗೌರವಕ್ಕೆ ಪೆಟ್ಟುಕೊಡುವ ಆಕೆಯ ಪ್ರಯತ್ನ ಎಂಬುದಾಗಿ ಅರ್ಥಮಾಡಿಕೊಳ್ಳಬಹುದು. ಆದರೆ ಇಷ್ಟಕ್ಕೆ ಆಕೆಯ ಮನಸ್ಸು ಶಮನಗೊಳ್ಳುವುದಿಲ್ಲ.

ಅಷ್ಟಾವಂಕ ಮತ್ತು ಅಮೃತಮತಿಯ ನಡುವಿನ ಸಂಬಂಧ ಕಣ್ಣಾರೆ ಕಂಡರೂ ಯಶೋಧರ ಅದಕ್ಕೆ ಪ್ರತಿಕ್ರಿಯಿಸುವುದಿಲ್ಲ. ಹಾಗೆಯೇ ಅಮೃತಮತಿಯ ಬಗೆಗೆ ಕ್ರೋಧಗೊಳ್ಳುವುದಿಲ್ಲ, ಅದನ್ನು ಪ್ರಶ್ನಿಸುವುದಿಲ್ಲ, ವಿಷಯವನ್ನು ಬಹಿರಂಗಗೊಳಿಸುವುದಿಲ್ಲ. ಇದು ಅಮೃತಮತಿಯ ಮನಸ್ಸು ಅತ್ಯಂತ ನಿಷ್ಠುರ ನಿಲುವನ್ನು ತಾಳುವಂತೆ ಮಾಡುತ್ತದೆ. ಏಕೆಂದರೆ ಇವರಿಬ್ಬರ ಸಂಬಂಧವು ಬಹಿರಂಗಗೊಂಡಿದ್ದರೆ ಯಶೋಧರನ ಪ್ರತಿಷ್ಠೆಗೆ ಪೆಟ್ಟು ಬೀಳುತ್ತಿತ್ತು. ಬಹುಶಃ ಈ ರೀತಿಯಲ್ಲಾದರೂ ಆತನ ಅಹಂಗೆ ಪೆಟ್ಟು ಬಿದ್ದಿದ್ದರೆ ಮನಸ್ಸಿನ ಒತ್ತಡ ಶಮನಗೊಳ್ಳುತ್ತಿತ್ತು. ಹಾಗಾಗಿಯೇ ಅದನ್ನು ಬಹಿರಂಗಗೊಳಿಸದೆ, ಜೊತೆಗೆ ತನ್ನ ಬಗೆಗೆ ಅಹಂ, ಅಸಹನೆ ಯಾವೊಂದನ್ನೂ ತೋರ್ಪಡಿಸಿ ಕೊಳ್ಳದೆ ಯಶೋಧರ ಆಕೆಗೆ ಮತ್ತಷ್ಟು ಕುರೂಪನಾಗಿ, ಸ್ವಾರ್ಥಿಯಾಗಿ ಕಾಣುತ್ತಾನೆ. ಬಹುಶಃ ಈ ಸಂದರ್ಭವೇ ಅಮೃತಮತಿಯ ಮನಸ್ಸು ಅತಿರೇಕಕ್ಕೆ ಹೋಗಲು ಕಾರಣವಾಗುತ್ತದೆ. ಆಕೆಯ ಮನಸ್ಸಿನ ಸಂಘರ್ಷ, ಆತನೊಂದಿಗೆ ಸಂವಾದಗೊಳ್ಳುವ ಮೂಲಕ ತನ್ನ ಅಸ್ತಿತ್ವದ, ಆತ್ಮಗೌರವದ ಚ್ಯುತಿಗೆ ಉತ್ತರ ಕಂಡುಕೊಳ್ಳಲು ಹವಣಿಸುತ್ತಿರುತ್ತದೆ. ಆದರೆ ಇಲ್ಲಿ ಈ ಬಗೆಯ ಸಂದರ್ಭವನ್ನೇ ಯಶೋಧರ ಉಂಟುಮಾಡುವುದಿಲ್ಲ. ಯಶೋಧರನ ತಾಯಿಗೆ ವಿಷಯ ತಿಳಿದರೂ ಅಲ್ಲಿಂದಲೂ ಯಾವುದೇ ಪ್ರತಿಕ್ರಿಯೆ ಬರುವುದಿಲ್ಲ. ಈ ಸಂದರ್ಭ ಆಕೆ ಕಂಗೆಟ್ಟು ಹೋಗುತ್ತಾಳೆ. ಮನಸ್ಸು ಪ್ರಕ್ಷುಬ್ಧಗೊಳ್ಳುತ್ತದೆ. ಆಗ ಅವರಿಬ್ಬರನ್ನು ಕೊಲ್ಲುವ ಮಟ್ಟಕ್ಕೆ ಹೋಗುತ್ತಾಳೆ. ನಂತರವೂ ಆತನ ಪ್ರತಿಷ್ಠೆಗೆ ಕುಂದುಂಟಾಗುವಂತೆ ಅಷ್ಟಾವಂಕನೊಂದಿಗೆ ಸಂಬಂಧವನ್ನು ಪ್ರಾಮಾಣಿಕ ನೆಲೆಯಲ್ಲಿ ಮುಂದುವರೆಸಿಕೊಂಡು ಹೋಗುತ್ತಾಳೆ.

ಅಮೃತಮತಿಯ ಪಾತ್ರವನ್ನು ಯಾವುದೇ ಆಯಾಮದಿಂದ ನೋಡಿದರೂ ಕಾಮಕೇಂದ್ರಿತ ನಡವಳಿಕೆಯಾಗಿ ಕಂಡುಬರುವುದಿಲ್ಲ. ಇದು ಅಹಂ ಕೇಂದ್ರಿತ ವ್ಯಕ್ತಿತ್ವಗಳ ಸಂಘರ್ಷ. ಅಸ್ತಿತ್ವ ಪ್ರಜ್ಞೆ, ಆತ್ಮಗೌರವಗಳು ತನ್ನ ಸುಪ್ತ ಮನಸ್ಸಿನ ಸಂಘರ್ಷಗಳೊಂದಿಗೆ ನಡೆಸಿದ ವಿಕ್ಷಿಪ್ತತೆಯ ನಕಾರಾತ್ಮಕ ಪ್ರತಿಕ್ರಿಯೆಯಾಗಿ ತೋರುತ್ತದೆ. ಕವಿಯ ಉದ್ದೇಶ ಅಹಿಂಸಾ ಧರ್ಮದ ಮಹತ್ವವನ್ನು ಎತ್ತಿ ಹಿಡಿಯುವುದಾಗಿದ್ದರೂ ತನಗರಿವಿಲ್ಲದೆ ಹೆಣ್ಣೊಬ್ಬಳ ಮಾನಸಿಕ ತುಮುಲವನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದೆ. ಈ ಬಗೆಯ ಸೃಜನಶೀಲ ಕ್ರಿಯೆಯನ್ನು ಮನೋವಿಜ್ಞಾನ ಅನೇಕ ಚೌಕಟ್ಟುಗಳಲ್ಲಿ ಗಂಭೀರವಾಗಿ ವಿಶ್ಲೇಷಿಸುತ್ತದೆ ಅಥವಾ ಪರಿಶೀಲಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಮಾನಸಿಕ ನೆಲೆಯನ್ನು ಗುರುತಿಸುವುದು ಸಾಧ್ಯವಾದರೆ ಆ ಪಾತ್ರದ ವರ್ತನೆಯ ಬಗೆಗೆ ಬೇರೆ ಬೇರೆ ದೃಷ್ಟಿಕೋನಗಳಿಂದ ಭಿನ್ನವಾಗಿ ಅರ್ಥೈಸಲು, ಗ್ರಹಿಸಲು, ಸಾಧ್ಯವಾಗುತ್ತದೆ.

ಪ್ರತಿಯೊಬ್ಬ ಮನುಷ್ಯ ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಅಂತಹ ಸ್ವಾತಂತ್ರ್ಯದ ಇತಿಮಿತಿಗಳೆರಡಕ್ಕೂ ಅವನ ಬದುಕಿನ ಪರಿಸರ ಮತ್ತು ಸಾಮಾಜಿಕ, ರಾಜಕೀಯ, ಆರ್ಥಿಕ ಪರಿಸ್ಥಿತಿಗಳು ಕಾರಣ ವಾಗುತ್ತವೆ ಎಂಬುದು ಸಾಮಾನ್ಯ ತಿಳುವಳಿಕೆ. ಇಂತಹ ಪರಿಸ್ಥಿತಿಯಲ್ಲಿ ಸಾಧ್ಯವಾದ ಮಟ್ಟಿಗೆ

ವಿವೇಚನೆಯನ್ನು ಉಪಯೋಗಿಸಿಯೇ ಮನುಷ್ಯ ಹೆಜ್ಜೆ ಇಡುತ್ತಾನೆ. ಆ ವಿವೇಚನೆಗಳು ಆತನ ಮನೋವಲಯದ ನಿಯಂತ್ರಣಕ್ಕೊಳಪಟ್ಟಿರುತ್ತವೆ. ತನಗೆ ಅನಿಸಿದ್ದನ್ನೆಲ್ಲಾ ಮಾಡುವ, ಸಿಕ್ಕಿದ ಕಡೆಗೆ ಓಡುವ, ಬದುಕನ್ನು ನಿಯಂತ್ರಿಸುವ ಬಹುತೇಕ ಎಲ್ಲಾ ನಿಯಂತ್ರಣದಿಂದ ಬಿಡುಗಡೆ ಹೊಂದಲು ಬಯಸುವ ಮನಸ್ಸು ತನಗರಿವಿಲ್ಲದಂತೆ ವ್ಯಕ್ತಿಯಲ್ಲಿ ಒಡಮೂಡುವ ಅನೇಕ ಸಂದರ್ಭಗಳು 'ಪೂರ್ವನಿಶ್ಚಿತ', 'ವಿಧಿಯಾಟ', 'ವಿಧಿಲಿಖಿತ' ಎಂಬ ಸಾಂಪ್ರದಾಯಿಕ ಪರಿಕಲ್ಪನೆಗಳಿಂದಾಚೆ ವಾಸ್ತವದ ಪ್ರತಿಬಿಂಬವೇ ಆಗಿರುತ್ತದೆ. ಆಕರ್ಷಣೆ, ನಿರಾಕರಣೆಗಳು ಆಕಸ್ಮಿಕವಾದವುಗಳಲ್ಲ. ಅದು ಬದುಕಿನ ಹಲವು ಅನುಭವಗಳಿಗೆ ಪ್ರತಿಸ್ಪಂದಿಸುವ ಮನುಷ್ಯನ ವೈಯಕ್ತಿಕ ಗುಣ.

ಅಮೃತಮತಿಯ ಪ್ರಸಂಗವನ್ನು ಕುರಿತ ವಿಮರ್ಶಕರ ಅಭಿಪ್ರಾಯಗಳು ಕೆಳಕಂಡಂತಿವೆ

ಅಮೃತಮತಿ ಜಾರುವುದಕ್ಕೆ ಸಂಗೀತ ಒಂದು ನೆಪ ಮಾತ್ರವಲ್ಲ; ಅದೇ ಮುಖ್ಯಕಾರಣ. ಸಂಗೀತದ ಪ್ರಭಾವ ಅಷ್ಟು ಪ್ರಬಲವಾದುದು. (ತನ್ನ ಹೃದಯವನ್ನು ಸೋಕಿದ ಮಧುರ ಗಾನದ ಸವಿಗೆ ಸೋತು ಅಮೃತಮತಿ 'ಮುಟ್ಟಿದ ಮನಮಂ ತೊಟ್ಟನೆ ಪಸಾಯದಾನಂಗೊಟ್ಟಳ್' ಇತ್ಯಾದಿ)

ಅಮೃತಮತಿಯ ಪ್ರಣಯ ಒಂದು ವಿಪರೀತ ಮನೋವಿಕಾರ.

ಅಮೃತಮತೀಯ ವಿಚಿತ್ರ ನಡವಳಿಕೆಯು ವಿಕೃತಕಾಮ ಸಿದ್ಧಾಂತದ ಒಂದು ದೃಷ್ಟಾಂತ.

ಅಮೃತಮತಿಯು ಯಶೋಧರನನ್ನು ಮನಸ್ಸಿಲ್ಲದೆ ಮದುವೆಯಾಗಿದ್ದಳು.

ಅಮೃತಮತಿಯ ಪಾತ್ರವು ಲೋಕ ಗ್ರಹಿಕೆಯ ಉಪಕ್ರಮವಾಗಿ ಮೂಡಿರುವ ಜೀವನ ದೃಷ್ಟಿಯ ನೆಲೆಯಲ್ಲಿ ನೋಡುವ ಬದುಕಿನ ಬಾಹ್ಯ ರೂಪದ ಗ್ರಹಿಕೆ. ಆದರೆ ಒಟ್ಟಾರೆ ಬದುಕಿನಲ್ಲಿ ಮನಸ್ಸಿನ ರಹಸ್ಯಮಯತೆಯನ್ನೂ, ಮನುಷ್ಯನ ಅವಸ್ಥೆಯಲ್ಲಿನ ಅಪರಿಹಾರ್ಯತೆಯನ್ನು ತಾತ್ವಿಕವಾಗಿ ಗ್ರಹಿಸಿದಾಗ ವ್ಯಕ್ತಿವಿಶಿಷ್ಟ ಅನುಭವಗಳನ್ನು ಅಮೃತಮತಿಯ ಪಾತ್ರದ ಮೂಲಕ ಬಿಂಬಿಸಲು ಹೊರಟದ್ದು ಸ್ಪಷ್ಟವಾಗುತ್ತದೆ. ಇಲ್ಲಿ ಆಕಸ್ಮಿಕ, ಅನಿರೀಕ್ಷಿತ ಎಂಬುದಕ್ಕಿಂತಲೂ 'ಪ್ರಭುತ್ವ' 'ವ್ಯವಸ್ಥೆ' ಈ ನೆಲೆಗಳಿಂದ ಗಮನಿಸಿದಾಗ ಆಯಾ ಪಾತ್ರದ ಆಂತರ್ಯ ಮತ್ತು ಪಾತ್ರದ ವರ್ತನೆಯಿಂದ ಹುಟ್ಟಿಬರುವ ಘಟನೆಗಳು ಹೆಚ್ಚು ಮಹತ್ವವೆನಿಸುತ್ತವೆ. ಪ್ರೇಮ-ಕಾಮಗಳ ತೀವ್ರತೆ ಮತ್ತು ಒತ್ತಡಗಳು ಕೇವಲ ಒಂದು ಸಮಾಜ, ಸಂಸ್ಕೃತಿಯ ನೈತಿಕ ಮೌಲ್ಯಗಳಿಗೆ ಸಮ್ಮತವಾಗದ 'ವಿಕಾರ'ಗಳು, ಮನಸ್ಸಿನ ಸಂಘರ್ಷಗಳು ಮತ್ತು ಅಂತಿಮವಾಗಿ 'ಶಮನ'ಗೊಳ್ಳುವ ಸ್ಥಿತಿಯನ್ನು ಮಾತ್ರವೇ ಮೇಲ್ಕಂಡ ಅಭಿಪ್ರಾಯಗಳ ಮೂಲಕ ಸಮರ್ಥಿಸಲಾಗಿದೆ.

ದಾಂಪತ್ಯ ಪ್ರೇಮದ ಅಭಿವ್ಯಕ್ತಿಯಲ್ಲಿ ಲೈಂಗಿಕ ಕಾಮದ ಪಾತ್ರ ಎಷ್ಟೇ ಇದ್ದರೂ ಅವೆರಡೂ ಒಂದೇ ಅಲ್ಲ ಎಂಬುದು ಸ್ಪಷ್ಟ. ಕಾಮ ದಾಂಪತ್ಯದ ಒಂದು ಅಂಶ ಮತ್ತು ಅತಿ

ಮಹತ್ವದ್ದೂ ಕೂಡಾ. ಆದರೆ ಕಾಮವೇ ಪ್ರೇಮವಲ್ಲ. ಕಾಮದ ಕಾವು ಮುಗಿದ ಮೇಲೂ ಒಟ್ಟಾಗಿ ಬಾಳುವ, ವೃದ್ಧ ದಾಂಪತ್ಯದ ಅನುಬಂಧಗಳು ಎಲ್ಲವೂ ದಾಂಪತ್ಯದಲ್ಲಿ ಬೇರೆಯದೇ ಆಯಾಮವೊಂದಿದೆ ಎಂಬುದನ್ನು ಪ್ರತಿಪಾದಿಸುತ್ತದೆ. ಅಮೃತಮತಿಯ ಪ್ರವೃತ್ತಿಯನ್ನು ವಿವಾಹವೆಂಬ ಸಂಸ್ಥೆ ಮತ್ತು ಕಾಮದ ನಡುವಿನ ಸಾಮರಸ್ಯ ಕುರಿತ ಕಲ್ಪನೆಯಿಂದಲೇ ಅರ್ಥೈಸಲಾಗುತ್ತದೆ. ಕುವೆಂಪು ಅವರು ಅಭಿಪ್ರಾಯಪಟ್ಟಂತೆ ಕೇವಲ 'ಕಾಮ ವಿಕಾರ' ಎಂಬುದು ಬಹಳ ಯಾಂತ್ರಿಕ ಗ್ರಹಿಕೆ ಎಂದೇ ಅನಿಸುತ್ತದೆ. ಪ್ರೇಮ ರಹಿತವಾದ ಕಾಮ ಇಬ್ಬರು ವ್ಯಕ್ತಿಗಳ ನಡುವಣ ಸೇತುವೆಯಾಗಲಾರದು. ಕಾಮ, ಪ್ರೇಮ ದಾಂಪತ್ಯದಲ್ಲಿ ಒಂದು ಅವಶ್ಯಕತೆ ಮತ್ತು ಇವುಗಳಂತೆಯೇ ಸ್ವಾತಂತ್ರ್ಯವು ಅತ್ಯಂತ ಮಹತ್ವದ ಅವಶ್ಯಕತೆ. ಸ್ವಾತಂತ್ರ್ಯ ಎಂಬುದು ಪರಸ್ಪರ ಗೌರವದ ಮೂಲಕ ಅಸ್ತಿತ್ವಕ್ಕೆ ಧಕ್ಕೆಯಾಗದಂತಹ ಸ್ಥಿತಿ. ಪತಿ ಅಥವಾ ಪತ್ನಿ ಇಬ್ಬರಲ್ಲಿ ಒಬ್ಬರಿಂದ ಈ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗುತ್ತದೆ ಎಂದೆನಿಸಿದ ಕ್ಷಣವೇ ಅಲ್ಲಿ ದ್ವೇಷ ಹುಟ್ಟುತ್ತದೆ. ಯಶೋಧರನಿಗೆ ಅಮೃತಮತಿಯಲ್ಲಿದ್ದ ಪ್ರೇಮ ಸ್ವಾಮ್ಯತನ, ಪೊಸೆಸಿಂಗ್ ಒಬ್ಬರನ್ನೊಬ್ಬರು ಹೊಂದಲು, ಅವರ ಮೇಲೆ ಯಜಮಾನತ್ವ ಸ್ಥಾಪಿಸಲು ಪ್ರಯತ್ನ ಮಾಡಿದಂತೆ ತೋರುತ್ತದೆ. ಇನ್ನೊಬ್ಬರ ಮೇಲೆ ಯಜಮಾನಿಕೆ ಹೇರುವ ಪ್ರಯತ್ನ ಮಾಡಿದಾಗ ಇದನ್ನು ಮತ್ತೊಬ್ಬರೂ ಮಾಡುತ್ತಾರೆ. ಅವರೂ ಇನ್ನೊಬ್ಬರ ಮೇಲೆ ಸ್ವಾಮ್ಯವನ್ನು ಪಡೆಯುವ ಪ್ರಯತ್ನ ಮಾಡುತ್ತಾರೆ. ಈ ಸ್ವಾಮ್ಯತೆಯ ಅರ್ಥವೇನು? ಒಬ್ಬರನ್ನು ಇನ್ನೊಬ್ಬರು ಹೊಂದುವುದು, ಸ್ವಾಮ್ಯ ಸ್ಥಾಪಿಸುವುದು ಎಂಬುದರ ಅರ್ಥ ವ್ಯಕ್ತಿಯನ್ನು ವಸ್ತುವಾಗಿ ಬದಲಾಯಿಸುವುದು. ಆಗ ನೀವು ಅವರನ್ನು ಮ್ಯಾನಿಪ್ಯುಲೇಟ್, ಬೇಕಾದಂತೆ ಬಳಸುವುದು, ಆಗ ಆ ವ್ಯಕ್ತಿಗೆ ಯಾವುದೇ ಸ್ವಾತಂತ್ರ್ಯ ಇರುವುದಿಲ್ಲ. ಇಂತಹ ಸಂದರ್ಭಗಳು ಗ್ರಹಿಕೆಗೆ ನಿಲುಕುವುದು ಆಂತರ್ಯದ ಈ ನಿಟ್ಟಿನ ಸಂಘರ್ಷವನ್ನು ಅರ್ಥಮಾಡಿಕೊಂಡಾಗ ಮಾತ್ರ ಸಾಧ್ಯವಾಗುತ್ತದೆ. ಅಮೃತಮತಿಯು ಅಷ್ಟಾವಂಕನೊಂದಿಗೆ ಬೆಳೆಸುವ ಸ್ನೇಹವು ಮಾನಸಿಕ ಜಗತ್ತು ಕಾರ್ಯ-ಕಾರಣ ನಿಯಮದಿಂದ ನಿಯಂತ್ರಿತವಾಗಿದೆ ಎಂಬುದನ್ನೇ ಸಮರ್ಥಿಸುತ್ತದೆ. ಇಲ್ಲಿ 'ಸಂಬಂಧರಹಿತ ಸಂಪರ್ಕ'ದ ನಿಯಮ ಕಾರ್ಯ ನಿರ್ವಹಿಸಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಒಂದಕ್ಕೊಂದು ಸಂಬಂಧವೇ ಇಲ್ಲದ ಇಬ್ಬರು ವ್ಯಕ್ತಿಗಳು, ಕಾರ್ಯ ಕಾರಣವಿಲ್ಲದೆ ಒಟ್ಟಾಗುತ್ತಾರೆ. ಅಷ್ಟಾವಂಕನು ಕೊಳಲನ್ನು ನುಡಿಸುತ್ತಾನೆ. ಅದನ್ನು ಕೇಳಿದ ಅಮೃತಮತಿಯ ಮನಸ್ಸಿನಲ್ಲಿ ಜೀವನಕ್ಕೊಂದು ಹೊಸ ಅರ್ಥ ಹೊಳೆಯುತ್ತದೆ. ಆಕೆಯು ಆತನೊಂದಿಗೆ ಸೇರಿಬಿಡುತ್ತಾಳೆ. ಎಲ್ಲಿ ಕಾರ್ಯಕಾರಣವನ್ನು ಮೀರಿದ್ದಿದೆಯೋ ಅಲ್ಲಿ 'ಸಂಬಂಧ ರಹಿತ ಸಂಪರ್ಕ' ಸಂಭವಿಸುತ್ತದೆ.

ಮನುಷ್ಯಾನುಭವದ ನೆಲೆಯಲ್ಲೇ ಹುಟ್ಟುವ ವರ್ತನೆಗಳು ಮನುಷ್ಯ-ಮನುಷ್ಯನ ನಡುವಿನ ಸಂಬಂಧಗಳು ಯಾವ ಕ್ಷಣದಲ್ಲಾದರೂ ಬದಲಾಗುವ, ಭಾವಾಲೋಕಗಳು ಸೃಷ್ಟಿಯಾಗುವ ಆ

ಮೂಲಕ ತನ್ನ ಬದುಕಿನಲ್ಲಿ ಘಟಿಸಿದ ಪ್ರತಿಯೊಂದನ್ನು ನಿರಾಕರಿಸುವ ಮನುಷ್ಯ ಮನಸ್ಸಿನ ವ್ಯಾಪಾರಗಳ ವಿಸ್ಮಯತೆಯನ್ನು ಅಮೃತಮತಿಯ ಪಾತ್ರವು ಕಟ್ಟಿಕೊಡುತ್ತದೆ. ಪ್ರೇಮ-ಕಾಮಗಳ ತೀವ್ರತೆಗಿಂತ ಅಸ್ತವ್ಯಸ್ತಗೊಂಡ ಸ್ತ್ರಿ ಮನಸ್ಸೊಂದು ಸಮಾಜ, ಸಂಸ್ಕೃತಿಯ ನೈತಿಕ ಮೌಲ್ಯಗಳಿಗೆ ಸಮ್ಮತವಾಗದ ಬದುಕಿನೊಂದಿಗೆ ಸದಾ ಸಂಘರ್ಷಕ್ಕಿಳಿದು ಅಂತಿಮವಾಗಿ ಶಮನಗೊಳ್ಳದೇ ಎಲ್ಲರನ್ನೂ ಕಾಡುತ್ತಾಳೆ. ಕಾಲ ಬದಲಾದರೂ ಆ ಪಾತ್ರದ ಬಗೆಗೆ ಅಂತಿಮ ಮತ್ತು ಸ್ಪಷ್ಟ ನಿಲುವೊಂದನ್ನು ತಾಳಲು ಸಾಧ್ಯವಾಗದೇ ಇರುವುದು ಕೂಡಾ ಅಮೃತಮತಿ ಸ್ತ್ರೀ ಕುಲದ ಅನೇಕ ತುಡಿತಗಳಿಗೆ ಕಾರಣವನ್ನು, ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಲು ಪ್ರೇರೇಪಿಸುತ್ತಾಳೆ.

ಕೊನೆಟಿಪ್ಪಣಿ

೧. ಹಳದಿಮೀನು, ಅನು, ಎ.ಕೆ.ರಾಮಾನುಜನ್, ಮೂಲ. ಶೌರಿ, ಪುಟ, ೩೫

೨. ಸಾಹಿತ್ಯ ವಿಮರ್ಶೆ, ಆಧುನಿಕ ವಿಮರ್ಶಾ ಪ್ರಸ್ಥಾನಗಳು, ಸಮಾಜಕೇಂದ್ರಿತ ವಿಮರ್ಶೆ, ಲೇ. ಸಿ.ಎನ್. ರಾಮಚಂದ್ರನ್. ಪುಟ, ೮೧

೩. ಮನಸ್ಸು ಇಲ್ಲದ ಮಾರ್ಗ, ಲೇ.- ಮೀನಗುಂಡಿ ಸುಬ್ರಮಣ್ಯ. ಪುಟ, ೫೪

೪. ಸಾಹಿತ್ಯ ವಿಮರ್ಶೆ – ಲೇ. ಸಿ.ಎನ್. ರಾಮಚಂದ್ರನ್. ಪುಟ, ೧೭೬.

೫. ಹಳದಿಮೀನು. ಅನು, ಎ.ಕೆ.ರಾಮಾನುಜನ್, ಮೂಲ. ಶೌರಿ, ಪುಟ, ೩೫

೬. ಖ್ಯಾತ ಶಿಕ್ಷಣ ಮನೋವಿಜ್ಞಾನಿಗಳು . ಮಹಾಬಲೇಶ್ವರರಾವ್. ಪುಟ, ೫೫

7. Aerlport.G.W 1937.P.48

8. Hurlock E.B.1979.P.6

೯. ಹಳದಿಮೀನು, ಅನು, ಎ.ಕೆ.ರಾಮಾನುಜನ್, ಮೂಲ. ಶೌರಿ, ಪುಟ, ೨೧

೧೦.ಹಳದಿಮೀನು, ಅನು, ಎ.ಕೆ.ರಾಮಾನುಜನ್, ಮೂಲ. ಶೌರಿ, ಪುಟ, ೨೦

೧೧.ಕಟಾಂಜನ – ಸಮಗ್ರ ಸಾಹಿತ್ಯ – ಪ್ರಸ್ತಾವನೆ, ಸಂ.ಎಂ.ಜಿ ಹೆಗಡೆ, ಪುಟ, ೧೯

೧೨.ಹಳದಿಮೀನು, ಅನು, ಎ.ಕೆ.ರಾಮಾನುಜನ್, ಮೂಲ. ಶೌರಿ, ಪುಟ, ೨೦

೧೩.ಭೌತವಾದೀಯ ಚಿಂತನೆಗಳು. ಲೇ. .ಕೆ.ಎಲ್.ಗೋಪಾಲಕೃಷ್ಣಯ್ಯ. ಪುಟ, ೨೯

೧೪.ಶಕ್ತಿ ಶಾರದೆಯ ಮೇಳ. ಡಿ.ಆರ್. ನಾಗರಾಜ್. ಪುಟ, ೨೪೬

೧೫.ಮನಸ್ಸು ಎಂದರೇನು – ಅನು. ಪಿ.ವಿ. ನಾರಾಯಣ. ಪುಟ, ೧೦೬

೧೬.ದಿ ಸೆಕೆಂಡ್ ಸೆಕ್ಸ್. ಸಿಮೋನ್ ದಿ ಬೋವಾ. ಅನು, ಎಚ್.ಎಸ್. ಶ್ರೀಮತಿ. ಪುಟ,೫

೧೭.ಹಯವದನ. ಲೇ. ಗಿರೀಶ್‌ಕಾರ್ನಾಡ್. ಪುಟ, ೨೪

೧೮.ಹಯವದನ. ಲೇ. ಗಿರೀಶ್‌ಕಾರ್ನಾಡ್. ಪುಟ, ೨೫

೧೯.ಹಯವದನ. ಲೇ. ಗಿರೀಶ್‌ಕಾರ್ನಾಡ್. ಪುಟ, ೨೬

೨೦.ಹಯವದನ. ಲೇ. ಗಿರೀಶ್‌ಕಾರ್ನಾಡ್. ಪುಟ, ೫೬

೨೧.ಏಕ–ಅನೇಕ. ಲೇ. ಎಚ್. ಶಶಿಕಲಾ. ಪುಟ, ೩೦೨

೨೨.ಪ್ರೀತಿಸುವುದೆಂದರೆ,. ಎರಿಕ್‌ಫ್ರಾಂ, ಪುಟ, ೬೮

೨೩.ಹಯವದನ. ಲೇ. ಗಿರೀಶ್‌ಕಾರ್ನಾಡ್. ಪುಟ, ೨೬

೨೪.ಈಡೀಪಸ್ ಕಾಂಪ್ಲೆಕ್ಸ್, ಲೇ. . ಎಂ. ಬಸವಣ್ಣ. ಪುಟ, ೫೮

೨೫.ಸೃಜನಶೀಲತೆ ಮತ್ತು ನಾನು, ಲೇ. ಯಶವಂತ ಚಿತ್ತಾಲ. ಪುಟ, ೭೯

೨೬.ಯಶೋಧರ ಚರಿತೆ, ಜನ್ನ. ಪುಟ, ೨೮–೩೨

೨೭.ಮನಸ್ಸು ಇಲ್ಲದ ಮಾರ್ಗ, ಲೇ. ಮೀನಗುಂಡಿ ಸುಬ್ರಮಣ್ಯ. ಪುಟ, ೫೮.

೨೮.ಇಲ್ಲಿಂದ ಮುಂದೆಲ್ಲಿಗೆ, ಲೇ. ವೀಣಾ ಶಾಂತೇಶ್ವರ. ಪುಟ, ೪೦

29. Auerback, Nina, `woman and the Demon: " The life of a Victorian myth", Cambridge, Mass; Harvard university press, 1982

೩೦.ಯಶೋಧರ ಚರಿತೆ, ಜನ್ನ. ಪುಟ, ೨೮

೩೧.ದಿ ಸೆಕೆಂಡ್ ಸೆಕ್ಸ್. ಸಿಮೋನ್ ದಿ ಬೋವಾ. ಅನು, ಎಚ್.ಎಸ್. ಶ್ರೀಮತಿ. ಪುಟ, ೩೪೮

32. Man for himself, ಎರಿಕ್ ಫ್ರಾಂ. ಪುಟ, ೨೧೮

ಅಧ್ಯಾಯ : ಐದು

ಪುರುಷ ಪಾತ್ರಗಳ ಅಧ್ಯಯನ

ಅಧ್ಯಾಯ : ಐದು

ಪುರುಷ ಪಾತ್ರಗಳು

ಯಶೋಧರ

ಒಬ್ಬ ವ್ಯಕ್ತಿಯನ್ನು ಸಾಮಾನ್ಯವಾಗಿ ವಿಶ್ಲೇಷಿಸುವ ಬಗೆಯಾದರೂ ಯಾವುದು? ವ್ಯಕ್ತಿಯನ್ನು ಆತನ ಭೌತಿಕ ಶರೀರದ ಮೂಲಕ ಅರ್ಥಮಾಡಿಕೊಳ್ಳಲಾಗುವುದಿಲ್ಲ. ಹಾಗೆಯೇ ಆತನ ಆಹಾರದ ಅವಶ್ಯಕತೆ, ಅಧಿಕಾರ ಸ್ಥಾಪಿಸುವುದರ ಅವಶ್ಯಕತೆಯಂತಹ ಮೂಲ ಪ್ರವೃತ್ತಿಗಳು ಅವನನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆಯೇ ಎಂದು ಕೇಳಿದರೆ ಅದೂ ಸಾಧ್ಯವಿಲ್ಲ ಎಂದೇ ಹೇಳಬಹುದು. ಆದರೆ ಆ ವ್ಯಕ್ತಿಯ ಜೀವನದ ರೀತಿ, ಅವನು ಇತರರೊಡನೆ ಹೊಂದಿರುವ ಸಂಬಂಧಗಳು, ಆತನನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುವುದು ಎಂಬುದಂತೂ ಸತ್ಯ. ಆದರೂ ಇವೆಲ್ಲವೂ ಬಾಹ್ಯ ನೋಟಕ್ಕೆ ಸೀಮಿತವಾಗಿಬಿಡುವ ಸಾಧ್ಯತೆಗಳು ಇವೆ. ಹಾಗಾದರೆ ವ್ಯಕ್ತಿಯ ಅಂತರಂಗವನ್ನು ಅರ್ಥಮಾಡಿಕೊಳ್ಳುವ ಬಗೆಯಾದರೂ ಯಾವುದು? ಎಂಬ ಪ್ರಶ್ನೆಯ ಮೂಲಕ ಜನ್ನ ರಚಿಸಿದ 'ಯಶೋಧರ ಚರಿತ' ಕಾವ್ಯದ ಯಶೋಧರನನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಭಾರತೀಯ ಸಮಾಜದ ಮೇಲ್ವರ್ಗದ ಪುರುಷನೊಬ್ಬನ ಪ್ರತಿನಿಧಿಯಾಗಿ ಒಂದೆಡೆ ಯಶೋಧರ ಕಂಡುಬಂದರೆ, ಮತ್ತೊಂದೆಡೆ ಮೇಲ್ವರ್ಗದ ಅಧಿಕಾರ, ಅಂತಸ್ತು, ಪ್ರತಿಷ್ಠೆಗಳ ಒಟ್ಟು ಪ್ರತಿನಿಧಿಯೆಂಬಂತೆ ಕಂಡುಬರುತ್ತಾನೆ.

ರಾಜ ಎಂಬುದನ್ನು ಒತ್ತಟ್ಟಿಗಿರಿಸಿ ನೋಡುವುದಾದಲ್ಲಿ ವಿವಾಹಿತ ಪುರುಷನೊಬ್ಬನ ಚಟುವಟಿಕೆ, ಅವನ ಸ್ವಭಾವಗಳು ವಿಶಿಷ್ಟ ಲಕ್ಷಣಗಳಿಂದ ಕೂಡಿರುತ್ತವೆ. ಈ ಲಕ್ಷಣಗಳು ಅನೇಕ ಆಯಾಮಗಳಲ್ಲಿ ವಿಸ್ತೃತಗೊಂಡಿರುತ್ತವೆ. ಯೌವನದ ಕಾಲಘಟ್ಟದಲ್ಲಿನ ಇದರ ಸ್ವರೂಪವು ಅಧಿಕಾರ, ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಆರ್ಥಿಕ ಅಂಶಗಳನ್ನು ಒಳಗೊಂಡಿರುತ್ತದೆ. ಅವುಗಳಲ್ಲಿ ಪ್ರಮುಖವಾಗಿ ರಾಜ್ಯ ವಿಸ್ತರಣೆ, ಧರ್ಮ ಪರಿಪಾಲನೆ, ತನ್ನ ವಂಶದ ಗೌರವ,

ತನ್ನ ನೆನಪನ್ನು ಅಮರಗೊಳಿಸುವಂತಹ ಕಾರ್ಯ ಯೋಜನೆಗಳನ್ನು ರೂಪಿಸುವುದು, ಹೊರ ಮತ್ತು ಒಳಶತ್ರುಗಳು ಇಂತಹ ಅನೇಕ ಒತ್ತಡಗಳು ಆತನಿಗಿರುವುದು ಸಹಜ. ಇಂತಹ ಒತ್ತಡಗಳಿಂದ ಮುಕ್ತರಾಗಲು ಹೆಂಡತಿ, ಅದು ಅಲ್ಲದೇ ವೇಶ್ಯೆಯರು ಅವಶ್ಯ ಎಂಬುದು ರಾಜನೀತಿಯು ಆಗಿದ್ದು, ಅವರೊಂದಿಗಿನ ಸಂಬಂಧವು ಅತ್ಯಂತ ಪ್ರಮುಖವಾಗಿರುತ್ತದೆ. ಆದರೆ ಹೆಂಡತಿಯಾದವಳ ಒತ್ತಡ ಇದಕ್ಕಿಂತ ಭಿನ್ನವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಯಶೋಧರ ಮತ್ತು ಅಮೃತಮತಿ ಇವರ ಸಂಬಂಧವಾದರೂ ಎಂತಹುದು ಎಂಬುದನ್ನು ಅರ್ಥಮಾಡಿಕೊಳ್ಳುವುದು ಅಷ್ಟೇ ಪ್ರಮುಖವಾದುದು. ಈ ಹಿನ್ನೆಲೆಯಲ್ಲಿ ಯಶೋಧರನ ಪಾತ್ರವನ್ನು ವಿಭಿನ್ನ ನೆಲೆಗಳಲ್ಲಿ ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಬಹುದು.

ವರ್ತನೆಯ ನೆಲೆ

ವರ್ತನೆಯ ನೆಲೆಯು ಪ್ರಮುಖವಾಗಿ ವ್ಯಕ್ತಿಯ ಬಾಹ್ಯ ಜಗತ್ತಿನ ಬಗೆಗಿನ ವ್ಯಾವಹಾರಿಕ ದೃಷ್ಟಿಕೋನವೇ ಆಗಿದೆ. ಅಂದರೆ ಬಾಹ್ಯ ಜಗತ್ತು ಸಂಪೂರ್ಣವಾಗಿ ವ್ಯಕ್ತಿನಿಷ್ಟತೆಯಿಂದ ಕೂಡಿದೆ ಎಂದು ಹೇಳಬಹುದಾಗಿದೆ. ಈ ನೆಲೆಯಲ್ಲಿ ಯಶೋಧರನನ್ನು ಅರ್ಥಮಾಡಿಕೊಳ್ಳುವುದಾದಲ್ಲಿ ಆತನು ಧರ್ಮಪರ ಶ್ರದ್ಧೆಯುಳ್ಳ ರಾಜನಾಗಿದ್ದ ಎಂಬುದು ಸ್ಪಷ್ಟ. ರಾಜಧರ್ಮ ಮತ್ತು ತಾನು ನಂಬಿದ ಧರ್ಮ ಇವುಗಳ ಪರಿಪಾಲನೆಯಲ್ಲಿ ಹೆಚ್ಚು ತೊಡಗಿಸಿಕೊಂಡ ಯಶೋಧರನ ಪತಿಧರ್ಮ ಪರಿಪಾಲನೆಯ ಕುರಿತಾಗಿಯೇ ಪ್ರಶ್ನೆಗಳು ಮೂಡುತ್ತವೆ. ಆತ ರಾಜ್ಯವೊಂದಕ್ಕೆ ರಾಜನಾಗಿರಬಹುದು; ಆದರೆ ಒಂದು ಹೆಣ್ಣಿಗೆ ಪತಿಯೂ ಆಗಿದ್ದನು ಎಂಬುದನ್ನು ಇಲ್ಲಿ ಗಮನಿಸಲೇಬೇಕು. ಮೇಲ್ನೋಟಕ್ಕೆ ಈತ ತನ್ನ ದೈಹಿಕ ಹಾಗೂ ಮಾನಸಿಕ ಸ್ಥಿತಿಯನ್ನು ಒಂದು ಉದ್ದೇಶಪೂರ್ಣ ರೀತಿಯಲ್ಲಿ ಸಮತೋಲನಗೊಳಿಸಿಕೊಂಡಿರುವಂತೆ ಕಂಡುಬರುತ್ತದೆ. ರಾಜನೊಬ್ಬನ ಪ್ರತಿಷ್ಠೆಯ ಕುರುಹುಗಳಾಗಿ ರಾಜ್ಯ ವಿಸ್ತರಣೆ, ಧರ್ಮ ಸಂರಕ್ಷಣೆ, ರಾಣಿಯಾಗಿ ಸುಂದರಳಾದ ಅಮೃತಮತಿಯು ಇರುತ್ತಾಳೆ. ಆದರೆ ಯಶೋಧರ ತಾನು ಒಲಿಸಿಕೊಂಡ ಹೆಣ್ಣು ತನ್ನನ್ನು ನಿರಾಕರಿಸುವ ಜೊತೆಗೆ ಬೇರೊಬ್ಬ ಪುರುಷನನ್ನು ಆಯ್ಕೆಮಾಡುವ ಸಂದರ್ಭವೊಂದಕ್ಕೆ ಸಾಕ್ಷಿಯಾಗುತ್ತಾನೆ. ಈ ಸನ್ನಿವೇಶವು ಸಾಂಪ್ರಾದಾಯಿಕ ಭಾರತೀಯ ಸಮಾಜಕ್ಕೆ ಅರಗಿಸಿಕೊಳ್ಳಲಾರದಂತಹದ್ದು. ಏಕೆಂದರೆ ಹೆಣ್ಣಿನ ದೈಹಿಕ ಹಾಗೂ ಮಾನಸಿಕ ಲೋಕವನ್ನು ಈ ಜಗತ್ತು ಗ್ರಹಿಸಿರುವ ರೀತಿ ಬೇರೆಯೇ ಇದೆ. ಆದರೆ ವಾಸ್ತವವೇ ಬೇರೆ. ಅದು ಅರ್ಥವಾಗದಂತಹದ್ದೇನಲ್ಲ. ಆದರೆ ಅರ್ಥೈಸಿರುವ ಜಗತ್ತಿನ ವಿಧಾನವೇ ಬೇರೆ. ರಾಣಿಯಾಗಿರಲಿ, ಸಾಮಾನ್ಯಳಾಗಿರಲಿ, ಅತ್ಯಂತ ಕೆಳಹಂತದಲ್ಲಿರಲಿ, ಒಟ್ಟಾರೆ ಆಂತರಿಕ ಸ್ವರೂಪದಲ್ಲಿ ಅವರ ಅನುಭವಗಳೆಲ್ಲಾ ಒಂದೇ ಎಂಬ ಗ್ರಹಿಕೆಯೇ ಅವರನ್ನು ಈ ಮಟ್ಟಕ್ಕೆ ತಂದು ನಿಲ್ಲಿಸಿದೆ. ಯಾವುದೇ ಒಂದು ಸನ್ನಿವೇಶವನ್ನು ಮೇಲ್ವರ್ಗದ ಹೆಣ್ಣೊಬ್ಬಳು ಗ್ರಹಿಸುವ, ಅದಕ್ಕೆ ಅಭಿವ್ಯಕ್ತಿಸುವ

ನೆಲೆಯು ಸಾಮಾನ್ಯ ವರ್ಗದ ಹಾಗೂ ಅತ್ಯಂತ ಕೆಳವರ್ಗದ ಹೆಣ್ಣು ಗ್ರಹಿಸುವ ಅಭಿವ್ಯಕ್ತಿಸುವ ನೆಲೆಯು ಬೇರೆ ಬೇರೆಯೇ ಆಗಿರುತ್ತದೆ.

ಸಾಮಾನ್ಯವಾಗಿ ಎಲ್ಲಾ ಹೆಣ್ಣಿಗೂ ತನ್ನ ಪತಿಯಾಗುವವನ ಕುರಿತಾದ ಕಲ್ಪನೆಗಳಿರುತ್ತವೆ. ಕಲ್ಪನೆಯಲ್ಲಿರುವಂತಹ ಸಂಗಾತಿ ದೊರೆಯದೇ ಹೋದರೂ ಹೆಚ್ಚು ಕಡಿಮೆ ಬದುಕಿಗೆ ಹೊಂದಿಕೊಂಡು ಜೀವನ ಸಾಗಿಸುವವರೇ ಹೆಚ್ಚು. ಇಂತಹ ಸಮಾಜದಲ್ಲಿ ಅಮೃತಮತಿಯಂತಹ ಹೆಣ್ಣಿಗೆ ಎಲ್ಲಾ ರೀತಿಯಲ್ಲೂ ಸಮಾನನಾದವನಂತೆ ಯಶೋಧರ ಕಂಡುಬರುತ್ತಾನೆ. ಹಾಗಾದರೆ ಇಂತಹ ಯಶೋಧರನನ್ನು ನಿರಾಕರಿಸುವ ಮೂಲಕ, ಸಂಪೂರ್ಣವಾಗಿ ಆತನಿಗೆ ತದ್ವಿರುದ್ಧ ರೀತಿಯ ಅಷ್ಟಾವಂಕನನ್ನು ಅಮೃತಮತಿ ಆಯ್ಕೆಮಾಡಿಕೊಂಡಿದ್ದಾದರೂ ಏಕೆ? ಎಂಬ ಪ್ರಶ್ನೆ ಮೂಡುತ್ತದೆ. ಆದ್ದರಿಂದ ಇಲ್ಲಿ ಅಮೃತಮತಿಯ ಮತ್ತು ಯಶೋಧರನ ಸಂಬಂಧವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ಶೂನ್ಯದಲ್ಲಿ ಯಾವುದೂ ಘಟಿಸುವುದಿಲ್ಲ. ಪ್ರತಿಯೊಂದಕ್ಕೂ ಅದರದೇ ಆದ ಕಾರ್ಯಕಾರಣ ಸಂಬಂಧವಿರುತ್ತದೆ.

> "ಒಲಿಸಿದ ಪೆಣ್ ಪೆರರೋಳ್ ಸಂ
> ಚಲಿಸಿದೊಡಿದು ಸುಖಮೆ ಪರಮಸುಖಸಂಪದ ಮಾ
> ಪಲಿಸಿ ಸಲೆ ನೆರೆವ ಮುಕ್ತಿಯ
> ನೊಲಿಸುವೆನಿನ್ನೊಲ್ಲೆನುಪಿದ ಪೆಂಡಿರ ನಣ್ಪಂ ।"[7]

ಅಮೃತಮತಿ ಯಶೋಧರ ಒಲಿಸಿಕೊಂಡ ಹೆಣ್ಣು ಎಂಬುದು ಸ್ಪಷ್ಟ. ಒಲಿಸಿಕೊಂಡಿದ್ದು ಎಂಬಲ್ಲಿ ಅತಿಯಾದ ಪ್ರೇಮ ಜೊತೆಗೆ ಅದು ತನ್ನಿಂದ ದೂರವಾಗುವ ಸಾಧ್ಯತೆ ಕುರಿತಾದ ನಿಯಂತ್ರಣ ಸಹಜ. ಆದರೆ ಈ ಬಗೆಯ ನಿಯಂತ್ರಣವು ಏಕಮುಖಿಯೂ, ಹಾಗೆಯೇ ನೇತ್ಯಾತ್ಮಕವೂ ಆಗಿರುತ್ತದೆ. ಇಲ್ಲಿ ಸ್ಪಷ್ಟವಾಗಿ ಸ್ಥಾಪಿತವಾಗಿರುವುದೇನೆಂದರೆ ಪುರುಷನೊಬ್ಬನ ಕ್ರಿಯೆಗಳು ನಂಬಿಕೆಗಳು ಅವನಿಗೆ ಅರಿವಿಲ್ಲದ, ಪ್ರಬಲವಾದ ಆದರೆ ಅದನ್ನು ಸೂಚಿಸಿದಾಗ ಖಡಾಖಂಡಿತವಾಗಿ ನಿರಾಕರಿಸುವ ಸ್ವರೂಪವನ್ನು ಹೊಂದಿರುತ್ತದೆ. ಇದು ಕೇವಲ ಮಾನಸಿಕ ಮಾತ್ರವಲ್ಲ, ದೈಹಿಕ ನೆಲೆಯಲ್ಲಿಯೂ ಪ್ರಕಟಗೊಳ್ಳುತ್ತಿರುತ್ತದೆ. ಹೆಣ್ಣನ್ನು ತನ್ನದೆಂದು ಭಾವಿಸುವಲ್ಲಿ, ಅವಳನ್ನು ವಸ್ತುವೆಂದು ಪರಿಗಣಿಸುವುದು, ಹಾಗೆಯೇ ತನ್ನಲ್ಲಿ ಉಳಿಸುಕೊಳ್ಳುವಲ್ಲಿ ಅತಿಯಾಗಿ ನಿಯಂತ್ರಣ ಹೊಂದುವುದು, ಜೊತೆಗೆ ನಿರಂತರವಾಗಿ ಕಾಯ್ದುಕೊಳ್ಳುವಲ್ಲಿ ಗಂಡಿನ ಮನಸ್ಸು ಸದಾ ಸಂಘರ್ಷದಿಂದ ಕೂಡಿರುತ್ತದೆ. ಈ ಬಗೆಯ ಸಂಘರ್ಷವು ಹೆಣ್ಣಿನೊಂದಿಗೆ ಗಂಡನಾದವನು ಹೊಂದಬೇಕಾದ ಭಾವನಾತ್ಮಕ ಬಾಂಧವ್ಯವನ್ನು ಭಾದಿಸುತ್ತದೆ. ಇಲ್ಲಿ ಕೇವಲ ಅಧಿಕಾರ, ಪ್ರತಿಷ್ಠೆಗಳು ಮುಖ್ಯವಾಗುತ್ತವೆಯೇ ವಿನಃ ಭಾವನೆಗಳಲ್ಲ. ಈ ಬಗೆಯ ಸಂಘರ್ಷಗಳು ರಾಜನಾದ ಯಶೋಧರನಿಗೂ ಸಾಕಷ್ಟು ಇರುತ್ತವೆ. ಇಂತಹ ಯಶೋಧರನ ಸಂಬಂಧ ಅಮೃತಮತಿಯೊಂದಿಗೆ ಯಾವ ಬಗೆಯಲ್ಲಿರಬಹುದೆಂಬುದು ಸಾಧಾರಣವಾಗಿ ಯೋಚಿಸುವವರಿಗೂ ಅರ್ಥವಾಗುತ್ತದೆ.

ಅಮೃತಮತಿಯಂತಹ ಮೂಲ ಪ್ರೇರಣೆಗಳಿಂದ ತೃಪ್ತಳಾಗಿರುವ ಹೆಣ್ಣು, ಯಶೋಧರನಿಂದ ಬಯಸುವ ಅಪೇಕ್ಷೆಗಳೇ ಬೇರೆ. ಆಕೆಯ ಮನೋ ಲೋಕವನ್ನು ಗ್ರಹಿಸುವಲ್ಲಿ ಯಶೋಧರ ವಿಫಲನಾಗಿರುವ ಸಾಧ್ಯತೆಯು ಹೆಚ್ಚು. ಅಮೃತಮತಿ ಎಷ್ಟಾದರೂ ಒಲಿಸಿಕೊಂಡ ಹೆಣ್ಣು. ಆಕೆ ಕೇವಲ ಯಶೋಧರನ ದೈಹಿಕ ಅವಶ್ಯಕತೆಗಳಿಗೆ ಸೀಮಿತಗೊಂಡವಳು ಎಂಬಂತೆ ಕಂಡುಬರುತ್ತಾಳೆ. ಹೆಣ್ಣಿಗೆ ಗಂಡನಿಗೆ ತಾನು ಅಧೀನಳಾಗಿ ಬದುಕುತ್ತಿದ್ದೇನೆ ಎಂಬ ಸ್ವಲ್ಪ ಎಳೆ ದೊರಕಿದರೂ ಆಕೆ ಗಂಡನನ್ನು ನಂಬಿಕೆಯಿಂದ ನೋಡಲು ಅನುಮಾನಿಸುತ್ತಾಳೆ. ಯಶೋಧರ ಅಮೃತಮತಿಯನ್ನು ಅವಗಣಿಸಿರುವ ಸಾಧ್ಯತೆಯೂ ಇರಬಹುದು.

ಮಾನವನು ಸ್ವಭಾವತಃ ಆಕರ್ಷಕ ಜೀವಿ. ಮಾನವನ ಮನಸ್ಸು ಪರಸ್ಪರ ಆಕರ್ಷಣೆಗೆ ಮೂಲವಾದುದು. ಹೆಣ್ಣು ಮತ್ತು ಗಂಡಿನ ನಡುವಿನ ಪರಸ್ಪರ ಆಕರ್ಷಣೆಯು ಪ್ರಮುಖವಾಗಿ ದೇಹದ ಅಚ್ಚುಕಟ್ಟು, ರೂಪುರೇಷೆಗಳಾದರೂ, ಕ್ರಮೇಣ ಈ ಆಕರ್ಷಣೆಯ ಗಾಢತೆಯು ಪರಸ್ಪರರ ನಡವಳಿಕೆ ಬುದ್ಧಿವಂತಿಕೆ, ವಿಶ್ವಾಸ ಗೌರವಗಳು, care takingness ಮೇಲೆಯೇ ತೀವ್ರವಾಗುವುದು. ಈ ತೀವ್ರತೆಯೇ ಪರಸ್ಪರರ ಸಂಬಂಧಗಳು ದೀರ್ಘಕಾಲದ ಬಾಳ್ವೆಗೆ ಕಾರಣವಾಗುವುದು. ಇಲ್ಲಿ ಯಶೋಧರನಿಗೆ ಅಮೃತಮತಿಯ ರೂಪ, ದೈಹಿಕ ನಿಲುವು ಇವುಗಳಲ್ಲಿ ಆಸಕ್ತಿಯಿದ್ದು ಉಳಿದಂತೆ ಆಕೆಯ ಭಾವನೆಗಳು ವಿಶ್ವಾಸ ಹಾಗೂ ಗೌರವಗಳನ್ನು ಅವಗಣಿಸಿರುವ ಸಾಧ್ಯತೆಯೂ ಇದೆ. ಏಕೆಂದರೆ ಆತ ರಾಜ. ಆತನ ಬಯಕೆ ಪೂರೈಕೆಯ ಸಮಯದಲ್ಲಿ ಮಾತ್ರ ಅಮೃತಮತಿಯು ಆತನಿಗೆ ನೆನಪಾಗುತ್ತಾಳೆ ದೈನಂದಿನ ಬದುಕಿನಲ್ಲಿ ಸಾಮಾನ್ಯ ಅನುಭವವವು ಯಶೋಧರನಿಂದ ಅಮೃತಮತಿಗೆ ಇದೇ ಆಗಿರುತ್ತದೆ.

ಭಾವನಾತ್ಮಕ ನೆಲೆ

ಯಶೋಧರನನ್ನು ಅಮೃತಮತಿಯು ನಿರಾಕರಿಸುವ ಮೂಲಕ ಬೇರೊಂದು ಆಯ್ಕೆಯೂ ನಡೆದಿರುವಂತೆ ಕಾಣುತ್ತದೆ. ಅಂದರೆ ಬಹುಶಃ ಇಬ್ಬರ ನಡುವಣ ಸಂಬಂಧವನ್ನು ಭಾವನಾತ್ಮಕ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಗಂಡ ಮತ್ತು ಹೆಂಡತಿ ಅಥವಾ ಗಂಡು ಮತ್ತು ಹೆಣ್ಣು ಕೇವಲ ದೈಹಿಕ ಆತ್ಮೀಯತೆಯಲ್ಲಲ್ಲದೇ ಭಾವನಾತ್ಮಕವಾಗಿ ಆತ್ಮೀಯರಾಗಬೇಕಾದುದೇ ಪ್ರಮುಖವಾದುದು. ಆತ್ಮೀಯತೆ ಎಂದರೆ ಇಬ್ಬರೂ ಜೊತೆಯಾಗಿ ಮತ್ತು ಸಫಲಪೂರ್ಣವಾಗಿ ಬಾಳುವುದು ಅಥವಾ ಕಾಲ ಕಳೆಯುವುದು. ಇದನ್ನೇ ಮೇಲ್ನೋಟಕ್ಕೆ 'ಆತ್ಮೀಯತೆ' 'Intimacy' ಎನ್ನಬಹುದು. ಅಂದರೆ "ಪರಸ್ಪರರ ಅಸ್ತಿತ್ವ, ವಿಚಾರ, ಭಾವನೆಗಳು, ಅನುಭವಗಳನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡು, ಸ್ವಪ್ರಯೋಜನದ ಗುರಿ ಇಲ್ಲದೆ, ಅವ್ಯಕ್ತ ಉದ್ದೇಶಗಳಿಲ್ಲದೆ ಪರಸ್ಪರರ ಭಾವನೆಯಲ್ಲಿ ಸಹಭಾಗಿ ಆಗುವುದು".[೨] ಯಶೋಧರ ಈ ಆತ್ಮೀಯ ಸಂಬಂಧವನ್ನು ಅಮೃತಮತಿಯೊಂದಿಗೆ ಕೇವಲ ದೈಹಿಕ ನೆಲೆಯಲ್ಲಿಯೇ ಇಟ್ಟುಕೊಂಡಿರುವುದು ಕಂಡುಬರುತ್ತದೆ.

“ಅವನಿಪನೊರ್ಮೆ ಸಭಾಮಣಿ
ಭವನದಿನಂಬರ ತರಂಗಿಣೀ ಪುಳಿನಮನೇ
ರುವ ಹಂಸನಂತೆ ಶಯ್ಯಾ
ಧವಳ ಪ್ರಾಸಾದತಳಮನೇರಿದನರಸಾ ।”[3]

ಯಶೋಧರ ಅಮೃತಮತಿಯನ್ನು ಒಲಿಸಿಕೊಂಡವನು. ತನ್ನ ಸಂರಕ್ಷಣೆಯಲ್ಲಿ, ಸೌಂದರ್ಯವತಿಯಾದ ಅಮೃತಮತಿ ಇರುವುದು ಯಶೋಧರನಿಗೆ ಪ್ರತಿಷ್ಠೆಯೂ ಆಗಿತ್ತು. ಜೊತೆಗೆ ಚೈತನ್ಯದಾಯಕವೂ ಆಗಿತ್ತು. ಆದರೆ ಅದೇ ಚೈತನ್ಯ ಅಮೃತಮತಿಯಲ್ಲೂ ಉಂಟುಮಾಡುವಲ್ಲಿ ಯಶೋಧರನು ವಿಫಲನಾಗಿದ್ದನೆಂದೇ ಹೇಳಬಹುದು.

ಎರಿಕ್ ಫ್ರಾಂ ಹೇಳುವಂತೆ “ಪ್ರೀತಿಯಲ್ಲಿ ಪರಸ್ಪರ ಗೌರವ ಮುಖ್ಯ”. “Respect < Respicere; to look at; ನೋಡು, ಗೌರವವೆಂದರೆ ಶೋಷಣೆ ಇಲ್ಲದ ಸ್ಥಿತಿ. ಒಬ್ಬ ಗಂಡನ್ನೋ, ಹೆಂಗಸನ್ನೋ ಪ್ರೀತಿಸಿದರೆ ನಾನು ಆತ ಇಲ್ಲವೇ ಆಕೆಯೊಡನೆ ಒಂದು ಎಂದು ಭಾವಿಸುವುದು. ಮುಕ್ತ ಸ್ಥಿತಿಯಲ್ಲಿ ಮಾತ್ರ ಗೌರವ ಸಾಧ್ಯ. ಪ್ರೀತಿ ಮುಕ್ತಸ್ಥಿತಿಯ ಶಿಶುವೇ ವಿನಃ ಬಲತ್ಕಾರದ ಸ್ಥಿತಿಯದ್ದಂತೂ ಅಲ್ಲ”.

ಪ್ರತಿಯೊಬ್ಬ ಗಂಡು ಹೆಣ್ಣನ್ನು ಕೇವಲ ದೈಹಿಕ ಸುಖಕ್ಕೆ, ಮನೆ ವಾರ್ತೆಗೆ, ತನ್ನ ವಂಶ ಮುಂದುವರಿಸುವ ಜವಾಬ್ದಾರಿಗೆ ಮಾತ್ರ ಸೀಮಿತಗೊಳಿಸಿಕೊಂಡುಬಿಡುತ್ತಾನೆ. ಯಶೋಧರನಂತಹ ರಾಜನ ವಿಷಯದಲ್ಲಂತೂ ಈ ಮಾತು ಇನ್ನಷ್ಟು ಗಟ್ಟಿಯಾಗುತ್ತದೆ. ಪರಸ್ಪರ ಸಮಾನತೆಯ ಭಾವವಿಲ್ಲದ, ಒಂದು ಬಗೆಯಲ್ಲಿ ಪ್ರದರ್ಶನಕ್ಕಿಟ್ಟ ಗೊಂಬೆಯಂತಹ ವಾಸ್ತವ ಸ್ಥಿತಿಯಲ್ಲಿ ಯಶೋಧರ ಅಮೃತಮತಿಯನ್ನು ಇರಿಸಿರುವ ಸಾಧ್ಯತೆ ಇದೆ.

ಸುಖ ಸಂತೋಷಗಳು, ಕಾಮ ಪ್ರೇಮಗಳು ಸಾಪೇಕ್ಷವೂ, ತೀರಾ ವ್ಯಕ್ತಿಗತವೂ ಆಗಿರುವಂತಹವು. ಯಶೋಧರನಿಗೆ ಅಧಿಕಾರ ಅಂತಸ್ತು ಹೇಗೋ ಹಾಗೇ ಸೌಂದರ್ಯವತಿಯಾದ ಅಮೃತಮತಿಯು ರಾಣಿಯಾಗಿ ಪ್ರತಿಷ್ಠೆಯಾಗಿದ್ದಿರಬೇಕು. ಯಶೋಧರನ ಮಾನಸಿಕತೆ ಮತ್ತು ಜೀವನ ದೃಷ್ಟಿಕೋನಗಳು ಅಮೃತಮತಿಯನ್ನು ಒಂದು ವಸ್ತುವಿನಂತೆ ಕಂಡಿರುವ ಸಾಧ್ಯತೆಯೇ ಹೆಚ್ಚು.

ಹೆಣ್ಣೆಂದರೆ ಭೋಗ ವಸ್ತುಗಳಲ್ಲಿ ಆಸಕ್ತಿ ಇರುವಳು. ಲೌಕಿಕ ಪ್ರಪಂಚದ ಎಲ್ಲಾ ಸುಖ ಸಂತೋಷಗಳನ್ನು ಬೇಕೆಂದು ಬಯಸುವವಳು. ಅವುಗಳನ್ನು ಆಕೆಗೆ ಒದಗಿಸಿ ಬಿಟ್ಟರೆ ಆಕೆಯು ತೃಪ್ತಳಾಗುತ್ತಾಳೆಂಬ ಹೆಣ್ಣಿನ ಕುರಿತಾದ ಗಂಡಸಿನ ಸಾಮಾನ್ಯ ಆಲೋಚನೆ ಯಶೋಧರನಲ್ಲಿಯೂ ಕಂಡುಬರುತ್ತದೆ. ಆದರೆ ಹೆಣ್ಣು ಹೃದಯ, ಮೂತ್ರಪಿಂಡ, ಪಿತ್ತಕೋಶ ಮುಂತಾದ ಅಂಗಗಳಿಂದ, ಬರೀ ಮಾಂಸ, ಮೂಳೆಗಳ ರಾಶಿಯಿಂದ ಮಾತ್ರ ಗುರುತಿಸಬೇಕಾದವಳಲ್ಲ. ಆಕೆಯಲ್ಲೂ

ಚೈತನ್ಯವಿದೆ. ಆಕೆಗೂ ಬೌದ್ಧಿಕ ಶಕ್ತಿ ಸಾಮರ್ಥ್ಯಗಳಿವೆ. ಎಲ್ಲಕ್ಕಿಂತಲೂ ಹೆಚ್ಚಾಗಿ ಭಾವನೆಗಳಿವೆ ಎಂಬುದು ಅರ್ಥವಾಗುವುದಿಲ್ಲ. ಯಶೋಧರನಿಗೆ ಅಮೃತಮತಿಯು ದೇಹದಿಂದ ಮಾತ್ರ ಪ್ರಸ್ತುತವೆನಿಸಿದ್ದಾಳೆ ಎಂದು ಕಾಣುತ್ತದೆ.

"ಅವನಿಪನೊರ್ಮೆ ಸಭಾಮಣಿ
ಭವನದಿನಂಬರ ತರಂಗಿಣೀ ಪುಳಿನ ಮನೇ
ರುವ ಹಂಸನಂತೆ ಶಯ್ಯಾ
ಧವಳ ಪ್ರಾಸಾದತಳಮನೇರಿದನರಸಾ ।"[೪]

ಯಶೋಧರನ ಕುರಿತಾಗಿ ಈ ಮೇಲಿನ ಪದ್ಯ ಭಾಗವು ಅನೇಕ ಸುಳುಹುಗಳನ್ನು ನೀಡುತ್ತದೆ. ದಾಂಪತ್ಯ ಬದುಕು ಸುಸ್ಥಿತಿಯಲ್ಲಿರಲು ಪ್ರೀತಿ ಮತ್ತು ಕಾಮ ಇವೆರಡರ ಸಂಯೋಗವು ಅತ್ಯಂತ ಅವಶ್ಯಕ. ಎರಿಕ್ ಫ್ರಾಂ ಹೇಳುವಂತೆ "ಪ್ರೀತಿಗೆ ಸಿಲುಕುವ ಅನುಭವ ಮತ್ತೆ ಗಾಢವೂ, ಉತ್ಸಾಹದಾಯಕವೂ ಆಗಿದೆ ಎನಿಸುತ್ತದೆ. ಮತ್ತೆ ಅದು ನಿಧಾನವಾಗಿ ತೀವ್ರತೆಯನ್ನು ಕಳೆದುಕೊಳ್ಳುತ್ತದೆ".[೫]

ಲೈಂಗಿಕ ಕಾಮನೆಗಳು ಪುರುಷನಲ್ಲಿ ಹೆಣ್ಣಿನೊಂದಿಗೆ ಒಂದಾಗಲು ತುಡಿಯುತ್ತವೆ. ಇದು ಕೇವಲ ದೈಹಿಕ ಕಾಮನೆಯ ಒತ್ತಡದಿಂದ ಬಿಡುಗಡೆ ಮಾತ್ರವಾಗಿಲ್ಲ ಎಂದೆನಿಸಿದರೂ, ಸ್ಪಷ್ಟವಾಗಿ ಒತ್ತಡದ ಬಿಡುಗಡೆಯೇ ಆಗಿರುತ್ತದೆ. ಇಂತಹದಕ್ಕೆ ಉದಾಹರಣೆಯೇ ಯಶೋಧರ ಸಭಾ ಮದ್ಯದಿಂದ ತಟ್ಟನೆ ಎದ್ದು ಅಮೃತಮತಿಯಲ್ಲಿಗೆ ಬರುವುದನ್ನು ಕಾಣಬಹುದು. ಇಲ್ಲಿ ಪ್ರೀತಿಯ ಪ್ರೇರಣೆ, ಭಾವನಾತ್ಮಕ ಆಕರ್ಷಣೆ ಕಾರಣ ಎಂದು ಅನಿಸುವುದಿಲ್ಲ. ಇದು ಫ್ರಾಯ್ಡ್ ಹೇಳುವ 'ಮಾರ್ದವತೆ', ಲೈಂಗಿಕ ಪ್ರವೃತ್ತಿಯ ಉದಾತ್ತೀಕರಣವು ಹೌದು. ದೈಹಿಕವಾದ ಮತ್ತು ದೈಹಿಕವಲ್ಲದ ಎಲ್ಲಾ ಬಗೆಯ ಪ್ರೀತಿಗಳಲ್ಲೂ ಈ ಮಾರ್ದವತೆ ಇರುತ್ತದೆ. ಆದರೆ ಯಶೋಧರನಲ್ಲಿ ಕಾಣುವುದು ದೈಹಿಕ ಆಕರ್ಷಣೆಯ ಮಾರ್ದವತೆ. ಅದು ತಾತ್ಕಾಲಿಕವಾಗಿರುತ್ತದೆ. ಆದ್ದರಿಂದಲೇ ಕೇವಲ ದೈಹಿಕ ಸುಖದ ಸಂದರ್ಭದಲ್ಲಿನ ಈ ಬಗೆಯ ಮಾರ್ದವತೆಯು ದಾಂಪತ್ಯದಲ್ಲಿ ಹೆಚ್ಚಿನ ಗಾಢವಾದ ಬಂಧನ, Mentally attachment ಉಂಟುಮಾಡುವುದಿಲ್ಲ. ಇದು ಪರಸ್ಪರ ಕೊಡುವ ಅಥವಾ ತೆಗೆದುಕೊಳ್ಳುವ ವಸ್ತು ಅಲ್ಲ. ಅದೊಂದು ಅನುಭವ! ಈ ಬಗೆಯ ಅನುಭವವು ಯಶೋಧರನಿಂದ ಅಮೃತಮತಿಯ ಪಾಲಿಗೆ ಆಗಿಲ್ಲವೆಂದೇ ಅನಿಸುತ್ತದೆ. ಪ್ರತಿಯೊಬ್ಬ ಹೆಣ್ಣು ಗಂಡನಿಗೆ ತಾನು ಬೇಕಾಗಿದ್ದೇನೆ. ಆತನೊಂದಿಗಿನ ಬದುಕಿಗೆ ಅರ್ಥವಿದೆ. ಜೀವನ ಸುಂದರ ಎಂಬ ಯೋಚನೆಗಳು ಮತ್ತು ಇದರ ಜೊತೆಯಲ್ಲೇ ಬಾಳಬೇಕು. ಬೆಳೆಯಬೇಕು ಎಂಬ ಅಭಿಲಾಷೆ ಮೂಡಬೇಕು ಹಾಗೂ ಆತನೊಂದಿಗಿನ ಬದುಕಿನಲ್ಲಿ ಅದು ಅನುಭವದ ಮೂಲಕ ದೃಢೀಕರಿಸಲ್ಪಡಬೇಕು. ಹಾಗಾಗದೇ ಹೋದಾಗ ಮನಸ್ಸು, ಪ್ರೀತಿ, Careness, ಪರಸ್ಪರ ಗೌರವ, ವಿಶ್ವಾಸ, ವಾತ್ಸಲ್ಯ ಹೀಗೆ ಬೇರೆ ಬೇರೆ ಹೆಸರುಗಳಿಂದ ಬೇಡಿಕೆ ಇರುವ, ಆದರೆ ಅದು

ಸಿಗುತ್ತಿಲ್ಲ ಎನಿಸುವ ಮಾನವೀಯ ಸಂಬಂಧವನ್ನು ಆಯ್ಕೆ ಮಾಡಿಕೊಳ್ಳುವ ನಿರ್ಧಾರಕ್ಕೆ ಬರುತ್ತಾಳೆ. ಯಶೋಧರನ ವರ್ತನೆಯಲ್ಲಿ ಇಂತಹ ಮಾನವೀಯ ಸಂಬಂಧದ ಕೊರತೆಯ ಪರಿಣಾಮವೇ ಬೇರೊಂದು ಅಥವಾ ಬೇರೊಬ್ಬನ ಆಯ್ಕೆಯ ನಿರ್ಧಾರಕ್ಕೆ ಅಮೃತಮತಿಯು ಬರುವಂತೆ ಮಾಡಿರಬಹುದು. ಅಲ್ಲಿಯೂ ಆಕೆ ಸಂತೃಪ್ತಳಾಗುತ್ತಾಳೆಂದು ಹೇಳಲಾಗುವುದಿಲ್ಲ. ಆದರೆ ವರ್ತಮಾನ ಸ್ಥಿತಿಯನ್ನು ಮೀರುವ ಪ್ರಯತ್ನವಾಗಿರುತ್ತದೆ ಅಷ್ಟೆ.

ಕೆಲವು ಸಂದರ್ಭಗಳಲ್ಲಿ ಯಶೋಧರನ ನಡವಳಿಕೆಯು ಸಾಮಾನ್ಯ ನೆಲೆಯಲ್ಲಿ ಗ್ರಹಿಸಲು ಸಾಧ್ಯವಾಗದಷ್ಟು, ಗ್ರಹಿಸಿದರೂ ಅದನ್ನು ನಿರ್ದಿಷ್ಟ ನೆಲೆಯಲ್ಲಿ ಅರ್ಥೈಸಲಾರದಂತೆ ತೋರುತ್ತದೆ. ಆ ಸಂದರ್ಭಗಳು ಈ ಕೆಳಗಿನಂತಿವೆ.

ಅಮೃತಮತಿ ಮತ್ತು ಅಷ್ಟಾವಂಕರ ಸಂಬಂಧವನ್ನು ಅಥವಾ ಅವರಿಬ್ಬರ ಮಿಲನವನ್ನು ಸ್ವತಃ ಕಂಡ ಸಂದರ್ಭದಲ್ಲಿನ ಯಶೋಧರನ ಪ್ರತಿಕ್ರಿಯೆ.

ಅಮೃತಮತಿಯು ಭೋಜನಕ್ಕೆ ಆಹ್ವಾನಿಸಿದಾಗ ಅದನ್ನು ಸ್ವೀಕರಿಸುವ ಸಂದರ್ಭ.

ತನ್ನ ತಾಯಿಯೊಂದಿಗೆ ನಿಜ ಸನ್ನಿವೇಶವನ್ನು ಕನಸಿನ ಮೂಲಕ ಹೇಳುವುದರ ಹಿಂದಿನ ಕಾರಣ.

ಯಶೋಧರ ಅಮೃತಮತಿಯ ನಡವಳಿಕೆಯ ಬಗ್ಗೆ ಅನುಮಾನಗೊಂಡು ಅವಳನ್ನು ಹಿಂಬಾಲಿಸುತ್ತಾನೆ. ಯಶೋಧರ ಯೋಚಿಸದ ಸನ್ನಿವೇಶ ಅಲ್ಲಿ ಕಂಡುಬರುತ್ತದೆ. "ದೋಷದ ಬೆನ್ನೊಳೆ ಸಂಧಿಸುವ ದಂಡದಂತೆ; ಅಲ್ಲಿ ಆ ಬದಗ ತೋರ ಮುಡಿವಿಡಿದು ಕುಡಿಯಂ ನಾರಂ ತದೆವಂತೆ ತದೆದು ಬೇಟೆಯಂ ಕಾಲಿಂ ಬಾರೇಳೆ"[೬] ಒದೆಯುತ್ತಾನೆ. ಅಮೃತಮತಿಯೋ ಕೇರೆ ಪೊರಳ್ವಂತೆ ಕಾಲ ಮೇಲೆ ಪೊರಳ್ದಳ್". ಈ ಸಂದರ್ಭ ಯಶೋಧರನ "ಬಾಳ್ ನಿಮಿರ್ದುದು ತೋಳ್ ತೂಗಿದುದು. ಮನಂ ಕನಲ್ದುದಿರ್ವರುಮನರಳ್ಬಾಗಂ ಮಾಡಲ್ ಧೃತಿ ಬಂದಾಗಳ್ ಮಾಣೆಂಬ ತೆರದೆ ಪೇಸಿದನರಸಂ".

ಇಂತಹ ಸನ್ನಿವೇಶದಲ್ಲಿ ಅಮೃತಮತಿಯನ್ನು ಮತ್ತು ಅಷ್ಟಾವಂಕನನ್ನು ಕೊಲ್ಲಬೇಕೆಂಬ ಯಶೋಧರನ ಮನಸ್ಥಿತಿಯಲ್ಲಿ ತತ್‌ಕ್ಷಣದಲ್ಲಿ ಆದ ಮಾನಸಿಕ ಬದಲಾವಣೆ ಪ್ರಜ್ಞಾಪೂರ್ವಕವಾಗಿಯೇ ನಿಯಂತ್ರಿಸಿದಂತೆ ಕಂಡುಬರುತ್ತದೆ. ಇದು ಎದುರಾದ ಕ್ಲಿಷ್ಟಕರ ಪರಿಸ್ಥಿತಿಗೆ ಹೊಂದಿಕೊಳ್ಳುವ ತಂತ್ರವಾಗಿ, ಭಾವನಾತ್ಮಕ ಸಂತುಲನ ಕಾಯ್ದುಕೊಳ್ಳಲು ವ್ಯಕ್ತಿ ಬಳಸುವ ಹೊಂದಾಣಿಕೆಯ ರಕ್ಷಣಾ ತಂತ್ರ. ಪರಿಸ್ಥಿತಿಯ ಸಮರ್ಥ ನಿರ್ವಹಣೆಗೆ ಸಹಕಾರಿಯಾಗುವಂತಹದ್ದು. ಅದೇ ಸಮಯದಲ್ಲಿ ತನ್ನ ಪ್ರವೃತ್ತಿಯಿಂದ ಹಿಂದಕ್ಕೆ ಸರಿಯುವ ಯಶೋಧರನಲ್ಲಿ ವಿರುದ್ಧ ಪ್ರವೃತ್ತಿಯು ಕಂಡುಬರುತ್ತದೆ. ಯೂಂಗ್ ಈ ವಿರುದ್ದ ಪ್ರವೃತ್ತಿಯನ್ನು ಮನಸ್ಸಿನ ಬಲ ಅಥವಾ ಲಿಬಿಡೋ (Libido) ಎನ್ನುತ್ತಾನೆ. ಈ ಬಗೆಯ ಮನಸ್ಥಿತಿಯನ್ನು

'ವಿರೋಧಗಳ ಸಿದ್ಧಾಂತದ (Principle of opposites) ಮೂಲಕ ವಿವರಿಸುತ್ತಾನೆ. ಮನಸ್ಸಿನ ಪ್ರತಿಯೊಂದು ಪ್ರವೃತ್ತಿಯ ಹಿಂದೆ ವಿರುದ್ಧವಾದ ಮತ್ತೊಂದು ಪ್ರವೃತ್ತಿ ವ್ಯಕ್ತಿಯಲ್ಲಿ ಉಂಟಾಗುತ್ತದೆ. ಅಂದರೆ ಒಂದು ಒಳ್ಳೆಯ ಯೋಚನೆಯ ಜೊತೆಗೆ ಅದಕ್ಕೆ ವಿರುದ್ಧವಾದ ಕೆಟ್ಟ ಯೋಚನೆಯೂ ಅಥವಾ ಒಂದು ಕೆಟ್ಟ ಯೋಚನೆಯ ಜೊತೆಗೆ ಅದಕ್ಕೆ ವಿರುದ್ಧವಾದ ಒಳ್ಳೆಯ ಯೋಚನೆಯೂ ಬರುತ್ತದೆ. ಯೂಂಗ್ ಇದಕ್ಕೆ ಉದಾಹರಣೆಗಳನ್ನು ನೀಡುತ್ತಾನೆ. ಒಬ್ಬ ವ್ಯಕ್ತಿ ಗಾಯವಾಗಿರುವ ಚಿಕ್ಕ ಹಕ್ಕಿಯನ್ನು ರಕ್ಷಿಸಲು ಅದನ್ನು ಕೈಯಲ್ಲಿ ಎತ್ತಿಕೊಳ್ಳುತ್ತಾನೆಂದುಕೊಳ್ಳೋಣ. ಆಗ ಅದೆಷ್ಟು ಹಗುರವಾಗಿದೆಯೆಂದರೆ ಅದನ್ನು ಸುಲಭವಾಗಿ ಕೈಯಲ್ಲಿ ಹಿಸುಕಿ ಕೊಂದುಬಿಡಬಹುದು ಎನ್ನುವ ಯೋಚನೆ ಅವನ ಮನಸ್ಸಿನಲ್ಲಿ ಬರುತ್ತದೆ. ಕೊಲ್ಲುವುದು ಆತನ ಉದ್ದೇಶವಲ್ಲ. ಅದು ಆತನ ಇಷ್ಟವೂ ಅಲ್ಲ. ಆದರೆ ರಕ್ಷಣೆಯ ಜೊತೆಗೆ ಕೊಲ್ಲುವ ಯೋಚನೆಯೂ ಬರುತ್ತದೆ. ಯೂಂಗ್ ಈ ವಿರುದ್ಧ ಪ್ರವೃತ್ತಿಯನ್ನು ಮನಸ್ಸಿನ ಬಲ ಅಥವಾ (Libido) ಲಿಬಿಡೋ ನೆಲೆಯಲ್ಲಿ ವಿವರಿಸುವ ಮೂಲಕ ಫ್ರಾಯ್ಡ್‌ನ ಲಿಬಿಡೋ ನೆಲೆಗಿಂತ ವಿಶಾಲವಾದ ಅರ್ಥವನ್ನು ನೀಡುತ್ತಾನೆ. ಇಲ್ಲಿ ಯಶೋಧರನಲ್ಲಿಯೂ ಈ ಬಗೆಯ ವಿರುದ್ಧ ಪ್ರವೃತ್ತಿಯನ್ನು ಕಾಣಬಹುದು. ಆತ ಅಷ್ಟಾವಂಕನೊಂದಿಗೆ ಅಮೃತಮತಿಯನ್ನು ಕಂಡ ಕ್ಷಣದಲ್ಲಿ ಕೊಲ್ಲಬೇಕೆಂದು ಕತ್ತಿಯನ್ನು ಎತ್ತಿದರೂ ಕೊಲ್ಲದೇ ಅದಕ್ಕೊಂದು ಕಾರಣ ನೀಡುತ್ತಾನೆ.

> "ಪರನ್ನಪರನಲ್ಲದೀ ಪುಳು
> ಕರನರಿವುದೆ ಮದ್ಭುಜಾಸಿಯಿದು ಕೈಯಿಕ್ಕಲ್
> ಕರಿ ಕರಿಗಲ್ಲದಿಳುಂಪೆಗೆ
> ಪರಿವುದೆ ಕರಿ ಕರಿಯನಲ್ಲದಿರಿವುದೆ ನರಿಯಂ ।"[೭]

ಇದುವರೆಗೂ ಯಶೋಧರನ ಪತ್ನಿಯಾಗಿದ್ದ ಅಮೃತಮತಿ ಶತ್ರುವಾಗಿಬಿಡುತ್ತಾಳೆ. ಯಾವ ಹೆಣ್ಣನ್ನು ತಾನು ಒಲಿಸಿಕೊಂಡನೋ ಅದೇ ಹೆಣ್ಣು ಈಗ ಕ್ಷುದ್ರಳಾಗಿದ್ದಾಳೆ. ಹಾಗೆಯೇ ಇದುವರೆಗೂ ಅನ್ಯನಾಗಿದ್ದ ಅಷ್ಟಾವಂಕನು ಶತ್ರುವಾಗಿ ಪರಿಣಮಿಸಿದ್ದಾನೆ. ಯಶೋಧರನ ಮನಸ್ಸು ಇವರಿಬ್ಬರ ವಿರುದ್ಧ ಆಕ್ರೋಶಗೊಳ್ಳುತ್ತದೆ. ಒಂದು ಬಗೆಯ ಸೇಡು ಮನೆಮಾಡುತ್ತದೆ. ಆದರೆ ಅದು ಮನಸ್ಸಿನಲ್ಲಿ ಹಾಗೆ ಉಳಿದುಬಿಡುತ್ತದೆ. ಆ ಸಂದರ್ಭದ ಪ್ರಚೋದನೆಗೆ ಪೂರಕವಾದ ಪ್ರತಿಕ್ರಿಯೆಯು ಅಭಿವ್ಯಕ್ತಗೊಳ್ಳುವುದಿಲ್ಲ. ಬದಲಿಗೆ ಯಶೋಧರ 'critical social awareness'ನ್ನು ಪ್ರದರ್ಶಿಸುತ್ತಾನೆ. ಅಂದರೆ ಸಾಮಾಜಿಕ ಪ್ರಜ್ಞೆಗಳಿಂದ ನಿಯಂತ್ರಿಸಲ್ಪಡುವ ವ್ಯಕ್ತಿಯ ಮನೋಸ್ಥಿತಿ ಇದು ಎಂದು ಅರ್ಥೈಸಬಹುದು.

ಪ್ರೀತಿಯ ಕುರಿತಾದ, ಪ್ರೇಮದ ಕುರಿತಾದ ಮತ್ತು ಕಾಮದ ಕುರಿತಾದ ಸಂವೇದನೆಗಳು ವ್ಯಕ್ತಿಯಲ್ಲಿ ಕೇವಲ ಅಂತರ್ಗತವಾಗಿರದೇ ಬಾಹ್ಯದಲ್ಲೂ ಪ್ರಕಟಗೊಳ್ಳುತ್ತವೆ. ಆದರೆ ಅವುಗಳೊಂದಿಗಿನ ಅನನ್ಯತೆ ಅಂತರ್ಗತವಾಗಿ ಸಂಕೀರ್ಣವಾದ ಬಲೆಯ ರೂಪದಲ್ಲಿರುತ್ತವೆ. ಇಂತಹ ಸಂವೇದನೆಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆಂದು ಹೇಳಿದರೂ ಅವುಗಳ ಆಂತರಿಕ ಸ್ವರೂಪ ಒಂದೇ

ಆಗಿರುತ್ತದೆ. ಹಾಗೇ ವ್ಯಕ್ತಿಯ ಅಂತಸ್ತು, ಸ್ಥಾನಮಾನಗಳು ಇದರ ಮೇಲೆ ಪ್ರಭಾವ ಬೀರುತ್ತವೆ. ಯಶೋಧರನು ಕೂಡಾ ಈ ಬಗೆಯ ಸಾಮಾಜಿಕ ಪ್ರಜ್ಞೆಯಿಂದಲೇ ತನ್ನ ಪ್ರವೃತ್ತಿಯಿಂದ ಹಿಂದಕ್ಕೆ ಸರಿಯುತ್ತಾನೆ. ಗಿರಡ್ಡಿಯವರು "ಧರ್ಮದ ಪ್ರಭಾವದಿಂದ, ಹಿಂಸೆಯಿಂದ ಹಿಂದೆ ಸರಿಯುತ್ತಾನೆ" ಎಂದು ವಿಶ್ಲೇಷಿಸುತ್ತಾರೆ. ಆದರೆ ಮನಃಶಾಸ್ತ್ರೀಯ ನೆಲೆಯಲ್ಲಿ ನೋಡಿದಾಗ ಬೇರೆಯದೇ ಆದ ಕಾರಣಗಳು ನಿಚ್ಚಳವಾಗಿ ಕಂಡುಬರುತ್ತವೆ.

ಯಶೋಧರನಿಗೆ ಧರ್ಮಕ್ಕಿಂತ ಈ ಸಂದರ್ಭದಲ್ಲಿ ಪ್ರತಿಷ್ಠೆಯೇ ಮುಖ್ಯವಾಗಿ ತೋರಿದೆ. ಏಕೆಂದರೆ ಪ್ರೀತಿ, ಗೌರವ, ವಾತ್ಸಲ್ಯಗಳು, ದೈಹಿಕ ಸುಖ ಇವೆಲ್ಲವೂ ಕೊಟ್ಟು ಪಡೆಯುವ ನೆಲೆಯಲ್ಲಿಲ್ಲದ ಕಾರಣದಿಂದಲೇ ಈ ಬಗೆಯ ಸನ್ನಿವೇಶಕ್ಕೆ ಯಶೋಧರ ಮುಖಾಮುಖಿಯಾಗ ಬೇಕಾದ ಸಂದರ್ಭ ಎದುರಾಗುತ್ತದೆ. ಹಾಗೆಯೇ ತನ್ನ ಘನತೆಗೆ, ಪ್ರತಿಷ್ಠೆಗೆ ಕುಂದು ಬಾರದಂತೆ ನೋಡಿಕೊಳ್ಳುವ ವರ್ತನೆ ಯಶೋಧರನಲ್ಲಿ ಕಂಡುಬರುವುದು. ತನ್ನ ಯಜಮಾನ್ಯದ ಪ್ರತಿಷ್ಠೆಗೆ, ವ್ಯಕ್ತಿತ್ವಕ್ಕೆ ಧಕ್ಕೆ ಉಂಟಾಗುವ ಎಲ್ಲಾ ಪ್ರಚೋದನೆಗಳನ್ನು ಹತ್ತಿಕ್ಕುತ್ತಾನೆ. ಅಮೃತಮತಿ ಮತ್ತು ಅಷ್ಟಾವಂಕನ ಬಗೆಗೆ ಆತ ತಾಳುವ ನಿಲುವು ಇದನ್ನು ಸ್ಪಷ್ಟಪಡಿಸುತ್ತದೆ.

"ಅಸಿಲತೆ ರಣಧೌತಮದೀ
ಮಸಿಮುಸುಡನ ಜೀವಕಪ್ಪಿನಂಕಂದಿದೊಡೆ
ಣ್ದೆಸೆಯನಡರ್ದೆನ್ನ ಕೀರ್ತಿ
ಪ್ರಸರದ ಕುಡಿ ಕಯ್ಪೆಸೊರೆಯ ಕುಡಿಯವೊಲಕ್ಕುಂ ।"[೮]

ಇಲ್ಲಿ ಸ್ಪಷ್ಟವಾಗಿ ಯಶೋಧರನು ತನ್ನ ಕೀರ್ತಿ, ಪ್ರತಿಷ್ಠೆಯನ್ನು ಕಾಯ್ದುಕೊಳ್ಳುವ ಹಾಗೂ ಅದನ್ನು ನಿರಂತರವಾಗಿ ಸಂರಕ್ಷಿಸುವ ಮನಸ್ಥಿತಿಯನ್ನು ಹೊಂದಿರುವುದು ಕಂಡುಬರುತ್ತದೆ. ಈ ಕಾರಣಕ್ಕಾಗಿಯೇ ಆತನ ಮನಸ್ಸು ರಕ್ಷಣಾತ್ಮಕ ಮನೋಭಾವದ (projection) ಮೂಲಕ ಆ ಸಂದರ್ಭವನ್ನು ನಿಭಾಯಿಸುತ್ತದೆ. ಆತನ ಸಾರ್ವಜನಿಕ ಬದುಕಿಗೂ ಮತ್ತು ಆತನ ವರ್ತನೆಗೂ ವಿರೋಧ ಕಂಡುಬರುತ್ತದೆ. ಏಕೆಂದರೆ ತನ್ನ ಪತ್ನಿ ಬೇರೊಬ್ಬ ಪುರುಷನೊಂದಿಗೆ ಸಂಬಂಧ ಇಟ್ಟುಕೊಂಡಿರುವುದು. ಅದರಲ್ಲೂ ತನ್ನ ಅಂತಸ್ತು ಅಧಿಕಾರಕ್ಕೆ ತದ್ವಿರುದ್ಧ ವ್ಯಕ್ತಿಯೊಂದಿಗಿನ ಸಂಬಂಧ ಸಮಾಜಕ್ಕೆ ಗೊತ್ತಾದರೆ ಎನ್ನುವ ಕಾರಣ ಒಂದಾದರೆ, ಅಮೃತಮತಿಯಂತಹ ಹೆಣ್ಣು ಅಷ್ಟಾವಂಕನಂತವನೊಂದಿಗೆ ಸಂಬಂಧ ಬೆಳೆಸುವ ಮಟ್ಟಕ್ಕೆ ತನ್ನ ವ್ಯಕ್ತಿತ್ವದ ದೌರ್ಬಲ್ಯ ಕಾರಣವಾಯಿತೆ? ಎಂಬುದಾಗಿ ಆತ್ಮಾವಲೋಕನ (introspect) ಮಾಡಿಕೊಂಡಿರುವ ಸಾಧ್ಯತೆಯು ಕಂಡುಬರುತ್ತದೆ. ಯಶೋಧರ ಈ ಸನ್ನಿವೇಶವನ್ನು ಎರಡು ನೆಲೆಗಳಲ್ಲಿ ಕಾಣುತ್ತಾನೆ. ಒಂದು ನೆಲೆಯಲ್ಲಿ ಅದು ಪ್ರಜ್ಞೆ, ಇಚ್ಛೆ, ಮೀರುವಿಕೆ, ಚೈತನ್ಯ, ಇನ್ನೊಂದು ನೆಲೆಯಲ್ಲಿ ಅದು ಜಡವಸ್ತು, ನಿಷ್ಕ್ರೀಯತೆ, ಕ್ಷಣಿಕತೆ ಮತ್ತು ಕೇವಲ ದೇಹ. ಈ ಸನ್ನಿವೇಶವು ಲೈಂಗಿಕ ನೆಲೆಯಲ್ಲಿಯೇ ಯಶೋಧರನಿಗೆ ಕಂಡುಬರುತ್ತದೆ. ತಾನೊಬ್ಬ ಪುರುಷ, ರಾಜ ಎಂಬುದನ್ನು ಮರೆಯದೆ

ತಾನು ಪುರುಷ, ರಾಜ, ಮಾತ್ರ ಅಲ್ಲ ತಾನೊಬ್ಬ ಪತಿಯೂ ಆಗಿದ್ದೇನೆ ಎನ್ನುವ ಭಾವನಾತ್ಮಕ ನೆಲೆಯಲ್ಲಿ ನೋಡುವ ಪ್ರಯತ್ನ ಮಾಡುವುದಿಲ್ಲ. ಅವರಿಬ್ಬರನ್ನು ಕೊಲ್ಲಬೇಕೆಂಬ ನಿರ್ಧಾರದಿಂದ ಹಿಂದಕ್ಕೆ ಸರಿಯುವುದು ಕೂಡಾ ಆತನಿಗಿರುವ ತನ್ನ ಶ್ರೇಷ್ಠತೆಯ ಹಮ್ಮನ್ನು ತೋರಿಸುತ್ತದೆ. ಹಾಗೆಯೇ "ನನ್ನ ತೋಳಿನ ಈ ಕರವಾಲವು ವೈರಿ ನರೇಂದ್ರರನ್ನು ಇರಿಯಬೇಕೇ ಹೊರತು ಈ ಕ್ಷುದ್ರರನ್ನು ಇರಿಯಲಾಗದು" ಎಂಬ ಆತನ ನಿರ್ಧಾರವು ತನಗೆ ಬೇಕಾದಂತೆ ಸನ್ನಿವೇಶವನ್ನು ಮಾನಸಿಕವಾಗಿ ಮಾರ್ಪಡಿಸಿಕೊಳ್ಳುವ, ಪುರುಷನೊಬ್ಬನ ಅಹಂನ್ನು ಸಂಕೇತಿಸುತ್ತದೆ. ವ್ಯಕ್ತಿಯ ಮನಸ್ಸು ಜೀವಂತವಾಗಿ, ಮೂರ್ತವಾಗಿ ನಲಿಯುವ, ನರಳುವ, ಪ್ರೇಮಿಸುವ, ಕಾಮಿಸುವ, ಕೆರಳುವ, ಶಾಂತಗೊಳ್ಳುವ ಅನೇಕ ಪ್ರಕ್ರಿಯೆಗಳಲ್ಲಿ ಭಾಗಿಯಾಗುವ ಸಂಕೀರ್ಣ ವ್ಯವಸ್ಥೆಯೇ ಆಗಿರುವುದು ಇಂತಹ ಅನೇಕ ಸಂದರ್ಭಗಳಲ್ಲಿ ವ್ಯಕ್ತವಾಗುತ್ತದೆ.

ಯಶೋಧರನು ಅನೇಕ ಸಂದರ್ಭಗಳಲ್ಲಿ ತನ್ನನ್ನು ನಿಯಂತ್ರಿಸುವ ಮೂಲಕ ತನ್ನ ಮನಸ್ಸಿನ ವಾಸ್ತವ ಪ್ರಜ್ಞೆಯನ್ನು ಹತ್ತಿಕ್ಕಲು ಪ್ರಯತ್ನಿಸುತ್ತಾನೆ. ಯಶೋಧರ ಅಮೃತಮತಿ ಮತ್ತು ಅಷ್ಟಾವಂಕನನ್ನು ಸುಲಭವಾಗಿ ಶಿಕ್ಷಿಸಬಹುದಿತ್ತು. ಶಿಕ್ಷಿಸಬೇಕೆಂಬ ಮನಸ್ಸು ಇತ್ತು. ಆದರೆ ತನ್ನ ಕೀರ್ತಿ, ಪ್ರತಿಷ್ಠೆಗಳಿಗೆ ಇದರಿಂದಾಗುವ ಹಾನಿಯ ಕುರಿತು ಆತ ಯೋಚಿಸುತ್ತಾನೆ. ಅಮೃತಮತಿಯಂತಹ ಹೆಣ್ಣು ಆತನಿಗೆ ಪ್ರತಿಷ್ಠೆಯ ಸಂಗತಿ. ಅಮೃತಮತಿಯನ್ನು ಕಳೆದುಕೊಳ್ಳುವುದಕ್ಕಿಂತ ತನ್ನ ಕೀರ್ತಿ, ಪ್ರತಿಷ್ಠೆಗೆ ಧಕ್ಕೆ ಉಂಟಾಗುವ ಸಾಧ್ಯತೆಯೇ ಆತನಿಗೆ ಮುಖ್ಯ. ಇದು ಕೇವಲ ಕಾಮ, ಪ್ರೇಮದ ವಿಷಯವಲ್ಲ. ಯಶೋಧರನ ಪ್ರತಿಷ್ಠೆಯ, ಪ್ರಶ್ನೆಯೂ ಹೌದು. ಆದ್ದರಿಂದಲೇ ಕೊಲ್ಲಬೇಕೆಂಬ ಗಳಿಗೆಯಲ್ಲಿ ತನ್ನ ಕೀರ್ತಿ, ಪ್ರತಿಷ್ಠೆಗಳ ಕುರಿತಾದ ಪ್ರಜ್ಞೆ ಆತನಲ್ಲಿ ಜಾಗೃತಗೊಂಡುಬಿಡುತ್ತದೆ. ಅಮೃತಮತಿಯು ಕೇವಲ ಪ್ರತಿಷ್ಠೆಯ ಸಂಕೇತ ಮಾತ್ರ. ಆಕೆಯ ಭಾವನೆಗಳು, ಬಯಕೆಗಳು ಸಂವೇದನೆಗಳು ತುಮುಲಗಳನ್ನು ಅರ್ಥಮಾಡಿಕೊಳ್ಳುವ ಅವಕಾಶ ಇಂತಹ ಸಂದರ್ಭದಲ್ಲಿ ಕಂಡುಬಂದರೂ ಅದು ಮುಖ್ಯವಾಗುವುದಿಲ್ಲ. ಅದನ್ನು ಪರಿಗಣಿಸುವುದಿಲ್ಲ. ತನ್ನನ್ನು ಮಾತ್ರ ಕೇಂದ್ರ ಪರಿಧಿಯಲ್ಲಿರಿಸಿಕೊಳ್ಳುವ ಯಶೋಧರನಂತಹ ವ್ಯಕ್ತಿಯಲ್ಲಿ ಚೇತನಗಳು ಜಾಗೃತಾವಸ್ಥೆಗೆ ಪ್ರವೇಶಿಸಿ, ಗೊಂದಲವನ್ನು ಉಂಟುಮಾಡಿ ವ್ಯಕ್ತಿತ್ವದ ಸಮಗ್ರತೆಗೆ ಧಕ್ಕೆ ತರುವಂತಹ ಸಂದರ್ಭದಲ್ಲಿ ರಕ್ಷಣಾತ್ಮಕ ವಿಧಾನದ ಮೂಲಕ ಸಮತೋಲನ ಗೊಳಿಸಿಕೊಳ್ಳುವ ಪ್ರಕ್ರಿಯೆಯನ್ನು ಈ ಸನ್ನಿವೇಶದಲ್ಲಿ ಕಾಣಬಹುದಾಗಿದೆ.

ಫ್ರಾಯ್ಡ್ ಪುತ್ರಿ ಆ್ಯನಾ ಫ್ರಾಯ್ಡ್ ಪ್ರತಿಪಾದಿಸಿರುವ The Ego and the mechanism of defense' ಯಶೋಧರನು ಈ ಸನ್ನಿವೇಶಕ್ಕೆ ಪ್ರತಿಕ್ರಿಯಿಸುವ ರೀತಿಯನ್ನು ವಿಶ್ಲೇಷಿಸಲು ಸಹಾಯಕವಾಗುತ್ತದೆ. ಯಶೋಧರ ತನ್ನ ಜೀವನದಲ್ಲಿ ಉಂಟಾದ ಈ ಸಂದರ್ಭದ ಆತಂಕವನ್ನು ಹತ್ತಿಕ್ಕುವ ಮೂಲಕ ಮನಸ್ಸಿನ ಸಮತೋಲನವನ್ನು ಕಾಯ್ದುಕೊಳ್ಳುತ್ತಾನೆ. ಅದಕ್ಕಾಗಿಯೇ ಅವರಿಬ್ಬರನ್ನು

ಕೊಲ್ಲದೆ, ಅವರ ಬಗೆಗೆ, ಅವರ ವ್ಯಕ್ತಿತ್ವದ ಬಗೆಗೆ ತಾತ್ಸಾರ ಹಾಗೂ ತನ್ನ ಶ್ರೇಷ್ಠತೆಯ ಕುರಿತು ಆಲೋಚಿಸುತ್ತಾನೆ. ಇವರಂತಹ ಕ್ಷುದ್ರರನ್ನು (ಈ ಮುಂಚೆ ಅಮೃತಮತಿ ಪ್ರತಿಷ್ಠೆಯಾಗಿದ್ದಳು) ಕೊಲ್ಲುವುದರಿಂದ ತನ್ನ ಕೀರ್ತಿಗೆ ಕುಂದುಂಟಾಗುತ್ತದೆ ಎನ್ನುವ ನಿರ್ಧಾರಕ್ಕೆ ಬರುತ್ತಾನೆ. ಈ ಮೂಲಕ ತನ್ನ ಮಾನಸಿಕ ತೀರ್ಮಾನದಿಂದ ಹಾಗೂ ಮನಸ್ಸಿನಲ್ಲಿ ಉಂಟಾಗಿದ್ದ ಪ್ರವೃತ್ತಿಯಿಂದ ಹಿಂದಕ್ಕೆ ಸರಿಯುತ್ತಾನೆ. ಇಲ್ಲಿ ಪ್ರಜ್ಞೆ (conscious) ಹಾಗೂ ಸುಪ್ತಪ್ರಜ್ಞೆ (sub-conscious)ಗಳು ಮನಸ್ಸನ್ನು ಪರಿವರ್ತಿಸುವ ಬೇರೆ ಬೇರೆಯ ಸ್ತರಗಳನ್ನು ಸೂಚಿಸುತ್ತವೆ. ಪ್ರಜ್ಞೆಯ ಪಾತಳಿಯಲ್ಲಿ ಎಲ್ಲಾ ಕ್ರಿಯೆಗಳ ಹಿಂದೆ ಇರುವುದು 'ಅಹಂ' ಎನ್ನುವ ಭಾವ. ಯಶೋಧರನಲ್ಲಿ ಈ 'ಅಹಂ' ಎನ್ನುವ ಭಾವವೇ ಆತನ ವ್ಯಕ್ತಿತ್ವದ ಸಮಗ್ರತೆಗೆ ಒದಗಬಹುದಾದ ಧಕ್ಕೆಯನ್ನು ರಕ್ಷಣಾತ್ಮಕ ವಿಧಾನದ ಮೂಲಕ ಕಾಯ್ದುಕೊಳ್ಳುತ್ತಾನೆ. 'Repression' ಎನ್ನುವುದು ಜಾಗೃತಾವಸ್ಥೆಗೆ ಬರಲು ಹಾತೊರೆಯುವ ಬಯಕೆಗಳು ವಾಸ್ತವಿಕತೆಗೆ, ಸಾಮಾಜಿಕ ಕಟ್ಟುಪಾಡುಗಳಿಗೆ ಧಕ್ಕೆ ಉಂಟಾಗುತ್ತದೆಯೇ ಎಂಬುದನ್ನು ಪರಿಶೀಲಿಸುತ್ತದೆ. ನಂತರ ಅವು ವ್ಯಕ್ತಿತ್ವದ ಸಮಗ್ರತೆಗೆ ಧಕ್ಕೆ ಉಂಟುಮಾಡುತ್ತವೆ ಎಂದು ಪ್ರಜ್ಞೆಗೆ (conscious) ನಿಲುಕಿದಾಗ ಅವುಗಳನ್ನು ಸುಪ್ತಸ್ತರಕ್ಕೆ ತಳ್ಳುವ ಪ್ರಕ್ರಿಯೆ ನಡೆಯುತ್ತದೆ. ಇಲ್ಲಿ ಯಶೋಧರ ತನ್ನನ್ನು ತೀವ್ರವಾಗಿ ಪ್ರಚೋದಿಸಿದ ಘಟನೆಗೆ pastನಲ್ಲಿ ಸೂಕ್ತವಾಗಿ ಪ್ರತಿಕ್ರಿಯಿಸುತ್ತಾನೆ. ಆದರೆ ವರ್ತಮಾನದಲ್ಲಿ ಅದರ ಅಭಿವ್ಯಕ್ತಿ ಸ್ವರೂಪ ಬೇರೆಯೇ ಆಗಿರುತ್ತದೆ. ಇದು ತನ್ನ ಉದ್ದೇಶ ಸಾಧನೆಗಾಗಿ ಅಥವಾ ಸಾಮಾಜಿಕ ಬದ್ಧತೆಗಾಗಿ ತನ್ನನ್ನು ತಾನು ಅಭಿವ್ಯಕ್ತಿಸಿಕೊಳ್ಳುವ ಪ್ರಕ್ರಿಯೆ. ಇದು ಅಸ್ವಾಭಾವಿಕವಾದುದು. ಸಹಜವಾದುದಲ್ಲ ಹಾಗೂ ಸ್ವಾರ್ಥಪರ ನಿಲುವಿನಿಂದ ಕೂಡಿದ್ದಾಗಿದೆ. ಮೇಲ್ನೋಟಕ್ಕೆ ಇದು ಧರ್ಮಪರವಾದ ನಡವಳಿಕೆಯಾಗಿ ಕಂಡುಬಂದರೂ, ವಾಸ್ತವದಲ್ಲಿ ತಾತ್ಕಾಲಿಕವಾಗಿ ತನ್ನ ನಿಜಸ್ಥಿತಿಯನ್ನು ಯಶೋಧರ ಮುಚ್ಚಿಡುವ ಪ್ರಯತ್ನದಲ್ಲಿ ಸಫಲನಾಗಿರುವುದು ಕಂಡುಬರುತ್ತದೆ. ಯಶೋಧರನಲ್ಲಿ ದ್ವಂದ್ವ ಪ್ರವೃತ್ತಿಯಿರುವುದು ತನ್ನ ತಾಯಿಯೊಂದಿಗೆ ನಡೆದ ಸನ್ನಿವೇಶವನ್ನು ಕನಸಿನ ರೂಪದಲ್ಲಿ ರೂಪಾಂತರಗೊಳಿಸಿ ಹೇಳುವ ಸಂದರ್ಭದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ಯಶೋಧರ ಅಮೃತಮತಿ ಮತ್ತು ಅಷ್ಟಾವಂಕನ ಸಂಬಂಧದಿಂದ ಪ್ರಚೋದಿತನಾಗಿದ್ದಾನೆ. ಆದರೆ ಅದನ್ನು ಹತ್ತಿಕ್ಕುವ ಮೂಲಕ ತನ್ನ ವ್ಯಕ್ತಿತ್ವಕ್ಕೆ, ಪ್ರತಿಷ್ಠೆಗೆ ಉಂಟಾಗಬಹುದಾದ ಕಳಂಕದಿಂದ ಪಾರಾಗುವ ಮಾರ್ಗ ಕಂಡುಕೊಳ್ಳುತ್ತಾನೆ. ಆದರೆ ಜಾಗೃತ ಪ್ರಜ್ಞೆಯ ಸ್ತರದಲ್ಲಿ ಆ ಪ್ರಚೋದನೆಯನ್ನು ಹತ್ತಿಕ್ಕಲು ಸಾಧ್ಯವಾಗುವುದಿಲ್ಲ. ಅದಕ್ಕೆ ಹೇಗಾದರೂ ಪ್ರತಿಕ್ರಿಯಿಸಲೇ ಬೇಕಾಗುವುದು. ಆದರೆ ಅದನ್ನು ತನ್ನ ತಾಯಿಯಲ್ಲಿ ಕನಸಿನ ಮೂಲಕ ಹೊರಹಾಕುತ್ತಾನೆ. ಇದಕ್ಕೂ ಕಾರಣ ಇದೆ. ಒಂದು ಸ್ವಯಂ ಪ್ರತಿಷ್ಠೆ, ಇನ್ನೊಂದು ಸಾಮಾಜಿಕ ಪ್ರಜ್ಞೆ (social consciousness)ಗಳು. ಇದರಿಂದಾಗಿಯೇ ಆತ ತೆಗೆದುಕೊಳ್ಳಬೇಕಾದ ನಿರ್ಧಾರದ ಬಗ್ಗೆ ಜಾಗರೂಕನಾಗುತ್ತಾನೆ. ಆದರೆ ಒಬ್ಬ ವ್ಯಕ್ತಿಯಾಗಿ ಅಭಿವ್ಯಕ್ತಗೊಳಿಸಲೇಬೇಕಾದ ಮಾನಸಿಕ ಅನಿವಾರ್ಯತೆಯೂ ಕೂಡಾ ಇದೆ.

ಆಗ ಅದಕ್ಕೊಂದು ಕನಸಿನ ರೂಪ ಕೊಡುವ ಮೂಲಕ ವಾಸ್ತವವನ್ನು ರೂಪಾಂತರಗೊಳಿಸಿ ತಾಯಿಯ ಬಳಿ ಪ್ರಸ್ತಾಪಿಸುತ್ತಾನೆ. ತಾತ್ಕಾಲಿಕವಾಗಿ ನಿರಾಳನಾಗುತ್ತಾನೆ. ಇದು ಮನಸ್ಸಿನ ರಕ್ಷಣಾತ್ಮಕ ವಿಧಾನ. ಈ ಬಗೆಯ ರಕ್ಷಣಾತ್ಮಕ ವಿಧಾನವನ್ನು ಫ್ರಾಯ್ಡ್ ರೂಪಾಂತರಗೊಳ್ಳುವಿಕೆ ಎಂದು ಕರೆಯುತ್ತಾನೆ. ಯಶೋಧರನ ವರ್ತನೆಯು ಅತ್ಯಂತ ಕುತೂಹಲದಾಯಕವಾಗುವ ಮತ್ತೊಂದು ಸಂದರ್ಭವೆಂದರೆ ಅವನು ಅಮೃತಮತಿಯ ಆಹ್ವಾನವನ್ನು ಸ್ವೀಕರಿಸುವುದು. ಯಶೋಧರ ತನ್ನ ರಾಜ್ಯವನ್ನು ಮಗನಾದ ಯಶೋಮತಿಗೆ ಒಪ್ಪಿಸುವ ನಿರ್ಧಾರಕ್ಕೆ ಬರುತ್ತಾನೆ. ಈ ವಿಷಯ ತಿಳಿದು ಅಮೃತಮತಿ ಯಶೋಧರ ಮತ್ತು ಆತನ ತಾಯಿಯಾದ ಚಂದ್ರಮತಿಯನ್ನು ಭೋಜನಕ್ಕೆ ಆಹ್ವಾನಿಸುತ್ತಾಳೆ.

> "ದೇವರ ಬಳಿಯೊಳೆ ಬರ್ಪೆಂ
> ಪೂವಿನ ಸೌರಭದ ಮಾಳ್ಕೆಯಂ ಗಮನ ಪ್ರ
> ಸ್ತಾವನೆಯೊಳಿಂದ ನೀಮುಂ
> ದೇವಿಯು ಮಾರೋಗಿಸಲಿಕ್ಕೆ ಎನ್ನಂ ಮನೆಯೊಳ್
> ಎನೆ ಜನಪತಿ ಮನಮಲ್ಲದ
> ಮನದೊಳೆಡಂಬಟ್ಟು ಬಂದು ತಾಯೊಡನುಣೆ
> ನಂಜಿನ ಲಡುಗೆಯಂ ಮಾಡಿದು
> ದನುಣ್ ಮಹಾರಾಜ ಎಂಬಿನಂ ಸವಿದುಂಡಂ ।"[೯]

ಈ ಪದ್ಯ ಭಾಗದ ಸನ್ನಿವೇಶವು, ಯಶೋಧರನು ಅಮೃತಮತಿಯ ಆಹ್ವಾನವನ್ನು ಮನಸ್ಸಿಲ್ಲದ ಮನಸ್ಸಿನಿಂದ ಸ್ವೀಕರಿಸಿದ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆದರೆ ಯಾವ ಅಮೃತಮತಿಯು ತನ್ನ ಅಧಿಕಾರ ಅಂತಸ್ತು, ರಾಜ ಪದವಿ ತೊರೆದು ವೈರಾಗ್ಯ ಮೂಡಲು ಕಾರಣಳಾಗಿದ್ದಳೋ ಆಕೆಯ ಒಂದು ಆಹ್ವಾನಕ್ಕೆ ಸಮ್ಮತಿಸಿದ್ದಾದರೂ ಏಕೆ? ಎಂಬ ಗಂಭೀರವಾದ ಪ್ರಶ್ನೆ ಮೂಡುತ್ತದೆ. ಇಲ್ಲಿ ಯಶೋಧರ ಒಂದು ಬಗೆಯ ಪುರುಷ ಸಭ್ಯತೆಯನ್ನು ಮೀರಿದ ವ್ಯಕ್ತಿಯಾಗಿ ಕಂಡುಬರುತ್ತಾನೆ. ಹಾಗೆಯೇ ಅಮೃತಮತಿಯೊಂದಿಗಿನ ಅವನ ಮನೋಭಾವದಲ್ಲಿ ಅಂತರ್ವಿರೋಧಗಳು ಮತ್ತು ಗೊಂದಲಗಳು (inconsistency) ಇರುವುದು ಸ್ಪಷ್ಟವಾಗುತ್ತದೆ.

ಮಾರ್ಕ್ಸ್ ಹೇಳುವಂತೆ "ಸ್ತ್ರೀ ಪುರುಷ ಸಂಬಂಧದ ಸ್ವರೂಪವು ಮಾನವನು ತನ್ನ ಪಶುಸ್ಥಿತಿಯಿಂದ ಮಾನವತೆಯ ದಿಕ್ಕಿನಲ್ಲಿ ಎಷ್ಟು ದೂರ ಒಂದು ಕಾಲಘಟ್ಟದಲ್ಲಿ ಸಾಗಿದ್ದಾನೆ" ೧೨ ಎಂಬುದನ್ನು ಗುರುತಿಸುತ್ತದೆ. ಯಶೋಧರನ ಮನೋಭಾವದಲ್ಲಿನ ಅಂತರ್ವಿರೋಧಗಳು ಹಲವು ಭಾವನಾತ್ಮಕ ಕಾರಣಗಳಿಂದಾಗಿ ಬದಲಾವಣೆ ಹೊಂದಿರುವಂತೆ ಅರ್ಥಮಾಡಿಕೊಳ್ಳಬಹುದು ಎಂಬ ನೆಲೆಯು ಒಂದು ಕಾರಣವಾದರೆ; ಈ ನೆಲೆಯಲ್ಲಿ ಸಂವೇದನೆಗಳು ತಮ್ಮ ಸಂಬಂಧಗಳೊಡನೆ ಕಾರಣಾತ್ಮಕ ನೆಲೆಯಲ್ಲಿ ಸಡಿಲಗೊಳ್ಳುವುದರ ಹಾಗೂ ತೆರೆದುಕೊಳ್ಳುವುದರ ಸಾಧ್ಯತೆಯೂ ಇದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿಯೇ ಅಮೃತಮತಿಯ ಆಹ್ವಾನವನ್ನು

ತಿರಸ್ಕರಿಸಲಾರದೇ ಯಶೋಧರನು ಆಕೆಯಲ್ಲಿಗೆ ತನ್ನ ತಾಯಿಯೊಂದಿಗೆ ಭೋಜನಕ್ಕೆ ಹೋಗುತ್ತಾನೆ. ಹೆಣ್ಣು ಮತ್ತು ಗಂಡಿನ ಸಂಬಂಧಗಳಲ್ಲಿ ಸಂವೇದನೆಗಳು, ಬಯಕೆಗಳು, ಇಚ್ಛಾಶಕ್ತಿಗಳು, ನಂಬಿಕೆಗಳು ವಿವಿಧ ರೂಪದ ಅಂತಸ್ಸಂಬಂಧಗಳಲ್ಲಿ ಸಂಕೀರ್ಣ ಸಂಗತಿಗಳಂತೆ ರೂಪಿತವಾಗಿರುತ್ತವೆ. ಕೆಲವೊಮ್ಮೆ ಇವುಗಳಲ್ಲಿ ಯಾವುದಕ್ಕಾದರೂ ಧಕ್ಕೆ ಉಂಟಾದರೂ ಪುನಃ ಅದನ್ನು ಬಂಧಿಸುವಲ್ಲಿ ಯಶಸ್ವಿಯಾಗುತ್ತದೆ. ಈ ಬಗೆಯ ಮನೋವ್ಯಾಪಾರವೇ ಯಶೋಧರ ಅಮೃತಮತಿಯ ಆಹ್ವಾನವನ್ನು ಸ್ವೀಕರಿಸುವಂತೆ ಪ್ರೇರೇಪಿಸಿರುವ ಸಾಧ್ಯತೆಯೆಂದು ಊಹಿಸಬಹುದು. ಮಾನವನ ಮನಸ್ಸಿನ ವ್ಯಾಪಾರವೇ ವಿಚಿತ್ರ ಎನಿಸುವುದು ಇಂತಹ ಸಂದರ್ಭಗಳಲ್ಲಿಯೇ. ಯಾವ ವಸ್ತು ಕೈಗೆಟುಕುವುದೋ ಅದು ಕೆಲವೊಮ್ಮೆ ಆಸಕ್ತಿಯಾಗಿ, ಸವಾಲಾಗಿ ಉಳಿಯುವುದಿಲ್ಲ. ಹಾಗೆಯೇ ಯಾವುದನ್ನು ಹೊಂದಲಾಗುವುದಿಲ್ಲವೋ ಅಥವಾ ಯಾವುದು ನಮ್ಮಿಂದ ದೂರವಾಗುತ್ತಿದೆ ಎಂದು ಅನಿಸತೊಡಗುತ್ತದೆಯೋ ಆಗ ಅಹಂಗೆ ಸವಾಲೆನಿಸುತ್ತದೆ. ಯಾವುದು ಸುಗಮ ಎನಿಸುತ್ತದೆಯೋ ಅಂತಹುದರಲ್ಲಿ ಆಕರ್ಷಣೆಯು ಕಡಿಮೆಯಾಗಿ ಬಿಡುವುದು. ಯಾವುದು ಅಶಕ್ತವೋ ಅದರ ಶಕ್ತಿ ಕಡಿಮೆಯಾಗುತ್ತದೆ ಮತ್ತು ಮನಸ್ಸು ಅದರ ಬಗ್ಗೆಯೇ ಆಲೋಚನೆ ಮಾಡಲು ಪ್ರಾರಂಭಿಸುತ್ತದೆ. ಆದ್ದರಿಂದಲೇ ಅಮೃತಮತಿಯ ಬಗೆಗೆ ಯಶೋಧರನಲ್ಲಿ ಒಂದು ಆಯಾಮದಲ್ಲಿ ವಿಕರ್ಷಣೆ ಕಂಡುಬಂದರೂ ಅದು ಮತ್ತೊಂದು ಆಯಾಮದಲ್ಲಿ ಒಂದು ಬಗೆಯ ಆಕರ್ಷಣೆಯೇ ಎನಿಸುತ್ತದೆ. ಆದರೆ ಅದು ವಿರುದ್ಧವಾದದು. ಯಾವುದರಿಂದ ತಪ್ಪಿಸಿಕೊಳ್ಳಬೇಕೆನಿಸುತ್ತದೆಯೋ ಅದರ ಬಗೆಗೆ ಅಚೇತನದ ಮೂಲೆಯೊಂದರಲ್ಲಿ ಅಡಗಿ ಕುಳಿತಿರುವ ಆಕರ್ಷಣೆಯ ಭಯವೇ ಕಾರಣವಾಗಿರುತ್ತದೆ. ವಿರೋಧಿಸಬೇಕೆನ್ನುವುದೇ ಮತ್ತೆ ಮತ್ತೆ ತೀವ್ರವಾಗಿ ಕಾಡುತ್ತದೆ. ವಿರೋಧಿಸಬೇಕೆನ್ನುವ ಈ ಮಾನಸಿಕ ತೀವ್ರತೆಯೇ ಪರಿವರ್ತನೆಗೊಂಡು ಆಕರ್ಷಣೆಯೂ ಆಗಿಬಿಡುತ್ತದೆ. ಒಟ್ಟಾರೆ ಯಶೋಧರನದು ವಿಚಾರಪರತೆಯಿಂದ ಕೂಡಿದ ವ್ಯಕ್ತಿತ್ವವಾಗಿ ಕಂಡುಬರುತ್ತದೆ. ಏಕೆಂದರೆ ಆತನ ಭಾವನಾಪರ ಮನಸ್ಸು ಅಮೃತಮತಿಯ ವರ್ತನೆಯಿಂದ ಪ್ರಚೋದಿತವಾಗಿದ್ದರೂ ವಿಚಾರಪರ ಮನಸ್ಸು ಆ ಪ್ರಚೋದನೆಯ ಮೇಲೆ ಹಿಡಿತವನ್ನು ಸಾಧಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಯಶೋಧರನಲ್ಲಿ ಪ್ರತಿಷ್ಠೆ ಮತ್ತು ಬಯಕೆಗಳ ನಡುವೆ ಒಂದು ಬಗೆಯ ತಾಕಲಾಟವಿದೆ; ಒಂದು ಬಗೆಯ ಸಂಘರ್ಷವಿದೆ. ತನ್ನ ಹಿಡಿತಕ್ಕೆ ಸಿಗಲಾರದ ಅಮೃತಮತಿಯ ಬಗೆಗಿನ ಬಯಕೆ ಮತ್ತು ಪ್ರತಿಷ್ಠೆ ಕಳೆದುಕೊಳ್ಳುವ ಆತಂಕ ಎರಡೂ ಕಂಡುಬರುತ್ತವೆ. ಅಮೃತಮತಿಯಲ್ಲಿ ಯಶೋಧರನು ಮೋಹಿತನಾಗಿರುವಂತೆಯೇ, ಆಕೆಯನ್ನು ಜಯಿಸಿರುವೆನೆಂಬ ಅಹಂ ಮತ್ತು ಇದುವರೆಗಿನ ಪುರುಷ ಅಹಂಕಾರಕ್ಕೆ ಬಂದೊದಗಬಹುದಾದ ಹಾನಿಯ ಕುರಿತು ಆತನಿಗೆ ಕಳವಳವಿದೆ. ಏಕೆಂದರೆ ಗಂಡು ಹೆಣ್ಣಿನೊಂದಿಗೆ ಕ್ಷಣಿಕ ಸ್ವಕೇಂದ್ರಿತ ಆನಂದವನ್ನಷ್ಟೇ ಬಯಸುವುದಿಲ್ಲ. ಜೊತೆಗೆ ಆಕೆಯ ಮೇಲೆ ವಿಜಯ ಸಾಧಿಸಲು ಆಕೆಯನ್ನು ಅಧೀನಗೊಳಿಸಲು ಬಯಸುತ್ತಾನೆ. ಈ ವಿಜಯವು ಕೈತಪ್ಪಿ ಹೋಗುವುದನ್ನು ಆತ ಒಪ್ಪಿಕೊಳ್ಳಲಾರ. ಇದೇ ನಿಟ್ಟಿನಲ್ಲಿ ಯಶೋಧರನು ತನ್ನ ನಿಜಸ್ವರೂಪ ಮರೆಮಾಚಿ

ಅಮೃತಮತಿಯ ಆಹ್ವಾನವನ್ನು ಸ್ವೀಕರಿಸುತ್ತಾನೆ. ಹಾಗೆಯೇ ಅಮೃತಮತಿಯು ತನ್ನನ್ನು ನಿರಾಕರಿಸುವ, ಬೇರೊಬ್ಬನನ್ನು ಆಯ್ಕೆಮಾಡುವ ವರ್ತನೆ ಆತನ ಪುರುಷ ಪ್ರತಿಷ್ಠೆಗೆ, ಅಹಂಗೆ ಸವಾಲಾಗುತ್ತದೆ. ಆದ್ದರಿಂದಲೇ ಆತ ಪಲಾಯನವಾದಿಯಾಗುತ್ತಾನೆ. ಅನಿವಾರ್ಯವಾಗಿ ಪರಿಸ್ಥಿತಿಗೆ ತನ್ನನ್ನು ತಾನು ಹೊಂದಿಸಿಕೊಳ್ಳುವವನಾಗುತ್ತಾನೆ. ಎಲ್ಲಿಯವರೆಗೆ ಪತ್ನಿ ಅಧೀನಳಾಗಿರುವಳೋ ಅಲ್ಲಿಯವರೆಗೆ ಪುರುಷನ ಅಹಂ ಸಮತೋಲನದಲ್ಲಿರುತ್ತದೆ. ಅದು ಮೀರಿದಾಗ ಆತನಿಗೆ ಅದೇ ಪತ್ನಿ ಸವಾಲಾಗುತ್ತಾಳೆ. ಇಲ್ಲಿ ಅಮೃತಮತಿಯು ಯಶೋಧರನ ಅಹಂಗೆ ಎಷ್ಟರ ಮಟ್ಟಿಗೆ ಸವಾಲಾಗುತ್ತಾಳೆಂದರೆ ಆತನ ರಾಜಪದವಿ, ರಾಜ್ಯ, ದೈಹಿಕ ಕಾಮನೆಗಳೆಲ್ಲವುಗಳಿಂದ ಪಲಾಯನ ಮಾಡುವಷ್ಟು. ಇದು ಯೂಂಗ್ ಹೇಳಿದ ಪ್ರಾಚೀನ ಪ್ರತಿಮೆಗಳಂತೆ, ಪ್ರತಿ ಜನಾಂಗದ ಪುರುಷರಲ್ಲೂ ಪುನರಾವರ್ತನೆಯಾಗಿ ಕಂಡುಬರುತ್ತದೆ.

'ಶೌರಿ' ಅವರ ' ಹಳದಿ ಮೀನು': ಅನು: ಎ.ಕೆ. ರಾಮಾನುಜನ್

ಅವನು

ಇತಿಹಾಸ ಮತ್ತು ಮನೋವಿಜ್ಞಾನ ಒಂದನ್ನೊಂದು ಪ್ರಭಾವಿಸುತ್ತವೆ ಮತ್ತು ಪರಸ್ಪರ ಪ್ರತಿಫಲಿಸುತ್ತವೆ. ಮಧ್ಯಯುಗೀನ ಕಾಲದಿಂದ ಆಧುನಿಕ ಕಾಲದವರೆಗಿನ ಅವಧಿಯಲ್ಲಿ ಮಾನವನ ಚಿಂತನಾ ಸ್ವರೂಪದಲ್ಲಾದ ಬದಲಾವಣೆ ಅಭೂತಪೂರ್ವವಾದದ್ದು. ವಿಜ್ಞಾನ, ತಂತ್ರಜ್ಞಾನ ಮತ್ತು ಸಾಹಿತ್ಯದಲ್ಲಾದ ಬೆಳವಣಿಗೆಗಳ ಜೊತೆಗೆ ಮನುಷ್ಯನ ಮನಸ್ಸು ಮತ್ತು ತಿಳುವಳಿಕೆಯಲ್ಲುಂಟಾದ ಜಾಗೃತಿಯು ಪ್ರತಿಯೊಬ್ಬನನ್ನು ವಿಶಿಷ್ಟ ವ್ಯಕ್ತಿಯನ್ನಾಗಿಸಿದವು. ಮನುಷ್ಯನ ವೈಯಕ್ತಿಕ ಅಸ್ಮಿತೆ (Identity)ಯಿಂದಾಗಿ ಹಿಂದಿನ ಕಾಲದ 'ನಾವು' ಎಂಬ ಆದರ್ಶದ ಜಾಗದಲ್ಲಿ 'ನಾನು' ಎಂಬುದು ಘನೀಕೃತವಾಗಿ ಹೊರಹೊಮ್ಮಿತು. ನಾವು ಎಂಬುದು ಸಮುದಾಯ ಕೇಂದ್ರಿತವಾದುದು, ಸಮುದಾಯ ಪ್ರಧಾನವಾದುದು ಮತ್ತು ಭಾವನಾತ್ಮಕವಾದುದು. ನಾನು ಎಂಬುದು ಸಾಮಾಜಿಕ ವಾದುದು ಹಾಗೂ ವೈಯಕ್ತಿಕವಾದುದು. ಆದರೆ ಈ ಭಾವ ಹೇಗೆ ಆಗಮಿಸಿ ಸ್ಥಿರವಾಯಿತು ಎಂಬುದನ್ನು ಅನೇಕ ಆಯಾಮಗಳ ಮೂಲಕ ನೋಡಬೇಕಾಗುತ್ತದೆ. ಆದರೆ ಅದರರ್ಥ ಮನುಷ್ಯನ ಈ ಅಸ್ಮಿತೆಯ ಪ್ರಜ್ಞೆ ಸದಾ ಒಂದೇ ರೀತಿಯಿತ್ತು ಎಂದು ಭಾವಿಸುವುದಲ್ಲ. ಅದು ಕಾಲಕಾಲಕ್ಕೆ ಬದಲಾಗುತ್ತಾ ಬಂದಿದೆ. ಹೊಸಹೊಸತನ್ನು ಆಹ್ವಾನಿಸುತ್ತಾ ಬೆಳೆದಿದೆ. ಅದೇ ರೀತಿ ಕಾಲಕಾಲಕ್ಕೆ ಬದಲಾವಣೆಗೆ ಒಳಗಾಗುತ್ತಿರುತ್ತದೆ. ಈ ರೀತಿ ಕಾಲಕಾಲಕ್ಕೆ update ಆಗುತ್ತಿರುವ ವ್ಯಕ್ತಿಯೊಬ್ಬನ ಮನಸ್ಥಿತಿ ಮತ್ತು ಕುರಿತಾದ ಆತನ ಗ್ರಹಿಕೆ ಮುಂತಾದವುಗಳ ವಿಶ್ಲೇಷಣೆಯೇ 'ಹಳದಿಮೀನು' ಕಾದಂಬರಿಯ 'ಅವನು' ಪಾತ್ರದ ವಿಶ್ಲೇಷಣೆಯ ಉದ್ದೇಶವೂ ಆಗಿದೆ.

ಜಗತ್ತಿನಲ್ಲಿ ಮನುಷ್ಯರು ಬದುಕಲು ಅನುಕೂಲವಾಗುವ ಉದ್ದೇಶದಿಂದ ಅನೇಕ ನೀತಿ, ನಿಯಮಗಳು, ರೂಢಿ–ಸಂಪ್ರದಾಯಗಳು ನಿರ್ಮಿತವಾಗಿವೆ. ಆದರೆ ಪರಂಪರಾಗತವಾಗಿ ರೂಢವಾದ ನೀತಿ, ನಿಯಮಗಳು, ಮೌಲ್ಯಗಳ ಪ್ರಭುತ್ವವನ್ನು ಎಲ್ಲರೂ ಸ್ವೀಕರಿಸುತ್ತಾರೆ ಎಂಬುದು ಸಾಮಾನ್ಯವಾಗಿ

ಪ್ರಶ್ನಾರ್ಹವೇ. ಏಕೆಂದರೆ ಜಗತ್ತಿನ ಯಾವುದೇ ಮೂಲೆಯಲ್ಲಿ ಅಸ್ತಿತ್ವದಲ್ಲಿರುವ ಮನುಷ್ಯ ಸಮಾಜವು ಆಯಾ ಸಮಾಜದ ನೀತಿ ನಿಯಮಗಳನ್ನು ಪ್ರಜ್ಞಾಪೂರ್ವಕವಾಗಿ ಒಪ್ಪಿಕೊಂಡು ಬಿಟ್ಟಿರುತ್ತದೆ. ಅನೇಕ ಸಂದರ್ಭಗಳಲ್ಲಿ ಸಮಾಜವು ಒತ್ತಾಯಪೂರ್ವಕವಾಗಿ ಬದುಕಿರುವ ಉದಾಹರಣೆಗಳು ಇವೆ. ಏಕೆಂದರೆ ಮನುಷ್ಯ ನಾಗರೀಕನಾದಂತೆ ವಿಜ್ಞಾನ, ತಂತ್ರಜ್ಞಾನಗಳು ಅತಿವೇಗವಾಗಿ ಮುಂದುವರಿಯುತ್ತಿದೆ. ಜೊತೆಗೆ ಜಾಗತೀಕರಣವು Global village ಪರಿಕಲ್ಪನೆಯನ್ನು ಹುಟ್ಟು ಹಾಕಿದ ಮೇಲಂತೂ, ಇದೂವರೆಗಿನ ಪರಂಪರೆಗಳನ್ನು, ನಂಬಿಕೆಗಳನ್ನು, ಮೌಲ್ಯಗಳನ್ನು ಮೀರುವ, ಆ ಮೂಲಕ ಬದುಕುವ ಒಂದು ಹೊಸ ಚಿಂತನೆಯು ಹುಟ್ಟಿಕೊಂಡಿದೆ.

'ಹಳದಿಮೀನು' ಕಾದಂಬರಿಯ ಅವನು ಇಂತಹ ಸಮಾಜದಲ್ಲಿ ವಿಶ್ವಾಸವಿಡುವುದರಲ್ಲಿಯೇ ಅವಿಶ್ವಾಸವನ್ನು ಪ್ರಕಟಿಸುತ್ತಾನೆ. ಲೌಕಿಕ ಪರಿಭಾಷೆಯಲ್ಲಿ ಬೆಳೆದುಬಂದಿರುವ ಸಾಮಾಜಿಕ, ರಾಜಕೀಯ, ನೈತಿಕ, ವಿಚಾರಗಳಲ್ಲಿ ಸಾಮಾನ್ಯ ಸಮಾಜದ ನಿಲುವಿನಿಂದ ವಿಭಿನ್ನವಾಗಿ ನಿಲ್ಲುತ್ತಾನೆ. ಇದಕ್ಕೆ ಅನೇಕ ಕಾರಣಗಳು ಇವೆ. ಅದು ಆತನ ಇಚ್ಛಾಪೂರಿತ ಚಿಂತನೆಯಿಂದ ರೂಪಿತಗೊಂಡ ವಿಶ್ವಾಸ, ಮನುಕುಲದ ಹಿಂದಿನ ಸಾಧನೆಗಳು ಪ್ರತಿಯೊಬ್ಬ ಮಾನವನ ಅಂತರಂಗದ ಅನುಭವ ಮತ್ತು ಪ್ರೀತಿಯ ಕುರಿತಾದ, ಬದುಕಿನ ಕುರಿತಾದ ಅವನದೇ ದರ್ಶನಗಳು ಈ ನಿಲುವಿನ, ವಿಶ್ವಾಸದ ತಳಹದಿಯಾಗಿರಬಹುದು. ಆತ ಬದುಕಿನ ಬಗೆಗೆ ಹೊಂದಿರುವ ವಿಚಾರಗಳು ಆತನ ಸ್ವತಂತ್ರ ಗ್ರಹಿಕೆ ಮತ್ತು ಚಿಂತನೆಗಳ ಪರಿಣಾಮವಾಗಿರಬಹುದು. ಆದರೆ ಇಲ್ಲಿ ಇಂತಹ ವಿಚಾರಗಳನ್ನು ಪ್ರಕಟಪಡಿಸುವಲ್ಲಿನ ಆತನ ಧೈರ್ಯ, ರಿಸ್ಕ್ ತೆಗೆದುಕೊಳ್ಳುವ ಸಾಮರ್ಥ್ಯ, ಸಾಮಾನ್ಯವಾಗಿ ಬದುಕಿನಲ್ಲಿ ಕ್ಷೇಮ ಮತ್ತು ಭದ್ರತೆಗಳು ಮುಖ್ಯವಾಗುವ ಜನರ ವಿಚಾರಗಳಿಗಿಂತ ತೀರಾ ವಿರುದ್ಧವಾಗಿರುವಂತೆ ಕಂಡುಬರುತ್ತದೆ.

ನವ್ಯ ವಿಮರ್ಶೆಯು 'ಹಳದಿಮೀನು' ಕಾದಂಬರಿಯ ನಾಯಕನನ್ನು ಕುರಿತು ಈ ರೀತಿ ವಿಶ್ಲೇಷಿಸಿದೆ. "ಜೀವನವನ್ನು ಅಸಂಗತತೆಯ ಸಂಕೀರ್ಣ ಮೊತ್ತವೆಂದು ನಿರ್ಣಯಿಸುವ 'ಹಳದಿಮೀನು' ಕಾದಂಬರಿಯ ನಾಯಕ ವಯಸ್ಸಿನ ಮೂವತ್ತೂರಕ್ಕೆ ಬುದ್ಧಿಪೂರ್ವಕವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಅವನನ್ನು ಎಗ್ಸಿಸ್ಟನ್‌ಲಿಸ್ಟ್ (Existanalist) ಎಂದು ಕರೆಯುತ್ತಾರೆ. ಜೊತೆಗೆ ಅವನು ಆತ್ಮಹತ್ಯೆಯ ಕೃತಿಯ ಮೂಲಕ ಜೀವನದ ಮೇಲೆ ಸೇಡು ತೀರಿಸಿಕೊಳ್ಳುವ ವಿಕೃತಿಗೆ ಇಳಿದಿದ್ದಾನೆ."

"ಜಗತ್ತಿನ ವಿದ್ಯಮಾನಗಳನ್ನು ಕಾರ್ಯಕಾರಣ ಪರಿಣಾಮಗಳ ಸಂಬಂಧದಲ್ಲಿ ಎಂದರೆ ಬೌದ್ಧಿಕ ನೆಲೆಯಲ್ಲಿ ಗ್ರಹಿಸುವುದಕ್ಕೆ ಅಸಾಧ್ಯವೆನಿಸುವ ಸ್ಥಿತಿಯೇ ಅಸಂಗತ".[೧೦]

"ಮಿತ್ ಆಫ್ ಸಿಸಿಫಸ್" (೧೯೪೨) ಎಂಬ ಪುಸ್ತಕವನ್ನೇ ಅಸಂಗತವಾದದ ಪ್ರತಿಪಾದನೆಗೆ ಬರೆದ ಆಲ್ಬರ್ಟ್ ಕಾಮೂ ಅಸಂಗತದ ಪರಿಕಲ್ಪನೆಯನ್ನು ಹೀಗೆ ವಿವರಿಸಿದ್ದಾನೆ. "ತನ್ನ

ಸುತ್ತಲ ಪ್ರಪಂಚದಲ್ಲಿನ ಉದ್ದೇಶ ಯಾವುದು ಎಂಬ ಬಗ್ಗೆ ಯಾವ ಪುರಾವೆಗಳನ್ನು ನೀಡದ ಪ್ರಪಂಚ ಈ ಎರಡು ಅಂಶಗಳ ನಡುವಿನ ಕರ್ಷಣವೇ ಅಸಂಗತ".[೧೧]

ಅಸಂಗತತೆಯ ತೀವ್ರ ಅನುಭವಗಳು, ಹಾಗೇ ಅಸಂಗತ ಸನ್ನಿವೇಶಗಳ ದಟ್ಟ ವಾತಾವರಣವನ್ನಾಗಲೀ, ಅಥವಾ ಇಡೀ ಪಾತ್ರದ ನಡೆ-ನುಡಿಗಳಲ್ಲಿ ಅಸಂಗತತೆಯ ಸಂಪೂರ್ಣ ಸಂವೇದನೆಯಾಗಲೀ 'ಹಳದಿಮೀನು' ಕಾದಂಬರಿಯ 'ಅವನು' ಪಾತ್ರದಲ್ಲಿ ಪ್ರಕಟಗೊಳ್ಳುವುದಿಲ್ಲ. ಜೊತೆಗೆ ಅಸ್ತಿತ್ವವಾದ ಅಥವಾ ಅಸಂಗತವಾದದ ನಿರಾಶಜನಕ ವಿಚಾರಧಾರೆಗಳಂತೆ ಅವನು ಹತಾಶೆಗೊಂಡು ತನ್ನನ್ನು ತಾನು ನಿಷ್ಕ್ರಿಯಗೊಳಿಸಿಕೊಳ್ಳುವ ಉದ್ದೇಶವೂ ಕಂಡುಬರುವುದಿಲ್ಲ. ಬದುಕಿನ ದ್ವಂದ್ವಗಳನ್ನು, ಜನರು ಬದುಕಿಗಾಗಿ ಹಾಕುವ ಮುಖವಾಡಗಳನ್ನು ಕಂಡು ಜಿಗುಪ್ಸೆಗೊಳ್ಳುವಾಗಲೂ ಅದರೊಂದಿಗೆ ಬದುಕುವ ಪ್ರೇರಣೆಗಾಗಿ ಹಂಬಲಿಸುತ್ತಿದ್ದವನಂತೆ ಕಾಣುತ್ತಾನೆ. ಇದಕ್ಕೆ ಈ ಕೆಳಗಿನ ಸಂದರ್ಭವನ್ನು ಗಮನಿಸಬಹುದು.

"ನೀನು ಏಕೆ ಹೀಗೆ? ಜನರನ್ನು ಕಂಡರೆ ಇಷ್ಟು ಆಸಕ್ತಿ ಯಾಕೆ?"[೧೨]

"ಒಬ್ಬೊಬ್ಬರು ಒಂದೊಂದು ಮಾದರಿ"

"ಹಾಗಿದ್ದರೆ ಮಾದರಿ ರಕಮುಗಳನ್ನು ಎಣಿಸಿ ತಕ್ಕಂತೆ ಜನರನ್ನು ನಡೆಸಿಕೋ. ನನ್ನನ್ನು ಮಾತ್ರ ಒಂದು ರಖಮಿಗೆ ಸೇರಿಸಿ ಆಡವಾಡಿಸಬೇಡ".

"ನಿನಗೇನೋ ಹೊಟ್ಟೆಕಿಚ್ಚು, ಹೊಟ್ಟೆಕಿಚ್ಚು ಬರುವುದು ಯಾವಾಗ ಗೊತ್ತೆ? Inferiority complex, ಸಲ್ಲದ ದೈನ್ಯ, ದೀನಾನುತನ ಅಂತ ಯಾರೋ ಅಂದಿದ್ದರು. ಅಂತದ್ದು ನಿನಗೇನಾಗಿದೆ?

"ನನಗೇನೋ ದೈನ್ಯದ ಭಯವಿಲ್ಲ. ಈ ಪ್ರಪಂಚದ ಮುಕ್ಕಾಲು ಪಾಲು ಜನಕ್ಕಿಂತ ನಾನು ಸಾವಿರಾರು ವರ್ಷ ಮುಂದೆ ಹೋಗಿದ್ದೇನೆ. ಅಂತಲೇ ನನ್ನ ಅಭಿಪ್ರಾಯ. ನನ್ನ ಶಕ್ತಿ ನನಗೆ ಗೊತ್ತು".

ಈ ಮೇಲಿನ ಸಂದರ್ಭದಲ್ಲಿ 'ಅವನು' ಈ ಪ್ರಪಂಚದ ಜನರ ಕುರಿತಾಗಿ ಒಂದು ಬಗೆಯ ಪೂರ್ವಾಗ್ರಹ ಹೊಂದಿದ್ದಾನೆ ಎಂಬುದು ಕಂಡುಬರುತ್ತದೆ. ಆದರೆ ಈ ಬಗೆಯ ಆಲೋಚನೆಗಳು ಮನಸ್ಸಿನಲ್ಲಿ ಮೂಡಿಬರುವುದಕ್ಕೆ ಒಂದು ಕಾರ್ಯ ಕಾರಣ ಸಂಬಂಧ ಇರಲೇಬೇಕು.

ಆಧುನಿಕತೆ-ತಂತ್ರಜ್ಞಾನ, ವಿಜ್ಞಾನಗಳ ಬೆಳವಣಿಗೆ ವಿವಾಹ ಗಂಡು-ಹೆಣ್ಣಿನ ಸಂಬಂಧದ ಕಲ್ಪನೆ, ಅರ್ಥ ಮುಂತಾದವುಗಳಲ್ಲಿ ಆದ ಬದಲಾವಣೆಯಿಂದ ಯುವ ತಲೆಮಾರುಗಳಲ್ಲಿ ಅನೇಕ ಮೂಲಭೂತ ಪ್ರಶ್ನೆಗಳು ಹುಟ್ಟಿಕೊಂಡವು ಮತ್ತು ಈ ಮೂಲಭೂತ ಪ್ರಶ್ನೆಗಳು ಮಾನವನ ಮೂಲಭೂತ ತುಡಿತಗಳನ್ನು ಪ್ರಚೋದಿಸಿದವು. ಇದು ಪ್ರತಿಯೊಬ್ಬ ವ್ಯಕ್ತಿಯ

ಅಂತಃಪ್ರಜ್ಞೆಯ ಸ್ವಾಯತ್ತ ಸ್ವಾತಂತ್ರ್ಯ ಎಂಬುದನ್ನು ಮನಃಶಾಸ್ತ್ರ ಸಮರ್ಥಿಸುತ್ತದೆ. ಇಲ್ಲಿ 'ಹಳದಿ ಮೀನು' ಕಾದಂಬರಿಯ 'ಅವನು' ಕೇವಲ ಒಬ್ಬ ವ್ಯಕ್ತಿಯಾಗದೆ ಜಾಗತೀಕರಣದ ಪ್ರಭಾವಕ್ಕೊಳಗಾದ ಯುವ ತಲೆಮಾರಿನ ಪ್ರತಿನಿಧಿಯಾಗುತ್ತಾನೆ. ಇಲ್ಲಿ 'ಅವನು' "ಈ ಪ್ರಪಂಚದ ಮುಕ್ಕಾಲು ಪಾಲು ಜನಕ್ಕಿಂತ ನಾನು ಸಾವಿರಾರು ವರ್ಷ ಮುಂದೆ ಹೋಗಿದ್ದೇನೆ, ಎಂಬಲ್ಲಿ ಈ ಪರಂಪರೆಯನ್ನು ಮತ್ತು ಸ್ಥಾಪಿತ ಮೌಲ್ಯಗಳನ್ನು ತಿರಸ್ಕರಿಸಬೇಕು ಎಂಬ ಮನಸ್ಥಿತಿಯವನಂತೆ ಕಂಡುಬರುವುದಿಲ್ಲ. ಬದಲಾಗಿ ನಡೆದುಕೊಂಡು ಬಂದದ್ದನ್ನು ನಿರಾಕರಿಸುವ ಪ್ರಶ್ನಿಸುವ ಮೂಲಕ ಹೊಸದೊಂದು ಪರಂಪರೆಯನ್ನು ಹುಟ್ಟುಹಾಕುವ ಚಿಂತನೆಗಳ ಮತ್ತು ಬದಲಾಗುತ್ತಿರುವ ಆಲೋಚನೆ, ಚಿಂತನೆಗಳ ಕನ್ನಡಿಯಾಗುತ್ತಾನೆ.

ಇಲ್ಲಿ ಅವನು ಬದುಕನ್ನು ಪ್ರೀತಿಸುತ್ತಾನೆ. ಆದರೆ ಅದು ಇಂದ್ರಿಯ ಚಪಲತೆಯನ್ನು ವಿಪರೀತ ಕೆರಳಿಸುತ್ತ, ದೈಹಿಕ ಭೋಗಾಕಾಂಕ್ಷೆಯನ್ನು ಅತಿರೇಕಕ್ಕೆ ಕೊಂಡೊಯ್ಯುತ್ತ ನೀಚಮಟ್ಟದ ಸ್ವಾರ್ಥಕ್ಕೆ ಮನುಷ್ಯನನ್ನು ಎಳೆಯುತ್ತ, ಅಶಿಸ್ತು, ಅನೈತಿಕತೆಗೆ ಅವನನ್ನು ತಳ್ಳುತ್ತಾ, ಬದುಕಿನ ಮೌಲ್ಯಗಳನ್ನು ನಾಶಗೈಯುತ್ತ ಸಾಗುವ ಆಧುನಿಕ ಮನೋವೃತ್ತಿಗೆ ವಿಜ್ಞಾನದ ಸಹಾಯದ ಪರಿಣಾಮದ ಬದುಕನ್ನಲ್ಲ. ಇಂತಹ ಬದುಕು ಅರ್ಥಹೀನ ಎಂದೆನಿಸತೊಡಗಿದ ಕ್ಷಣದಿಂದಲೇ ಇರಬೇಕು ಆತನಿಗೆ ವಿವೇಕಾನಂದ, ಪರಮಹಂಸ, ಅರವಿಂದರ ಬದುಕು ಆಕರ್ಷಣೀಯವಾಗ ತೊಡಗಿದೆ.

ವ್ಯಕ್ತಿ ಮತ್ತು ಸಮಾಜದ ಅಂತರಗಳು ಹೆಚ್ಚಾಗುತ್ತಾ ಹೋದಂತೆ ವ್ಯಕ್ತಿ ಹೆಚ್ಚು ಹೆಚ್ಚು ಸ್ವ-ಕೇಂದ್ರಿತನಾಗುತ್ತಾನೆ ಮತ್ತು ಅಧಿಕ ಜಾಗೃತನಾಗುತ್ತಾನೆ. ಆಗ ಈ ಅಂತರವು ಇನ್ನೂ ದೊಡ್ಡದಾಗುತ್ತಾ ಆತನನ್ನು ಏಕಾಂತಕ್ಕೆ ತಳ್ಳುತ್ತದೆ. ಜಗತ್ತಿನ ಜೊತೆಯಲ್ಲಿ ಸಂವಾದ ಮಾಡುವಾಗ ನಿಷ್ಕ್ರಿಯಗೊಳ್ಳುವ ಮನಸ್ಸು, ಉಳಿದ ಸಮಯದಲ್ಲಿ ಸಕ್ರಿಯಗೊಳ್ಳುವ ಮನಸ್ಸಿನ ಪ್ರವೃತ್ತಿ ಎಂದು ಅನಿಸುತ್ತದೆ. 'ಅವನ' ಪರಿಸರ ಎಂಬುದು ಬೇರೆ ಮನುಷ್ಯರು, ಸಮಾಜ, ಸರ್ಕಾರ, ಪ್ರಕೃತಿಯ ಸ್ಥಾಯಿ ಅಲ್ಲ. ನಿರಂತರ ಬದಲಾವಣೆ, ನಿರೀಕ್ಷಿತ ಬದಲಾವಣೆಗೆ ಹೊಂದಿಕೊಳ್ಳಲಾರದಂತಹ ವರ್ತನೆಗೆ ಸಂಗತವಾಗಿ ಪ್ರತಿಕ್ರಿಯಿಸಲು ಸಾಧ್ಯವಾಗದ ಸಂದರ್ಭ, ಇಲ್ಲಿ ಸಾಮಾನ್ಯ ಜಗತ್ತಿಗೆ ಹೊಂದಿಕೊಳ್ಳುವಂತೆ ತನ್ನನ್ನು ತಾನು ಬದಲಾಯಿಸಿಕೊಳ್ಳಲು ಇಷ್ಟಪಡದ ಅಥವಾ ಸಾಧ್ಯವಾಗದ ವ್ಯಕ್ತಿಗಳ ಪ್ರತಿನಿಧಿಯಾಗಿ ಕಂಡುಬರುತ್ತಾನೆ. ಪ್ಲೇಟೋ ಅಭಿಪ್ರಾಯವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. "Transcending physical desire and tending towards the spiritual or ideal relationship".[೧೩]

ಯಾವುದೇ ಸಂಬಂಧಕ್ಕೆ ಕಟ್ಟು ಬೀಳದಂತಹದ್ದೂ, ದೇಹದ ಅಥವಾ ಸಮಾಜದ ನಂಟಿನ ಬಂಧನಕ್ಕೆ ಸಿಲುಕದಂತಹದ್ದು ಆದ ಪ್ರಸ್ತುತತೆಯನ್ನು ಮೀರುವ ಪ್ರಯತ್ನವಾಗಿರಬಹುದು.

ಲೌಕಿಕ ಜಗತ್ತಿನಲ್ಲಿ ಇದ್ದುಕೊಂಡೇ ಅದನ್ನು ದಾಟಬಲ್ಲ ಸ್ಥಿತಿಗಾಗಿ ಹಂಬಲಿಸುವವನಾಗಿದ್ದಾನೆ. ಅವನ ಗ್ರಹಿಕೆಯ, ಚಿಂತನೆಯ, ಅಭಿವ್ಯಕ್ತಿಯ ನೆಲೆಗಳು ರೂಢಿಗತ ನೋಟಕ್ಕೆ ನಿಲುಕದೇ ಇರುವುದಾದರೂ ಅದು ಸರಿಯೋ, ತಪ್ಪೋ ಎಂಬುದು ಮುಖ್ಯವಲ್ಲ. ಏಕೆಂದರೆ ಅದು ಕೇವಲ ವ್ಯಕ್ತಿಯೊಬ್ಬನ ನಿಲುವಲ್ಲ. ಆ ವ್ಯಕ್ತಿಯ ಮೂಲಕ ಸಾಮೂಹಿಕ ಸುಪ್ರಪ್ರಜ್ಞೆ(collective conciousness)ಯೊಂದು ಕಾರ್ಯ ನಿರ್ವಹಿಸಿರುವ ರೀತಿಯೇ ಈ ನಡವಳಿಕೆಯ ಹಿಂದಿನ ಕ್ರಿಯೆ ಎಂದು ಅನಿಸುತ್ತದೆ. ಹಾಗೆಯೇ ಫ್ರಾಯ್ಡ್ ವಿಶ್ಲೇಸಿಸುವ ವಿವಿಧ ವ್ಯಕ್ತಿತ್ವಗಳು ಹೇಗೆ ವ್ಯಕ್ತಿಯ ಗ್ರಹಿಕೆ, ಚಿಂತನೆ, ಹೊಂದಾಣಿಕೆಗಳ ಮೇಲೆ ಪ್ರಭಾವ ಬೀರುತ್ತವೆ ಎಂಬುದರ ಮೂಲಕವೂ 'ಅವನು' ಪಾತ್ರವನ್ನು ವಿಶ್ಲೇಷಿಸಬಹುದು.

ಫ್ರಾಯ್ಡ್‌ನ ಪ್ರಕಾರ ವ್ಯಕ್ತಿಯ ವ್ಯಕ್ತಿತ್ವ 'ಇದ್', ಈಗೋ ವಾಸ್ತವ ಗ್ರಾಹಿ, ಆತ್ಮಸಾಕ್ಷಿ ಹಾಗೂ ಸೂಪರ್ ಈಗೋನಿಂದ ರೂಪುಗೊಂಡ ನೈತಿಕತೆಯ ತಾಕಲಾಟದಿಂದ ಕೂಡಿರುತ್ತದೆ. ಈಗೋ ಪ್ರಬಲವಾಗಿರುವ ವ್ಯಕ್ತಿ ವಾಸ್ತವ ಅರಿತು ತನ್ನ ಭಾವವನ್ನು ನಿಗ್ರಹಿಸುತ್ತಾನೆ. Superego ಪ್ರಬಲವಾಗಿರುವ ವ್ಯಕ್ತಿ ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿಯುತ್ತಾನೆ. ಅಥವಾ ಇದ್ದಲ್ಲೇ ಇದ್ದು ತನ್ನನ್ನು ತಾನು ಉನ್ನತ ಧ್ಯೇಯಕ್ಕೆ ತೆತ್ತುಕೊಳ್ಳುತ್ತಾನೆ. ಈ ನೆಲೆಯಲ್ಲಿ 'ಅವನು' ಪಾತ್ರದಲ್ಲಿ 'Superego' ಪ್ರಬಲವಾಗಿರುವುದು ಸ್ಪಷ್ಟವಾಗುತ್ತದೆ.

ಸಾಮಾನ್ಯವಾಗಿ ಸಾಮಾಜಿಕ ಶಿಷ್ಟಾಚಾರವನ್ನು ಮುಂದು ಮಾಡಿಕೊಂಡು ಕೆಲವರು ತಮ್ಮ ಸಹಜ ನೆಲೆಯ ಭಾವನೆಗಳನ್ನು ಯಾರೊಂದಿಗೂ ಹಂಚಿಕೊಳ್ಳದೇ ಅದುಮಿಟ್ಟುಕೊಳ್ಳುತ್ತಾರೆ. ಹಾಗಾಗಿ ಅವರ ಭಾವನೆಗಳ ಅಭಿವ್ಯಕ್ತಿಯಲ್ಲಿ ಅಸಹಜತೆ ಕಂಡುಬರುತ್ತದೆ. ಹಾಗೆಯೇ ಅಂತಹವರಲ್ಲಿ ಆರ್ತತೆಯ, ಕೊರಗಿನ, ಗಾಢವಾದ ಹಂಬಲಗಳು ಪ್ರಕಟವಾಗುತ್ತವೆ. 'ಅವನು' ನಾಗರಿಕ ಮಾನವನ ಚೌಕಟ್ಟಿನೊಳಗಿನ ಬದುಕಿನಿಂದ ಹೊರಬರುವ ಪ್ರಯತ್ನ ಮಾಡುತ್ತಾನೆ. ಈ ಬಗೆಯ ಪ್ರಯತ್ನಕ್ಕೂ ಕಾರಣ ಹುಡುಕುವುದಾದಲ್ಲಿ ವ್ಯಕ್ತಿ ಮತ್ತು ಸಮಾಜದ ಅಂತರಗಳು ಹೆಚ್ಚಾಗುತ್ತಾ ಹೋದಂತೆ ವ್ಯಕ್ತಿ ಹೆಚ್ಚು ಹೆಚ್ಚು ಕೇಂದ್ರಿತನಾಗುತ್ತಾನೆ ಮತ್ತು ಅಧಿಕ ಜಾಗೃತನಾಗುತ್ತಾನೆ. ಆಗ ಈ ಅಂತರವು ದೊಡ್ಡದಾಗುತ್ತಾ ಹೋಗುತ್ತದೆ. ಡಾ. ಯೂಂಗ್ ಅವರ ಈ ಮಾತುಗಳು ಇದನ್ನೇ ಸಮರ್ಥಿಸುತ್ತವೆ."[೧೪]

'ಅವನು' ಪಾತ್ರವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಅನೇಕ ಪ್ರಶ್ನೆಗಳು ಮೂಡುತ್ತವೆ. ಅವನೇಕೆ ಪರಿಸ್ಥಿತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲಿಲ್ಲ? ಪರಿಸ್ಥಿತಿಯ ಪರಿಮಿತಿಯಿಂದ ಬಿಡಿಸಿಕೊಳ್ಳುವ ತೀವ್ರ ಹಂಬಲದ ಹೋರಾಟವೇಕೆ? ಪಾರತಂತ್ರ್ಯದ ಸಂಕೋಲೆಯಿಂದ ತಪ್ಪಿಸಿ ಕೊಳ್ಳುವ ಪ್ರಯತ್ನವೇಕೆ?

ಬಹುತೇಕ ಮಾನವರ ಸಾಮಾಜಿಕ, ರಾಜಕೀಯ, ಆರ್ಥಿಕ ಸುಧಾರಣೆಯ ಕ್ರಮಗಳೆಲ್ಲಾ ಹೊಟ್ಟೆ ಬಟ್ಟೆ ವಸತಿಯೇ ಮೊದಲಾದ ದೈಹಿಕ ಜೈವಿಕ ಅಸ್ತಿತ್ವಕ್ಕಾಗಿಯೇ ನಡೆದಿವೆ ಎಂದೇ

ನಾವು ತಿಳಿದುಕೊಂಡಿದ್ದೇವೆ. ಆದರೆ ಮನುಷ್ಯರು 'ಅಹಂ'ನ ಅಸ್ತಿತ್ವಕ್ಕಾಗಿ ತಾನು ಹುಟ್ಟಿ ಬೆಳೆದ ತನ್ನ ಕುಟುಂಬದ ಪರಿಸರದಲ್ಲಿ, ತನ್ನ ಕಾರ್ಯ ಕ್ಷೇತ್ರದಲ್ಲಿ, ಸ್ನೇಹಿತ ಸಹೋದ್ಯೋಗಿಗಳ ಮಧ್ಯದಲ್ಲಿ, ಇತರ ಸಾಮಾಜಿಕ ವ್ಯವಹಾರಗಳಲ್ಲಿ ಹೆಣಗುತ್ತಾರೆ. ಅಸ್ತಿತ್ವವಾದದ ಜನಕನೆಸಿದ ಕಿರ್ಕೆಗಾರ್ಡ್ ಮನುಷ್ಯನು ಪಡೆಯಬಹುದಾದ ಅನುಭವಗಳೆಲ್ಲ ಈ 'ಅಹಂ'ನ ಸಂಕುಚಿತ ಬಾಗಿಲಿನ ಮೂಲಕವೇ ಬರಬೇಕು ಎನ್ನುತ್ತಾನೆ. ಮನುಷ್ಯ ಜೀವನದ ಪ್ರಮುಖ ಲಕ್ಷಣಗಳನ್ನು ಆತನು ಸಂಕ್ಷಿಪ್ತವಾಗಿ, ಸಾರರೂಪದಲ್ಲಿ, ನಾಲ್ಕೇ ಶಬ್ದಗಳಲ್ಲಿ ಸೂಚಿಸುತ್ತಾನೆ. ವ್ಯಕ್ತಿತ್ವ, ವಿರೋಧ, ಆಯ್ಕೆ ಮತ್ತು ಭಯ ಇವುಗಳೇ ಆ ಪ್ರಮುಖ ಲಕ್ಷಣಗಳು, ಇದು ಮನುಷ್ಯನ ಅಹಮಿಕೆಯ ಅಸಂಖ್ಯ ಅಲೆತಗಳನ್ನು, ಘರ್ಷಣೆಗಳನ್ನೂ, ಪರಿಮಿತಿ, ಪರಿಣಾಮಗಳನ್ನು ಸೂಚಿಸುತ್ತದೆ, ಇದೇ ದೃಷ್ಟಿಯಿಂದ ನೋಡುವುದಾದಲ್ಲಿ 'ಅವನು' 'ನಾನು' ಎಂದುಕೊಳ್ಳುವ ದೇಶ, ಕಾಲ, ಪರಂಪರೆ ಮತ್ತು ಪರಿಸರದ ಒತ್ತಡಗಳಿಗೆ ಬದ್ಧನಾಗದೇ ನಾನಾ ಆಸೆ, ಆಸಕ್ತಿ ಕ್ರಿಯೆ, ಪ್ರತಿಕ್ರಿಯೆ, ಪ್ರಭಾವ ಪ್ರತಿಭಟನೆಗಳ ಸಂಘರ್ಷದಲ್ಲಿದ್ದಂತೆ ತೋರುತ್ತದೆ. ಇದು ಅವನಲ್ಲಿ ಜ್ಞಾನ, ಗ್ರಹಿಕೆ, ಅಸ್ತಿತ್ವಗಳ ಪರಿಮಿತಿಯ ಕುರಿತಾದ ಜಾಗೃತಿಯು ಮೂಡಿದುದರ ಕಾರಣವಿರಬಹುದು ಎಂದೆನಿಸುತ್ತದೆ.

ಯಾವುದೇ ಸಂಬಂಧಕ್ಕೆ ಕಟ್ಟುಬೀಳದ, ದೇಹದ ಅಥವಾ ಸಮಾಜದ ನಂಟಿನ ಬಂಧನಕ್ಕೆ ಸಿಲುಕದ ಬದುಕು ಎಲ್ಲರೂ ಬಯಸುವಂತಹದ್ದು. ಸಾಮಾನ್ಯವಾಗಿ ಸಮಾಜದ, ಸುತ್ತಮುತ್ತಲಿನ ಪರಿಸರದ ಒತ್ತುಗಳಿಗೆ, ಅನಿಸಿಕೆಗಳಿಗೆ ಸ್ವಂತಿಕೆಯನ್ನು ಮಾರಿಕೊಂಡು, ಅವರ ನಿರೀಕ್ಷೆಗೆ ತಕ್ಕಂತೆ ತಮ್ಮ ಬದುಕನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಜನಸಾಮಾನ್ಯರ ಬದುಕನ್ನು 'ಅವನು' ಪ್ರಶ್ನಿಸುತ್ತಾನೆ ಮತ್ತು ಇದನ್ನು ಮೀರಿದ ಬದುಕನ್ನು ರೂಪಿಸಿಕೊಳ್ಳುವ ಸಲುವಾಗಿಯೇ 'ಅವಳ' ಸ್ನೇಹವನ್ನು ಬಯಸುತ್ತಾನೆ. ಆದರೆ ಈ ಬಗೆಯಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಲು ಹೊರಟವನಿಗೆ (Existential recognition) ಅಸ್ತಿತ್ವಕ್ಕೆ ಮನ್ನಣೆ ದೊರೆಯದೇ ಹೋಗುತ್ತದೆ. ಮನಃಶಾಸ್ತ್ರವು ಇದನ್ನು "ವಾಸ್ತವವನ್ನು ಅದು ಇರುವಂತೆಯೇ ಅರಿಯಲು ಪೂರ್ವಾಗ್ರಹಗಳ, ಭಾವನೆಗಳ ಕಳಂಕವಿಲ್ಲದೆ ಸ್ಪಷ್ಟವಾಗಿ ವಿಷಯ ಗ್ರಹಣವಾದ ಕಳಂಕಿತ ಗ್ರಹಿಕೆ"[೧೫] ಎಂಬುದಾಗಿ ನೋಡುತ್ತದೆ. ಆದರೆ ದಿನನಿತ್ಯದ ಏಕತಾನತೆಯ ಬದುಕು ಸಾಮಾನ್ಯವಾಗಿ ಕಾಟಾಚಾರದ, ಯಾಂತ್ರಿಕ ಬದುಕಾಗಿ ಮಾರ್ಪಡುತ್ತಿರುವ ಸಂದರ್ಭವೊಂದರಲ್ಲಿ, ವ್ಯಕ್ತಿಯೊಬ್ಬನು ತನ್ನ ಅಸ್ತಿತ್ವವನ್ನು ಬೇರೆಯವರು ಅಂಗೀಕರಿಸಿದ್ದಾರೆ ಎಂಬುದನ್ನು ದೃಢಪಡಿಸುವುದಕ್ಕೋಸ್ಕರ ಪ್ರಯತ್ನಿಸುತ್ತಿರುವಂತೆ ತೋರುತ್ತದೆ. ಇದು ನಕಾರಾತ್ಮಕತೆಯಿಂದ ಕೂಡಿರುವುದಲ್ಲ. ಒಂದು ಅನುಭವ ಮತ್ತು ಭಾವನೆಯಲ್ಲಿ ಇಬ್ಬರೂ ಸಹಭಾಗಿಗಳಾದಾಗ 'ನಾನು ಏಕಾಂಗಿಯಲ್ಲ. ಅವನಿಗೆ ಅಥವಾ ಅವಳಿಗೆ (ಜಗತ್ತಿಗೆ) ನಾನು ಬೇಕಾಗಿದ್ದೇನೆ. ಬದುಕಿಗೆ ಅರ್ಥವಿದೆ, ಜೀವನ ಸುಂದರ ಎಂಬ ಯೋಚನೆಗಳು ಮತ್ತು ಇದರ ಜೊತೆಯಲ್ಲೇ ಬಾಳಬೇಕು, ಬೆಳೆಯಬೇಕು ಎಂಬ ಅಭಿಲಾಷೆ ದೃಢೀಕರಿಸಲ್ಪಟ್ಟರೆ ಮನಸ್ಸು ಒಂದು ಬಗೆಯ ವ್ಯವಸ್ಥಿತ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸುತ್ತದೆ. ಕಳೆದುಹೋದ

ಬದುಕಿನ ಕುರಿತು, ಅರ್ಥಹೀನ ಸಂಬಂಧಗಳು, ಯಾಂತ್ರಿಕವಾದ ಮತ್ತು ವ್ಯಾಪಾರೀಕರಣಗೊಂಡ ಗ್ರಹಿಕೆ ಇವುಗಳನ್ನು ಕುರಿತ ಚಿಂತನೆ, ಸೂಕ್ಷ್ಮ ಗ್ರಹಿಕೆಯತ್ತ, ತಾತ್ವಿಕತೆಯತ್ತ ಹೊರಳುತ್ತದೆ. ಆದ್ದರಿಂದಲೇ ವಾಸ್ತವವನ್ನು ತರ್ಕಕ್ಕೆ ಒಡ್ಡುತ್ತಾನೆ. ವಾಸ್ತವ ಜಗತ್ತಿಗೆ ಹೊಂದಿಕೊಳ್ಳಲಾರದೆ ಅವನು ಅನೇಕ ಸಾರಿ ಅದರಿಂದ ಬಿಡುಗಡೆಗೊಳ್ಳಲೇಬೇಕಾದ ಅನಿವಾರ್ಯತೆಯನ್ನು ಅನುಭವಿಸುತ್ತಾನೆ. ಇದು ನಿರ್ದಿಷ್ಟ ಮಾನಸಿಕ ಜಗತ್ತಿನೊಳಗೆ ತನ್ನನ್ನು ತಾನು ಸೀಮಿತ ಗೊಳಿಸಿಕೊಂಡಂತಹ ಸ್ಥಿತಿ. ಇದರಿಂದ ಹೊರಬರಬಹುದಾದ ಸಾಧ್ಯತೆ ಬೇಕಾದಷ್ಟಿದೆಯಾದರೂ ಆತನಿಗೆ ಅದರಲ್ಲಿ ಆಸೆಯಿಲ್ಲ. ವಿಷಯ ಸುಖ ಎಂಬುದು ಈ ಜಗತ್ತು ತನ್ನ ಉಳಿವಿಗೆ ಪರಂಪರಾನುಗತವಾಗಿ ರೂಢಿಸಿ ಬೆಳೆಸಿಕೊಂಡು ಬರುತ್ತಿರುವ ಒಂದು ಉದ್ದೇಶಪೂರ್ವಕ ಕ್ರಿಯೆ. ಆದರೆ ಈ ಕ್ರಿಯೆಯನ್ನು 'ಹಳದಿ ಮೀನು' ಕಾದಂಬರಿಯ 'ಅವನು' ಗ್ರಹಿಸಿರುವ ರೀತಿಯೇ ಬೇರೆ. ತನ್ನ ಫಲವಂತಿಕೆಯನ್ನು, ಗಂಡಸುತನವನ್ನು ಜಗತ್ತಿಗೆ ತೋರುವ, ಹೆಣ್ಣು ಗಂಡುಗಳ ಒತ್ತಡವೇ ಮಕ್ಕಳನ್ನು ಪಡೆಯುವ ಅನಿವಾರ್ಯತೆ ಎಂಬಂತೆ ಗಂಡು+ಹೆಣ್ಣು, ವಿವಾಹ, ದಾಂಪತ್ಯ, ಜವಾಬ್ದಾರಿ ಇವೆಲ್ಲದರ ಹಿಂದಿನ ಉದ್ದೇಶ ಎಂಬುದಾಗಿಯೇ ಗ್ರಹಿಸುತ್ತಾನೆ.

'ಅವನು' ಪರಸ್ಪರ ವಿರುದ್ಧವಾದ ಎರಡು ಬಗೆಯ ಪ್ರವೃತ್ತಿಗಳಿಂದ ಕೂಡಿರುವಂತೆ ಕಂಡುಬರುತ್ತಾನೆ. ಎರಡು ಬಗೆಯ ವ್ಯಕ್ತಿಗಳಿಗೆ ಮಾತ್ರ ಯಾವ ಮಾನಸಿಕ ಸಂಘರ್ಷಗಳೂ ಇರುವುದಿಲ್ಲ. ಯಾರು ತಮ್ಮ ಕೆಳಸ್ತರದ ಪ್ರವೃತ್ತಿಗಳಿಗೆ ಸಂಪೂರ್ಣವಾಗಿ ಗುಲಾಮರಾಗಿದ್ದಾರೋ ಅವರು ಮತ್ತು ಯಾರು ಈ ಕೆಳಸ್ತರದ ಪ್ರವೃತ್ತಿಗಳ ಮೇಲೆ ಪ್ರಭುತ್ವವನ್ನು ಸ್ಥಾಪಿಸಿಕೊಂಡಿದ್ದಾರೋ ಅವರು. ಈ ಎರಡು ಬಗೆಯವರನ್ನು ಹೊರತುಪಡಿಸಿ ಇನ್ನುಳಿದವರೆಲ್ಲರೂ ಆಂತರಿಕ ಸಂಘರ್ಷಗಳಿಗೆ ಒಳಗಾದವರೆ. ಈ ಬಗೆಯ ಸಂಘರ್ಷಗಳಿಗೆ ಕಾರಣ ತಮ್ಮ ಮನಸ್ಸಿನ ಮೇಲೆ ಸಮರ್ಪಕವಾದ ಅಥವಾ ಯಶಸ್ವಿಯಾದ ಹತೋಟಿಯನ್ನು ಸಾಧಿಸಿಕೊಂಡಿಲ್ಲ ಎಂಬುದು ಸಾಮಾನ್ಯ ಅಭಿಪ್ರಾಯವಾಗಿ ಬಿಡುತ್ತದೆ.

ಆದರೆ ಮನುಷ್ಯ ವೈಚಾರಿಕ ಮನಸ್ಸಿನ ಹಿಂದೆ ಉದ್ರಿಕ್ತ ಹಾಗೂ ಆದ್ಯಾವಸ್ಥೆಯಲ್ಲಿರುವ ಸುಪ್ತಾವಸ್ಥೆಯೊಂದಿರುವುದನ್ನು ಆಧುನಿಕ ಮನಃಶಾಸ್ತ್ರ ತೋರಿಸಿಕೊಟ್ಟಿದೆ. ಪ್ರತಿಯೊಂದನ್ನೂ ಅನುಮಾನದಿಂದ, ತರ್ಕದಿಂದ ನೋಡುವ, ಸೌಂದರ್ಯದ ಹಿಂದೆ ಮೃಗವಿರುವುದನ್ನು ಕಾಣಲೆತ್ನಿಸುವ ಪ್ರವೃತ್ತಿಯು ಇದು.

ತನ್ನ ಅಸ್ತಿತ್ವಕ್ಕೆ ತಕ್ಕದಾಗಿರುವ ತತ್ವಗಳನ್ನು ವಿರೋಧಿಸುವ ರೀತಿಯಲ್ಲಿ ಮನುಷ್ಯನು ಪ್ರಕೃತಿಯ ಕಠಿಣ ತರ್ಕಕ್ಕೆ ಪ್ರತಿಯಾಗಿ ಏನನ್ನಾದರೂ ನಿರ್ಮಿಸಲು ಪ್ರಯತ್ನಿಸುತ್ತಿರುತ್ತಾನೆ. ಅಂತರ್ ಹೋರಾಟದ ಯಶಸ್ಸು ಸಮಸಂಯೋಜನೆ, ಸಮಚಿತ್ತ ಉಂಟುಮಾಡದೆ ಹೋದಾಗ ಮತ್ತೊಂದು ಬಗೆಯ ಮಾನಸಿಕ ಜಗತ್ತು ರೂಪುಗೊಂಡುಬಿಡುತ್ತದೆ.

ಒಂದು ಸಾರಿ ಮನಸ್ಸು ಒಂದು ನಿರ್ಧಿಷ್ಟ ಸಂಗತಿಯತ್ತ ಚಲನೆಯನ್ನು ಪಡೆದುಕೊಂಡರೆ, ವಿರುದ್ಧವಾದ ಶಕ್ತಿಯೊಂದು ಅದರ ಮೇಲೆ ಕಾರ್ಯನಿರ್ವಹಿಸುವವರೆಗೆ ಅದು ಚಲಿಸುತ್ತಲೇ ಇರುತ್ತದೆ. ಹಾಗೆಯೇ ಬಂದು ಬಾರಿ ವ್ಯಕ್ತಿಯ ಮನಸ್ಸು ಯಾವುದೇ ಒಂದು ತರ್ಕಕ್ಕೆ ಬದ್ಧವಾದರೆ ಅದನ್ನು ಬೇರೊಂದು ಶಕ್ತಿ ತಳ್ಳುವವರೆಗೆ ಅಥವಾ ಒಡೆಯುವವರೆಗೂ ಅದರಿಂದ ಮುಕ್ತವಾಗಲಾರದು. ಕ್ರಾಂತಿಯಲ್ಲಿ ಸಂಭವಿಸುವಂತೆ ಒಂದು ಸಾಮಾಜಿಕ ಸಂದರ್ಭದಲ್ಲಿ ವ್ಯಕ್ತಿಯಲ್ಲಿ ಆವರಿಸಿಕೊಂಡಿರುವ ಯಾವುದೇ ಆಲೋಚನೆಗಳು ಅದನ್ನು ಪುಷ್ಟೀಕರಿಸುವಂತೆ ಅಥವಾ ನಿರಾಕರಿಸುವಂತಹ ಬಲವಾದ ತಾತ್ವಿಕತೆಯಲ್ಲಿ ವಿಲೀನಗೊಂಡಾಗ ಮಾತ್ರ ಅದರಲ್ಲಿ ವ್ಯತ್ಯಾಸವನ್ನು ಕಾಣಬಹುದು. ಇಲ್ಲಿ 'ಅವನು' ತಾನು ಗ್ರಹಿಸಿದ ಗ್ರಹಿಕೆಗಳನ್ನು, ಚಿಂತನೆಯಲ್ಲಿ ಪ್ರಜ್ಞೆ, ವಸ್ತು, ಮನಸ್ಸು, ವಿಶ್ವ ಈ ಸಂಬಂಧಗಳನ್ನು ತಾನೇ (Judge) ತೀರ್ಮಾನ ಮಾಡುವ ಪ್ರಯತ್ನದಲ್ಲಿ ಸಫಲನಾಗಿದ್ದಾನೋ ವಿಫಲನಾಗಿದ್ದಾನೋ ಎಂಬುದನ್ನು ಹೇಳುವ ಉದ್ದೇಶ ಮುಖ್ಯವಲ್ಲ. ಆದರೆ ಈ ಜಗತ್ತು, ನಿಸರ್ಗದ ಶಕ್ತಿ, ಪ್ರಜ್ಞೆ, ಮನಸ್ಸು, ಇವೆಲ್ಲವು ಎರಡು ಬಗೆಯ ವಾದಗಳಿಗೆ ಒಲಿದಿರುವುದನ್ನು ಸ್ಪಷ್ಟವಾಗಿ ನಿರಾಕರಿಸುವ ವ್ಯಕ್ತಿಯ ಆಧುನಿಕ ಸಂವೇದನೆಗಳು ಮತ್ತು ಪರಂಪರಾಗತ ವ್ಯವಸ್ಥೆಯೊಂದಿಗಿನ ಸಂಘರ್ಷ ಎದ್ದು ಕಾಣುತ್ತದೆ. ಅಂದರೆ ಈ ಜಗತ್ತು ವಿಶಾಲವಾದ ನಿಯಮಗಳಿಗೆ, ಅಧೀನವಾದ ಪ್ರಜ್ಞೆಯಿರುವ ಸಂಗತಿಯಾಗಿರುವುದು ಸ್ಪಷ್ಟ ಹಾಗೂ ಭೌತಿಕ ಜಗತ್ತು ಆಯಾ ವ್ಯಕ್ತಿಯ ಮನಸ್ಸಿನ ಬಾಹ್ಯ ಬಿಂಬವಾಗಿರುತ್ತದೆ.

'ಅವನು' ವೈಯಕ್ತಿಕತೆ ಮತ್ತು ಸಾಮಾಜಿಕ ಸಂಬಂಧಗಳ ನಡುವೆ ಅನಿಯಂತ್ರಿತನಾಗಿ ಸಿಲುಕಿದ್ದಾನೆ ಮತ್ತು ಆತನ ನಿಯಂತ್ರಣದಲ್ಲಿರದ ಪ್ರಸಂಗಗಳಲ್ಲಿ ಪರಾಧೀನನಾಗಿ ಸಿಲುಕುತ್ತಾನೆ. ಕಾರ್ಯಗಳು ಆತನಿಂದ ಸಾಗಿ ಹೋಗುತ್ತವೆ. ಈ ರೀತಿಯ ಬದುಕಿಗೆ ಒಗ್ಗಿಕೊಳ್ಳುವಾಗ ವೈಯಕ್ತಿಕ ಸ್ವಾತಂತ್ರ್ಯವು ಉಳಿಯುವುದೇ ಇಲ್ಲ. ನಿಶ್ಚಿತವಾದ ಮಾರ್ಗದಲ್ಲಿ ಜೀವನ ಕ್ರಮವು ನಡೆದಂತೆ ಈ ಸ್ವಾತಂತ್ರ್ಯವು ಕಡಿಮೆ ಆಗುವುದನ್ನು ಗ್ರಹಿಸಿರುವ ಸಾಧ್ಯತೆ ಇದೆ.

ಮನುಷ್ಯರ ಜೀವನ ವಿಧಾನಗಳು, ಸಂಬಂಧಗಳು, ಸ್ಥಿರವಾದುವಲ್ಲ. ಸದಾ ಬದಲಾಗುತ್ತಿರುತ್ತವೆ. ಒಂದು ನಿರ್ದಿಷ್ಟ ಅವಧಿಯಲ್ಲಿ ಮಾನವ ಸಂಬಂಧಗಳು ಮತ್ತು ಕಾಲದಿಂದ ಕಾಲಕ್ಕೆ ಇಂತಹ ಸಂಬಂಧಗಳಲ್ಲಿ ಉಂಟಾಗುವ ಪರಿವರ್ತನೆಯ ಸಾಮಾನ್ಯ ನಿಯಮಗಳು. ಮನುಷ್ಯ ಸಂಬಂಧದ ಮಾನಸಿಕ ಉತ್ಪನ್ನಗಳ ಪರಸ್ಪರ ಸಂಬಂಧದ ಅಧ್ಯಯನವು ಕೂಡಾ ಮಾನಸಿಕ ಜಗತ್ತಿನ ಕಕ್ಷೆಯಲ್ಲಿ ಬರುತ್ತದೆ.

ಪ್ರಧಾನವಾಗಿ 'ಅವನು' ಬಾಹ್ಯ ಜಗತ್ತಿನ ವಾಸ್ತವತೆಯ ಹಿಂದೆ ಸರಿದು ಶಬ್ದಗಳ ಹಿಂದಿರುವ ಮಾನಸಿಕ ಪ್ರವೃತ್ತಿಗಳ ಭಾವಕೋಶ ಸಂಬಂಧಗಳು ಉದ್ಬೋಧಗೊಳ್ಳುವುದು ಕಂಡುಬರುತ್ತದೆ ಮತ್ತು ಆತನಿಗೆ ಅದೇ ಒಂದು ವಾಸ್ತವ ಜಗತ್ತಾಗುತ್ತದೆ. ವಸ್ತುನಿಷ್ಠತೆಯಿಂದ ವ್ಯಕ್ತಿನಿಷ್ಠತೆಯ ಸರ್ವಸಾಮಾನ್ಯ ಸಾಮಾಜಿಕತೆಯಿಂದ ವ್ಯಕ್ತಿಗತ ಸಾಮಾಜಿಕತೆಯು ಹೊರಹೊಮ್ಮಿದೆ.

ಕಾಮ–ಪ್ರೇಮವನ್ನು ಉದಾತ್ತೀಕರಿಸಲು, ಅನುಭಾವದ ಜೊತೆಗೆ ಹೊಂದಿಸಲು 'ಅವನು' ಪ್ರಯತ್ನಿಸಿದಂತೆ ತೋರುತ್ತದೆ. ವ್ಯಕ್ತಿ ತೀವ್ರತೆಯು ಕಾಮ, ಪ್ರೇಮವನ್ನು ತಿರಸ್ಕರಿಸುವ ಮತ್ತು ವಾಸ್ತವವನ್ನು ಮೀರಿದ ಮೇಲ್ಮಟ್ಟದ ಗ್ರಹಿಕೆಯೊಂದನ್ನು ಹೇರುವ ಪ್ರಯತ್ನವನ್ನು ಇಲ್ಲಿ ಕಾಣಬಹುದಾಗಿದೆ. ಸಾಂಸ್ಥಿಕ ಮೌಲ್ಯಗಳಿಗಿಂತ ಭಿನ್ನವಾದ ಬದುಕಿನ ಮೌಲ್ಯಗಳ ಅನ್ವೇಷಣೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತಾನೆ. ಸಾಂಪ್ರದಾಯಿಕ ಸಾಂಸ್ಥಿಕ ಮೌಲ್ಯಗಳಾದ ವಿವಾಹ, ಸಂತಾನೋತ್ಪತ್ತಿ, ವ್ಯಕ್ತಿತ್ವವೇ ಇಲ್ಲದಿರುವ ಪರಿಶ್ರಮದ ಬದುಕು, ಇವುಗಳಾಚೆಗಿನ ಅಸ್ತಿತ್ವದ ಅನ್ವೇಷಣೆಗೆ 'ಅವನು' ತನ್ನನ್ನು ತಾನು ತೊಡಗಿಸಿಕೊಂಡಿರುವುದು ಸ್ಪಷ್ಟ. ಏಕೆಂದರೆ ಅವನ ಸ್ವಗತದಲ್ಲಿ ಸಾಂಪ್ರದಾಯಿಕ, ಪರಂಪರಾನುಗತ ಗ್ರಹೀತಗಳನ್ನು ಪ್ರಶ್ನಿಸುವ ದಿಟ್ಟತನ ಮತ್ತು ವಾಸ್ತವವನ್ನು ತಳಮಟ್ಟ ಶೋಧಿಸುವ ಮಹತ್ವಾಕಾಂಕ್ಷೆಯು ಕಂಡುಬರುತ್ತದೆ. ಜೊತೆಗೆ ವಿವಾಹ, ದಾಂಪತ್ಯ, ಸಂತಾನೋತ್ಪತ್ತಿ, ಜವಾಬ್ದಾರಿ ಇವುಗಳನ್ನು ಹೊಸದಾಗಿ ಪುನರ್ನಿರ್ಮಿಸುವ, ಪುನರ್ ಜೀವಿಸುವ, ಶೋಧಿಸುವ ಹಠವೇ ಅವನನ್ನು ಕ್ರಿಯಾಶೀಲನನ್ನಾಗಿಸಿದೆ. ಆದರೆ ನಾಗರೀಕ ಜಗತ್ತಿನೊಳಗೆ ಬೇರು ಬಿಟ್ಟಿರುವ, ಬದುಕಿನ ರೀತಿ ರಿವಾಜುಗಳ ನಿಜವಾದ ಸ್ವರೂಪ, ಅಂತರಾರ್ಥ ಗಳ ಕುರಿತಾಗಿ ತನ್ನದೇ ಆದ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಲು ನಿರಾಕರಿಸುತ್ತಾನೆ. ಹಾಗೆಯೆ ಈ ವಿಷಯದಲ್ಲಿ ಜೀವನದೊಂದಿಗೆ ರಾಜಿ ಮಾಡಿಕೊಳ್ಳಲು ನಿರಾಕರಿಸುತ್ತಾನೆ.

ಮನುಷ್ಯನ ಜನ್ಮಜಾತ ಭಾವನೆಗಳು ಮತ್ತು ಅರಿವುಗಳ ಸ್ವರೂಪವನ್ನು ಮನಃಶಾಸ್ತ್ರ ನಿಖರವಾಗಿ ನಿರ್ದೇಶಿಸಲು ಸಂಪೂರ್ಣವಾಗಿ ಸಾಧ್ಯವಾಗಿಲ್ಲ. ಒಬ್ಬ ವ್ಯಕ್ತಿಯ ಬದುಕಿನ ಕೆಲವು ನಿಮಿಷಗಳ ಅನುಭವವನ್ನು ಅಥವಾ ಅನುಭವಗಳನ್ನು ವಿಶ್ಲೇಷಿಸಿ, ಆ ಮನಸ್ಸು ನಡೆಯುವ ರೀತಿಯನ್ನು ಮತ್ತು ಆ ಅನುಭವಗಳ ಅಂತರಂಗವನ್ನು ಸ್ಥೂಲವಾಗಿ ಗುರುತಿಸಬಹುದು. ಆದರೆ ಅನೇಕ ಆಯಾಮಗಳಿಂದ ಪ್ರಚೋದಿಸಲ್ಪಟ್ಟ ಮನಸ್ಸನ್ನು ವಿಶ್ಲೇಷಿಸುವುದು ಸಮಗ್ರವಾದುದೆಂದು ಹೇಳಲಾಗುವುದಿಲ್ಲ. 'ಅವನು' ಇಡೀ ಕಾದಂಬರಿಯ ಕೇಂದ್ರ ವ್ಯಕ್ತಿಯಾಗಿ, ಅನ್ವೇಷಕನಾಗಿ ಕಂಡುಬರುತ್ತಾನೆ. ಒಂದು ಬಗೆಯಲ್ಲಿ ಯಥಾವತ್ತಾಗಿ ನಡೆದುಕೊಂಡು ಹೋಗುತ್ತಿರುವ ಜೀವನ ಪ್ರವಾಹದ ವಿರುದ್ಧ ಈಜಿ ಜಯಿಸುವೆನೆಂಬ(ego) ಅಹಂ ಜಾಗೃತಗೊಂಡವನಂತೆ ಕಂಡುಬರುತ್ತಾನೆ. ಇಡೀ ಕಾದಂಬರಿಯ ತುಂಬಾ ಅವನ ಪ್ರಜ್ಞೆಯ ಮಟ್ಟಿಗಿನ ಸತ್ಯ ನಿರೂಪಣೆಯೇ ಪ್ರಮುಖವೆಂದು ಕಂಡುಬರುತ್ತದೆ. ಏಕೆಂದರೆ ಆತನ ಪ್ರಜ್ಞೆಯ ಜೀವನದ ಗ್ರಹಿಕೆಯು ಸಾಮಾನ್ಯ ಜೀವನದ ಗ್ರಹಿಕೆಗಿಂತ ಸಂಪೂರ್ಣವಾಗಿ ಭಿನ್ನವಾಗಿ ನಿಲ್ಲುತ್ತದೆ. ಕೊನೆಗೆ ಸ್ವಯಂ ಬದುಕನ್ನು ಕೊನೆಗಾಣಿಸುವ ಪ್ರಕ್ರಿಯೆಯ ಹಿಂದೆ ಸೂಕ್ಷ್ಮವಾದ ಅನೇಕ ಅಂಶಗಳು ಅಡಗಿರುವುದನ್ನು ಗ್ರಹಿಸಬಹುದು. ಜೊತೆಗೆ ವ್ಯಕ್ತಿಯೊಬ್ಬನ ಗ್ರಹಿಕೆ, ನಿಲುವು ಕಟ್ಟಕಡೆಯ ಸತ್ಯವಲ್ಲ ಎಂಬುದನ್ನು ಧ್ವನಿಸುತ್ತದೆ.

ಸಾಹಿತ್ಯಕವಾಗಿ ಪಾತ್ರ ಸೃಷ್ಟಿಯಲ್ಲಿ ಪ್ರಜ್ಞಾಪೂರ್ವಕ ತಂತ್ರವಿದೆ. ಮೂಲ ಪ್ರವೃತ್ತಿಗಳು ಮತ್ತು ಬಾಲ್ಯದಿಂದ ರೂಢಿಸಿಕೊಂಡು ಬಂದ ಪ್ರಜ್ಞೆಗಳ ನಡುವೆ ಘರ್ಷಣೆಗಳು ಪ್ರಜ್ಞಾಪೂರ್ವಕವಾಗಿ

ಮತ್ತು ಉದ್ದೇಶಪೂರ್ವಕವಾಗಿ ನಿರ್ವಹಿಸಿರುವಂತೆ ತೋರುತ್ತದೆ. ವಾಸ್ತವವಾದ, ಯಥಾರ್ಥವಾದ ಎಂಬ ಇತ್ತೀಚಿನ ಬೆಳವಣಿಗೆಗಳ ಮಾರ್ಗಗಳಲ್ಲಿ ಚಲಿಸಿದ ನಂತರ ಇವುಗಳ ಮಿತಿಯೂ ಗೊತ್ತಾಗತೊಡಗಿದೆ. ಆದ್ದರಿಂದಲೇ ಇವುಗಳನ್ನು ಮೀರಿದ ಗ್ರಹಿಕೆಯ ಮತ್ತು ಅಭಿವ್ಯಕ್ತಿಯ ಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುವ ಸುಪ್ತಪ್ರಜ್ಞೆಯೆ ಈ ಪಾತ್ರದ ಸೃಷ್ಟಿಯ ಹಿಂದೆ ಕಾರ್ಯ ನಿರ್ವಹಿಸಿರುವಂತೆ ತೋರುತ್ತದೆ. ಸಂಕಲ್ಪ ಹಾಗೂ ಕ್ರಿಯಾಶೀಲತೆಗಳ ಸಾಹಿತ್ಯ ಪ್ರಜ್ಞೆ ಈ ಕೃತಿಯಲ್ಲಿ ಜಿಜ್ಞಾಸೆಯ ಮತ್ತು ಸೂಕ್ತ ಚಿಂತನೆಯ ಸ್ಥಿತಿಗಳನ್ನೊಳಗೊಳ್ಳಲು ಯತ್ನಿಸಿದೆ.

ಹಳದಿಮೀನು ಕಾದಂಬರಿಯ 'ಅವನು' ಪಾತ್ರವನ್ನು ವಿಭಿನ್ನ ಆಯಾಮಗಳಿಂದಲೇ ನೋಡಬೇಕಾಗುತ್ತದೆ. ಮನುಷ್ಯ ಮತ್ತು ಆತನ ಮನಸ್ಸು ಅದು ಆತನಿಗೆ ಸೀಮಿತವಾದ ಜಗತ್ತು. ಪ್ರತಿಯೊಬ್ಬ ಮನುಷ್ಯ ತನ್ನ ಬಾಳಿನಲ್ಲಿ ಆಯ್ಕೆ ಮಾಡಿಕೊಳ್ಳಲೇಬೇಕಾಗುತ್ತದೆ. ಅದು ಐಹಿಕ ಜಗತ್ತಾಗಿರಬಹುದು, ಆಧ್ಯಾತ್ಮಿಕ ಜಗತ್ತಾಗಿರಬಹುದು. 'ಅವನು' ಕೂಡಾ ಬದುಕನ್ನು ವಿಭಿನ್ನವಾಗಿ ಗ್ರಹಿಸುತ್ತಾನೆ. ಹಾಗೆ ಇರಬೇಕೆಂದು ಬಯಸುತ್ತಾನೆ. ಆದರೆ ಹೀಗೆ ಆಯ್ಕೆ ಮಾಡಿ ಕೊಳ್ಳುವಾಗ ಸಾಮಾನ್ಯ ಬದುಕಿನ ಹೆಣ್ಣು, ಗಂಡು ಸಂಬಂಧವನ್ನು ಒಪ್ಪಿಕೊಳ್ಳುತ್ತಾನಾದರೂ 'ವಿವಾಹ' ಅದರ ಅರ್ಥ, ಮೌಲ್ಯ ಎಂಬುದನ್ನು ಪುನರ್ನಿರ್ಮಿಸುವ ಆಶಯವನ್ನು ವ್ಯಕ್ತಪಡಿಸುತ್ತಾನೆ. ಈ ಬಗೆಯ ಆತನ ಗ್ರಹಿಕೆ, ಚಿಂತನೆಯ ವಿಚಾರಕ್ಕೆ ಸ್ಪಷ್ಟವಾದ ಕಾರಣ ಹೇಳಲು ಆಗುವುದಿಲ್ಲ. ಆದರೆ ಜಗತ್ತಿನಲ್ಲಿ, ಅಸ್ತಿತ್ವದಲ್ಲಿರುವ ತತ್ವಗಳು, ಮೌಲ್ಯಗಳು, ಸಿದ್ಧಾಂತಗಳು ಅರ್ಥಹೀನವಾದವು ಎಂದು ಅನಿಸಿದ ಸಂದರ್ಭವೊಂದರಲ್ಲಿ ವ್ಯಕ್ತಿಯೊಬ್ಬನಲ್ಲಿ ಮೂಡಿಬಂದ ಆಲೋಚನೆಯ ಪರಿಣಾಮ ಇದು ಎಂದೆನಿಸುತ್ತದೆ. ಸಮಾಜದ ತತ್ವಗಳು ಮತ್ತು ಸಾಮುದಾಯಿಕ ಗುರಿಗಳ ಜಗತ್ತಿನಲ್ಲಿ ವೈಯಕ್ತಿಕವಾದ ಹೊಣೆಯ ಮಹತ್ವದ ಕುರಿತಾದ ಅಸ್ಪಷ್ಟತೆಯು ಇದಕ್ಕೆ ಕಾರಣವಾಗಿರಬಹುದು. ತನ್ನ ಪರಿಸರದಿಂದ ತಾನು ಭಿನ್ನ ಎಂಬ ಮನೋಭಾವವು ಎಲ್ಲವನ್ನೂ, ಎಲ್ಲದನ್ನೂ ಅನುಮಾನ ದಿಂದಲೇ ನೋಡುವ ಸ್ವಭಾವವು ಬೆಳೆಯುವುದಕ್ಕೆ ಕಾರಣವಾಗಿರುವುದು ಇದಾಗಿರಬಹುದು. ಇದು ಮನುಷ್ಯ ಪ್ರಜ್ಞೆಯ ಬಿರುಕಿನಿಂದ ಉಂಟಾಗುವಂತಹದ್ದು. ತನ್ನ ಭೂತಕಾಲದ ಯಾವುದೋ ಬೇಡದ ಅನುಭವವು ಮನಸ್ಸಿನಲ್ಲಿ ಹಾಗೆಯೇ ಉಳಿದುಕೊಂಡುಬಿಡುವ ಕಾರಣದಿಂದಲೂ ಉಂಟಾಗಿರಬಹುದು. ವಿಚಾರಪರ ಮನಸ್ಸು ಮತ್ತು ಭಾವನಾಪರ ಮನಸ್ಸಿಗೂ ಇರುವ ವೈರುಧ್ಯ ಸ್ಥಿತಿ, ತಾನು ವಾಸಿಸುವ ಪರಿಸರಕ್ಕಿಂತ ಭಿನ್ನವಾದ ವಿಶಿಷ್ಟವಾದ ಮತ್ತು ತರ್ಕಬದ್ಧವಾದ ವಿಚಾರಧಾರೆಗಳಿಂದ ಪ್ರಭಾವಿತನಾದ 'ಅವನು' ಹೊಂದಿಕೊಳ್ಳಲಾಗದೇ, ಸುತ್ತಲಿನ ಜಗತ್ತಿನೊಡನೆ ಅರ್ಥಪೂರ್ಣ ಸಂಬಂಧವನ್ನು ಕಳೆದುಕೊಂಡ ಮನುಷ್ಯರನ್ನು ಪ್ರತಿನಿಧಿಸುತ್ತಾನೆ.

ಆಧುನಿಕ ಮಾನವ ಪ್ರಜ್ಞೆಯಿಂದ ಮೂಡಿಬಂದ ಅನೇಕ ಆಲೋಚನೆಗಳ ಒಟ್ಟು ಮೊತ್ತವೆಂಬಂತೆ 'ಅವನು' ಕಂಡುಬರುತ್ತಾನೆ. ಬಹುಶಃ ಷೆಲ್ಲಿ, ಅಲೆಗ್ಸಾಂಡರ್, ವಿವೇಕಾನಂದರನ್ನು

ಮೆಚ್ಚಿಕೊಳ್ಳುವ ಆತ ಅವರ ತತ್ವ, ಸಿದ್ಧಾಂತಗಳ ಪ್ರಭಾವಕ್ಕೂ ಒಳಗಾಗಿರಬಹುದು. ಯಾವುದಕ್ಕೂ ಒಗ್ಗಿಕೊಳ್ಳದ, ಯಾವುದನ್ನೂ ಬಿಡಲಾರದ ದ್ವಂದ್ವಗಳಲ್ಲಿರುವಂತೆ ತೋರುತ್ತಾನೆ. ಒಂದು ಕಡೆ ಅವನೇ ಹೇಳುವಂತೆ "ಅವಳಿಗೆ ನನ್ನ ವೈಶಿಷ್ಟ್ಯ, ವ್ಯಕ್ತಿತ್ವ ಬೇಕು, ಆಗಲಿ, ಮುಂದೆ? ಅವಳಿಗೆ ನನ್ನ ಲೌಕಿಕ ಯಶಸ್ಸು ಬೇಕು. ಈ ಹಂದಿಗಳೊಡನೆ ಪೈಪೋಟಿಗಿಳಿದು ಗೆದ್ದರೆ, ನಾ ಸೋಲುತ್ತೇನೆ. ನನ್ನ ವ್ಯಕ್ತಿತ್ವ ಮುರಿದುಬೀಳುತ್ತದೆ. ಪೈಪೋಟಿ, ಕುದುರೆ ಪಂದ್ಯ ಇವುಗಳಲ್ಲಿ ಇಳಿದರೆ ನಾನು ನನ್ನತನ ಎಲ್ಲಿ ಉಳಿಯಬೇಕು? ಈ ಲೋಕವನ್ನು ಜಯಿಸುವುದಕ್ಕೆ ನಾನು ಲೌಕಿಕನಾಗಬೇಕು. ಸಾಮಾನ್ಯರನ್ನು ಮೆಟ್ಟಿ ನಿಲ್ಲುವುದಕ್ಕೆ ನಾನು ಸಾಮಾನ್ಯನಾಗಬೇಕು".[೧೬]

ಮೇಲಿನ ಸಂದರ್ಭವನ್ನು ನೋಡಿದಾಗ ಒಂದು ಬಗೆಯ ನಾರ್ಸಿಸಿಸ್ಟಿಕ್ (Narcissitic personality) ವ್ಯಕ್ತಿತ್ವ (ಸ್ವಾನುರಕ್ತ ವ್ಯಕ್ತಿತ್ವ) ಹೊಂದಿದವನಾಗಿಯೂ, ತನ್ನ ಪ್ರಾಮುಖ್ಯತೆಯೇ ಮುಖ್ಯ ಮತ್ತು ತಮ್ಮ ಬುದ್ಧಿಶಕ್ತಿ, ಯಶಸ್ಸು ಏಳಿಗೆ, ಸೌಂದರ್ಯ, ಪ್ರೀತಿ ಮುಂತಾದವುಗಳ ಭ್ರಮಾ ಲೋಕದಲ್ಲಿರುವವನಂತೆಯೂ ತೋರುತ್ತದೆ. ಅತಿಯಾದ ಪ್ರಶಂಸೆ, ತಮ್ಮ ಅನನ್ಯ, ವಿಶಿಷ್ಟ ಸಾಮರ್ಥ್ಯಗಳನ್ನು ಮೇಲ್ಮಟ್ಟದ ವ್ಯಕ್ತಿಗಳು, ಸಂಸ್ಥೆಗಳು ಮಾತ್ರ ಅರ್ಥಮಾಡಿಕೊಳ್ಳಬಲ್ಲರು ಎಂಬ ಭ್ರಮೆಯಿಂದ ಕೂಡಿರುವವನಂತೆ ಕಾಣುತ್ತಾನೆ. ಅವನು ಆತ್ಮ-ವಾಸ್ತವೀಕರಣದ (self-actualization) ತುತ್ತತುದಿಯಲ್ಲಿ ನಿಂತಿರುವಂತೆಯೂ ಕಂಡುಬರುತ್ತಾನೆ. ಆದ್ದರಿಂದಲೇ ಅಲೆಗ್ಸಾಂಡರ್ ವಿವೇಕಾನಂದರಂತೆ ತನ್ನ ೩೩ನೇ ವಯಸ್ಸಿನಲ್ಲಿ ಬದುಕನ್ನು ಅಂತ್ಯಗೊಳಿಸಿಕೊಂಡಿರುವ ಸಾಧ್ಯತೆಯೂ ಇದೆ.

'ಅವನು' ಮನುಷ್ಯ ಮನುಷ್ಯರ ಸಂಬಂಧದ ಕುರಿತಾಗಿಯೂ ವಿಶ್ಲೇಷಿಸುತ್ತಾನೆ. ಇಡೀ ಕೃತಿಯಲ್ಲಿ 'ಅವನು' ದೈಹಿಕ ನಡೆಗಿಂತ ಮಾನಸಿಕ ನಡೆಯಲ್ಲಿಯೇ ಹೆಚ್ಚು ಸಂಚರಿಸಿದಂತೆ ಕಂಡುಬರುತ್ತಾನೆ. ಸುತ್ತಲ ಜಗತ್ತನ್ನು ತನ್ನ ಮಾನಸಿಕ ಪರಿಧಿಯಲ್ಲಿಯೇ ಗ್ರಹಿಸುತ್ತಾನೆ. ಅದು ಜಗತ್ತಿನ ಸಾಮಾನ್ಯ ಬದುಕಿನ ಸ್ಥಿತಿಯ ವಿರುದ್ಧ ಈಜುವ ಪ್ರಯತ್ನ. ಅದನ್ನು ಮೀರಿ ನಿಲ್ಲುವ ತವಕ, ಆ ಮೂಲಕ ತನ್ನ ಜೀವಚೈತನ್ಯವನ್ನು ಉಕ್ಕಿಸುವ ಅವನ ಬಯಕೆ. ಆ ನಿಟ್ಟಿನಲ್ಲಿಯೇ ವಿವಾಹ, ಬದುಕು, ಸಂತಾನೋತ್ಪತ್ತಿ, ಪ್ರೀತಿ, ಪ್ರೇಮ ಮುಂತಾದ ಪರಿಕಲ್ಪನೆಯನ್ನು ಮೀರಿ ನಿಲ್ಲಲು ಹಂಬಲಿಸುತ್ತಾನೆ. ವಸ್ತುನಿಷ್ಠ ಜಗತ್ತಿನ ವಿರುದ್ಧ ತನ್ನದೇ ಆದ ಮಾನಸಿಕ ಭಾವನಿಷ್ಠ ಜಗತ್ತನ್ನು ನಿರ್ಮಿಸಿಕೊಳ್ಳಲು ಬಯಸುತ್ತಾನೆ. ಅಂತಿಮವಾಗಿ ವಸ್ತುನಿಷ್ಠ ಜಗತ್ತನ್ನು ನಿರಾಕರಿಸಲೆಂಬಂತೆ ತನ್ನ ಸಾವನ್ನು ಸಂಭ್ರಮದಿಂದ ಅಪ್ಪಿಕೊಳ್ಳುತ್ತಾನೆ. ಈ ಜಗತ್ತಿನೊಂದಿಗೆ ವರ್ತಮಾನದ ನೆಲೆಯಲ್ಲಿ ನಿಂತು ಮುಖಾಮುಖಿಯಾಗುವ ದ್ವಂದ್ವ ಕಂಡುಬಂದರೆ, ಬದುಕಿನ ಕುರಿತಾದ ಸೂಕ್ಷ್ಮ ಅವಲೋಕನದ ಹಿಂದೆ ವೈಯಕ್ತಿಕ ಸುಪ್ತಪ್ರಜ್ಞೆ (Personal Unconsciousness) ಕಾರ್ಯ ನಿರ್ವಹಿಸಿರುವುದು ಸ್ಪಷ್ಟ.

ಮನುಷ್ಯ ವರ್ಗವೆಂದರೆ ಅದು ಅನನ್ಯತೆಯ ಪ್ರತೀಕ. ಇಲ್ಲಿ 'ಅವನು' ತರಹದ ವಿಭಿನ್ನ ವ್ಯಕ್ತಿತ್ವದ ಮೂಲಕ 'ಸಾಮೂಹಿಕ ಸುಪ್ತಪ್ರಜ್ಞೆಯು" (collective consciousness) ಪ್ರಕಟಗೊಂಡಿ ರುವುದು ಸ್ಪಷ್ಟ. ಸೃಜನಶೀಲ ಸೃಷ್ಟಿಕ್ರಿಯೆಯೊಂದು ಸಮುದಾಯದ ಒಳಹೊಕ್ಕು ನೋಡುವ ಮೂಲಕ ಜಾಗೃತಗೊಳ್ಳಲು ಪ್ರಯತ್ನಿಸಿರುವಂತೆ ತೋರುತ್ತದೆ. 'ಅವನು' ಸಂಭ್ರಮದಿಂದಲೇ ಬರಮಾಡಿಕೊಂಡ ಸಾವು 'ಸಾಂಕೇತಿಕ ಸತ್ಯ'ದ (truth of symbol) ಮಹೋನ್ನತ ಮೌಲ್ಯಗಳು ಅರ್ಥಹೀನವಾಗುತ್ತಿರುವುದನ್ನು ಪ್ರತಿನಿಧಿಸುತ್ತಿರುವಂತೆ ತೋರುತ್ತದೆ. ಜೊತೆಗೆ ಈಡಿಪಸ್ಸಿನ ಗೂಢ 'ನಾನು' ಎಂಬ ಅತೃಪ್ತ ಭಾವಗಳ ಗೊಂದಲವನ್ನೇ ಅಪರಿಪೂರ್ಣತೆಯ ಶೋಧಕ್ಕೆ ಕೇಂದ್ರವಾಗಿಟ್ಟು ಕೊಂಡಿರುವುದು ಕಂಡುಬರುತ್ತದೆ. ದೀರ್ಘಕಾಲದಿಂದ ಅನುಭವಕ್ಕೆ ಬಂದ, ಅವನ ಪಾಲಿಗೆ ಸತ್ಯವೆಂದು ಸಾಬೀತಾದ ಸಂಗತಿಯನ್ನು ಒಂದು ಮಾತಿನಿಂದ ಅಥವಾ ಬಹಳ ದೃಢವಾದ ಶ್ರದ್ಧೆಯಿಂದ ಅರ್ಥೈಸಿಕೊಂಡ ವ್ಯಕ್ತಿಯೊಬ್ಬನ ಅಂತರ್ ದ್ವಂದ್ವವಾಗಿಯೂ ಅವನ ನಡವಳಿಕೆಯನ್ನು ಅರ್ಥೈಸಬಹುದು. ವ್ಯಕ್ತಿತ್ವ ನಿರ್ಮಾಣದ ಸಮಯದಲ್ಲಿ ಅಜ್ಞಾತವಾಗಿ ಸಂಗ್ರಹವಾದ ಯಾರದೋ ಅನುಕರಣೆಯೂ ಆಗಿರುವುದು ಸ್ಪಷ್ಟವಾಗುತ್ತದೆ.

ಒಟ್ಟಾರೆ 'ಅಹಂ'ಗೆ ಬಲವಾಗಿ ಅಂಟಿಕೊಂಡ ಭಾವನೆಗಳು ದೀರ್ಘ ಕಾಲದ ಅನುಭವಗಳು, ಬದುಕನ್ನು ಸಂಕೀರ್ಣತೆಯುಳ್ಳದ್ದಾಗಿಸುತ್ತವೆ. ವ್ಯಕ್ತಿಯ ರಚನಾತ್ಮಕತೆಯ ಮೇಲೆ ಪ್ರಭಾವ ಉಂಟು ಮಾಡುತ್ತದೆ. ಮನುಷ್ಯ ಅರಿವಿನ ಪರಿಧಿಯನ್ನು ವಿಸ್ತರಿಸುವ ಸಂದರ್ಭವೊಂದು ಉಂಟುಮಾಡುವ ಪ್ರಭಾವವು ಜೀವನದ, ಅರ್ಥ, ಉದ್ದೇಶಗಳನ್ನು ಕಂಡುಕೊಳ್ಳುವ ದೃಷ್ಟಿಕೋನದ ಮೇಲೆ ಪರಿಣಾಮ ಉಂಟುಮಾಡಿ ಒಂದು ಬಗೆಯ ಸೈಕಲಾಜಿಕಲ್ ಒಬ್ಸೆಷನ್‌ಗೆ ಕಾರಣವಾಗಿಬಿಡುತ್ತದೆ. ಅದೇ ರೀತಿ ಅವನ ದೃಷ್ಟಿಕೋನದ ಮಾನಸಿಕ ಹಿನ್ನಲೆಯಲ್ಲಿ ಜಗತ್ತು, ಜನರು, ಬದುಕು, ರೀತಿ, ರಿವಾಜುಗಳು ಆಗಲೇ ಮನಸ್ಸಿನಲ್ಲಿ ಸ್ವೀಕೃತವಾಗಿ ಹೆಪ್ಪುಗಟ್ಟಿರಬಹುದಾದ ಸಾಧ್ಯತೆಯನ್ನು ಕಾಣಬಹುದು. ಕ್ರಿಯಾಶೀಲವಿಲ್ಲದ ತಾತ್ವಿಕತೆಯ ಗ್ರಹಿಕೆಯ ಪರಿಣಾಮವಾಗಿ ಪ್ರಜ್ಞೆಯು ಸಂಘರ್ಷ ತ್ಮಾಕ ನೆಲೆಯಲ್ಲಿ ಮುಕ್ತಾಯಗೊಂಡಿರುವುದು ಸ್ಪಷ್ಟವಾಗುತ್ತದೆ. ವ್ಯಕ್ತಿಯೊಬ್ಬನ ಅತ್ಯಂತ ಉತ್ಕಟವಾದ ವಯುಕ್ತಿಕ ಅನುಭವಗಳು ವಾಸ್ತವ ಜಗತ್ತಿನ ಮುಂದೆ ಹೇಗೆ ಅರ್ಥಹೀನವಾಗುತ್ತದೆ ಅಥವಾ ಮಹತ್ವವನ್ನು ಕಳೆದುಕೊಳ್ಳುತ್ತವೆ ಎಂಬುದನ್ನು ಅವನ ಪಾತ್ರದ ಅಂತ್ಯದ ಮೂಲಕ ಸೂಕ್ಷ್ಮವಾದ ಒಳನೋಟವೊಂದನ್ನು ಗ್ರಹಿಸಲು ಸಾಹಿತ್ಯವು ಪ್ರಯತ್ನಿಸಿದೆ.

ಕಪಿಲ

ಮನುಷ್ಯನ ಮೂಲಭೂತ ಪ್ರವೃತ್ತಿಯೊಂದನ್ನು ನಿರ್ದಿಷ್ಟ ವರ್ತನೆಯ ಸಂದರ್ಭದಲ್ಲಿ ತಳಮಟ್ಟ ಶೋಧಿಸುವ ಮಹತ್ವಾಕಾಂಕ್ಷೆಯನ್ನು ಮೂಡಿಸಬಲ್ಲ ಪಾತ್ರಗಳು ಸಾಹಿತ್ಯವನ್ನು ಜೀವಂತಗೊಳಿಸುತ್ತವೆ. ತನ್ನೆಲ್ಲಾ ನಿರ್ಬಂಧತೆಗಳನ್ನು ಮೀರುವಂತೆ ಮನುಷ್ಯನನ್ನು ಪ್ರೇರೇಪಿಸುವ

ಕಾಮ, ಪ್ರಣಯ ಮೇಲ್ನೋಟಕ್ಕೆ ಕಾಣುವಷ್ಟು ಬಾಹ್ಯ ಸ್ವರೂಪಿಯಲ್ಲ. ಅದರೆಲ್ಲಾ ಗುಟ್ಟು ವ್ಯಕ್ತಿಯ ಆಂತರ್ಯದಲ್ಲಿ ಅಡಗಿರುವಂತಹದ್ದು. ಸಮಾಜ, ಕಟ್ಟುಪಾಡುಗಳು, ರೂಢಿ ಸಂಪ್ರದಾಯಗಳು ನೈತಿಕತೆಯನ್ನು ಪ್ರತಿಪಾದಿಸುತ್ತಿದ್ದಲ್ಲಿ ಅದಕ್ಕೆ ತೀರಾ ತದ್ವಿರುದ್ಧವಾದ ಭಾವತುಮುಲಗಳು, ಪ್ರಚೋದನೆಗಳು ಸುಪ್ತವಾಗಿದ್ದುಕೊಂಡು ವ್ಯಕ್ತಿಯಲ್ಲಿ ಮಾನಸಿಕ ಸಂಘರ್ಷಕ್ಕೆ ಕಾರಣವಾಗುತ್ತವೆ. ಸದಾ ತಮ್ಮೊಂದಿಗಿರುವವರಿಗಿತಲೂ ಇನ್ನೊಬ್ಬರ ಮನಸ್ಸನ್ನು ಆಕ್ರಮಿಸಲು ಇನ್ನೊಬ್ಬರ ಮನಸ್ಸಿನಲ್ಲಿ ಬೇರೂರಲು ಸದಾ ಹವಣಿಸುತ್ತಿರುತ್ತದೆ. ವ್ಯಕ್ತಿಯ ಭಾವನೆಗಳು ಮನೋವಲಯದಲ್ಲಿ ಸೃಷ್ಟಿಯಾಗುವ ಅವಸ್ಥಾಂತರಗೊಳ್ಳುವ ಪರಿಯು ಅತ್ಯಂತ ಸೂಕ್ಷ್ಮವಾದುದು.

ಗಿರೀಶ್ ಕಾರ್ನಾಡರ 'ಹಯವದನ' ನಾಟಕದಲ್ಲಿ 'ಕಪಿಲ'ನ ಪಾತ್ರವು ಈ ನಿಟ್ಟಿನ ಹಲವು ಕಾರಣಗಳನ್ನು ಒಳಗೊಂಡು ವಿಶ್ಲೇಷಣೆಗೆ ಕುತೂಹಲಕಾರಿಯಾಗುತ್ತದೆ. ಕಪಿಲ ದೈಹಿಕ ಸಾಮರ್ಥ್ಯವನ್ನು ಹೊಂದಿರುವ ಒರಟು ಪ್ರವೃತ್ತಿಯ, ನಯ ನಾಜೂಕುಗಳೊಂದು ಅರಿಯದ ವ್ಯಕ್ತಿ, ಮೃದು ಸ್ವಭಾವಿ, ವಿದ್ವಾಂಸನಾದ ದೇವದತ್ತನ ಪ್ರಾಣ ಸ್ನೇಹಿತ. ತಾನು ಮೆಚ್ಚಿದ ಕನ್ಯೆ ಪದ್ಮಿನಿಯನ್ನು ವಿವಾಹಕ್ಕೆ ಒಪ್ಪಿಸುವಂತಹ ವೈಯಕ್ತಿಕ ಕಾರ್ಯಕ್ಕೂ ಕಪಿಲನನ್ನೇ ಆಶ್ರಯಿಸುವಷ್ಟು ಆತ್ಮೀಯ. ವಿವಾಹದ ನಂತರವೂ ದೇವದತ್ತ ಮತ್ತು ಪದ್ಮಿನಿಯ ದಾಂಪತ್ಯದಲ್ಲಿ ಮಹತ್ವದ ಸ್ಥಾನ ಪಡೆದುಕೊಂಡಿರುತ್ತಾನೆ. ಕ್ರಮೇಣ ಕಪಿಲನಲ್ಲಿ ಪದ್ಮಿನಿ ಆಕರ್ಷಣೆ ಹೊಂದತೊಡಗುತ್ತಾಳೆ ಮತ್ತು ಕಪಿಲನೂ ಆಕೆಯ ಕಡೆ ಆಕರ್ಷಿನಾಗುತ್ತಿರುವುದು ಸ್ವತಃ ಕಪಿಲನ ಅರಿವಿಗೆ ಬರುತ್ತದೆ.

ಜಗತ್ತಿನಲ್ಲಿನ ಯಾವುದೇ ಘಟನೆಗಾಗಲೀ ಒಂದು ಕಾರಣ ಇದ್ದೇ ಇರುತ್ತದೆ. ಯಾವುದೂ ಕೂಡಾ ಒಂದಕ್ಕೊಂದು ಸಂಬಂಧವಿಲ್ಲದೇ ಏಕಾಏಕೀ ಜರಗುವುದಿಲ್ಲ. ವ್ಯಕ್ತಿಗಳ ಅತ್ಯಂತ ವಯಕ್ತಿಕ ಅಭಿವ್ಯಕ್ತಿಯಾದ, ದೈಹಿಕ ಪ್ರೇರಣೆಯಾದ ಕಾಮವು ಪ್ರಾರಂಭವಾಗುವುದು ಕೇವಲ ದೈಹಿಕ ನೆಲೆಯಲ್ಲಾದರೂ ಅದರ ಮುಕ್ತಾಯವು ಭಾವನಾತ್ಮಕ ನೆಲೆಯಾಗಿರುತ್ತದೆ.

ಹೆಣ್ಣು ಗಂಡಿನ ನಡುವಣ ಆಕರ್ಷಣೆ ಪುರಾಣ, ಕಥೆ, ಕಾದಂಬರಿ, ಕವನ, ನಾಟಕ, ಚಿತ್ರಕಥೆ ಮುಂತಾದವುಗಳಲ್ಲಿ ಹೇರಳವಾಗಿ ಅಭಿವ್ಯಕ್ತಿಗೊಂಡಿರುವುದನ್ನು ಪರಿಶೀಲಿಸಿದರೆ ಮಾನವನ ಮನಸ್ಸು ಎಷ್ಟರ ಮಟ್ಟಿಗೆ ಲೈಂಗಿಕತೆಯಿಂದ ಆವರಿಸಲ್ಪಟ್ಟಿದೆ ಎಂಬುದು ಅರಿವಿಗೆ ಬರುತ್ತದೆ. ಹಯವದನ ನಾಟಕವು ಕೂಡಾ ಇದಕ್ಕೆ ಹೊರತಾಗಿಲ್ಲ. ಇಲ್ಲಿ ಬರುವ ಕಪಿಲನ ಪಾತ್ರದ ಮೂಲಕ ಮಾನವ ಮನಸ್ಸು, ಲೈಂಗಿಕತೆ ಮತ್ತು ಪ್ರೀತಿಯ ನಡುವೆ ಹೊಯ್ದಾಟ, ಸಂಘರ್ಷ ಮತ್ತು ಪರಿಣಾಮವನ್ನು ವಿಶ್ಲೇಷಿಸಲು ಸಹಕಾರಿಯಾಗುತ್ತದೆ.

ಕಪಿಲ ತನ್ನ ಪ್ರಾಣಸ್ನೇಹಿತನಾದ ದೇವದತ್ತನ ಪತ್ನಿ ಪದ್ಮಿನಿಯತ್ತ ಆಕರ್ಷಿತನಾಗುತ್ತಾನೆ. ಹಾಗೆಯೇ ಸುರದ್ರೂಪಿ, ವಿದ್ವಾಂಸ, ಮೃದುಸ್ವಭಾವಿಯು ಆದ ಪತಿ ಇರುವಾಗ ಕಪಿಲನಂತಹ ಒರಟು ಸ್ವಭಾವದ ವ್ಯಕ್ತಿಯಲ್ಲಿ ಪದ್ಮಿನಿಗೆ ಆಕರ್ಷಣೆ ಉಂಟಾಗುತ್ತದೆ. ಸಾಹಿತ್ಯಗಳಲ್ಲಿ ಈಗಾಗಲೇ

ಸಾಹಿತ್ಯಗಳಲ್ಲಿ, ಬದುಕಿನಲ್ಲಿ ಈ ತರಹದ ಅನೇಕ ಸಂದರ್ಭಗಳನ್ನು ಕಾಣಬಹುದು. ದಾಂಪತ್ಯ ಎಂಬಲ್ಲಿ ಗಂಡು-ಹೆಣ್ಣುಗಳ ನಡುವಿನ ಪ್ರೇಮವು ಯಾವಾಗಲೂ ಒಂದೇ ವ್ಯಕ್ತಿಯೆಡೆಗೆ ಹರಿಯುತ್ತಿರುತ್ತದೆ, ಹರಿಯುತ್ತಿರಬೇಕು ಎಂಬುದು ಸಾಮಾನ್ಯ ಗ್ರಹಿಕೆ ಹಾಗೂ ಅಭಿಪ್ರಾಯ. ಒಬ್ಬ ವ್ಯಕ್ತಿ ಇನ್ನೊಬ್ಬ ಭಿನ್ನ ಲಿಂಗದ ವ್ಯಕ್ತಿಯೊಡನೆ ಸಂಪೂರ್ಣವಾಗಿ ಬದ್ಧನಾಗಿರುತ್ತಾನೆಂಬ, ಇರಬೇಕೆಂಬ ಮಾನವೀಯ ಹಂಬಲದ ಅಭಿವ್ಯಕ್ತಿ ಇದು. ಆದರೆ ದಾಂಪತ್ಯವು ಒಬ್ಬ ವ್ಯಕ್ತಿಯೆಡೆಗೆ ನಿರ್ದೇಶಿತವಾಗಿ ಅಲ್ಲೇ ಕೇಂದ್ರೀಕೃತವಾಗುತ್ತದೆ ಎನ್ನುವುದನ್ನು ಸಾರ್ವಕಾಲಿಕ (universal) ನೆಲೆಯಲ್ಲಿ ಕಾಣಲಾಗುವುದಿಲ್ಲ. ಕಾಮದ ಕಾವು ಆರಿದ ಮೇಲೆ ಗಂಡು-ಹೆಣ್ಣುಗಳ ಅನುಬಂಧಕ್ಕೆ ಹಲವಾರು ಅಂಶಗಳು ಇರುತ್ತವೆ.

ಉದಾಹರಣೆಗೆ ಹದಿಮೂರನೇ ಶತಮಾನದ ಜೈನ ಕವಿ ಜನ್ನನು ರಚಿಸಿದ ಪ್ರಸಿದ್ಧ ಗ್ರಂಥಗಳಾದ 'ಯಶೋಧರ ಚರಿತೆ' ಮತ್ತು ಅನಂತನಾಥ ಪುರಾಣ ಗ್ರಂಥಗಳಲ್ಲಿಯೂ ಇದೇ ತರಹದ ಸಂಬಂಧಗಳನ್ನು ಕಾಣಬಹುದಾಗಿದೆ.

ಯಶೋಧರ ಚರಿತೆಯಲ್ಲಿ ರಾಜ ಯಶೋಧರನ ಪಟ್ಟಮಹಿಷಿಯೂ ಪ್ರಿಯಪತ್ನಿಯೂ, ಸುಂದರಿಯೂ ಆದ ಅಮೃತಮತಿ ಆಕಸ್ಮಾತ್ ಅರಮನೆಯ ಗಜಶಾಲೆಯ ಮಾವುತ ಅಷ್ಟಾವಂಕನ ಕೊಳಲ ನಾದಕ್ಕೆ ಮನಸೋಲುತ್ತಾಳೆ. ಮುಂದೆ ಅವನನ್ನು ನೋಡಲು, ಕೂಡಲು ಹಂಬಲಿಸುತ್ತಾಳೆ. ನೋಡಿದ ಮೇಲೆ ಆತನು ಅತ್ಯಂತ ಕುರೂಪಿಯಾಗಿದ್ದರೂ ಹೇಸದೆ, ಅಂಜದೆ, ರಹಸ್ಯವಾಗಿ ಅವನೊಡನೆ ಕಾಮಿಸುತ್ತಾಳೆ.

ಅನಂತನಾಥ ಪುರಾಣ ಕಥೆಯಲ್ಲಿ ಚಂಡಶಾಸನನೆಂಬ ರಾಜನು ತನ್ನ ನೆಚ್ಚಿನ ಗೆಳೆಯನಾದ ವಸುಷೇಣನ ಪತ್ನಿ, ಅಪ್ಸರೆಯನ್ನು ಮೀರಿಸುವ ಚೆಲುವೆಯಾದ ಸುನಂದೆ ಎಂಬಾಕೆಯಲ್ಲಿ ಮೋಹಗೊಳ್ಳುತ್ತಾನೆ. ಗೆಳೆಯನ ಮನೆಗೆ ಅತಿಥಿಯಾಗಿ ಹೋಗಿದ್ದ ಚಂಡಶಾಸನನು ವನವಿಹಾರ ಕಾಲದಲ್ಲಿ ಸುನಂದೆಯನ್ನು ಅಪಹರಿಸಿಕೊಂಡು ಹೋಗಿ ಆಕೆಯನ್ನು ಒಲಿಸಿಕೊಳ್ಳಲು ಶತಪ್ರಯತ್ನ ಮಾಡುತ್ತಾನೆ. ಆದರೆ ಆಕೆ ಚಂಡಶಾಸನನ್ನು ಒಲಿಯದೇ ಪತಿಯ ಧ್ಯಾನದಲ್ಲೇ ಪ್ರಾಣತ್ಯಾಗ ಮಾಡುತ್ತಾಳೆ ಮುಂದಿನ ಜನ್ಮದಲ್ಲಾದರೂ ಸುನಂದೆಯನ್ನು ಪಡೆಯುವುದಾಗಿ ಶಪಥಮಾಡಿ, ಚಂಡಶಾಸನನು ಆಕೆಯ ಮೃತ ದೇಹದೊಡನೆ ತಾನೂ ಚಿತೆಯೇರುತ್ತಾನೆ.

ಈ ಮೇಲಿನ ಎರಡೂ ಪ್ರಸಂಗಗಳು ಮತ್ತು ಕಪಿಲ ಪದ್ಮಿನಿಯರ ಆಕರ್ಷಣೆಯ ಸಂದರ್ಭವು ಹೆಣ್ಣು-ಗಂಡಿನ ನಡುವಿನ ಆಕರ್ಷಣೆಗೆ ದೈಹಿಕ ನೆಲೆಯು ಕಾರಣವೆಂದೂ, ಅದು ಲೈಂಗಿಕತೆಯಲ್ಲೇ ತೃಪ್ತಗೊಳ್ಳುತದೆ ಎಂದು, ತೃಪ್ತಗೊಳ್ಳದಿದ್ದಾಗ ಬದುಕಿನ ದುರಂತಕ್ಕೆ ಕಾರಣವಾಗುತ್ತದೆ ಎಂದು ಅನಿಸುತ್ತದೆ. ಆದರೆ ಸಾಹಿತ್ಯದಂತಹ ಸೃಜನಶೀಲ ಕ್ರಿಯೆಯಲ್ಲಿ ಈ ಅಂಶಗಳು ಪದೆ ಪದೇ ಪ್ರಸ್ತಾಪಿಸಲ್ಪಡುವುದರ ಹಿಂದೆ ಪರಂಪರೆಯ ನಿರ್ದೇಶನದ ದಾಂಪತ್ಯಗಳ ಅರ್ಥಪೂರ್ಣತೆ

ಯನ್ನು ಗಂಡು-ಹೆಣ್ಣಿನ ಸಂಬಂಧದ ಹೊಸ ಆಳಗಳಿಗೆ ಕೊಂಡೊಯ್ಯುವ ಸುಪ್ತ ಪ್ರಜ್ಞೆ (unconciouss) ಯೊಂದು ಕಾರ್ಯ ನಿರ್ವಹಿಸಿರುವುದು ಸ್ಪಷ್ಟವಾಗುತ್ತದೆ. ಲೈಂಗಿಕ ಆಕರ್ಷಣೆಯು ಇಲ್ಲದ ದಾಂಪತ್ಯದ ಬದುಕಿನಲ್ಲಿ ಕಾಮ ಪ್ರೇಮಗಳು ಕೆರಳಿಸಬಹುದಾದಂತಹ ಕೆಲವು ಪ್ರಶ್ನೆಗಳಿಗೆ ಬರಿಯ ಕೆಲವೇ ಉತ್ತರಗಳನ್ನು ಸಲ್ಲಿಸಿ ಜೀವನದ ವೈವಿಧ್ಯತೆಯನ್ನು ನಿರ್ಲಕ್ಷಿಸಿಬಿಡಲಾಗುತ್ತದೆ. ಲೈಂಗಿಕತೆಯಂತಹ ವಿಷಯವನ್ನು ವೈಯಕ್ತಿಕ ನೆಲೆಯಲ್ಲಿಯೇ ಗ್ರಹಿಸಬೇಕಾಗುತ್ತದೆ. ಇಲ್ಲಿ ಬರುವ ವ್ಯಕ್ತಿಗಳ ಮನಸ್ಸಿನ ಮತ್ತು ದೇಹದ ನಿರ್ಬಂಧಗಳಲ್ಲಿ ಸಿಲುಕಿದ ಅದರ ತಾತ್ವಿಕ ಸಮಸ್ಯೆಗಳ ಅರ್ಥವನ್ನು ತಿಳಿಯಲು ಸಾಕಷ್ಟು ಪ್ರಾಮಾಣಿಕವಾಗಿ ಶ್ರಮಿಸಿದಾಗ ಮಾತ್ರ ಆದರ ಆಳಕ್ಕೆ ಹೋಗಲು ಅರ್ಥಮಾಡಿಕೊಳ್ಳಲು ಸಹಕಾರಿಯಾಗಬಹುದು.

ಕಪಿಲ ಗರ್ಭವತಿಯಾದ ಪದ್ಮನಿ ಮತ್ತು ದೇವದತ್ತರನ್ನು ಉಜ್ಜಯನಿಯ ಪ್ರವಾಸಕ್ಕೆ ಕರೆದುಕೊಂಡು ಹೋಗುವ ಸಿದ್ಧತೆಯಲ್ಲಿರುತ್ತಾನೆ. ದೇವದತ್ತನಿಗೆ ಪ್ರವಾಸದ ವೇಳೆ ಕಪಿಲನಿರುವುದು ಇಷ್ಟವಿಲ್ಲ. ಹಾಗಾಗಿ ಪ್ರವಾಸವನ್ನು ರದ್ದುಗೊಳಿಸಲು ಹೆಂಡತಿ ಗರ್ಭವತಿಯಾದ ಕಾರಣ ಒಡ್ಡುತ್ತಾನೆ. ಆದರೆ ಕಪಿಲನೊಂದಿಗಿನ ಪ್ರವಾಸ ತನಗೆ ಹೆಚ್ಚು ಸಂತೋಷವನ್ನು ನೀಡುತ್ತದೆ ಎಂದು ಆಕೆ ಭಾವಿಸಿದ್ದಾಳೆ. ಕಪಿಲನನ್ನು ಕಂಡೊಡನೆ ದೇವದತ್ತ ಪ್ರವಾಸ ರದ್ದು ಮಾಡಬೇಕಾಗಿದೆ ಎಂದು ತಿಳಿಸುತ್ತಾನೆ. ಮೇಲ್ನೋಟಕ್ಕೆ ಕಪಿಲ ಸಮ್ಮತಿಸಿದಂತೆ ತೋರಿದರೂ ಆತನ ಸ್ವಗತ ಬೇರೆಯೇ ಆದುದನ್ನು ಭಾವಿಸುತ್ತಿರುತ್ತದೆ.

"ಪ್ರವಾಸ ರದ್ದಾಯ್ತು! ಇನ್ನು ಇಡೀ ದಿನ ನಾನೇನು ಮಾಡಲೀ/ಇನ್ನು ಎಂಟು ದಿನ ಏನು ಮಾಡಲಿ? ದೇವದತ್ತನ ಮಾತು ಕೇಳಿದ ಕೂಡಲೇ ನನ್ನ ಬಾಳಿನಿಂದ ಎಂಟು ದಿನ ಅಳಿಸಿಬಿಟ್ಟ ಹಾಗೆ ಯಾಕೆ ಆಗಬೇಕು? ನನ್ನಲ್ಲಿ ಈ ಪೊಳ್ಳು ಯಾಕೆ ತುಂಬಬೇಕು?...... ಕಪಿಲ...... ಕಪಿಲ ನಿನ್ನನ್ನು ಹಿಡಿತದಲ್ಲಿಟ್ಟುಕೋ, ಜಾರುತಿದ್ದೀ ಹಿಡಿತ ಬಿಡಬೇಡ ಏನಾದರೂ ನಿನ್ನ ಮೇಲಿರೋ ಹಿಡಿತ ಕಳಕೋ ಬೇಡ. ಈಗ ಹೋಗು, ಇನ್ನು ಎಂಟು ದಿನ ಇಲ್ಲಿ ಬರಬೇಡ, ನೀನು ಬರಲಿಲ್ಲ ಅಂತ ದೇವದತ್ತ ಸಿಟ್ಟಿಗೇಳುತಾನೆ. ಅತ್ತಿಗೆ ನೊಂದುಕೋತಾಳೆ. ಆದರೂ ಬರಬೇಡ ಹೋಗು ಹೋಗು! ೧೭

ಮೇಲಿನ ಸಂದರ್ಭದಲ್ಲಿ ಕಪಿಲ ತನ್ನೊಳಗಿನ ಸಹಜ ತುಡಿತಗಳಿಗೆ ಮತ್ತು ಬಾಹ್ಯ ಪರಿಸರಕ್ಕೆ ಹೆಚ್ಚು ಕೃತಕವಾಗಿ ಬದುಕುತ್ತಿರುವಂತೆ ಅನಿಸುತ್ತದೆ. ಪ್ರತಿಯೊಂದು ಸಹಜ ಪ್ರವೃತ್ತಿಗಳನ್ನು ನಾಗರೀಕತೆಯು ಸಾಮಾಜಿಕತೆಯ ಹೆಸರಿನಲ್ಲಿ ಮನಷ್ಯನನ್ನು ನಿರ್ಬಂಧಿಸಿರುವುದೇ ಇಂತಹ ನಡವಳಿಕೆಗೆ ಕಾರಣವಿರಬಹುದು. ನಾಗರೀಕನೆನಿಸಿಕೊಂಡವರು ಸಮಾಜದ, ಪರಿಸರದ, ಆಯಾ ಕಾಲ ಘಟ್ಟದ ನೀತಿ, ನಿಯಮಗಳಿಗೆ ಆಧೀನನಾಗಿರಬೇಕೆಂಬ ನಿಯಮ ಮತ್ತು ಸಾಮಾಜಿಕ ಪ್ರಜ್ಞೆ, ಸಹಜ ಪ್ರವೃತ್ತಿಗಳನ್ನು ಧಮನಗೊಳಿಸಿಬಿಡುತ್ತದೆ. ಪ್ರಥಮವಾಗಿ ವ್ಯಕ್ತಿಗೆ ವಯುಕ್ತಿಕ ಜಗತ್ತು ಪ್ರಮುಖವಾದುದು. ಕಾಮವಾಗಲಿ, ಪ್ರೇಮವಾಗಲೀ ವ್ಯಕ್ತಿಯೊಬ್ಬ ಆತನ ವೈಯಕ್ತಿಕ

ಬದುಕಿನ ಅನುಭವದಲ್ಲಿ ಕಂಡುಕೊಳ್ಳುವ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ತುಡಿತಗಳ ಬಿಡುಗಡೆಯೇ ಅನಿಸುತ್ತದೆ. ಅಲ್ಲಿ ನೈತಿಕ ಮತ್ತು ಅನೈತಿಕತೆಯು ಅಪ್ರಸ್ತುತವಾಗುತ್ತದೆ. ಕಪಿಲನಿಗೆ ಪದ್ಮಿನಿಯಲ್ಲಿನ ಆಸಕ್ತಿ, ಆಕರ್ಷಣೆ ದೈಹಿಕ ನೆಲೆಯದ್ದು ಎಂಬುದು ಅತ್ಯಂತ ಸ್ಪಷ್ಟ. ಫ್ರಾಯ್ಡಿಯನ್ ವಿಚಾರಗಳ ಚೌಕಟ್ಟಿನಲ್ಲಿ ಇಂತಹ ನೆಲೆಗಳನ್ನು ವಿಶ್ಲೇಷಿಸುವುದು ಸುಲಭ. ಆದರೆ ಈ ಬಗೆಯ ಲೈಂಗಿಕ ಪ್ರವೃತ್ತಿಗಳು ತನ್ನೆಲ್ಲಾ ಅಂತಃಪ್ರಜ್ಞೆಯನ್ನು ಮೀರುವ ಬಗೆಯಾದರೂ ಏನು? ಏಕೆ? ಎಂಬುದರ ಹುಡುಕಾಟ ಹೆಚ್ಚು ಮಾನವೀಯವಾಗಬಹುದು.

ನಾವು 'ಮನಸ್ಸು' ಎಂದು ಯಾವುದನ್ನು ಕರೆಯುತ್ತೇವೆಯೋ ಅದು ಅತ್ಯಂತ ಜಟಿಲವಾಗುತ್ತಾ ಹೋಗುವ ಹಾಗೂ ಸೂಕ್ಷವಾಗುತ್ತಾ ಹೋಗುವ ಅನೇಕ ಕ್ರಿಯೆಗಳನ್ನು ಆವರಿಸಿಕೊಳ್ಳುವ ಒಂದು ಪ್ರಕ್ರಿಯೆ. ಕಾಮದಂತಹ ಸೂಕ್ಷ್ಮ ಹಾಗೂ ಮಾನವನ ಮೂಲಭೂತ ಪ್ರೇರಣೆಯು ಮನಸ್ಸಿನಿಂದಲೇ ಉದ್ಭವಿಸುವಂತಹದ್ದು. ಬಹುತೇಕ ಲೈಂಗಿಕತೆಗೆ ಸಂಬಂಧಪಟ್ಟಂತಹ ಸಂಗತಿಗಳು ಪ್ರಜ್ಞೆಯ ಆವರಣದಿಂದಾಚೆಯೇ ನಡೆಯುವಂತಹದ್ದು. ಇಂತಹವು ಮಾನವ ಬದುಕು ನಿರ್ವಹಿಸಲು ಅತ್ಯಂತ ಅವಶ್ಯಕ. ಮೆದುಳಿನ ಬೇರೆ ಬೇರೆ ಭಾಗಗಳು ಬಾಹ್ಯ ಪ್ರಚೋದನೆಗಳಿಗೆ ಪ್ರತಿಕ್ರಿಯಿಸುವ ರೀತಿಯಿಂದ ಪ್ರಯೋಗಾಲಯಗಳಲ್ಲಿ ಇಂತಹ ಜೀವನಾವಶ್ಯಕ ಕಾರ್ಯಗಳ ಸ್ವರೂಪ ಸ್ಥಿರಪಟ್ಟಿದೆ. ಈ ಕಾರ್ಯಗಳನ್ನು ಹುಟ್ಟರಿವು (ಉದಾ: ಹಸಿವು, ಕಾಮ, ಉಸಿರಾಟ, ನಾಡಿಮಿಡಿತ, ಹೃದಯಬಡಿತ ಇತ್ಯಾದಿ...) ಮತ್ತು ಇಂದ್ರೀಯ (ನೋಡುವುದು, ಕೇಳುವುದು ಇತ್ಯಾದಿ...) ಸಂಬಂಧಿ ಎನ್ನಬಹುದು.

ಲೈಂಗಿಕತೆಯಂತಹ ವಿಷಯವನ್ನು ವ್ಯಕ್ತಿ ತೋರುವ ವರ್ತನಾ ವೈವಿಧ್ಯಗಳ ಮೂಲಕ ವಿಶ್ಲೇಷಿಸಬಹುದಾದರೂ ಆ ವರ್ತನೆಯ ಹಿಂದಿನ ಪ್ರಕ್ರಿಯೆ ಮನುಷ್ಯ ಪ್ರಜ್ಞೆಗೆ ನಿಲುಕಲಾರದಂತಹದ್ದು. ಒಬ್ಬ ಹೆಣ್ಣು ಗಂಡು ಪರಸ್ಪರ ಆಕರ್ಷಿತರಾಗುವುದು ಸಹಜವಾದುದು. ಹೆಂಡತಿಯಾದವಳಲ್ಲಿ ಪರಪುರುಷ ಆಕರ್ಷಿತನಾಗುವುದು ಅಷ್ಟೇ ಸಹಜ. ಆದರೆ ಸಾಮಾಜಿಕ ನೀತಿ–ನಿಯಮಗಳು, ಸಂಪ್ರದಾಯ, ಪರಂಪರೆಗಳು ಇಂತಹದ್ದನ್ನು ನಿರ್ಬಂಧಿಸಿವೆಯಾದರೂ ಸಂಪೂರ್ಣ ಈ ಬಗೆಯ ಆಕರ್ಷಣೆ ಉದ್ಭವಿಸದೇ ಇರುವಂತೆ ಅಡ್ಡಿ ಉಂಟುಮಾಡುವ ಯಾವ ಅಂಶಗಳನ್ನು ಗುರುತಿಸಲು ಸಾಧ್ಯವಾಗಿಲ್ಲ.

ಮನಃಶಾಸ್ತ್ರದ ಪ್ರಕಾರ ಕಾಮ ಕ್ರಿಯಾಶಾಲಿಯಾದ, ಸತ್ವಪೂರ್ಣವಾದ ಮನಃಶಕ್ತಿ. ಜೈವಿಕ ಅಭೀಪ್ರೇರಣೆ. ಅದು ನಿರ್ದೇಶಿತವಾಗಿರುವವರಲ್ಲಿ ಆಶ್ಚರ್ಯಕರವಾದ ಮಾರ್ಪಾಡುಗಳನ್ನು ಉಂಟುಮಾಡುತ್ತದೆ.

ಪದ್ಮಿನಿಯ ಮೊದಲ ಭೇಟಿಯಲ್ಲಿಯೇ ಪದ್ಮಿನಿಯು ದೇವದತ್ತನಿಗೆ ಸರಿಯಾದವಳಲ್ಲ ಎಂಬ ನಿರ್ಧಾರಕ್ಕೆ ಕಪಿಲ ಬರುತ್ತಾನೆ. "ಗೆಳೆಯಾ, ದೇವದತ್ತಾ, ನನ್ನ ಮನಸ್ಸು ಯಾಕೋ ಕಸಿವಿಸಿಗೊಂಡಿದೆ. ನೋಡು, ನೀನು ಸುಕುಮಾರ, ನಿನ್ನ ಮನಸ್ಸೂ ಸುಕುಮಾರ. ಒಂದು ಕಟು

ಮಾತು, ಒಂದು ಕಠಿಣ ವಿಚಾರ ನಿನಗೆ ಸಹಿಸೋದಿಲ್ಲ. ಇವಳು ಮಿಂಚಿನ ಗೊಂಚಲು, ನಿನ್ನಂತಹವನಿಗೆ ಹೇಳಿದವಳಲ್ಲ. ಇವಳಿಗೆ ಉಕ್ಕಿನ ಗಂಡೇ ಬೇಕು. ಆದರೆ ಮಾಡೋದಾದರು ಏನು? ನೀನು ಹೇಳಿದರೆ ಕೇಳೋದಿಲ್ಲ. ಅನ್ನೋದೂ ಖಂಡಿತ."[೧೮]

ಕೆಲವು ಅತ್ಯಂತ ಮೂಲಭೂತ ವಿಚಾರಗಳು ಮೇಲಿನ ಸಂದರ್ಭಗಳ ಮೂಲಕ ಸೂಕ್ಷ್ಮವಾಗುತ್ತಾ ಹೋಗುತ್ತದೆ. ಪುರುಷ ಮತ್ತು ಸ್ತ್ರೀ ಒಂದು ಕಡೆ ಒಬ್ಬರಿಗೊಬ್ಬರು ಪೂರಕವಾಗಿದ್ದರೆ, ಮತ್ತೊಂದು ಕಡೆ ವಿರುದ್ಧವಾಗಿರುವುದು, ಅವರ ವಿರುದ್ಧತೆಯೇ ಒಬ್ಬರನ್ನೊಬ್ಬರ ಕಡೆಗೆ ಆಕರ್ಷಿತಗೊಳ್ಳವಂತೆಯೂ ಮಾಡುತ್ತದೆ. ಯಾವಾಗ ಅವರು ನಿಕಟವಾಗುತ್ತಾರೋ ಒಂದು ಲಯಬದ್ಧ ಸಮಗ್ರತೆಯಾಗಿಬಿಡುತ್ತಾರೆ. ಆದರೆ ಅವರ ಪೂರ್ತಿ ಆಕರ್ಷಣೆಯು ವಿರುದ್ಧತೆಯ ಮೇಲೆಯೇ ನಿರ್ಧರಿತವಾಗಿರುತ್ತದೆ. ಕಪಿಲನ ಪಾತ್ರ ವಿಶ್ಲೇಷಣೆಯಲ್ಲಿ ಈ ತರಹದ ವಿರುದ್ಧತೆಗಳು ವಿಲೀನಗೊಳ್ಳುವ ಪ್ರಕ್ರಿಯೆಯನ್ನು ವರ್ತನೆಯ ಮೂಲಕ ಕಾಣಬಹುದು.

ಕಪಿಲನ ಬದುಕಿನಲ್ಲಿ ಪದ್ಮಿನಿಯು ಆಕರ್ಷಣೆಗೊಂಡದ್ದಾಗಲೀ, ಕಪಿಲನು ಪದ್ಮಿನಿಯಲ್ಲಿ ಆಕರ್ಷಿತಗೊಂಡದ್ದಾಗಲೀ, ಸ್ವತಃ ಅವರ ನಡುವೆಯೂ ಅದಕ್ಕೆ ಕಾರಣಗಳು ಕಂಡುಬರುವುದಿಲ್ಲ. ಮತ್ತು ಪದ್ಮಿನಿಯಾಗಲಿ, ಕಪಿಲನಾಗಲೀ ಯಾವುದೇ ಮೌಲಿಕ ಕಾರಣದ ಬಗ್ಗೆಯೂ ಪ್ರಜ್ಞಾ ಪೂರ್ವಕರಾಗಿಲ್ಲ. ಪುರುಷ ಯಾವ ದೃಷ್ಟಿಯಿಂದ ಜಗತ್ತನ್ನು ನೋಡುತ್ತಾನೋ ಅದು ಸ್ತ್ರೀಯ ದೃಷ್ಟಿಗಿಂತ ಭಿನ್ನವಾಗಿರುತ್ತದೆ. ಬಹುತೇಕ ಸ್ತ್ರೀಯ ಜಗತ್ತು ಸೀಮಿತವಾಗಿರುವುದು ಇದಕ್ಕೆ ಕಾರಣವಾಗಬಹುದು. ತಮ್ಮ ವಾಸ್ತವ ಸ್ವರೂಪ ಮತ್ತು ನಿಜದ ನೆಲೆ ಎರಡರ ಸಂಘರ್ಷದಲ್ಲಿ ಪುರುಷ ಮತ್ತು ಸ್ತ್ರೀಯರು ಸಿಲುಕಿಕೊಂಡಿರುವ ಮತ್ತು ಅದರಿಂದ ಹೊರಬರಲು ಸದಾ ಪ್ರಯತ್ನಿಸುವ ಪರಿಯನ್ನು ಸಾಹಿತ್ಯದಂತಹ ಸೃಜನಶೀಲ ಕ್ರಿಯೆಯು ಸೂಕ್ಷ್ಮವಾಗಿ ಚಿತ್ರಿಸುತ್ತದೆ.

ಒಂದೆಡೆ ತನ್ನ ಗೆಳೆಯನಾದ ದೇವದತ್ತ, ಆತನ ಗೆಳೆತನ, ಇನ್ನೊಂದೆಡೆ ಪದ್ಮಿನಿ, ಆಕೆಯ ಬಗೆಗಿನ ಆಕರ್ಷಣೆ. ಇವೆರಡರ ನಡುವೆ ಸಿಲುಕಿರುವ ಕಪಿಲನು ಮಾನಸಿಕ ಸಂಘರ್ಷಕ್ಕೆ ಒಳಗಾಗುವುದರಿಂದಲೇ ದೇವದತ್ತನು ತನ್ನನ್ನು ತಾನು ಹತ್ಯೆಮಾಡಿಕೊಂಡ ಬಳಿಕ ತಾನು ಬಲಿಯಾಗುತ್ತಾನೆ. ಆದರೆ ಪದ್ಮಿನಿಯ ಮೇಲಿನ ಮೋಹಕ್ಕಿಂತ ಸ್ನೇಹವೇ ಆತನ ವಿಷಯದಲ್ಲಿ ಪ್ರಭಾವ ಬೀರುವುದು ಕೂಡಾ ಆತನ ವರ್ತನೆಯ ಕುರಿತಾಗಿ ಗೋಂದಲವನ್ನುಂಟು ಮಾಡುತ್ತದೆ. ಮನಷ್ಯ ಸಂಬಂಧಗಳ ಸಂಕೀರ್ಣತೆಯನ್ನು ಸೂಕ್ಷ್ಮವೂ ವ್ಯಾಪಕವೂ ಆದ ನಿಯಮದ ದೃಷ್ಟಿಯಿಂದ ಅಧ್ಯಯನ ಮಾಡಿದಾಗ ದ್ವೇಷಾಸೂಯೆಗಳನ್ನು ಎದುರಿಸುವಲ್ಲಿ ಪ್ರತೀಕಾರ ಮನೋಭಾವನೆಗಿಂತಲೂ, ಅವರನ್ನು ಗೆದ್ದೆ ಎಂಬ 'ಅಹಂ' ಮನುಷ್ಯನ ಅಸ್ತಿತ್ವಕ್ಕೆ ಬಲನೀಡುತ್ತದೆ. ಅದೇ ಕಾರಣವೇ ಪದ್ಮಿನಿಯನ್ನು ಮರೆತು ತಾನು ಹತ್ಯೆ ಮಾಡಿಕೊಳ್ಳುತ್ತಾನೆ. "ಘಟನೆಯಲ್ಲಿನ ವರ್ತನೆಯು ಆ ಸಂದರ್ಭದೊಳಗಿನ ಅವಶ್ಯಕತೆ ಮತ್ತು ಒತ್ತಾಯಗಳಿಂದ ಮಾತ್ರ ಸ್ಫುಟಗೊಳ್ಳುತ್ತದೆ."[೧೯]

ಕಪಿಲನ ಪಾತ್ರವು ನಾಟಕದಲ್ಲಿ ಶಿರ ಮತ್ತು ದೇಹದ ಬದಲಾವಣೆಯ ನಂತರ ಪಡೆದುಕೊಳ್ಳುವ ಹೊಸದೊಂದು ರೂಪ ನಿಜಕ್ಕೂ ಕಾಮ ತನ್ನ ಕ್ರಿಯಾತ್ಮಕ ನೆಲೆಯಲ್ಲಿ ಉಂಟು ಮಾಡುವ ಸಂಚಲನ ಶಕ್ತಿ ಅದ್ಭುತವೆನಿಸದೇ ಇರಲಾರದು. ಗಂಡು-ಹೆಣ್ಣಿನ ಸಂಬಂಧಗಳ ಅನಂತಾನಂತ ವೈವಿಧ್ಯತೆಗಳಲ್ಲಿ ಯಾವುದು ಸಂವೇದನೆಗಳಲ್ಲೂ, ವಿಚಾರಗಳಲ್ಲೂ ಒಡ ಮೂಡುವ ಮೂಲಕ ವಿಶಿಷ್ಟವಾದ ಹಾಗೂ ಕ್ಷಣ ಕ್ಕೊಮ್ಮೆ ಬದಲಾಗುವಂತೆ ವ್ಯಕ್ತಿಗಳನ್ನು ಪ್ರಚೋದಿಸುತ್ತದೆಯೋ ಅದು ದೈಹಿಕ ನೆಲೆಯಲ್ಲಿ ಮಾನವ ಪ್ರಜ್ಞೆಯ ದಿಗಂತವನ್ನು ವಿಸ್ತರಿಸಲು ನೆರವಾಗುವುದು.

ಸೂಕ್ಷ್ಮವಾದ ನೆಲೆಯಲ್ಲಿ ಬಾಹ್ಯ ರಚನೆಯಲ್ಲಿ ಪದ್ಮಿನಿಯೊಂದಿಗಿನ ಆಕರ್ಷಣೆ, ದೇವದತ್ತನ ಸಾವು, ಕಪಿಲನ ಸಾವು, ಶಿರ ಮತ್ತು ದೇಹ ಬದಲಾವಣೆ ನಂತರದ ಬದುಕು, ಅಲ್ಲಿನ ಸಂಘರ್ಷ, ಕೊನೆಯಲ್ಲಿ ಪರಸ್ಪರರ ಸಾವು ಇತ್ಯಾದಿ ಘಟನೆಗಳು, ವಿವರಗಳ ಮೂಲಕ ಕಪಿಲನ ಪಾತ್ರವನ್ನು ಗ್ರಹಿಸುವ ವಿನ್ಯಾಸ. ಹಾಗೆಯೇ ಈ ಘಟನೆಗಳು, ವಿವರಗಳು, ಪಾತ್ರ ವೈವಿಧ್ಯಗಳು ಅವುಗಳ ನಡುವಿನ ಕಾರ್ಯ-ಕಾರಣ ಸಂಬಂಧಗಳು ಇವುಗಳಲ್ಲದೇ ಅವುಗಳ ಆಳದಲ್ಲಿರುವ ಮೂಲಭೂತ ವಿನ್ಯಾಸವು ಮನುಷ್ಯ ಬದುಕಿನಲ್ಲಿ ಮನೋಲೋಕದ ಅರ್ಥವಾಗದ ಆಯಾಮವನ್ನು ಶೋಧಿಸುವಲ್ಲಿ ಪ್ರೇರೇಪಣೆಯನ್ನು ಒದಗಿಸುತ್ತದೆ.

ಮನಸ್ಸು ಮತ್ತು ಶರೀರಗಳ ನಡುವಿನ ಸಮನ್ವಯವೇ ವ್ಯಕ್ತಿತ್ವ, ಅದರಿಂದಲೇ ವ್ಯಕ್ತಿ. ವ್ಯಕಿ ಎಂದರೆ ದೇಹವನ್ನೂ ಒಳಗೊಂಡು, ಶಿರವನ್ನು ಒಳಗೊಂಡದ್ದು. ಅವೆರಡರ ನಡುವೆ ಅಭೇದವಾದ ಸಂಬಂಧವಿದ್ದು, ಅದು ಶಾಶ್ವತವಾದುದು. ಇಲ್ಲಿ ನಾಟಕವು ಈ ಅಭೇದ ಸಂಬಂಧದ ನಡುವೆ ಭೇದವನ್ನು ಉಂಟುಮಾಡಿ ಆ ಮೂಲಕ ಮನುಷ್ಯನ ಸಂಘರ್ಷಕ್ಕೆ ಕಾರಣವಾಗಬಹುದಾದ ವಸ್ತುಸ್ಥಿತಿಯ ಅರಿವನ್ನು ವಿಸ್ತರಿಸಲು ಪ್ರಯತ್ನಿಸಿದಂತೆ ತೋರುತ್ತದೆ.

ವ್ಯಕ್ತಿಯ ಅತ್ಯಂತ ವೈಯಕ್ತಿಕ ಮತ್ತು ಸಹಜ ಅಂಶವಾದ ದೇಹದ ಬಯಕೆ. ಒಂದು ಸಾಂಪ್ರದಾಯಿಕವಾದ ಸಮಾಜದಲ್ಲಿ ತನ್ನ ಅಭಿವ್ಯಕ್ತಿಗಾಗಿ ಅನೇಕ ಅಡೆ-ತಡೆಗಳನ್ನು ಎದುರಿಸಬೇಕಾಗುತ್ತದೆ. ವ್ಯಕ್ತಿಯ ಭದ್ರತೆಗಾಗಿಯೇ ಎಂದು ಆರಂಭವಾದ ವಿಧಿ-ನಿಷೇಧಗಳು ಮುಂದೆ ಕಟ್ಟು ಪಾಡುಗಳಾಗಿ, ವ್ಯಕ್ತಿಯ ಸಹಜತೆಗೆ ಧಕ್ಕೆ ತರುತ್ತವೆ. ಅತ್ಯಂತ ಇಕ್ಕಟ್ಟಿನ, ಬಿಕ್ಕಟ್ಟಿನ ಸ್ಥಿತಿಯಲ್ಲಿ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳವಲ್ಲಿ ಅತೃಪ್ತನಾಗುವ ಮನುಷ್ಯ ಕೊನೆಗೆ ವಿಕೃತನೋ ಅಥವಾ ತನ್ನ ಅನುಭವಕ್ಕೆ ಪರಕೀಯನೋ ಆಗುವಂತೆ ಸಾಮಾಜಿಕವಾದ ಒತ್ತಡಗಳೇ ಕಾರಣವಾಗುತ್ತವೆ. ಆಗ ವ್ಯಕ್ತಿ ಒಂದೋ ಇದಕ್ಕೆ ಬಲಿಯಾಗಬೇಕಾಗುತ್ತದೆ. ಇಲ್ಲವೇ ಎಲ್ಲವುಗಳಿಂದ ತ್ಯಜಿಸಲ್ಪಟ್ಟು ತನ್ನ ಬಯಕೆಗಳೊಂದನ್ನೇ ಗುರಿಯಾಗಿಸಿಕೊಳ್ಳಬೇಕಾಗುತ್ತದೆ."[೨೦] ಕಾಮಕ್ಕೆ ಸಂಬಂಧಿಸಿದಂತೆ ಮನಸ್ಸು ಮತ್ತು ದೇಹದ ದ್ವಂದ್ವದ ಕುರಿತಾಗಿ ಇರುವ ಪ್ರಜ್ಞೆಯು ಲೈಂಗಿಕತೆಯ ನಿರ್ಬಂಧತೆಯನ್ನು ಪ್ರಶ್ನಿಸುವಂತಿದೆ. ಲೈಂಗಿಕತೆಯಂತಹ ಸಹಜ ಅಭಿವ್ಯಕ್ತಿಯ

ಮೇಲೆ ಪರಂಪರೆಯು ಹೊಂದಿರುವ ನಿಯಂತ್ರಣವು ವ್ಯಕ್ತಿಯ ದೈಹಿಕ ಬಯಕೆಯ ತುp ತವಳು + ಪ್ರೇ೦ಯಳು ನಿಬ ಂದಿ™ುವ ಹ˜ಟೂ Bದರ ſರುದ ‡ದ˜ ಪು l ದೇ˙ುವ ಮಳುಗ್ಯರ ಮಳೋದೈಹಿಕ ತುp ತ †˜ಹಿತ್ಯ ಪ˜ತ್ರT˝ ಮೂ· ಕ ಪ್ರkj ಓೂ˙ುತ್ತವೆ-

ಗನಿಮ •˜ţ ತೋh™ J ಳು ಕ್ಷೀಕ˜ದದಳು ಕ್ಷೀಕ˜ದ ಹ˜Ť ಹೊರ´‡ಬಹುದು- Bದಳು ಠಠŤ ಹೇ˝ಕ್ಷೀಂ- E ಮೈ Bವ˝ಳು ಮದುವೆಯ˜ದದು BU†˜ಕಿಯ˜U- ಯ˜ವ †˜ಕಿJ೦ಂದ Bವ˙ು ದೇವದತ್ತರ ಹೆಂಂuಯ˜ದ˚ೋ+ Bದೇ †˜ಕಿJ೦ಂದ ಠ˜ಳು ದೇವದತ್ತΣ I ಂದು ಕ€ · ಳು ಹೇ˙ುವ ‡ಂದಕ್ಷqವಳು Tಮನಿ™ಟ˜T Bಠ€ಕ Bo•T˙ು YŶ ಯ ſ•ಲ್ಸ˚ಯ ಮುಂದೆಲೆŤ ತರಬಹುದು-

•˜ţ ಪುರ˜ಣT˙ು ಪ೦p ತರ+ ವೈದಿಕರ ವಯುಕ್ತಿಕ ಹಿತ˜‡ಕ್ತಿŤ Bಳುಕೂ· ಕರವ˜ಗುವ ಹ˜Ť uರುY· l ಡುವುದು ಮತ್ತು Bದೇ ‡ು€್ರ೦ B· Iಳುವ Lಂದು ವT ದ bಠರಳು ಕ€ · ಪ್ರುನಿದಿ‡ುತ˜ಠ-

ಮಳುಗ್ಯರ ಮೂ· ಕ್ಷೂತ cೈſಕ ಪ್ರೇರs˚ಯ˜ದ ಕ˜ಮವಳು ದೈಹಿಕ ಠಲೆಯ ಯೇ Ţಹಿ‡ದೇ Bದಕೊರಿದು ಠೈuಕತೆಯ ಠಲೆŤ ಕೊ೦ಂಹೊಯ್ಯವ •˜ţ+ ಪುರ˜ಣT˙ು ತಮŤ ಕ್ಷೀಕ˜ದ˜T ಮ˜ತ್ರ ಕ್ಷೀರೆ h€uಯ Bvೈ ‡ುವ ಕುhತ˜ದ ſರೋದ¶˙ು-

ಯ˜ವ ದೇಹವು ಕ˜ಮತ€್ತŤ ಕ˜ರಣವ˜ಗುವುದೋ+ Bದೇ ದೇಹವೇ ಮಠ™ಟಂತ ಮಹತದು I ಂಬ Ţಹಿಕೆ-

ಮೇ ಠ I ಲ˜ Bo•T˝ ಮತ್ತೊಂದು ‡ೂಕ ಠಲೆಯಳು ಕ€ · ಠ ಹೇ´ಕೆಯ ಮುR˜ಂತರ Ţಹಿ‡ಬಹುದ˜ದದು Jಠಂದರೆ ಹೆಣು–Top ಠ ‡ಂಬಂದ¶˝ಲ್ಲಿ+ ಕ˜ಮದಂತಹ cೈſಕ ಮೂ· ಕ್ಷೂತ ಪ್ರೇರs˚ಯಲ್ಲಿ ಠೈuಕತೆಯ ಮ˜ತು I ಗುđ ‡ಮob ‡ Bvವ˜ B‡ಮob ‡? I ಂಬುದರ ಬŤUಠ ಓೂಂದ· -

ಗLಬ್ಬ ವ್ಯಕ್ತಿಯು ತಠ್ನ ಬಯಕೆT˙ು ಇ೦uಂತಹವು ಮತ್ತು Bವು ತಠ್ನ ಕ್ರಿಯೆT˝ಠ್ನ ಪ್ರೇರೇ€ ‡ುತ್ತವೆ I ಂದು ಹೇ˙ುತ˜ಠ- ಆದರೆ ≡˜ಹ್ಯ ſಕ್ಷಕಳು ಕಂಂಕೊ˙್ಳುವುದು ವ್ಯಕ್ತಿಯೇ ಹೇ´ಕೊ˙್ಳುವುದಕಿರಿತ ಭಿಠ್ನವ˜ದ ಉದ್ದೇ•T˝ಠ್ನ †˜ಧಿ™ಕೊ˙್ಳುವುದು- ಮತ್ತು Bವಳು ಬಯ‡ುವುದು E ಭಿಠ್ನ ಗbhT˝ †˜ದಠಿಯಠ್ನೀ Iಠ್ನುವುದಠ್ನು †˜ಮ˜ಠ್ಯವ˜U Bವು ವ್ಯಕ್ತಿ ಹೇ´ಕೊ˙್ಳುವ ಬಯಕೆT´ಂತ ಕp ಮೆ ದಥು್ಪರವ˜ದವು- ಹ˜T˜U ಠ˜j ಕವು ತಠ್ಮೊ· ಕ ಇರುವಂತೆಯೇ ಹೇ´ಕೊ˙್ಳಲ˜ರದೇ ಕೇವ· Bವು ಉದ್ದೇ• †˜ದಠಿಯ ಬಯಕೆT˙ು I ಂದೇ ಕ್ಷೆſ‡ಲ˜ಗುತ್ತದೆ- ಮತ್ತು ತಠ್ನ ಬŤ್ಗಿಯೇ ಕೆj đ ಕ್ಷವಠಿಯಠ್ನು ತ˙ುವ ಕ್ಷಯುದಿಂದ

ವ್ಯಕ್ತಿಯು ಜಾಗೃತ ಪ್ರಜ್ಞೆಯ ಪಾತಳಿಗೆ ಬರುವುದನ್ನು ನಿರಾಕರಿಸುವಂತಹ ಮನಸ್ಸಿನ ಪ್ರಜ್ಞೆಯ ಭಾಗದಲ್ಲಿ ಇರುತ್ತವೆ."[೨೧] ಮೇಲೆ ಹೇಳಿದಂತಹ ತೀರ್ಮಾನಗಳು ರೋಗಗ್ರಸ್ಥ ಮನಸ್ಸನ್ನು ಕುರಿತು ಹೇಳುತ್ತಿದ್ದರೂ ಅಂತಹ ಪ್ರಸಂಗಗಳು ಕಂಡುಬಂದಿದೆ ಎಂಬುದು ಸತ್ಯ. ಆದರೆ ಸಹಜಪ್ರವೃತಿಯೆಂದು ಪರಿಗಣಿಸಲಾಗದ ಮೂಲಭೂತ ಪ್ರೇರಣೆಯಾದ ಹೆಣ್ಣು ಗಂಡಿನ ನಡುವಿನ ಸಂಬಂಧಗಳನ್ನು ಪ್ರವೃತ್ತಿಯ ತಳಾತಳಕ್ಕೆ ಇಳಿದು ಶೋಧಿಸುತ್ತಾ ಹೋದಂತೆ ವ್ಯಕ್ತ ಬದುಕಿಗಿಂತಲೂ, ಅವ್ಯಕ್ತ ಬದುಕಿನಲ್ಲಿ ಅದುಮಿಡಲಾದ ಬಯಕೆಗಳು ಪ್ರಮುಖವಾಗಿ ಈ ನೆಲೆಯಲ್ಲಿಯೇ ಕಂಡುಬರುತ್ತದೆ. ಅದು ಕೆಲವೊಮ್ಮೆ ಮುಮ್ಮುಖವಾಗಿ ವ್ಯಕ್ತಿಗಳ ವರ್ತನೆಗಳ, ಪ್ರವೃತ್ತಿಗಳ ಮೂಲಕ ಹೊರ ಹಾಕಲ್ಪಡುತ್ತದೆ. ಕಪಿಲನ ಮೇಲ್ಕಂಡ ವರ್ತನೆಗಳು ವ್ಯಕ್ತಿ ತಾನು ತಾನಾಗಬೇಕೆಂಬ ಆತ್ಮವಾಸ್ತವೀ ಕರಣದ (Self-actualization) ಪ್ರೇರಣೆ ಕಾರಣವಾಗಿರುವುದನ್ನು ಗುರುತಿಸಬಹುದು. "ಆತ್ಮವಾಸ್ತವೀ ಕರಣ ಎಂದರೆ ವ್ಯಕ್ತಿ ತನ್ನಲ್ಲಿರುವ ಸುಪ್ತ ಸಾಮರ್ಥ್ಯಗಳನ್ನು (Potentialities), ಬಯಕೆಗಳನ್ನು ವಾಸ್ತವೀಕರಿಸಿಕೊಳ್ಳುವುದು".

ದಟ್ಟವಾದ ವಾಸ್ತವ ಪ್ರಜ್ಞೆ, ಆಗಾಧವಾದ ಸ್ವಯಂ ಪ್ರೇರಣೆ, ತಮ್ಮ ಮತ್ತು ತಮ್ಮ ಪರಿಸರದ ವಾಸ್ತವ ರೂಪವನ್ನು ಮುಚ್ಚು ಮರೆಯಿಲ್ಲದೆ ಒಪ್ಪಿಕೊಳ್ಳುವುದು, ಸ್ವಾತಂತ್ರ್ಯ, ಪ್ರೇಮ; ಜನರನ್ನು, ಘಟನೆಗಳನ್ನು ಗ್ರಹಿಸುವುದರಲ್ಲಿ ನಾವೀನ್ಯತೆ; ಸಂಪ್ರಾದಾಯ ವಿರೋಧ, ಜನರೊಡನೆ ತಾದ್ಯಾತ್ಮತೆ ಮತ್ತು ಜನರ ಬಗ್ಗೆ ಪ್ರೇಮ; ತಮ್ಮ ಪರಿಸರದ ಮಿತಿಗಳನ್ನು ಮೀರುವ ಸ್ವಭಾವ. ಕಲಾತ್ಮಕ ಸೃಜನಾತ್ಮಕತೆಯ ಸಂದರ್ಭದಲ್ಲಿ ಆತ್ಮವಾಸ್ತವಿಕರಣವು ಹೆಚ್ಚು ಅಭಿವ್ಯಕ್ತಗೊಳ್ಳುವುದಾದರೂ ವ್ಯಕ್ತಿ ಬದುಕಿನ ವಯುಕ್ತಿಕ ನೆಲೆಯಲ್ಲೂ ಇದು ಪ್ರಕಟಗೊಳ್ಳುವುದನ್ನು ಕಪಿಲನ ಪಾತ್ರದ ಮೂಲಕವು ಗುರುತಿಸಬಹುದಾಗಿದೆ.

"ಹೇಗೆ ತೀರಿತು? ಮದುವೆ ಬರೆ ಒಪ್ಪಂದದ ಮಾತಾಗಿದ್ದರೆ ಒಪ್ಪಿಕೋತಿದ್ದೇ. ಆದರೆ ಪದ್ಮಿನಿಗೆ ಈ ಒಂದು ಕ್ಷಣಕ್ಕೆ ಅನಿಸಿದ್ದು ಸಮಸ್ಯೆಗೆ ಉತ್ತರ ಹೇಗಾದೀತು?"[೨೨]

ಕಪಿಲನ ಪಾತ್ರವು ಇಂತಹ ಹೇಳಿಕೆಗಳಿಂದಲೇ ಅನೇಕ ಸಂದರ್ಭಗಳಲ್ಲಿ ದಾಂಪತ್ಯ, ಲೈಂಗಿಕತೆ ಹೆಣ್ಣು-ಗಂಡಿನ ಸಂಬಂಧ ಮತ್ತು ಸಮಾಜ ಇವುಗಳ ಕುರಿತಾದ ಸಾಮಾಜಿಕ ಪ್ರಜ್ಞೆ ಮತ್ತು ಸಾಂಸ್ಕೃತಿಕ ಪ್ರಜ್ಞೆಯನ್ನು ಪ್ರಶ್ನಿಸುವ ಮತ್ತು ಇವುಗಳ ಕುರಿತಾದ ಮೌಲ್ಯ ಜ್ಞಾನವನ್ನು ಬದುಕಿನ ವಿವರಣಾತ್ಮಕ ಪ್ರಜ್ಞೆಗೆ ಒಳಪಡಿಸಿ ಸೂಕ್ಷ್ಮವಾಗಿಸುವುದನ್ನು ಗುರುತಿಸಬಹುದು, ವಿವಾಹ ಎಂಬುದು ಬರಿ ಒಪ್ಪಂದದ ಮಾತಲ್ಲ. ಎಂಬುದರಿಂದಲೇ ವಿವಾಹವನ್ನು ವಯುಕ್ತಿಕ ನೆಲೆಯಿಂದ ಸಾಮಾಜಿಕ, ಸಾಂಸ್ಕೃತಿಕ ಪ್ರಜ್ಞಾ ನೆಲೆಗೆ ವಿಸ್ತರಿಸಿದಂತೆ ತೋರುತ್ತದೆ. ಒಂದು ಕಡೆ ವಿವಾಹವನ್ನು ಸಾಮಾಜಿಕ ಪ್ರಜ್ಞೆಯ ಮೂಲಕ ಗ್ರಹಿಸುವಂತೆ, ಮತ್ತೊಂದೆಡೆ ಕಪಿಲ ದೇವದತ್ತನಲ್ಲಿ ಮೂವರು ಕೂಡಿ ಬಾಳಲು ಸಾಧ್ಯವಿಲ್ಲ ಎಂದು ಹೇಳುವ ಸಂದರ್ಭದಲ್ಲಿ ವೈಯಕ್ತಿಕ ಪ್ರಜ್ಞೆಗೆ

ಮರಳುವಂತಹದ್ದು ಕಂಡುಬರುತ್ತದೆ. ಈ ನೆಲೆಯಲ್ಲಿ ನೋಡಿದಾಗ ಕಪಿಲ ಪರಸ್ಪರ ವೈರುಧ್ಯವುಳ್ಳ ವ್ಯಕ್ತಿಯಾಗಿ ಕಂಡುಬರುತ್ತಾನೆ.

ಕಪಿಲನ ಪಾತ್ರದ ಮೂಲಕ ಸಾಹಿತ್ಯವು ಮನುಷ್ಯನ ಅನುಭವವನ್ನು ದೈಹಿಕವಾಗಿ, ಮಾನಸಿಕವಾಗಿ ಮತ್ತು ಬೌದ್ಧಿಕವಾಗಿ ಗ್ರಹಿಸುವ, ವಿಶ್ಲೇಷಿಸುವ ಹಾಗೂ ಅರ್ಥೈಸುವಲ್ಲಿ ಮಾನಸಿಕ ಇಲ್ಲವೇ ಬೌದ್ಧಿಕ ಗ್ರಹಿಕೆಯು ಏಕಮುಖೀಯವಾಗುವ ಆ ಮೂಲಕ ಅಪೂರ್ಣವಾಗುವ ಸೂಕ್ಷ್ಮತೆಯನ್ನು ಗ್ರಹಿಸಬಹುದು. ಗಂಡು-ಹೆಣ್ಣಿನ ಸಂಬಂಧ ದೈಹಿಕ-ಮಾನಸಿಕ ಅಂಶಗಳ ಅರ್ಥಪೂರ್ಣವಾದ ಒಂದು ಗೂಡುವಿಕೆಯಲ್ಲಿದೆ. ಅಂದರೆ ದೈಹಿಕ ಕ್ರಿಯೆಗಳಿಗೆ ಮಾನಸಿಕ ವಿರೋಧವಾಗಲಿ, ಮಾನಸಿಕ ಕ್ರಿಯೆಗಳಿಗೆ ದೈಹಿಕ ವಿರೋಧವಾಗಲಿ ಇರದ ಸ್ಥಿತಿ. ಕಪಿಲನ ಪ್ರಕೃತಿ ಸಹಜ ಅನುಭವಗಳು ಒರಟಾಗಿ ಹಾಗೆಯೇ ದೇವದತ್ತನ ಶಿಕ್ಷಿತ ಪ್ರಜ್ಞೆಯಿಂದ ಹುಟ್ಟುವ ಅನುಭವಗಳು ನಿರ್ವೀರ್ಯವಾಗಿರುವುದು.

ಅರ್ಥಪೂರ್ಣ ಲೈಂಗಿಕ ಸಂಬಂಧಗಳ ಮೇಲೆ ಸೂಕ್ಷ್ಮವಾದ ಮಾನಸಿಕ ಗ್ರಹಿಕೆಗಳು ಅಸಮಾನ್ಯ ಪರಿಣಾಮಕ್ಕೆ ಕಾರಣವಾಗಿರುವುದು, ದೇವದತ್ತ-ಪದ್ಮನಿ-ಕಪಿಲರ ಸಾಮಾಜಿಕ ನಡವಳಿಕೆಗಳಲ್ಲಿ ಮತ್ತು ಬಾಹ್ಯವರ್ತನೆಗಳಲ್ಲಿ ಪ್ರಕಟಗೊಂಡಿರುವುದು ಸ್ಪಷ್ಟವಾಗುತ್ತದೆ.

"ಈ ಮೈಯನ್ನು ಎಷ್ಟು ಬಗ್ಗಿಸಿದರೂ ಅದರಲ್ಲಿ ಅಡಗಿದ್ದ ನೆನಪು ಅಳಸಿ ಹೋಗುವುದಿಲ್ಲ. ಆಶ್ಚರ್ಯ ಎನಿಸತದಲ್ಲ? ಆದರೆ ಮೆದುಳಿಗೆ ನೆನಪು ಇದ್ದ ಹಾಗೆ ತೊಗಲಿನಲ್ಲೂ ನೆನಪು ಇರುತ್ತದೆ. ಗೊತ್ತದೇನು?..... ಅದಕ್ಕೆ ನೆನಪು ಅನ್ನಬೇಕೋ, ಚಟ ಅನ್ನಬೇಕೋ, ಏನನ್ನಬೇಕೋ ನನಗೆ ತಿಳಿಯೋದಿಲ್ಲ. ಕಳೆದು ಹೋದ ಒಂದು ಇಡೀ ಜಗತ್ತು ಈ ತೊಗಲಿನಲ್ಲಿ ನೆಲೆಸಿದೆ ಅನ್ನೊದಿಷ್ಟು ನಿಜ.. ಯಾರನ್ನೋ ಮುಟ್ಟಿದ ನೆನಪು. ಯಾರನ್ನೋ ಮೈಗೆ ಬಿಗಿದ ನೆನಪು. ಆದರೆ ಆ ಅನುಭವ ಬಂದ ಹೊತ್ತಿಗೆ ಈ ಮೈಗೆ ಈ ತಲೆ ಇರಲಿಲ್ಲ. ಆದ್ದರಿಂದ ತಲೆಗೆ ಮಾತ್ರ ಅದರ ಅರ್ಥ ಆಗೋದಿಲ್ಲ. ಏನೂ ತಿಳಿಯೋದಿಲ್ಲ. ಮೈ ಆ ಸ್ಪರ್ಶ ನೆನಸಿ, ಆ ಅನುಭವ ಮತ್ತೆ ಬಾಳಿ ಪ್ರಜ್ವಲಿತವಾಗಿ ಉರೀತದೆ. ಆದರೆ ತಲೆ ಪರಕೀಯನ ಹಾಗೆ ನೋಡುತ್ತಿರುತ್ತದೆ.[೨೩]

ಮನುಷ್ಯ ಮನೋದೈಹಿಕ ಪ್ರಾಣಿ, ಶರೀರವನ್ನು ಬಿಟ್ಟು ಮನಸ್ಸು ಮತ್ತು ಪ್ರಜ್ಞೆ ಇರಲಾರದು. ಪ್ರಜ್ಞೆಯನ್ನು ಬಿಟ್ಟು ಶರೀರ ಇರಬಹುದಾದರೂ ಅದು ಮೃತದೇಹ ಎನಿಸಿಕೊಳ್ಳುತ್ತದೆ. ದೇಹ ಮತ್ತು ಮನಸ್ಸುಗಳು ಕೂಡಿಯೇ ಒಬ್ಬ ವ್ಯಕ್ತಿ. ಅಂದರೆ ಜೀವಂತ ದೇಹದ ಅಸ್ತಿತ್ವದ ಹೊರತಾಗಿ ಮನಸ್ಸು ಎಂಬುದಕ್ಕೆ ಸ್ವತಂತ್ಯವಾದ ಅಸ್ತಿತ್ವವಿಲ್ಲ. ಆದರೆ ಮನಸ್ಸು ಜೀವಂತ ಶರೀರದಲ್ಲೇ ಅಂತರ್ಗತವಾಗಿದೆ ಎಂಬುದನ್ನು ಒಪ್ಪಲಾಗದು. ವ್ಯಕ್ತಿಯ ಬದುಕು ಒಂದು ಪ್ರಮಾಣದಲ್ಲಿ ಸಾಗಲು ಶರೀರ ಮತ್ತು ಮನಸ್ಸಿನ ಸಮನ್ವಯ ಅತ್ಯಂತ ಪ್ರಮುಖ. ಸಾಮಾನ್ಯವಾಗಿ

ಮನೋವಿಜ್ಞಾನದಲ್ಲಿ ಮನಸ್ಸಿನ ವ್ಯಾಪಾರಗಳ ಕುರಿತಾದ ಚರ್ಚೆಗಳೇ ಪ್ರಮುಖವಾಗಿರುತ್ತದೆ. ಆದರೆ ವ್ಯಕ್ತಿಯ ಮನಸ್ಸಿನ ವ್ಯಾಪಾರಗಳು ಪ್ರಕಟಗೊಳ್ಳುವುದು ವ್ಯಕ್ತಿಯ ವರ್ತನೆಯ ಮೂಲಕವೇ. ವರ್ತನೆಯು ದೇಹದ ಹಾವಭಾವಗಳ ಮೂಲಕ ಗುರುತಿಸಲ್ಪಡುವುದು.

ಯೂಂಗ್ ಪ್ರಕಾರ "ನಮಗಾಗುವ ಪ್ರತಿ ಅನುಭವಕ್ಕೂ ಎರಡು ಕಾರಣಗಳಿರುತ್ತವೆ. ಒಂದು ಬಾಹ್ಯ ಪ್ರಪಂಚದಲ್ಲಿದ್ದು ನಮ್ಮನ್ನು ಪ್ರಚೋದಿಸಬಲ್ಲ ವಾಸ್ತವಿಕ ಶಕ್ತಿ. ಎರಡನೆಯದು ಹೀಗೆ ಪ್ರಚೋದಿಸುವ ವಸ್ತುವನ್ನು ನಿರ್ಧಿಷ್ಟ ರೀತಿಯಲ್ಲಿ ಅರಿಯುವಂತೆ ಮಾಡುವ ಅಂತರ್ನಿಹಿತ ಶಕ್ತಿ. ನಮ್ಮೆಲ್ಲರ ಅನುಭವಗಳು ಉದ್ಭವವಾಗುವುದು ಈ ಎರಡು ಶಕ್ತಿಗಳ ಸಂಯೋಗದಿಂದ. ಕೆಲವು ಅನುಭವಗಳು ಸರಾಗವಾಗಿ ಜರುಗುತ್ತವೆ. ಕೆಲವನ್ನು ಅನುಭವಿಸುವುದು ಕಷ್ಟ. ಸುಲಭವಾಗಿ ಜರುಗುವ ಅನುಭವಕ್ಕೆ ಪ್ರಬಲವಾದ ಪೂರ್ವಪ್ರವಣತೆಯ (ಒಲವಿನ) ಹಿನ್ನೆಲೆಯಿರುತ್ತದೆ."[೨೪] ದೇಹಕ್ಕೆ ಸಂಬಂಧಿಸಿದಂತೆ ಪಂಚೇಂದ್ರಿಯಗಳಿಗೆ ಸಂಬಂಧಪಟ್ಟ ಅನುಭವಗಳು ಕೂಡಾ ಪ್ರತೀ ವ್ಯಕ್ತಿಯಲ್ಲೂ ಇದ್ದು ಅವರೆಲ್ಲರೂ ಅದನ್ನು ನಿರಂತರವಾಗಿ ಅನುಭವಿಸಿ, ಆ ಅನುಭವ ಅವರ ಮೆದುಳಿನ ಮೇಲೆ ಅಚ್ಚೊತ್ತಲ್ಪಟ್ಟು ಒಂದು ನಿರ್ಧಿಷ್ಟ ಅನುಭವವಾಗುವ ಹಾಗೆ, ಮತ್ತು ಅದನ್ನು ಗ್ರಹಿಸುವ ಮೆದುಳಿನ ವ್ಯವಸ್ಥೆ ಇರುವುದು ಸ್ಪಷ್ಟ. ಆದ್ದರಿಂದಲೇ ದೇಹ ಮತ್ತು ಮನಸ್ಸು ಇವು ಗಳೆರಡರ ಅಸ್ತಿತ್ವವನ್ನು ನಿರಾಕರಿಸುವುದು ಮನೋ-ದೈಹಿಕ ಸಂಬಂಧವನ್ನು ನಿರಾಕರಿಸಿದಂತೆಯೇ.

ಕಪಿಲನು ಹೇಳುವ 'ಕಳೆದುಹೋದ ಒಂದು ಇಡೀ ಜಗತ್ತು ತೊಗಲಿನಲ್ಲಿ ನೆಲೆಸಿದೆ' ಎಂಬಲ್ಲಿ ದೇಹ ಮತ್ತು ಮನಸ್ಸಿನ ಸಂಬಂಧದ ಸಂಕೀರ್ಣ ಸ್ವರೂಪವು ಮನೋವೈಜ್ಞಾನಿಕ ತಾತ್ವಿಕ ಆಶಯಗಳಾಗಿ ಆಂಥ್ರೋಪೊಲಾಜಿಕಲ್ ವಿಸ್ತಾರವನ್ನು ಕಟ್ಟಿಕೊಡುತ್ತದೆ. ಮತ್ತು ಮನುಷ್ಯರ ಬದುಕಿನಲ್ಲಿ ನೈತಿಕತೆಯ ಮಹತ್ವವು ಈ ಅನುಭವಗಳಲ್ಲಿಯೇ ಗುರುತಿಸಬಹುದಾದ ಸಾಧ್ಯತೆಯು ಇಲ್ಲಿ ಕಂಡು ಬರುತ್ತದೆ. ಈ ಅನುಭವಗಳು ತಮ್ಮ ವ್ಯಕ್ತಿ ನಿಷ್ಠತೆಯಿಂದ ಕಳಚಿಕೊಂಡು ತಮ್ಮ ಅಸ್ತಿತ್ವದ ಮೂಲದೊಡನೆ ಒಂದಾಗುವ ಪ್ರಕ್ರಿಯೆಯೇ ಮನೋಭೂಮಿಕೆ. ಈ ಮನೋಭೂಮಿಕೆಯೇ ವ್ಯಕ್ತಿಯ ಭೌತಿಕ ಮತ್ತು ಮಾನಸಿಕ ಸ್ಥಿತಿ. ಶರೀರದ ಮೇಲೆ ನಮ್ಮ ಮನಸ್ಸಿಗೆ ಇರುವ ನಿಯಂತ್ರಕ ಶಕ್ತಿಯನ್ನು ಕಪಿಲನ ಮಾತುಗಳು ನಿರೂಪಿಸುತ್ತವೆ. ಅನೇಕ ದೈಹಿಕ ಸಮಸ್ಯೆಗಳ ಮೂಲ ಮನಸ್ಸು ಎಂಬ ಆಧುನಿಕ ಮನೋವಿಜ್ಞಾನಿಗಳ ವಾದವನ್ನು ಆಧುನಿಕ ವೈದ್ಯಕೀಯ ಜಗತ್ತು ಒಪ್ಪಿಕೊಂಡಿರುವುದು ಮತ್ತು ವೈದ್ಯ ವಿಜ್ಞಾನವು ಮನಃಶಾಸ್ತ್ರದ ನೆರವನ್ನು ಚಿಕಿತ್ಸೆಯಲ್ಲಿ ಪಡೆಯುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ. ಹಾಗೇ ಒಬ್ಬ ವ್ಯಕ್ತಿಯು ಪಡೆದ ಅನುಭವಗಳು ಎಂದೆಂದಿಗೂ ಆತನದೇ ಆದ ಅನುಭವಗಳಾಗಿ ಜೀವಕಣಗಳ ನೆನಪಿನಲ್ಲಿ ಉಳಿಯುತ್ತವೆ. ಹಾಗೆಯೇ ಆ ಅನುಭವವು ಬೇರೆ ಅನುಭವದೊಂದಿಗೆ ಮುಖಾಮುಖಿಯಾದಾಗ ಅದು ಹಳೆಯ ಮತ್ತು ಹೊಸ ಅನುಭವದೊಂದಿಗಿನ ಸಂಘರ್ಷಕ್ಕೆ ಕಾರಣವಾಗಬಹುದು.

ವ್ಯಕ್ತಿಯೊಬ್ಬನಲ್ಲಿ ರೂಪುಗೊಳ್ಳುವ ಅನುಭವಗಳು, ಸಂವೇದನೆಗಳನ್ನು ಸಮಗ್ರವಾಗಿ ಗ್ರಹಿಸುವ ಸಂದರ್ಭದಲ್ಲಿ ಈ ಅಂಶಗಳು ಮುಖ್ಯವಾಗಬೇಕಾಗುತ್ತದೆ. 'ಹಯವದನ' ನಾಟಕವು ಕಪಿಲನ ಪಾತ್ರದ ಮೂಲಕ ದೇಹ ಮತ್ತು ಮನಸ್ಸುಗಳ ಸಾಂಗತ್ಯದಲ್ಲಿ ಅಡಗಿರುವ ಅಪಾರ ಶಕ್ತಿಯನ್ನು ಮತ್ತು ಅದೇ ಶಕ್ತಿಯನ್ನು ಭಾವನೆ, ಚಿಂತನೆಗಳೆಡೆ ಹರಿಸಿದಾಗ ಸಾಹಿತ್ಯ, ಕಲೆ ಮೊದಲಾದ ಬೌದ್ಧಿಕ ಬೆಳವಣಿಗೆಗಳಿಗೆ ಕಾರಣವಾಗುವ ಬಗೆಯನ್ನು ಗ್ರಹಿಸುವಂತೆ ಮಾಡುವಲ್ಲಿ ಯಶಸ್ವಿಯೆನಿಸಿದೆ. ವಿವಾಹ, ಪ್ರಣಯ, ಕಾಮ ಈ ಎಲ್ಲಾ ನೆಲೆಗಳಲ್ಲೂ ವ್ಯಕ್ತಿಗಳ ದ್ವಂದ್ವಗಳು, ಸಂಘರ್ಷಗಳು ಸರಳ ನೈತಿಕ ತೀರ್ಮಾನಗಳಲ್ಲಿ ಗುರುತಿಸಲು ಸಾಧ್ಯವಿಲ್ಲ. ಕಪಿಲ-ದೇವದತ್ತರ ಸಾವು ಕೂಡಾ ಅನೇಕ ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ. ದಾಂಪತ್ಯದ ಸಮಸ್ಯೆಗಳಲ್ಲಿ ಒಂದು ನೀತಿ ಅಥವಾ ಆದರ್ಶ ರೂಪಿಸಿಕೊಳ್ಳಬೇಕಾಗುತ್ತದೆಯೆ? ಕೊನೆಯ ಪಕ್ಷ ವಯುಕ್ತಿಕ ಗಂಡು-ಹೆಣ್ಣಿನ ಸಂಬಂಧದ ಮಟ್ಟಿಗಾದರೂ ಅನಿವಾರ್ಯವೇ? ಹಾಗಾಗದಿದ್ದಲ್ಲಿ ಕಪಿಲ-ದೇವದತ್ತರು ಪದ್ಮಿನಿಯೊಂದಿಗೆ ಬದುಕಬಹುದಾದದ್ದನ್ನು ಸಾಹಿತ್ಯದಲ್ಲಿ ಏಕೆ ಸಮರ್ಥಿಸಲಾಗಿಲ್ಲ? ಅವರಿಬ್ಬರ ಸಾವು ಇದನ್ನು ಸಮರ್ಥಿಸಿದಂತೆ ಅನಿಸುತ್ತದೆಯಲ್ಲವೆ?

ಒಟ್ಟಾರೆ ಕಪಿಲನ ಪಾತ್ರವು ಮಾನವ ಸಹಜ ಪ್ರೇರಣೆಯಾದ ಗಂಡು-ಹೆಣ್ಣಿನ ಆಕರ್ಷಣೆಯು ವಿವಾಹದ ಚೌಕಟ್ಟನ್ನು ಮೀರಿ ನಿಂತ ಸಂದರ್ಭಕ್ಕೂ ಮತ್ತು ಅವರ ಮೇಲಿರುವ ಸಾಮಾಜಿಕ-ನೈತಿಕ ನಿಯಂತ್ರಣ ಇವುಗಳ ಮಧ್ಯೆ ಉಂಟಾಗುವ ಸಂಘರ್ಷಗಳಂತೆ ಬಾಹ್ಯ ನೋಟಕ್ಕೆ ಕಂಡು ಬರುತ್ತದೆ. ಕಪಿಲನಲ್ಲಿ ಪರಸ್ಪರ ವಿರುದ್ಧವಾದ ಎರಡು ಮನಃಪ್ರವೃತ್ತಿಗಳನ್ನು (attitude) ಕಾಣಬಹುದು. ಈ ವಿರುದ್ಧ ಪ್ರವೃತ್ತಿಗಳನ್ನು ಯೂಂಗ್ 'ಅಂತರ್ಮುಖತೆ' (Introversion) ಮತ್ತು 'ಬಹಿರ್ಮುಖತೆ' (Extraversion) ಎಂದು ಗುರುತಿಸುತ್ತಾರೆ. "ಜಗತ್ತಿನ ಮಾನವನ ಮಾನಸಿಕ ವ್ಯಾಪಾರಗಳಲ್ಲಿ ಕಂಡುಬರುವ ಜ್ಞಾತೃ*ಜ್ಞೇಯ, ವಿಚಾರ*ವಸ್ತು, ಆಲೋಚನೆ*ಅನುಭವ ಇತ್ಯಾದಿ ದ್ವಂದ್ವಗಳ ಮೂಲ ಈ ಮನಃಪ್ರವೃತ್ತಿಗಳೇ".[೨೫]

ಒಂದು ಕಡೆ ಪದ್ಮಿನಿಯ ಆಕರ್ಷಣೆಯನ್ನು ಬಿಡಲಾರದ, ಇನ್ನೊಂದೆಡೆ ತನ್ನ ಸ್ನೇಹಿತನನ್ನು ಬಿಡಲಾರದವನಾಗಿ ಕಪಿಲನಲ್ಲಿ ಮಾನಸಿಕ ಸಂಘರ್ಷ ಕಂಡುಬರುತ್ತದೆ. ಆದರೆ ತನ್ನ ಪ್ರಾಣ ಸ್ನೇಹಿತನ ಹೆಂಡತಿಯಾದವಳ ಮೇಲಿನ ಆಕರ್ಷಣೆಯು ಉದ್ಭವವಾದಂತಹ ಕಪಿಲನ ಮನಸ್ಥಿತಿಯು ವಯುಕ್ತಿ ಕತೆಯನ್ನು ಮೀರಿ ಸಾರ್ವತ್ರೀಕತೆ ಹಾಗೂ ಸಾರ್ವಕಾಲಿಕ ನೆಲೆಯ ಮನುಷ್ಯನ ಪ್ರವೃತ್ತಿಯನ್ನು ನಿರೂಪಿಸಲು ಸಾಧ್ಯವಾಗಿದೆ. ಅಂದರೆ ವಯುಕ್ತಿಕ ನೆಲೆಯಲ್ಲಿರುವ ಆದಿಮ ಪ್ರತಿಮೆಗಳನ್ನು (Primordial Images) ಹಾಗೂ ಸಹಜ ಭಾವನೆಗಳನ್ನು (Instinctive Fellings) ಮತ್ತು ಬಾಹ್ಯ ಜಗತ್ತಿನ ಸಂಪರ್ಕದಿಂದ ಉಂಟಾಗುವ ಅನುಭವಗಳು ಮತ್ತು ಅದರ ಪರಿಣಾಮಗಳನ್ನು ಕಪಿಲನ ಪಾತ್ರದ ಮೂಲಕ ಸಾಹಿತ್ಯವು ಗ್ರಹಿಸಿರುವುದು ಸ್ಪಷ್ಟವಾಗುತ್ತದೆ.

ದೇವದತ್ತ

ಮಾನವ ಮನಸ್ಸಿನ ಸ್ವರೂಪ ಸಂಕೀರ್ಣವಾದುದು ಎಂಬುದು ಅನೇಕ ಸನ್ನಿವೇಶಗಳಲ್ಲಿ ಅರ್ಥವಾಗುತ್ತಿರುತ್ತದೆ. ಬೇರೆ ಬೇರೆ ಸನ್ನಿವೇಶಗಳಲ್ಲಿ ವ್ಯಕ್ತಿಯೊಬ್ಬನ ನಡವಳಿಕೆಯು ಬೇರೆ ಬೇರೆಯಾಗಿರುವುದನ್ನು ಅನೇಕ ಬಾರಿ ಗಮನಿಸುತ್ತಿರುತ್ತೇವೆ, ಓದಿರುತ್ತೇವೆ, ನೋಡಿಯೂ ಇರುತ್ತೇವೆ. ಇದನ್ನು ಗಮನಿಸಿದಾಗ ಅಂತಹ ವ್ಯಕ್ತಿತ್ವ ಕೇವಲ ಪ್ರತಿಕ್ರಿಯೆಗಳ ಒಟ್ಟು ಮೊತ್ತ ಎಂದೆನಿಸುವುದಿಲ್ಲ. ಒಂದು ಸನ್ನಿವೇಶದಲ್ಲಿ ವ್ಯಕ್ತಿ ಪ್ರಕಟಿಸುವ ವರ್ತನೆಯು ಇನ್ನೊಂದು ಸನ್ನಿವೇಶದಲ್ಲಿ ಬೇರೆಯೇ ಆಗಿರುತ್ತದೆ. ಆ ವರ್ತನೆಗಳು ರೂಪುಗೊಳ್ಳಲು ಕಾರಣವಾಗಿ ಬೇರೆ ಬೇರೆ ಪ್ರಚೋದನೆಗಳು ಕಂಡು ಬರುತ್ತವೆ ಮತ್ತು ಈ ರೀತಿ ರೂಪುಗೊಂಡ ಪ್ರಚೋದನೆ ಮತ್ತು ಪ್ರತಿಕ್ರಿಯೆಗಳ ನಡುವೆ ಅಂತರ್ ಸಂಬಂಧಗಳಿರುವುದನ್ನು ಗುರುತಿಸಬಹುದು.

ಸಾಹಿತ್ಯವೊಂದರಲ್ಲಿ ಯಾವುದೇ ಪಾತ್ರವನ್ನು ನೋಡುವಾಗ ವಿಶೇಷ ಆಸಕ್ತಿ, ಕುತೂಹಲ ಬೆಳೆಯಲು ಅನೇಕ ಕಾರಣಗಳಿರಬಹುದು. ಆ ಪಾತ್ರದ ಮೂಲಕ ವ್ಯಕ್ತವಾಗುವ ಮನುಷ್ಯನ ಭಾವನೆಗಳು, ತುಡಿತಗಳು, ಹಂಬಲಗಳು, ಹತಾಶೆಗಳು, ಬಯಕೆಗಳು ಸಾಮಾನ್ಯ ನೆಲೆಗಿಂತ ವಿಭಿನ್ನವಾದಲ್ಲಿ, ವಿಶಿಷ್ಟವಾದಲ್ಲಿ ಅದರ ಕುರಿತಾದ ಕುತೂಹಲ ಹೆಚ್ಚಾಗಬಹುದು. ವಿವಾಹ ಎಂಬುದು ಸಾಮಾಜಿಕ ಒಪ್ಪಂದ. ಗಂಡು-ಹೆಣ್ಣಿನ ಸ್ವಚ್ಛಂಧತೆಗೆ ಕಡಿವಾಣ ಹಾಕಿ ಅದನ್ನು ವ್ಯವಸ್ಥೆಯೊಂದಕ್ಕೆ ಒಳಪಡಿಸುವ ವಿವಾಹವು ದೈಹಿಕ ಹಾಗೂ ಮಾನಸಿಕ ಎರಡೂ ಬಗೆಯ ಮೂಲಭೂತ ಪ್ರೇರಣೆಯನ್ನು ಪೂರೈಸಲು ಸಹಕಾರಿ. ಇವೆರೆಡರ ನಡುವಿನ ಸಂಘರ್ಷವು ನಿರಂತರವಾದದ್ದು ಮತ್ತು ಅದು ಕಾಲ-ದೇಶಗಳ ಎಲ್ಲೆಯನ್ನು ಮೀರಿ ಸಾಹಿತ್ಯದ ಮುಖ್ಯ ವಸ್ತುವು ಆಗಿರುವುದು. ಮತ್ತು ಹಲವು ಬಾರಿ ಈ ವ್ಯವಸ್ಥೆಯ ಕಟ್ಟುಪಾಡುಗಳ ಉಲ್ಲಂಘನೆಯು ಭೌತಿಕ ಅಥವಾ ಮಾನಸಿಕ ಸ್ವರೂಪದಲ್ಲಿ ಪ್ರಕಟಗೊಳ್ಳುತ್ತದೆ. ಯಾವುದೇ ಸಾಮಾಜಿಕ, ಧಾರ್ಮಿಕ ಕಟ್ಟುಪಾಡುಗಳು ಇಂತಹ ಉಲ್ಲಂಘನೆಯನ್ನು ನಿಯಂತ್ರಿಸಲಾರವು. ಕೌಟುಂಬಿಕ ವ್ಯವಸ್ಥೆಗಳಲ್ಲಿ ಬಾಹ್ಯರೂಪದಲ್ಲಿ ಪ್ರಕಟವಾಗದ ಈ ಅಂಶಗಳು ಸುಪ್ತವಾಗಿ, ಗುಪ್ತವಾಗಿದ್ದರೂ ಸಾಹಿತ್ಯವು ವ್ಯಕ್ತಿಯ ಅಂತರಂಗದ ಈ ಅವಸ್ಥೆಯನ್ನು ಪಾತ್ರಗಳ ವರ್ತನೆಗಳ ಮೂಲಕ ಅನಾವರಣಗೊಳಿಸುತ್ತದೆ.

ಗಿರೀಶ ಕಾರ್ನಾಡರ 'ಹಯವದನ'' ನಾಟಕದಲ್ಲಿ ಬರುವ ದೇವದತ್ತ ವಿದ್ಯಾವಂತ, ಸುರದ್ರೂಪಿ, ಮೃದುಸ್ವಭಾವಿ, ಬೀದಿಯಲ್ಲಿ ಕಂಡ 'ಪದ್ಮಿನಿ'ಯನ್ನು ತನ್ನ ಗೆಳೆಯನಾದ ಕಪಿಲನ ಸಹಾಯದಿಂದ ವಿವಾಹವಾಗುತ್ತಾನೆ. ವಿವಾಹವಾಗಿ ಕೆಲವೇ ದಿನಗಳಲ್ಲಿ ದೇವದತ್ತನಿಗೆ ತನ್ನ ಪ್ರೀತಿಯ ಪತ್ನಿ, ಒರಟ, ಅವಿದ್ಯಾವಂತ, ನಯ ನಾಜೂಕು ಇಲ್ಲದ ಸುರದ್ರೂಪಿಯು ಅಲ್ಲದ, ಆದರೆ ದೈಹಿಕ ಬಲಾಢ್ಯನು, ಮರಳು ಮಾಡುವ ಮಾತುಗಾರ, ತನ್ನ ಸ್ನೇಹಿತನೂ ಆದ ಕಪಿಲನ ಬಗೆಗೆ ಆಕರ್ಷಣೆಗೊಂಡಿರುವುದನ್ನು ಗಮನಿಸುತ್ತಾನೆ. ಅದನ್ನು ನೇರವಾಗಿ ತನ್ನ ಪತ್ನಿಯ ಮುಂದೆ ವ್ಯಕ್ತಪಡಿಸುವುದಿಲ್ಲವಾದರೂ ಹೀಗೆ ಹೇಳುತ್ತಾನೆ.

'ಮೊನ್ನೆ ಸಂಜೆ ನಿನಗೆ ಭಾಸನ ನಾಟಕ ಓದಿ ತೋರಿಸೋಣ ಅಂದುಕೊಂಡಿದ್ದೆ. ನೋಡಿದರೆ ಸರಿಯಾಗಿ ಕಪಿಲ ಅದೇ ಹೊತ್ತಿಗೆ ಬಂದು ಬಿಟ್ಟ. ನನಗೆ ಸಿಟ್ಟು ಏನೂ ಇಲ್ಲ ಪದ್ಮಿನಿ. ಕಪಿಲ ಕೇವಲ ನನ್ನ ಮಿತ್ರ ಅಷ್ಟೇ ಅಲ್ಲ, ಬಂಧು ಇದ್ದ ಹಾಗೆ . ಅವನಂಥ ಮಿತ್ರ ಸಿಗಲಿಕ್ಕೆ ಏಳು ಜನ್ಮದಲ್ಲಿ ಪುಣ್ಯ ಕಟ್ಟಿಕೊಂಡು ಬರಬೇಕು. ಆದರೆ ಒಂದು ಸಲ ನೀನೊಬ್ಬಳನ್ನೇ ಕೂಡಿಸಿಕೊಂಡು ಓದಿ ಹೇಳೋಣ; ಒಂದೆರೆಡೂ ದಿನ ಅದರೂ ಬೇರೆ ಯಾರು ಅಡ್ಡ ಬರದೆ ಕಳೆಯೋಣ ಅಂತ ಅನಿಸೋದು ತಪ್ಪೇನು? (ತಡೆದು) ಇನ್ನು ಅವನು ಬಂದ ಮೇಲೂ ಕಾವ್ಯ ವಾಚನ ಆಗೋದು ಅಷ್ಟೇ ಇತ್ತು. ನಿನ್ನ ಕಪಿಲ...... ಕಪಿಲ.......ಪಲ್ಲವಿ ಸುರು ಆಗಿಬಿಟ್ಟಿತ್ತಲ್ಲ.'[೨೬]

ದಾಂಪತ್ಯ ಸಂದರ್ಭವು ಅನೇಕ ಚೌಕಟ್ಟುಗಳಿಂದ ಬಂಧಿಸಲ್ಪಟ್ಟಿದೆ. ಗಂಡಾಗಲಿ, ಹೆಣ್ಣಾಗಲಿ ಪರಸ್ಪರ ಹಕ್ಕುದಾರರೆಂದು ಭಾವಿಸಲಾಗುತ್ತದೆ. ಆದ್ದರಿಂದಲೇ ಅವರ ಮನೋಬಯಕೆಗಳು, ನಿರೀಕ್ಷೆಗಳು, ಭೌತಿಕ, ಮಾನಸಿಕ, ಎರಡೂ ನೆಲೆಯಲ್ಲಿಯೂ ಪೂರ್ಣವಾಗಿ ಈಡೇರುವುದಿಲ್ಲ ಎಂಬುದು ನಿಜ. ಬಾಹ್ಯ ನೋಟಕ್ಕೆ ನಿಲುಕದ ಮನಸ್ಸಿನ ಚೌಕಟ್ಟುಗಳು, ಜಗಿತದ ಅಪೇಕ್ಷೆಗಳು ದಾಂಪತ್ಯದ ಚೌಕಟ್ಟನ್ನು ಒಳಗಿನಿಂದಲೇ ಮೀರುವ ಪ್ರಯತ್ನಗಳನ್ನು ಪ್ರಶ್ನಿಸಲಾಗದು. ಮೀರುವ ಪ್ರವೃತ್ತಿಯು ಗಂಡಿನ ಅಥವಾ ಹೆಣ್ಣಿನ ವರ್ತನೆಯಲ್ಲಿ ಪ್ರಕಟಗೊಂಡಾಗ ಅದರ ಪರಿಣಾಮ ಆ ವರ್ತನೆಗೆ ಗುರಿಯಾಗುವ ವ್ಯಕ್ತಿಯ ಮೇಲಾಗುತ್ತದೆ.

ದೇವದತ್ತನಿಗೆ ತಾನು ಮೆಚ್ಚಿ ಮದುವೆಯಾದ ಪದ್ಮಿನಿಯು ನವದಾಂಪತ್ಯದ ಪ್ರಾರಂಭದಲ್ಲಿಯೇ ಕಪಿಲನ ಕಡೆಗೆ ಆಕರ್ಷಿತವಾಗಿರುವುದು ಒಂದು ಬಗೆಯ ಇರಿಸು–ಮುರಿಸಿಗೆ ಕಾರಣವಾಗಿದೆ. ಗಂಡಿನಲ್ಲಿರುವ ಸ್ತ್ರೀತ್ವದ ಕಲ್ಪನೆ ಅನಿಮಾದಿಂದ ನಿರ್ಧಾರಿತವಾಗಿರುತ್ತದೆ. ಈ ಕಲ್ಪನೆ ಯಾವುದೇ ಒಂದು ನಿರ್ದಿಷ್ಟವಾದ ಹೆಣ್ಣಿನ ಚಿತ್ರವಲ್ಲ. ಅದು ಇಡೀ ಹೆಣ್ತನದ ಪ್ರತೀಕ. ಅದು ಸ್ತ್ರೀಯನ್ನು ಕುರಿತಾದ ಆದರ್ಶ ಚಿತ್ರಣವೂ ಹೌದು. ಅವನ ಹೆಣ್ಣಿನ ಆಯ್ಕೆ ಈ ಆದರ್ಶವನ್ನು ಅನುಸರಿಸುತ್ತದೆ. ಗಂಡಸಿನ ಆದರ್ಶದ ಸ್ತ್ರೀ ಹಾಗೂ ವಾಸ್ತವಿಕ ಸ್ತ್ರೀಯ ನಡುವೆ ವ್ಯತ್ಯಾಸವಿರುತ್ತದೆ. ಇದರಿಂದ ಗಂಡಿಗೆ ವಿವಾಹದ ನಂತರದಲ್ಲಿ ತನ್ನ ಆಯ್ಕೆ ತಪ್ಪೆಂದು ಅನಿಸಬಹುದು. ಏಕೆಂದರೆ ಗಂಡಿನ ಕಲ್ಪನೆಯಲ್ಲಿ ಸ್ತ್ರೀ ಯಾವಾಗಲೂ ಪರಿಶುದ್ಧೆ, ಸಹೃದಯಿ, ಕ್ಷಮಾಗುಣವುಳ್ಳವಳು, ಪತಿವ್ರತೆ, ಶಕ್ತಿ ಸ್ವರೂಪಿಣಿ ಆಗಿರಬೇಕು. ಅದಕ್ಕೆ ವಿರುದ್ಧವಾಗಿ ಚಾರಿತ್ರ್ಯಹೀನಳು, ವಂಚಕಿ, ಅವಿವೇಕಿ, ನಂಬಿಕೆಗೆ ಅನರ್ಹಳಾದವಳು, ಕಳಂಕಿನಿ ಎಂಬ ಕಲ್ಪನೆಯೂ ಇರುತ್ತದೆ. ಗಂಡು ಹೆಣ್ಣನ್ನು ಪ್ರೀತಿಸುವಾಗ ಮೊದಲ ಪ್ರತಿಮೆಯೂ, ದ್ವೇಷಿಸುವಾಗ ಎರಡನೆಯದು ಆತನ ವರ್ತನೆಯನ್ನು ನಿಯಂತ್ರಿಸುತ್ತಿರುತ್ತದೆ. ಅದಕ್ಕೆ ಪೂರಕವಾಗಿ ಹೆಣ್ಣಿನ ವರ್ತನೆಯಲ್ಲಿಯೂ ಅನೇಕ ಬಾರಿ ಆಗುವ ಬದಲಾವಣೆಗಳು ಕೂಡಾ ಹೆಣ್ಣಿನ ಕುರಿತಾದ ಈ ಭಾವಪಲ್ಲಟ ಗಂಡಸಿನ ಮನಸ್ಸಿನಲ್ಲಿ ಆಗಾಗ್ಗೆ ಉಂಟಾಗಲು ಕಾರಣವಾಗುತ್ತವೆ. ಗಂಡಿನ ಅನಿಮಾದಂತೆಯೇ ಹೆಣ್ಣಿನ ಅನಿಮಸ್ (animuss) ಕೂಡಾ ಗಂಡಿನ

ಆಯ್ಕೆಯಲ್ಲಿ ತನ್ನ ಪ್ರಭಾವವನ್ನು ಬೀರುತ್ತದೆ. ಈ ಆಯ್ಕೆಯೂ ಗಂಡಸಿನಂತೆಯೇ ಆದರ್ಶವನ್ನನು ಸರಿಸಿ ನಡೆದು, ವಾಸ್ತವಿಕತೆ ಬಯಲಾದಾಗ ಅವರಿಬ್ಬರ ನಡುವೆ ಕಂದಕವೇರ್ಪಡುತ್ತದೆ. ಯೂಂಗ್‌ನ ಪ್ರಕಾರ ಹೆಣ್ಣಿನ ಅನಿಮಸ್ ಪ್ರತಿಮೆ ಬಹಳ ಶಕ್ತಿಯುತವಾಗಿದ್ದು ಅವಳಲ್ಲಿ ಭಾವಾತೀರೇಕ ಹೆಚ್ಚಾಗಿರುತ್ತದೆ. ಕೌರ್ಯ, ನಿಷ್ಠುರ, ಪೂರ್ವಾಗ್ರಹ, ಶೀಘ್ರ ತೀರ್ಮಾನಗಳು ಅತಿಯಾಗಿರುತ್ತವೆ.

ದೈನಂದಿನ ಬದುಕಿನ ಅನೇಕ ವಿಚಾರಗಳಲ್ಲಿ ವ್ಯಕ್ತಿಯ ಅನುಭವಕ್ಕೆ ಮಿತಿಗಳಿರುತ್ತವೆ. ಆದರೂ ವ್ಯಕ್ತಿಯ ಅರಿವಿಲ್ಲದಂತೆ ಅದು ನಡೆಯುತ್ತಿರುತ್ತದೆ. ಹಾಗೆ ಆಯ್ಕೆಯ ವಿಷಯದಲ್ಲೂ ಇದೇ ಸಂಭವಿಸುತ್ತದೆ. ಅರಿವಿಲ್ಲದೇ ಮಾಡುವ ಆಯ್ಕೆಗಳು ಅನಿವಾರ್ಯತೆಗಳಾಗುತ್ತವೆ. ಗಂಡು ಮತ್ತು ಹೆಣ್ಣಿನ ಮನಸ್ಸಿಗೆ ಸಂಬಂಧಿಸಿದಂತೆ ಪರಸ್ಪರ ವ್ಯಕ್ತಿತ್ವದ ಯಾವುದೋ ಒಂದು ವಿಶಿಷ್ಟವಾದ ಸ್ತರದಲ್ಲಿ ಆಯ್ಕೆಗಳು ನಡೆಯುತ್ತವೆ. ಈ ಆಯ್ಕೆಯ ಪ್ರಕ್ರಿಯೆಯು ಅರಿವಿನ ಸ್ತರದಲ್ಲಿ ಮಾಡಿಕೊಳ್ಳದೇ ಹೋದಾಗ ಸಂಭವಿಸಬಹುದಾದ ದಾಂಪತ್ಯದ ಸಂಘರ್ಷಗಳನ್ನು ದೇವದತ್ತನ ಪಾತ್ರದಲ್ಲಿ ಕಾಣಬಹುದು. ದೇವದತ್ತ ಪದ್ಮಿನಿಯ ನವದಾಂಪತ್ಯ ಅಷ್ಟೊಂದು ಆಳವಾದ ಬಂಧನಕ್ಕೆ ಒಳಗಾಗಿಲ್ಲದಿದ್ದರೂ ನಮ್ಮ ಕಲ್ಪನೆಯಲ್ಲಿ ದಾಂಪತ್ಯವನ್ನು ಪವಿತ್ರ, ಜನ್ಮಜನ್ಮಾಂತರದ ಸಂಬಂಧ, ಎಂಬೆಲ್ಲಾ ನಂಬಿಕೆಗಳಿಂದ ಬಂಧಿಸಿ ಇಡಲಾಗಿರುತ್ತದೆ. ಪದ್ಮಿನಿಯ ವರ್ತನೆಯನ್ನು ಸಾಮಾನ್ಯವೆಂದು ಪರಿಗಣಿಸಲಾಗುವುದಿಲ್ಲ. ಪದ್ಮಿನಿಯು ತನ್ನ ಗೆಳೆಯನಾದ ಕಪಿಲನಲ್ಲಿ ಹೊಂದಿರುವ ಆಸಕ್ತಿಯನ್ನು ಬಹುಶಃ ದೇವದತ್ತ ಗ್ರಹಿಸಿರಬಹುದಾದ ಸಾಧ್ಯತೆಯು ತನ್ನ ಸ್ವ-ಪ್ರತಿಷ್ಠೆಗೆ ಧಕ್ಕೆಯಾಗಿಯೂ ಮತ್ತು ದೌರ್ಬಲ್ಯವೆಂಬಂತೆಯೂ ತೋರಿರುವ ಸಾಧ್ಯತೆ ಕಂಡು ಬರುತ್ತದೆ. ಹಾಗೆಯೇ ಒಬ್ಬ ಪತ್ನಿಯಾಗಿ ಆಕೆಯಲ್ಲಿ ತನಗೆ ಮಾತ್ರ ಮೀಸಲೆಂದು ಭಾವಿಸಲ್ಪಟ್ಟ ಅಂಶಗಳಲ್ಲಿ ಕೊರತೆ ಕಂಡು ಬರುವಾಗ ಸಾಮಾನ್ಯವಾಗಿ ಪತಿಯಾದವನು ವ್ಯಕ್ತಪಡಿಸುವ ಪ್ರತಿಕ್ರಿಯೆಯಂತೆ ದೇವದತ್ತನ ಮಾತುಗಳು ನಡವಳಿಕೆಗಳು ಕಂಡುಬರುತ್ತವೆ. ಪ್ರೀತಿ, ಪ್ರೇಮ, ಕಾಮ ಇವುಗಳಿಗೆ ಸಂಬಂದಿಸಿದ ಸಂವೇದನೆಗಳು ಸ್ತ್ರೀಯಾಗಲಿ, ಪುರುಷನಾಗಲಿ ಅಂತರ್ಗತವಾಗಿ ಆಚರಿಸಿ ಬಾಹ್ಯ ವರ್ತನೆಯಲ್ಲಿ ಪ್ರಕಟಗೊಳಿಸದೇ ಇದ್ದಾಗ ದಾಂಪತ್ಯದಲ್ಲಿ ಉಂಟುಮಾಡುವ ಪರಿಣಾಮಕ್ಕಿಂತಲೂ ಬಾಹ್ಯ ವರ್ತನೆಯಲ್ಲಿ ಪ್ರಕಟಗೊಂಡಾಗ ಉಂಟಾಗುವ ಪರಿಣಾಮ ಹೆಚ್ಚು. ಪ್ರೀತಿ, ಪ್ರೇಮ, ಕಾಮ ಇದರ ಉತ್ಕಟತೆ ಮತ್ತು ಉದ್ಭವವಾಗುವ ಪರಿ ಇದರ ಕುರಿತು ವಿಶ್ಲೇಷಣೆಯು ಪೂರ್ಣ ಪ್ರಮಾಣದಲ್ಲಿ ಸಾಧ್ಯವಾಗದ್ದು. ಬದುಕಿನಲ್ಲಿ ಒಂಟಿತನದ (Lonelinessss) ತೀವ್ರ ಅನುಭವದಿಂದ ತಪ್ಪಿಸಿಕೊಳ್ಳಲು ಜೊತೆಗೆ ತನ್ನ ಅಸ್ತಿತ್ವಕ್ಕೆ ಚ್ಯುತಿ ಉಂಟಾಗದಂತೆ ಇತರರೊಡನೆ ಒಂದುಗೂಡುವ ಸಂದರ್ಭವು ಹೆಣ್ಣಾಗಲೀ, ಗಂಡಾಗಲೀ ಅನಿವಾರ್ಯವಾಗಬಹುದಾದ ಸಾಧ್ಯತೆಯನ್ನು ಅರಿಯ ಬೇಕಾದ ಪ್ರಜ್ಞೆಯೊಂದು ಮುಖ್ಯವಾಗುತ್ತದೆ. ಯೌವನದಲ್ಲಿ ಅನ್ಯಲಿಂಗದ ಆಕರ್ಷಣೆ ಸಾಮಾನ್ಯ ವಾದದ್ದು. ಆ ಕಾಲಘಟ್ಟದ ಪ್ರೀತಿ ಪ್ರೇಮ ಬಹುತೇಕ (Imputation) ಮೋಹದ ಪ್ರಭಾವಕ್ಕೆ

ಸಿಲುಕಿದ್ದೆ ಆಗಿರುತ್ತದೆ. ವಿವಾಹದ ನಂತರ ಪುರುಷ ಅಥವಾ ಸ್ತ್ರೀ ಪರಪುರಷ ಅಥವಾ ಪರಸ್ತ್ರೀಯರ ಆಕರ್ಷಣೆಗೆ ಒಳಗಾಗುವ ಕಾರಣವನ್ನು ಕೇವಲ ದೈಹಿಕ ನೆಲೆಗೆ ಸೀಮಿತಗೊಳಿಸಿ ಗ್ರಹಿಸಲಾಗದು. ಸುಪ್ತಾವಸ್ಥೆಯಲ್ಲಿ ನಿರ್ಬಂಧಿಸಲ್ಪಟ್ಟ ಲೈಂಗಿಕ ಅನೈತಿಕ ಬಯಕೆಗಳು ಸೃಜನಶೀಲತೆ ಯಲ್ಲಿ ನೆಲೆಯನ್ನು ಗುರುತಿಸುವ ಫ್ರಾಯ್ಡಿಯನ್ ಧೋರಣೆಯನ್ನು ಇಂತಹ ಸಂದರ್ಭಗಳಲ್ಲಿ ಸಂಪೂರ್ಣವಾಗಿ ಕಡೆಗಣಿಸಲು ಸಾಧ್ಯವಾಗುವುದಿಲ್ಲ.

ವ್ಯಕ್ತಿಯಲ್ಲಿ ಅಂತರ್ಗತವಾಗಿ, ಸ್ವಚ್ಛಂದವಾಗಿ, ನಿರರ್ಗಳವಾಗಿ ಯಾವುದೇ ನಿಬಂಧ೯ಗಳಿಗೂ ಒಳಗಾಗಲು ಬಯಸದ ಚಲನಶೀಲತೆಯುಳ್ಳ ಪ್ರೇಮಕಾಮಗಳ ಕ್ರಿಯೆಗೂ ಮತ್ತು ಸಮಾಜದ ವಿವಾಹ, ಪಾತಿವ್ರತ್ಯದ ಹೆಸರಿನಲ್ಲಿ ಈ ಕ್ರಿಯೆಯನ್ನು ನಿರ್ಬಂಧಿಸಲು ಮಾಡುವ ಪ್ರಯತ್ನವೂ ಕಾಲ, ದೇಶ, ಗಡಿ ಎಲ್ಲವನ್ನೂ ಧಿಕ್ಕರಿಸಿ ಮುಂದುವರೆದ ನಿದರ್ಶನಗಳು ಸಾವಿರಾರು ಇವೆ. ಸ್ವಾಭಾವಿಕವಾಗಿ ನಿರ್ಬಂಧಿತವಾದದ್ದು ವ್ಯಕ್ತಿಯ ಪ್ರಜ್ಞೆಯ ಬಾಹ್ಯಸ್ತರಕ್ಕೆ ಸೀಮಿತವಾಗಿಬಿಡುತ್ತದೆ. ಆದರೆ ಸುಪ್ತಾವಸ್ಥೆಯಲ್ಲಿ ಅರೆ-ಸುಪ್ತಾವಸ್ಥೆಯಲ್ಲಿ ಅನಿರ್ಬಂಧಿತವಾಗಿ ತಮ್ಮ ಪ್ರವಾಹವನ್ನು ಮುಂದುವರೆಸುತ್ತದೆ. ಅದಕ್ಕೊಂದು ಪೂರಕತೆ ಸಿಕ್ಕಾಗ ಅತ್ತ ಕಡೆಯೇ ಆ ಪ್ರವಾಹ ಸಾಗುತ್ತದೆ. ದೇವದತ್ತನಿಗೆ ಪದ್ಮಿನಿಯ ಮನೋಸ್ಥಿತಿಯು ಅರ್ಥವಾಗದೇ ಹೋಗುವುದಿಲ್ಲ. ಅದ್ದರಿಂದಲೇ ಆತ ಹೇಳಬೇಕಾದುದನ್ನು ಪರೋಕ್ಷವಾಗಿ ಸೂಚ್ಯವಾಗಿ ಹೇಳುತ್ತಾನೆ. ಬದುಕಿನಲ್ಲಿ ಅತ್ಯಂತ ತೀವ್ರವಾಗಿ ಬಯಸಿದ್ದರಲ್ಲಿ ಅನಿಶ್ಚಯತೆ ಉಂಟಾದ ವ್ಯಕ್ತಿಯೊಬ್ಬನ ತೊಳಲಾಟ ತಾಕಲಾಟ ಅಸಹಾಯಕತೆ ಎಲ್ಲವೂ ದೇವದತ್ತನಲ್ಲಿ ಕಂಡುಬರುತ್ತದೆ. ತನ್ನ ಅನಿಶ್ಚಿತತೆಗೆ ಕಾರಣವಾದ ತನ್ನ ಹೆಂಡತಿ ಮತ್ತು ಸ್ನೇಹಿತರ ನಡುವೆ ತನ್ನ ಅಸ್ತಿತ್ವವೇ ಪ್ರಶ್ನಾರ್ತಕವಾಗಿಬಿಡುವ ದೇವದತ್ತನ ಪರಿಸ್ಥಿತಿಯು ಕೇವಲ ದಾಂಪತ್ಯ, ಪ್ರಣಯ, ಪ್ರೀತಿ, ಪ್ರೇಮ ಈ ನೆಲೆಗೆ ಸೀಮಿತವಾಗುವುದಿಲ್ಲ. ಮಾನವನ ಏಕಾಂಗಿತನ ಎಂಬ ಆಂತರಿಕ ಹಸಿವಿನಿಂದ ನಿರ್ಮಾಣವಾಗಬಹುದಾದ ಹತಾಶೆ, ಪರಕೀಯ, ಏಕಾಂಗಿ, ಒಂಟಿತನದ ಉತ್ಕಟ ಭಾವನೆಗೂ ಕಾರಣವಾಗುತ್ತದೆ. ಈ ಉತ್ಕಟ ಭಾವನೆಯ ಹಿಂದೆ ಅಡಗಿರುವ ತಾತ್ವಿಕ ವಿಚಾರಧಾರೆ ಯೋಚನಾಕ್ರಮಗಳು ತನ್ನ ನಿಲುವನ್ನೇ ಸಮರ್ಥಿಸಿಕೊಳ್ಳಲಾಗದ ಪರಿಸ್ಥಿತಿಯನ್ನು ತಂದೊಡ್ಡುತ್ತದೆ.

ಪರಂಪರೆ ರೂಪಿಸಿದ ಗಾಢವಾದ ಜೀವನ ಶ್ರದ್ಧೆ ಒಂದಿರುತ್ತದೆ. ಆದರೆ ಪರಂಪರೆಯ ಶ್ರದ್ಧೆಗೆ ತೀರಾ ವಿರುದ್ಧ ಅಥವಾ ಭಿನ್ನ ನೆಲೆಯ ಮಾನಸಿಕ ಕ್ರಿಯೆ ಸದಾ ಅಂತಹ ಜೀವನ ಶ್ರದ್ಧೆಯ ಮೇಲೆ ಸವಾರಿ ಮಾಡುತ್ತಿರುತ್ತದೆ. ಸಾಮಾನ್ಯವಾಗಿ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ವಚ್ಛಂದ ಕಾಮಕ್ಕಿಂತ ಕುಟುಂಬದ ಚೌಕಟ್ಟಿನಲ್ಲಿ ಎಲ್ಲೆ ಮೀರದ ದಾಂಪತ್ಯಕ್ಕೆ ಬೆಲೆ ಮತ್ತು ಒಲವು. ಅಂದರೆ ವಯಕ್ತಿಕತೆಗಿಂತ ಸಾಮಾಜಿಕವಾಗಿ ವಿಸ್ತೃತಗೊಳ್ಳುವುದೇ ಹೆಚ್ಚು ಮಹತ್ವಪೂರ್ಣವಾದುದು ಎಂಬ ನಂಬಿಕೆ. ಎಲ್ಲವೂ ಸಾಮಾಜಿಕ, ಸಂಪ್ರದಾಯಗಳಿಗೆ ಅನುಗುಣವಾಗಿ ಇರಬೇಕು.

ಮನುಷ್ಯನಿಗೆ ಸಮಾಜ ಅನಿವಾರ್ಯವಾದರಂತೂ ವ್ಯಕ್ತಿಗಿಂತ ಸಮಾಜವೇ ಪ್ರಮುಖವಾಗಿಬಿಡುತ್ತದೆ. ಗಂಡು ಹೆಣ್ಣಿನ ಸಂಬಂಧಗಳು ಈ ಅನಿವಾರ್ಯತೆಗೆ ಬದ್ಧವಾಗುವುದರಿಂದಲೇ ಮನಸ್ಸು ಅಪೂರ್ಣವಾಗುತ್ತದೆ. ಈ ಅಪೂರ್ಣತೆಯನ್ನು ಪದ್ಮಿನಿಯಲ್ಲಿ ದೇವದತ್ತ ಕಾಣುತ್ತಾನೆ. ಪತ್ನಿಯಾದವಳಲ್ಲಿ ದಾಂಪತ್ಯದ ಆರಂಭದ ದಿನಗಳಲ್ಲೇ ಬೇರೊಬ್ಬ ಪುರುಷನ ಬಗೆಗಿನ ಆಸಕ್ತಿಯನ್ನು ಕಂಡಾಗ ಪತಿಯಾದವನು ಪ್ರತಿಕ್ರಿಯಿಸಬೇಕಾದ ಸಾಮಾನ್ಯ ನಡವಳಿಕೆ ದೇವದತ್ತನಲ್ಲಿ ಕಂಡುಬರುವುದಿಲ್ಲ. ಪದ್ಮಿನಿ ಮತ್ತು ದೇವದತ್ತರ ನಡುವಿನ ದಾಂಪತ್ಯವಾದರೂ ಎಂತಹದ್ದು? ಗಂಡು ಹೆಣ್ಣನ್ನು ಕೇವಲ ದೈಹಿಕ ವಾಂಛೆಗಳಿಗಾಗಿ ಅವಲಂಬಿಸಬೇಕಾದ ಅನಿವಾರ್ಯತೆಯೆ? ಸಾಮಾಜಿಕ ಕಟ್ಟುಪಾಡುಗಳ ನಿರ್ಬಂಧನೆಯಿಂದಾಗಿ ಬಹುತೇಕ ದಾಂಪತ್ಯಗಳು ಅತೃಪ್ತಿಯಲ್ಲಿಯೇ, ಅಪೂರ್ಣವಾಗಿಯೇ ಸಾಗುತ್ತಿರುವುದುದಾದರೂ ಏಕೆ? ದಾಂಪತ್ಯದ ಕಟುವಾಸ್ತವದ ಅರಿವು ಉಂಟಾದಾಗಲೂ ಅದರೊಂದಿಗೆ ತೀವ್ರವಾಗಿ ಬದುಕುವುದರ ಮೂಲಕವೇ ಗೆಲ್ಲಬೇಕೆಂಬ ದೇವದತ್ತನ ನಿಷ್ಠುರ ಜೀವನಪರತೆಯೇ? ಹೀಗೆ ಹಲವು ಬಗೆಯ ಪ್ರಶ್ನೆಗಳು ದೇವದತ್ತನ ಕುರಿತಾಗಿ ಉಂಟಾಗುತ್ತವೆ.

ದಾಂಪತ್ಯವೆನ್ನುವುದು ಶಾಸ್ತ್ರ, ಸಂಪ್ರದಾಯಗಳ ಚೌಕಟ್ಟಿನಲ್ಲಿ ರೂಪುಗೊಳ್ಳುವ ಸಂಬಂಧಗಳಾದಾಗ ಅಥವಾ ಪರಸ್ಪರ ಅನುರಾಗ, ತಿಳುವಳಿಕೆ, ಪ್ರೀತಿ–ಪ್ರೇಮಗಳ ಆಧಾರದ ಮೇಲೆ ಮಾಡಿಕೊಳ್ಳುವ ಪ್ರಜ್ಞಾಪೂರ್ವಕ ಆಯ್ಕೆಯಾದಾಗಲೂ ಒಂಟಿತನದ ಪ್ರಜ್ಞೆ ಪ್ರಬಲವಾದಾಗ ದೇವದತ್ತ ಹತಾಶನಾಗುವುದು ಕಂಡು ಬರುತ್ತದೆ. ತನ್ನ ದಾಂಪತ್ಯದಲ್ಲಿ ಕಪಿಲನ ಮಹತ್ವವೇ ಹೆಚ್ಚಾದಾಗ ದೇವದತ್ತ ಅಂದುಕೊಳ್ಳುವ ರೀತಿ "ಯಾವ ಹೆಣ್ಣಾದರೂ ಮಾರುಹೋಗಬೇಕು. ಕುಮಾರಿಯಾದರೇನು? ಮುತ್ತೈದೆಯಾದರೇನು? ಹೌದು, ಎಂತಹ ಮೂರ್ಖ ನಾನು! ಇಷ್ಟು ದಿನ ಕಪಿಲನ ಕಣ್ಣಿಂದ ಕೈಚಾಚೋ ದೈನ್ಯ ಕಂಡೆ. ಅವಳ ಕಣ್ಣಲ್ಲಿ ನೋಡಲಿಲ್ಲ. ನೋಡಿದಾಗಲೆಲ್ಲಾ ಅಲ್ಲಿ ತೂಗುಬಿಟ್ಟ ಪರದೇನೇ ಕಣ್ಣಿನ ತಳ ಅಂತ ನಂಬಿದೆ. ಆದರೆ ಈಗ ಅಲ್ಲಿ ಉರಿಯುವ ಜ್ವಾಲೆ ಕಾಣುತ್ತದೆ. ಈಗ! ಇಷ್ಟು ಹೊತ್ತಾಗಿ! (ವಿಹ್ವಲನಾಗಿ) ನೋಡು ದೇವದತ್ತ ಸರಿಯಾಗಿ ನೋಡು. ಅಲ್ಲಿ ಏಳೋ ಅರಿಷಿಣ ನೇರಿಲ ಜ್ವಾಲೆ ನೋಡು. ತನ್ನ ಇಡೀ ಅಂತರಂಗ ಕರಗಿಸಿ ಅವನ ಮುಸಿಯಲ್ಲಿ ಎರಕ ಹೊಯ್ದು ಪುಟ ಇಡುತ್ತಿದ್ದಾಳೆ.... ನೋಡು ನಿನ್ನ ಕರಳು ಸುಡಲಿ.... ಪುಪ್ಪಸ ಬೂದಿಯಾಗಲಿ.... ಆದರೆ ಹೆದರದೆ ನೋಡು. ಕೂಗಬೇಡ. ನಿನ್ನ ದ್ವೇಷವನ್ನು ಗಂಟಲಲ್ಲೇ ಹಿಚುಕಿಬಿಡು. ನಿನ್ನೊಳಗಿನ ದವದಾಹದ ನಾಲಿಗೇನೇ ಕಿತ್ತು ಒಗೆ. ಆದರೆ ನಿನ್ನ ಹೆಂಡತಿಯ ಕಣ್ಣಲ್ಲಿ ಕಣ್ಣಿಟ್ಟು ಅಲ್ಲಿಯ ನವಿಲು–ಬಣ್ಣದ ಜ್ವಾಲೆಗೆ ನಿನ್ನ ಕುರುಡುತನ ಸುಟ್ಟುಹೋಗಿ ಮತ್ತೆ ಬಾಧಿಸದ ಹಾಗೆ ನೋಡು ಈಗ ಪುಕ್ಕನಾಗಬೇಡ".[೨೨] ದೇವದತ್ತನನ್ನು ಹೊರಗಿನಿಂದ ಗಮನಿಸುವಾಗ ನಾವು ಕಾಣಬಹುದಾದುದು ಅವನು ನೊಂದ, ಹತಾಶೆಗೊಂಡ ಪತಿಯಾಗಿ ಮಾತ್ರ, ವರ್ತನಾ ಸಿದ್ಧಾಂತವು ಇದನ್ನು ಪರಿಸರಕ್ಕೆ ತೋರುವ ಒಂದು ಬಗೆಯ

ಪ್ರತಿಕ್ರಿಯೆಯಾಗಿ ಪರಿಗಣಿಸಬಹುದು. ವ್ಯಕ್ತಿ ಸಹಜವಾದ ಕಾಮವು ಬದುಕಿನ ಅನ್ವೇಷಣೆಯಲ್ಲಿ ತಾತ್ವಿಕವಾದ ಯಾವ ಅಂಶವನ್ನು ಇಲ್ಲಿ ಪ್ರತಿಪಾದಿಸಲು ಪ್ರಯತ್ನಿಸುತ್ತಿದೆ ಎಂಬುದನ್ನು ವಿವೇಚಿಸಿದಾಗ ಸಂಶಯಕ್ಕೆ ಕಾರಣವಾಗುತ್ತದೆ. ದೇವದತ್ತನ ಮೂಲಕ ಹೆಣ್ಣನ್ನು ಪರಂಪರೆಯ ವಿರುದ್ಧವಾದ ನೆಲೆಯಲ್ಲಿ ನೋಡುವ ಉದ್ದೇಶವಿದ್ದಂತೆ ಕಂಡುಬರುವುದಿಲ್ಲ. ದೇವದತ್ತನಾದರೂ ತನ್ನನ್ನು ತಾನು ಇಡಿಯಾಗಿ ಮುಖಾಮುಖಿಯಾಗಿ ನೋಡಿಕೊಳ್ಳುವುದು ಇಲ್ಲ. ಸ್ವತಃ ದೇವದತ್ತನಲ್ಲೇ ಅನೇಕ ವಿರೋಧಾಭಾಸಗಳು ಕಂಡು ಬರುತ್ತವೆ. ತನ್ನೆದುರಿಗೆ ಕಪಿಲನಲ್ಲಿನ ಆಕರ್ಷಣೆಯನ್ನು ಅತ್ಯಂತ ಸೂಚ್ಯವಾಗಿ ಪದ್ಮಿನಿ ವ್ಯಕ್ತ ಪಡಿಸುತ್ತಿದ್ದರೂ ಏಕೆ ಮೌನವಾಗಿದ್ದ.

"ನಿನ್ನ ಹೆಂಡತಿಯ ಕಣ್ಣಲ್ಲಿ ಕಣ್ಣಿಟ್ಟು ಅಲ್ಲಿ-ನವಿಲು ಬಣ್ಣದ ಜ್ವಾಲೆಗೆ ನಿನ್ನ ಕುರುಡುತನ ಸುಟ್ಟು ಹೋಗಿ ಮತ್ತೆ ಬಾಧಿಸದ ಹಾಗೆ ನೋಡು ಈಗ ಪುಕ್ಕನಾಗಬೇಡ".[೨೮]

ಮೇಲಿನ ಸಂದರ್ಭವು ವ್ಯಕ್ತಿಯ ಮನಸ್ಸು ಕಾಮ ಪ್ರಜ್ಞೆಯ ಸ್ಥಿತಿಯನ್ನು ಮುಟ್ಟಿದಾಗ ಅದಕ್ಕೆ ಆಸಕ್ತಿ ಹುಟ್ಟುವುದು ಕೇವಲ ದೇಹದಲ್ಲಿಯೇ ಹೊರತು ಕಾಮಬದುಕಿಗೆ ಪ್ರೇರಣೆಯಾಗುವ ಅರ್ಥದಲ್ಲಲ್ಲ, ಅದರ ಅರ್ಥಪೂರ್ಣತೆಯಲ್ಲಲ್ಲ ಎಂದೆನಿಸುತ್ತದೆ. ದೇವದತ್ತನಿಗೆ ಪದ್ಮಿನಿಯನ್ನು ಕಡೆಗಣಿಸಲು ಧಿಕ್ಕರಿಸಲು ಸಾಧ್ಯವಾಗದೇ ಹೋಗುವುದು ಬಹುಶ: ಈ ಕಾರಣದಿಂದಲೇ ಇರಬಹುದು. ಪದ್ಮಿನಿಯ ರೂಪು ಮೊಟ್ಟಮೊದಲಿಗೆ ಆಕರ್ಷಣೆಗೆ ಕಾರಣವಾಯಿತು. ಆದರೆ ಆಕರ್ಷಣೆಯು ಕೇವಲ ಮೋಹ(Impatuation)ಕ್ಕೆ ಸೀಮಿತವಾದಂತಹ ಸಂದರ್ಭವೇ ದೇವದತ್ತ ದಾಂಪತ್ಯದ ತಾತ್ವಿಕತೆಯ ಅರ್ಥ ಹಾಗೂ ಮಹತ್ವ ಅರಿಯದೇ ಹೋದಂತೆ ಅನಿಸುತ್ತದೆ. ಪರಸ್ಪರ ಪ್ರೀತಿಸುತ್ತಿರುವಂತೆ ಭಾಸವಾದರೂ ದೇವದತ್ತ ಪದ್ಮಿನಿಯ ನಡುವಿನ ಅಂತರಕ್ಕೆ ಕಪಿಲ ಕಾರಣನಾದಂತೆ ಅನಿಸುವುದಿಲ್ಲ. ಸ್ತ್ರೀಯಾಗಲೀ, ಪುರುಷನಾಗಲೀ ಅವರ ಯಾವುದೇ ವರ್ತನೆಯು ಸಾಮಾನ್ಯೀಕರಿಸಿದ ಗ್ರಹಿಕೆಯಿಂದ ನೋಡಿದಾಗ, ಅರ್ಥಪೂರ್ಣವಾಗುವುದಿಲ್ಲ. ಇಲ್ಲಿ ಪದ್ಮಿನಿ ಇಡೀ ಸ್ತ್ರೀ ಕುಲವನ್ನೇ ಪ್ರತಿನಿಧಿಸುವವಳಲ್ಲ. ಸ್ತ್ರೀಯರ ಸ್ತ್ರೀತನದ ಕೆಲವು ಅಂಶವನ್ನು ಪ್ರತಿನಿಧಿಸುತ್ತಾಳೆಂಬುದನ್ನು ನಿರಾಕರಿಸಲು ಸಾಧ್ಯವಿಲ್ಲ. ದೇವದತ್ತನ ವಿಚಾರದಲ್ಲಿಯೂ ಇದೆ ಗ್ರಹಿಕೆಯು ಹೆಚ್ಚು ಸೂಕ್ತ ಎಂದೆನಿಸುತ್ತದೆ.

ಪರಸ್ಪರ ಯಾವ ನಿರೀಕ್ಷೆಗಳಿಲ್ಲದೆ ದಾಂಪತ್ಯ ಇರಲು ಸಾಧ್ಯವಿಲ್ಲ. ಅದು ದೈಹಿಕ, ಮಾನಸಿಕ ನಿರೀಕ್ಷೆಗಳಲ್ಲದೆ ಅನೇಕ ಸೂಕ್ಷ್ಮ ಸಂಗತಿಗಳ ಮೇಲೆ ನೆಲೆ ನಿಂತಿರುತ್ತದೆ. ದಾಂಪತ್ಯದಲ್ಲಿ ಪತಿ-ಪತ್ನಿ ಪರಸ್ಪರರ ಅಂತರಂಗ ಬಹಿರಂಗಗಳೆರೆಡಕ್ಕೂ ಮುಖಾಮುಖಿಯಾಗಿರುತ್ತಾರೆ ಎಂಬುದು ಆದರ್ಶ ನೆಲೆಯಲ್ಲಿ ಗ್ರಹಿಸಬಹುದಾದದ್ದು. ಆದರೆ ವಾಸ್ತವದಲ್ಲಿ ಮನಸ್ಸಿನ ಸ್ವರೂಪ ಅದರ ಪ್ರಕ್ರಿಯೆಗಳನ್ನು ಹೀಗೆ ಎಂದು ನಿರ್ಧರಿಸಲು ಸಾಧ್ಯವಾಗುವುದಿಲ್ಲ. ಗಂಡ-ಹೆಂಡತಿ ಎಂಬ ನೆಲೆಯಲ್ಲಿ ಬಿಚ್ಚಿಕೊಳ್ಳಲಾಗದ ಅನೇಕ ಅಂಶಗಳು ಹೆಣ್ಣು-ಗಂಡು ಎಂಬ ನೆಲೆಯಲ್ಲಿ ಸಾಧ್ಯವಾಗಬಹುದು. ದಾಂಪತ್ಯವು ಬರಿಯ ದೈಹಿಕ ಅವಶ್ಯಕತೆಗಳ ಪೂರ್ಣತೆಗಾಗಿ ಮಾತ್ರವಲ್ಲ. ಇದು

ಕಾಮ ತೃಪ್ತಿಯಿಂದ ಮುಗಿಯುವುದೂ ಅಲ್ಲ. ಅದು ದೀರ್ಘಕಾಲ ಮುಂದುವರೆದುಕೊಂಡು ಹೋಗುವಲ್ಲಿ ಪರಸ್ಪರ ಉಳಿಯುವ, ಉಳಿಸಿಕೊಳ್ಳುವ ಪ್ರೇರಣೆಗಳಾಗಬೇಕಾಗುತ್ತದೆ. ಆದರೆ ದೇವದತ್ತನ ಸಂದರ್ಭದಲ್ಲಿ ಮತ್ತು ಸಮಾಜದ ಸಾಂಪ್ರದಾಯಿಕ ಅಥವಾ ಹಕ್ಕಿನ ಮದುವೆಗಳಲ್ಲಿ ದಾಂಪತ್ಯಗಳು ಅನೇಕ ಬಾರಿ ಗಂಡು ಹೆಣ್ಣುಗಳ ಒಲುಮೆ ಶೃಂಗಾರಗಳ ಮೇಳದಿಂದ ಮುಗಿದು ಹೋಗಿ ಬಿಟ್ಟಂತೆ ಅನಿಸುತ್ತದೆ. ಅದೇ ರೀತಿ, ರೂಪ, ವಿದ್ಯೆ, ಪಾಂಡಿತ್ಯ ದಾಂಪತ್ಯದ ಯಶಸ್ಸಿಗೆ ಕಾರಣವಾಗಲಾರದು. ಪಂಡಿತನು ಸುರದ್ರೂಪಿಯು ಮೃದುಸ್ವಭಾವದವನು ಸುಸಂಸ್ಕೃತನೂ ಆದ ದೇವದತ್ತನಿರುವಾಗ ಇದೆಲ್ಲದಕ್ಕೂ ವಿರುದ್ಧನಾದ ಕಪಿಲನ ಸಾನಿಧ್ಯದಲ್ಲಿ ಪದ್ಮಿನಿಯು ಸಂತೋಷ, ಲವಲವಿಕೆ, ಜೀವನೋತ್ಸಾಹ ಕಾಣುತ್ತಿದ್ದಳು. ದಾಂಪತ್ಯದ ಹೊಸದರಲ್ಲಿ ದೈಹಿಕ ಆಕರ್ಷಣೆಯು ತೀವ್ರತರದಲ್ಲಿದ್ದು ಅಲ್ಲಿ ಬೇರೆ ಯಾವುದೇ ಅಂಶಗಳು ಪ್ರಭಾವ ಬೀರಲಾರವು. ಕ್ರಮೇಣ ಹೆಣ್ಣು ಗಂಡಿನ ಮನೋವೃತ್ತಿಯು ಅವರ ಆಸಕ್ತಿಯಲ್ಲಿ, ಸಂವೇದನೆಗಳಲ್ಲಿ, ಉದ್ದೇಶಗಳಲ್ಲಿ, ಸ್ನೇಹ, ಪ್ರೇಮಗಳಲ್ಲಿ ಹೊಂದುಕೊಳ್ಳುವುದನ್ನು ಅವಲಂಬಿಸಿರುತ್ತದೆ. ಶಾರೀರಿಕ ಬಯಕೆಗಳು ಮಾನಸಿಕ ಬಯಕೆಗಳೊಂದಿಗೆ ಸಮನ್ವಯಗೊಳ್ಳಬೇಕಾಗುವುದು. ಇಂತಹುದರಲ್ಲಿ ಪರಸ್ಪರರಲ್ಲಿ ಸಮನ್ವಯದ ಕೊರತೆ ಕಂಡುಬಂದಾಗಲೇ ವರ್ತನೆಗಳಲ್ಲಿ ಬದಲಾವಣೆಗಳು ಕಂಡುಬರುತ್ತವೆ. ಇಲ್ಲಿ ಎರಡು ವಿಭಿನ್ನ ನೆಲೆಗಳನ್ನು ಅದರ ಎಲ್ಲಾ ಸಂಕೀರ್ಣತೆಗಳೊಂದಿಗೆ ಗ್ರಹಿಸಬೇಕಾಗುತ್ತದೆ.

——> ಪಾತ್ರಗಳ ನಿರ್ವಹಣೆಯಲ್ಲಿ ಸಂವೇಗಾತ್ಮಕ ಸಮಸ್ಯೆಗಳ ಅಡ್ಡಿ ಉಂಟಾದಾಗ

——>ವ್ಯಕ್ತಿಯ ಪಾತ್ರ ನಿರ್ವಹಣೆಗೆ ಸಂಬಂಧಿಸಿದಂತೆ ಶಾರೀರಿಕ ಮಾನಸಿಕ ಮತ್ತು ಸಂವೇಗಾತ್ಮಕ ಸ್ಥಿತಿಗಳು

"ಪ್ರೀತಿ ಇಲ್ಲದ ದಾಂಪತ್ಯ ಒಂದು ಧರ್ಮಾಜ್ಞೆ ಪಡೆದ ವ್ಯಭಿಚಾರವೇ ಸರಿ. ಹಾಗೆಯೇ ಪ್ರೀತಿಯಿಂದ ದೃಢವೂ ಪೂರ್ಣವೂ ಆದ ವ್ಯಭಿಚಾರ ಒಂದು ಧನ್ಯವಾದ ದಾಂಪತ್ಯವೇ ಸರಿ."

ದಾಂಪತ್ಯವು ಹಲವು ಬಾರಿ ತನ್ನ ವಯುಕ್ತಿಕತೆಯನ್ನು ಮೀರಿ ಸಮಾಜಕ್ಕನುಗುಣವಾಗಿಯೇ ಬದುಕುವಂತೆ ನಿರ್ಬಂಧಿತವಾಗಿರುತ್ತದೆ. ವಯುಕ್ತಿಕ ಬದುಕು, ಮತ್ತೊಂದೆಡೆ ವ್ಯಕ್ತಾತೀತವಾದ ಮನುಷ್ಯನ ಮನೋಪ್ರಪಂಚ. ಪರಸ್ಪರರ ಹಿತಾಸಕ್ತಿಗಳು ಮಾನಸಿಕ ಸ್ವರೂಪ, ಬೇರೆ ಬೇರೆಯಾಗಿದ್ದಾಗ ವೈರುಧ್ಯಗಳು ಕಂಡುಬರುತ್ತವೆ. ಯಾವುದೋ ಕೆಲವು ಅಂಶಗಳ ಮೇಲೆ ಹೆಚ್ಚು ಒತ್ತು ಕೊಟ್ಟು ಇತರ ಅಂಶಗಳನ್ನು ಗೌಣವಾಗಿ ಭಾವಿಸುವುದು ಮತ್ತು ಅರ್ಥೈಸುವುದು ಒಂದು ವಿಧದಲ್ಲಿ ಆಯಾ ಪಾತ್ರಕ್ಕೆ ನ್ಯಾಯ ಸಿಗದಿರಲು ಕಾರಣವಾಗಬಹುದು.

ದೇವದತ್ತ ಕಪಿಲನ ಶರೀರವನ್ನು ಹೊಂದಿದ ನಂತರ ವ್ಯಕ್ತವಾಗುವ ವರ್ತನೆಗಳು ಮನುಷ್ಯ ಸ್ವಭಾವದ ನಿಕಟ ಪರಿಚಯವನ್ನು ಒದಗಿಸುತ್ತದೆ. ಯಾವ ಕಪಿಲ ತನ್ನ ದಾಂಪತ್ಯದಲ್ಲಿ ಅಡ್ಡಿಯಾಗಿದ್ದನೆಂದು ದೇವದತ್ತ ಭಾವಿಸಿದ್ದನೋ ಆ ಶರೀರ ತನ್ನದಾದ ಸಂದರ್ಭದಲ್ಲಿ ಒಳಗಿನ

ಯಾವ ಧ್ಯೇಯವು ಇಲ್ಲವಾದ ದೇವದತ್ತ ಕಂಡು ಬರುತ್ತಾನೆ. "ದೇಹವೇ ಶ್ರೇಷ್ಠ ಹಾಗಾಗಿ ಯಾವ ದೇಹ ಪದ್ಮಿನಿಯನ್ನು ಅಗ್ನಿಸಾಕ್ಷಿಯಾಗಿ ಮದುವೆಯಾಯಿತೋ ಮತ್ತು ಯಾವ ಸಾಕ್ಷಿಯಿಂದ ಅವಳು ದೇವದತ್ತನ ಹೆಂಡತಿಯಾದಳೋ ಅದೇ ಸಾಕ್ಷಿಯಿಂದ ನಾನೇ ದೇವದತ್ತ ಎಂದು ಕಪಿಲ ಹೇಳಿದಾಗ ದೇವದತ್ತ ಅದನ್ನು ನಿರಾಕರಿಸುತ್ತಾನೆ. ಕಪಿಲ ಪದ್ಮಿನಿಗೆ "ನಿನ್ನ ಕುಹಕ ತಿಳೀತದೆ ನನಗೆ. ನಿನಗೆ ದೇವದತ್ತನ ಬುದ್ಧಿವಂತ ತಲೆ ಬೇಕು. ಕಪಿಲನ ಶಕ್ತಿವಂತ ಮೈ ಬೇಕು ಎಂದಾಗ ದೇವದತ್ತ ಹೆಮ್ಮೆಯಿಂದ ಶಕ್ತಿವಂತ ಮೈ ಬಯಸಿ ಅವಳೇನೂ ತಪ್ಪು ಮಾಡಲಿಲ್ಲವಲ್ಲ. ಗಂಡು–ಮೈ ನೋಡಿ ಹೆಂಗಸಿಗೆ ಆಕರ್ಷಣೆ ಎನಿಸಿದರೆ ತಪ್ಪೇನೂ ಇಲ್ಲ"[೨೮] ಎನ್ನುತ್ತಾನೆ.

ಇಲ್ಲಿ ಸಂಪ್ರದಾಯ ರೂಪಿಸಿದ ನೈತಿಕ ಪ್ರಜ್ಞೆ ಮತ್ತು ಮೂಲ ಪ್ರವೃತ್ತಿಗಳ ನಡುವೆ ಸೆಳೆತಗಳಿಗಿರುವ ಘರ್ಷಣೆಯು ಅದರೆಲ್ಲಾ ಸಂಕೀರ್ಣತೆಯೊಂದಿಗೆ ದೇವದತ್ತನ ಪಾತ್ರದ ಮೂಲಕ ಚಿತ್ರಿತವಾಗಿದೆ ಎಂದೆನಿಸುತ್ತದೆ. ದಾಂಪತ್ಯದಲ್ಲಿ ಶರೀರಕ್ಕಿಂತ ಮನಸ್ಸು ಮುಖ್ಯವಾದುದು ಎಂಬ ಧೋರಣೆಯು ಕಂಡುಬರುವುದಾದರೂ ದೇಹದ ಬಯಕೆಯಂತಹ ಮೂಲಭೂತ ಸಂವೇದನೆಗಳನ್ನು ಯಾಂತ್ರೀಕರಣಗೊಳಿಸಿದಂತೆ ಅನಿಸಿತ್ತದೆ. ವ್ಯಕ್ತಿಯ ಸಹಜ ಅಭಿವ್ಯಕ್ತಿಯಾದ ದೇಹದ ಬಯಕೆಯು ಇಡೀ ಬದುಕಿನ ಎದುರಿಗೆ ಮೌಲ್ಯವೇ ಇಲ್ಲದಂತಹ ರೀತಿಯಲ್ಲಿ ಈ ಪಾತ್ರದ ಮೂಲಕ ಚಿತ್ರಿಸಲಾಗಿದೆ. ಯಾವುದು ತನ್ನ ಬಯಕೆಗಳ ಅಭಿವ್ಯಕ್ತಿಗೆ ಅಡ್ಡಿಯಾಗಿತ್ತೋ ಅದನ್ನು ಮೀರುವ ಸಲುವಾಗಿ ದೇವದತ್ತ ಈ ರೀತಿಯ ತೀರ್ಮಾನಕ್ಕೆ ಬಂದಿರಲೂಬಹುದು. ಕಾಮವಿಲ್ಲದ ದಾಂಪತ್ಯ ಅರ್ಥಹೀನ. ದಾಂಪತ್ಯವು ಕಾಮದಿಂದಲೇ ಪ್ರಾರಂಭವಾಗುವುದು. ಆ ಮೂಲಕವೇ ಹೆಣ್ಣು ಗಂಡು ಮಾನಸಿಕವಾಗಿ ಹತ್ತಿರವಾಗುವುದು. ಆನಂತರ ಕಾಮವು ತನ್ನ ಸ್ಥಾನವನ್ನು ಪ್ರೇಮಕ್ಕೆ ಬದಲಾಯಿಸುತ್ತದೆ. ಕಾಮ ಎನ್ನುವುದು ಕೇವಲ ದೈಹಿಕ ನೆಲೆಯಲ್ಲಲ್ಲದೆ ದಾಂಪತ್ಯದಲ್ಲಿ ಪರಸ್ಪರ ನಂಬಿಕೆ, ಅವಲಂಬನೆ, ಪ್ರೇಮ, ಬದುಕು ಈ ಎಲ್ಲಕ್ಕೂ ಆವರಿಸಿಕೊಳ್ಳವಂತದ್ದು. ದಾಂಪತ್ಯದ ಚೌಕಟ್ಟಿನಲ್ಲಿ ಅದಕ್ಕೊಂದು ಮಹತ್ವ ಇರುತ್ತದೆ. ದಾಂಪತ್ಯದ ಆಚೆ ಅದನ್ನು ಬೇರೆ ಬೇರೆ ವರ್ತನೆಗಳನ್ನಾಗಿ ಅರ್ಥೈಸಲಾಗುತ್ತದೆ. ಸಮಾಜಬಾಹಿರ ಚಟುವಟಿಕೆಯಾಗಿಯೂ ಭಾವಿಸಲಾಗುತ್ತದೆ. ಕಾಮ ಮಾನವನ ಮೂಲಭೂತ ಪ್ರೇರಣೆಯಾದರೂ ದಾಂಪತ್ಯದಲ್ಲಿ ಅದರ ಅರ್ಥ ಅತ್ಯಂತ ವಿಶಾಲವಾದುದು. ಅದು ವಂಶ ಮುಂದುವರಿಸುವ, ಒಂದು ಕುಟುಂಬದ ಅನನ್ಯತೆಯನ್ನು ಗುರುತಿಸುವ ಮತ್ತು ವಂಶಾವಳಿಯನ್ನು ನಿರ್ಧರಿಸುವಂತಹದ್ದು. ಅದು ಪ್ರತಿಯೊಂದು ವರ್ಗ, ಜನಾಂಗ ಹಾಗೂ ವಂಶದ ವ್ಯಕ್ತಿಗಳು ನಿರಂತರವಾಗಿ ಅನುಭವಿಸಿದ ಸಾರಸರ್ವಸ್ವದ ಸಂಗ್ರಹ. ಇದು ಸಾಮೂಹಿಕ ಸುಪ್ತಚೇತನದಿಂದ (Collective Consciousness) ಬಂದಿರುವಂತಹದ್ದು. ದಾಂಪತ್ಯದಲ್ಲಿ ಕಾಮವನ್ನು ನೈತಿಕತೆಯ ನೆಲೆಯಲ್ಲಿಯೇ ಗ್ರಹಿಸಲಾಗುತ್ತದೆ. ಶಾರೀರಿಕ ಮತ್ತು ಭಾವನಾತ್ಮಕ ಅವಶ್ಯಕತೆಗಳನ್ನು ಗುರುತಿಸಿಕೊಳ್ಳುವ ಪ್ರಕ್ರಿಯೆಯು ಇದಾಗುತ್ತದೆ.

'ಹಯವದನ' ನಾಟಕದ ದೇವದತ್ತನ ಪಾತ್ರವು ಅನೇಕ ದ್ವಂದ್ವಗಳಿಂದ ಕೂಡಿದೆ. ಒಂದೆಡೆ ಕಪಿಲನ ದೇಹವನ್ನು ಮೆಚ್ಚಿಕೊಳ್ಳುತ್ತಾನೆ. ಆತನ ದೇಹರಚನೆಯೇ ಪದ್ಮಿನಿಯ ಆಕರ್ಷಣೆಗೆ ಕಾರಣ ಎಂಬುದನ್ನು ಯಾವುದೇ ರೀತಿಯಿಂದಲೂ ನಿರಾಕರಿಸುವುದಿಲ್ಲ. ಮತ್ತೆ ಅದೇ ಕಪಿಲನ ದೇಹ ತನ್ನ ಶಿರದೊಂದಿಗೆ ಜೋಡಿಸಲ್ಪಟ್ಟಾಗ ಅದು ಆತನಿಗೆ ಬೇಸರವನ್ನುಂಟುಮಾಡುವುದಿಲ್ಲ. ತಲೆ, ದೇಹ, ಮನಸ್ಸು, ಅನುಭವ ಮತ್ತು ತಾನು ಆ ಎಲ್ಲವೂ ತಾನೇ ಎಂದು ಭಾವಿಸಿಕೊಂಡು ತನ್ನ ಯೋಚನೆ, ಭಾವನೆ, ವರ್ತನೆಗಳನ್ನು ಬದಲಾಯಿಸಿಕೊಂಡು ಪದ್ಮಿನಿಯೊಂದಿಗೆ ಸಂತೋಷವಾಗಿಯೇ ಇರುತ್ತಾನೆ.

ಇಂತಹ ಸಂದರ್ಭದಲ್ಲಿ ಪತಿಯಾದವನು ಅದರಲ್ಲೂ ಶಾಸ್ತ್ರ ಪಂಡಿತನೂ ಆದ ದೇವದತ್ತನ ವರ್ತನೆಯನ್ನು ಆಡ್ಲರ್‌ನ ಕೀಳರಿಮೆ (Inferiority) ಮತ್ತು ಅದರ ಪರಿಹಾರ ಕಲ್ಪನೆಯನ್ನಾಧರಿಸಿ ವಿಶ್ಲೇಷಿಸಬಹುದು.ಜೀವನದ ಯಾವುದೇ ವಿಚಾರದಲ್ಲಿ ಪರಿಪೂರ್ಣತೆಯ ಅಭಾವವಿದ್ದರೆ ಅದು ವ್ಯಕ್ತಿಯಲ್ಲಿ ಕೀಳರಿಮೆಯನ್ನುಂಟು ಮಾಡುತ್ತದೆ. ಕೀಳರಿಮೆ ಅಪಸಾಮಾನ್ಯತೆ (abnormality)ಯ ಕುರುಹಲ್ಲ. ಅವುಗಳ ಅಸ್ತಿತ್ವವನ್ನು ಮನಗಂಡ ವ್ಯಕ್ತಿ ಅವುಗಳನ್ನು ಪರಿಹರಿಸಿಕೊಂಡು ಜೀವನದಲ್ಲಿ ಪ್ರಗತಿ ಸಾಧಿಸುವ ಸಂಭಾವ್ಯತೆಗಳೇ ಹೆಚ್ಚು. ಆದರೆ ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಅಂದರೆ ಇತರರಿಂದ ಟೀಕೆಗೊಳಗಾಗಿ ತಿರಸ್ಕಾರಕ್ಕೊಳಗಾದಾಗ ಕೀಳರಿಮೆಯ ಭಾವನೆ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್ (inferiority complex) ಆಗಿ ಪರಿವರ್ತನೆಗೊಳ್ಳಬಹುದು. ಹೀಗಾದಾಗ ಅದರಿಂದ ಪಾರಾಗಲು ಸುಪೀರಿಯಾರಿಟಿ ಕಾಂಪ್ಲೆಕ್ಸ್ (superiority complex) ಬೆಳೆಸಿಕೊಳ್ಳಬಹುದು. ಅದು ಹಲವಾರು ಅಸಮಂಜಸ ವರ್ತನೆಗಳಿಗೆ ಕಾರಣವಾಗಬಹುದು. ಈ ಕೀಳರಿಮೆಯ ಕಾರಣವು ಪದ್ಮಿನಿಯ ಮೇಲಿನ ಮೋಹವು ದೇವದತ್ತನನ್ನು ಪರಿಸ್ಥಿತಿಯನ್ನು ಒಪ್ಪಿಕೊಳ್ಳುವಂತೆ ಪ್ರೇರೇಪಿಸಿರಲೂ ಬಹುದು. ವ್ಯಕ್ತಿಯ ಜೀವನದ ಚಟುವಟಿಕೆಗಳೆಲ್ಲವೂ ಲೈಂಗಿಕತೆಯ ಸುತ್ತ ಹೆಣೆದಿರುತ್ತವೆ ಎಂಬ ಫ್ರಾಯ್ಡ್ ಚಿಂತನೆಯನ್ನು ಇಂತಹ ಸಂದರ್ಭಗಳು ಪುಷ್ಟೀಕರಿಸುವುದನ್ನು ಅಲ್ಲಗಳೆಯಲಾಗುವುದಿಲ್ಲ. ಹೆಣ್ಣನ್ನು ಲೈಂಗಿಕವಾಗಿ ವಶಪಡಿಸಿಕೊಳ್ಳುವ ಬಯಕೆಯಿಂದಾಗಿ ದೇವದತ್ತ ಶರೀರದ ಮಹತ್ವವನ್ನು ಕಡೆಗಣಿಸಿರುವುದು ಕಾಮದ ಮುಂದೆ ಮನುಷ್ಯ ಮಿತಿಯ ಅರಿವು ಮೂಡಿಸಲು ಪ್ರಯತ್ನಿಸಿದಂತಿದೆ.

ಕಪಿಲನ ಶರೀರವನ್ನು ಪಡೆದ ಮೇಲೆ ದೇವದತ್ತ ಬದಲಾಗುತ್ತಾನೆ. ಭಾವನೆಗಳ ಉತ್ಕಟತೆಯನ್ನು ಮತ್ತು ಅದು ಉಂಟು ಮಾಡುವ ಪರಿಣಾಮವನ್ನು ಬದಲಾಯಿಸಲು ದೇವದತ್ತನಿಂದ ಸಾಧ್ಯವಾಗುವುದಿಲ್ಲ. ಬದಲಾದ ಸಂದರ್ಭವೊಂದಕ್ಕೆ ಹೊಸ ರೀತಿಯಲ್ಲಿ ಪ್ರತಿಕ್ರಿಯಿಸಲು ಕಲಿತ ದೇವದತ್ತ ತನ್ನ ಕಿಯಾಶೀಲತೆಯನ್ನು ನಿಲ್ಲಿಸಿ ನಿಷ್ಕ್ರೀಯತೆಯನ್ನು ಅನುಭವಿಸುತ್ತಿರುವಂತೆ ಅನಿಸುತ್ತದೆ. ಮತ್ತು ಸಾಹಿತ್ಯವು ಇಂತಹ ಪಾತ್ರವನ್ನು ಆಯ್ಕೆಮಾಡಿಕೊಳ್ಳುವ ಮೂಲಕ ಕಾಮದಂತಹ ವಿಷಯದಲ್ಲಿ ಮನುಷ್ಯನ ಪ್ರಜ್ಞೆಯನ್ನು ಅನಾವರಣಗೊಳಿಸುತ್ತದೆ.

ದೇಹ ಮತ್ತು ಮನಸ್ಸಿನ ದ್ವಂದ್ವವು ಮುಖ್ಯವಾಗಿ ದೇಹವನ್ನು ಮೀರಲಾರದ ಸೂಕ್ಷ್ಮತೆಯನ್ನು ಒಳಗೊಂಡಿರುತ್ತದೆ. ಹಾಗೊಮ್ಮೆ ಮೀರಿದಾಗಲೂ ವ್ಯಕ್ತಿಯ ನೈತಿಕ ಪ್ರಜ್ಞೆಯ ಹಿಡಿತ ಅನುಭವದ ಅಧಿಕೃತತೆಯ ಮೂಲಕ ಮನುಷ್ಯನ ಮೂಲಭೂತ ಪ್ರವೃತ್ತಿಯನ್ನು ಎತ್ತಿ ಹಿಡಿಯುತ್ತದೆ. ಹಾಗಾಗಿಯೇ ದೇವದತ್ತನ ಪಾಲಿಗೆ ಬಂದ ಕಪಿಲನ ಶರೀರ ಮೃದುವಾಗುವ ಪ್ರಕ್ರಿಯೆ ಇಲ್ಲಿ ಚಿತ್ರಿತಗೊಂಡಿರಬಹುದು. ದೈಹಿಕ ತಲ್ಲಣಗಳು ವಯುಕ್ತಿಕ ಅನುಭವದ ಮೂಲಕ ಸಾಹಿತ್ಯವೊಂದರ ಪಾತ್ರವಾಗಿ ಹರಿದುಬರುವಾಗ ಅನುಭವದ ಸಂಕೀರ್ಣತೆಯನ್ನು ಒಳಗೊಳ್ಳುವಲ್ಲಿ ತೀವ್ರಗತಿಯ ಸ್ವರೂಪಕ್ಕೆ ಇಳಿದಂತೆ ತೋರುತ್ತದೆ. ಮನುಷ್ಯನ ಮೂಲಭೂತ ಪ್ರವೃತ್ತಿಯಾದ ಕಾಮ ದೇವದತ್ತನ ಮೂಲಕ ಅಂತ್ಯಂತ ವಾಚ್ಯ ನೆಲೆಯಲ್ಲಿ ಚಿತ್ರಿತವಾಗಿದೆ. ಕೊನೆಗೆ ಕಪಿಲನ ದೇಹವು ದೇವದತ್ತನಲ್ಲಿ ಮೃದುವಾಗುವ, ಬದಲಾಗುವ ಸಂದರ್ಭವು ವ್ಯಕ್ತಿಯ ಸುಪ್ತಪ್ರಜ್ಞೆಯು ಅವನ ಅಂತರಂಗದ ಶೋಧನೆ ಹಾಗೂ ಒಳಗಿನ ನಿಜವಾದ ಸ್ವರೂಪದ ಕಡೆಗೆ ಪ್ರವಹಿಸುವಂತೆ ಮಾಡುವ ಮನಸ್ಸಿನ ನಿಗೂಡ ಶಕ್ತಿಯನ್ನು ನಿಯಂತ್ರಿಸುತ್ತದೆ ಎಂಬುದಕ್ಕೆ ಸಾಕ್ಷಿಯಾಗುತ್ತದೆ. ದೇವದತ್ತನ ಪಾತ್ರವನ್ನು ಅಂತರ್‌ಶಿಸ್ತೀಯ ಸಂವೇದನೆಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವಾಗ ಅಂತರ್ ಸಂವೇದನೆಯು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಶರೀರದ ಪ್ರತಿಯೊಂದು ಅವಯವದ ಸಮ ಸಂಯೋಜನೆಗೂ ತನ್ನದೇ ಆದ ಸ್ವತಂತ್ರ ಅಸ್ತಿತ್ವವಿರುವಂತಯೇ ಸ್ವತಂತ್ರ ಕ್ರಿಯೆಯೂ ಇರುತ್ತದೆ. ಆದರೆ ಆ ಕ್ರಿಯೆಯು ಶರೀರದ ಒಂದು ಭಾಗವಾಗಿ ನಡೆಯುತ್ತದೆ. ಪ್ರತ್ಯೇಕ ಅಸ್ತಿತ್ವ ಮತ್ತು ಕ್ರಿಯೆಗಳು ಸಂಯೋಜನೆಗೊಳ್ಳುವ ಪ್ರಕ್ರಿಯೆಯಲ್ಲಿ ದೇವದತ್ತನ ಶಿರ ಕಪಿಲನ ಶರೀರದೊಂದಿಗೆ ಸಂಘರ್ಷ ನಡೆಸುವಂತೆ ತನ್ನ ಕ್ರಿಯೆಯಲ್ಲಿ ತೊಡಗಿದರೂ ಕೊನೆಗೆ ಶಿರವನ್ನೇ ಅನುಸರಿಸುವ ಪ್ರಕ್ರಿಯೆ ಕಂಡುಬರುತ್ತದೆ. ಶಿರ ಮತ್ತು ಶರೀರ ಮಾನಸಿಕ ಬೌದ್ಧಿಕ ಮತ್ತು ದೈಹಿಕ ಸಂಘರ್ಷಗಳನ್ನು ಪ್ರತಿನಿಧಿಸುತ್ತದೆ. ಮನುಷ್ಯ ಜಗತ್ತಿನಲ್ಲಿ ಬುದ್ಧಿ ಪ್ರಧಾನವಾದುದು, ಬುದ್ಧಿಯನ್ನು ಶರೀರ ಅನುಸರಿಸುತ್ತದೆ. ಬೌದ್ಧಿಕತೆಯೇ ಶ್ರೇಷ್ಠ ಎಂಬುದನ್ನು ಸಮರ್ಥಿಸುವ ಆಂತರೀಕ ಪ್ರಜ್ಞೆಯೊಂದು ಸಾಹಿತ್ಯದ ಈ ಪಾತ್ರದ ಮುಖೇನ ಪ್ರತಿಪಾದಿಸಿದೆ ಎನಿಸುತ್ತದೆ.

ಮುಖಾಮುಖಿ – ರಾಮಚಂದ್ರ

ಸಾಹಿತ್ಯದಂತಹ ಸೃಷ್ಟಿಕ್ರಿಯೆಯಲ್ಲಿ ಜಾಗೃತ ಪ್ರಜ್ಞೆಗಿಂತ ಸುಪ್ತಪ್ರಜ್ಞೆಯೇ ಹೆಚ್ಚು ಕ್ರಿಯಾಶೀಲವಾಗಿರುತ್ತದೆ ಎಂಬುದು ಆಧುನಿಕ ಮನೋವಿಜ್ಞಾನಿಗಳ ವಾದ. ಸಾಹಿತಿಯ ಸಾಮಾಜಿಕವಾದ ಹೊರ ವ್ಯಕ್ತಿತ್ವಕ್ಕೂ, ಅವನ ಸೃಜನಶೀಲತೆಗೂ ಅಂತಹ ಅವಿನಾಭಾವ ಸಂಬಂಧವೇನಿರುವುದಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಯಾವುದೇ ಬಗೆಯ ಕಲಾತ್ಮಕ ರಚನೆಯ ಹಿನ್ನೆಲೆಯ ಪ್ರೇರಣೆ ಮತ್ತು ವಸ್ತು ಮೂಡಿಬರುವುದು ವೈಜ್ಞಾನಿಕ ಪ್ರಜ್ಞೆಯ ಹಿನ್ನೆಲೆಗಿಂತ ಭಿನ್ನವಾದ ಪ್ರಜ್ಞೆಯ ನೆಲೆಯಲ್ಲಿ. ಸುಪ್ತಾವಸ್ಥೆ ತನ್ನ ಅಂತಃಪ್ರಜ್ಞೆಯಿಂದ (Intution) ಯಾವುದೇ ನೈತಿಕ ನಿರ್ಬಂಧವಿಲ್ಲದೆ ಸಾಹಿತಿ ತನಗಾಗುತ್ತಿರುವ ಅನುಭವವನ್ನು ಹಾಗೂ

ಸುಪ್ತಾವಸ್ಥೆಯಲ್ಲಿ ತಡೆಹಿಡಿಯಲ್ಪಟ್ಟಿರುವ ಅನೇಕ ಅಂಶಗಳನ್ನು ಶೋಧಿಸಿ ಅವುಗಳ ಆಂತರ್ಯವನ್ನು ಪ್ರಜ್ಞಾಸ್ತರಕ್ಕೆ ನಿಲುಕುವಂತೆ ಮಾಡುವ, ಹಾಗೆ ತನಗೆ ನಿಲುಕಿದ ವಸ್ತುವನ್ನು ಸಂಕೇತವಾಗಿ, ಘಟನೆಗಳಾಗಿ, ಪಾತ್ರಗಳಾಗಿ ಪ್ರತಿನಿಧಿಸುವುದು. ಹೀಗೆ ಪ್ರತಿನಿಧಿಸುವಂತಹ ಸಂದರ್ಭದಲ್ಲಿ ಬದುಕಿನಲ್ಲಿ ತಾನು ಪಡೆಯಲಾರದ, ಸಾಧಿಸಲಾರದ, ಅದುಮಿಟ್ಟ ಎಲ್ಲಾ ಅಂಶಗಳನ್ನು ಇಚ್ಛಾಪೂರ್ವಕವಾಗಿ ಕೆಲವೊಮ್ಮೆ ತನಗೆ ಅರಿವಿಲ್ಲದಂತೆ ರೂಪುಗೊಂಡುಬಿಡುತ್ತದೆ.

'ಮುಖಾಮುಖಿ' ಕಥೆಯು ಪ್ರಮುಖವಾಗಿ ಮನುಷ್ಯರ ವರ್ತನೆಗಳ ಬಗ್ಗೆ ಇರುವ ಸರ್ವೇಸಾಮಾನ್ಯವಾದ (Generalised) ಆದ ಕೆಲವೊಂದು ನಂಬಿಕೆ, ಧೋರಣೆ, ಗ್ರಹಿಕೆಗಳ ನಿರುಪಯುಕ್ತತೆ ಮತ್ತು ವಾಸ್ತವಕ್ಕೆ ಸದಾ ಎಚ್ಚರಗೊಂಡಿರಬೇಕಾದ ಅನಿವಾರ್ಯತೆಯನ್ನು ಕುರಿತಾಗಿ ಯೋಚಿಸಬೇಕೆಂಬ ಎಚ್ಚರವನ್ನು ಮೇಲ್ನೋಟಕ್ಕೆ ನೀಡುತ್ತದೆ. ಮನುಷ್ಯ ಯಾವುದನ್ನೇ ಆಗಲಿ ಹಿಂದೆ ಮುಂದೆ ಯೋಚಿಸದೆ ತೆಗೆದುಕೊಂಡುಬಿಡುವ ನಿರ್ಧಾರಗಳು ಹೇಗೆ ಮತ್ತೊಬ್ಬರ ಬದುಕಿನ ಮೇಲೆ ಪರಿಣಾಮ ಉಂಟುಮಾಡಬಹುದು ಎಂಬುದು ಕಥೆ ಓದಿದಾಗ ಅನಿಸುತ್ತದೆ.

ಯಾವುದೇ ಕಥೆಯ ಪಾತ್ರಗಳು, ಕಥೆಯ ಸ್ವರೂಪ ಓದುಗರಲ್ಲಿ ಮೂಡಿಸುವ ಭಾವನೆ, ನಿರೀಕ್ಷೆಯನ್ನು ಹುಸಿಯಾಗಿಸುವ ರೀತಿ ಎಲ್ಲವೂ ಅದರ ಬಂಡವಾಳ ಎಂಬುದರಲ್ಲಿ ಅನುಮಾನವಿಲ್ಲ. ತನ್ಮೂಲಕ ತಾನು ಹೇಳಬಯಸಿದ್ದು ಇದನ್ನಲ್ಲ. ಇನ್ನೊಂದು ಎಂಬ ದಟ್ಟ ಸೂಚನೆ ನೀಡಿದಾಗಲೇ ಅವುಗಳ ಮನೋಲೋಕವನ್ನು ಹೊಕ್ಕುವ ಕುತೂಹಲ ಮೂಡುತ್ತದೆ. 'ಮುಖಾಮುಖಿ' ಕಥೆಯ ಸೃಷ್ಟಿಯ ಹಿಂದೆ ಕಥೆಗಾರನ, ಅಥವಾ ನಿರೂಪಕನ ಸ್ಪಷ್ಟಾತ್ಮಕ ಉದ್ದೇಶವಿದೆ ಎಂಬುದು ಆತನಿಂದಲೇ ತಿಳಿಯುತ್ತದೆ. ಆತನೇ ಹೇಳಿಕೊಳ್ಳುತ್ತಾನೆ. "ಎಲ್ಲವನ್ನೂ ಹೇಳಿಬಿಡಬೇಕೆಂದು ನಿರ್ಧರಿಸಿದ್ದೇನೆ. ನೆತ್ತಿಯಿಂದ ಸುಡುವ ಬೆಂಕಿ ಹೊತ್ತು ಶಾಂತಿ ತಂಪುಗಳಿಗೆ ಹಾತೊರೆಯುತ್ತಾ ಅಲೆದಾಡುವ ಶಾಪ ಬಡಿದವನ ಹಾಗೆ ಈ ರೀತಿ ವ್ಯರ್ಥವಾಗಿ ಬಳಲುವ ನನ್ನನ್ನು ಘಾಸಿಗೊಳಿಸು ತ್ತಿದುದಕ್ಕೆ ನೋಯಿಸುವುದಕ್ಕೆ ಒಂದು ಆಕಾರ ಕೊಟ್ಟು ನೋಡಬೇಕು, ಮಾತಿನಲ್ಲಿ ಹಿಡಿಯಬೇಕು ಎಂದುಕೊಂಡು ಬರೆಯಲು ಕುಳಿತಿದ್ದೇನೆ. ಇದು ಸಾವಿನ ಭಯವೇ? ಹೊಸತಾಗಿ ಹುಟ್ಟುವಾಗಿನ ಆತಂಕದ ನೋವೆ? ಅರಿಯಬೇಕು. ಮಸುಕುಮಸುಕಾಗಿ, ಗಜಿಬಿಜಿಯಾಗಿ ತೊಡಕು ಬಿದ್ದ ಭಾವನೆ ಗಳ, ಅರ್ಥವಾಗದ ಭಯದ ಮೇಲೆ ಹುಡುಕಬೇಕು ಎಂದು. ಹಿಂದೆ ಎಷ್ಟು ಸಲ ಸೋತರೂ ಮತ್ತೆ ಹೊಸತಾಗಿ ಹುಡುಕುವ ಕೆಲಸಕ್ಕೆ ತೊಡಗಿದ್ದೇನೆ. ಬಹಳ ದಿನಗಳಿಂದ ನಡೆಯುತ್ತ ಬಂದ ಈ ಹುಡುಕಾಟಕ್ಕೆ ಬೆನ್ನೆಲುಬಿನಂತಿದ್ದ ನನ್ನ ಗಟ್ಟಿಯಾದ ನನಗೆ ನಾನೇ ಸ್ಪಷ್ಟಪಡಿಸಿಕೊಳ್ಳಬೇಕಾದ ನಂಬಿಕೆಯೇನೆಂದರೆ, ನಾನು ಪಡುತ್ತಿದ್ದ ಚಿತ್ರಹಿಂಸೆಗೆ ಕಾರಣವಾದ......"[೨೦]

ಕಥೆಗಾರ ಅಥವಾ ನಿರೂಪಕನು ಹೇಳಿಕೊಳ್ಳುವ ಕಾರಣವೇ ಈ ಕಥೆಯ ರಚನೆಗೆ ಕಾರಣವಾಗಿರಬಹುದು ಎಂದು ಸಾಮಾನ್ಯವಾಗಿ ಕಥೆ ಓದಿದಾಗ ಅನಿಸಿಬಿಡುತ್ತದೆ. ವ್ಯಕ್ತಿಯ ಸಾಮಾಜಿಕ ಜೀವನವು ಕೇವಲ ಉಳಿವಿಗಷ್ಟೇ ಅಲ್ಲದೆ ಸುಸ್ಥಿತಿಗೂ ಅವಶ್ಯಕ. ಇತರರಿಂದ ಜೈವಿಕ ಅಗತ್ಯಗಳು ತೃಪ್ತಿಯಾಗುವುದಲ್ಲದೆ ಮಾನಸಿಕ ಅಗತ್ಯಗಳಾದ ಸ್ನೇಹ, ಗೌರವ, ಪ್ರೋತ್ಸಾಹ

ಮನರಂಜನೆಗಳು ಸಾಮಾಜಿಕ ಸಂಬಂಧಗಳಲ್ಲಿ ಬೆಳೆಯುತ್ತವೆ. ಸ್ವ-ಪ್ರತ್ಯಯವು ಇತರರು ತಮ್ಮನ್ನು ಹೇಗೆ ಗ್ರಹಿಸುತ್ತಾರೆ ಎಂಬುದರ ಪ್ರತಿಫಲನ. ಸ್ವಯೋಜನೆಗಳು ವ್ಯಕ್ತಿಗಳು ತಾವು ನಿರ್ವಹಿಸುವ ಪಾತ್ರಗಳ ಬಗ್ಗೆ ವಯುಕ್ತಿಕ ಲಕ್ಷಣಗಳು ಮತ್ತು ಮೌಲ್ಯಗಳು ಹಾಗೂ ಅವರು ಎದುರಿಸುವ ನಿರ್ಧಿಷ್ಟ ಸನ್ನಿವೇಶಗಳ ಬಗ್ಗೆ ಜ್ಞಾನ ಮತ್ತು ನಂಬಿಕೆಗಳನ್ನು ಹೊಂದಿರುತ್ತದೆ. ಜಾಗೃತ ಮನಸ್ಸಿನಿಂದ ಹೊರದೂಡಲ್ಪಟ್ಟು, ಸುಪ್ತಚೇತನದಲ್ಲಿ ಕ್ರಿಯಾಶೀಲವಾಗಿ ಉಳಿದು, ಪ್ರಬಲಶಕ್ತಿಯ ಕೇಂದ್ರಗಳಂತೆ ಕೆಲಸ ಮಾಡುತ್ತಾ ಅಭಿವ್ಯಕ್ತಿಗಾಗಿ ಕಾದುಕುಳಿತಿರುವ ಭಾವಸಮುಚ್ಚಯಗಳು ಮನುಷ್ಯನನ್ನು ನಿಯಂತ್ರಿಸುತ್ತಿರುತ್ತವೆ. ಇಂತಹ ಭಾವಸಮುಚ್ಚಯಗಳು ರಚನೆಗೆ ಬಹುಮುಖ್ಯ ಪ್ರೇರಣೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

"ಕೃತಿಯ ವಸ್ತು ಮತ್ತು ನಿರೂಪಣೆಯ ರೀತಿಯ ಪರಸ್ಪರ ಸಂಬಂಧ ಹೊಂದಿರುವಂತಹದ್ದು ಎಂಬುದು ಈಗಾಗಲೇ ಒಪ್ಪಿಕೊಂಡ ಮಾತು. ಕೃತಿಗಾರ ಆಯ್ಕೆಮಾಡಿಕೊಂಡ ವಸ್ತು ಅವನ ಜೀವನ ಗ್ರಹಿಕೆಯ ಮಾದರಿಯನ್ನು ಅಂತೆಯೇ ಬದುಕಿನ ಕುರಿತಾದ ಅವನ ಅನ್ವೇಷಣೆಯ ರೀತಿಯನ್ನು ಹೇಳುತ್ತಿರುತ್ತದೆ. ಕೃತಿಕಾರ ವಾಸ್ತವಿಕತೆಯನ್ನು ಗ್ರಹಿಸುತ್ತಿರುವಂತೆ ಕಾಣಿಸುತ್ತಿದ್ದರೂ, ವಾಸ್ತವಿಕತೆ ಜೀವನ ದೃಷ್ಟಿಕೋನದ ರೀತಿಯಲ್ಲಿಯೇ ಜೋಡಿಸಿಕೊಳ್ಳುತ್ತಿರುತ್ತದೆ".[೩೧]

'ಮುಖಾಮುಖಿ' ಕಥೆಯು ಎರಡು ವ್ಯಕ್ತಿಗಳ ಮುಖಾಮುಖಿಯಲ್ಲಿ ಎರಡು ಇತಿಹಾಸಗಳ, ಎರಡು ಪಾಪಪ್ರಜ್ಞೆಗಳ ಮುಖಾಮುಖಿಯಾಗಿತ್ತೇನೋ ಎಂದು ಅನಿಸುವುದಿಲ್ಲ. ನಿರೂಪಕ ರಾಮಚಂದ್ರ ಮತ್ತು ಇಂದಿರಕ್ಕ ಎರಡು ವ್ಯಕ್ತಿತ್ವಗಳ, ಮನಸ್ಸುಗಳ ಪ್ರತಿನಿಧಿಗಳು. ಇವೆರಡು ವ್ಯಕ್ತಿತ್ವಗಳ ಮೂಲಕ ಮನುಷ್ಯರಲ್ಲಿ ಮೂಡುವ ಅಭಿವ್ಯಕ್ತಿಗೊಳ್ಳುವ ಚಿತ್ತವೃತ್ತಿಗಳು ಸಾಮಾಜಿಕ ಪ್ರಜ್ಞೆಯಾಗಿ, ಕೆಲವೊಮ್ಮೆ ಅರ್ಥಪೂರ್ಣವಾಗಿ, ಇನ್ನೊಮ್ಮೆ ನಿರಾಕಾರವಾಗಿ, ಮೌನವಾಗಿ ಅಡಗಿದ್ದು, ಅದೆಲ್ಲವೂ ಅನುಭವದ ಮೂಲಕ ಸಂಯೋಜನೆಗೊಂಡು 'ಕಥೆಯ ಮೂಲಕ ಅಭಿವ್ಯಕ್ತಿ ಪಡೆದಿರುವುದು ಸ್ಪಷ್ಟವಾಗುತ್ತದೆ. ಯಾವುದೋ ಒಂದು ಕಾಲದಲ್ಲಿನ ವಿಷಯಗಳು ಕಾಲ ಮತ್ತು ಅನುಭವದ ಮಾಗುವಿಕೆಯಿಂದ ಹೇಗೆ ಅದರ ಮಹತ್ವ ಮತ್ತು ಅರ್ಥ ಬದಲಾಗುತ್ತದೆ ಎಂಬುದು ಇಲ್ಲಿ ಪ್ರಾಮುಖ್ಯತೆ ಪಡೆಯುತ್ತದೆ. ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಯ ಜೀವನಾನುಭವಗಳು ಸಂಪೂರ್ಣ ಭಿನ್ನ, ವಿಶಿಷ್ಟ ಮತ್ತು ಅನನ್ಯವಾಗಿರುತ್ತದೆ. ಬೇರೊಬ್ಬರನ್ನು ಗ್ರಹಿಸುವ ವಿವರಿಸುವ ಅರ್ಥೈಸುವ ಕಾರ್ಯವೇ ನಿಜಕ್ಕೂ ಅರ್ಥವಿಲ್ಲದ್ದು ಎಂಬುದು ಇದರಿಂದ ಸ್ಪಷ್ಟಗೊಳ್ಳುವ ಮತ್ತೊಂದು ಅಂಶ. ನಾವು ಬದುಕುತ್ತಿರುವ ಜಗತ್ತು ಸದಾ ನಮ್ಮ ಅರಿವಿನಿಂದ ಗ್ರಹಿಸ್ಪಡುತ್ತದೆ. ಇಲ್ಲಿ ನಿರೂಪಕ ರಾಮಚಂದ್ರ ಕೂಡ ಸಮಕಾಲೀನ ಬದುಕಿನ ಆಕಸ್ಮಿಕಗಳು, ವಿಲಕ್ಷಣಗಳು ಆತನ ರೂಢಿಗತ ಪ್ರಜ್ಞೆಯನ್ನು ಅಲುಗಾಡಿಸಿರುವ ಅನಿರೀಕ್ಷಿತಗಳೆದುರು ನಿಂತು ತನ್ನನ್ನು ತಾನು ಒಳಹೊಕ್ಕು ನೋಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾನೆ.

ಮನುಷ್ಯನ ಇಚ್ಛಾಸ್ವಾತಂತ್ರ್ಯವನ್ನು ಮೀರಿದ ಪೂರ್ವನಿರ್ಧಾರಿತವಲ್ಲದ, ಅಪ್ರಜ್ಞಾಪೂರ್ವಕ ನೆಲೆಯ ನಿಯಮವೊಂದು ಸಾಹಿತ್ಯ ಕೃತಿಯ ನಿರ್ಮಾಣದಲ್ಲಿ ಕಾರ್ಯನಿರ್ವಹಿಸುವ ಪರಿಯೇ ಮುಖಾಮುಖಿ ಕಥೆಯ ಆಂತರ್ಯ ಎನ್ನಬಹುದು.

"ತೀರಾ ಎಳೆತನದಲ್ಲಿ ನಮ್ಮನ್ನು ಬಲವಾಗಿ ಅಲುಗಾಡಿಸಿದ ಅನುಭವಗಳು ಮುಂದೊಂದು ದಿನ ಮಾತಿನ ತೆಕ್ಕೆಗೆ ಒಳಪಟ್ಟು ಅರಿವಿನ ಪಾತಳಿಯನ್ನು ಮುಟ್ಟುವುದು ಶಕ್ಯವಾಗುವ ತನಕ ಅಂತಹ ಶಕ್ಯತೆಯ ಮಹೂರ್ತವನ್ನೇ ಇದಿರುನೋಡುತ್ತ ಅಸ್ಪಷ್ಟವಾದ ಪ್ರತಿಮೆಯ ರೂಪದಲ್ಲಿ ಚಿತ್ತದ ತಳದಲ್ಲಿ ಮಲಗಿರುತ್ತವೇನೋ, ಸ್ಪಷ್ಟ ಮಾತಾಗಿ, ಎಚ್ಚರವಾಗಿ ಅರಳಿಲಿರುವ ಅನುಭವದ ಬೀಜವೆಂಬಂತೆ ನಾನು ಏಳೋ ಎಂಟೋ ವರುಷದವನಿದ್ದಾಗ ಕಂಡ ಈ ಬಾವಿ, ಈ ಮುದುಕಿಯ ಸಾವುಗಳ ನೆನಪು ಹೀಗೆ ಹಠಾತ್ತನೆ ಮೈಕೊಡವಿ ಎದ್ದು ಬಂದದ್ದು ಇದೇ ಮೊದಲ ಸರಿಯಲ್ಲ."[೨]

ಇಲ್ಲಿ ನಿರೂಪಕ ತನ್ನ ಬಾಲ್ಯದ ಅಸ್ಪಷ್ಟ ಅನುಭವಗಳಿಗೆ ಪ್ರೌಢಾವಸ್ಥೆಯಲ್ಲಿ ಕಥೆಯ ರೂಪುಕೊಡುವ ಪ್ರಯತ್ನಮಾಡಿದ್ದಾರೆ. ಜಗತ್ತಿನ ಬಗೆಗಿನ ಪರಿಕಲ್ಪನೆಗಳನ್ನು ಬಾಲ್ಯದಲ್ಲಿ ಮಕ್ಕಳು ಸ್ವತಃ ನಿರ್ಮಿಸುತ್ತಾರೆ. ಪಿಯಾಜೆ ಪ್ರಕಾರ "ಮಗು ತನ್ನ ಲೋಕದೃಷ್ಟಿಗೆ ಅನುಗುಣವಾಗಿ ತನ್ನ ನೈತಿಕತೆಯನ್ನು ತಾನೇ ರೂಪಿಸಿಕೊಳ್ಳುತ್ತದೆ. ಸರಿತಪ್ಪುಗಳ, ಒಳಿತು ಕೆಡಕುಗಳ ವಿವೇಚನೆಯನ್ನು ತಾನೇ ಮಾಡುತ್ತದೆ. ಅದು ಹಿರಿಯರ ಬೋಧನೆಯ ಫಲವಲ್ಲ. ಎಷ್ಟೋ ಸಲ ಮಗುವಿನ ನೈತಿಕ ವಿಚಾರಗಳು ದೊಡ್ಡವರ ಆಕಾಂಕ್ಷೆಗಳಿಗೆ ವಿರುದ್ದವೂ ಆಗಿರುತ್ತವೆ".[೩] ಜಗತ್ತನ್ನು ತಾವೇ ನೋಡಿ ಗ್ರಹಿಸಿ ಮಕ್ಕಳು ನೈತಿಕ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ.

ವ್ಯಕ್ತಿಯ ಬಾಲ್ಯಾನುಭವ ಹಾಗೂ ಪೂರ್ವ ಪರಿಕಲ್ಪನೆಯಲ್ಲೇ ಆತನ ಎಲ್ಲಾ ವರ್ತನೆಗಳು ನಿರ್ಧರಿಸಲ್ಪಡುತ್ತವೆ. ಹೀಗಾಗಿಯೇ ಬಾಲ್ಯದ ಅನುಭವಗಳನ್ನು ಹೊಸ ಅನುಭವಗಳೊಂದಿಗೆ ಸಂರಚಿಸಿ ಅದನ್ನು ತನ್ನ ಮನೋಭಾವಕ್ಕೆ ಹೊಂದಿಸುವ, ತಾಳೆ ನೋಡಿ ಉಳಿಸಿಕೊಳ್ಳುವ, ಮಾರ್ಪಾಡುಗೊಳಿಸುವ, ಪರಿಷ್ಕರಿಸುವ ಕ್ರಿಯೆ ವ್ಯಕ್ತಿಯಲ್ಲಿ ನಡೆಯುತ್ತದೆ. 'ಮುಖಾಮುಖಿ'ಯ ರಾಮಚಂದ್ರ ಕೂಡಾ ತನ್ನ ಬಾಲ್ಯದ, ತನ್ನನ್ನು ಕಾಡುತ್ತಾ ಬಂದಿರುವ ಹಳೆಯ ಅನುಭವಗಳ ಬೆಳಕಿನಲ್ಲಿ, ಹೊಸ ಅನುಭವಗಳನ್ನು ಶೋಧಿಸಿ ಅದಕ್ಕೊಂದು ಅರ್ಥಕೊಡುವ, ಕಥೆಯ ರೂಪಕೊಡುವ ಕಾರ್ಯದಲ್ಲಿ ತೊಡಗುತ್ತಾನೆ. ವ್ಯಕ್ತಿ–ವ್ಯಕ್ತಿ ಸಂಬಂಧಗಳನ್ನು ಕುರಿತು, ಒಬ್ಬ ವ್ಯಕ್ತಿ ಅವನ ಸುತ್ತ ಇರುವ ವ್ಯಕ್ತಿಗಳು ಗ್ರಹಿಸುವ, ಪರಿಭಾವಿಸುವ ಹಾಗೂ ತೀರ್ಮಾನಿಸುವುದರ ಹಿಂದೆ ವಿಶೇಷವಾದುದೇನು ಕಂಡುಬರುವುದಿಲ್ಲವಾದರೂ ಒಂದು ಘಟನೆ ಇನ್ನೊಂದು ಘಟನೆಗೆ ಕಾರಣವಾಗುವ ಪ್ರಕ್ರಿಯೆಯು ಇಲ್ಲಿ ಮಹತ್ವಪೂರ್ಣವೆನಿಸುತ್ತದೆ. ಈ ಪ್ರಕ್ರಿಯೆಯು ಮನುಷ್ಯನ ಬಾಹ್ಯ ಜಗತ್ತಿನಲ್ಲಿ ನಡೆಯುವುದಕ್ಕಿಂತ ಆತನ ಮಾನಸಿಕ ಜಗತ್ತನ್ನು ವಿಶಿಷ್ಟ ರೀತಿಯಲ್ಲಿ

ನಿರೂಪಿಸಲು ಸಹಾಯಕವಾಗುತ್ತದೆ. ತನ್ನನ್ನು ತಾನು ಅರಿಯಲು ಕಾರಣವಾದ ಘಟನೆಯನ್ನು ಸ್ವತಃ ವ್ಯಕ್ತಿಯೇ ನಿರೂಪಿಸುವ ತಂತ್ರಗಾರಿಕೆ ಬಹುಶಃ ಮುಖಾಮುಖಿ ಕಥೆಯ ವಿಶಿಷ್ಟ ತಂತ್ರಗಾರಿಕೆ ಎನ್ನಬಹುದು. ಹಾಗಾಗಿಯೇ ಸ್ವತಃ ರಾಮಚಂದ್ರನ ಪಾತ್ರ ತಮ್ಮ ವ್ಯಕ್ತಿತ್ವ ಅಭಿವ್ಯಕ್ತಿಗಾಗಿಯೇ ಸೃಷ್ಟಿಸಿದಂತೆಯೂ ಮತ್ತು ಆ ಪಾತ್ರಗಳಲ್ಲಿ ಸಾಮಾಜಿಕ ವಿಮರ್ಶಾತ್ಮಕ ಪ್ರಜ್ಞೆಯಿಂದ (Social critical awareness) ಸಾಧ್ಯವಾಗುವ ವ್ಯಕ್ತಿತ್ವದ ಅಪೂರ್ವ ಬದಲಾವಣೆಯನ್ನು ಕಾಣಲು ಪ್ರಯತ್ನಿಸಿದಂತೆ ತೋರುತ್ತದೆ. ಇಲ್ಲಿ ರಾಮಚಂದ್ರ ತನ್ನ ಜಾಗೃತ ಜೀವನವನ್ನು ರೂಪಿಸಿದಂತಹ ಎಲ್ಲದರೊಡನೆ ಮತ್ತು ಅವನ ಸಂವೇದನಾಶೀಲ ಅನುಭವಗಳೊಡನೆ ವಿಶಿಷ್ಟವಾಗಿ ವ್ಯವಹರಿಸುತ್ತಾನೆ.

ಎಷ್ಟೋ ವರುಷಗಳ ಬಳಿಕ ತನ್ನೆದುರಿಗೆ ಬಂದು ನಿಂತ ಇಂದಿರಕ್ಕ ರಾಮಚಂದ್ರನ ಬದುಕಿನಲ್ಲಿ ಸ್ವಭಾವದಲ್ಲಿ, ಚಿಂತನೆಯಲ್ಲಿ, ವಿಚಾರಗಳಲ್ಲಿ ಆಗಾಧ ಬದಲಾವಣೆಯನ್ನು ಉಂಟು ಮಾಡಿದ್ದಳು. ನಿರೂಪಕರು ಹೇಳುವಂತೆ ಇಂದಿರಕ್ಕ, ರಾಮಚಂದ್ರ ಎಂಬ ಬರೀ ಎರಡು ವ್ಯಕ್ತಿಗಳ ಮುಖಾಮುಖಿಯಾಗಿರದೆ ಎರಡು ಇತಿಹಾಸಗಳ ಮತ್ತು ಎರಡು ಪಾಪ ಪ್ರಜ್ಞೆಗಳ ಮುಖಾಮುಖಿ ಯಾಗುತ್ತದೆ.

ಪ್ರೇಮ ಪರಿಸರ, ಕುಟುಂಬ ಅಪರಾಧ ಹಾಗೂ ಸಮಾಜ ಯಾವಾಗಲೂ ಕಥೆಗೊಂದು ಸಾಮಾಗ್ರಿಗಳನ್ನು ಒದಗಿಸುತ್ತವೆ. ಹೀಗೆ ಒದಗಿಸುವ ಸಂದರ್ಭದಲ್ಲಿ ಜಾಗೃತ ಮಾನವಾನುಭವದ ವಿಶಾಲವಲಯದಿಂದ ಬದುಕಿನ ಪರಿಸ್ಫುಟ ಮುನ್ನೆಲೆಯಿಂದಲೇ ತೆಗೆದುಕೊಳ್ಳುತ್ತದೆ. ಕಲಾಸೃಷ್ಟಿಯ ಈ ಬಗೆಯು ತನ್ನ ಚಟುವಟಿಕೆಯಲ್ಲಿ ಮನೋವಲಯವು ಗ್ರಾಹ್ಯತೆಯ ಸೀಮೆಗಳನ್ನು ಎಲ್ಲಿಯೂ ಮೀರುವುದಿಲ್ಲ ಇಲ್ಲಿನ ಮೂಲ ಭೂತ ಅನುಭವಗಳು casual ಅಲ್ಲದಿದ್ದರೂ ವಿಚಿತ್ರವಾದುದೋ ವಿಶಿಷ್ಟವಾದುದೋ ಅಲ್ಲ. ಪ್ರತಿಯಾಗಿ ಗೊತ್ತಿರುವಂತಹದ್ದೆ ಆಗಿದೆ. ಅಂದರೆ ಭಾವಾವೇಶ ಮತ್ತು ಅದರ ಪರಿಣಾಮ ಬದುಕಿನ ಅನೇಕ ತಿರುವುಗಳಿಗೆ ಕಾರಣವಾಗುವುದೇ ಆಗಿದೆ. ಬಾಹ್ಯ ಪ್ರಪಂಚದ ಯಾವುದೇ ಅನುಭವದಲ್ಲಿ ಅದರ ಮೂಲ ಇದ್ದಿರಲಾರದು. ಮಾನಸಿಕ ಘಟನೆಯೊಂದಕ್ಕೆ ಅದು ಸಂಕೇತವಾಗಿರುತ್ತದೆ. ಆಂತರೀಕ ಜಗತ್ತಿನ ಅನುಭವವೊಂದನ್ನು ಅದು ಪ್ರತಿನಿಧಿಸುತ್ತದೆ.

“ಒಂದು ಕಲಾಕೃತಿಯೊಳಕ್ಕೆ ನುಸುಳಿಕೊಳ್ಳುವ ವಯುಕ್ತಿಕ ಲಕ್ಷಣಗಳು ಸಾರಭೂತವಾದುದಲ್ಲ. ವಾಸ್ತವವಾಗಿ ಈ ವೈಲಕ್ಷಣ್ಯಗಳೊಡನೆ ನಾವು ಹೆಣಗಿದಷ್ಟೂ ಕಲೆಯ ಪ್ರಶ್ನೆ ಕಡಿಮೆಯಾಗುತ್ತದೆ. ಕಲಾಕೃತಿಯಲ್ಲಿ ಸಾರಭೂತವಾದುದೇನೆಂದರೆ, ಅದು ವೈಯಕ್ತಿಕ ವಲಯದಿಂದ ತೀರ ಮೇಲೇರಬೇಕು. ಕಲಾ ವಲಯದಲ್ಲಿ ವಯುಕ್ತಿಕ ಮುಖವೊಂದು ಪರಿಮಿತಿ.”[೨೪]

ಈ ಮೇಲಿನ ಹೇಳಿಕೆಯನ್ನು ಪರಿಗಣಿಸುವುದಾದರೆ ಮುಖಾಮುಖಿ ಕಥೆಯ ನಿರೂಪಕನ ವಯುಕ್ತಿಕ ಅನುಭವಗಳ ಅಭಿವ್ಯಕ್ತಿಯ ಉದ್ದೇಶದಿಂದ ಕಥೆಯ ಸೃಷ್ಟಿಯಾದಂತೆ ಅನಿಸುವುದಿಲ್ಲ. ಆದರೆ ಯಾವುದೇ ಕೃತಿಯ ಹಿಂದೆ ಕೃತಿಕಾರನ ಮನೋರಚನೆ ಅಮೂಲಾಗ್ರವಾಗಿ ವ್ಯಾಪಿಸುತ್ತದೆ ಎಂಬುದನ್ನು ನಿರಾಕರಿಸಲಾಗುವುದಿಲ್ಲ.

ನಿರೂಪಕ ರಾಮಚಂದ್ರ ತನ್ನ ಅಸ್ಪಷ್ಟ ತಿಳುವಳಿಕೆಗೆ ಒಂದು ಸ್ಥಿರರೂಪವನ್ನು ಕೊಡಬೇಕೆಂಬ ಮತ್ತು ಮನಸ್ಸಿನಲ್ಲಿ ಅಚ್ಚೊತ್ತಿದ ಬಾಲ್ಯದ ವಿಶಿಷ್ಟ ಅನುಭವಗಳನ್ನು ಹೊರಹಾಕುವ ಮೂಲಕ ತನ್ನೊಳಗಿನ ಅಪರಿಚಿತ ಲೋಕವನ್ನು ಪರಿಚಿತವನ್ನಾಗಿಸುವ ಭರದಲ್ಲಿ ಕಥೆಯನ್ನು ರಚಿಸುತ್ತಾನೆ. ಆ ಮೂಲಕ ಪ್ರಚೋದಕಗಳಾಗಿದ್ದ ಮನಸ್ಸಿನ ಬಾಧ್ಯತೆಗಳನ್ನು ಹೊರಹಾಕುತ್ತಾನೆ.

ಭೂತಕಾಲದ ಅನುಭವಗಳು ಮತ್ತು ಆ ಅನುಭವಗಳಿಂದ ಬಾಧಿಸಲ್ಪಟ್ಟ ವ್ಯಕ್ತಿಯೊಬ್ಬನು ತನ್ನ ಅನುಭವಕ್ಕೆ ಕಾರಣವಾದ ವ್ಯಕ್ತಿಯಿಂದಲೇ ಆಲೋಚನೆಗಳಲ್ಲಿ ಹಠಾತ್ತನೆ ಬದಲಾವಣೆಗೊಳ್ಳುವ ಸಂದರ್ಭವನ್ನು ಇಲ್ಲಿ ಕಾಣಬಹುದು. ರಾಮಚಂದ್ರನು ಮುಖಾಮುಖಿಯಾಗುವ ಭಾವಾನಾತ್ಮಕ ನೆಲೆ, ಲೈಂಗಿಕ ನೆಲೆ ಮತ್ತು ಕೌಟುಂಬಿಕ ನೆಲೆಗಳ ವಿಚಾರದಲ್ಲಿ ವಾಸ್ತವಕ್ಕೆ ತೀರಾ ಭಿನ್ನವಾದ ಅನುಭವವನ್ನು ಪಡೆಯುತ್ತಾನೆ. ತನ್ನ ನಂಬಿಕೆಯನ್ನು ಇಂದಿರಕ್ಕ ಅಲ್ಲಗಳೆದಾಗ ಆತನ ಮನಸ್ಸು ವಿಚಾರಪೂರ್ಣವಾಗಿ ತರ್ಕಮಾಡುವಂತೆ ಆಲೋಚಿಸುವುದಿಲ್ಲ. ಆ ನಂಬಿಕೆಗಳಿಗೆ ಯಾವುದು ಮೂಲಭೂತ ಕಾರಣ ಎಂಬ ಯೋಚನೆಯನ್ನು ಮಾಡುವುದಿಲ್ಲ. ಇಲ್ಲಿ ರಾಮಚಂದ್ರ ಎಷ್ಟು ಹೆಚ್ಚಿನ ಮಟ್ಟಿಗೆ ಮನಸ್ಸು ಹರಿತವಾಗಿರುತ್ತದೋ ಅಷ್ಟರಮಟ್ಟಿಗೆ ತನ್ನ ವಿಚಾರಧಾರೆಯನ್ನು ತನ್ನ ನಂಬಿಕೆಗಳ ಸಮರ್ಥನೆಗೆ ಉಪಯೋಗಿಸುತ್ತಾನೆ ಎಂದೆನಿಸುತ್ತದೆ.

ತೀರಾ ಎಳೆತನದಲ್ಲಿ ನಡೆದ ಘಟನೆಯೊಂದು ರಾಮಚಂದ್ರನನ್ನು ಅದು ನಡೆದು ಇಪ್ಪತ್ತೈದು ಮೂವತ್ತು ವರ್ಷಗಳ ನಂತರವೂ ಕಾಡತೊಡಗುವುದು. ಹಠಾತ್ತನೆ ನಿಜ ಜೀವನದಲ್ಲಿ ನಡೆದ ಕಥೆಯ ಪಾತ್ರವೊಂದು ಎದುರಿಗೆ ಬಂದು "ನಿನ್ನ ಕತೆ ಓದಿದ್ದೇನೆ", ಹರಿದೊಗೆದ ಆ ಸಣ್ಣ ಚೀಟಿಯ ಮೂಲಕ ನೀನು ಅನುಭವಿಸುತ್ತ ಬಂದ ನೋವಿನ ಕಲ್ಪನೆ ನಾನು ಮಾಡಬಲ್ಲೆ. ಆದರೆ ಪತ್ರಕ್ಕೆ ನೀನು ಹಚ್ಚಿದ ಅರ್ಥ ಸರಿಯಾದದ್ದಲ್ಲವೆಂದು ನಿನಗೂ ಗೊತ್ತಿದೆ. ಹರಿದೊಗೆವಾಗ ಆ ಸಣ್ಣ ವಯಸ್ಸಿನಲ್ಲಿ ಇದ್ದಿರಲಿಕ್ಕಿಲ್ಲವಾದರೂ ಮುಂದೆ ದೊಡ್ಡವನಾದ ಮೇಲೆ, ಹೆಣ್ಣಿನ ಅನುಭವ ಬಂದ ಮೇಲಾದರೂ ನಿನಗೆ ಗೊತ್ತಾಗಿರಬೇಕಾಗಿತ್ತು. ಮದುವೆಯಾದಗಿನಿಂದಲೇ ತನ್ನ ಗಂಡ ನಪುಂಸಕ ಎಂದು ತಿಳಿದು ಆತನ ಬಗ್ಗೆ, ಆತ ಬದುಕಿದ್ದಾಗ ಸತ್ತ ಮೇಲೆ ಕೂಡಾ ಅನಿಸುತ್ತಿದ್ದ ತಿರಸ್ಕಾರ, ಜಿಗುಪ್ಸೆ ಪಾಪದವು ಎನಿಸಲಿಲ್ಲ. ಪ್ರಾಯ ತುಂಬಿ ತುಳುಕಾಡುತ್ತಿದ್ದ ಮೈಯ ಸೊಕ್ಕಿಗೆ ಪಾಪ–ಪುಣ್ಯಗಳ ತಾರತಮ್ಯ ಹೇಗೆ ಹೊಳೆಯಬೇಕು? ಯಾಕೆ ಹೊಳೆಯಬೇಕು? ನಿನ್ನ ಕತೆ ಓದಿ ಸಿಟ್ಟೇ ಬಂದುಬಿಟ್ಟಿತು. ಅಳುಬುರುಕರ ಅಜ್ಜಿ ಪುರಾಣವೆನಿಸಿತು. ನನ್ನಿಂದಾಗಬಹು ದಾಗಿದ್ದ ಒಂದು ಕೆಟ್ಟ ಕೆಲಸದಿಂದ ನನ್ನನ್ನು ರಕ್ಷಿಸಿದೆ ಎಂದು ಜಂಬಕೊಚ್ಚಿಕೊಂಡೆ. ನೀನು ಕತೆಯಲ್ಲಿ ನನ್ನ ಮಿಂಡ ಎಂದು ಕರೆದ ಆ ಪೊತ್ತೆ ಮೀಸೆಯವನು ಸಣ್ಣಂದಿನಿಂದಲೇ ನನ್ನನ್ನು ಪ್ರೀತಿಸಿದವನು. ಮದುವೆ ಕೂಡಾ ಆಗುವವರಿದ್ದೇವು".[೩೫]

ಈ ಮೇಲಿನ ಸಂದರ್ಭವು ವ್ಯಕ್ತಿಯ ಆಲೋಚನೆಗಳು, ಅನುಭವಗಳು ಕಥೆಯ ಮೂಲಕ ಬಳಸಲ್ಪಟ್ಟು ಕ್ರಮೇಣ, ಅವರ ಗ್ರಹಿಕೆಯ ಕ್ರಮ ವಿಸ್ತರಿಸಿದಂತೆಲ್ಲಾ ಅವು ಭಿನ್ನ ಭಿನ್ನ

ಆಯಾಮ ಪಡೆದದ್ದನ್ನು ನೋಡಬಹುದು. ಮನಸ್ಸು ಅನುಭವದಿಂದ ಬಿಡುಗಡೆ ಹೊಂದುವ ಅವಶ್ಯಕತೆಗೆ ಗ್ರಹಿಸಲ್ಪಟ್ಟಾಗ ಸೀಮಿತ ಅರ್ಥವನ್ನು ಒಳಗೊಂಡು, ಗ್ರಹಿಕೆಗಳು ಬದುಕಿನ ಆಳಕ್ಕೆ ಇಳಿದಂತೆಲ್ಲಾ, ಸೃಜನಾತ್ಮಕ ನೆಲೆಯಲ್ಲಿ ಇನ್ನೂ ಹೆಚ್ಚು ಹೆಚ್ಚು ಸೂಕ್ಷ್ಮತೆಯನ್ನು ಪಡೆದುಕೊಳ್ಳುತ್ತಾ ಹೋಗುತ್ತದೆ. ಕೇವಲ ವ್ಯಕ್ತಿಯ ಅನುಭವದ ಆಳಕ್ಕಿಂತ ಇಡೀ ಒಂದು ಬದುಕಿನ, ಸಂಸ್ಕೃತಿಯ, ಮನೋಲೋಕದ ಆಳಕ್ಕೆ ವಿಸ್ತರಿಸಿಕೊಂಡಿರುವುದು ಮತ್ತು ಬೌದ್ಧಿಕ ಪ್ರಕ್ರಿಯೆಗಿಂತ ಮಾನಸಿಕತೆಯ ಕಡೆಗೆ ಬೆಳವಣಿಗೆ ಹೊಂದಿರುವುದು ಕಂಡು ಬರುತ್ತದೆ. ಇಂದಿರಕ್ಕನ ಆಕಸ್ಮಿಕ ಆಗಮನ, ಕಥೆಗೂ ಮತ್ತು ವಾಸ್ತವಕ್ಕೂ ಯಾವುದೇ ಬಗೆಯೂ ಸಂಬಂಧವಿಲ್ಲದಿರುವುದಿನ್ನು ಆಕೆಯ ಮೂಲಕವೇ ಸ್ಪಷ್ಟಗೊಳ್ಳುವುದು ಇವೆಲ್ಲವೂ ತನ್ನ ಅನುಭವಗಳೊಂದಿಗೆ ಗುದ್ದಾಡಿದ ಮನುಷ್ಯನ ಸ್ವಭಾವ ವಿಶ್ಲೇಷಣೆ ಮತ್ತು ಗ್ರಹಿಕೆಯು, ಮನೋಧೋರಣೆಯು ಮನೋವೈಜ್ಞಾನಿಕ ಇಲ್ಲವೇ ತಾತ್ವಿಕ ತುಡಿತಗಳ ಕುರಿತಾದ ಪ್ರಶ್ನೆಗಳಿಗೆ ಕಾರಣವಾಗುತ್ತವೆ. ಅದೇ ರೀತಿ ಮನುಷ್ಯನ ಮೂಲಭೂತ ಪ್ರವೃತ್ತಿಯೊಂದರ ಶೋಧನೆಗೆ ತೊಡಗಿರುವುದು ಸ್ಪಷ್ಟವಾಗುತ್ತದೆ. ಹೊಟ್ಟೆ ಹಸಿವಿನಂತೆ ಮೈ ಮತ್ತು ಮನಸ್ಸುಗಳ ಕಾಮನೆಗಳೂ ವ್ಯಕ್ತಿಯ ಬದುಕನ್ನು ಅದೆಷ್ಟು ಪ್ರಭಾವಿಸಿದರೂ ಅವು ಪ್ರತ್ಯೇಕ ಪ್ರತ್ಯೇಕವಾಗಿಟ್ಟುಕೊಳ್ಳುವುದು ಮನುಷ್ಯನನ್ನು ಭಾದಿಸುವಷ್ಟು ಮತ್ಯಾವ ಸಂಗತಿಯು ಇರಲಾರದು. ಆದ್ದರಿಂದಲೇ ರಾಮಚಂದ್ರ ಇಂದಿರಕ್ಕನ ಕುರಿತಾದ ಗ್ರಹಿಕೆಯನ್ನು ಬೇರೆ ಒಂದು ಆಯಾಮಕ್ಕೆ ಕೊಂಡೊಯ್ಯಲು ಕಾರಣವಾಗಿರಬಹುದು. “ವ್ಯಕ್ತಿ ಪ್ರಜ್ಞೆ” ಎಂಬುದು ಸಾಮಾಜಿಕ ಉತ್ಪನ್ನವೇ ಆಗಿರುವುದರಿಂದ ಕಥೆಯ ಮುಕ್ತಾಯವೂ ಸಾಮಾಜಿಕ ಪ್ರಜ್ಞೆಗನುಗುಣವಾಗಿಯೇ ನಡೆದಿದೆ ಎಂದೆನಿಸುತ್ತದೆ. ಬಾಹ್ಯ ಪ್ರಪಂಚಕ್ಕೆ ಪ್ರತಿಕ್ರಿಯಿಸುವಾಗ ಅಂತರಂಗ ಪ್ರಪಂಚವನ್ನು ಎಷ್ಟೇ ಕ್ರಿಯಾತ್ಮಕವಾಗಿ ತೊಡಗಿಸಿಕೊಂಡರೂ ಅದು ಪ್ರಜ್ಞಾಸ್ತರದ ಅಂಚಿಗೆ ಸರಿಯಬಹುದು. ಕಥೆಯೇ ಒದಗಿಸುವ ಮತ್ತು ನಿರೂಪಕರ ನಿರ್ದಿಷ್ಟ ಮನೋಧರ್ಮವನ್ನು ಪ್ರಶ್ನಿಸದ ದರ್ಶನ ಎಂಬುದು ಮಾನವ ಭಾವಾವೇಶಕ್ಕಿಂತ ಹೆಚ್ಚು ಆಳವಾದ ಮತ್ತು ಪರಿಣಾಮಕಾರಿಯಾದ ಅನುಭವವೊಂದನ್ನು ಪ್ರತಿನಿಧಿಸುತ್ತದೆ ಎನ್ನಬಹುದು. ನಿಜವಾದ ಸಾಂಕೇತಿಕ ಅಭಿವ್ಯಕ್ತಿ ತನ್ನದೇ ಆದ, ಅಪೂರ್ಣವಾಗಿರುವ ಏನೋ ಒಂದರ ಅಭಿವ್ಯಕ್ತಿ. ಏಕೆಂದರೆ ಮಾನವನ ಗ್ರಹಿಕೆ ಜಾಗೃತ ಅನುಭವದ ವಲಯದೊಳಗೆ ಬರುತ್ತದೆ. ಆದರೆ ನಮ್ಮ ಅಂತರ್ಬೋಧೆಗಳು ಅಜ್ಞಾತವೂ, ಗುಪ್ತವೂ ಆದ ಸಂಗತಿಗಳನ್ನು ಸ್ವಭಾವತಃ ರಹಸ್ಯವಾದವುಗಳನ್ನು ನಿರ್ದೇಶಿಸುತ್ತವೆ. ರಾಮಚಂದ್ರನ ಪ್ರಜ್ಞಾಪ್ರೇರಿತವಾದ ಮಾನಸಿಕ ಚಟುವಟಿಕೆಯು ಅನುಕಂಪದಿಂದ ಪ್ರೇರಿತವಾದಂತಹ ನೆಲೆಯಲ್ಲಿ ಕಥೆಯ ಮುಕ್ತಾಯವು ಕಂಡುಬರುತ್ತದೆ. ಜೊತೆಗೆ ತನ್ನ ನಂಬಿಕೆ ನಿಲುವುಗಳಿಗೆ ವಿರುದ್ಧವಾದ ನಿಲುವು ಮಾನವರ ಬದುಕಿನ ಗ್ರಹಿಕೆಯ ಬಗೆಗೆ ಹೊಸ ದೃಷ್ಟಿಕೋನವೊಂದನ್ನು ಸೃಷ್ಟಿಸುವ ಹಾಗೆ ಸೃಷ್ಟಿಸಿದ ವಿರೋಧಗಳಿಗೆ ಮುಖಾಮುಖಿಯಾಗುವ, ಅದರ ಮೂಲಕ ಬದುಕಿನ ಸಂಕೀರ್ಣತೆ, ದ್ವಂದ್ವಗಳು, ಸಂಘರ್ಷಗಳನ್ನು ಶೋಧಿಸುವಂತೆ ರಾಮಚಂದ್ರ ಕಂಡುಬರುತ್ತಾನೆ.

ರಾಮಚಂದ್ರನ ಪ್ರಜ್ಞಾಪೂರ್ವಕ ಮನಸ್ಥಿತಿಯು ಕಥೆಯ ಕಲಾತ್ಮಕತೆಯನ್ನು ಸಂಪೂರ್ಣವಾಗಿ ಕಸಿದುಕೊಂಡಿದೆ. ಇಲ್ಲಿ ರಾಮಚಂದ್ರ ಮತ್ತು ಆತನ ವಯುಕ್ತಿಕ ಅನುಭವಗಳಿಂದ, ಭಾವಸ್ಥಿತಿಗಳಿಂದ ಮತ್ತು ನೈಜ ಮತ್ತು ಅಥವಾ ಕಾಲ್ಪನಿಕ ಬಾಲ್ಯಾನುಭವಗಳಿಂದ ಉದ್ಭವಗೊಂಡ ಕ್ರಮವು ಫ್ರಾಯ್ಡ್‌ನ ಸಿದ್ಧಾಂತಗಳಿಂದ ಕಲಾವಿದ ಮತ್ತು ಕೃತಿಯ ಸಂಬಂಧವನ್ನು ಸಮರ್ಥಿಸಬಹುದಾಗಿದೆ. ಏಕೆಂದರೆ ನಿಶ್ಚಿತವಾದ ಕಲಾ ಮನೋಧರ್ಮ ವೈಯಕ್ತಿಕ ಮನೋವಲಯದಾಚೆ ವಿರುದ್ಧವಾದ ಸಮಷ್ಟಿ ಮನೋವಲಯದ ಅತಿಭಾರವನ್ನೊಳಗೊಂಡಿರುತ್ತದೆ. ಕಲೆಯ ಮೂಲಕ ತನ್ನ ವೈಯಕ್ತಿಕ ಆಂತರಿಕ ಪ್ರೇರಣೆಗೊಂದು ರೂಪಕೊಡುತ್ತಾನೆ ಎಂಬುದಕ್ಕಿಂತ ಕಲೆಯೇ ವ್ಯಕ್ತಿಯನ್ನು ತನ್ನ ಉಪಕರಣವನ್ನಾಗಿ ಮಾಡಿಕೊಳ್ಳುವ ಆಂತರೀಕ ಪ್ರೇರಣೆಯನ್ನೊದಗಿಸುತ್ತದೆ ಎನ್ನಬಹುದು. ಇಂತಹ ಆಂತರಿಕ ಪ್ರೇರಣೆಯೆ 'ಮುಖಾಮುಖಿ' ಕಥೆಯ ಸಂದರ್ಭಕ್ಕೂ ಕಾರಣವಾಗಿರಬಹುದು. ಕಥೆಯ ಕೇಂದ್ರ ಪ್ರಜ್ಞೆಯೇ ನಿರೂಪಕ ರಾಮಚಂದ್ರ. ಕಥೆಯಲ್ಲಿ ಸೂಚಿತವಾಗುವ ಹಲವು ಜೀವನ ದೃಷ್ಟಿಗಳು ಈ ಕೇಂದ್ರ ಪ್ರಜ್ಞೆಯ ನೆಲೆಯಲ್ಲಿಯೇ ಸಂಧಿಸುತ್ತವೆ. ಮುಖಾಮುಖಿಯಾಗುತ್ತವೆ. ಈ ಪ್ರಜ್ಞೆಯೇ ಆತನಿಗೆ ತನ್ನ ಭೂತಕಾಲದ ಅನುಭವದ ಅವಲೋಕನಗಳಿಗೆ ಸ್ಥಾಯಿಯಾದ ಹಿನ್ನೆಲೆಯೊಂದನ್ನು ಒದಗಿಸುತ್ತದೆ. ಆ ಮೂಲಕ ವರ್ತಮಾನದಲ್ಲಿ ಅದಕ್ಕೊಂದು ರೂಪು ಕೊಟ್ಟರೂ ಆ ಅನುಭವಗಳಿಂದ ಮುಕ್ತನಾಗದೆ ಹೋಗುವ ಅಂಶವೇ ಮಾನವ ಮನಸ್ಸಿನ ಸಂಕೀರ್ಣ ಪ್ರಕ್ರಿಯೆಯ ಸ್ವರೂಪವಾಗಿದೆ. ನಿಜ ಬದುಕಿನ ಘಟನೆಗಳು, ಕತೆಯಾಗುವ, ವ್ಯಕ್ತಿಗಳು ಪಾತ್ರಗಳಾಗುವ ಪ್ರಕ್ರಿಯೇ ಸಂಕೀರ್ಣವಾದದ್ದು. ಇಂತಹ ಸಂದರ್ಭವು ಪಾತ್ರಗಳ ಬದುಕಿನ ನೋವು ದುರಂತಗಳು ಹಿನ್ನೆಲೆಗೆ ಸರಿಯದೆ ಕಥೆ ಕಟ್ಟುವ ಕೌಶಲ್ಯ ಮತ್ತು ಕೇಳುಗರ ಕುತೂಹಲಗಳು ವಿಜೃಂಭಿಸದೇ ಹೋದರೂ ನಿರೂಪಕ ರಾಮಚಂದ್ರ ತೀವ್ರವಾದ ನೈತಿಕ ಜಿಜ್ಞಾಸೆಗೆ ಗುರಿಯಾದಂತೆ ಕಂಡುಬರುತ್ತಾರೆ ಮತ್ತು ತಮ್ಮ ನೈತಿಕ ದಿಟ್ಟತನವನ್ನು ಎತ್ತಿಹಿಡಿದ್ದಾರೆ. ನಿರೂಪಕ ರಾಮಚಂದ್ರರ ಎಲ್ಲಾ ಮಾನಸಿಕ ಪ್ರಕ್ರಿಯೆ ಪ್ರಸ್ತುತ ಇಂದಿರಕ್ಕಳ ಮೂಲಕ ಅರಿತ ವಾಸ್ತವಕ್ಕೂ ಒಂದು ಸೂಕ್ಷ್ಮ ಸಂಬಂಧವನ್ನು ಕಾಣಬಹುದಾಗಿದೆ. ಅದೇಂದರೆ ಮನುಷ್ಯ ಮನಸ್ಸು ಇದೂವರೆಗೂ ಯಾವ ಅಂಕೆಗೂ, ಯಾರಿಗೂ ನಿಲುಕದ ನಿಗೂಢತೆ. ರಾಮಚಂದ್ರನ ಎಳೆತನದಲ್ಲಿ ಗ್ರಹಿಸಿದ ಆಲೋಚನೆಯು ಎಷ್ಟೋ ವರುಷಗಳ ನಂತರ ಬುಡಮೇಲಾಗುವ ಅಂಶವು ಹೆಚ್ಚು ಸೂಕ್ಷ್ಮವೂ, ಸಂಕೀರ್ಣವೂ ಆದದ್ದು ಎಂದು ಹೇಳಬಹುದು. ರಾಮಚಂದ್ರ ಮತ್ತು ಇಂದಿರಕ್ಕಳ ಸಂಬಂಧವನ್ನು ನಿರೂಪಕರಲ್ಲೆ ಒಂದು ಬಿಡಿಸಲಾಗದ ಆದರೆ ಸುಪ್ತವಾಗಿ, ಮಾನಸಿಕವಾಗಿ ಆ ಸಂಬಂಧಕ್ಕೊಂದು ಅರ್ಥವಿದ್ದಂತೆ ತೋರುತ್ತದೆ. ಗಂಡು ಮತ್ತು ಹೆಣ್ಣು ಇವರಿಬ್ಬರಲ್ಲಿ ಒಬ್ಬರ ಭೌತಿಕ ಗೈರುಹಾಜರಿಯಲ್ಲೂ ಇನ್ನೊಬ್ಬರ ಕುರಿತಾದ ಕನಸು, ಕಲ್ಪನೆ, ವಿರಹ, ಹುಚ್ಚು ವ್ಯಾಮೋಹಗಳು ಇನ್ನೊಬ್ಬರಿಗೆ ತಿಳಿಯದಂತಹ ಸಂಬಂಧದ ಒತ್ತಡಗಳು ವ್ಯಕ್ತವಾಗುವ ಹಲವು ನಿದರ್ಶನಗಳನ್ನು ಕಾಣಬಹುದು.

ಇಲ್ಲಿ ಮುಗ್ಧತೆಯ ಗ್ರಹಿಕೆ ಪ್ರಬುದ್ಧತೆಯತ್ತ ಚಲಿಸುವ ಮತ್ತು ಮುಗ್ಧ ಪ್ರಬುದ್ಧ ಈ ಎರಡು ಜಗತ್ತುಗಳ ವೈದೃಶ್ಯಗಳು ಲೋಕಗ್ರಹಿಕೆಯನ್ನು ಹಿಗ್ಗಿಸುವ ಪ್ರಕ್ರಿಯೆ ಕಂಡುಬರುತ್ತದೆ."[೨೬] ಈ ಬಗೆಯ ಗ್ರಹಿಕೆಗಳ ವೈದೃಶ್ಯಗಳ ಮೂಲಕವೇ ಸಾಹಿತ್ಯವು ವ್ಯಕ್ತಿವಿಕಾಸ ಮತ್ತು ಪ್ರಜ್ಞಾವಿಕಾಸದ ಶೋಧದ ಕಾಳಜಿಯನ್ನು ಹೊಂದಿರುವುದು ಸ್ಪಷ್ಟ. ಒಂದೊಂದು ವಯೋಮಾನದ ಸಂದರ್ಭದಲ್ಲಿ ವ್ಯಕ್ತಿ ಪ್ರಜ್ಞೆ ಜಾಗೃತವಾಗುವ, ಸಂವೇದನಾಶೀಲವಾಗುವ, ಹೊಸ ಅನುಭವ, ಗ್ರಹಿಕೆಗಳಿಂದ ಮನಸ್ಸು, ಧೋರಣೆಗಳು ಪರಿವರ್ತನೆಗೊಳ್ಳುವ ಮಾನವ ಬದುಕನ್ನು ರಾಮಚಂದ್ರನ ಪಾತ್ರ ಪ್ರತಿನಿಧಿಸುತ್ತದೆ. ವ್ಯಕ್ತಿ ಅನುಭವ ನಿರೂಪಣೆ ಮಾಡುವಾಗ ತನ್ನ ನಿಜ ಭಾವನೆಗಳನ್ನು ಬಿಂಬಿಸದೆ ಉದ್ದೇಶಪೂರ್ವಕವಾಗಿ ಮುಚ್ಚಿಡುವ ಸಂದರ್ಭವೇ ಹೆಚ್ಚು. ಮುಖ್ಯವಾಗಿ ವಾಸ್ತವ ಪರಿಸ್ಥಿತಿಯ ಒಂದಂಶವನ್ನು ಆರಿಸಿಕೊಂಡು ಅದನ್ನು ಪರಿವರ್ತಿಸಿ, ಅದಕ್ಕೆ ವಾಸ್ತವಕ್ಕಿಂತ ಭಿನ್ನವಾದ ಇಲ್ಲವೇ ಎಲ್ಲರೂ ಒಪ್ಪಿಕೊಳ್ಳುವ ರೂಪವನ್ನು ಕೊಡುವ ಅಂದರೆ ಬಾಹ್ಯ ವಾಸ್ತವವನ್ನು ಮನುಷ್ಯನ ಅಂತಃಪ್ರವೃತ್ತಿಗಳಿಗೆ ಅನುಗುಣವಾದ ರೀತಿಯಲ್ಲಿ ಪುನರ್ನಿರ್ಮಿಸಿ ಬಿಡುವ ಸಂದರ್ಭಗಳು ಸಾಹಿತ್ಯದಂತಹ ಸೃಜನಶೀಲ ಕ್ರಿಯೆಯಲ್ಲಿ ಅರಿಯದೇ ಸಂಭವಿಸುವ ಪ್ರಕ್ರಿಯೆ. ಮನುಷ್ಯನು ಯೋಚಿಸುವುದು ಮಾನಸಿಕ ಚಿತ್ರದ ಮೂಲಕ. ನಮ್ಮ ಜೀವನದಲ್ಲಿ ಪಡೆದ ಅನುಭವಗಳ ಪ್ರತಿಯೊಂದು ಮಾನಸಿಕ ಚಿತ್ರದ ಜೊತೆಗೆ ತತ್ಕಾಲದ ಒಂದು ಭಾವನೆಯೂ ನಮ್ಮ ಪ್ರಜ್ಞೆಯಲ್ಲಿ, ಮನಸ್ಸಿನ ಆಳದಲ್ಲಿ ದಾಖಲಾಗಿರುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಇಂದು ಏನಾಗಿರುವನೋ ಅದು ಅವನಿಗೊದಗಿ ಬಂದ ಅನುಭವಗಳಿಗೆ ಅವನು ತೋರಿಸಿದ ವಿಭಿನ್ನ ಬೌದ್ಧಿಕ ಮತ್ತು ಭಾವನಾತ್ಮಕ ಪ್ರತಿಕ್ರಿಯೆಗಳ ಮೊತ್ತವೆ. ಒಬ್ಬ ಎಂಥ ವ್ಯಕ್ತಿ ಏನನ್ನು ಪ್ರತಿನಿಧಿಸುತ್ತಾನೆ ಎಂಬುದು ಅವನು ಸಧ್ಯ ತನ್ನ ಬಗ್ಗೆ ಏನೆಂದು ಕಲ್ಪಿಸಿಕೊಂಡಿರುತ್ತಾನೆ, ಜೀವನವನ್ನೂ, ಇತರರನ್ನೂ ಯಾವ ದೃಷ್ಟಿಯಿಂದ ನೋಡುತ್ತಾನೆ ಎಂಬುದನ್ನು ಆಧರಿಸಿರುತ್ತದೆ.

ಒಟ್ಟಾರೆ ನಿರೂಪಕ ರಾಮಚಂದ್ರನ ಪಾತ್ರದ ಮೂಲಕ ವ್ಯಕ್ತವಾಗಿರುವ ಸತ್ಯವಾಗಲೀ, ಗ್ರಹಿಕೆಯಾಗಲೀ ಸ್ವಯಂ ಪೂರ್ಣ ಬಾಹ್ಯರಚನೆ ಎಂದೆನಿಸದೆ, ಅಸ್ತಿತ್ವದಲ್ಲಿರುವ ಮಾನಸಿಕ ವರ್ತನೆಗಳ, ಬದಲಾವಣೆಗಳ ಪ್ರತಿಫಲನ ರೂಪ ಎನಿಸುತ್ತದೆ. ಅಂದರೆ ಸಾಮಾನ್ಯ ಗ್ರಹಿಕೆಯಲ್ಲಿ ಇರಬಹುದಾದ ಸರಿ ತಪ್ಪುಗಳೆರಡನ್ನೂ ಒಳಗೊಂಡಿರುವಂತಹದ್ದು. ವಾಸ್ತವವು ಕಲ್ಪನೆಗಿಂತ ಭಿನ್ನವಾಗಿರುವ ಮತ್ತು ಕ್ರಿಯಾತ್ಮಕವಾದ ನೆಲೆಯಲ್ಲಿ ಭಿನ್ನವಾಗಿದ್ದೂ ಹೇಗೆ ಗ್ರಹಿಸಲಾಗುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಸಾಮಾನ್ಯ ಬಾಹ್ಯ ನೆಲೆಗೆ ನಿಲುಕುವ, ಮತ್ತೊಂದು ವಿಶೇಷ ತಾರ್ಕಿಕ ದೃಷ್ಟಿಗೂ ನಿಲುಕದ ಆ ವ್ಯಕ್ತಿಗೆ ಅನನ್ಯವಾಗಿರುವ ಆಂತರೀಕ ಗುಣಗಳಿರುತ್ತವೆ. ಯಾವುದೇ ಸಂದರ್ಭ ಅಥವಾ ಕಾರಣಗಳಿಂದ ವ್ಯಕ್ತಿಯು ಅಗತ್ಯವೆನಿಸಿದಾಗ ಆಗ ವ್ಯಕ್ತಿಯ ಇರುವಿಕೆ ಮಹತ್ವದ್ದೆನಿಸುತ್ತದೆ. ಸಾಹಿತ್ಯದ ಪಾತ್ರಗಳು ಕೂಡಾ ತನ್ನ ಕ್ರಿಯಾತ್ಮಕ

ವರ್ತನೆಯಿಂದ ಯಾವುದೋ ಒಂದು ಘಟನೆಗೆ, ತಿರುವಿಗೆ ಕಾರಣವಾಗುವ ಸಂದರ್ಭವು ಕಥಾಬೆಳವಣಿಗೆಯಂತಹ ಪ್ರಕ್ರಿಯೆಗೆ ಮಾತ್ರ ಮುಖ್ಯವಾಗದೇ ಶ್ರೇಷ್ಠ ವಿಚಾರಗಳನ್ನು, ಆದರ್ಶಗಳನ್ನು ಬದುಕಿನ ಮೂಲ ತುಡಿತಗಳನ್ನು ಮನುಷ್ಯ ಅಂತರಂಗಕ್ಕೆ ಬೆಸೆಯುವ ಕಾರ್ಯವನ್ನು ನಿರ್ವಹಿಸುತ್ತವೆ. ಬದುಕಿನ ಸಣ್ಣ ಪುಟ್ಟ ಅಂಶಗಳು, ಕಹಿ ವಾಸ್ತವಗಳು, ಸೋಲು ನಿರಾಸೆ ಸುಖ, ಸಂತೋಷಗಳು ಕೂಡಾ ಸಾಹಿತ್ಯದಲ್ಲಿ ಔಚಿತ್ಯಪೂರ್ಣವಾಗಿ ಮೂಡಿಬಂದಾಗ ಪಾತ್ರಗಳ ಮನೋವಿಶ್ಲೇಷಣೆಯು ತಮ್ಮ ಮೇಲು ಮುಸುಕನ್ನು ಕಳಚಿ, ಅಂತರಂಗದ ಮನೋಲೋಕದ ವಿಶೇಷ ರೂಪವನ್ನು ಪ್ರದರ್ಶಿಸುತ್ತವೆ. ಬಾಹ್ಯ ವಾಸ್ತವದಲ್ಲಿ ಕಾಣುವುದಕ್ಕಿಂತ ಅಂತರಂಗದ ವಾಸ್ತವದಲ್ಲಿ ಅಥವಾ ಭಾವ ವಾಸ್ತವದಲ್ಲಿ ಕಾಣುವುದರ ಮೂಲಕ ಮನುಷ್ಯ ಮನುಷ್ಯನ ಪ್ರಜ್ಞೆಯನ್ನು ವಿಸ್ತರಿಸುವುದು ಸಾಹಿತ್ಯದ ವಿಶ್ಲೇಷಣೆಯ ಸಂದರ್ಭದಲ್ಲಿ ಹೆಚ್ಚು ಮಹತ್ವಪೂರ್ಣದ್ದು ಎಂಬುದಕ್ಕೆ ಮುಖಾಮುಖಿ ಕಥೆಯೇ ಒಂದು ನಿದರ್ಶನ ಎನ್ನಬಹುದು.

ಕೊನೆಟಿಪ್ಪಣಿ

೧. ಯಶೋಧರ ಚರಿತ. ಜನ್ನ, ಭಾಗ ೭೪

೨. ಮನಸ್ಸು ಇಲ್ಲದ ಮಾರ್ಗ. .ಮೀನಗುಂಡಿ ಸುಬ್ರಮಣ್ಯ ಪು.ಸಂ. ೧೮೮

೩. ಪ್ರೀತಿಸುವುದೆಂದರೆ, – ಎರಿಕ್ ಫ್ರಾಂ – ಪು. ಸಂ. ೨೫

೪. ಯಶೋಧರ ಚರಿತ. ಜನ್ನ, ಭಾಗ ೧೮

೫. ಪ್ರೀತಿಸುವುದೆಂದರೆ, – ಎರಿಕ್ ಫ್ರಾಂ – ಪು.ಸಂ. ೨೬

೬. ಯಶೋಧರ ಚರಿತ. ಜನ್ನ, ಭಾಗ ೪೮

೭. ಯಶೋಧರ ಚರಿತ. ಜನ್ನ, ಭಾಗ ೫೩

೮. ಯಶೋಧರ ಚರಿತ. ಜನ್ನ, ಭಾಗ ೫೪

೯. ಸಮಗ್ರ ವಿಮರ್ಶೆ. ಗಿರಡ್ಡಿ ಗೋವಿಂದರಾಜು ಪು.ಸಂ. ೪೫

೧೦.ಯಶೋಧರ ಚರಿತ. ಜನ್ನ, ಭಾಗ ೫೫

೧೧.ಯಶೋಧರ ಚರಿತ. ಜನ್ನ, ಭಾಗ ೩೧–೩೨

೧೨.ಮಾರ್ಕ್ಸ್ ಚಿಂತನೆಗಳು. ಓಶೋ ಪು.ಸಂ. ೮೬

೧೩.ಅಸ್ತಿತ್ವವಾದ. ಕೆ.ವಿ ತಿರುಮಲೇಶ್ – ಪು.ಸಂ. ೧೧೩.

೧೪.ವಿಮರ್ಶೆಯ ಪರಿಭಾಷೆ, ಓ.ಎಲ್. ನಾಗಭೂಷಣಸ್ವಾಮಿ, ಪು.ಸಂ. ೧೭

೧೫.ದ್ರೌಪದೀ ಸಮೀಕ್ಷೆ, ಮಣಿಮಾಲಿನಿ ಕೆ., ಪು.ಸಂ. ೧೮೪.

೧೬.ಬದುಕಲು ಕಲಿಯಿರಿ. ಲೇ. ಸ್ವಾಮಿ ಜಗದಾತ್ಮಾನಂದ, ಪು.ಸಂ. ೧೨೮.

೧೭.ಕಾರ್ಲ್‌ಯೂಂಗ್. . ಎಂ. ಬಸವಣ್ಣ. ಪು.ಸಂ. ೮೭

೧೮.ಹಯವದನ. ಗಿರೀಶ್ ಕಾರ್ನಾಡ್ ಪು.ಸಂ. ೨೩

೧೯.ಕಾರ್ಲ್‌ಯೂಂಗ್. . ಎಂ. ಬಸವಣ್ಣ. ಪು.ಸಂ. ೧೯

೨೦.ಹಯವದನ. ಗಿರೀಶ್ ಕಾರ್ನಾಡ್. ಪು.ಸಂ. ೨೧

೨೧.ಮನಸ್ಸು ಇಲ್ಲದ ಮಾರ್ಗ. .ಮೀನಗುಂಡಿ ಸುಬ್ರಮಣ್ಯ. ಪು.ಸಂ.೧೧೮

೨೨.ಹಯವದನ. ಗಿರೀಶ್ ಕಾರ್ನಾಡ್. ಪು.ಸಂ. ೪೪

೨೩.ಮನಮಂಥನ. ರಾ.ಶೀ. ಪು.ಸಂ. ೯೩

೨೪.ಖ್ಯಾತ ಮನೋವಿಜ್ಞಾನಿಗಳು. ಮಹಾಬಲೇಶ್ವರರಾವ್. ಪು.ಸಂ. ೮೯

೨೫.ಹಯವದನ. ಗಿರೀಶ್ ಕಾರ್ನಾಡ್. ಪು.ಸಂ. ೪೬

೨೬.ಹಯವದನ. ಗಿರೀಶ್ ಕಾರ್ನಾಡ್. ಪು.ಸಂ. ೬೭

೨೭.ಕಾರ್ಲ್‌ಯೂಂಗ್. . ಎಂ. ಬಸವಣ್ಣ. ಪು.ಸಂ. ೨೧

೨೮.ಮನೋನಂದನ. ರಾ.ಶೀ. ಪು.ಸಂ. ೧೨೬

೨೯.ಹಯವದನ. ಗಿರೀಶ್ ಕಾರ್ನಾಡ್. ಪು.ಸಂ. ೨೫

೩೦.ಹಯವದನ. ಗಿರೀಶ್ ಕಾರ್ನಾಡ್. ಪು.ಸಂ. ೩೧

೩೧.ಹಯವದನ. ಗಿರೀಶ್ ಕಾರ್ನಾಡ್. ಪು.ಸಂ. ೩೧

೩೨.ಹಯವದನ. ಗಿರೀಶ್ ಕಾರ್ನಾಡ್. ಪು.ಸಂ. ೪೪

೩೩.ಹಯವದನ. ಗಿರೀಶ್ ಕಾರ್ನಾಡ್. ಪು.ಸಂ. ೪೫

೩೪.ಮುಖಾಮುಖಿ. ಯಶವಂತ ಚಿತ್ತಾಲ.

೩೫.ಏಕ–ಅನೇಕ ಲೇಖಕಿ, ಹೆಚ್. ಶಶಿಕಲಾ. ಪು.ಸಂ. ೨೯೬

೩೬.ಏಕ ಅನೇಕ ಲೇ ಎಚ್. ಶಶಿಕಲಾ. ಪು.ಸಂ. ೬೧

ಅಧ್ಯಾಯ : ಆರು

ಕಥಾ ಪಾತ್ರಗಳ ಬೆಳವಣಿಗೆ ಮತ್ತು ಮಾನಸಿಕ ವರ್ತನೆಗಳು

ಅಧ್ಯಾಯ : ಆರು

ಪಾತ್ರಗಳ ಮಾನಸಿಕ ವರ್ತನೆಗಳು ಮತ್ತು ಕತೆಗಳ ಬೆಳವಣಿಗೆ

ಸಾಹಿತ್ಯ ಮನುಷ್ಯ ಬದುಕಿನ ಅತ್ಯಂತ ನಿಕಟವಾದ, ಮೂರ್ತವಾದ ಹಾಗೂ ಬಹುತೇಕ ಅನುಭವದ ಎಲ್ಲಾ ಸ್ತರಗಳನ್ನು ಒಳಗೊಳ್ಳುವ ಅಭಿವ್ಯಕ್ತಿ. ಸಾಹಿತ್ಯ ತನ್ನ ಪೂರ್ಣ ಅಂತಃಸತ್ವವನ್ನು ಪೂರ್ತಿಯಾಗಿ ಯಾವ ವಿಶ್ಲೇಷಣೆಗೂ ಬಿಟ್ಟುಕೊಡುವುದಿಲ್ಲ. ಇದರಿಂದಲೇ ಅದು ಓದುಗನನ್ನು ಕೆಲವೊಮ್ಮೆ ಕುತೂಹಲಿಯನ್ನಾಗಿಸುತ್ತದೆ, ಅಚ್ಚರಿ ಉಂಟುಮಾಡುತ್ತದೆ. ಅರ್ಥಗ್ರಹಿಕೆಗೆ ನಿಲುಕದಂತೆಯೂ ಮಾಡುತ್ತದೆ. ವಿವಿಧ ಒಳನೋಟಗಳನ್ನು ಒಳಗೊಂಡು ತನ್ನ ಅಂತಃಸತ್ವವನ್ನು ರೂಪಿಸಿಕೊಂಡಿರುವ ಸಾಹಿತ್ಯದ ವಿಶ್ಲೇಷಣೆಗೆ ಯಾವುದೇ ಜ್ಞಾನಶಿಸ್ತಿನ ಒಳನೋಟಗಳನ್ನು ಉಪಯೋಗಿಸುವ ಸಾಧ್ಯತೆಯ ಕುರಿತಾಗಿ ಈಗಾಗಲೇ ಅನೇಕ ಪ್ರಶ್ನೆಗಳು ಹುಟ್ಟಿಕೊಂಡಿವೆ. ಪೂರ್ಣವಲ್ಲದಿದ್ದರೂ ಕೆಲವೊಂದು ಜ್ಞಾನಶಿಸ್ತುಗಳಿಂದ ವಿಶ್ಲೇಷಿಸಿರುವ ಉದಾಹರಣೆಗಳು ನಮ್ಮ ಎದುರಿಗಿದೆ.

ಸಾಹಿತ್ಯ ಒಂದು ಸೃಜನಶೀಲ ಕ್ರಿಯೆ. ಸಾಹಿತ್ಯಕ ಕ್ರಿಯೆ ಎಂಬುದು ತಂತಾನೆ ಜರುಗುವ ಪ್ರಕ್ರಿಯೆಯಲ್ಲ. ಮಾನವ ಪ್ರಜ್ಞೆಯ ಆಳದಿಂದ ಹೊರಡುವ ಈ ಕಾರ್ಯದ ಹಿಂದೆ ಸ್ವತಃ ಸಾಹಿತಿಗೆ ಅರಿಯದ ಒಂದು ಪ್ರಜ್ಞೆ ಅಡಗಿದೆ. ಆ ಪ್ರಜ್ಞೆಯ ಮೂಲಕವೇ ಇಂತಹ ಕಾರ್ಯ ನಡೆಯುತ್ತದೆ. ಆ ಪ್ರಜ್ಞೆ ಎಂಬುದು ಸಮಾಜ, ಪರಿಸರ, ಬದುಕು ಇವುಗಳನ್ನೊಳಗೊಂಡಿರಬಹುದು. ಇಲ್ಲವೇ ಯೂಂಗ್ ಹೇಳಿದಂತೆ ಸಮಷ್ಠಿ ಸುಪ್ತ ಪ್ರಜ್ಞೆಯಾಗಿರಬಹುದು(collective conciousness). ಮನೋವಿಜ್ಞಾನಕ್ಕೆ ಸಾಹಿತ್ಯ ಸೃಷ್ಟಿಗೆ ಖಚಿತವಾದ ಕಾರಣಗಳನ್ನು ಕೊಡಲು ಸಾಧ್ಯವಾಗಿಲ್ಲ. ಸಾಹಿತ್ಯವನ್ನು ಸಂಪೂರ್ಣವಾಗಿ ವೈಜ್ಞಾನಿಕ ವಿವರಣೆಗೆ ಒಳಪಡಿಸುವುದು ಸಾಧ್ಯವಿಲ್ಲ. ಹಾಗಾದರೆ ಸಾಹಿತ್ಯದ ಪ್ರೇರಣೆಯ ಶಕ್ತಿ, ಸಾಮರ್ಥ್ಯಗಳು ಮತ್ತು ಅದು ಉಂಟುಮಾಡುವ ಪರಿಣಾಮದ ಸ್ವರೂಪ ಮುಂತಾದ ವಿಷಯಗಳನ್ನು ಒಂದು ಹೊಸ ದೃಷ್ಟಿಯಿಂದ ಚರ್ಚಿಸುವ ಅನಿವಾರ್ಯತೆ ಯಾದರೂ ಏಕೆ ಎಂಬ ಪ್ರಶ್ನೆಗೆ ಉತ್ತರವಾಗಿ ಮನೋವಿಜ್ಞಾನದ ಶಿಸ್ತು ನಮ್ಮ ಮುಂದೆ ಕಂಡುಬರುತ್ತದೆ.

ಯಾವುದೇ ಸಾಹಿತ್ಯ ರೂಪವಾಗಲಿ ಸಾಹಿತಿಯೊಡನೆಯೆ ಹುಟ್ಟುತ್ತದೆ. ಬೆಳೆಯುತ್ತದೆ ಮತ್ತು ರೂಪುಗೊಳ್ಳುತ್ತದೆ ಎಂದು ಸ್ವತಃ ಸಾಹಿತಿ ತಿಳಿದಿರಲಿ ಅಥವಾ ಆಲೋಚನೆಯೊಂದನ್ನು ತೆಗೆದುಕೊಂಡು ತಾನೇ ಅದನ್ನು ಶೂನ್ಯದಿಂದ ಉತ್ಪತ್ತಿ ಮಾಡುತ್ತೇನೆ ಎಂದು ಭಾವಿಸಲಿ – ಆ ಎರಡಕ್ಕೂ ಯಾವುದೇ ರೀತಿಯ ವ್ಯತ್ಯಾಸವಿರುವುದಿಲ್ಲ. ಏಕೆಂದರೆ ಸಾಹಿತ್ಯವು ಸಾಹಿತಿಯನ್ನು ಮೀರಿ ಬೆಳೆದಿರುತ್ತದೆ. ಸೃಜನಶೀಲ ಕ್ರಿಯೆಯೊಂದು ತನ್ನ ಸುತ್ತಮುತ್ತಲಿನಿಂದ, ತಾನು ಬದುಕಿರುವ ಕಾಲಘಟ್ಟದೊಂದಿಗೆ, ಭೂತದಿಂದ ಭವಿಷ್ಯದ ಚಿಂತನೆಯೊಂದಿಗೆ ಮಾತ್ರ ಮುಖಾಮುಖಿ ಆಗಲಾರದು. ಅವೆಲ್ಲವನ್ನು ಗ್ರಹಿಸುವ ಅದರ ಗ್ರಹಿಕೆಯ ಹಿಂದೆ ಸುಪ್ತ ಪ್ರಜ್ಞೆಯ ಆಳವಲಯವೊಂದಿದೆ ಅದು ಕ್ರಿಯಾತ್ಮಕ ಸಂಕಲ್ಪದ ವಿರುದ್ಧ ಆಳಲ್ಪಡುತ್ತದೆ ಮತ್ತು ರೂಪುಗೊಳ್ಳುತ್ತದೆ. ಪ್ರಜ್ಞಾಪೂರ್ವಕ ವಲಯ ಆತನ ಸ್ವಂತ ನಿಯಂತ್ರಣದಲ್ಲಿದ್ದರೆ ಅಪ್ರಜ್ಞಾಪೂರ್ವಕ ವಲಯವೊಂದು ನಿಯಂತ್ರಣದಾಚೆಗಿರುತ್ತದೆ. ಅದು ವ್ಯಕ್ತಿಯ ಮಾನಸಿಕ ಬೆಳವಣಿಗೆಯನ್ನು ನಿರ್ಣಯಿಸುತ್ತದೆ. ಆ ಕಾರಣದಿಂದಲೇ ಜಗತ್ತಿನಲ್ಲಿ ಇಷ್ಟೊಂದು ವೈವಿಧ್ಯಮಯ ಸಾಹಿತ್ಯ ಮತ್ತು ಕಲೆಗಳ ಸೃಷ್ಟಿ ಸಾಧ್ಯವಾಗಿರಬಹುದು. ಏಕೆಂದರೆ ಸಾಹಿತ್ಯ ಸೃಷ್ಟಿಗೆ ಇಂತಹುದೇ ಖಚಿತ ಕಾರಣಗಳಿಲ್ಲ ಮತ್ತು ಯಾವುದೋ ಒಂದು ಘಟನೆ, ಆಕಸ್ಮಿಕಗಳು ಕೂಡಾ ಮಹಾ ಸಾಹಿತ್ಯವೊಂದರ ಹುಟ್ಟಿಗೆ ಕಾರಣವಾಗಿ ಬಿಡುವುದು ನಮಗೆ ತಿಳಿದೇ ಇದೆ. ಇದಲ್ಲದೆಯು ವ್ಯಕ್ತಿ ಬದುಕುತ್ತಿರುವ ಪರಿಸರ, ಸಮಾಜ, ಅಲ್ಲಿನ ಪ್ರೇರಣೆಗಳು ಪ್ರಜ್ಞೆಗಳು ಕೂಡಾ ಸಾಹಿತ್ಯ ಸೃಷ್ಟಿಗೆ ಕಾರಣವಾಗಿರಬಹುದು. ಬರೆಯಲೇಬೇಕೆಂಬ ಹಂಬಲ, ಇಂತಹುದೇ ವಿಷಯವನ್ನು ಸಿದ್ದಮಾಡಿತೋರಿಸುವ, ದಾಖಲಿಸುವ ಉದ್ದೇಶದಿಂದಲೂ ಸಾಹಿತ್ಯ ರಚನೆಗೊಂಡಿದೆ. ಸಾಹಿತಿಯ ಪ್ರಜ್ಞೆಯಿಂದ ಮೂಡಿಬಂದ ಸಾಹಿತ್ಯದಲ್ಲಿ ಬಳಕೆಯಾದ ಅನೇಕ ಅಂಶಗಳು ಇತರರ ಪಾಲಿಗೆ ಅದೇ ಬಗೆಯ ಅರ್ಥವನ್ನು ಕೊಡಬಹುದು. ಕೊಡದೇ ಇರಬಹುದು. ಅದಕ್ಕೆ ಅವರವರ ಮನೋಧೋರಣೆಯೇ ಕಾರಣ. ಅರ್ಥಗ್ರಹಿಕೆಯು ಒಬ್ಬರಿಂದ ಇನ್ನೊಬ್ಬರಿಗೆ ಭಿನ್ನವಾಗಿರುತ್ತದೆ. ಇದನ್ನೆಲ್ಲಾ ಗಮನಿಸಿದಾಗ ಮನುಷ್ಯ ಮನಸ್ಸಿನ ನಿಗೂಢತೆಯ ಕುರಿತಾದ ಅರಿವಿನ ಕೊರತೆ ಕಂಡುಬರುತ್ತದೆ. ಸಹಜಪ್ರವೃತ್ತಿಯಾಗಿ ಬಾರದೆ ಕಲಿಕೆಯಿಂದ ಬಂದ ಅಭಿವ್ಯಕ್ತಿಯ ಹೊಸ ಹೊಸ ಅಸಂಖ್ಯಾತ ಘಟಕಗಳನ್ನು ಸೃಷ್ಟಿಮಾಡುವ ಸಾಧ್ಯತೆಯನ್ನು ಪಡೆದ ಮಾಧ್ಯಮ ಎನ್ನುವ ಅರ್ಥದಲ್ಲಿ ಸಾಹಿತ್ಯ ಮನುಷ್ಯನ ವಿಶಿಷ್ಟ ಸೃಷ್ಟಿ. ವ್ಯಕ್ತಿಯ ಮತ್ತು ಸಮುದಾಯದ, ಮಾನವ ವರ್ಗದ ಅನುಭವಗಳನ್ನು ಗ್ರಹಿಸಿ, ವ್ಯವಸ್ಥೆಗೊಳಿಸುವ, ದಾಖಲಿಸುವ ಪ್ರಯತ್ನದಲ್ಲಿ ತಾನು ಗ್ರಹಿಸಿದ ಅನುಭವಿಸಿದ, ಬದುಕಿದ, ಬದುಕಲಾಗಲಾರದ, ಪಡೆದುಕೊಳ್ಳಲಾರದ, ಊಹಿಸಿದ, ಕನಸು ಕಂಡರೂ ಸಾಕಾರಗೊಳ್ಳದ ಅನೇಕ ಅಂಶಗಳನ್ನು ಸಾಹಿತ್ಯದಲ್ಲಿ ತುಂಬಿದ. ಪಾತ್ರಗಳ ಮೂಲಕ, ಘಟನೆಗಳ ಮೂಲಕ ಚಿತ್ರಿಸಿದ, ಸಾಹಿತ್ಯ ವಿಶ್ಲೇಷಣೆಯ ಸಂದರ್ಭದಲ್ಲಿ ಇಂತಹ ಅಂಶಗಳ ನಡುವಿನ ಪರಸ್ಪರ ಸಂಬಂಧವನ್ನು ಸೈದ್ಧಾಂತಿಕವಾಗಿ ವಿಶ್ಲೇಷಣೆಯ ಕಾರ್ಯವನ್ನು ಮನಃಶಾಸ್ತ್ರ ಮಾಡಬಹುದು. 'ಸಾಹಿತ್ಯದ

ಅಧ್ಯಯನದಲ್ಲಿ ಇತರ ಶಿಸ್ತುಗಳ ಬಳಕೆ ಎಷ್ಟು ಲಾಭಕರ' ಎನ್ನುವುದೊಂದು ಕ್ಲಿಷ್ಟ ಪ್ರಶ್ನೆ. ಪ್ರತಿಯೊಂದು ಶಾಸ್ತ್ರವೂ ಮನುಷ್ಯನನ್ನು ಒಂದು ಪಕ್ಕದಿಂದ ಕಾಣುವಾಗ ಅವನ ಬದುಕಿನ ಸಂದರ್ಭದಲ್ಲಿ ಸಾಕ್ಷಾತ್ಕರಿಸಿಕೊಳ್ಳುವ ಸಾಹಿತ್ಯ ಕೃತಿಗೆ ಯಾವುದೇ ಶಾಸ್ತ್ರದ ಜ್ಞಾನವನ್ನು ಒಯ್ಯುವುದರಿಂದ ಪ್ರಯೋಜನ ಎಷ್ಟು ಎಂಬ ಪ್ರಶ್ನೆ ಇದೆ.

ಹ್ಯಾಮ್ಲೆಟ್ ತನ್ನ ಚಿಕ್ಕಪ್ಪನನ್ನು ಕೊಲ್ಲುವುದೇಕೆ ಎಂಬ ಪ್ರಶ್ನೆಗೆ ಆಧುನಿಕ ಮನಃಶಾಸ್ತ್ರದ ಉತ್ತರ ೩೫೦ ವರ್ಷಗಳ ಅನಂತರ ಬಂದಿತು. ಈ ೩೫೦ ವರ್ಷಗಳ ಅವಧಿಯಲ್ಲಿ ಈ ನಾಟಕವನ್ನು ಓದುಗರು ಪ್ರೇಕ್ಷಕರು ಗ್ರಹಿಸುತ್ತಿರಲಿಲ್ಲವೇ? ಈಗಲಾದರೂ ಈ ವಿವರಣೆ ಕೃತಿಯ ಮೇಲೆ, ನಮ್ಮ ಅನುಭವದ ಮೇಲೆ ಎಷ್ಟು ಪ್ರಭಾವ ಬೀರಿದೆ? ಹುಚ್ಚಿನ ಹೊಸ್ತಿಲಿನಲ್ಲಿರುವ ಅಥವಾ ಹುಚ್ಚಿಗೆ ತುತ್ತಾದ ಮನಸ್ಸುಗಳ ವ್ಯಾಪಾರವನ್ನು ಶೇಕ್ಸ್‌ಪಿಯರ್ ಚಿತ್ರಿಸಿರುವುದು ಎಷ್ಟು ಸಮರ್ಪಕವಾಗಿದೆ"[೧] ಎಂಬುದನ್ನು ಮನಶಾಸ್ತ್ರಜ್ಞರು ವಿವರಿಸಿದ್ದಾರೆ.

Dikena, ಕಾಫ್ಕ ದೋಸ್ತವಸ್ಕಿ, ನಥಾನಿಯಲ್ ಹಾತಾರ್ನ್ ಮೊದಲಾದವರ ಕೃತಿಗಳ ಕುರಿತಾದ ಮನಶಾಸ್ತ್ರೀಯ ಅಧ್ಯಯನಗಳು ಬಂದಿವೆ. ಕುವೆಂಪು ಅವರ ಮನಶಾಸ್ತ್ರೀಯ ಹೊಳಹುಗಳು ವಿಶ್ಲೇಷಣೆಯಾಗಿದೆ. ಹೀಗೆ ನಡೆದ ಕೆಲವು ಅಧ್ಯಯನಗಳು ಜ್ಞಾನದ ವಿವಿಧ ಶಾಖೆಗಳು ಒಂದರೊಡನೊಂದು ಹೆಣೆದುಕೊಂಡಿರುವುದನ್ನು ವಿಶ್ಲೇಷಿಸುತ್ತದೆಯೇ ವಿನಃ ಸಾಹಿತ್ಯ ಹಾಗೂ ಮನಶಾಸ್ತ್ರಗಳ ಸಂಬಂಧದ ವಿಸ್ತಾರ ಚರ್ಚೆಗೆ ಕೈ ಹಾಕುವುದಿಲ್ಲ. ಒಂದು ಸಮಾಜ, ಸಮುದಾಯ, ವರ್ಗ ಹೀಗೆ ಯಾವುದಾದರೊಂದರ ಅನುಭವಕ್ಕೆ ಹೊಸ ಆಯಾಮವನ್ನು ಸಾಹಿತ್ಯ ಮತ್ತು ಮನಃಶಾಸ್ತ್ರದ ಸಂಬಂಧವು ನೀಡುವುದಾದಲ್ಲಿ ಅದಕ್ಕೊಂದು ಅರ್ಥ ಉಂಟಾಗುವುದು. ಯಾವುದೋ ಒಂದು ಧೋರಣೆ, ನಂಬಿಕೆ, ಸೃಷ್ಟಿಕಾರ್ಯ ತಮ್ಮ ಇಚ್ಛಾಶಕ್ತಿಯನ್ನು, ಸಂಕಲ್ಪದ ಬಲವನ್ನು ಅವಲಂಬಿಸದೇ ಇರಲು ಸಾಧ್ಯವಿಲ್ಲ. ಇದನ್ನೇ ಯೂಂಗ್ "ಮಹಾಕಾವ್ಯದ ವಸ್ತು ಒಂದು ಜನಾಂಗದ ಚಿಂತನೆಗಳ ಸಂಯುಕ್ತ ಅಭಿವ್ಯಕ್ತಿ"[೨] ಎಂದಿದ್ದಾನೆ.

ಸಾಹಿತ್ಯ ರಚನೆ ಒಂದು ಸಂಕೀರ್ಣವಾದ ಮಾನಸಿಕ ಕ್ರಿಯೆ ಎಂಬುದು ಆಧುನಿಕ ಮನೋವಿಜ್ಞಾನಿಗಳ ಅಭಿಪ್ರಾಯ, ಏಕೆಂದರೆ ಮಾನವನ ಮನಸ್ಸು ಎಂಬುದು ಅನೇಕ ಭಾವನೆಗಳ, ಅನುಭವಗಳ ಅಂತರ್ಜಾಲ. ಹಾಗೆಯೇ ಮಾನವನ ಅನುಭವಗಳಿಗೆ ಕಾರಣಗಳು ಹಲವಾರು, ಒಬ್ಬೊಬ್ಬರ ಅನುಭವದ ಹುಟ್ಟಿಗೆ ಕಾರಣಗಳು ಬೇರೆ ಬೇರೆ. ಫ್ರಾಯ್ಡ್ ಹೇಳಿದಂತೆ ಸುಪ್ತ ಲೈಂಗಿಕ ಪ್ರವೃತ್ತಿಗಳಷ್ಟೆ ಸಾಹಿತ್ಯಕ್ಕೆ ಪ್ರೇರಣೆ ಎಂಬುದನ್ನು ಆಧುನಿಕ ಮನೋವಿಜ್ಞಾನಿಗಳು ಒಪ್ಪುವುದಿಲ್ಲ. ಸಾಹಿತ್ಯ ಮನಸ್ಸಿನ ತುಮುಲ ಅಥವಾ ಸಂಘರ್ಷಗಳ ಅಭಿವ್ಯಕ್ತಿ ಮಾತ್ರವಲ್ಲ. "ಬರಹದ ಮೂಲಕ ತನ್ನನ್ನು ತಾನು ಹೊರಸೂಸುವ ಬಯಕೆ, ಕಾರ್ಯರೂಪದಲ್ಲಿ ಪರಿಹರಿಸಿಕೊಳ್ಳಲಾಗದ ಜೀವನದ ಸಂದಿಗ್ಧಗಳು ಅಥವಾ ಆಂತರೀಕ ಸಂಘರ್ಷಗಳಿಂದ

ಉದ್ಭವಿಸುತ್ತದೆ"[14] ಎಂಬ ಫ್ರೆಂಚ್ ಬರಹಗಾರ ಆಂದ್ರೆ ಮಾರ್ವ (Andremaurqi)ನ ಅಭಿಪ್ರಾಯವನ್ನು ಆಧುನಿಕ ಮನೋವಿಜ್ಞಾನಿಗಳು ಒಪ್ಪುತ್ತಾರೆ. ಆದರೆ ಇಷ್ಟು ಮಾತ್ರ ಸಾಹಿತ್ಯ ರಚನೆಯ ಹಿಂದಿನ ಉದ್ದೇಶ ಎಂದರೆ ಮಾನವ ಮನಸ್ಸನ್ನು ಸಂಕುಚಿತಗೊಳಿಸಿ ನೋಡಿದಂತಾಗುತ್ತದೆ. ಉದ್ದೇಶವಿಲ್ಲದ ಸೃಷ್ಟಿ ಎಂಬುದಿಲ್ಲ. ಉದ್ದೇಶವು ಮನೋವಲಯಕ್ಕೆ ಸಂಬಂಧಿಸಿದ್ದು. ಈ ಉದ್ದೇಶವೇ ಕಥೆಗಳ ಬೆಳವಣಿಗೆಗಳು ಮತ್ತು ಅವುಗಳು ಪಡೆದುಕೊಳ್ಳುವ ತಿರುವುಗಳಿಗೆ ಕಾರಣವಾಗುತ್ತವೆ. ಘಟನೆಯ ತಿರುವುಗಳೇ ಮಹಾಕಾವ್ಯ ಅಥವಾ ಯಾವುದೇ ಪ್ರಕಾರದ ಸಾಹಿತ್ಯಗಳ ಬೆಳವಣಿಗೆಗೆ ಕಾರಣಗಳು. ಹಾಗಾದರೆ ಸಾಹಿತಿ ಏಕೆ ಕಥಾ ಬೆಳವಣಿಗೆಯಲ್ಲಿ ಪಾತ್ರಗಳ, ಘಟನೆಗಳ ಮೂಲಕ ಈ ರೀತಿಯ ತಿರುವುಗಳನ್ನು ತರುತ್ತಾನೆ. ಜೀವನಾನುಭವದ ಗಾಢತೆಗೆ ಅಗತ್ಯವಾದ ನೈತಿಕ ಪ್ರಜ್ಞೆಯನ್ನು ಹರಿತವಾಗಿಟ್ಟುಕೊಂಡಿರುವುದು, ನಿರಂಬಳವೂ ಧಾರಾಳವೂ ಆದ ತನ್ನ ಗ್ರಹಿಕೆ ಲೋಲುಪವಾಗದಂತೆ ಎಚ್ಚರವಾಗಿರುವುದು. ತಾನು ತಿಳಿದದ್ದನ್ನು ಕೃತಿಗೆ ಒದಗಿಸುತ್ತಿರುವಂತೆಯೇ ಕೃತಿಯಿಂದ ತಿಳಿದದ್ದನ್ನು ಹೆಚ್ಚುಪಡಿಸಿಕೊಳ್ಳಬಲ್ಲ ವಿನಯಶೀಲನೂ ಆಗಿರುವುದು. ಹಲವು ಶಾಸ್ತ್ರಗಳ ಜ್ಞಾನವನ್ನು ಔಚಿತ್ಯವರಿತು ಅನ್ವಯಿಸುವುದು. ಇವಿಷ್ಟೇ ಆಗಿದ್ದರೆ ಜಗತ್ತಿನಲ್ಲಿ ಇಷ್ಟೊಂದು ಸಾಹಿತ್ಯ ಪ್ರಕಾರಗಳು ಸೃಷ್ಟಿಯಾಗುತ್ತಿದ್ದವೆ.? ಸಾಹಿತಿ ತನ್ನ ಸಾಹಿತ್ಯದ ಮೂಲಕ ಆತ್ಮಾಭಿವ್ಯಕ್ತಿ ಮಾಡುತ್ತಾನೆ. ತನ್ನ ಅನುಭವಗಳನ್ನು ನೋವು ನಲಿವುಗಳನ್ನು, ಸಮಸ್ಯೆಗಳನ್ನು ಮನಸ್ಸಿನ ದುಗುಡಗಳನ್ನು ಸಾಹಿತ್ಯದ ಮೂಲಕ ಹೊರಹಾಕುತ್ತಾನೆ. ಸಾಹಿತ್ಯ ಅಂತರಂಗದ ಕ್ಷೋಭೆಗೆ ಚಿಕಿತ್ಸೆಯಾಗುತ್ತದೆ ಎಂಬಂತಹ ಸಾಹಿತ್ಯದ ಚಿಕಿತ್ಸಾಗುಣವನ್ನು ಮನೋವಿಜ್ಞಾನಿಗಳು ಒಪ್ಪುತ್ತಾರೆ. ಜಗತ್ತಿನಲ್ಲಿ ಹೆಸರನ್ನು ಬಿಟ್ಟು ಹೋಗುವ ಸಲುವಾಗಿ, ತಮ್ಮ ಕನಸುಗಳನ್ನು ಉಳಿದವರ ಮೇಲೆ ಸಾಹಿತ್ಯದ ಮೂಲಕ ಹೇರಬೇಕೆನ್ನುವ, ಸೃಷ್ಟಿಸುವ ಮೂಲಕ ಭೌತಿಕ, ಐತಿಹಾಸಿಕ, ಸಾಮಾಜಿಕ ಗ್ರಹಿಕೆಗಳಿಂದ ಮುಕ್ತನಾಗುವ ಸಲುವಾಗಿ, ಸತ್ಯದ ಹುಡುಕಾಟಕ್ಕಾಗಿ, ಸಾಹಿತ್ಯ ರಚನೆಯಾಗಿದ್ದೆ ಆದಲ್ಲಿ ವಯುಕ್ತಿಕ ನೆಲೆಯಲ್ಲಿ ನೈಜವಾದ, ಪ್ರಾಮಾಣಿಕವಾದ ದಾಟಿಯುಳ್ಳದ್ದಾಗಿ ಕಂಡುಬರುತ್ತದೆ. ಆದರೆ ಪ್ರತಿಯೊಂದು ಸೃಷ್ಟಿ ಕ್ರಿಯೆಯ ಹಿಂದಿರುವ ಮೂಲ ಅನುಭವ ಪ್ರಪಂಚ. ಅದರ ರಚನಾ ವಿನ್ಯಾಸ ಹಾಗೂ ವ್ಯಾಪಕವಾದ ವಾಸ್ತವ ಜಗತ್ತನ್ನು ತನ್ನ ಮಾನಸ ಪ್ರಭಾವಲಯಕ್ಕೆ ಒಳಗೊಳ್ಳುವ ವಯುಕ್ತಿಕ ವಲಯದ ಬಲ, ಅವುಗಳೆಲ್ಲವಕ್ಕೂ ಆಕಾರ ಕೊಡುವಲ್ಲಿನ ಸಾಹಿತಿಯ ಕಲಾವಿದ ಪ್ರಜ್ಞೆ ಎಲ್ಲವೂ ವ್ಯವಸ್ಥಿತವಾದ ಚೌಕಟ್ಟಿನಲ್ಲಿ ವ್ಯವಹರಿಸುವುದರಿಂದಲೇ ಕಥಾ ಬೆಳವಣಿಗೆಯಲ್ಲಿ ಪಾತ್ರಗಳ ವರ್ತನೆಗಳು ಪ್ರಭಾವ ಬೀರಲು ಸಾಧ್ಯವಾಗುವುದು.

ಪಾತ್ರದ ಮೂಲಕ ಒಂದು ಸಂದರ್ಭದಲ್ಲಿ ಉಂಟಾಗುವ ತಿರುವುಗಳೇ ಮುಂದಿನ ಕಥಾ ಬೆಳವಣಿಗೆಗೆ ಕಾರಣಗಳು. ಪಾತ್ರಗಳ ಮಾನಸಿಕ ವರ್ತನೆ ಉಂಟಾಗದೇ ಹೋದರೆ ಕಥಾ ಬೆಳವಣಿಗೆಗಳು ಉಂಟಾಗುವುದಿಲ್ಲ. ಈ ಬಗೆಯ ಮಾನಸಿಕ ವರ್ತನೆಗಳು ಕಥೆ ಮತ್ತು ಸಾಹಿತ್ಯಕ್ಕೆ ಸೀಮಿತ (Narrow) ಅರ್ಥವನ್ನು ಕೊಡದೆ ಸಂಕೀರ್ಣತೆಯನ್ನು ಪಡೆದುಕೊಳ್ಳುವಲ್ಲಿ

ಕಾರಣಗಳಾಗುತ್ತವೆ. ಪ್ರತಿಯೊಂದು ಪಾತ್ರದ ಒತ್ತಡಗಳು, ತಲ್ಲಣಗಳು ಬೇರೆ ಬೇರೆ ರೀತಿಯ ಪರಿಣಾಮವನ್ನು ಅನ್ಯ ಪಾತ್ರಗಳ, ಘಟನೆಗಳ ಮೇಲೆ ಬೀರುತ್ತವೆ ಮತ್ತು ಅದು ಬೇರೆಯೇ ತಿರುವನ್ನು ಪಡೆದುಕೊಳ್ಳುತ್ತವೆ. ಏಕೆಂದರೆ ಮಾನವ ಮನಸ್ಸಿನ ಸೃಷ್ಟಿಗಳು ಪ್ರಜ್ಞಾವಲಯದೊಳಗಿನಿಂದ ಬಂದಿಲ್ಲವೆಂಬುದು ಅತ್ಯಂತ ಅರ್ಥವತ್ತಾದುದು ಮತ್ತು ಅಷ್ಟೇ ಅಲಕ್ಷಿತವಾದ ಸಂಗತಿಯಾಗಿದೆ. ಕಥೆಗಳ ಬೆಳವಣಿಗೆಯಲ್ಲಿ ಪಾತ್ರಗಳ ವರ್ತನೆಗಳು, ಬೇರೆ ಬೇರೆ ಬಗೆಯ ಸಂದರ್ಭಗಳಲ್ಲಿ ಅಸಾಧಾರಣ ಪರಿವರ್ತನೆಯ ಮಜಲುಗಳನ್ನು ಕಾಣಬಹುದು. ಕೆಲವೊಮ್ಮೆ ಪಾತ್ರಗಳ ವಿಲಕ್ಷಣ ವರ್ತನೆಗಳು ಮತ್ತೊಂದು ರೀತಿಯಲ್ಲಿ ಕಥಾ ಬೆಳವಣಿಗೆಗಳಿಗೆ ಕಾರಣವಾಗಿರುವ ಸಂದರ್ಭಗಳು ಉಂಟು. ಕಥಾ ಸಂದರ್ಭವು ಪಾತ್ರಗಳಲ್ಲಾಗುವ ಅನೇಕ ಮಾನಸಿಕ ವರ್ತನೆಗಳು, ಕ್ರಿಯೆ, ಪ್ರತಿಕ್ರಿಯೆಗಳು, ಸಾಹಿತಿಯು ಅನುಭವವನ್ನು ಗ್ರಹಿಸುವ, ಅರ್ಥೈಸುವ ವಿಧಾನಗಳು ಕೇವಲ ಯಾವುದೋ ಅಧ್ಯಯನದ ಫಲವಾಗಿ ಮೈ ತಳೆದವಾಗಿರುವುದಿಲ್ಲ. ಸಾಹಿತಿಯನ್ನು ತೀವ್ರವಾಗಿ ಪ್ರಭಾವಿಸಿರಲು ಸಾಧ್ಯವಿರಬಹುದಾದ, ಅಂಶಗಳು ಕಲಾಸೃಷ್ಟಿಯ ಮೇಲೆ ಪರಿಣಾಮವನ್ನು ಉಂಟುಮಾಡುವ ಸಂದರ್ಭದಲ್ಲೂ ಸುಪ್ತ ಪ್ರಜ್ಞಾವಲಯದ ಪ್ರಭಾವವನ್ನು ಕಾಣಬಹುದು. ಪಿಯರೆ ಮ್ಯಾಶೆರೆ ಮನೋವೈಜ್ಞಾನಿಕ ನೆಲೆಯಿಂದ ಸಾಹಿತ್ಯ ಕೃತಿಯ ಸ್ವರೂಪವನ್ನು ಹೀಗೆ ವಿಶ್ಲೇಷಿಸುತ್ತಾನೆ. "ಪರಸ್ಪರ ಸಂಬಂಧವಿಲ್ಲದ ಭಿನ್ನ ಭಿನ್ನ ವಸ್ತುಗಳನ್ನು ಒಂದೆಡೆ ತರುವ ಮತ್ತು ಆ ಯತ್ನದಲ್ಲಿ ಅವುಗಳನ್ನು ಬದಲಾಯಿಸುವ ಒಂದು ತಯಾರಿಕೆ." (production) ಒಂದು ಕೃತಿ ನಿರ್ಮಾಣ-ಪೂರ್ವ ವಸ್ತುಗಳನ್ನು ಸಂಯೋಜಿಸುವಾಗ ತಾನೇನು ಮಾಡುತ್ತಿದ್ದೇನೆಂಬುದರ ಸಂಪೂರ್ಣ ಅರಿವು ಅದಕ್ಕಿರುವುದಿಲ್ಲ. ಎಂದರೆ ಮಾನವರಿಗಿರುವಂತೆ ಒಂದು ಕೃತಿಗೂ ತನ್ನದೇ ಆದ 'ಸುಪ್ತಪ್ರಜ್ಞೆ'ಯಿದೆ. ಅದರ ಪ್ರಭಾವದಿಂದ ಐಡಿಯಾಲಜಿ ಒಂದು ಕೃತಿಯ ಮೂಲಕ ಅಭಿವ್ಯಕ್ತಿಗೊಂಡಾಗ ಅದರಲ್ಲಿನ ಪೂರ್ವಾಗ್ರಹಗಳು ಮತ್ತು ವರ್ಗಾಸಕ್ತಿಗಳು, ಮಿತಿಗಳು ಮತ್ತು ಲೋಪಗಳು, ಬೆಳಕಿಗೆ ಬರುತ್ತವೆ. ಉದ್ದೇಶವಿಲ್ಲದ ಸೃಷ್ಟಿಯಿಲ್ಲ ಎಂಬುದಕ್ಕೆ ಸಾಹಿತ್ಯ ಕೃತಿಗಳಿಗೆ ಸಂವಾದಿಯಾಗುವ ಬೇರೆ ಯಾವ ಕ್ಷೇತ್ರವೂ ಇಲ್ಲ ಎಂದೇ ಹೇಳಬಹುದು. ಸಾಹಿತ್ಯ ಕೃತಿಯೊಂದು ತನ್ನ ಆಳವಾದ ಪ್ರಜ್ಞೆಯಲ್ಲಿ ವೈದಿಕ ಸಂಸ್ಕೃತಿಯ ಕಂದಾಚಾರವನ್ನು ಎತ್ತಿಹಿಡಿದಿರುವ ಕಾರಣಗಳಿಂದ ಅಂತಹ ಕೃತಿಗಳನ್ನು ಖಂಡಿಸಿರುವ ಉದಾಹರಣೆಗಳು, ಮಾರ್ಕ್ಸ್, ಎಂಗೆಲ್ಸ್ ಅವರ ಸಿದ್ಧಾಂತದ ಏಕಮುಖೀಯ ದೃಷ್ಟಿಕೋನದಿಂದ ರಚನೆಗೊಂಡಿರುವ ಕೃತಿಗಳ ಬಗೆಗೂ ಇದೇ ರೀತಿಯ ಪ್ರತಿಕ್ರಿಯೆ ಕಂಡುಬಂದಿದೆ.

ಕಥಾ ಬೆಳವಣಿಗೆಗಳು ಬಹುಸ್ತರದ ನೆಲೆಯಲ್ಲಿ ಅನೇಕ ಘಟನೆಗಳ ಸಂದರ್ಭಗಳ ಮೂಲಕ ತಿರುವನ್ನು ಪಡೆಯುತ್ತವೆ. ಪಾತ್ರಗಳ ಮಾನಸಿಕ ವರ್ತನೆಗಳು ವಾಸ್ತವಕ್ಕೆ ಸದಾ ಎಚ್ಚರವಾಗಿರದ ನೆಲೆಯಲ್ಲಿಯೇ ಬೆಳವಣಿಗೆಗೊಳ್ಳುತ್ತವೆ. ಓದುಗರಲ್ಲಿ ಮೂಡುವ ನಿರೀಕ್ಷೆಯನ್ನು

ಹುಸಿಯಾಗಿಸುವ, ದ್ವಂದ್ವ, ನಾಟಕೀಯತೆಗಳ ಮೂಲಕ ನಿರೂಪಿಸಲ್ಪಡುವ ಈ ಬಗೆಯ ತಂತ್ರಗಾರಿಕೆಯೇ ಮನೋವಿಶ್ಲೇಷಣೆಗೆ ಹೆಚ್ಚಿನ ಸುಳಿವನ್ನು ಒದಗಿಸುತ್ತದೆ. ಕಲೆ ಮತ್ತು ಸಾಹಿತ್ಯಗಳು ಕೇವಲ ಮಾನವನ ಸಾಂಸ್ಕೃತಿಕ ಜಗತ್ತಿಗೆ ಸಂಬಂಧಿಸಿದವುಗಳಲ್ಲ. ಕೇವಲ ಪ್ರಯೋಜನ ದೃಷ್ಟಿಯೊಂದಿಗೆ ನೋಡದೇ ಹೀಗೆ ವ್ಯಕ್ತಿಯ, ಕಾಲದ, ಆಯಾ ಪರಿಸರದ, ಸಮಾಜದ ಪ್ರಭಾವವು ಅವುಗಳೊಂದಿಗೆ ಮೇಳೈಸಿವೆ ಎಂಬುದು ಅಷ್ಟೇ ಮುಖ್ಯವಾಗುತ್ತದೆ. ಕಾಳಿದಾಸನ 'ಶಾಕುಂತಲ'ವನ್ನೇ ಉದಾಹರಣೆಗೆ ತೆಗೆದುಕೊಳ್ಳುವುದಾದರೆ ಲೋಕ ವ್ಯಕ್ತಿಯಾಗಿ ಶಕುಂತಲೆ ಯಾವುದೋ ಒಂದು ನಿರ್ದಿಷ್ಟ ಪ್ರದೇಶದಲ್ಲಿ, ನಿರ್ಧಿಷ್ಟ ಕಾಲದಲ್ಲಿ ಅಸ್ತಿತ್ವದಲ್ಲಿ ಇದ್ದಿರಬಹುದು ಅಥವ ಇಲ್ಲದಿರಬಹುದು. ಅದೇ ಶಕುಂತಲೆ ಕಲೆಯ ಜಗತ್ತಿಗೆ ಬಂದು ಒಂದು ಪಾತ್ರವಾಗಿ ಪರಿಣಮಿಸಿದಾಗ, ಎಲ್ಲಾ ಕಾಲಗಳಲ್ಲಿಯೂ, ಎಲ್ಲಾ ದೇಶಗಳಲ್ಲಿಯೂ ಇರುವ ಶಕುಂತಲೆಯರ ಪ್ರಾತಿನಿಧಿಕ ರೂಪವನ್ನು ಪಡೆದುಕೊಳ್ಳುತ್ತಾಳೆ. ಆದ್ದರಿಂದಲೇ ಶಾಕುಂತಲೆಯ ಪಾತ್ರವನ್ನು ಕಂಡು 'ಆ ಪಾತ್ರವು ನನಗೆ ಯಾವ ರೀತಿಯಲ್ಲೂ ಸಂಬಂಧ ಪಡುವ ವ್ಯಕ್ತಿಯೆ ಅಲ್ಲ' ಎಂದು ನಿರ್ಲಿಪ್ತರಾಗುವುದಿಲ್ಲ. ಈಕೆಯೇ ನಿಜವಾಗಿ ಶಕುಂತಲೆ; ನನಗೆ ವೈಯುಕ್ತಿಕವಾಗಿ ಸಂಬಂಧಪಟ್ಟವಳು ಎಂದು ಅನುರಕ್ತನಾಗುವುದೂ ಇಲ್ಲ. ಈ ಎರಡೂ ಅಲೆಗಳಿಂದ ಹೊರತಾದ ಒಂದು ಅಂತರ ಇಲ್ಲಿ ಕಂಡುಬರುತ್ತದೆ. ಪಾತ್ರಗಳ emotions, sentimental, ಆ ಮಾನಸಿಕ ಸಂಬಂಧಗಳು ಪ್ರಚೋದಿಸುವ, ಪ್ರೇರೇಪಿಸುವ, ಉದ್ದೀಪನಗೊಳಿಸುವ, ನಿಯಂತ್ರಿಸುವ ಮನಸ್ಸಿನ ಕ್ರಿಯೆಗಳ ಮೇಲೆ ಅವಲಂಬಿತವಾಗಿರುತ್ತವೆ. ಈ ನಿಟ್ಟಿನಲ್ಲಿ ದೈನಂದಿನ ಲೋಕಾನುಭವದಿಂದ ಕಲಾನುಭವವನ್ನು ಪ್ರತ್ಯೇಕಿಸಿ ನೋಡಲು ಬರುವುದಿಲ್ಲ. ನಮ್ಮ ಸುತ್ತಲಿನ ದಿನನಿತ್ಯದ ಆಗುಹೋಗುಗಳು ನಮ್ಮ ಮನಸ್ಸಿನ ಮೇಲೆ ಉಂಟುಮಾಡುವ ಪರಿಣಾಮದ ಬಗೆಗಳು ಅಸಂಖ್ಯ. ಅವು ಪ್ರತೀಕ್ಷಣವೂ ನಮ್ಮ ಮನಸ್ಸಿನಲ್ಲಿ ಒಂದಿಲ್ಲೊಂದು ಭಾವವನ್ನು ಎಬ್ಬಿಸುತ್ತಲೇ ಇರುತ್ತವೆ. ಆದರೆ ನಮ್ಮಲ್ಲಿ ಈ ಭಾವಗಳು ಉದ್ಭವವಾಗಲು ಕಾರಣವಾಗುವ ಸನ್ನಿವೇಶಗಳೇ ಕಥಾ ಬೆಳವಣಿಗೆಗೂ ಕಾರಣವಾಗುತ್ತವೆ. ಯಾವ ಸನ್ನಿವೇಶಗಳಲ್ಲಿ ನಾವು ನಮ್ಮ ವೈಯಕ್ತಿಕ ಒಲವು-ನಿಲುವುಗಳೊಂದಿಗೆ ಭಾಗವಹಿಸಲು ಸಾಧ್ಯವಾಗುತ್ತದೆಯೋ ಅಂತಹವು ಮಾತ್ರ ನಮ್ಮಲ್ಲಿ ಭಾವಗಳನ್ನು ಮೂಡಿಸುತ್ತವೆ ಮತ್ತು ಅಂತಹ ಭಾವನೆಗಳ ವ್ಯವಸ್ಥಿತ ಅಂತಃರ್ಜಾಲವು ಲೌಕಿಕತೆಯನ್ನು ಮೀರಿದ ಬೆಸುಗೆಯನ್ನು ಸಾಹಿತ್ಯ ಪಾತ್ರಗಳು ಮತ್ತು ಅದನ್ನು ಅಸ್ವಾದಿಸುವರ ನಡುವೆ ಬೆಸೆಯುತ್ತದೆ.

ಪಾತ್ರಗಳ ಮಾನಸಿಕ ವರ್ತನೆ ಉಂಟಾಗದೇ ಹೋದರೆ ಕಥಾ ಬೆಳವಣಿಗೆಗಳು ಉಂಟಾಗುವುದಿಲ್ಲ. ಮಹಾಭಾರತ ಕಥೆಯನ್ನು ಗಮನಿಸಿದಾಗ ವಾಸ್ತವವಾಗಿ ಎರಡು ರಾಜಮನೆತನದ ನಡುವೆ ಸಣ್ಣ ಜಗಳವೊಂದು ಪ್ರಾರಂಭವಾಯಿತು. ಕಿಡಿಯನ್ನು ಪ್ರಾರಂಭದಲ್ಲೇ ಆರಿಸದ ಪರಿಣಾಮ ಅದು ಬೆಂಕಿಯ ಜ್ವಾಲೆಯಾಗಿ ಪರಿಣಮಿಸಿತು. ಘನಘೋರ ಯುದ್ಧಕ್ಕೆ ಕಾರಣವಾಯಿತು.

ಪರಿಣಾಮ ಎರಡು ರಾಜಕುಟುಂಬಗಳು ದಾಯಾದಿಗಳಾಗಿ ಆ ಎರಡು ಶಕ್ತಿ ಕೇಂದ್ರಗಳು ನಾಶವಾಯಿತು. ಆ ಕದನದಲ್ಲಿ ಹರಿದ ರಕ್ತದ ಕೋಡಿ ಕೇವಲ ಎರಡು ರಾಜವಂಶಗಳನ್ನಷ್ಟೇ ನಾಶ ಮಾಡಲಿಲ್ಲ. ಬದಲಾಗಿ ವ್ಯಕ್ತಿಗಳ ನಡುವಣ ಉಂಟಾದ ಆಸ್ತಿತ್ವದ ಪ್ರತಿಷ್ಠೆಯಾಗದೇ ಮನಸ್ಸಿನ ವರ್ತನೆಗಳ ಪರಿಣಾಮ ಎಂದೇ ಹೇಳಬಹುದು. ಕೇವಲ ರಾಜ್ಯ ವ್ಯಾಮೋಹಕ್ಕಾಗಿ ಮಾತ್ರ ನಡೆದ ಯುದ್ಧವಲ್ಲ. ಎರಡು ಗುಂಪಿನ ನಡುವಣ ಉಂಟಾದ ತಾತ್ವಿಕ ಘರ್ಷಣೆಯೂ ಮಾತ್ರವಲ್ಲ. ದ್ರೌಪದಿಯು ದುರ್ಯೋಧನ ತನ್ನ ಸ್ವಯಂವರದಲ್ಲಿ ಅವಮಾನಿಸಿದ ಪ್ರಸಂಗವು ಮುಂದೆ ಅರ್ಜುನ ಮದುವೆಯಾಗಿ ಅದೇ ಅರಮನೆಗೆ ಬರುವ ದ್ರೌಪದಿಯ ಮೇಲಿನ ಸಿಟ್ಟು ಅರ್ಜುನನ ಕಡೆಗೆ ತಿರುಗುತ್ತದೆ. ಅದು ದ್ರೌಪದಿಯನ್ನು ತಾನು ಪಡೆಯಲಾಗಲಿಲ್ಲ ಎಂಬುದಕ್ಕಿಂತ ದ್ರೌಪದಿ ತನ್ನೆದುರಿಗೆ ಇರುವುದು ದುರ್ಯೋಧನನ ಅಹಂಗೆ (ego) ಪೆಟ್ಟನ್ನು ಕೊಟ್ಟಿರಬೇಕು. ಈ ಬಗೆಯ ದುರ್ಯೋಧನನ ಮಾನಸಿಕ ವರ್ತನೆಯ ಪರಿಣಾಮವೇ ಅಣ್ಣ ತಮ್ಮಂದಿರು ದಾಯಾದಿಗಳಾಗಬೇಕಾಯಿತು. ತಮ್ಮ ಪೂರ್ವಜರ ಘನತೆ-ಗೌರವ ಹಾಗೂ ಹಿರಿಮೆ-ಗರಿಮೆಗಳೆಲ್ಲವಕ್ಕಿಂತ ತಮ್ಮ ಪ್ರತಿಷ್ಠೆಯೆ ಮುಖ್ಯವಾಯಿತು. ಈ ಪ್ರತಿಷ್ಠೆ ಕೇವಲ 'ಅಹಂ'ಗೆ ಸಂಬಂಧಪಟ್ಟದ್ದು ಎಂಬಂತೆ ನೋಡಿದಲ್ಲಿ ಬಹುಶಃ ಅದರ ಹಿಂದಿನ ಮಹತ್ವವನ್ನು ಕಡೆಗಣಿಸಿದಂತಾಗಬಹುದು. ಬಹಳ ಆಳವಾದ ದೃಷ್ಟಿಕೋನವು ಇದರ ಹಿಂದಿರುವ ಮಾನಸಿಕ ಆಯಾಮಕ್ಕೆ ಸಂಬಂಧಿಸಿದಂತಹದ್ದು ಮತ್ತು ಯೂಂಗ್‌ನ ಸಾಮೂಹಿಕ ಸುಪ್ತಾವಸ್ಥೆಯ (collective unconscious) ವಿಶ್ವವ್ಯಾಪಿ ಸಂಕೇತಗಳಲ್ಲಿ ಗುರುತಿಸಬಹುದು.

ಸಾಹಿತ್ಯವು ಸ್ವಯಂ ತಾನು ಮತ್ತು ಓದುಗನಿಗೂ ಆತ್ಮಶೋಧನೆಯನ್ನು ಸಾಧ್ಯವಾಗಿಸುತ್ತಾ ಬದುಕಿನ ದುರಂತವನ್ನು ಹಾಗೂ ಭವ್ಯತೆಯನ್ನು ಅನುಭವಿಸುವ ಒಂದು ಅವಕಾಶವನ್ನು ಒದಗಿಸುತ್ತದೆ. ವಾಸ್ತವದಲ್ಲಿ ಈ ಅವಕಾಶ ಸಾಧ್ಯವಾಗದೇ ಇರಬಹುದು. ಈ ಕಾರಣವೇ ಕಥೆ ಅಥವಾ ಸಾಹಿತ್ಯದಲ್ಲಿ ಪಾತ್ರಗಳು, ಘಟನೆಗಳು, ಅನೇಕ ತಿರುವುಗಳನ್ನು ಪಡೆದು, ವಿವಿಧ ಆಯಾಮಗಳಾಗಿ, ಆಕಸ್ಮಿಕಗಳಾಗಿ ಬದಲಾವಣೆ ಹೊಂದುತ್ತವೆ. ಈ ರೀತಿಯ ತಿರುವುಗಳೇ ಕಥೆಯ, ಸಾಹಿತ್ಯದ ಜೀವಂತ ಶಿಲ್ಪಗಳು. ಏಕೆಂದರೆ ಕೇವಲ ಆಕಸ್ಮಿಕವಾಗಿ ಇವೆಲ್ಲಾ ಬರಹಗಾರನಲ್ಲಿ ಮೂಡುತ್ತದೆ ಎಂಬುದನ್ನು ಮನೋವಿಜ್ಞಾನ ಒಪ್ಪುವುದಿಲ್ಲ. ದೈನಂದಿನ ಜೀವನದಲ್ಲಿ ಪ್ರತಿ ಘಳಿಗೆಯಲ್ಲೂ ನಮ್ಮ ಅನುಭವಕ್ಕೆ ಬರುವ, ಬರುತ್ತಿರುವ ಈ ನಿರಂತರ ಬದಲಾವಣೆಗಳಿಗೆ ವಿವರಣೆ ನೀಡುವಂತಹ ಆ ಕಾರಣ, ಸಂಗತಿ ಯಾವುದು? ಮಾನವನ ಅನುಭವಗಳಿಗೆ ಕಾರಣಗಳು ಹಲವಾರು. ಯಾವುದೇ ಒಂದು ಅನುಭವ ಒಂದೇ ಕಾರಣದಿಂದ ಹುಟ್ಟಿಬರುವುದಿಲ್ಲ. ಹಾಗಾದರೆ ಒಂದೇ ಅನುಭವವು ಬೇರೆ ಬೇರೆ ವ್ಯಕ್ತಿಗಳಲ್ಲಿ ಬೇರೆ ಬೇರೆ ಕಾರಣಗಳಿಂದ ಹುಟ್ಟಲು ಕಾರಣವೇನು? ಫ್ರಾಯ್ಡ್ ಹೇಳಿದ ಸುಪ್ತ ಲೈಂಗಿಕ ಪ್ರವೃತ್ತಿಗಳಷ್ಟೇ ಸಾಹಿತ್ಯಕ್ಕೆ ಪ್ರೇರಣೆ

ಎಂಬ ಮಾತನ್ನು ಸಂಪೂರ್ಣವಾಗಿ ಆಧುನಿಕ ಮನೋವಿಜ್ಞಾನಿಗಳು ಒಪ್ಪುವುದಿಲ್ಲ. 'ಫ್ರಾಯ್ಡ್ ಪ್ರಕಾರ ಸಾಹಿತ್ಯಕ್ಕೆ ಪ್ರೇರಣೆ ಸುಪ್ತ ಲೈಂಗಿಕ ಬಯಕೆಗಳು, ಯೂಂಗ್‌ಗೆ ಅದು ಸುಪ್ತ ಮನಸ್ಸಿನ ಸಮಸ್ಯೆಗಳಷ್ಟೇ ಅಗಿದೆ. ಅವು ವ್ಯಕ್ತಿಯ ಆಂತರೀಕ ಸಮಸ್ಯೆಗಳಾಗಿರಬಹುದು ಅಥವಾ ವ್ಯಕ್ತಿಗಳ ನಡುವಣ ಸಮಸ್ಯೆಗಳಾಗಿರಬಹುದು. ಅವು ಪ್ರಜ್ಞಾತ್ಮಕವಾಗಿರಬಹುದು ಇಲ್ಲವೇ ಅಪ್ರಜ್ಞಾತ್ಮಕವಾಗಿರಬಹುದು. ಸಮಸ್ಯೆಗಳು ಲೈಂಗಿಕ, ಬೌದ್ಧಿಕ, ಧಾರ್ಮಿಕ, ಕೌಟುಂಬಿಕ, ಸಾಮಾಜಿಕ ಅಥವಾ ದಾರ್ಶನಿಕವಾಗಿರಬಹುದು. ಸಮಸ್ಯೆಗಳನ್ನು ಪರಿಹರಿಸಲು ಬೇರೆ ಬೇರೆ ವ್ಯಕ್ತಿಗಳು ಬೇರೆ ಬೇರೆ ಮಾರ್ಗವನ್ನವಲಂಬಿಸುತ್ತಾರೆ. ಕೆಲವರು ಸಾಹಿತ್ಯ ರಚನೆಯ ಮೂಲಕ ತಮ್ಮ ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತಾರೆ. ಅವರು ಸಾಹಿತಿಗಳಾಗುತ್ತಾರೆ. ಆದರೆ ಯಾವ ಸಾಹಿತಿಯೂ ತನ್ನ ಸಮಸ್ಯೆಗೆ ಪೂರ್ಣ ಪರಿಹಾರವನ್ನು ಕಂಡುಕೊಂಡಾಗ ಬರೆಯಲಾರ. ಅವನು ಹೇಳುವುದಿಲ್ಲ ತನಗೊಂದು ಸಮಸ್ಯೆ ಇದೆ. ಅದಕ್ಕೊಂದು ಪರಿಹಾರ ಅವಶ್ಯಕವೆಂದು. ಅಂದರೆ ಸಾಹಿತ್ಯ ಮನಸ್ಸಿನ ತುಮುಲ ಅಥವಾ ಸಂಘರ್ಷಗಳ ಅಭಿವ್ಯಕ್ತಿ"[೪]

ಮನೋವಿಜ್ಞಾನಿ ಹಾಗೂ ಕವಯಿತ್ರಿ ಹಾರೋವರ್‌ಳ (Horrower) ಮಾತುಗಳಲ್ಲಿ ಇದೇ ಅಭಿಪ್ರಾಯ ಪ್ರತಿಬಿಂಬಿತವಾಗಿದೆ. "I write poems because they solve a conflict because I am ill at ease spiritually and I want to clarify my thoughts and feelings. I write poems because of some inner chaos. I am driven to create order. I write poems because I am flooded. Overpowered by feelings which have been provoked by some aspect of life or nature. The great bulk of feeling can only be sudued or brought under control if I allow some intellectual craftsmanship to work on it to produce a manageable thought which I can control in the place of all pervading emotions which control me. (ಪದ್ಯರಚನೆ ತನ್ನ ಆಂತರೀಕ ಸಂಘರ್ಷಗಳನ್ನು ಪರಿಹರಿಸುತ್ತದೆ. ನನ್ನ ಅನಿಸಿಕೆಗಳು ಚಿಂತನೆಗಳನ್ನು ಸ್ಪಷ್ಟೀಕರಿಸುತ್ತದೆ. ನನ್ನ ಅಂತರಂಗದ ಗೊಂದಲವನ್ನು ಪರಿಹರಿಸಿ, ಅಲ್ಲಿ ಒಂದು ವ್ಯವಸ್ಥಿತ ಪರಿಸ್ಥಿತಿಯನ್ನುಂಟುಮಾಡುತ್ತದೆ. ಯಾವುದೋ ಒಂದು ಬಾಹ್ಯಪ್ರಚೋದನೆ ನನ್ನಲ್ಲಿ ಭಾವಗಳ ಮಹಾಪೂರವನ್ನುಂಟುಮಾಡಿ ನಾನು ಅವುಗಳ ಕೈವಶವಾದಾಗ ಪದ್ಯ ಬರೆಯುತ್ತೇನೆ. ಭಾವೋದ್ವೇಗಗಳನ್ನು ತಗ್ಗಿಸಿ ನಿಯಂತ್ರಣಕ್ಕೊಳಪಡಿಸಬೇಕಾದರೆ ನನಗೆ ಬರವಣಿಗೆಯಂತಹ ಬೌದ್ಧಿಕ ಕ್ರಿಯೆ ಅವಶ್ಯಕ. ಆಗ ಮಾತ್ರ ನನ್ನನ್ನು ನಿಯಂತ್ರಿಸ ಹೊರಟ್ಟಿದ್ದ ಚಿಂತನೆಗಳನ್ನು ನಾನು ನಿಯಂತ್ರಿಸಲು ಸಾಧ್ಯವಾಗುತ್ತದೆ."[೫] ಹಾರೊವರ್‌ಳ ಈ ಅಭಿಪ್ರಾಯವು ಪ್ರತಿಯೊಂದು ಸಾಹಿತ್ಯ ಕಲೆಯಂತಹ ಸೃಜನಶೀಲ ಕ್ರಿಯೆಗಳ ಹಿಂದಿರುವ ಅಪ್ರಜ್ಞಾಪೂರ್ವಕ ವರ್ತನೆಯನ್ನು ಪ್ರತಿಪಾದಿಸಲು ನೆರವಾಗಬಹುದು. ಸಾಹಿತಿ ತನ್ನ ಸಾಹಿತ್ಯದ ಮೂಲಕ ಅಂತರಂಗದ ಕ್ಷೋಭೆಯಿಂದ ಭಾವನೆಯಿಂದ ಮುಕ್ತಗೊಳ್ಳುವ ಪರಿಸರ, ಕಥೆಗಳು, ಪಾತ್ರಗಳು ಅವುಗಳ ಮಾನಸಿಕ ವರ್ತನೆಗಳಿಂದ ಉಂಟಾಗುವ ತಿರುವುಗಳ ಚಿತ್ರಣಕ್ಕೆ ಕಾರಣ ವಾಗುತ್ತದೆ.

ಉದಾಹರಣೆಗೆ ರಾಮಾಯಣದ ಕಥೆಯನ್ನೇ ತೆಗೆದುಕೊಳ್ಳೋಣ. ರಾಮಾಯಣದ ಕಥೆಯ ಉದ್ದೇಶ ರಾಮನ ಮಹತ್ವವನ್ನು ಪ್ರತಿಪಾದಿಸುವುದಾದರೂ ಆ ಪ್ರತಿಪಾದನೆಯನ್ನು ಅನೇಕ ಘಟನೆಗಳ, ಮೂಲಕ ಸಮರ್ಥಿಸಲಾಗುತ್ತದೆ. ರಾಮನಿಗೂ ಮಂಥರೆಗೂ ಯಾವುದೇ ರೀತಿಯ ಸಂಬಂಧವಿಲ್ಲದೇ ಹೋದರೂ ಕಥೆಯು ಮಹತ್ವದ ತಿರುವು ಪಡೆಯುವಲ್ಲಿ ಮಂಥರೆ ಪ್ರಮುಖ ಕಾರಣಳಾಗುತ್ತಾಳೆ. ಮಂಥರೆಯ ಮನಸ್ಸಿನ ಭಾವನೆಗಳು ಕೈಕೆಗೆ ಬದಲಾದ ನಂತರ ಆಕೆಯ ವರ್ತನೆ, ಕ್ರಿಯೆಗಳು ಬದಲಾಗಿ ಅದು ಕಥೆಯಲ್ಲಿ ಪ್ರಮುಖವಾದ ಬೆಳವಣಿಗೆಗೆ ಕಾರಣವಾಗುತ್ತದೆ. ಪಟ್ಟಾಭಿಷಕ್ತನಾಗಬೇಕಿದ್ದ ರಾಮ ಕಾಡಿಗೆ ಹೋಗುವ ಹಾಗಾಗುತ್ತದೆ. ಕಥೆಗಳಲ್ಲಿ ಈ ರೀತಿಯ ಘಟನೆಗಳ ಪಾತ್ರಗಳ ಸೃಷ್ಟಿಯ ಹಿಂದೆ, ಮನುಷ್ಯನ ಪ್ರಜ್ಞೆಯನ್ನು ನಿಯಂತ್ರಿಸಲಾಗದ ಸಂಕೇತವೊಂದಿದೆ. ತನ್ನ ಅನುಭವವನ್ನು ಎಷ್ಟರ ಮಟ್ಟಿಗೆ ತಲುಪಿಸಬಲ್ಲೆ ಎಂಬ ಆಲೋಚನೆಯು ಇಲ್ಲಿ ಕಾರ್ಯನಿರ್ವಹಿಸಿದಂತೆ ತೋರುವುದಿಲ್ಲ. ತನ್ನ ಸುತ್ತಮುತ್ತಲೂ ನಡೆಯುತ್ತಿರುವ ಬದಲಾವಣೆಗಳಿಗಿಂತ ಅದು ತನ್ನ ಮೇಲೆ ಉಂಟುಮಾಡುತ್ತಿರುವ ಪ್ರಭಾವ ಹಾಗೂ ಪರಿಣಾಮಗಳು. ಅದನ್ನು ಗ್ರಹಿಸಲು ಕಾರಣವಾದ ಸೂಕ್ಷ್ಮ ಸಂವೇದನಾಶೀಲ ಮನಸ್ಸು ಅದಕ್ಕೊಂದು ವ್ಯವಸ್ಥಿತ ರೂಪುಕೊಡಲು ಪ್ರಯತ್ನಿಸುತ್ತದೆ. ಆ ಸಂದರ್ಭದಲ್ಲಿ ಪ್ರಜ್ಞೆಯ ಸ್ಥಿತಿಯು ಮನುಷ್ಯನ ಅರಿವು ಮತ್ತು ಸುತ್ತಲಿನ ಇರುವಿಕೆಯನ್ನು ಮೀರಿ ಸ್ವತಂತ್ರ್ಯವಾದ ಅಸ್ತಿತ್ವವೊಂದನ್ನು ಪಡೆದುಕೊಳ್ಳುತ್ತದೆ. ವ್ಯಕ್ತಿಯನ್ನು ಒಳಗೊಂಡಂತೆ ಅವನ ಅಸ್ತಿತ್ವ ಮತ್ತು ಭಾವನೆ–ನೆನಪುಗಳು, ಗ್ರಹಿಕೆ ಮತ್ತು ಬಯಕೆಗಳ ಕೇಂದ್ರ, ಸುಪ್ತಪ್ರಜ್ಞೆಯಲ್ಲಿದ್ದುಕೊಂಡು ಕಾರ್ಯನಿರ್ವಹಿಸುತ್ತದೆ. ಆ ಕಾರಣವೇ ಇರಬೇಕು ಕೈಕೆಯ ಮನಸ್ಸಿನಲ್ಲಿ ರಾಮನನ್ನು ಕಾಡಿಗೆ ಕಳುಹಿಸುವ ಮತ್ತು ತನ್ನ ಮಗ ಭರತನಿಗೆ ಪಟ್ಟಾಭಿಷೇಕ ಮಾಡಬೇಕೆಂಬ ಯೋಚನೆ ಬರುವುದಿಲ್ಲ. ಮಂಥರೆಯ ಪಾತ್ರ ಸೃಷ್ಟಿಯು ರಾಮಾಯಣ ಕಥೆಗೆ ಅವಶ್ಯಕವಾಗಿತ್ತೇ? ಆಗಿದ್ದರೆ ಉದ್ದೇಶವಾದರೂ ಏಕಿರಬಹುದು? ಎಂದು ಯೋಚಿಸಿದಾಗ ರಾಮಾಯಣದ ಕಥೆ ಸರಳ ರೀತಿಯಲ್ಲಿ ಬೆಳವಣಿಗೆಯಾಗಿಲ್ಲ ಎಂದೆನಿಸುತ್ತದೆ. ಅದು ಅನೇಕ ಮಹತ್ತರ ಘಟನೆಗಳ ಮೂಲಕ ತಿರುವನ್ನು (Diviation) ಪಡೆದುಕೊಳ್ಳುತ್ತದೆ. ಮಂಥರೆಯ ಪಾತ್ರವನ್ನು ಇಲ್ಲಿ ಸಂಕೇತವಾಗಿ ಬಳಸಿಕೊಳ್ಳಲಾಗಿದೆ. ಮಂಥರೆಯನ್ನು ಕುರೂಪಿಯಾಗಿ, ಚಾಡಿಕೋರಳಾಗಿ ರಾಮಾಯಣ ಕಥೆಯು ಓದುಗರ ಮುಂದೆ ನಿಲ್ಲಿಸುತ್ತದೆ. ಮತ್ತು ಇಡೀ ರಾಮಾಯಣ ಕಥೆಯು ಊಹಿಸಲಾರದ ರೀತಿಯಲ್ಲಿ ತಿರುವು ಪಡೆದುಕೊಳ್ಳಲು ಮಂಥರೆ ಕಾರಣಳಾಗುತ್ತಾಳೆ. ಇಲ್ಲಿ ಮಂಥರೆಯ ಪಾತ್ರ ಬಾರದೇ ಇದ್ದಲ್ಲಿ ಕೈಕೆಯ ಕುರಿತಾಗಿ ಮೂಡಿಬರಬೇಕಾದ ಕೋಪ, ದ್ವೇಷ, ಅಸಹನೆಗಳೆಲ್ಲಾ ಬೇರೆಯೇ ರೀತಿಯ ಪ್ರಭುತ್ವದ ಕುರಿತಾದ ಅರ್ಥಕಲ್ಪನೆಗೆ ಅವಕಾಶವನ್ನು ಸೃಷ್ಟಿಸುತ್ತಿರಲಿಲ್ಲವೇ.? ಹಾಗಾಗಿಯೇ ಈ ಎಲ್ಲಾ ಭಾವನೆಗಳು ಮಂಥರೆಯ ಕಡೆಗೆ ತಿರುಗುವಂತೆ ಮಾಡಲು ಕಾರಣವಾಗಿರಬಹುದು ಎನಿಸಿದಲ್ಲಿ ಅದಕ್ಕೊಂದು ಉದ್ದೇಶ ಇರಲೇಬೇಕು. ಇಲ್ಲವೆಂದಾದಲ್ಲಿ ಸ್ವತಃ ಸೃಷ್ಟಿಕರ್ತನಾದ

ಸಾಹಿತಿಗೂ ಇದರ ಉದ್ದೇಶ ತಿಳಿದಿರಲು ಸಾಧ್ಯವಿಲ್ಲದಿರಬಹುದು. ಏಕೆಂದರೆ ಮಾನವನ ಆಸೆ–ಆಕಾಂಕ್ಷೆಗಳ ಬಯಕೆಗಳ ಅನುಭವಗಳ, ಧೋರಣೆಗಳ ಹಿನ್ನೆಲೆಯಲ್ಲಿರಬಹುದಾದ ಮಾನಸಿಕ ಶಕ್ತಿ ಅವನ ಸಕಲ ವರ್ತನಾ ವ್ಯವಹಾರಗಳಲ್ಲಿ ಉಪಯೋಗಗೊಳ್ಳುವಂತಹದ್ದು, ನಿರೂಪಿಸಲ್ಪಡುವಂತಹದ್ದು. ಈ ಬಗೆಯ ಶಕ್ತಿಯನ್ನು ವಿವರಿಸುವುದು ಕಷ್ಟ. ಆದರೆ ಇದರ ಅಭಿವ್ಯಕ್ತಿಯನ್ನು ಸಾಹಿತ್ಯಗಳಲ್ಲಿ ಓದುಗನ ಊಹೆಗೂ ಮೀರಿದ, ಕೆಲವೊಮ್ಮೆ ಅನುಭವವನ್ನು ಮೀರಿದ ಪಾತ್ರಗಳ ಸೃಷ್ಟಿಯ ಹಿಂದೆ ಗುರುತಿಸಬಹುದು. ವ್ಯಕ್ತಿಯ ಬಯಕೆ ಪ್ರೇರಣೆ, ಸಂಕಲ್ಪ, ಸಂವೇಗ, ಧೋರಣೆ, ಅಭಿಪ್ರಾಯಗಳು ಮುಂತಾದ ಮಾನಸಿಕ ಕ್ರಿಯೆಗಳ ರೂಪ ತಳೆಯುತ್ತದೆ ಮತ್ತು ಪರೋಕ್ಷವಾಗಿ ಸುಪ್ತವಾಗಿ ಉಳಿದಿದ್ದು ಪಾತ್ರಗಳ ಮೂಲಕ ಕಾರ್ಯಸಿದ್ಧತೆ (Readiness to act), ಕಾರ್ಯಸಾಧ್ಯತೆ (possibility of action) ಮತ್ತು ಅಭಿವ್ಯಕ್ತಿಗಳ (attitude) ರೂಪ ತಳೆಯುತ್ತದೆ.

೧೯೬೮ರಲ್ಲಿ ಮೊದಲ ಮುದ್ರಣ ಕಂಡ 'ಮೂಕಜ್ಜಿಯ ಕನಸುಗಳು' ಕಾರಂತರ ಇತರ ಕಾದಂಬರಿಗಳಿಗಿಂತ ಮನೋವಿಶ್ಲೇಷಣೆಗೆ ತನ್ನನ್ನು ತಾನು ಆಹ್ವಾನಿಸುತ್ತದೆ. ಈ ಕಾದಂಬರಿಗೆ ಕಥಾನಾಯಕನಿಲ್ಲ, ನಾಯಕಿಯಿಲ್ಲ. ಮೂಕಜ್ಜಿಯೂ ಇಲ್ಲಿ ನಾಯಕಿಯಲ್ಲ ಎಂದು ಸ್ವತಃ ಕಾರಂತರು ಹೇಳಿರುವುದು ಇನ್ನೂ ಹೆಚ್ಚಿನ ಕುತೂಹಲವನ್ನು ಮೂಡಿಸುತ್ತದೆ. ಕಾದಂಬರಿಯ ಮುಖ್ಯ ವಸ್ತು ಕಥಾಮೀಮಾಂಸೆಯೇ ಆಗಿದೆ. ಈ ಕಾದಂಬರಿಯಲ್ಲಿ ಮತ್ತೆ ಮತ್ತೆ ಪ್ರಸ್ತಾಪಿಸಲ್ಪಡುವ ಪ್ರಶ್ನೆಗಳನ್ನು ಗಮನಿಸಬಹುದು. ಮೂಲಭೂತವಾಗಿ ಕಥೆ ಎಂದರೇನು? ಅದು ವಸ್ತುಸ್ಥಿತಿಯ ಯಥಾವತ್ ನಿರೂಪಣೆಯೋ ಅಥವಾ ಬರಿ ಕಲ್ಪನೆಯೋ? ಕತೆ ಎಂದರೆ ನಡೆದದ್ದೊ ಅಥವಾ ನಿಜ ಜೀವನದಲ್ಲಿ ಎಂದಿಗೂ ನಡೆಯಲಾರದಂತಹುದೋ? ಅವಾಸ್ತವಿಕ, ಅಸಂಭವ ಎನ್ನಿಸುವಂಥ ಕತೆಗಳೂ ಕೆಲವೊಮ್ಮೆ ನಮಗೆ ಇಷ್ಟವಾಗುತ್ತದೆ ಕಾರಣವೇನು? ಊಹಿಸಿ, ಕಲ್ಪಿಸಿ ಕಟ್ಟಿದ ಕಥೆಗಿಂತ ಸುತ್ತಲ ಬದುಕಿನ ವಿದ್ಯಮಾನಗಳೇ ಹೆಚ್ಚು ಇಷ್ಟವಾಗುತ್ತವೆಯೇ? ಕಥೆ ಯಾವುದೋ ಒಂದು ನಿರ್ದಿಷ್ಟ ಉದ್ದೇಶದಿಂದ ಸೃಷ್ಟಿಸಲ್ಪಡುತ್ತದೆ ಮತ್ತು ಆ ಉದ್ದೇಶದ ಸಾಕಾರಕ್ಕಾಗಿ ಪಾತ್ರಗಳು, ಅವುಗಳ ವ್ಯವಹಾರಗಳ ಕಾರಣಗಳು, ಆ ಘಟನೆಗಳಿಂದ ಕಥೆಯು ಪಡೆದುಕೊಳ್ಳುವ ಮಹತ್ತರ ತಿರುವುಗಳು, ಆ ಮೂಲಕ ಕಥೆಯು ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುತ್ತದೆ.

"ಕೃತಿಕಾರ ವಾಸ್ತವಿಕತೆಯನ್ನು ಗ್ರಹಿಸುತ್ತಿರುವಂತೆ ಕಾಣಿಸುತ್ತಿದ್ದರೂ, ವಾಸ್ತವಿಕತೆ ಅವನ ದೃಷ್ಟಿಕೋನದ ರೀತಿಯಲ್ಲಿಯೇ ಜೋಡಿಸಿಕೊಳ್ಳುತ್ತಿರುತ್ತದೆ. ಆದರೆ ತಾನು ಚಿತ್ರಿಸುವ ಜಗತ್ತನ್ನು ಅದು ಹೇಗಿದೆಯೋ ಹಾಗೆ, ತನ್ನ ವಯುಕ್ತಿಕ ಇಷ್ಟಾನಿಷ್ಟಗಳಿಂದ ಪ್ರಭಾವಿತವಾಗದಂತೆ, ನೈತಿಕ ಅಥವಾ ಬೇರಾವುದೇ ಕಟ್ಟುಪಾಡುಗಳಿಂದ ನಿಯಂತ್ರಿತವಾಗದಂತೆ ಚಿತ್ರಿಸುವುದು ಯಾವುದೇ ವಾಸ್ತವತಾವಾದಿಯ ಮೂಲಭೂತ ಉದ್ದೇಶ".[೬]

"ಸಂಪೂರ್ಣ ವಾಸ್ತವತೆಯನ್ನೇ ಒಬ್ಬ ಕೃತಿಕಾರ ಚಿತ್ರಿಸಿದರೂ, ವಾಸ್ತವತೆ, ಕಂಡದ್ದನ್ನು ಕಂಡ ಹಾಗೆ ಚಿತ್ರಿಸಿದರೂ, ಆತನ ಚಿತ್ರಣ, ವಸ್ತುವಿನ ಯಥಾವತ್ತಾದ ಪ್ರತಿಬಿಂಬವಾಗಿರದೆ ಲೇಖಕನ ವ್ಯಕ್ತಿತ್ವದ ಮೂಲಕ ಹಾಯ್ದು ಬಂದಿರುತ್ತದೆ."[೭]

ಕಥೆ ಬೆಳವಣಿಗೆ ಎಂಬುದು ಕೂಡಾ ಲೇಖಕನ ವ್ಯಕ್ತಿತ್ವದ, ಮನೋಭಾವದ, ಜಗತ್ತನ್ನು ಆಧರಿಸಿಯೇ ನಡೆಯುತ್ತದೆ. ಜಗತ್ತನ್ನು ನೋಡುವ ವಿಶಿಷ್ಟ, ವಿಭಿನ್ನ ಕ್ರಮವು ಮೇಲ್ನೋಟದ ಗ್ರಹಿಕೆಗೆ ನಿಲುಕುವುದಿಲ್ಲ. ಕೃತಿಯು ಒಳಗೊಳ್ಳುವ ಅಂಶಗಳು, ಪಾತ್ರಗಳು, ಘಟನೆಗಳು, ಮತ್ತು ಪರಸ್ಪರ ಅವುಗಳ ನಡುವೆ ಇರುವ ಕೊಡುಕೊಳ್ಳುವ ಸಂಬಂಧಗಳು ಸೃಜನಶೀಲ ಮನಸ್ಸುಗಳು ಅನ್ವೇಷಿಸುತ್ತಿರುವ ಅಥವಾ ರೂಪಿಸುತ್ತಿರುವ ಅಥವಾ ವಾಸ್ತವದಲ್ಲಿ ಅಸಂಭವನೀಯ ಎನಿಸುವ ಅನೇಕ ಚಿಂತನೆಗಳ ಫಲವೇ ಆಗಿರುತ್ತದೆ. ಎಷ್ಟೋ ಸಲ ಮಾತಿನಲ್ಲಿ ಆಡಿ ತೋರಿಸಲಾಗದ ವಿಚಾರಗಳು ಪಾತ್ರಗಳ ಬಾಯಲ್ಲಿ ಬಂದು ಮನಸ್ಸು ನಿರಾಳವಾಗುತ್ತದೆ.

ಜಗತ್ತನ್ನು ಗ್ರಹಿಸುವ ಹಾಗೂ ಆಯ್ಕೆ ಮಾಡುವ ಜೀವನದೃಷ್ಟಿಯು ಮಾನವನ ಇತರ ವರ್ತನಾಭಿವ್ಯಕ್ತಿಗಳನ್ನು ಪ್ರಭಾವಿಸುತ್ತದೆ. ಇನ್ನು ಪ್ರತೀ ವ್ಯಕ್ತಿಯಲ್ಲೂ ಸಮತೋಲನವನ್ನು ಉಂಟುಮಾಡುವ ಸಹಜ ನಿಯಮ ಒಂದಿರುತ್ತದೆ. ಅದರ ಶಕ್ತಿ ವ್ಯಕ್ತಿತ್ವದ ವಿವಿಧ ಭಾಗಗಳಲ್ಲಿ ಸಮನಾಗಿ ಪೂರೈಕೆಗೊಂಡು ಸಂಪೂರ್ಣವಾಗಿ ಸಮತೋಲನ ಏರ್ಪಡುವ ಪರಿಸ್ಥಿತಿ ಕೇವಲ ಒಂದು ಆದರ್ಶ.

'ವಾಸ್ತವವಾಗಿ ಮನಸ್ಸಿನ ಏರುಪೇರುಗಳಿಂದ ತಪ್ಪಿಸಿಕೊಂಡು ಪೂರ್ಣ ಸಮತೋಲನ ಸ್ಥಿತಿಯೆಡೆಗೆ ಮುನ್ನಡೆಯುವುದೇ ಜೀವನದ ಪರಮ ಉದ್ದೇಶ' ಎನ್ನುತ್ತಾನೆ ಯೂಂಗ್.೮

ಕಥಾ ಬೆಳವಣಿಗೆಗೆ ಮತ್ತು ಮಾನಸಿಕ ಸ್ಥಿತಿಯನ್ನು ಮನಃಶಕ್ತಿಯ ಪ್ರವಾಹದ ಮೂಲಕ ವಿಶ್ಲೇಷಿಸಬಹುದು. ಮನಃ ಶಕ್ತಿಯ ಪ್ರವಾಹ ಎರಡು ಬಗೆಯದಾಗಿರುತ್ತದೆ. ಅದು ಮುಮ್ಮುಖವಾಗಿ ಹರಿಯಬಹುದು ಅಥವಾ ಹಿಮ್ಮುಖವಾಗಿ ಹರಿಯಬಹುದು. ಮುಮ್ಮುಖ ಚಲನೆಯನ್ನು ಪುರೋಗಮನ (Progression) ಎಂದೂ, ಹಿಮ್ಮುಖ ಚಲನೆಯನ್ನು ಪ್ರತಿಗಮನ (Regression) ಎಂದು ಕರೆದಿದ್ದಾನೆ ಯೂಂಗ್. ಈ ಚಲನೆಯನ್ನು ಸಮುದ್ರದ ಉಬ್ಬರವಿಳಿತಗಳಿಗೆ ಹೋಲಿಸಬಹುದು. ಶಕ್ತಿ ಮುಮ್ಮುಖವಾಗಿ ಹರಿಯುವಾಗ ಚೇತನ ಪ್ರಬಲವಾಗಿರುತ್ತದೆ. ಅಹಂ ಸ್ವಾಭಾವಿಕ ಜೈವಿಕ ಕ್ರಿಯೆಗಳಲ್ಲಿ ನಿರತವಾಗಿರುತ್ತದೆ. ವ್ಯಕ್ತಿ ತನ್ನ ಪರಿಸರಕ್ಕೆ ಹೊಂದಿಕೊಂಡು ಬಾಳುತ್ತಿರುತ್ತಾನೆ. ಆಂತರೀಕ ಬಯಕೆಗಳು ವಸ್ತುಸ್ಥಿತಿಯನ್ನನುಸರಿಸಿ ಪೂರೈಸಲ್ಪಡುತ್ತಿರುತ್ತವೆ. ವ್ಯಕ್ತಿತ್ವದ ವಿವಿಧ ಭಾಗಗಳ ನಡುವೆ ಬಿಕ್ಕಟ್ಟಿಲ್ಲದೆ ಸಮತೋಲನವೇರ್ಪಟ್ಟಿರುತ್ತದೆ. ಶಕ್ತಿಯ ಮುಮ್ಮುಖ ಚಲನೆಗೆ ಏನಾದರೂ ಅಡಚಣೆಯುಂಟಾದರೆ ಅದು ಹಿಮ್ಮುಖವಾಗಿ, ಸುಪ್ತಚೇತನದೆಡೆಗೆ ಹರಿಯಲು ಪ್ರಾರಂಭಿಸುತ್ತದೆ. ಪ್ರತಿಗಮನ ಮತ್ತು ಪುರೋಗಮನ ಕ್ರಿಯೆಗಳು ಸಹಜವಾಗಿ ಪರಸ್ಪರ ವಿರೋಧ ಕ್ರಿಯೆಗಳು. ಇವುಗಳಲ್ಲಿ ಉತ್ತಮ, ಅಧಮ ಎಂದು ವಿಭಾಗಿಸಲಾಗುವುದಿಲ್ಲ. ಮನಸ್ಸಿನ ಶಕ್ತಿ ಹರಿಯುವ ಎರಡು ಮಾರ್ಗಗಳಷ್ಟೆ. ಉದಾಹರಣೆಗೆ ಒಬ್ಬ ವ್ಯಕ್ತಿಗೆ ಹಸಿವಾಗಿದೆ ಎಂದುಕೊಳ್ಳಿ. ಆಗ ಅವನಲ್ಲಿ ಶಕ್ತಿಯ ಮುಮ್ಮುಖ ಪ್ರವಾಹ ಆರಂಭವಾಗುತ್ತದೆ. ಅವನು

ಪ್ರಜ್ಞಾತ್ಮಕವಾಗಿ ಆಹಾರವನ್ನು ಹುಡುಕುತ್ತಿರುತ್ತಾನೆ. ದುರದೃಷ್ಟವಶಾತ್ ಅವನಿಗೆ ಆಹಾರ ಸಿಕ್ಕುವುದಿಲ್ಲ. ಸಿಕ್ಕುವ ಸೂಚನೆಗಳೂ ಕಂಡುಬರುವುದಿಲ್ಲ. ಅವನ ಪ್ರಜ್ಞಾತ್ಮಕ ಚಟುವಟಿಕೆಗಳೆಲ್ಲಾ ವ್ಯರ್ಥವಾಗುತ್ತವೆ. ಅವನ ಚೇತನ ನಿಷ್ಕ್ರಿಯವಾಗುತ್ತದೆ. ಮನಃಶಕ್ತಿಯ ಮುಮ್ಮುಖ ಚಲನೆ ನಿಷ್ಪ್ರಯೋಜಕವಾಗುತ್ತದೆ. ಆದುದರಿಂದ ಅದು ಹಿಮ್ಮುಖವಾಗಿ ಹರಿಯಲು ಮೊದಲು ಮಾಡುತ್ತದೆ. ಆಗ ಸುಪ್ತಚೇತನ ಎಚ್ಚರಗೊಳ್ಳುತ್ತದೆ. ಅದು ಅವನೆದುರಿನಲ್ಲಿ ಆಹಾರದ ಒಂದು ಕಲ್ಪನೆಯ ಜಾಲವನ್ನೆ ನಿರ್ಮಿಸುತ್ತದೆ. ವ್ಯಕ್ತಿ ಯಾವುದೋ ಒಂದು ಪುಷ್ಕಳ ಔತಣ ಕೂಟದಲ್ಲಿ ಭಾಗವಹಿಸುತ್ತಿರುವಂತೆ ಭಾವಿಸಿಕೊಂಡು ತಾತ್ಕಾಲಿಕ ತೃಪ್ತಿ ಪಡೆಯುತ್ತಾನೆ. ಇಂತಹ ಮನಃಶಕ್ತಿಯ ಹಿಮ್ಮುಖ ಚಲನೆಯ ಪ್ರಕ್ರಿಯೆಯೇ ಕಥಾ ಬೆಳವಣಿಗೆಯಂತಹ ಕಾರ್ಯಗಳಲ್ಲಿ ಜರುಗುವುದು. ಹಿಮ್ಮುಖವಾಗಿ ಹರಿಯುವಾಗ ಸುಪ್ತಚೇತನವು ಎಚ್ಚರಗೊಳ್ಳುತ್ತದೆ. ಎಚ್ಚರಗೊಂಡ ಸುಪ್ತಚೇತನ ಅಹಂನ ಸಮಸ್ಯೆಗೆ ಉತ್ತರವನ್ನು ಒದಗಿಸಬಹುದು. ಸುಪ್ತಚೆತನ ಹಲವು ವಿಚಾರಗಳ, ಸ್ಮೃತಿಗಳ ಅದರಲ್ಲಿ ತಲತಲಾಂತರದ ವಿವೇಕ, ಜ್ಞಾನ, ವಿಚಾರಗಳು, ಧೋರಣೆಗಳು, ಮನೋಭಿಲಾಷೆಗಳು ಎಲ್ಲವೂ ಸಂಗ್ರಹಗೊಂಡಿರುತ್ತದೆ. ಆದುದರಿಂದ ಇವೆಲ್ಲವೂ ಸುಪ್ತಚೇತನದಿಂದ ಹಿಮ್ಮುಖವಾಗಿ ಹರಿದು, ಆ ಸಂಗ್ರಹದ ಸಂಪರ್ಕ ಪಡೆದು ತನ್ಮೂಲಕ ಸಮತೋಲನವನ್ನು ಏರ್ಪಡಿಸುವ ಕಾರ್ಯವು ಕಥಾ ಬೆಳವಣಿಗೆಯಲ್ಲಿ ಪಾತ್ರಗಳ ವರ್ತನೆಗಳು, ಘಟನೆಗಳು ಪಡೆದುಕೊಳ್ಳುವ ಊಹಿಸಲು ಅಸಾಧ್ಯವಾದ ತಿರುವುಗಳಿಗೂ ಕಾರಣವಾಗಿರಬಹುದು. ಸುಪ್ತಚೇತನದ ಮಹಾಪೂರದಲ್ಲಿ ಕೊಚ್ಚಿಹೋಗದ ರೀತಿಯಲ್ಲಿ ಇಲ್ಲಿ ಮನಸ್ಸಿನ ನಿರ್ವಹಣೆ ಸಾಧ್ಯವಾಗಿರುತ್ತದೆ. ವ್ಯಕ್ತಿತ್ವದ ಒಂದು ವಿಭಾಗದಿಂದ ಇನ್ನೊಂದು ವಿಭಾಗಕ್ಕೆ ಮತ್ತು ಈ ವರ್ಗಾವಣೆ ಕೆಲವು ನಿಯಮಗಳಿಗನುಸಾರವಾಗಿ ನಡೆಯುತ್ತದೆ ಎಂಬುದು ಮನೋವಿಜ್ಞಾನಿಗಳ ಅಭಿಪ್ರಾಯ. ಸಾಧಾರಣವಾಗಿ ಮನಃಶಕ್ತಿ ಸುಲಭವಾಗಿ ಒದಗುವುದು ಆತ್ಮಸಂರಕ್ಷಣಾ ಮತ್ತು ಸಂತತಿರಕ್ಷಣಾ ಕಾರ್ಯಗಳಿಗೆ ಎಂದು ಭಾವಿಸಲಾಗುತ್ತದೆ. ಆದರೆ "ಜೈವಿಕ ಕ್ರಿಯೆಗಳ ಮತ್ತು ಮೂಲ ಪ್ರವೃತ್ತಿಗಳ ನಿರ್ವಹಣೆಗಾಗಿ ಉಪಯೋಗವಾಗುತ್ತಿರುವ ಮನಃಶಕ್ತಿಯನ್ನು ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಹಿತ್ಯಕ ಕಾರ್ಯಗಳೆಡೆಗೆ ವರ್ಗಾಯಿಸುವುದು ಒಂದು ಬಹುಮುಖ್ಯ ಮಾನಸಿಕ ವ್ಯವಹಾರ. ಇದನ್ನು ಯೂಂಗ್ ಉದಾತ್ತೀಕರಣ (Sub-limation) ಎಂದು ಕರೆದಿದ್ದಾನೆ. ಹೆಣ್ಣಿನ ಪ್ರೇಮ ಪಾಶಕ್ಕೆ ಸಿಕ್ಕಿದ್ದ ಡಾಂಟೆ (Dante) ಅದು ಲಭಿಸದೇ ಹೋದಾಗ, ಅದೇ ಶಕ್ತಿಯನ್ನು ಮಹಾಕಾವ್ಯ ನಿರ್ಮಾಣಕ್ಕೆ ಉಪಯೋಗಿಸಿಕೊಂಡ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಕೆಲವು ವೇಳೆ ಕಾರಣಾಂತರಗಳಿಂದ ಮನಃಶಕ್ತಿ ಜೈವಿಕ ಕಾರ್ಯಗಳ ನಿರ್ವಹಣೆಗೂ ಉಪಯೋಗಿಸಲ್ಪಡದೇ, ಉದಾತ್ತೀಕರಣಕ್ಕೂ ಒಳಗಾಗದೇ ತಡೆಹಿಡಿಯಲ್ಪಡುತ್ತದೆ. ಇದು ದಮನ ಕ್ರಿಯೆ (Repression), ಈ ರೀತಿ ದಮನಗೊಂಡದ್ದೆಲ್ಲಾ ಒಂದಲ್ಲ ಒಂದು ವಿಧದಲ್ಲಿ ಹೊರಬರಬೇಕಾಗುತ್ತದೆ. ಹೀಗೆ ದಮನಕ್ಕೊಳಗಾದ ಅನೇಕ ಅಂಶಗಳು

ಸಾಹಿತ್ಯರೂಪದಲ್ಲಿ ಹೊರಹೊಮ್ಮುವ ಪ್ರಕ್ರಿಯೆಯೇ ಕಥಾ ಬೆಳವಣಿಗೆಯ ಅನೇಕ ಸಂದರ್ಭಗಳಲ್ಲಿ ನಡೆಯುವುದು.

ಬದುಕಿನಲ್ಲಿ ನಿತ್ಯ ನಮ್ಮ ಅನುಭವದ ಕಕ್ಷೆಗೆ ಬಂದು ಹೋಗುವ ಜನರು, ಸನ್ನಿವೇಶಗಳು ಸಾಮಾನ್ಯ ಗ್ರಹಿಕೆಯಲ್ಲಿ ಮಾತ್ರ ಉಳಿಯುವುದಾದಲ್ಲಿ ಸಾಹಿತ್ಯದಲ್ಲಿ ಅದಕ್ಕೆ ಪ್ರಸ್ತುತತೆ ಕಡಿಮೆಯೆ. ಆದರೆ ಆ ಗ್ರಹಿಕೆಗಳಲ್ಲಿನ ಭಾವನಾತ್ಮಕ, ನೈತಿಕ ಬಿಕ್ಕಟ್ಟುಗಳು, ಅಪರಿಹಾರತೆಯನ್ನು ಸೂಚಿಸುತ್ತಿದ್ದಲ್ಲಿ ಸಾಹಿತ್ಯದ ವಿನ್ಯಾಸಕ್ಕೊಂದು ಮಹತ್ವ ಬರುತ್ತದೆ. ಸಾಮಾಜಿಕ ಸಮಸ್ಯೆಗಳು ನೈತಿಕ ಅಥವಾ ತಾತ್ವಿಕ ಪ್ರತಿಪಾದನೆಗಳು ವ್ಯಕ್ತಿ–ವ್ಯಕ್ತಿಗಳ, ವ್ಯಕ್ತಿ–ಸಮಾಜದ, ವ್ಯಕ್ತಿ–ಸಿದ್ಧಾಂತಗಳ ನಡುವಿನ ಸಂಬಂಧಗಳು, ಸಂಘರ್ಷಗಳು ಒಂದಲ್ಲ ಒಂದು ರೀತಿಯಲ್ಲಿ ಕಥೆಗಳಲ್ಲಿ ಕಾಣಬಹುದು. ಎಲಿಯಟ್ ಹೇಳುವಂತೆ “ಒಂದು ಕೃತಿ ಸಾಹಿತ್ಯ, ಹೌದೋ ಅಲ್ಲವೋ ಎಂಬುದನ್ನು ಕೇವಲ ಸಾಹಿತ್ಯಕ ಮಾನದಂಡಗಳು–ಪಾತ್ರ ನಿರೂಪಣೆ, ಕಥಾ ಸಂವಿಧಾನ, ಭಾಷೆಯ ಉಪಯೋಗ, ತಾಂತ್ರಿಕ ಸಾಮಂಜಸ್ಯ ಇತ್ಯಾದಿ ಮಾತ್ರ ನಿರ್ಧರಿಸಬಲ್ಲವು. ಆದರೆ ಆ ಕೃತಿಯ ಹಿರಿಮೆಯನ್ನು ನಿರ್ಧರಿಸುವುದಕ್ಕೆ ಕೇವಲ ಸಾಹಿತ್ಯಕ ಮಾನದಂಡಗಳು ಸಾಕಾಗುವುದಿಲ್ಲ. ವೈಚಾರಿಕದಂತಹ ಅಸಾಹಿತ್ಯಕ ಮಾನದಂಡಗಳೂ ಬೇಕಾಗುತ್ತವೆ.” ಅನುಭವ ಹಾಗೂ ವೈಚಾರಿಕತೆಗಳು ಜೀವನದ ದೃಷ್ಟಿಯಿಂದ ಮಹತ್ವದ್ದೆನಿಸಬಹುದು. ಆದರೆ ಆ ಅನುಭವಗಳು ಹಾಗೂ ವೈಚಾರಿಕತೆಗಳು ವಿಭಿನ್ನವಾಗಿ, ವಿಶಿಷ್ಟವಾಗಿ, ಸಾಹಿತ್ಯಗಳಲ್ಲಿ ಮೂಡಿಬರುವುದರ ಹಿಂದಿನ ಮನೋವಲಯದ ಕಾರ್ಯತಂತ್ರವೇ ಇಲ್ಲಿ ವಿಶ್ಲೇಷಣೆಗೆ ಒಳಪಡಬೇಕಾಗುತ್ತದೆ. ಸಾಹಿತ್ಯದ ಸೃಷ್ಟಿಕ್ರಿಯೆಯು ಜಗತ್ತಿನ ನಿಯಮಗಳನ್ನು ಮೀರುವ ಕ್ರಮವೇ ಮಾನಸಿಕ ವ್ಯಾಪಾರ. ಮೂರ್ತ ಅನುಭವದಿಂದ ಪ್ರಾರಂಭವಾಗುವ ಸಾಹಿತ್ಯ ಕೃತಿಯು ಅಮೂರ್ತವಾದ, ಅಸಂಭವನೀಯವಾದ ವಿನ್ಯಾಸವನ್ನು ಸೃಷ್ಟಿಸುವುದು ಒಂದು ಮಾನಸಿಕ ಕ್ರಿಯೆಯೆ. ತಾನು ಕಂಡದ್ದು, ಕೇಳಿದ್ದು, ಅನುಭವಿಸಿದ, ಗ್ರಹಿಸಿದ ಹಾಗೂ ನಿರಾಕರಿಸಿದ ಎಲ್ಲಾ ಅಂಶಗಳು ಒಂದು ವ್ಯವಸ್ಥಿತ ಚೌಕಟ್ಟಿನಲ್ಲಿ ಸೇರಿಸುವ ನಿಟ್ಟಿನಲ್ಲಿ ಸಾಹಿತ್ಯದಂತಹ ಕ್ರಿಯೆಯಷ್ಟು ಸೂಕ್ತವಾದುದು ಯಾವುದು ಇಲ್ಲ.

‘ಮೂಕಜ್ಜಿಯ ಕನಸುಗಳು’ ಕಾದಂಬರಿಯಲ್ಲಿ ಕಾರಂತರು ಸ್ಥಾಪಿಸ ಹೊರಟಿದ್ದಾದರೂ ಏನು? ಕೇವಲ ತಮ್ಮ ವಿಚಾರಗಳ ಮುಖವಾಡವಾಗಿ ಮೂಕಜ್ಜಿಯ ಪಾತ್ರ ಸೃಷ್ಟಿಯಾಗಿದೆಯೇ? ಕಾದಂಬರಿಯಲ್ಲಿ ಮೂಕಜ್ಜಿಯನ್ನೇ ಕೇಂದ್ರ ಪಾತ್ರವಾಗಿ, ಕೇಂದ್ರ ಪ್ರಜ್ಞೆಯಾಗಿ ಅಥವಾ ಕೇಂದ್ರ ಬಿಂದುವಾಗಿ ನೋಡಿದಾಗ ಅನೇಕ ಪ್ರತಿಕ್ರಿಯೆಗಳು ಹುಟ್ಟುತ್ತವೆ ಎಂದೆನಿಸುತ್ತದೆ. ಬಹಳಷ್ಟು ವಿಮರ್ಶೆಗಳು ಮೂಕಜ್ಜಿಯ ಮಾತುಗಳನ್ನು ಕಾದಂಬರಿಯಲ್ಲಿ ಮೂಕಜ್ಜಿಯ ಮೂಲಕ ಪ್ರತಿಪಾದಿಸಲಾಗುತ್ತವೆ ಎಂದು ಹೇಳಲಾಗುವ ವಿಚಾರಗಳನ್ನಷ್ಟೇ ಗಣನೆಗೆ ತೆಗೆದುಕೊಂಡಿವೆ. ಹಾಗೆಯೇ ಕಾದಂಬರಿಯ ಕೇಂದ್ರ ಬಿಂದು ಮೂಕಜ್ಜಿಯಲ್ಲ. ಕಾದಂಬರಿಯ ಕೇಂದ್ರ ನೆಲೆಗಳನ್ನು

ಸುಬ್ರಾಯನ ನಿರೂಪಣೆಯಲ್ಲೇ ಅರಸಬೇಕು. ಏಕೆಂದರೆ ಕಾದಂಬರಿಯಲ್ಲಿ ಸೂಚಿತವಾಗುವ ಹಲವು ಜೀವನ ದೃಷ್ಟಿಗಳು ಮತ್ತು ಶೈಲಿಗಳು ಸಂಧಿಸುವ ನೆಲೆಯೆಂದರೆ ನಿರೂಪಕ ಸುಬ್ರಾಯನ ಪ್ರಜ್ಞೆಯೇ. ಮೂಕಜ್ಜಿ ಪ್ರತಿಪಾದಿಸುವುದು ಒಂದು ತೆರನ ಕಾಣ್ಕೆ ಮಾತ್ರ. ಈ ಕನಸುಗಳು ಸುಬ್ರಾಯನಿಗೆ ಏಕೆ ಮುಖ್ಯವೆಂದರೆ ಅವು ಅವನಿಗೆ ತನ್ನ ವರ್ತಮಾನ ಅನುಭವ, ಅವಲೋಕನಗಳಿಗೆ ಸ್ಥಾಯಿಯಾದ ಹಿನ್ನೆಲೆಯೊಂದನ್ನು ಒದಗಿಸುವುದು"[೧೦]

"ಕಾದಂಬರಿಯ ಎಲ್ಲ ಸಾರ ಇರುವುದು ಮೂಕಜ್ಜಿ ಹಾಗೂ ಆಕೆಯ ಕುತೂಹಲಭರಿತ ಮನಸ್ಸಿನ ಮೊಮ್ಮಗ ಸುಬ್ರಾಯನ ನಡುವಣ ದೀರ್ಘಸಂಭಾಷಣೆಗಳಲ್ಲಿ"[೧೧] ಎಂಬಂತಹ ಅಭಿಪ್ರಾಯಗಳನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ.

ಕಾದಂಬರಿಕಾರರಿಗೊಂದು ಮನೋಜಗತ್ತಿದೆ. ಹಾಗೆಯೇ ವಾಸ್ತವ ಜಗತ್ತಿನ ಅರಿವು ಇದೆ. ಇಲ್ಲಿ ಮೊದಲ ಮತ್ತು ಮೂರನೆಯ ತಲೆ ಮಾರನ್ನು ಪ್ರತಿನಿಧಿಸುವ ಮೂಕಜ್ಜಿ ಹಾಗೂ ಮೊಮ್ಮಗ ಸುಬ್ರಾಯನಿದ್ದಾನೆ. ಮೇಲ್ನೋಟಕ್ಕೆ ಅಥವಾ ಎಚ್ಚೆತ್ತ ವೈಚಾರಿಕ ಮನಸ್ಸಿಗೆ ಸೇರಿದಂತೆ ಅನಿಸಿದರೂ ಇಲ್ಲಿನ ಲೇಖಕರ ಸುಪ್ತಪ್ರಜ್ಞೆಯು ಸುಬ್ರಾಯನ ಮೂಲಕ ತಮ್ಮ ಮನಸ್ಸಿಗೆ ಅಂಟಿದ ಸಂಸ್ಕೃತಿ, ಕಲೆ, ವಿಜ್ಞಾನ, ಮಾನವಿಕ, ಭಾಷೆಯ ಒಟ್ಟು ವಿನ್ಯಾಸದಿಂದ ಕಳಚಿಕೊಳ್ಳುವ ಪ್ರಕ್ರಿಯೆಯಾಗಿಯೇ ಕಂಡುಬರುತ್ತದೆ. ಇಲ್ಲಿ ನಿರೂಪಕ ತನ್ನ ಕತೆಯ 'ಹಂಬಲ'ವನ್ನು ಓದುಗರಿಗೆ ಮನದಟ್ಟು ಮಾಡಿಸುವ ಪ್ರಸಂಗವನ್ನು ಗಮನಿಸಬಹುದು.

"ಇಷ್ಟೆಲ್ಲವನ್ನೂ ಹೇಳಿದ ಬಳಿಕವೂ ಒಂದಿಷ್ಟಾದರೂ ನನ್ನ ಕತೆಯ ಹಂಬಲ ಎಂತಹದು ಎಂಬುದು ನಿಮಗೆ ತಿಳಿಯುತ್ತದೆಯೋ, ಇಲ್ಲವೋ? ನನಗೆ ವಾಸ್ತವಿಕ ಜೀವನ ಅವಾಸ್ತವಿಕವಾಗಿಯೂ ಕಾಣಿಸುತ್ತದೆ. ಅವಾಸ್ತವಿಕತೆ ವಾಸ್ತವಿಕವಾಗಿಯೂ ಕಾಣಿಸುತ್ತದೆ. ಇವೆರಡರೊಳಗಣ ಮೇರೆ, ಅಂತರ, ಬಹಳ ಕಡಿಮೆ ಎನಿಸುತ್ತದೆ. ಸತ್ಯ, ಅಸತ್ಯಗಳ ಮೇರೆಯಷ್ಟೇ ಕಡಿಮೆ ಅಂತಹ ಅವುಗಳಲ್ಲಿ ಒಂದು ಇನ್ನೊಂದರ ಹಾಗೆಯೇ ಇರುತ್ತದೆ. ಒಂದು ಇನ್ನೊಂದಕ್ಕೆ ಸಮೀಪವಾಗಿರುತ್ತದೆ. ಈ ಸಮೀಪಸ್ಥ ವಸ್ತುಗಳ ನಡುವೆ ಎಷ್ಟೊಂದು ದೂರವಿದೆಯಲ್ಲ ಎಂಬ ಬೆರಗು ನನಗೆ ಉಂಟಾಗುತ್ತದೆ. ನನ್ನಲ್ಲಿ ಅನೇಕ ಸಮಸ್ಯೆಗಳನ್ನು ಕುರಿತಾದ ಬೆರಗು, ಅಂದಿನಿಂದ ಇಂದಿನ ತನಕವೂ ಚೆನ್ನಾಗಿ ಬಲಿತು ಬಂದಿದೆಯಾದರೆ ಅದಕ್ಕೆ ಕಾರಣಗಳು ನನ್ನ ಅಜ್ಜಿ. ಅವರ ಹಲವಾರು ಕನಸುಗಳು. ಅವಾವುವೂ ರಾತ್ರಿಯ ಕನಸುಗಳಲ್ಲ. ಯಾವುದೇ ಅಪೇಕ್ಷೆಯಿಂದ ಬೆಳೆಯಿಸಿಕೊಂಡ ಹಗಲುಗನಸುಗಳೂ ಅಲ್ಲ. ನನಗೂ ನಿಮಗೂ ಕಾಣಿಸದ, ಅವರಿಗಷ್ಟೇ ಕಾಣಿಸುತ್ತಿರುವ ವಿಚಿತ್ರ ತೆರನ ಕನಸುಗಳು. ಆ ಕನಸುಗಳನ್ನು ನಿಮ್ಮೊಡನೆ ಹಂಚಿ ಉಣ್ಣುವ.."[೧೧]

ಇಲ್ಲಿ ಕಥೆಯ ನಿರೂಪಕ ಕೇವಲ ಅಜ್ಜಿಯ ಕನಸುಗಳನ್ನಷ್ಟೇ ನಿರೂಪಿಸುವುದಿಲ್ಲ. ಇಲ್ಲಿನ ಕನಸುಗಳ ಅರ್ಥವಂತಿಕೆ ಕೇವಲ ಸುಬ್ರಾಯನ ಪ್ರಜ್ಞೆಗೆ ಮಾತ್ರ ಸೀಮಿತವಾಗದೇ ಅವನ ಸಮಕಾಲೀನರ ವರ್ತನೆಗಳ ವೈದೃಶ್ಯಗಳಲ್ಲಿ ವಿಸ್ತರಿಸುತ್ತದೆ. ಇಲ್ಲಿ ಮೂಕಜ್ಜಿ ನಿರೂಪಿಸುವ

ಕನಸುಗಳ ಬಗ್ಗೆ ನಿರೂಪಕನ ಕುತೂಹಲ ಇಷ್ಟೇ ಗಹನವಾದದ್ದು ಮತ್ತು ಆ ನಿರೂಪಣೆ ವಾಸ್ತವಕ್ಕೆ ಅತೀತವಾದದ್ದು ಎಂದು ಅವನಿಗೆ ಚೆನ್ನಾಗಿ ಗೊತ್ತು. ರೂಪಕ ವಾಸ್ತವೇತರ ಕತೆಗಳ ನಡುವಣ ಗುಣಾತ್ಮಕ ವ್ಯತ್ಯಾವನ್ನು ಸೂಕ್ಷ್ಮವಾಗಿ ಬಲ್ಲವನಾಗಿದ್ದಾನೆ. ಸುಬ್ರಾಯ ತನ್ನನ್ನು ವಾಸ್ತವವಾದಕ್ಕಾಗಲಿ, ವಾಸ್ತವೇತರ ನೆಲೆಗಳಿಗಾಗಲೀ ಸೀಮಿತಗೊಳಿಸಿಕೊಳ್ಳದೇ ಒಂದು ಇಡಿಯಾದ ಸಮಗ್ರತೆಗಾಗಿಯೇ ಹಂಬಲಿಸುತ್ತಾನೆ. ಇಲ್ಲಿ ಕಾದಂಬರಿಯ ಪಾತ್ರದ ನೆಲೆಯಿಂದ ಹೊರಜಗತ್ತನ್ನು ಸಮೀಕ್ಷಿಸಬಹುದು. ಕಾದಂಬರಿಯ ಸಹಜ ಪ್ರವೃತ್ತಿಗಳು ಮತ್ತು ಸುತ್ತಲಿನ ಜಗತ್ತಿನ ಸಂಘರ್ಷಗಳು ಅಂದರೆ ಜೀವನಾನುಭವಗಳು ಪಾತ್ರಗಳ ಮೂಲಕ ಸಂಕೇತ, ಪ್ರತೀಕಗಳ ಮೂಲಕ ಅಭಿವ್ಯಕ್ತಿಗೊಳ್ಳುತ್ತವೆ. ಪ್ರಕಟಿತ ವಿಷಯ ಅಥವಾ ಕನಸಿನ ಅನುಭವಿಸುವ ಕಲ್ಪನಾ ಘಟನಾವಳಿ, ಸಂಕ್ಷೇಪಣೆ (Condensation), ಸ್ಥಳಾಂತರೀಕರಣ (Displacement), ನಾಟಕೀಕರಣ (Dramatization) ಎನ್ನುವ ಸುಪ್ತಾವಸ್ಥೆ ಈ ಕಥೆಯಲ್ಲಿ ನಿಯಂತ್ರಿತ ಪ್ರಕ್ರಿಯೆಗಳ ಮೂಲಕ ರೂಪಿಸಲ್ಪಟ್ಟಂತೆ ತೋರುತ್ತದೆ. ಸಾಹಿತ್ಯಕ ಸೃಜನಾತ್ಮಕ ಕ್ರಿಯೆಯಲ್ಲಿ ಕಲ್ಪನೆಯು ಹೆಚ್ಚಿನ ಪಾತ್ರವಹಿಸಿ ಈ ಪ್ರಕ್ರಿಯೆಯಲ್ಲಿ ಸಾಮಾಜಿಕ ವಿಮರ್ಶಾತ್ಮಕ ಪ್ರಜ್ಞೆ (Critical social awareness) ಯೂ ಇದೆ. ಕಲ್ಪನೆಯೇ ಈ ಸಾಮಾಜಿಕ ವಿಮರ್ಶಾತ್ಮಕ ಪ್ರಜ್ಞೆಯಿಂದ ಪ್ರೇರಣೆ ಪಡೆದು ಒಂದು ವಾಸ್ತವದ ತರ್ಕವನ್ನು ಮೀರಿ ಹೊಸ ವಾಸ್ತವವನ್ನು ರೂಪಿಸಲು ಮತ್ತು ಹೊಸ ತರ್ಕವನ್ನು ಸೃಷ್ಟಿಸಲು ಈ ಕೃತಿ ಪ್ರಜ್ಞಾಪೂರ್ವಕವಾಗಿ ಶ್ರಮಿಸಿದೆ.

ಒಟ್ಟಾರೆ ಪಾತ್ರಗಳ ವರ್ತನೆಗಳು ಕಥಾ ಬೆಳವಣಿಗೆಗೆ ಪ್ರತ್ಯಕ್ಷವಾಗಿ ಹಾಗೂ ನೇರವಾಗಿ ಪ್ರಭಾವವನ್ನು ಬೀರುತ್ತವೆ ಎಂಬುದನ್ನು ಮೇಲ್ಕಂಡ ಕಥೆಗಳು, ಸಂದರ್ಭಗಳು ಸಾಕ್ಷಿಯಾಗುತ್ತವೆ. ಸೃಜನಶೀಲ ಕ್ರಿಯೆಯು ಸೃಷ್ಟಿಸುವ ಕ್ರಿಯೆಯ ಹಿಂದಿರುವ ಮಾನಸಿಕ ಹಾಗೂ ವರ್ತನಾತ್ಮಕ ಅಭಿವ್ಯಕ್ತಿಗೆ ವೇದಿಕೆಯಾಗುವ ಮೂಲಕ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳತ್ತದೆ ಎಂದು ಅನಿಸುತ್ತದೆ.

ಮಾನವ ಕುಲದ ಎಲ್ಲಾ ಅಸ್ತಿತ್ವವಾದಿ ಆತಂಕಗಳು, ತುಡಿತಗಳು ಹೊರಬರಲು ಆ ಮೂಲಕ ನಿರಾಳವಾಗಲು ಸದಾ ಹಾತೊರೆಯುತ್ತಿರುತ್ತವೆ. ಅಂತಹ ಹಾತೊರೆಯುವ ಮನುಷ್ಯನ ಅವಸ್ಥೆಯು ಅಂತರ್ಗತವಾಗಿರುವ ಮಾನಸಿಕ ಸ್ಥಿತಿಯನ್ನು ಬದಲಾಯಿಸಿಕೊಳ್ಳುವ, ಮಾರ್ಪಡಿಸಿಕೊಳ್ಳುವ ರೂಪಾಂತರಿಸಿಕೊಳ್ಳುವ ಪ್ರವೃತ್ತಿಯೊಂದನ್ನು ಸದಾ ಪ್ರೇರೇಪಿಸುವ, ಪ್ರಚೋದಿಸುವ ಕಾರ್ಯದಲ್ಲಿ ತೊಡಗಿರುತ್ತದೆ. ಕೆಲವೊಮ್ಮೆ ವ್ಯಕ್ತಿಯ ನಿಯಂತ್ರಣವನ್ನು, ಇಚ್ಛೆಯನ್ನು ಮೀರಿಯೂ ಇಂತಹ ಪ್ರವೃತ್ತಿಗಳು ನಡೆಯುತ್ತಿರುತ್ತವೆ. ಕಥಾ ರಚನೆಯಂತಹ ಸಂದರ್ಭಗಳಲ್ಲಿ ಇಂತಹ ಪ್ರವೃತ್ತಿಯನ್ನು ಅನೈಚ್ಛಿಕ ಅಭಿವ್ಯಕ್ತಿ ಸ್ವರೂಪವನ್ನು ಕಾಣಬಹುದಾಗಿದೆ.

ಉದ್ದೇಶವಿಲ್ಲದ ಯಾವುದೇ ಸೃಷ್ಟಿಯೂ ಜಗತ್ತಿನಲ್ಲಿ ಕಂಡುಬರುವುದಿಲ್ಲ. ಸಾಹಿತ್ಯ ಅಥವಾ ಕಥಾರಚನೆಯಂತಹ ಸೃಷ್ಟಿಕ್ರಿಯೆಗಳು ರಚನಾಕಾರನ ಯೋಚನೆಗಳ ಅಭಿವ್ಯಕ್ತಿ. ಯೋಚನೆಗಳು

ಆತನ ಬದುಕಿನ ಕುರಿತಾದ ಎಲ್ಲಾ ಬಗೆಯ ಅನಿಸಿಕೆಗಳಿಂದ ರೂಪುಗೊಂಡ ಆತನದೇ ಆದ ಮೌಲ್ಯವ್ಯವಸ್ಥೆಯ ಅಭಿವ್ಯಕ್ತಿ. ಈ ಯೋಚನೆಗಳು ವ್ಯಕ್ತಿಯ ನಂಬಿಕೆಗಳನ್ನು ಆಧರಿಸಿ ರೂಪುಗೊಂಡಿರುತ್ತವೆ. ನಂಬಿಕೆಗಳು ಶಕ್ತಿಶಾಲಿಯಾಗುವುದು, ಮಿತಿಗೊಳಗಾಗುವುದು, ಬದ್ಧತೆಯಿಂದ ಕೂಡಿರುವುದು. ಎಲ್ಲವೂ ವೈಯಕ್ತಿಕ ನೆಲೆಯಲ್ಲಿಯೇ ನಿರ್ಧರಿಸಲ್ಪಡುವಂತಹದು. ಬದುಕು ಹೋರಾಟವೆಂದೆನಿಸುವುದು, ಸಂಕಟ ಎಂದೆನಿಸುವುದು ಎಲ್ಲವೂ ಇಂತಹ ನೆಲೆಯಿಂದಲೇ ರೂಪುಗೊಳ್ಳುವ ಪ್ರಕ್ರಿಯೆ. ಮನುಷ್ಯನಲ್ಲಿರುವ ಶಾರೀರಿಕ, ಮಾನಸಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಕೇಂದ್ರಗಳಿಗೆ ತಮ್ಮದೇ ಆದ ಅವಶ್ಯಕತೆಗಳಿವೆ. ಅವುಗಳಲ್ಲಿ ಸಾಮರಸ್ಯವನ್ನು ಸಾಧಿಸದಿದ್ದರೆ ಸಂಘರ್ಷ ಉಂಟಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಆಂತರ್ಯದಲ್ಲಿ ಅನೇಕ ಭ್ರಾಮಕ ಸ್ವಚಿತ್ರಗಳಿರುತ್ತವೆ. ಅವು ಅವನ/ಳ ಸುತ್ತ ಕೋಟೆ ನಿರ್ಮಿಸಿರುತ್ತವೆ. ಅದರಿಂದ ಪ್ರತೀ ವ್ಯಕ್ತಿಯೂ ತಾನೇ ಬಿಡುಗಡೆ ಹೊಂದಬೇಕು. ಹಾಗೆ ಬಿಡುಗಡೆ ಹೊಂದಿದಾಗ ವ್ಯಕ್ತಿಯ ಸುಪ್ತಶಕ್ತಿಗಳ ಗರಿಷ್ಠ ಉಪಯೋಗ ಉಂಟಾಗುತ್ತದೆ. ಇಂತಹ ಸಂದರ್ಭಗಳಲ್ಲಿಯೇ ಸೃಜನಶೀಲ ಕ್ರಿಯೆಗಳ ಸೃಷ್ಟಿಯು ನಡೆಯುತ್ತದೆ.

ಪಾತ್ರಗಳ ಮಾನಸಿಕ ವರ್ತನೆಗಳು ಕಥಾ ಬೆಳವಣಿಗೆಗಳಿಗೆ ಕಾರಣವಾಗುವುದು ಮೇಲಿನ ಈ ನೆಲೆಯಲ್ಲಿಯೇ. ಪಾತ್ರಗಳ ಮಾನಸಿಕ ವರ್ತನೆಗಳು ಸಾಹಿತಿಯ ನಿರಂತರ ಭಾವನೆಗಳ ಗುಣಗಳಿಗನುಗುಣವಾಗಿ ಮಾರ್ಪಡುವ, ರೂಪುಗೊಳ್ಳುವ ಪ್ರಕ್ರಿಯೆಗಳ ಮೂಲಕ ನಿರ್ಧರಿಸಲ್ಪಡುತ್ತದೆ. ಮನಸ್ಸನ್ನು ದುರ್ಬಲಗೊಳಿಸುವ ಅನೇಕ ಸಂದರ್ಭಗಳಲ್ಲಿ ಶಕ್ತಿ ನೀಡುವ ಮಾನಸಿಕ ಕ್ರಿಯೆಯು ಸೃಜನಶೀಲ ಚಟುವಟಿಕೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವಂತೆ ವ್ಯಕ್ತಿಯನ್ನು ಪ್ರೇರೇಪಿಸುತ್ತದೆ. ಆ ಮೂಲಕ ಕಥೆಗಳು ರೂಪುಗೊಂಡು ಪರಿಹರಿಸಲು ಅಸಾಧ್ಯವಾದ ಅನೇಕ ಸುಪ್ತಬಯಕೆಗಳನ್ನು, ಆಶೋತ್ತರಗಳನ್ನು ಈಡೇರಿಸಿಕೊಳ್ಳುವ ಒಂದು ಜಗತ್ತು ಸೃಷ್ಟಿಯಾಗುತ್ತದೆ. ಹಾಗಾಗುವುದರಿಂದಲೇ ಭೂತ, ಭವಿಷ್ಯ, ವರ್ತಮಾನಕ್ಕೆ ಸಂವೇದನಾಶೀಲವಾಗುವ ಆಂತರೀಕ ವಿವೇಕವು ಪಾತ್ರಗಳ ವರ್ತನೆಗಳಲ್ಲಿ ಗುರುತಿಸಲು ಸಾಧ್ಯವಾಗುವುದು.

ಮನಸ್ಸು ಎಂಬುದು ಯೋಚನೆಗಳ ರಾಶಿ. ಯೋಚನೆಗಳು ಎಂದರೆ ಶಬ್ದಗಳು, ಚಿತ್ರಗಳು ಹಾಗೂ ಮನೋಲಹರಿಗಳು. ಈ ಆಂತರೀಕ ಶಬ್ದ, ಚಿತ್ರಗಳು ಸಕಾರಾತ್ಮಕ ಅಥವಾ ನಕಾರಾತ್ಮಕವಾಗಿರಬಹುದು. ಸಹಕಾರಿಯಾಗಿರಬಹುದು ಅಥವಾ ತೊಡಕಾಗಿರಬಹುದು. ಈ ಎಲ್ಲವೂಗಳಿಂದ ಬಿಡುಗಡೆ ಹೊಂದಲೇಬೇಕಾದ ಮನಸ್ಸಿನ ಅನಿವಾರ್ಯತೆಯೇ ಕಥೆಗಳಂತಹ ಸೃಜಶೀಲ ಕ್ರಿಯೆಗೆ ಕಾರಣವಾಗಿರುತ್ತದೆ. ಯಾವುದೇ ಪಾತ್ರ, ಘಟನೆ, ಸಂದರ್ಭ ಕೂಡ ಕಥೆಗೆ ಪ್ರೇರಣೆಯಾಗಿಬಿಡುವುದು ಏಕಿರಬಹುದು? ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡಿದಾಗ ಅದಕ್ಕೆ ಯಾವುದೋ ಒಂದು ಉದ್ದೇಶ ಇರಲೇಬೇಕಲ್ಲವೇ ಎಂದೆನಿಸುತ್ತದೆ. ಎಷ್ಟೋ ಘಟನೆಗಳಿಗೆ ಸಂದರ್ಭಗಳಿಗೆ ಪ್ರತಿನಿತ್ಯ ಮನುಷ್ಯ ಮುಖಾಮುಖಿಯಾಗುತ್ತಲೇ ಇರುತ್ತಾನೆ. ಕೆಲವರು ಆ ಘಟನೆಗಳು, ಸಂದರ್ಭಗಳು ದೈನಂದಿನ ಬದುಕಿನ ಸರ್ವೇಸಾಮಾನ್ಯ ಅಂಶಗಳೆಂದು ಪರಿಗಣಿಸುತ್ತಾರೆ. ಇನ್ನು ಕೆಲವರು ಅವುಗಳಿಗೆ ಮಹತ್ವವನ್ನು ನೀಡುತ್ತಾರೆ. ಇದಕ್ಕೆಲ್ಲಾ ವಯುಕ್ತಿಕ ನೆಲೆಯಲ್ಲಿಯೇ

ಕಾರಣ ಇರಬಹುದು. ಕಥಾಬೆಳವಣಿಗೆಯಂತಹ ಸಂದರ್ಭದಲ್ಲಿ ಪಾತ್ರಗಳು ಘಟನೆಗಳು, ಯಾವುದೋ ಒಂದು ಸಂದರ್ಭದಲ್ಲಿ ಅವು ಪಡೆದುಕೊಳ್ಳುವ ತಿರುವುಗಳು ಕಥಾವಸ್ತುವನ್ನು ಬೇರೆಡೆಗೆ ಕೊಂಡೊಯ್ಯುವ ಸಾಧ್ಯತೆಯನ್ನು ಗುರುತಿಸಬಹುದು. ಆಗ ಕಥೆಯ ದಿಸೆಯೇ ಬದಲಾಗಿಬಿಡುತ್ತದೆ. ಸಾಮಾನ್ಯವಾಗಿ ಪ್ರಾರಂಭದಲ್ಲಿ ಕಥೆ ಮೂಡಿಸುವ ಚಿತ್ರಣವು ಮುಂದಕ್ಕೆ ಸಾಗಿದಂತೆ ಸಂಪೂರ್ಣ ವಿಭಿನ್ನವಾಗಿರುತ್ತವೆ. ಕೆಲವೊಮ್ಮೆ ಊಹೆಗೂ ಮೀರಿದ ತಿರುವನ್ನು ಪಡೆದುಕೊಳ್ಳುತ್ತದೆ. ಒಂದು ಬಗೆಯ ಮಾನಸಿಕ ವ್ಯವಸ್ಥೆಯಿಂದ ರೂಪುಗೊಂಡಿರುವ ಮನಸ್ಸಿನ ಪರಿಯೇ ಇದಕ್ಕೆ ಕಾರಣವಾಗಿರಬಹುದು. ವಿಶ್ವಪ್ರಜ್ಞೆಗೆ ಸಂವೇದನಾ ಶೀಲವಾಗುವ ಹೆಚ್ಚು ಪ್ರಜ್ಞಾವಂತಿಕೆಯ ಮನಸ್ಸು ಅಂತಃಚೈತನ್ಯದ ಕೇಂದ್ರ ಜೀವನಕ್ಕೆ ಮಾರ್ಗದರ್ಶಿಯಾಗುವ ಸಂದರ್ಭಗಳಲ್ಲಿ ಇಂತಹ ಅಂಶಗಳನ್ನು ಗುರುತಿಸಬಹುದಾಗಿದೆ. ಭೌತಿಕ ಜಗತ್ತು ಕಾರ್ಯಕಾರಣ ನಿಯಮದಿಂದ ನಿಯಂತ್ರಿತಗೊಂಡಿರುವಂತೆ ಮಾನಸಿಕ ಜಗತ್ತಿನಲ್ಲೂ ಪ್ರತಿಯೊಂದು ವರ್ತನೆಯು ಕಾರ್ಯಕಾರಣ ಸಂಬಂಧವನ್ನು ಹೊಂದಿದ್ದು, ಪರಿಣಾಮವು ಕಾರಣದ ಫಲಿತಾಂಶವೇ ಆಗಿರುತ್ತದೆ.

ಈ ನಿಟ್ಟಿನಲ್ಲಿ ನೋಡುವುದಾದಲ್ಲಿ ಸಂಪೂರ್ಣವಾಗಿ ಕಥಾಬೆಳವಣಿಗೆಯಲ್ಲಿ ಪಾತ್ರಗಳ ಮಾನಸಿಕ ವರ್ತನೆಗಳ ಪ್ರಭಾವವು ವರ್ತನೆಗಳ ಹಿಂದಿರುವ ವಯಕ್ತಿಕ ಸುಪ್ರಪ್ರಜ್ಞೆ ಮತ್ತು ಸಂಕೀರ್ಣತೆಗಳಿಂದ ನಿರ್ಧರಿಸಲ್ಪಡುತ್ತವೆ ಎಂಬುದು ಸ್ಪಷ್ಟವಾಗುತ್ತದೆ. ಕಥೆ ಕೌಶಲ್ಯದಿಂದ ಹುಟ್ಟುತ್ತದೆ, ಪ್ರತಿಭೆಯಿಂದ ಜನ್ಮ ತಾಳುತ್ತದೆ ಎಂಬುದಕ್ಕಿಂತಲೂ ಬೇರೆಯದೇ ಆದ ಆಯಾಮವೊಂದನ್ನು ಕಥಾಬೆಳವಣಿಗೆಯಂತಹ ಸಂದರ್ಭಗಳಲ್ಲಿ ಗುರುತಿಸಬಹುದಾಗಿದೆ. ಅದೇ ಮಾನಸಿಕ ಸ್ಥಿತಿ. ಚೇತನದಿಂದ ಹೊರದೂಡಲ್ಪಟ್ಟ ಭಾವನೆಗಳು ವಯುಕ್ತಿಕ ಸುಪ್ತಚೇತನದಲ್ಲಿ ತಳ್ಳಲ್ಪಟ್ಟಿರುತ್ತವೆ. ಅಲ್ಲಿ ಅವು ನಿಷ್ಕ್ರಿಯವಾಗಿರದೆ ಜೀವಂತವಾಗಿ ಕ್ರಿಯಾಶೀಲವಾಗಿರುತ್ತವೆ. ಸಂವೇಗಪೂರ್ಣವಾಗಿರುತ್ತವೆ. ಒಂದೊಂದು ಸಮಯದಲ್ಲಿ ಒಂದು ಪ್ರಮುಖ ಭಾವನೆಯ ಸುತ್ತಲು ಉಳಿದೆಲ್ಲಾ ಭಾವನೆಗಳು ಸಮಾವೇಶಗೊಂಡು ಒಂದು ಶಕ್ತಿಯುತ ಕೇಂದ್ರವಾಗಿ ಪರಿಣಮಿಸುತ್ತವೆ. ಹೀಗೆ ವ್ಯವಸ್ಥೆಗೊಂಡ ಪ್ರವೃತ್ತಿಗಳ ಸಮೂಹವನ್ನೇ ಯೂಂಗ್ ಸಂಕೀರ್ಣಗಳೆಂದು ಕರೆದಿರುವುದು. "ಯಾವುದೇ ಸಂಕೀರ್ಣದ ಕೇಂದ್ರ ಭಾಗ ಒಂದು ನ್ಯೂಕ್ಲಿಯಸ್‌ನಂತಿದ್ದು ಇತರ ವಿವರಗಳನ್ನು ತನ್ನೆಡೆಗೆ ಎಳೆದುಕೊಳ್ಳುವ ಶಕ್ತಿಯನ್ನು ಹೊಂದಿರುತ್ತದೆ. ಈ ಕೇಂದ್ರವು ಶಕ್ತಿಯ ಆಗರ. ಒಂದು ತೆರನಾದ ಮಾನಸಿಕ ಅಯಸ್ಕಾಂತವಿದ್ದಂತೆ. ಸಂಕೀರ್ಣಗಳು ಸಂಪೂರ್ಣವಾಗಿ ಅಪ್ರಜ್ಞಾತ್ಮಕವಾಗಿರ ಬಹುದು. ಇಲ್ಲವೇ ಭಾಗಶಃ ಪ್ರಜ್ಞಾತ್ಮಕವಾಗಿರಬಹುದು. ಹೀಗಿದ್ದರೂ ಅವಕ್ಕೆ ಸ್ವತಂತ್ರ ಅಸ್ತಿತ್ವವಿದ್ದು ವ್ಯಕ್ತಿಯ ವರ್ತನೆಯ ಮೇಲೆ ನಿಶ್ಚಿತವಾದ ಪ್ರಭಾವವನ್ನು ಬೀರಬಲ್ಲವು"[೨]

ಕಥಾ ಬೆಳವಣಿಗೆಯ ಸಂದರ್ಭದಲ್ಲೂ ಈ ಸಂಕೀರ್ಣತೆಗಳು ವ್ಯಕ್ತಿಯ ಅರಿವಿಗೆ ಬಾರದಂತೆ ಪ್ರಭಾವಿಸುತ್ತವೆ. ಇವು ವ್ಯಕ್ತಿಯ ವರ್ತನೆ, ಆಲೋಚನೆ, ಜೀವನ ವಿಧಾನ ಹಾಗೂ ಜಗತ್ತನ್ನು ನೋಡುವ ರೀತಿ ಇವೆಲ್ಲವನ್ನೂ ನಿರ್ಧರಿಸುತ್ತದೆ. ಈ ಸಂಕೀರ್ಣತೆಗಳು ವ್ಯಕ್ತಿಯ

ಸ್ವಂತ ಅನುಭವವದಿಂದ ಹುಟ್ಟಿರಬಹುದು ಅಥವಾ ಅನುವಂಶಿಕವಾಗಿ ಬರಬಹುದು. ಅನುವಂಶಿಕ ಸಂಕೀರ್ಣಗಳು ಸಾಮೂಹಿಕ ಸುಪ್ತಚೇತನದ ಪ್ರಭಾವದಿಂದ ಉದ್ಭವಿಸಿರಬಹುದೆಂಬ ಯೂಂಗ್‌ನ ಅಭಿಪ್ರಾಯವು ಇದನ್ನು ಸಮರ್ಥಿಸುತ್ತದೆ. ಯೂಂಗ್‌ನ ಪ್ರಕಾರ ಕಲಾವಿದನ ಬದುಕು ಘರ್ಷಣಾ ಮಯವಾಗಿರುತ್ತದೆ. ಏಕೆಂದರೆ ಅವನಲ್ಲಿ ಎರಡು ಶಕ್ತಿಗಳು ಕ್ರಿಯಾನಿರತವಾಗಿವೆ. ಒಂದೆಡೆ ಸುಖ ಸಂತೃಪ್ತಿ ಹಾಗೂ ಜೀವನದಲ್ಲಿ ಸುರಕ್ಷಿತತೆಯ ಸಾಮಾನ್ಯ ಮಾನವಾಕಾಂಕ್ಷೆ. ಮತ್ತೊಂದೆಡೆ ಪ್ರತಿಯೊಂದು ವೈಯಕ್ತಿಕ ಬಯಕೆಯನ್ನು ಮೀರುವಷ್ಟು ದೂರ ಹೋಗಬಹುದಾದ ನಿಷ್ಠುರ ಕಾಮನೆ. ಸೃಜನಾತ್ಮಕ ಕೃತಿ ಸುಪ್ತಪ್ರಜ್ಞೆಯ ಆಳಗಳಿಂದ ಅಂದರೆ ಮಾತೃ ವಲಯದಿಂದ ಉದ್ಭವಿಸುತ್ತದೆ. ಸೃಜನಶಕ್ತಿ ಮೇಲುಗೈಯಾದಾಗಲೆಲ್ಲ ಮಾನವ ಜೀವನ ಸುಪ್ತಪ್ರಜ್ಞೆಯಿಂದ ಆಳಲ್ಪಡುತ್ತದೆ ಮತ್ತು ರೂಪುಗೊಳ್ಳುತ್ತದೆ. ಪ್ರಜ್ಞಾಪೂರ್ವಕ ಅಹಂಭಾವ ಘಟನೆಗಳ ಅಸಹಾಯ ಪ್ರೇಕ್ಷಕನಷ್ಟೇ ಆಗಿದ್ದು ಒಳಪ್ರವಾಹವೊಂದರಲ್ಲಿ ಕೊಚ್ಚಿ ಹೋಗುತ್ತದೆ.

ಯೂಂಗ್ ಕಲಾಸಾಧನೆಯ ಮನೋವೈಜ್ಞಾನಿಕ ವಿವರಣೆ ಮತ್ತು ಜೀವಂತವೂ, ಸೃಜನಶೀಲವೂ ಆದ ಮಾನವ ಚೇತನವನ್ನು ಒಂದು ವಿಶಿಷ್ಟ ವ್ಯಕ್ತಿತ್ವವಾಗಿ ವಿಶ್ಲೇಷಿಸಿರುವುದು ಸ್ಪಷ್ಟವಾಗುತ್ತದೆ. ಸೃಜನಶೀಲ ಕ್ರಿಯೆಯು ಒಂದು ಮಾನಸಿಕ ಉತ್ಪನ್ನ ಎಂಬುದನ್ನು ಒಪ್ಪುವ ಸಂದರ್ಭದಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಕಾಲದಿಂದ ಕಾಲಕ್ಕೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಿಭಿನ್ನವೂ, ವಿಶಿಷ್ಟವೂ ಹಾಗೂ ವಿಶೇಷವಾದಂತಹ ಪ್ರಕ್ರಿಯೆಯ ಹಿಂದೆ ವೈಯಕ್ತಿಕ ಸುಪ್ತ ಪ್ರಜ್ಞೆಯ ದೃಷ್ಟಿಕೋನವು ಕಾರ್ಯ ನಿರ್ವಹಿಸಿರುವುದನ್ನು ಅಲ್ಲಗಳೆಯಲು ಸಾಧ್ಯವಾಗುವುದಿಲ್ಲ. ಸಾಮೂಹಿಕ ಸುಪ್ತಚೇತನವೇ ಆಗಲಿ, ಪರಿಸರ ಸಮುದಾಯಗಳ ಪ್ರಭಾವಕ್ಕೆ ಒಳಗಾಗಿರಲಿ ಅಲ್ಲಿ ವೈಯಕ್ತಿಕ ದರ್ಶನವೂ ಇದ್ದೇ ಇರುತ್ತದೆ. ಸಂದರ್ಭ, ಘಟನೆ ಯಾವುದಾದರಾಗಿರಲಿ, ಎಲ್ಲಿಯದ್ದಾದರೂ ಆಗಿರಲಿ, ಅದನ್ನು ಗ್ರಹಿಸುವ ಪರಿಭಾವಿಸುವುದರ ಹಿಂದೆ ಆಯಾ ವ್ಯಕ್ತಿಯ ಮಾನಸಿಕತೆಯೇ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸೃಜನಶೀಲ ಕ್ರಿಯೆಯಾದ ಕಥಾರಚನೆ, ಬೆಳವಣಿಗೆಯಂತಹ ಸಂದರ್ಭಗಳಲ್ಲಿ ಪ್ರತ್ಯಕ್ಷವಾಗಿ ಅಭಿವ್ಯಕ್ತಿಗೊಳ್ಳದ ಅಂಶಗಳು ನೇರವಾಗಿ ಪ್ರಜ್ಞಾತ್ಮಕವಾಗಿ ಕ್ರಿಯಾತ್ಮಕವಾಗಿ ಅಲ್ಲದಿದ್ದರೂ ಪಾತ್ರಗಳು, ಘಟನೆಗಳು ಹಾಗೂ ಸಂದರ್ಭಗಳ ಮೂಲಕ ಸಾಂಕೇತಿಕವಾಗಿ ರೂಪುಮರೆಸಿಕೊಂಡು ಹೊರಹೊಮ್ಮುವುದರಿಂದಲೇ ವಸ್ತು ವಿಷಯಗಳಲ್ಲಿ ಏಕತೆಯಿದ್ದರೂ ನಿರೂಪಣೆಯಲ್ಲಿ ವೈವಿಧ್ಯತೆಗಳು ಮೂಡಿಬರಲು ಕಾರಣವಾಗುವುದು. ಸಾಮಾಜಿಕ ಸ್ವಾಸ್ಥ್ಯದ ನೆಪದಲ್ಲಿ ವಿವಾದಕ್ಕೊಳಗಾಗುವುದು, ಮತ್ತು ತಮ್ಮ ನಂಬಿಕೆಗಳಿಗೆ, ಭಾವನೆಗಳಿಗೆ ಹಾನಿಯುಂಟಾಗಿದೆ ಎಂಬ ಕೂಗುಗಳು, ಅದನ್ನು ಬೆಂಬಲಿಸುವವರು, ತಿರಸ್ಕರಿಸುವವರು ಮೊದಲು ವೈಯಕ್ತಿಕತೆಯನ್ನು ಮೀರಲಾರದವರೇ ಆಗಿರುತ್ತಾರೆ. ಪಾತ್ರಗಳ ಮಾನಸಿಕ ವರ್ತನೆಗಳು ಕಥಾ ಬೆಳವಣಿಗೆಯ ಮೇಲೆ ಪರಿಣಾಮ ಉಂಟುಮಾಡುತ್ತವೆ. ಕಥೆ ಈ ಮೂಲಕ ತಾನು ಹೇಳಬೇಕಾಗಿರುವುದನ್ನು ಅತ್ಯಂತ ಸೂಚ್ಯವಾಗಿ ಹೇಳಿಬಿಡುತ್ತದೆ. ಹೊರಗಿನ ವಸ್ತುನಿಷ್ಠ ಸತ್ಯಕ್ಕೆ

ಆಂತರಿಕ ವ್ಯಕ್ತಿನಿಷ್ಠತೆಯನ್ನು ನಷ್ಟಗೊಳಿಸುವ ಅಥವಾ ವಸ್ತುನಿಷ್ಠ ಸತ್ಯವನ್ನು ವ್ಯಕ್ತಿ ನಿಷ್ಠತೆಯ ಮೇಲೆ ಕನಸಿನ ಲೋಕವಾಗಿ ಪ್ರಕ್ಷೇಪಿಸುವ (projection) ಪ್ರವೃತ್ತಿಯಿಂದ ವಯುಕ್ತಿಕತೆಯನ್ನು ನಿರಾಕರಿಸಲಾಗುತ್ತದೆ.

ತನ್ನ ಮೇಲೆ ಹೇರಲ್ಪಟ್ಟ ವಾಸ್ತವಗಳಿಂದ ಬಿಡುಗಡೆ ಪಡೆಯಲೇಬೇಕೆಂಬ ಮನುಷ್ಯನ ಮೂಲಭೂತ ಅಪೇಕ್ಷೆಗಳು ಜಾಗೃತಗೊಂಡ ಮನಸ್ಸುಗಳಿಂದ ಮಾತ್ರವೇ ಕಥೆಯಂತಹ ಸೃಷ್ಟಿಕ್ರಿಯೆ ಸಾಧ್ಯವಾಗುತ್ತದೆ. ಕತೆಯೊಂದರಲ್ಲಿ ಪಾತ್ರಗಳು 'ಹೆಣ್ಣು', 'ಗಂಡು', 'ನಾನು', 'ಅವಳು', 'ನೀನು', 'ಅವನು' ಯಾವುದೇ ರೂಪದಲ್ಲಿರಲಿ, ಹಾಗೆಯೇ ಒಳಿತು, ಕೆಡಕು, ಪ್ರೇರಣೆ, ಪ್ರಚೋದನೆಗಳು, ಆಕಸ್ಮಿಕ ಘಟನೆಗಳು, ತಿರುವುಗಳು ಇವೆಲ್ಲವು ಕಥಾಗಾರನ ಪಾತ್ರ ನಿರ್ಮಿತಿಯ ಹಲವು ಸಾಧ್ಯತೆಗಳಷ್ಟೆ. 'ನಿರೂಪಣೆಯ ಹಲವು ಮಾದರಿಗಳಲ್ಲಿ ಅವನು ಒಂದನ್ನು ಪ್ರಯೋಗಿಸುವುದು. ಪಾತ್ರ ನಿರ್ಮಾಣದ ಹಲವು ಸಾಧ್ಯತೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವುದು ಲೇಖಕನ ಸೃಜನಶೀಲ ಸ್ವಾತಂತ್ರ್ಯದ ಪ್ರಶ್ನೆಯಷ್ಟೇ ಅಲ್ಲ. ಅದು ಅವನ ಸೃಜನಶೀಲ ಅಗತ್ಯದ ಪ್ರಶ್ನೆಯೂ ಹೌದು[೧೩] ಸೃಜನಶೀಲ ಅಗತ್ಯದ ಪ್ರಶ್ನೆ ಎಂಬುದೇ ಆತನ ಮನಸ್ಸು ಮತ್ತು ಅದರ ಹಿನ್ನಲೆಯಲ್ಲಿಯೇ ಪಾತ್ರಗಳು, ಘಟನೆಗಳು ಮತ್ತು ತಾನು ಯಾವುದನ್ನು ಪುಷ್ಟೀಕರಿಸುತ್ತಾನೋ ಅದಕ್ಕನುಗುಣವಾದ ಕಥೆ ಮತ್ತು ಕಥೆಯ ಬೆಳವಣಿಗೆಗಳು ಉಂಟಾಗುತ್ತದೆ. ಕಥೆಯಲ್ಲಿ ಆಕಾರ ಆಕೃತಿಗಿಂತ ಅದು ಒಳಗೊಳ್ಳುವ ಅನುಭವಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮಾತ್ರ ಪಾತ್ರಗಳ ಮಾನಸಿಕ ವರ್ತನೆಗಳ ಮೂಲಕ ಕಥಾ ಬೆಳವಣಿಗೆಯುಂಟಾಗುವ ಪ್ರಜ್ಞಾಪೂರ್ವಕ ತಂತ್ರಗಾರಿಕೆ ಕಂಡುಬರುತ್ತದೆ. ಈ ಬಗೆಯ ತಂತ್ರಗಾರಿಕೆಯು ವ್ಯಕ್ತಿಯನ್ನು ಪರಿಪೂರ್ಣತೆಗೆ ಒಡ್ಡಿಕೊಳ್ಳುವ, ತೀವ್ರಾನುಭವದಿಂದ ಬಿಡುಗಡೆ ಹೊಂದುವ ಸಲುವಾಗಿ ರೂಪುಗೊಳ್ಳುತ್ತದೆ. ಈ ಪ್ರಕ್ರಿಯೆಯು ಸೃಜಶೀಲಕ್ರಿಯೆಯ ಮೂಲಕ ಅಭಿವ್ಯಕ್ತಿಗೊಳ್ಳುತ್ತದೆ. ಬೇರೆ ಬೇರೆ ಸನ್ನಿವೇಶಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಅದು ಪುನರ್ ರಚಿಸಲ್ಪಡುತ್ತದೆ. ಪಾತ್ರಗಳ ವರ್ತನೆಯ ಮೂಲವನ್ನು ಮತ್ತು ಘಟನೆಗಳ ಜವಾಬ್ದಾರಿಯನ್ನು ದಾರ್ಶನಿಕ, ಮನೋವೈಜ್ಞಾನಿಕ ಎಂದು ವಿಭಾಗಿಸಿ ನೋಡುವುದಕ್ಕಿಂತ ಆಯಾ ಪಾತ್ರಗಳ ಆಂತರ್ಯ ಮತ್ತು ಪಾತ್ರಗಳ ವರ್ತನೆಯಿಂದ ಹುಟ್ಟಿ ಬರುವ ಘಟನೆಗಳಲ್ಲಿ ಶೋಧಿಸುವುದು ಹೆಚ್ಚು ಅರ್ಥಪೂರ್ಣವಾದುದು.

ಕೊನೆಟಿಪ್ಪಣಿ

೧. ಸಾಹಿತ್ಯ ಸಂವಾದ. ಲೇ. ಕೆ.ಎಲ್. ಗೋಪಾಲಕೃಷ್ಣಯ್ಯ. ಪು.ಸಂ. ೫೬

೨. ಈಡೀಪಸ್ ಕಾಂಪ್ಲೆಕ್ಸ್, ಲೇ. ಎಂ. ಬಸವಣ್ಣ, ಪು.ಸಂ. ೧೧೨

೩. ಈಡೀಪಸ್ ಕಾಂಪ್ಲೆಕ್ಸ್, ಲೇ. ಎಂ.ಬಸವಣ್ಣ ಪು.ಸಂ. ೧೧೪

೪. ಈಡಿಪಸ್ ಕಾಂಪ್ಲೆಕ್ಸ್ . ಎಂ. ಬಸವಣ್ಣ. ಪು.ಸಂ. ೧೧೪

೫. ಸಾಹಿತ್ಯ ಮತ್ತು ಮನೋವಿಜ್ಞಾನ. ಬಿ.ಕೃಷ್ಣಮೂರ್ತಿ. ಪು.ಸಂ. ೧೧೮

೬. ಈಡಿಪಸ್ ಕಾಂಪ್ಲೆಂಕ್ಸ್ ಎಂ. ಬಸವಣ್ಣ. ಪು.ಸಂ. ೧೧೩

೭. ಈಡಿಪಸ್ ಕಾಂಪ್ಲೆಂಕ್ಸ್ ಎಂ. ಬಸವಣ್ಣ. ಪು.ಸಂ. ೧೧೩

೮. ಜುಗಾರಿ ಕ್ರಾಸ್, ಕೆ.ಪಿ. ಪೂರ್ಣಚಂದ್ರತೇಜಸ್ವಿ: ಪು.ಸಂ. ೧೯, ಅದೇ, ಪು.ಸಂ. ೧೯

೯. ಜುಗಾರಿ ಕ್ರಾಸ್, ಕೆ.ಪಿ. ಪೂರ್ಣಚಂದ್ರತೇಜಸ್ವಿ: ಪು.ಸಂ. ೧೯, ಅದೇ, ಪು.ಸಂ. ೧೮

೧೦.ಕಾರ್ಲ್‌ಯೂಂಗ್ ಎಂ. ಬಸವಣ್ಣ. ಪು.ಸಂ. ೪೪

೧೧.ಸಮಗ್ರ ವಿಮರ್ಶೆ: ಗಿರಡ್ಡಿ ಗೋವಿಂದರಾಜ, ಪು.ಸಂ. ೨೮

೧೨.ಕಾಲ್‌ಯೂಂಗ್ ಲೇ. ಎಂ. ಬಸವಣ್ಣ, ಪುಟ, ಸಂ.೧೮

೧೩.ಕಥನ ಪ್ರೀತಿ ಲೇ. ಟಿ.ಪಿ. ಅಶೋಕ, ಪುಟ, ಸ.೨೪೭

ಅಧ್ಯಾಯ : ಏಳು

ಸಮಾರೋಪ

ಅಧ್ಯಾಯ : ಏಳು

ಸಮಾರೋಪ

ಅಧ್ಯಯನದ ಫಲಿತಗಳು

ಇದು ಪಾತ್ರಕೇಂದ್ರಿತ ಅಧ್ಯಯನವಾಗಿರುವುದರಿಂದ ಪ್ರತಿಯೊಂದು ಪಾತ್ರವನ್ನು ಸ್ವತಂತ್ರವಾಗಿಯೇ ಚರ್ಚೆ ಮಾಡಲಾಗಿದೆ. ಹಾಗಾಗಿ ಪ್ರಸ್ತುತ ಅಧ್ಯಯನದ ಫಲಿತಗಳನ್ನು ಪಾತ್ರವಾರು ರೀತಿಯಲ್ಲಿ ಗುರುತಿಸಲಾಗಿದೆ. ಈ ಕ್ರಮವು ಇಲ್ಲಿ ಅನಿವಾರ್ಯಯವೂ, ಅಗತ್ಯವೂ ಆಗಿದೆ.

ಸ್ತ್ರೀ ಪಾತ್ರಗಳ ಅಧ್ಯಯನ:

ಅವಳು: ಹಳದಿ ಮೀನು

ಅವಳು ಪಾತ್ರದ ಗ್ರಹಿಕೆ ಮತ್ತು ಪ್ರತಿಕ್ರಿಯೆಗಳಲ್ಲಿ ಗೊಂದಲಗಳು ಕಾಣುತ್ತವೆ. ಇದು ಕೇವಲ ಅವಳು ಪಾತ್ರದ ಗೊಂದಲವಾಗಿರದೆ, ಆಧುನಿಕತೆಗೆ ಶಿಕ್ಷಿತ ಹೆಣ್ಣು ಮುಖಾಮುಖಿಯಾಗಿರುವ ಹಾಗೂ ಮುಖಾಮುಖಿಯಾಗುತ್ತಿರುವ ಹೆಣ್ಣೊಬ್ಬಳ ಗೊಂದಲವೂ ಆಗಿರಬಹುದು.

ತನ್ನ ಮನಸ್ಸಿನ ಆಪ್ಯಾಯಮಾನಕ್ಕೆ ಒಂದು ಸಂಗತಿಯು ಕಾರಣವಾಗಿರಬಹುದು. ಆ ಸಂಗತಿಗೂ ಮತ್ತು ಮನೋವ್ಯಾಪಾರದ ಕ್ರಮಕ್ಕೂ ಬಿರುಕು ಉಂಟಾಗಬಹುದು. ಆಗ ಗ್ರಹಿಸುವ ಮನಸ್ಸು ಮತ್ತು ಗ್ರಹಿಸಬೇಕಾದ ವಿಷಯಗಳ ನಡುವೆ ಸಂಘರ್ಷ ಏರ್ಪಡಬಹುದು. ಅಂತಹ ಸಂದರ್ಭದಲ್ಲಿ ನಿರಾಕರಣೆಯೇ ಆಯ್ಕೆಯಾಗುತ್ತದೆ.

ಅವಳು ಪಾತ್ರವು ಮಾಡಿಕೊಳ್ಳುವ ಆಯ್ಕೆ ಮತ್ತು ನಿರಾಕರಣೆಗಳನ್ನು ಗ್ರಹಿಸುವ ಸಂದರ್ಭಗಳು ಇತರೆ ಯಾವುದೇ ಹೆಣ್ಣಿಗೆ ಸಂಬಂಧಿಸಿದಂತೆ ಗ್ರಹಿಸುವಾಗಲೂ ಅದು ತೀರಾ ವೈಯಕ್ತಿಕ ನೆಲೆಯಲ್ಲೇ ಗುರುರುತಿಸಲ್ಪಡುತ್ತದೆ.

ಅವಳು ಪಾತ್ರದಲ್ಲಿ ತನ್ನನ್ನು ಮೀರಿದ ಸಂಬಂಧಗಳು ಕಂಡುಬರುತ್ತವೆ. ಇವು ವಾಸ್ತವದೊಂದಿಗೆ ಸಾಂಸ್ಕೃತಿಕವಾಗಿ ಘರ್ಷಣೆ ಮಾಡುತ್ತಿರುತ್ತವೆ. ಇದು ನಿರಂತರವಾಗಿ ಸದಾ ಜರಗುತ್ತಿರುತ್ತದೆ.

ಬದುಕು ಪ್ರೀತಿ, ಸ್ನೇಹ, ಸಂಬಂಧ, ಆಯ್ಕೆ ಇವುಗಳ ಬಗೆಗಿನ ಸೈದ್ಧಾಂತಿಕ ತಾಕಲಾಟವೇ ಅವಳು ಪಾತ್ರದ ತಾತ್ವಿಕ ಗೊಂದಲಕ್ಕೆ ಕಾರಣವಾಗಿರಬಹುದು.

ವ್ಯಕ್ತಿನಿಷ್ಠವಾಗಿ ಅವಳು ಪಾತ್ರದ ಬದುಕನ್ನು ಪ್ರಚೋದಿಸುವ ಅನೇಕ ಅಂಶಗಳು ಕಂಡುಬರುತ್ತವೆ. ಆದರೆ ಈ ಯಾವ ಅಂಶಗಳೂ ಶಾಶ್ವತವಲ್ಲ ಎಂಬುದನ್ನು ಚರ್ಚಿಸಲಾಗಿದೆ.

ಅವಳು ಪಾತ್ರದ ಧೋರಣೆಯಲ್ಲಿ ಪ್ರತಿಭಟನೆಯ ಆಯಾಮವಿದೆ. ಆದರೆ ಇದು ಪ್ರವೃತ್ತಿಮೂಲಕ್ಕೆ ಇಳಿಯುವುದಿಲ್ಲ. ಬದಲಿಗೆ ಪ್ರತಿರೋಧದಲ್ಲಿ ಕೊನೆಯಾಗುತ್ತದೆ.

ಅವಳು ಪಾತ್ರಕ್ಕೆ ಒಂದು ಬಗೆಯ ಗ್ರಹಿಕೆ ಇದೆ. ಆದರೆ ಇದನ್ನು ಬದಲಾಯಿಸಲು ಪ್ರಯತ್ನಿಸಿದಾಗ ಅಲ್ಲಿ ಮಾನಸಿಕ ಸಂಘರ್ಷಗಳು ಉಂಟಾಗುತ್ತವೆ ಎಂಬುದನ್ನು ಚರ್ಚಿಸಲಾಗಿದೆ.

ಅವಳು ಪಾತ್ರದ ಭಾವನಾತ್ಮಕ ನೆಲೆಯು ಆಯ್ಕೆ ಮತ್ತು ನಿರಾಕರಣೆಗಳನ್ನು ನಿರ್ಧರಿಸುತ್ತದೆ. ಈ ಆಯ್ಕೆಯ ವಿಧಾನವೇ ಅವಳ ಪರಿಸ್ಥಿತಿಗೆ ಕಾರಣವಾಗಿರಬಹುದು ಎಂಬುದನ್ನು ಕುರಿತು ಚರ್ಚಿಸಿದೆ.

ಅವಳು ಪಾತ್ರದ ಗ್ರಹಿಕೆಯ ವರ್ತನೆಗೆ ಸಂಬಂಧಿಸಿದಂತೆ ಸರಿ ಮತ್ತು ತಪ್ಪುಗಳ ಬಗೆಗಿನ ಮೌಲ್ಯ ನಿರ್ಣಯ ಒಂದಿದೆ. ಈ ನಿರ್ಣಯವು ಬಹುತೇಕ ವೈಯಕ್ತಿಕವಾದುದೇ ಆಗಿರುತ್ತದೆ ಎಂಬುದನ್ನು ಪರಿಶೀಲಿಸಿದೆ.

ಅವಳು ಪಾತ್ರದ ಭಾವಗಳು ಶರಣಾಗತಿಯನ್ನು ತೋರುವಂತೆ ಕಾಣುತ್ತದೆ. ಆದರೆ ಅವಳಿಗೆ ತಾನು ಏನು ಎನ್ನುವುದರ ಬಗ್ಗೆ ಎಚ್ಚರಿಕೆ ಇದೆ.

ಪದ್ಮಿನಿ

ಪದ್ಮಿನಿಯ ಮನಸ್ಸು ಸಂಕೀರ್ಣವಾದ ಭಾವನೆಗಳ ಅಂತರ್ಜಾಲದೊಳಗೆ ಪ್ರವಹಿಸುತ್ತಿರುತ್ತದೆ. ಮತ್ತು ಹೀಗೆ ಪ್ರವಹಿಸುವ ಭಾವನೆಗಳೆ ಈಕೆಯ ನಡವಳಿಕೆಯನ್ನು, ನಿರ್ಧಾರಗಳನ್ನು ಮತ್ತು ವ್ಯಕ್ತಿತ್ವವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸಿರಬಹುದೆಂಬುದನ್ನು ಗುರುತಿಸಲಾಗಿದೆ.

ಪದ್ಮಿನಿಯು ದೇವದತ್ತನ ಮಡದಿಯಾಗಿ ಒಂದು ಬಗೆಯ ಒತ್ತಡಕ್ಕೆ ಸಿಲುಕಿರುವ ವರ್ತನೆಯನ್ನು ಪ್ರಕಟಿಸುತ್ತಾಳೆ. ಬಹುಶ: ಅಧೀನದಲ್ಲಿ ಇರುವಂತಹ ಪರಿಸ್ಥಿತಿಯು ಆಕೆಯಲ್ಲಿ ಒತ್ತಡವನ್ನು ಉಂಟುಮಾಡಿರಬಹುದು. ಈ ಕಾರಣಕ್ಕಾಗಿಯೇ ಒತ್ತಡದಿಂದ ವಿಮುಖಳಾಗಲು ಪದ್ಮಿನಿ ಕಪಿಲನಲ್ಲಿ ಆಸಕ್ತಿ ಹೊಂದಿರಬಹುದು ಎಂಬುದಾಗಿ ಗ್ರಹಿಸಲಾಗಿದೆ.

ಪದ್ಮಿನಿಯ ಪಾತ್ರದ ಮಾನಸಿಕ ಬೆಳವಣಿಗೆಗೆ ಕಾರಣ ಪುರುಷ ಮನಸ್ಥಿತಿಯೇ ಆಗಿದೆ. ಈಕೆಯ ಮಾನಸಿಕ ತೊಳಲಾಟಕ್ಕೆ ಪರಿಹಾರ ಸಿಗಬಹುದು ಅಥವಾ ಸಿಗದೆ ಇರಬಹುದು.

ಪದ್ಮಿನಿಯಲ್ಲಿ ಕಾಮ ಮತ್ತು ಪ್ರೇಮಗಳ ನಡುವೆ ಗೊಂದಲ, ದ್ವಂದ್ವ ಮತ್ತು ಒತ್ತಡಗಳು ಕಂಡುಬರುತ್ತವೆ. ಈ ಕಾಮ ಮತ್ತು ಪ್ರೇಮಗಳ ನಡುವಿನ ಒತ್ತಡವು ಕೇವಲ ಲೈಂಗಿಕ ನೆಲೆಯ ಒತ್ತಡವಾಗಿರದೆ, ಮನಸ್ಸು ಮತ್ತು ಅದಕ್ಕೆ ಸಂಬಂಧಿಸಿದ ಸಂಘರ್ಷವಿರಬಹುದೆಂದು ಗ್ರಹಿಸಲಾಗಿದೆ.

ಪುರುಷ ರಾಜಕಾರಣ ವ್ಯವಸ್ಥೆಯು ಪದ್ಮಿನಿಯನ್ನು ಏಕಮುಖಿ ನೈತಿಕತೆಯ ಕಲ್ಪನೆ, ಸ್ತ್ರೀಮೌಲ್ಯಗಳು, ಪರಂಪರೆಗಳು, ಆಚರಣೆಗಳು, ರೂಢಿ ಸಂಪ್ರದಾಯಗಳ ನೆಲೆಯಲ್ಲಿಯೇ ಗ್ರಹಿಸಿದೆ. ಈ ಕಾರಣವಾಗಿಯೇ ಪದ್ಮಿನಿಯ ನಡವಳಿಕೆಯನ್ನು ಅಪ್ರಾಮಾಣಿಕ ನೆಲೆಯೆಂದು ಪುರುಷ ಮನಸ್ಸು ಗ್ರಹಿಸಿದೆ. ಹಾಗೂ ಆ ಮೂಲಕ ಪದ್ಮಿನಿಯನ್ನು ಸಂಪೂರ್ಣ ಪುರುಷ ಮನಸ್ಸಿನ ಪೂರ್ವಾಗ್ರಹ ರೀತಿಯಲ್ಲಿ ನೋಡಲಾಗಿದೆ ಎಂದು ಗ್ರಹಿಸಬಹುದು.

ಪದ್ಮಿನಿಯ ಮನಸ್ಸು ಶರಣಾಗತಿಯನ್ನು ತೋರುವಂತೆ ಕೆಲವು ಸಂದರ್ಭಗಳಲ್ಲಿ ಕಂಡುಬರುತ್ತದೆ. ಆದರೆ ಆಕೆ ತಾನು ಏನು ಎನ್ನುವುದರ ಎಚ್ಚರದಲ್ಲಿಯೇ ವರ್ತಿಸುತ್ತಾಳೆ ಎಂದು ಗ್ರಹಿಸಲಾಗಿದೆ.

ಪದ್ಮಿನಿಯು ತನ್ನ ಬದುಕಿನ ಆಯ್ಕೆ ಮತ್ತು ನಿರಾಕರಣೆಗಳನ್ನು ಭಾವನಾತ್ಮಕತೆಯಿಂದಲೇ ನಿರ್ಧರಿಸುತ್ತಾಳೆ. ಬಹುಶ: ಈ ಭಾವನಾತ್ಮಕತೆಯೆ ಆಕೆಯ ಬದುಕಿನ ಸಂಘರ್ಷಕ್ಕೂ ಕಾರಣವಾಗಿರಬಹುದೆಂದು ಗ್ರಹಿಸಲಾಗಿದೆ.

ಪದ್ಮಿನಿಯ ವರ್ತನೆಯನ್ನು ಕುರಿತಾಗಿ ಸರಿ ಮತ್ತು ತಪ್ಪುಗಳ ಬಗೆಗಿನ ಮೌಲ್ಯ ನಿರ್ಣಯವೊಂದು ಸಹಜವಾಗಿ ಕಂಡುಬರುತ್ತದೆ. ಆದರೆ ಈ ಬಗೆಗಿನ ಮೌಲ್ಯ ನಿರ್ಣಯವು ತೀರಾ ವಯುಕ್ತಿಕವಾದುದು ಎಂಬುದಾಗಿ ಗ್ರಹಿಸಲಾಗಿದೆ.

ಅಮೃತಮತಿ

ಅಮೃತಮತಿಯ ವರ್ತನೆಯನ್ನು ಅನಿಯಂತ್ರಿತ ಲೈಂಗಿಕತೆ ಮತ್ತು ಸುಖಾಪೇಕ್ಷೆಯ ನೆಲೆಯಿಂದ ಗ್ರಹಿಸಲಾಗಿದೆ. ಆದರೆ ಆಕೆಯ ವರ್ತನೆಯು ಅಳಿವು ಉಳಿವುಗಳ, ಅಧಿಕಾರ ಮತ್ತು ಪ್ರತಿಷ್ಠೆಗಳ ನಡುವೆ ಸಿಲುಕಿ ಅದರಿಂದ ಹೊರಬರಲು ತುಡಿಯುತ್ತಿರುವ ಹೆಣ್ಣೊಬ್ಬಳ ಸಹಜ ತುಮುಲ ಎಂಬುದಾಗಿ ಗ್ರಹಿಸಲಾಗಿದೆ.

ಅಮೃತಮತಿಯ ಸ್ವಾತಂತ್ರ್ಯವನ್ನು ವಿವಾಹವೆಂಬ ಸಂಕೋಲೆಯಿಂದ ಕಟ್ಟಿಹಾಕಲಾಗಿದೆ. ಆ ಮೂಲಕ ಲೈಂಗಿಕತೆ, ನೈತಿಕತೆ ಎಂಬ ಲೇಪನವನ್ನು ಹಚ್ಚಿ ಸಹಜ ಸ್ವಾತಂತ್ರ್ಯವನ್ನು ನಿರಾಕರಿಸಲಾಗಿರುವ ಕಾರಣವೇ ಅವಳಲ್ಲಿ ಪ್ರತಿಭಟನಾತ್ಮಕ ಧೋರಣೆಗೆ ಕಾರಣವಾಗಿರಬಹುದು ಎಂದು ಗುರುತಿಸಲಾಗಿದೆ.

ಅಮೃತಮತಿಯ ಮನಸ್ಸು ಪ್ರಭುತ್ವ ಮತ್ತು ಸ್ವಾತಂತ್ರ್ಯ ನಿರಾಕರಣೆಯ ಕಾರಣಕ್ಕಾಗಿ ವಿಕ್ಷಿಪ್ತಗೊಂಡಿರಬಹುದು. ಹೀಗೆ ವಿಕ್ಷಿಪ್ತಗೊಂಡ ಮನಸ್ಸು ಎಲ್ಲಾ ಬಗೆಯ ಸೀಮಾರೇಖೆಯನ್ನು ದಾಟಲು ಆಕೆಯನ್ನು ಪ್ರೇರೇಪಿಸಿರಬಹುದೆಂದು ಗುರುತಿಸಲಾಗಿದೆ.

ದಾಂಪತ್ಯವೆಂಬುದು ಅನೇಕ ಬಾರಿ ಸಹಜ ನೆಲೆಯಲ್ಲಿರದೆ ಯಾಂತ್ರಿಕವಾಗತೊಡಗುತ್ತದೆ. ಹಾಗೆಯೇ ಅಮೃತಮತಿಯ ದಾಂಪತ್ಯವು ಯಾಂತ್ರಿಕವಾದ ಸಂದರ್ಭದಲ್ಲಿ ಆಕೆ ತನ್ನಲ್ಲಿ ಜಾಗೃತಗೊಂಡ ತುಡಿತಗಳೊಡನೆ ಸಂಘರ್ಷಕ್ಕೊಳಗಾಗಿರುವ ಸಾಧ್ಯತೆಯನ್ನು ಗ್ರಹಿಸಲಾಗಿದೆ.

ಅಮೃತಮತಿಯ ವರ್ತನೆಯ ಹಿಂದೆ ಒತ್ತಡವೊಂದು ಕಂಡುಬರುತ್ತದೆ. ಅದನ್ನು ಅರಿಯುವ ಮನಸ್ಸು ಸ್ಥಾಪಿತ ಸಾಮಾಜಿಕ ಮೌಲ್ಯಗಳಿಂದ ನಿರ್ಬಂಧಿಸಲ್ಪಟ್ಟಿವೆ. ಲೈಂಗಿಕತೆಗೂ, ನೈತಿಕತೆಗೂ ಸಂಬಂಧ ಕಲ್ಪಿಸಿರುವುದರಿಂದಲೇ ಅಮೃತಮತಿಯ ವರ್ತನೆಯು ವಿಘಟಿತಗೊಂಡಿರುವಂತೆ ಗ್ರಹಿಸಲು ಕಾರಣವಾಗಿರಬಹುದು.

ಮೇಲ್ವರ್ಗದ ಮಹಿಳೆಯರಲ್ಲಿ ಮೇಲ್ಮಟ್ಟದ ಪ್ರೇರಣೆಗಳು ಸಹಜವಾಗಿರುತ್ತವೆ. ಅಮೃತಮತಿಗೂ ಮೇಲ್ಮಟ್ಟದ ಪ್ರೇರಣೆಯಾದ ಆತ್ಮಗೌರವಕ್ಕೆ (Self-estieem) ಧಕ್ಕೆ ಉಂಟಾಗಿರುವ ಸಾಧ್ಯತೆ ಕಂಡುಬರುವುದು. ಅದೇ ಆಕೆಯ ವರ್ತನೆಗೆ ಕಾರಣವಿರಬಹುದು ಎಂಬುದಾಗಿ ವಿಶ್ಲೇಷಿಸಲಾಗಿದೆ.

ಪುರುಷ ಪಾತ್ರಗಳ ಅಧ್ಯಯನ : ರಾಮಚಂದ್ರ

ಮನುಷ್ಯನ ಇಚ್ಛಾ ಸ್ವಾತಂತ್ರ್ಯವನ್ನು ಮೀರಿದ, ಪೂರ್ವನಿರ್ಧಾರಿತವಲ್ಲದ ಅಪ್ರಜ್ಞಾಪೂರ್ವಕ ನೆಲೆಯ ನಿಯಮವೊಂದು ಇದೆ. ಮತ್ತು ಆ ಅಪ್ರಜ್ಞಾಪೂರ್ವಕ ನೆಲೆಯೆ ಸಾಹಿತ್ಯ ಕೃತಿಯ ನಿರ್ಮಾಣದಲ್ಲಿ ಕಾರ್ಯನಿರ್ವಹಿಸಿರುವುದು ರಾಮಚಂದ್ರನ ಪಾತ್ರದ ಮೂಲಕ ಗ್ರಹಿಸಲಾಗಿದೆ.

ರಾಮಚಂದ್ರನ ಪಾತ್ರವು ಮನುಷ್ಯರ ವರ್ತನೆಗಳ ಬಗ್ಗೆ ಇರುವ ಸರ್ವೇಸಾಮಾನ್ಯ ನಂಬಿಕೆಗಳು, ಧೋರಣೆಗಳು ಮತ್ತು ಗ್ರಹಿಕೆಗಳು. ಅವುಗಳ ನಿರುಪಯುಕ್ತತೆ ಮತ್ತು ವಾಸ್ತವಕ್ಕೆ ಸದಾ ಎಚ್ಚರಗೊಂಡಿರಬೇಕಾದ ಮನುಷ್ಯನ ಅನಿವಾರ್ಯತೆಯನ್ನು ಕುರಿತು ಚರ್ಚಿಸಲಾಗಿದೆ.

ಕಥೆಯ ಸೃಷ್ಟಿಯ ಹಿಂದೆ ಕಥೆಗಾರನ ಅಥವಾ ನಿರೂಪಕನ ಸ್ಪಷ್ಟಾತ್ಮಕ ಉದ್ದೇಶವಿದೆ ಮತ್ತು ತಾವು ನಿರ್ವಹಿಸುವ ಪಾತ್ರಗಳ ಬಗ್ಗೆ, ವಯಕ್ತಿಕ ಲಕ್ಷಣಗಳು ಮತ್ತು ಮೌಲ್ಯಗಳು ಹಾಗೂ ಅವರು ಎದುರಿಸುವ ನಿರ್ಧಿಷ್ಟ ಸನ್ನಿವೇಶಗಳ ಬಗ್ಗೆ ಜ್ಞಾನ ಮತ್ತು ನಂಬಿಕೆಗಳನ್ನು ಹೊಂದಿರುತ್ತವೆ ಮತ್ತು ಎಚ್ಚರದಿಂದಿರುತ್ತವೆ ಎಂಬುದಾಗಿ ರಾಮಚಂದ್ರನ ಪಾತ್ರದ ಮೂಲಕ ಗ್ರಹಿಸಲಾಗಿದೆ.

ಜಾಗೃತ ಮನಸ್ಸಿನಿಂದ ಹೊರದೂಡಲ್ಪಟ್ಟು, ಸುಪ್ತಚೇತನದಲ್ಲಿ ಕ್ರಿಯಾಶೀಲವಾಗಿ ಉಳಿದು, ಪ್ರಬಲ ಶಕ್ತಿಯ ಕೇಂದ್ರಗಳಂತೆ ಕೆಲಸ ಮಾಡುತ್ತಿರುವ ಮತ್ತು ಅಭಿವ್ಯಕ್ತಿಗಾಗಿ ಕಾದು ಕುಳಿತಿರುವ

ಭಾವ ಸಮುಚ್ಚಯಗಳಿರುತ್ತವೆ. ಮತ್ತು ಅವು ಮನುಷ್ಯನನ್ನು ನಿಯಂತ್ರಿಸುತ್ತಿರುತ್ತವೆ. ಇಂತಹ ಭಾವ ಸಮುಚ್ಚಯಗಳೇ ಕಥಾರಚನೆಗೆ ಬಹುಮುಖ್ಯ ಪ್ರೇರಣೆಯಾಗಿವೆ ಎಂಬುದನ್ನು ರಾಮಚಂದ್ರನ ಪಾತ್ರದ ಮೂಲಕ ಚರ್ಚಿಸಲಾಗಿದೆ.

ರಾಮಚಂದ್ರ ತನ್ನ ಬಾಲ್ಯದ ಅಸ್ಪಷ್ಟ ತಿಳುವಳಿಕೆಗೆ ಒಂದು ಸ್ಥಿರ ರೂಪವನ್ನು ಕೊಡಬೇಕೆಂದು ಬಯಸುತ್ತಾನೆ. ಮತ್ತು ಮನಸ್ಸಿನಲ್ಲಿ ಅಚ್ಚೊತ್ತಿದ್ದ ಬಾಲ್ಯದ ವಿಶಿಷ್ಟ ಅನುಭವಗಳನ್ನು ಹೊರಹಾಕುವ ಮೂಲಕ ಆತನೊಳಗಿನ ಅಪರಿಚಿತ ಲೋಕವನ್ನು ಪರಿಚಿತವನ್ನಾಗಿಸುವ ಭರದಲ್ಲಿ ಕಥೆಯನ್ನು ರಚಿಸುತ್ತಾನೆ. ಆ ಮೂಲಕ ಪ್ರಚೋದಕಗಳಾಗಿದ್ದ ಮನಸ್ಸಿನ ಬಾಧ್ಯತೆಗಳನ್ನು ಹೊರ ಹಾಕುವ ಸಾಹಿತ್ಯ ರಚನೆಯ ಉದ್ದೇಶವನ್ನು ಗ್ರಹಿಸಲಾಗಿದೆ.

ರಾಮಚಂದ್ರನ ಆಲೋಚನೆಗಳು, ಅನುಭವಗಳು ಕಥೆಯ ಮೂಲಕ ಅಭಿವ್ಯಕ್ತಗೊಂಡಿವೆ. ಅವನ ಗ್ರಹಿಕೆಯ ಕ್ರಮ ವಿಸ್ತರಿಸಿದಂತೆಲ್ಲಾ ಅವು ಭಿನ್ನ ಭಿನ್ನ ಆಯಾಮ ಪಡೆಯುವುದು. ಮನಸ್ಸು ಅನುಭವದಿಂದ ಬಿಡುಗಡೆಹೊಂದುವ ಅವಶ್ಯಕತೆಗೆ ಗ್ರಹಿಸಲ್ಪಟ್ಟಾಗ ಸೀಮಿತ ಅರ್ಥವನ್ನು ಒಳಗೊಳ್ಳುತ್ತದೆ. ಗ್ರಹಿಕೆಗಳು ಬದುಕಿನ ಆಳಕ್ಕೆ ಇಳಿದಂತೆಲ್ಲಾ ಸೃಜನಾತ್ಮಕ ನೆಲೆಯಲ್ಲಿ ವ್ಯಕ್ತಿಯ ಅನುಭವದ ಆಳಕ್ಕಿಂತ ಇಡೀ ಒಂದು ಬದುಕಿನ, ಸಂಸ್ಕೃತಿಯ, ಮನೋಲೋಕದ ಆಳಕ್ಕೆ ವಿಸ್ತರಿಸಿಕೊಂಡಿರುವುದು. ಮತ್ತು ಬೌದ್ಧಿಕ ಪ್ರಕ್ರಿಯೆಗಿಂತ ಮಾನಸಿಕತೆಯ ಕಡೆಗೆ ಬೆಳವಣಿಗೆ ಹೊಂದಿರುವುದನ್ನು ಗ್ರಹಿಸಬಹುದು.

ಯಶೋಧರ

ಯಶೋಧರ ಅಮೃತಮತಿಯನ್ನು ತನಗೆ ಮಾತ್ರ ಮೀಸಲಿರಬೇಕೆಂದು ಬಯಸುತ್ತಾನೆ. ಹಾಗೆಯೇ ತನ್ನಲ್ಲಿಯೇ ಅವಳನ್ನು ಉಳಿಸಿಕೊಳ್ಳುವಲ್ಲಿ ನಿರಂತರವಾಗಿ ಶ್ರಮಿಸುತ್ತಾನೆ. ಇಂತಹ ಸಂಧರ್ಭದಲ್ಲಿ ಆತನ ಮನಸ್ಸು ಸದಾ ಸಂಘರ್ಷದಿಂದಲೇ ಕೂಡಿರುತ್ತದೆ ಎಂಬುದಾಗಿ ಕಲ್ಪಿಸಿಕೊಳ್ಳಬಹುದು.

ಯಶೋಧರನ ವರ್ತನೆಯು ಬಾಹ್ಯ ಸ್ವರೂಪದಲ್ಲಿ ಪ್ರಕಟಗೊಳ್ಳುವುದು ಒಂದು ಕಡೆ ಗ್ರಹಿಕೆಗೆ ನಿಲುಕುತ್ತದೆ. ಜೊತೆಗೆ ಆ ಪ್ರವೃತ್ತಿಯ ಹಿಂದೆ ಅದಕ್ಕೆ ವಿರುದ್ಧವಾದ ಪ್ರವೃತ್ತಿಯು ಕಂಡುಬರುವುದು.

ಯಶೋಧರನಲ್ಲಿ ರಾಜನೆಂಬ ಪ್ರತಿಷ್ಠೆ ಒಂದು ಕಡೆ. ಅಮೃತಮತಿಯ ಗಂಡನೆಂಬ ಯಜಮಾನ್ಯ ನೆಲೆ ಇನ್ನೊಂದು ಕಡೆ. ಈ ಎರಡೂ ನೆಲೆಗಳಲ್ಲಿ ಪ್ರತಿಷ್ಠೆಗೆ ಧಕ್ಕೆ ಉಂಟಾಗುವ ಎಲ್ಲಾ ಪ್ರಚೋದನೆಗಳನ್ನು ಈತ ಹತ್ತಿಕ್ಕುವಲ್ಲಿಯೇ ನಿರಂತರ ಸಂಘರ್ಷಕ್ಕೆ ಮುಖಾಮುಖಿಯಾಗು ತ್ತಿರುತ್ತಾನೆ ಎಂದು ಹೇಳಬಹುದು.

ಯಶೋಧರನಲ್ಲಿ ಅಮೃತಮತಿಯ ವರ್ತನೆಯು ಅತೃಪ್ತಿಯುಂಟುಮಾಡಿರುತ್ತದೆ. ಆದರೆ ಅಮೃತಮತಿಯಿಂದ ದೂರವಾಗಲು ಆತ ಬಯಸುವುದಿಲ್ಲ. ಅದಕ್ಕೆ ಯಾವುದರಿಂದ ತಪ್ಪಿಸಿಕೊಳ್ಳ

ಬೇಕೆನಿಸುತ್ತದೆಯೋ ಅದಕ್ಕೆ ಆತನ ಮನಸ್ಸಿನ ಮೂಲೆಯ ಆಕರ್ಷಣೆಯ ಭಯವೇ ಕಾರಣವಾಗಿರಬಹುದು.

ಯಶೋಧರ ಅಮೃತಮತಿಯಲ್ಲಿ ಕ್ಷಣಿಕ, ಸ್ವಕೇಂದ್ರಿತ ಆನಂದವನ್ನು ಮಾತ್ರ ಬಯಸಿದಂತೆ ಅನಿಸುವುದಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಆಕೆಯನ್ನು ಅಧೀನಗೊಳಿಸಿಕೊಳ್ಳಬೇಕೆಂಬುದರಲ್ಲಿಯೇ ತೃಪ್ತನಾಗಿರುವವನಂತೆ ಅನಿಸುತ್ತದೆ.

ಯಶೋಧರನಿಗೆ ಅಮೃತಮತಿಯು ಅಧೀನಳಾಗಿರಬೆಕೆಂಬ ಹಂಬಲವಿದ್ದಂತೆ ಅನಿಸುತ್ತದೆ. ಆದರೆ ಅಧೀನಳಾಗದ ಆಕೆ ತನಗೆ ಸವಾಲೆಂದು ಭಾವಿಸಿದಂತೆ ಕಂಡುಬರುವುದು.

ದೇವದತ್ತ

ದೇವದತ್ತನ ದಾಂಪತ್ಯ ಎಂಬುವುದು ಆತ ಅರಿವಿಲ್ಲದೇ ಮಾಡಿಕೊಂಡ ಅಯ್ಕೆ. ಇಂತಹ ಆಯ್ಕೆಯು ಆತನ ದಾಂಪತ್ಯದಲ್ಲಿ ಅನಿವಾರ್ಯವಾಗಿದ್ದಂತೆ ಕಂಡುಬರುವುದು. ಆ ಕಾರಣವೇ ಇರಬೇಕು. ಸಂಘರ್ಷಭರಿತ ಪಾತ್ರವಾಗಿ ಆತ ಕಂಡುಬರುತ್ತಾನೆ.

ದೇವದತ್ತ ಮತ್ತು ಪದ್ಮಿನಿಯರ ದಾಂಪತ್ಯಕ್ಕೆ ಸಂಬಂಧಿಸಿದಂತೆ ಸಂವೇದನೆಗಳು ಅವರ ಬಾಹ್ಯ ವರ್ತನೆಯಲ್ಲಿ ಪ್ರಕಟಗೊಳ್ಳುವ ಬಗೆ ಒಂದಿದೆ. ಹಾಗೇ ಅಂತರ್ಗತವಾಗಿ ಅವರು ಆಚರಿಸುವ ವರ್ತನೆ ಮತ್ತೊಂದು ಬಗೆಯಲ್ಲಿ ಪ್ರಕಟಗೊಳ್ಳುತ್ತದೆ. ಇಲ್ಲಿ ಬಾಹ್ಯ ವರ್ತನೆಯಲ್ಲಿ ಪ್ರಕಟಗೊಳ್ಳುವ ವರ್ತನೆಯು ಆಂತರಿಕವಾಗಿ ಪ್ರಕಟಗೊಂಡಾಗ ಉಂಟುಮಾಡುವ ಪರಿಣಾಮಕ್ಕಿಂತ ಹೆಚ್ಚು ತೀವ್ರತರವಾದಂತೆ ಅನಿಸುತ್ತದೆ.

ದೇವದತ್ತನಲ್ಲಿ ಸ್ವಾಭಾವಿಕವಾಗಿ ನಿರ್ಬಂಧಿತವಾದದ್ದು ಆತನ ಪ್ರಜ್ಞೆಯ ಬಾಹ್ಯಸ್ತರಕ್ಕೆ ಸೀಮಿತವಾಗಿರುವಂತೆ ಕಂಡುಬರುತ್ತದೆ. ಅದು ಆತನ ಸುಪ್ತಾವಸ್ಥೆಯಲ್ಲಿ, ಅರೆ ಸುಪ್ತಾವಸ್ಥೆಯಲ್ಲಿ ಅನಿರ್ಬಂಧಿತವಾಗಿ ತಮ್ಮ ಪ್ರವಾಹವನ್ನು ವರ್ತನೆಯಲ್ಲಿ ಮುಂದುವರೆಸಿರುವುದು ಈ ಪಾತ್ರದ ಮೂಲಕ ಗುರುತಿಸಲಾಗಿದೆ.

ದೇವದತ್ತನ ಮನಸ್ಸು ಕಾಮ ಪ್ರಜ್ಞೆಯ ಸ್ಥಿತಿಯನ್ನು ತಲುಪಿದ ಸಂದರ್ಭ ಒಂದಿದೆ. ಆಗ ಆತನಿಗೆ ಆಸಕ್ತಿ ಹುಟ್ಟುವುದು ಕೇವಲ ದೇಹದೊಂದಿಗೆ ಮಾತ್ರ. ಹಾಗೂ ಕಾಮ ಬದುಕಿಗೆ ಪ್ರೇರಣೆಯಾಗುವ ಅರ್ಥದಲ್ಲಿ ಅಲ್ಲ ಮತ್ತು ಅದರ ಅರ್ಥಪೂರ್ಣತೆಯಲ್ಲಿಯೂ ಅಲ್ಲ ಎಂಬುದನ್ನು ಈ ಪಾತ್ರದ ಮೂಲಕ ಗುರುತಿಸಬಹುದು.

ದೇವದತ್ತನಿಗೆ ದಾಂಪತ್ಯ ಎಂಬುದು ಒಂದು ನಿರೀಕ್ಷೆ. ನಿರೀಕ್ಷೆಗಳಿಲ್ಲದ ದಾಂಪತ್ಯ ಇರುವುದು ಇಲ್ಲ ಎಂಬುದು ಈ ಪಾತ್ರದ ಮೂಲಕ ಗುರುತಿಸಬಹುದು.

ದೇವದತ್ತನಂತಹ ಸುಶಿಕ್ಷಿತನ ಬದುಕಿನಲ್ಲಿ ಹಲವು ಅಂಶಗಳು ಪ್ರಾಧಾನ್ಯತೆಯನ್ನು ಪಡೆದಿರುತ್ತವೆ. ಆದರೂ ಮನುಷ್ಯ ಜಗತ್ತು ಬೌದ್ಧಿಕತೆಯೆ ಪ್ರಧಾನವೆಂದು ಪರಿಗಣಿಸಿದೆ. ಈತನ

ಪಾತ್ರದ ಮೂಲಕ ಬೌದ್ಧಿಕತೆಯ ಪ್ರಾಧಾನ್ಯತೆಯನ್ನೆ ಎತ್ತಿ ಹಿಡಿಯಲಾಗಿದೆ. ಮತ್ತು ಆಯಾ ಸಂದರ್ಭಕ್ಕೆ ಈ ಬಗೆಯ ಪ್ರಾಧಾನ್ಯತೆಗಳ ಮಹತ್ವ ಹೆಚ್ಚು ಮತ್ತು ಕಡಿಮೆಯಾಗುವ ಸಾಧ್ಯತೆಯನ್ನು ಈ ಪಾತ್ರದ ಮೂಲಕ ಗುರುತಿಸಬಹುದು.

ಕಪಿಲ

ಗಂಡು ಮತ್ತು ಹೆಣ್ಣಿನ ನಡುವಣ ಆಕರ್ಷಣೆ ಸಹಜ. ಆದರೆ ಕಪಿಲ ಮತ್ತು ಪದ್ಮಿನಿಯರ ನಡುವಿನ ಆಕರ್ಷಣೆಯು ವಿರುದ್ಧತೆಯ ಮೇಲೆ ನಿರ್ಧರಿತವಾಗಿರುವುದನ್ನು ಗ್ರಹಿಸಲಾಗಿದೆ.

ದೇಹ ಮತ್ತು ಮನಸ್ಸಿನ ಸಮನ್ವಯವೇ ದಾಂಪತ್ಯ. ದೇವದತ್ತ ಮತ್ತು ಪದ್ಮಿನಿಯ ದಾಂಪತ್ಯದಲ್ಲಿ ಕೊರತೆಗೆ ಕಪಿಲ ಕಾರಣನಾಗುವುದೇ ಸಂಘರ್ಷಗಳಿಗೆ ಕಾರಣವಿರಬಹುದು.

ಮನುಷ್ಯರಲ್ಲಿ ಪ್ರಜ್ಞೆ ಎಂಬುದು ಮನಸ್ಸಿನಲ್ಲಿ ಅಡಗಿದೆ ಎಂಬುದು ಸಾಮಾನ್ಯ ಗ್ರಹಿಕೆ. ಅದೇ ಪ್ರಜ್ಞೆಯು ಅನುಭವಗಳ ರೂಪದಲ್ಲಿ ಪಂಚೇಂದ್ರಿಯಗಳಲ್ಲೂ ಗುರುತಿಸಲು ಸಾಧ್ಯ ಎಂಬುದು ಕಪಿಲನ ಮೂಲಕ ಗ್ರಹಿಸಲಾಗಿದೆ.

ವಯಕ್ತಿಕ ಬದುಕಿನ ಅನುಭವಗಳು ಹಲವು ಬಗೆಯದ್ದಾಗಿರುತ್ತವೆ. ಕಾಮ, ಪ್ರೇಮವು ವಯಕ್ತಿಕ ಗ್ರಹಿಕೆಯಿಂದ ಮಾತ್ರ ಅನುಭವಿಸುವಂತಹದ್ದು. ಆದರೆ ಕಪಿಲನ ಮೂಲಕ ಕಾಮ, ಪ್ರೇಮವು ವಯಕ್ತಿಕ ಬದುಕಿನ ಅನುಭವದಲ್ಲಿ ಕಂಡುಕೊಳ್ಳುವ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ತುಡಿತಗಳ ಬಿಡುಗಡೆ ಎಂಬುದಾಗಿ ಗ್ರಹಿಸಲಾಗಿದೆ.

ಪಾತ್ರಗಳ ಮಾನಸಿಕ ವರ್ತನೆಗಳು ಮತ್ತು ಕಥೆಗಳ ಬೆಳವಣಿಗೆ

ಪಾತ್ರಗಳು ಕಥಾ ಸಂದರ್ಭಗಳಲ್ಲಿ ಹಲವು ತಿರುವುಗಳಿಗೆ ಕಾರಣವಾಗುತ್ತವೆ. ಈ ತಿರುವುಗಳೇ ಮುಂದಿನ ಕಥಾ ಬೆಳವಣಿಗೆಗೆ ಕಾರಣವಾಗಬಹುದು. ಈ ತಿರುವುಗಳಲ್ಲೇ ಪಾತ್ರಗಳ ಮಾನಸಿಕ ಚಲನೆಯು ಉಂಟಾಗುವುದು. ಪಾತ್ರಗಳಲ್ಲಿ ಮಾನಸಿಕ ಚಲನೆ ಉಂಟಾಗದೇ ಹೋದರೆ ಕಥಾ ಬೆಳವಣಿಗೆಗಳು ಉಂಟಾಗುವುದಿಲ್ಲ ಎಂಬುದಾಗಿ ಗುರುತಿಸಲಾಗಿದೆ.

ಕಥಾ ಸಂದರ್ಭವು ಅನೇಕ ಮಾನಸಿಕ ವರ್ತನೆಗಳನ್ನು ಒಳಗೊಂಡಿರುತ್ತದೆ. ಪಾತ್ರಗಳ ಕ್ರಿಯೆ, ಪ್ರತಿಕ್ರಿಯೆಗಳು ಸಾಹಿತಿಯು ಅನುಭವವನ್ನು ಗ್ರಹಿಸುವ, ಅರ್ಥೈಸುವ ವಿಧಾನಗಳು ಕೇವಲ ಅಧ್ಯಯನದಿಂದ ರೂಪುಗೊಂಡಿರುವುದಿಲ್ಲ. ಬದಲಿಗೆ ಸಾಹಿತಿಯನ್ನು ತೀವ್ರವಾಗಿ ಪ್ರಭಾವಿಸಿರಲು ಸಾಧ್ಯವಿರಬಹುದಾದ ಅಂಶಗಳು ಸುಪ್ತ ಪ್ರಜ್ಞಾವಲಯದ ಪ್ರಭಾವಕ್ಕೊಳಗಾಗಿರುವ ಸಾಧ್ಯತೆಗಳನ್ನು ಗುರುತಿಸಲಾಗಿದೆ.

ಪಾತ್ರಗಳ ಮಾನಸಿಕ ವರ್ತನೆಗಳು ಕಥಾ ಬೆಳವಣಿಗೆಗೆ ಕಾರಣವಾಗಿರುತ್ತವೆ. ಹಾಗೆಯೇ ಈ ವರ್ತನೆಗಳು ಸಾಹಿತ್ಯವು ಸೀಮಿತ ಅರ್ಥದ ಆಚೆ ಸಂಕೀರ್ಣತೆ ಪಡೆದುಕೊಳ್ಳಲು ಕಾರಣಗಳಾಗುತ್ತವೆ ಎಂದು ಗ್ರಹಿಸಲಾಗಿದೆ.

ಸಾಹಿತ್ಯ ರಚನೆಯು ತಮ್ಮ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಮಾರ್ಗವಲ್ಲ. ಅದು ಸುಪ್ತ ಮನಸ್ಸನ್ನು ವಾಸ್ತವದೊಂದಿಗೆ ಸಮತೋಲನಗೊಳಿಸುವ ಪ್ರಕ್ರಿಯೆಯೂ ಆಗಿರಬಹುದು.

ಸೃಜನಶೀಲ ಕ್ರಿಯೆಯಾದ ಸಾಹಿತ್ಯವು ಸಾಹಿತಿಯ ಮೇಲೆ ಪ್ರಭಾವ ಬೀರಬಹುದಾದ ಅನೇಕ ಅಂಶಗಳನ್ನು ಒಳಗೊಂಡಿರುತ್ತದೆ. ಹೀಗೆ ಸಾಹಿತಿಯನ್ನು ನಿಯಂತ್ರಿಸಲು ಕಾರಣವಾಗುವ ಭಾವೋದ್ವೇಗಗಳನ್ನು, ಚಿಂತನೆಗಳನ್ನು ನಿಯಂತ್ರಿಸುವಂತಹ ಬೌದ್ಧಿಕ ಕ್ರಿಯೆಯು ಕಥಾಬೆಳವಣಿಗೆಯ ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಕಾರಣವಾಗಬಹುದಾದ ಸಾಧ್ಯತೆಯನ್ನು ಗ್ರಹಿಸಲಾಗಿದೆ.

ಪರಾಮರ್ಶನಾ ಗ್ರಂಥಗಳು

ಅಶೋಕ ಟಿ.ಪಿ., ಸಾಹಿತ್ಯ ಮತ್ತು ಮನೋವಿಜ್ಞಾನ, ಲೇಖನ, ಸಾಕ್ಷಿ ಜನವರಿ ೧೯೬೮

ಅಶೋಕ ಟಿ.ಪಿ., ಪುಸ್ತಕ ಸಮಯ-ವಿಮರ್ಶೆಯ ಬರಹಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೩.

ಅಶೋಕ ಟಿ.ಪಿ., ಕನ್ನಡ ಸಾಹಿತ್ಯ ಮತ್ತು ಮನಃಶಾಸ್ತ್ರ. ಅನ್ಯಜ್ಞಾನ ಶಿಸ್ತುಗಳ ಮೂಲಕ ಕನ್ನಡ-ಲೇಖನ. ೧೯೯೨.

ಅಶೋಕ ಟಿ.ಪಿ., ಸಾಹಿತ್ಯ ಮತ್ತು ಮನೋವಿಜ್ಞಾನ, ಹೊಸ ಹೆಜ್ಜೆ ಹೊಸಹಾದಿ, ೧೯೮೧.

ಅಶೋಕ ಟಿ.ಪಿ., ಶಿವರಾಮಕಾರಂತ ಎರಡು ಅಧ್ಯಯನಗಳು, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೨.

ಅಶೋಕ ಟಿ.ಪಿ., ಸಾಹಿತ್ಯ ಸಂಪರ್ಕ, ಅಕ್ಷರ ಪ್ರಕಾಶನ, ಹೆಗ್ಗೋಡು. ಸಾಗರ, ೨೦೦೨.

ಅಶೋಕ ಟಿ.ಪಿ., ಕಥನ ಪ್ರೀತಿ-ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೨೦೧೩.

ಅಮರೇಶ ನುಗಡೋಣಿ-ಸಂ. ಕನ್ನಡ ಸಂಶೋಧನೆಯ ವೈಜ್ಞಾನಿಕತೆಗಳು. ಪ್ರಸಾರಾಂಗ, ಹಂಪಿ ವಿಶ್ವವಿದ್ಯಾಲಯ, ೨೦೦೬.

ಅನಂತಮೂರ್ತಿ ಯು.ಆರ್. ಪ್ರಜ್ಞೆ ಮತ್ತು ಪರಿಸರ. ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೮

ಇಂದಿರಾ ಜೈ ಪ್ರಕಾಶ್-ಸ್ತ್ರೀವಾದಿ ಮನೋವಿಜ್ಞಾನ, ಮಹಿಳಾ ಅಧ್ಯಯನ ಕೇಂದ್ರ. ಕನ್ನಡ ವಿಶ್ವವಿದ್ಯಾಲಯ. ಹಂಪಿ, ೨೦೦೯.

ಇರಾವತಿ ಕರ್ವೆ-ಯುಗಾಂತ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮.

ಇನಾಂದಾರ ವಿ.ಎಂ. ಪಾಶ್ಚಾತ್ಯ ಕಾವ್ಯಮೀಮಾಂಸೆ, ಸಮಾಜ ಪುಸ್ತಕಾಲಯ, ಧಾರವಾಡ., ೧೯೮೨.

ಎರಿಕ್ ಫ್ರಾಂ-ಅನು, ನಾರಾಯಣ ಕೆ.ವಿ. ರಾಘವೇಂದ್ರರಾವ್ ಎಚ್.ಎಸ್., ಪ್ರೀತಿಸುವುದೆಂದರೆ. ಅಭಿನವ ಪ್ರಕಾಶನ, ಬೆಂಗಳೂರು, ೨೦೦೧.

ಕಮಲಾ ಹಂಪನಾ ಭರಣ, ಸ್ತ್ರೀ ಸಂವೇದನೆ, ಸಂಪುಟ. ೫, ಸ್ವಪ್ನ ಬುಕ್ ಹೌಸ್, ೨೦೧೨

ಕಕ್ಕಿಲ್ಲಾಯ ಬಿ.ವಿ. ಅನುವಾದ, ಇರವು ಮತ್ತು ಅರಿವು, ನವಕರ್ನಾಟಕ ಪ್ರಕಾಶನ, ೨೦೦೩

ಕರೀಗೌಡ ಬೀಚನಹಳ್ಳಿ, ಯಶೋಧರ ಚರಿತೆ ಮತ್ತು ಅಭಿಜಾತ ಪರಂಪರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೧೧

ಕರೀಗೌಡ ಬೀಚನಹಳ್ಳಿ, ವ್ಯಷ್ಟಿ ಸಮಷ್ಟಿ, ಅಜಂತ ಪ್ರಕಾಶನ, ಬೆಂಗಳೂರು, ೨೦೦೩

ಕುವೆಂಪು, ಯಶೋಧರ ಚರಿತೆಯಲ್ಲಿ ಕಾಮವಿಕಾರ ನಿರೂಪಣೆಯ ಉದ್ದೇಶ, ಬಾಗಿನ (೧೯೫೪) ಕೃಷ್ಣಕುಮಾರ್ ಸಿ.ಪಿ., ಸಾಹಿತ್ಯ ಮತ್ತು ಮನೋವಿಜ್ಞಾನ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ೧೯೭೨

ಕೃಷ್ಣಮೂರ್ತಿ ಬಿ. ಸಾಹಿತ್ಯ ಮತ್ತು ಮನೋವಿಜ್ಞಾನ, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩.

ಗಂಗಾಧರ ಬೆಳ್ಳಾರೆ, ಮೌನಗರ್ಭ, ಮನೋವಿಕಾಸದ ಒಳನೋಟಗಳು, ಅಂಕಿತ ಪುಸ್ತಕ, ಬೆಂಗಳೂರು, ೨೦೧೪

ಗಿರಿ, ಸಾಕ್ಷಿ, ಜನವರಿ ೧೯೬೮.

ಗಿರಡ್ಡಿ ಗೋವಿಂದರಾಜ, ಸಮಗ್ರ ವಿಮರ್ಶೆ, ಸಂಪುಟ ೨, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ೨೦೧೩.

ಗಿರಡ್ಡಿ ಗೋವಿಂದರಾಜು, ಸಣ್ಣ ಕಥೆಯ ಒಲವುಗಳು, ಸಾಹಿತ್ಯ ಭಂಡಾರ, ಹುಬ್ಬಳ್ಳಿ, ೧೯೭೮.

ಗೌರೀಶ್ ಕಾಯ್ಕಿಣಿ, ಸಾಹಿತ್ಯ ಸಮೀಕ್ಷೆ, ಸಂಪುಟ ೨, ವಿಚಾರ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ೧೯೪೨

ಗೋಪಾಲಕೃಷ್ಣಯ್ಯ ಕೆ.ಎಲ್., ಭೌತವಾದೀಯ ಚಿಂತನೆಗಳು, ನವಕರ್ನಾಟಕ ಪ್ರಕಾಶನ, ೨೦೦೮.

ಗೋಪಾಲಕೃಷ್ಣಯ್ಯ ಕೆ.ಎಲ್., ಸಾಹಿತ್ಯ ಸಂವಾದ, ನವಕರ್ನಾಟಕ ಪ್ರಕಾಶನ, ೨೦೦೯.

ಚಂದ್ರಶೇಖರ್ ಸಿ.ಆರ್., ಮಹಿಳೆಯರ ಮಾನಸಿಕ ಸ್ಥಿತಿಗಳು, ನವಕರ್ನಾಟಕ ಪ್ರಕಾಶನ, ೧೯೮೯.

ಚಂದ್ರಶೇಖರ್ ಸಿ.ಆರ್., ಮಹಿಳೆ ಮತ್ತು ಮಾನಸಿಕ ಆರೋಗ್ಯ, ನವಕರ್ನಾಟಕ ಪ್ರಕಾಶನ, ೨೦೦೩.

ಚಂದ್ರಶೇಖರ್ ಸಿ.ಆರ್., ಮಹಿಳೆ ಮತ್ತು ಮನಸ್ಸು, ನವಕರ್ನಾಟಕ ಪ್ರಕಾಶನ, ೨೦೧೦.

ಚಂದ್ರಶೇಖರ್ ಸಿ.ಆರ್., ಮಹಿಳೆ ಮತ್ತು ಉದ್ಯೋಗ, ನವಕರ್ನಾಟಕ ಪ್ರಕಾಶನ, ೨೦೧೨.

ಚಂದ್ರಶೇಖರ್ ಸಿ.ಆರ್., ಮಹಿಳೆಯರ ಮಾನಸಿಕ ಅಸ್ವಸ್ಥ್ಯತೆಗಳು, ನವಕರ್ನಾಟಕ ಪ್ರಕಾಶನ, ೨೦೦೭.

ಚಂದ್ರಶೇಖರ್ ಸಿ.ಆರ್., ಆಪ್ತಸಲಹೆ ಸಮಾಧಾನ, ನವಕರ್ನಾಟಕ ಪ್ರಕಾಶನ, ೨೦೦೪.

ದ.ರಾ.ಬೇಂದ್ರೆ, ಸ್ವಪ್ನವಿಜ್ಞಾನ. ಲೇಖನ. ಪುಟ ಬಂಗಾರ, ೧೯೮೭.

ನಟರಾಜ್ ಪಿ., ಪ್ರಾಯೋಗಿಕ ಮನೋವಿಜ್ಞಾನ, ಮೈಸೂರು ಬುಕ್ ಹೌಸ್, ೨೦೧೨

ನಟರಾಜ್ ಪಿ., ವಿಕಾಸ ಮನೋವಿಜ್ಞಾನ, ಮೈಸೂರು ಬುಕ್ ಹೌಸ್, ೨೦೧೨

ನಾಗರಾಜ್ ಡಿ.ಆರ್., ಶಕ್ತಿ ಶಾರದೆಯ ಮೇಳ. ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೮೭.

ನಾಗಭೂಷಣಸ್ವಾಮಿ ಓ.ಎಲ್., ವಿಮರ್ಶೆಯ ಪರಿಭಾಷೆ, ಅಭಿನವ ಪ್ರಕಾಶನ, ಬೆಂಗಳೂರು, ೧೯೮೩

ನಾಗಭೂಷಣ ಸ್ವಾಮಿ ಓ.ಎಲ್., ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೮೯.

ನಾಗಭೂಷಣಸ್ವಾಮಿ ಓ.ಎಲ್., ಪ್ರಜ್ಞಾಪ್ರವಾಹ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೮೯.

ನಾರಾಯಣ ಕೆ.ವಿ. ಬೇರು, ಕಾಂಡ, ಚಿಗುರು, ವಿವೇಕ ಪ್ರಕಾಶನ, ಬೆಂಗಳೂರು, ೧೯೯೫

ನಾರಾಯಣ ಕೆ.ವಿ., ಅನ್ಯಜ್ಞಾನ ಶಿಸ್ತುಗಳ ಮೂಲಕ ಕನ್ನಡ ಸಾಹಿತ್ಯ, ವಿವೇಕ ಪ್ರಕಾಶನ, ಬೆಂಗಳೂರು, ೧೯೯೨.

ನಾರಾಯಣರಾವ್ ಜಿ.ಟಿ., ಸಾಹಿತ್ಯಸೃಷ್ಠಿ ಮತ್ತು ವೈಜ್ಞಾನಿಕ ಮನೋಧರ್ಮ, ೧೯೯೮.

ಪವಿತ್ರ ಕೆ.ಎಸ್., ವೈದ್ಯವಿಜ್ಞಾನಿ ಸಿ.ಜೆ. ಯೂಂಗ್, ಕರ್ನಾಟಕ ರಾಜ್ಯ ವಿಜ್ಞಾನ, ೨೦೧೫.

ಪುಟ್ಟಯ್ಯ ಬಿ.ಎಂ., ಸಂಶೋಧನೆಯ ತಾತ್ವಿಕ ಆಯಾಮಗಳು, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ, ೨೦೧೦.

ಬಸವಣ್ಣ ಎಂ., ಈಡಿಪಸ್ ಕಾಂಪ್ಲೆಕ್ಸ್, ಮನೋವೈಜ್ಞಾನಿಕ ಲೇಖನಗಳು, ಅಭಿನವ ಪ್ರಕಾಶನ, ಬೆಂಗಳೂರು, ೨೦೦೭.

ಬಸವಣ್ಣ ಎಂ., ಕಾರ್ಲ್‌ಯೂಂಗ್, ಅಭಿನವ ಪ್ರಕಾಶನ, ಬೆಂಗಳೂರು, ೨೦೧೨.

ಭಟ್ಟ ಜಿ.ಎಸ್. ಸಂ, ಯಶವಂತ ಚಿತ್ತಾಲರ ಕೆಲವು ಅಧ್ಯಯನಗಳು, ಮಿತ್ರ ಪ್ರಕಾಶನ, ಬೆಂಗಳೂರು ೧೯೮೭.

ಬರ್ಟ್ರಂಡ್ ರಸೆಲ್, ಅನುದಾನ, ನಾರಾಯಣ ಪಿ.ವಿ. ಮನಸ್ಸು ಎಂದರೇನು, ವಸಂತ ಪ್ರಕಾಶನ, ಬೆಂಗಳೂರು, ೨೦೦೯.

ಭೈರಪ್ಪ ಎಸ್.ಎಲ್., ನಾನೇಕೆ ಬರೆಯುತ್ತೇನೆ, ಸಾಹಿತ್ಯ ಭಂಡಾರ ಪ್ರಕಾಶನ, ಬೆಂಗಳೂರು, ೧೯೮೦.

ಮಣಿಮಾಲಿನಿ ವಿ.ಕೆ., ದ್ರೌಪದಿ ಸಮೀಕ್ಷೆ, ಮುಂಬಯಿ ವಿಶ್ವವಿದ್ಯಾನಿಲಯ. ಕನ್ನಡ ವಿಭಾಗ, ೧೯೯೬.

ಮಹಾಬಲೇಶ್ವರರಾವ್, ಖ್ಯಾತ ಶಿಕ್ಷಣ ಮನೋವಿಜ್ಞಾನಿಗಳು. ನವಕರ್ನಾಟಕ ಪ್ರಕಾಶನ, ೨೦೦೨.

ಮಹಾಬಲೇಶ್ವರರಾವ್, ಶಿಕ್ಷಣದಲ್ಲಿ ಮನೋವಿಜ್ಞಾನ. ನವಕರ್ನಾಟಕ ಪ್ರಕಾಶನ, ೨೦೦೮.

ಮಾಧವ ಕುಲಕರ್ಣಿ, ಗಿರೀಶ್ ಕಾರ್ನಾಡರ ನಾಟಕ ಪ್ರಪಂಚ. ತನುಮನ ಪ್ರಕಾಶನ. ಮೈಸೂರು, ೨೦೦೦.

ಮೀನಗುಂಡಿ ಸುಬ್ರಮಣ್ಯ, ಈ ವರ್ತನೆಗಳು ನಿಮ್ಮಲ್ಲಿ ಎಷ್ಟಿವೆ. ನವಕರ್ನಾಟಕ ಪ್ರಕಾಶನ, ೧೯೯೩.

ಮೀನಗುಂಡಿ ಸುಬ್ರಮಣ್ಯ, ಮಡದಿ ಮತ್ತೊಬ್ಬ ಚೆಲುವಗೆ. ನವಕರ್ನಾಟಕ ಪ್ರಕಾಶನ, ೨೦೦೨.

ಮೀನಗುಂಡಿ ಸುಬ್ರಮಣ್ಯ, ಮಾನಸಿಕ ಸಮಸ್ಯೆಗಳಿಗೆ 'ಮನಸ್ಸು' ಇಲ್ಲದ ಮಾರ್ಗ. ನವಕರ್ನಾಟಕ ಪ್ರಕಾಶನ, ೧೯೮೮.

ಮೂರ್ತಿರಾವ್ ಎ.ಎಸ್. ಸಾಹಿತ್ಯ ಮತ್ತು ಸತ್ಯ ಕರ್ನಾಟಕ ಪ್ರೆಸ್, ಮೈಸೂರು, ೧೯೯೬.

ಯಶವಂತ ಚಿತ್ತಾಲ, ಸಾಹಿತ್ಯ ಸೃಜನಶೀಲತೆ ಮತ್ತು ನಾನು. ಜ್ಯೋತಿ ಪ್ರಕಾಶನ ೧೯೯೩.

ರಹಮತ್ ತರೀಕೆರೆ, ಯಶೋಧರ ಚರಿತೆ, ಪ್ರಣಯ ಸಂಬಂಧಗಳು, ನಮ್ಮ ಕನ್ನಡ ಕಾವ್ಯ, ಹಂಪಿ ವಿಶ್ವವಿದ್ಯಾಲಯ, ೨೦೦೮.

ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

ರಮೇಶ್ ಜಿ.ಕೆ., ಸಮಕಾಲೀನ ಪ್ರಜ್ಞೆ ಮತ್ತು ಕನ್ನಡ ಪೌರಾಣಿಕ ಕಾದಂಬರಿಗಳು, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ೨೦೧೦ .

ರಾಮಚಂದ್ರಪ್ಪ ಬರಗೂರು. ಸಂಸ್ಕೃತಿ ಮತ್ತು ಸೃಜನಶೀಲತೆ, ಜನಸ್ನೇಹ ಪ್ರಕಾಶನ. ಬೆಂಗಳೂರು ೧೯೯೧.

ರಾಘವೇಂದ್ರರಾವ್ ಎಚ್.ಎಸ್. ನಿಲುವು. ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್. ಬೆಂಗಳೂರು. ೧೯೮೯.

ರಾಜೇಂದ್ರ ಚೆನ್ನಿ. ದೇಶಿವಾದ. ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು, ೨೦೦೯.

ರಾಘವೇಂದ್ರರಾವ್. ಎಚ್.ಎಸ್. ಹಾಡೆ ಹಾದಿಯ ತೋರಿತು. ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್. ಬೆಂಗಳೂರು ೧೯೯೫.

ರಾಘವೇಂದ್ರರಾವ್. ಎಚ್.ಎಸ್. ವಿಶ್ಲೇಷಣೆ, ಅಭಿನವ ಪ್ರಕಾಶನ, ಬೆಂಗಳೂರು, ೧೯೮೧.

ರಾಮಚಂದ್ರನ್ ಸಿ.ಎನ್. ಆಶಯ ಆಕೃತಿ, ಅಭಿನವ ಪ್ರಕಾಶನ. ಬೆಂಗಳೂರು, ೧೯೯೫.

ರಾಘವೇಂದ್ರರಾವ್. ಎಚ್.ಎಸ್. ಸಾಹಿತ್ಯ ವಿಮರ್ಶೆ, ಅಭಿನವ ಪ್ರಕಾಶನ, ಬೆಂಗಳೂರು, ೧೯೯೮.

ರಾಮಕೃಷ್ಣ ಜಿ. ಸಂಗ್ರಹಾನುವಾದ. ಲೋಕಾಯುತ. ಪ್ರಾಚೀನ ಭಾರತದಲ್ಲಿ ಭೌತವಾದ ಒಂದು ಅಧ್ಯಯನ ನವ ಕರ್ನಾಟಕ ಪ್ರಕಾಶನ, ೨೦೧೧.

ಲಂಕೇಶ್ ಪಿ. ಸಾಹಿತಿ, ಸಾಹಿತ್ಯ ವಿಮರ್ಶೆ, ಲಂಕೇಶ್ ಪ್ರಕಾಶನ. ಬೆಂಗಳೂರು, ೨೦೦೯.

ಲಂಕೇಶ್ ಪಿ. ಟೀಕೆ, ಟಿಪ್ಪಣಿ, ಪತ್ರಿಕೆ ಪ್ರಕಾಶನ, ಬೆಂಗಳೂರು. ೧೯೯೮.

ಶಶಿಕಲಾ ಎಚ್. ಏಕ ಅನೇಕ ಸಿ.ವಿ.ಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೫

ಶಿವರುದ್ರಪ್ಪ ಜಿ.ಎಸ್. ಮನಃಶಾಸ್ತ್ರದ ಕೀಲಿಕೈ, ಲೇಖನ, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೧.

ಶಿವರುದ್ರಪ್ಪ ಜಿ.ಎಸ್. ಕಾವ್ಯಾರ್ಥ ಚಿಂತನ, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು, ೧೯೮೩.

ಶಿವರುದ್ರಪ್ಪ ಜಿ.ಎಸ್. ಕನ್ನಡ ವಿಮರ್ಶೆಯ ನೆಲೆ–ಬೆಲೆ, ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು, ೧೯೮೫.

ಶಿವರುದ್ರಪ್ಪ ಜಿ.ಎಸ್. ಕನ್ನಡ ಸಾಹಿತ್ಯ ಸಂದರ್ಭ, ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು. ೧೯೯೦.

ಶಿವರಾಂ ಎಂ. ಮನಮಂಥನ, ಅಂಕಿತ ಪುಸ್ತಕ. ಬೆಂಗಳೂರು, ೧೯೯೦

ಶಿವರಾಂ ಎಂ. ಮನೋನಂದನ, ವಸಂತ ಪ್ರಕಾಶನ, ಬೆಂಗಳೂರು, ೧೯೬೫

ಶ್ರೀಧರ್ ಕೆ.ಆರ್. ಸಿಗ್ಮಂಡ್ ಫ್ರಾಯ್ಡ್, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಬೆಂಗಳೂರು, ೨೦೧೫

ಶ್ರೀಮತಿ ಎಚ್.ಎಸ್. ಅನು: ದ ಸೆಕೆಂಡ್ ಸೆಕ್ಸ್, ಕೆ.ಬಿ ಪ್ರಗತಿ, ಬರಹ ಪಬ್ಲಿಕೇಷನ್ ಹೌಸ್. ಬೆಂಗಳೂರು, ೨೦೧೧.

ಶೇಷಗಿರಿರಾವ್ ಎಲ್.ಎಸ್. ಫ್ರಾನ್ಜ್ ಕಾಫ್ಕ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ ೧೯೮೨.

ಶೇಷಗಿರಿರಾವ್ ಎಲ್.ಎಸ್. ಪಾಶ್ಚಾತ್ಯ ಮತ್ತು ಭಾರತೀಯ ಮಹಾಕಾವ್ಯ ಪರಂಪರೆಗಳ ಮನೋಧರ್ಮ, ವಸಂತ ಪ್ರಕಾಶನ, ಬೆಂಗಳೂರು, ೨೦೦೫

ಶೈಲಜಾ ಹಿರೇಮಠ ಸಂ. ಮಹಿಳಾ ಅಧ್ಯಯನ, ಕನ್ನಡ ವಿಶ್ವವಿದ್ಯಾನಿಲಯ, ೨೦೦೮

ಹೆಗಡೆ ಎಂ.ಜಿ. ಸಂ. ಕಟಾಂಜನ, ಗೌರೀಶ್ ಕಾಯ್ಕಿಣಿ ಸಮಗ್ರ ಸಾಹಿತ್ಯ ಸ್ಪಂದನ, ಅಂಕಿತ ಪುಸ್ತಕ, ಬೆಂಗಳೂರು, ೨೦೧೧.

ಇಂಗ್ಲೀಷ್ ಕೃತಿಗಳು

Agarwal, S.P(2004) (ed) Mental health: An Indian Perspective. New Delhi, Ministry of Health and Family Welfare.

Allen J. R. and St. George S.A (2001) what couples Say Works in Domestic Violence Therapy. The Qualitative Report Vol.6, (3).

Alloy.L.B, Riskind, J.H, & Manos, M.J (2006) Abnormal Psychology. 9th edn New Delhi: Tata McGraw hill.

Alyn. J. H. & Becker, L.A. (1984). Feminist Theoapy with Chronically and profoundly Disturbed Women. Journal of Counseling Psychology. 31,2,207-208.

Astbury J, et. Al (2000) The impact of domestic violence on individuals. The Medical journal of Australia. 173. 427-431

Bakan, D (1966) The Duality of Human Existence, Chicago: Rand and McNally

Baker-Miller, J (1988) Towards A New Psychology of Women, 2nd ed. London, Pelican

Bandura, A(1977) Social Learning theory. N.J. Prentice Hall

Bandura, A (1986) Social foundation of thought and action. New York: Cambridge University press.

Barnett, R. C et al (1987). Gender and Stree. New York: Free Press.

Beal, C.R (1994) Boys and Girls. The Development of Gender Roles. NY: McGraw-Hills.

Beauvoir, S.de (1953) The Second Sex. NY:Knopf.

Bem S.L.(1984) Gender schemas: A cognitive account of sex typing. Psychological Review, 88, 354-364

Bem S.L (1998) An unconventional family. New Haven, CT: Yale University Press.

Berstein D (1999) Gender and motivation, Lincoln: University of Nebraska press.

Blau, F.D & Ehrenberg, R.D (1997) Gender and Family Issues in the Work Place. New York. Russel Sage Foundation

Brockington, I.F (1996) Motherhood and Mental illness. Oxford, Tokyo, New York: Oxford University Press.

Brodsky, A.M and Hare-Mustin, R.T (Eds)?(1980) Women and Psychotherapy: An Assessment of Research and Practice. New York: Guilford

Brodsky, A.M (1973) The Consciousness Raising Group as a Model for Therapy with Women. Psychotherapy Research and Practice, IA, 24-29

Brooks-Gunn, J, Lerner, R & Peterson, A.C. (Ed) The Encyclopedia of Adolescene, NY:Garland.

Broverman, I.K. et.al (1972) Sex Role Stereotypes. A current Appraisal. Journal of Social Issues. 28(2) 59-72

Brown,L.S.(1994) Subversive dialogues: Theory in Feminist therapy. NY.Basic Books

Brown, L.S. & Ballou, M (1992) (eds) Personally and Psychopathology. Feminist Reappraisal. NY: Guilford Press

Burman E (ed) (1990) Feminists and Psychological Practice, London Sage.

Canary D.J & Dindia k. (eds)(1992) Sex Differences and Similarities in Communications. Mahwah. NJ. Erlbaum

Carson, R.C & J.N. Butcher,& Mineka, s(2002) Abnormal Psychology and modern life, 11th edn. Delhi: Pearson Education.

Chakraborty, A (2001) Mental Health of Indian Women. A Field Experience. In Davar B.(ed.) Mental Health from a Gender perspective. New Delhi, Sage.

Chesler, R(1972) Women and Madness. NY:Doubleday.

Chodorow N.J.(1978) The Reproduction of Mothering. Psycho-analysis and the Socialogy of Gender. London: University of California press.

Chodorow, N.J(1989) Feminism and Psychoanalytic Theory. Oxford. Polity press.

Vhrisler, J.G et al (1996) Lectures on Psychology of women. New York. Mcgraw-Hill

Ciccrelli, S.K & Meyer, G.E. (2006) Psychology. Delhi: Pearson Education.

Corey G (2001) Theory and Practice of Counseling and Psychotherapy. 6th edn. USA/Brooks/Cole

Dalal, A.K & Misra, G (2001) (ed) New Direction in Indian Psychology. Vol I, NewDelhi:Sage

Davar, B.V (1999) Mental Health Indian women. A feminist agenda. New Delhi. Sage.

Davar.B.V (2001)(ed.) Mental Health from a Gender Perspective. New Delhi. Sage. 34-64

Dhoundiayal, M. (2000) Consultation Meet on Challenges of Working Women in the New Millennium. A Report. NIPCCD, Bangalore (Mimeographed).

Dutton-Douglas, M.A & Walker, L.E(ed) Feminist Psychotherapies: Integration of Therapeutic and Feminist Systems. Norwood.NJ, Ablex

Denmark F.L and M.A Paludi (eds) (1993) Psychology of women, A Handbook of Issues and Theories. Westport.CT: Greenwood press.

Eagly,A.H (1987) Sex differences in Social behavior. Hillsdale, NJ.Erlbaum.

Eckes T & Tautner, H.M (eds) (2000) The Developmental Social Psychology of Gender. Mahwah, NJ, Erlbaum.

Farrell W (1993) The Myth of Male Power. Why men are the Disposable Sex? New York. Crown.

Ferrer, M, Lorber J & Hess.B.B (1999) (eds) Revisioning gender. London: Sage publications.

Fischer,A.H.(ed) (2000) Gender and emotion. Cambridge. Cambridge University press.

Gollingstad, DR, Robinson E & Pugh M (1987) Effects of consciousness –raising groups on measures of feminism, self esteem and social desirability. Journal of Counseling Psychology, 34, 3, 223-230

Fredan B(1963) The Feminine Mystique. New York: Norton

Freidman, H.S.(1998) (ed) Encryclopaedia of Mental HElath. Vol 1,2,3. San Diego, Academic press

Ganguli,H.C.(2000)Epidemiological Findings on Prevelence of Mental Disorders in India. Indian Journal of Psychatry. 42(1) 14-20

Gergen M.M & Davis, S.N (Ed) (1997) Towards a New Psychology of Gender-A Reader. New York:Routledge.

Gerrig R.J & Zimbardo, P.G (2006) Psychology and Life. 7th edn. Delhi: Pearson Education.

Ghadially, R (ed) (1988) Women in Indian Society. New Delhi. Sage.

Glbert, L.A(1980) Feminist Therapy. In Brodsky A.M. and Hare Mustin R.T. (ed) Women and Psychotherapy: An Assessment of Research and Practice. New York: Guilford

Gilligan, C (1982) Ina Different Voice. Cambridge: MA. Harward University Press

Golombok, S & Tasker, F (1994) Gender Development. New York: Cambridge University press.

Gove, W.R & Tudor, J. (1973) Adult Sex Roles and Mental illness. Am.J of Sociology, 77, 812-835

Greenglass, E.R (2002) Gender Differences in Mental health. In Encyclopaedia of Psychotherapy. Elsevier science.

Gururaj, G & M.K Isaac (2004). Psychiatric Epidemiology in India. Moving beyond numbers. 37-63. In S.P.Agarwal (ed)

Gutek, B.A., Done R.S (2000) Handbook of the Psychology of Women and Gende, New York, Wiley.

Gutek, B.A. et al (1996) Women and work. An annual review. Newbury Park: Sage.

Guttman, D.L(1978) Reclaimed Powers: Toward a new psychology of men and Women in Later Life. NY: Basic Books

Halpern, D.F (1992) Sex differences in cognitive abilities. Mahwah.NJ.Erlbaum

Helgeson, V (2005) Psychology of Gender. New Delhi. Pearson education.

Hochschild, A.R (1989) The second shift. New York: Avon books.

Horney, K (1973) Feminine Psychology. New York: WW. Norton

Hyde J.S (1996) Half of Human Experience. The Psychology of Women. 2nd edn. DC Heath and co. Lexington.

Kakar S (1988) Feminine identify in India. In R. Ghadially (ed) Women in Indian society. New Delhi. Sage, 44-68

Kravetz, D (1980) Consciousness-raising and self help. In Brodsky AM and Hare-Mustin RT (ed) Women and Psychotherapy. An assessment of research and Practice. New York, Guilford

Kumar, U (2001) Indian women and work. A paradigm for research. 366-388 in New Directions in Indian Psychology. Vol I, A.K.Dalal and G.Misra (ed) New Delhi: Sage

Kumaraswamy, J (2000) Barriers to women's Career Progress and their consequences. Paper presented at the consultation meet on challenges of working women in the new millennium, 3rd august NIPCCD, Bangalore

Lachmn, M.E (Ed) (2001) Handbook of Midlife Development. NY: Wiley

Lerner R.M (ed) (1998) Handbook of Child Psychology. Theoretical Model of Human Development. NY:Wiley.

Levinson D.J (1978) The seasons of Man's life. NY: Knopf

Maccoby E.E (ed) (1969) The development of sex differences, Standford, CA: Stanford University Press.

Maccoby E & Jacklin, C.N.(1974) The Psychology of sex differences. Standford. CA. Standford university press.

Maccoby E.E.(1998) The two sexes. Growing apart and coming together. Cambridge. MA, Harvard University press.

Malik SC (1993) Women and Mental Health, Indian Journal of Psyhciary.35(1) 3-14

Maen, P (1993) Mental health of Indian women. Realities and needed response. In P. Mane and K, Gadevia (eds) Mental health in India. Issues and concern. P129-143. Bombay. TISS

Mane, P & K.Y Gandevia (eds)(1993) Mental Helath in India. Issues and concerns. Bombay TISS.

Math, Suresh Bada, C.R.Chandrashekar & Bhugra, D (2007) Psychiatric epidimiology in India, India Journal of Medical Research.126, 183-192

Nandy, A(1988) Woman versus Womanliness in India. 69-8A, In R.Ghadially (ed) Women in India society. New Delhi: Sage

Neugarten, B.L (1968) Middle age and aging. Chicago: university of Chicago Press

Notman, M.H & Nadelson, C (1980) Reproductive crisis. In Brodsksy AM and Hare-Mustin RT (ed) Women and psychotherapy. An assessment of research and Practice. New York, Guilford, p 307-333

O'Leary V et al (1985) women, Gender and Social Psycology. Hillsdale. nJ Erlbaum

Papalia, D.E, et.al (2004) Human development. New Delhi Tata mcgraw hill

Paltiel F.l 91993) Women's Mental Health A Global Perspective. In m.Koblinsky, J Timyan and j. Gay 9eds) The health of Women. A Global Perspective. Boulder, Westview press. 197-216

Pottinger.A.m et al (2006)Gender difference in coping with infertility among couples undergoing counseling for *invitro* fertilization treatment. West Indian Med. J. 55(4)

Prakash i.j (1986) Women, work and work commitment. Review of some relevant issues. Ind. Journal of Applied Psychology. 23 (2) 59-64

Prakash I.J (2001) on being old and female. some issues in the quality of life of elderly women in India. Ind. journal of Gerontology. 15 (3-4) 333-341

Prakash.I.J (1999) Menopause; A fresh look at the much misunderstood phenomenon. Social change. 29 1-2, 171-187

Rosewater LB and Walker LEA (eds) Handbook of feminist therapy: women's issues in psychotherapy. New York. Springer.

Salisbury I.L.(2004) Post partum depression. 516-518. Encylopaedia of Women's helath. Springer, US

Seligman M.E (1975) Helplessness: On depression, development and death. Sanfracisco: Freeman

Shah, A (2001) Gender issues inmental health, a clinical psychology perspective. In Davar B.V.P. 610-81 (ed) mental health from a gender perspective. New Delhi. Sage.

Sharf, R.S (2000) Theories of psychotherapy and Counseling 2nd edn. Brooks/Cole.

Sidhartha, T & Jena, S(2006) Suicidal Behavior in Adolescents. Indian Journal of Pediatrics, 73 (9) 783-788

Sternberg, R.J. (1986) A triangular theory of Love. Psychological review 93, 119-135

Strauss, M (1983) ordinary violence, child and wife beating. In D. Finkelhorsh & R. Gellers (eds) Dark side of families. Beverly Hilla: Sage. 132-212

Taylor, S.E., Peplau.L.A, & Sears, D.O (2006) Social Psychology. Delhi: Pearson Education

Unger R & Crawford M. (1992) Women and Gender: A Feminist psychology. NY. McGraw Hill

Usher, J.M.P. Nicolson. (1992) ed. Gender issues in clinical psychology. Longon & NY, Routledge.

Vaillant, G.E (1977) Adaptation to Life. Boston:Little, Brown

Varma V.K contributions of India to cultural psychiatry, p 74-94 in R Srinivasa Murthy (ed) Mental Helath in India. People's action for mental helath: Bangalore.

Vindhya, U (2001) Mental Health Care: A Review of Gender Difference. International Journal of Diabetes in Developing Countries. Pp.86-96

Vindhya, U (1999) Women's Mental Health. Psychological/feminist issues. In Dash UN, Jain U. & Mohanty AK (ed) Perspective on Psychology and Social Development. Pp.111-129. New Delhi: concept Publishing Company

Vindhya, U (2001) From the Personla to the Collective. Psychological/feminist issues of Women's Mental Health. P, 82-97. In Davar, B.V (ed) Mental Health from a Gender Perspective. New Delhi. Sage.

Wadley, S (1988) Women and the Hindu tradition. Pp, 23-43 In R. Ghadially (ed) Women in Inadian society. New Delhi. Sage

Walker L.E (1984) The Battered women's syndrome. NY: Springer pub.

Walker, L.E (1984) (ed) Women and Mental Health policy. London, Sage

Walker, L.E (1980) Battered women. In Brodsky AM and Hare Mustin R & T (ed) Women and Psychotherapy. An assessment of research and Practice. New York, Guilford 339-361

Watson, G & Williams, J (1992) Feminist practice in therapy. In Ussher J.M and Colson, P.N (eds) Gender issues in Clinical Psychology. London:. Routledge.2012-236

Woollett, a (1985) Childlessness: Stragies for Coping with Infertility. International Journal of Behavioral Development 8, 473.

Some relevant journals

Women and therapy

Feminism and psychology

International journal of women's studies.

Sex Roles

Women and Health

Journal of marriage and family

Journal of family issues.

Journal of personality and social psychology


Personal relationships

American psychologist

Psychology of women quarterly

Journal of social issues.

Family relations



ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ